ಕೈಬಿಂದ್

Reg. No. M. 4746

ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆಗಳ | ಬಳ್ಳಾರಿ ಮೇ ೫ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇತವರಾವ್.

ರಜಾ.

ಕನ್ನಡ ಸಾಹಿತ್ಯ ಸಮ್ಮೇಳನದ ಕಾರಣ ನಮ್ಮ ಕಾರ್ಯಾಲಯಕ್ಕೆ ಬಿಡುವಿದ್ದು ೧೨-೫-೪೭ ರ "ನವಭಾರತ" ವು ಹೊರಡುವುದಿಲ್ಲ ೧೯-೫-೪೭ ರ ದಿನ ಪ್ರಕಟವಾಗುವುದು.

ವ್ಯವಸ್ಥಾಪಕ,
"ನವಭಾರತ"

ಮುಸ್ಲಿಂಲೀಗಿನವರ ಕಳವಳ.

ಬಂಗಾಲಿಗಳಾದ ನಾವೆಲ್ಲಾ ಒಂದು. ನಮ್ಮ ಸಂಸ್ಕೃತಿ ಭಾಷೆ, ವೇಷಗಳೆಲ್ಲಾ ಒಂದು. ನಾವು ಬೇರೆಯಾಗುವುದು ಬೇಡ. ನಮಗೆ ಬೇಕಾದ ರಾಜ್ಯಾಂಗವನ್ನು ರಚಿಸಿಕೊಳ್ಳೋಣ. ಎಂದು ಬಂಗಾಲದ ಮುಸ್ಲಿಂ ಲೀಗಿನವರು ಪ್ರಚಾರ ಪ್ರಾರಂಭಿಸಿದ್ದಾರೆ. ಈ ಜ್ಞಾನೋದಯವು ಮೊದಲೇ ಆಗಿದ್ದರೆ ಇಷ್ಟೊಂದು ಭೀಕರ ಅನರ್ಥಗಳಾಗುತ್ತಿರಲಿಲ್ಲ. ಪಂಜಾಬಿನಲ್ಲೂ ಮುಸಲ್ಮಾನರು ಏಕ್ಯದ ಪ್ರಚಾರ ಹೂಡಿರುವರು.

ಜಿನ್ನಾರ-ವಿರೋಧ.

ಪಂಜಾಬ-ಬಂಗಾಲಗಳ ವಿಭಜನೆಯು ದ್ವೇಷಪೂರಿತವಾದ್ದಿದೆ. ಸಿಂಧ, ಪಂಜಾಬ, ಬೆಲೂಚಿಸ್ಥಾನ, ಬಂಗಾಳ ಸರಹದ್ದು ಮತ್ತು ಅಸ್ಸಾಂ ನಮಗೆ ಪೂರಾ ಬರಬೇಕು ಎಂದು ಒಂದು ಪ್ರಕಟನೆಯಲ್ಲಿ ಹೇಳಿದರು

ವಿಭಜನೆ ಅನಿವಾರ್ಯ.

ಭಾರತದ ವಿಭಜನೆಯಾಗಬೇಕೆಂದಿದ್ದರೆ ಅದನ್ನು ಸರಿಯಾಗಿ, ನ್ಯಾಯವಾದರೀತಿಯಲ್ಲಿ ಮಾಡಬೇಕೆಂದೂ ಪ್ರಜಾ ಮತ್ತು ಸೈನ್ಯವಿನಿಮಯ ಕಾರ್ಯವು ಸಡೆಯಬೇಕೆಂದೂ ಡಾ. ರಾಜೇಂದ್ರ ಪ್ರಸಾದರು ಹೇಳಿಕೆ ಕೊಟ್ಟಿರುವರು.

ಮಹಾತ್ಮಗಾಂಧಿ.

ಗಾಂಧೀಜಿಯವರು ವೈಸ್ರಾಯರೊಡನೆ ವಿಚಾರ ವಿನಿಮಯ ನಡೆಸಲು ದೆಹಲಿಗೆ ಬಂದಿರುವರು.

ನೂತನ ವಿಧಾನ.

ದೇಶದಲ್ಲಿ ಉದ್ಭೂತವಾದ ವಿಶೇಷ ಪರಿಸ್ಥಿತಿಯಿಂದ ಬ್ರಿಟಿಷರಿಂದ ಭಾರತೀಯರಿಗೆ ಯಾವ ವಿಧಾನದಲ್ಲಿ ಅಧಿಕಾರ ಪ್ರದಾನವಾಗಬೇಕೆಂಬ ಬಗ್ಗೆ ಈಗ ಬಂದಿರುವ ವೈಸ್ರಾಯರು ಬ್ರಿಟಿಷ ಸರ್ಕಾರದ ಒಪ್ಪಿಗೆಗಾಗಿ ನೂತನ ವಿಧಾನ ಒಂದನ್ನು ಕಳುಹಿಸಿರುವರು

214 216

ಸಮತಾವಾದಿ ಮುಖಂಡರಾದ
ಶ್ರೀ ಜಯಪ್ರಕಾಶ–ಕಮಲಾದೇವಿ
ಬಳ್ಳಾರಿಯಲ್ಲಿ

ಸಮತಾವಾದಿ ಮುಖಂಡರಾದ ಶ್ರೀ ಜಯಪ್ರಕಾಶನಾರಾಯಣ—ಕಮಲಾದೇವಿ ಮತ್ತು ಶ್ರೀಮತಿ ಪ್ರಭಾವತಿಜಯಪ್ರಕಾಶ ಇವರು ಬಳ್ಳಾರಿಗೆ ೨೯ ನೇ ದಿನಾಂಕ ಸಾಯಂಕಾಲ ೪-೩೦ ಕ್ಕೆ ಬಂದರು. ಶ್ರೀ ಹ. ರಾಮಲಿಂಗರೆಡ್ಡಿಯವರ ಬಂಗಲೆಯಲ್ಲಿ ಅವರಿಗೆ ಚಹಪಾನದ ಆತಿಥ್ಯವಾಯಿತು. ಅಲ್ಲಿಯೇ ಅನಂತರ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡುತ್ತಾ ಪಕ್ಷದ ತತ್ವಗಳು ಕಾಂಗ್ರೆಸ್ ಸಂಬಂಧ ಕಾರ್ಯ ಪ್ರಣಾಲಿಯನ್ನು ವಿವರಿಸಿದರು. ಮಲ್ಲಪಜ್ಜನ ವ್ಯಾಯಾಮಶಾಲೆಯಲ್ಲಿ ಹುತಾತ್ಮರ ಸ್ಮಾರಕವೆಂಬ ಹೊಹಾರವನ್ನಿತ್ತು ಯುವಕರ ಗೌರವನ್ನು ಸ್ವೀಕರಿಸಿ ರಾಷ್ಟ್ರಧ್ವಜಾರೋಹಣ ಮಾಡಿದರು. ಸಾಂಬಮೂರ್ತಿ ಮೈದಾನದಲ್ಲಿ ಶ್ರೀಮತಿ ಕಮಲಾದೇವಿಯವರೂ, ಜಯಪ್ರಕಾಶಕರೂ ಸಾಮ್ಯವಾದೀ ತತ್ವಗಳ ಸಿದ್ಧಾಂತಗಳ ವಿಷಯದಲ್ಲಿ ಭಾಷಣಗೈದರು. ಕಮ್ಯೂನಿಸ್ಟ ಸಂಘದ ರೀತಿ, ನೀತಿಗಳನ್ನು ಬಲವಾಗಿ ಖಂಡಿಸಿದರು.

ಪುರಜನರ ಪರವಾಗಿ ಶ್ರೀ ಕೇಶವತಾಯರು ರೂ ೧೦೦೭ ನ್ನು ಸಮತಾವಾದಿ ತತ್ವಪ್ರಚಾರ ನಿಧಿಗಾಗಿ ಅರ್ಪಿಸಿದರು. ಕ್ಲಾರಿಕರ ಸಂಘ, ಕಸಬಳಿಯುವವರ, ತೋಟಿಗಳ ಸಂಘ, ಮಲ್ಲಪಜ್ಜನ, ನವಜೀವನ ವ್ಯಾಯಾಮಶಾಲೆ, ಸ್ಟೂಡೆಂಟ್ಸ್ ಕಾಂಗ್ರೆಸ್, ಮೋಟಾರ ಕೆಲಸಗಾರರ ಸಂಘದವರು ಮಾನಪತ್ರಗಳನ್ನು ಅರ್ಪಿಸಿ, ಮಾಲೆಗಳನ್ನು ಹಾಕಿದರು.

೨೯ ನೆಯ ರಾತ್ರಿ ಶ್ರೀ ಹ ಲಿಂಗಾರೆಡ್ಡಿಯವರು ಮಾನ್ಯ ಅತಿಥಿಗಳಿಗೆ ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು. ಅರಾತ್ರಿ ಗದಗಿಗೆ ಪ್ರಯಾಣ ಬೆಳೆಸಿದರು.

ಹರಪನಹಳ್ಳಿ, ನಾರಾಯಣ ದೇವರಕೆರೆಗಳಲ್ಲಿ ೩೦೧ ರೂ. ಪ್ರಕಾರ ಹೊಸಪೇಟೆಯಲ್ಲಿ ೧೦೧೬ ರೂ. ನಿಧಿ ಸಮರ್ಪಣೆಯಾಯಿತು. ನಾರಾಯಣದೇವರ ಕೆರೆಯಲ್ಲಿ ಸಮರ್ಪಿತವಾದ ರಜತ ಪಾತ್ರೆಯು ೨೫ಕ್ಕೆ ಹೋಯಿತು. ತುಂಗಭದ್ರಾಯೋಜನೆಯಿಂದಾಗುವ ಅನ್ಯಾಯವನ್ನು ತಪ್ಪಿಸಲು ಸಹಾಯಮಾಡುವೆನೆಂದು ಅಭಿವಚನವಿತ್ತರು.

"ಬೆಳಗು ಬಾ"

ಅಡಿಬಾ ನುಗುನೆ ನೀನಾಡಿ ಬಾ
ಕುಣಿಯುತ್ತ ನುಲಿಯುತ್ತ
ಅಡುತ್ತ ಪಾರುತ್ತ
ಬೀಳುತ್ತ ಏಳುತ್ತ
ನೀನಾಡಿ ಬಾ ||೧||

ಭೃಂಗಗಳ ಕುಮಳಾಗಿ
ತಾವರೆಯ ಮೊಗವಾಗಿ
ಕೆಂದೊಡೆ ಪುಟಿಯಾಗಿ
ತೋಳುಗಳ ಬತೆಯಾಗಿ
ಬಾಳೆಗಳ ತೊಡೆಯಾಗಿ
ನುನ್ಮಥನ ರೂಪಾಗಿ
ನಗು ನಗುತ ಮುತ್ತಾಗಿ
ನೀ ಬೆಳೆಮು ಬಾ ||೨||

ನಗುವಿನಲಿ ಮುತ್ತುಗಳ
ಮಾತಿನಲಿ ಮಾಣಿಕದ
ಮುಳಿಗಳನು ಸುರಿಸುತಲಿ
ಹೆಜ್ಜೆಗಳ ಗೆಜ್ಜೆಗಳ
ಕುಣಿ ತುಣಿದು ಕುಣಿಸುತಲಿ
ನೀನೋಡಿ ಬಾ ||೩||

ಕರುನಾಡ ಪ್ರಜೆಯಾಗಿ
ಆನಾಡ ಬೆಳೆಗಾಗಿ
ದುಡಿ ದುಡಿದು ಸುಖಿಯಾಗಿ
ಭಾರತದ ರವಿಯಾಗಿ
ನೀ ಬೆಳಗು ಬಾ
ನೀ ಬೆಳಗು ಬಾ ||೪||

(ಮ. ಹಿ. ಮ.)

PUBLIC NOTICE.

This public notice has been issued on behalf of my client Jois Krishnamurthiachar, adopted son of Bhimachar Badinehalu in Adoni Taluk in Bellary District.

1. My client is the legally adopted son of late Jois Bhimachar

2. By virtue of the said adoption my client has inherited about 90 acres of land in the villages of Badinehalu, Upparahalu, and Guddadahosahalli in Adoni Taluk and he has been in possession of them.

3. My client's adoptive mother Jois Bhimakka is trying to alienate some of the lands. She has absolutely no right, title and interest in these lands The prospective purchaser derives no valid title from the said Bhimakka and does so at his own risk and responsibility.

O. PRAHALADA RAO,
Advocate, Bellary.

ಸಾರ್ವಜನಿಕ ಪ್ರಕಟನೆ.

ಬಳ್ಳಾರಿ ಜಿಲ್ಲೆ ಆದವಾನಿ ತಾಲೂಕು ಬದನೆಹಾಳು ಗ್ರಾಮದ ನಮ್ಮ ಕಕ್ಷಿದಾರರಾದ ಭೀಮಾಚಾರ್ಯರ ದತ್ತು ಪುತ್ರ, ಜೋಯಿಸ ಕೃಷ್ಣಮೂರ್ತಿಯಾಚಾರ್ಯರ ಪರವಾಗಿ ಈ ಸಾರ್ವಜನಿಕ ಪ್ರಕಟನೆಯನ್ನು ಪ್ರಶಿದ್ಧಿಸಲಾಗಿದೆ.

(೧) ನಮ್ಮ ಕಕ್ಷಿದಾರರು ಗತಿಸಿದ ಜೋಯಿಸ ಭೀಮಾಚಾರ್ಯರ ನ್ಯಾಯವಾದ ದತ್ತುಪುತ್ರರಿದ್ದಾರೆ.

(೨) ಈ ದತ್ತಿನ ಮೂಲಕ ಆದವಾನಿ ತಾಲೂಕಿನ ಬದಿನೆಹಾಳು, ಉಪ್ಪರಹಾಳು ಮತ್ತು ಗುಡ್ಡದ ಹೊಸಹಳ್ಳಿಗಳಲ್ಲಿ ೯೦ (ತೊಂಭತ್ತು) ಎಕರೆ ಭೂಮಿಯು ಪ್ರಾಪ್ತವಾಗಿ ನಮ್ಮ ಕಕ್ಷಿದಾರರಿಗೆ ಆ ಭೂಮಿಗಳ ಸ್ವಾಧೀನಾನುಭವವುಂಟು.

(೩) ದತ್ತು ಸ್ವೀಕಾರಮಾಡಿದ ನಮ್ಮಕಕ್ಷಿದಾರರ ತಾಯಿಯಾದ ಜೋಯಿಸ ಭೀಮಕ್ಕನು ಕೆಲಭೂಮಿಗಳನ್ನು ಅನ್ಯಾಕ್ರಾಂತ ಮಾಡಲಿತ್ನಿಸಿದ್ದಾಳೆ. ಈ ಭೂಮಿಗಳಲ್ಲಿ ಆಕೆಗೆ ಎಷ್ಟೂ ಹಕ್ಕು ಅಧಿಕಾರ ಬಾಧ್ಯತೆಯಿಲ್ಲ. ಸದರಿ ಭೀಮಕ್ಕನಿಂದ ಕೊಳ್ಳಲಿರುವ ಮನುಷ್ಯನಿಗೆ ನ್ಯಾಯವಾದ ಅಧಿಕಾರವು ದೊರೆಯಲಾರದು. ಅತನು ತನ್ನ ಸ್ವಂತ ಜವಾಬ್ದಾರಿ ನಷ್ಟವನ್ನು ಗುತ್ತೀಸಿ ಹಾಗೆ ಮಾಡಬೇಕಾಗುತ್ತದೆ.

ಓ. ಪ್ರಹ್ಲಾದರಾವ್.
ಅಡ್ವೊಕೇಟ್-ಬಳ್ಳಾರಿ.

ಚಿತ್ರದುರ್ಗದ ಜಿಲ್ಲಾ ಮೊಳಕಾಲ್ಮೂರುವಿನಲ್ಲಿ ತಾಲೂಕಧಿಕಾರಿಗಳಾದ ಶ್ರೀ ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ವಿಜಯೀಂದ್ರ ಶಾನುಭೋಗರು ಕನ್ನಡ ಸಾಹಿತ್ಯದ ನೆಲೆಯ ಮೇಲೆ ಭಾಷಣವಿತ್ತು ತಾವು ರಚಿಸಿದ 'ಕರುಳ-ಕೊರಗು' ಎಂಬ ಪುಸ್ತಕದಿಂದ ಕೆಲಭಾಗಗಳನ್ನು ಓದಿದರು.

ಹುಚ್ಚೆದ್ದು ಕುಣಿಯುವ ವಿಜ್ಞಾನ.

ಇದೇ ತಿಂಗಳ ಪ್ರಾರಂಭದಲ್ಲಿ ಪೂನೆಯಲ್ಲಿ ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಶಾಲೆಯು ಅಡಿಗಲ್ಲನ್ನು ಸ್ಥಾಪಿಸಲಾಯಿತು ವೈಜ್ಞಾನಿಕರ ಬುದ್ಧಿಯು ಜನಸಾಮಾನ್ಯರ ಹಿತದ ಸಲುವಾಗಿಯೇ ವೆಚ್ಚವಾಗಬಹುದೆಂದು ನಂಬಿದ್ದೇವೆ

ಉದ್ದಿಮೆಗಳಿಂದುದ್ಭವಿತವಾದ ಕೃತ್ರಿಮ ಪ್ರವಾಹದಲ್ಲಿ ಸಿಕ್ಕ ಗ್ರಾಮೋದ್ಯೋಗಗಳು ತಮ್ಮ ಗುಣಗಳ ಬಲದಿಂದಲೇ ಜೀವ ಉಳಿಸಿಕೊಳ್ಳಲು ಯತ್ನಿಸುತ್ತಿವೆ. ಕಾಲಜೊತ್ತುಗಳ ಪರಿವೆಯಿಲ್ಲದೆ ಗ್ರಾಮೋದ್ಯೋಗಗಳ ವಿರುದ್ಧ ಪ್ರಚಾರ ಸಾಗಿವೆ. ನಿಜವಾದ ಪ್ರಗತಿಯೂ ಮತ್ತು ಭೂಮಿಯ ಸಂಪತ್ತಿನ ಸಂಪೂರ್ಣ ವಿನಿಯೋಗವೂ ಗ್ರಾಮೋದ್ಯೋಗಗಳಿಂದಲೇ ಆಗುವದು. ಸಮಸ್ತ ವೈಜ್ಞಾನಿಕ ಪ್ರಯೋಗ ಶಾಲೆಗಳ ಬೆಂಬಲವಿದ್ದರೂ ಉದ್ದಿಮೆಗಳಿಂದ ಹಾನಿ ತಪ್ಪಲಾರದೆಂದು ನಾವು ಹಿಂದಿನ ಸಂಚಿಕೆಯಲ್ಲಿ ತೋರಿಸಿಕೊಟ್ಟಿದ್ದೇವೆ.

ವನಸ್ಪತಿ ತುಪ್ಪದ ಕಾರ್ಖಾನೆಗಳ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ಬಂಡವಲದಾರರು ಎತ್ತಿನ ಗಾಣಗಳನ್ನು ಮತ್ತು ದುಗ್ಧಾಲಯಗಳನ್ನು ಹೇಗೆ ಹತ್ತಿಕ್ಕುತ್ತಿದ್ದಾರೆಂಬುದನ್ನು ನಾವು ಎತ್ತಿ ತೋರಿಸಿದ್ದೇವೆ. ಕಾರಖಾನೆ ಹಾಗು ಉದ್ದಿಮೆಗಳಿಂದುಂಟಾಗುವ ಅನಾಹುತಗಳ ಬಗ್ಗೆ ಕಣ್ಣು ಮುಚ್ಚಿ ಕೇಂದ್ರ ಸರಕಾರವು ಹೊಸ ಕಾರ್ಖಾನೆಗಳ ಸ್ಥಾಪನೆಗೆ ಅನುಜ್ಞೆ ಕೊಟ್ಟು ಈ ಆಕ್ರಮಣಕ್ಕೆ ಹೇಗೆ ಸಹಾಯಮಾಡುತ್ತಿದೆಂಬುದನ್ನು ತೋರಿಸಿದ್ದೇವೆ.

ಗಿರಣೀ ಅಕ್ಕಿಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವದೆಂದು ಶಾಸ್ತ್ರೀಯ ರೀತಿಯಿಂದ ಸಿದ್ಧವಾಗಿದೆ. ಆದರೆ ಈ ದುಷ್ಪರಿಣಾಮಗಳನ್ನು ಲೆಕ್ಕಿಸದೆ ಸೀದಾಸಪ್ಪಡಿತಿಯಿಂದ ಗಿರಣೀ ಅಕ್ಕಿಯನ್ನೆ ಹಂಚಲಾಗುತ್ತಿದೆ. ತಿರುವಾಂಕೂರು ತೋರಿಸಿದ ಉತ್ತಮ ಮಾರ್ಗವನ್ನು ಅನುಸರಿಸಿ ನಮ್ಮ ಲೋಕಪ್ರಿಯ ಸರಕಾರಗಳು ಎಲ್ಲ ಅಕ್ಕೀ ಗಿರಣಿಗಳನ್ನೇಕೆ ಮುಚ್ಚಿಸಬಾರದು?

ಕೈಯಿಂದ ತಯಾರಿಸಲ್ಪಟ್ಟ ಸಕ್ಕರೆಗೆ ಪ್ರೋತ್ಸಾಹನ ಕೊಡಬಾರದೆಂಬ ಪರಿಪತ್ರವನ್ನು ಕೇಂದ್ರ ಸರಕಾರವು ಕಳೆದ ನವಂಬರದಿಂದ ಪ್ರಾಂತಿಕ ಸರಕಾರಗಳಿಗೆ ಕಳಿಸುತ್ತಿದೆ. ಈ ಪ್ರಶ್ನೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ಪರಿಶೀಲಿಸಿ ಅರಣ್ಯಗಳಲ್ಲಿಯ ಹಾಗೂ ಪಡ ಭೂಮಿಯಲ್ಲಿಯೂ ಬೆಳೆಯುತ್ತಿರುವ ಸಿಂದೀಗಿಡಗಳನ್ನು ನಾವು ಉಪಯೋಗಿಸಿಕೊಂಡರೆ ಸುಮಾರು ಎಕರೆ ಬೆಳೆಯುಳ್ಳ ಭೂಮಿಯಲ್ಲಿ ನಾವು ಆಹಾರ ಧಾನ್ಯಗಳನ್ನು ಬೆಳೆದುಕೊಳ್ಳಬಹುದು.

ಸಿಂದೀಗಿಡಗಳಿಂದ ಬೆಲ್ಲವನ್ನೂ ಸಕ್ಕರೆಯನ್ನೂ ತಯಾರಿಸಬಹುದು. ಈ ಯೋಜನೆಯನ್ನು ಅಮಲಿನಲ್ಲಿ ತಂದರೆ ಅದು ಪಾನವಿರೋಧ ಯೋಜನೆಗೆ ಪೂರಕವಾಗುವದು, ಯಾಕಂದರೆ ಅದರಿಂದ ಪಾನನಿರೋಧದಿಂದ ನಿರುದ್ಯೋಗಿಗಳಾದ ಸಾವಿರಾರು ಸಿಂದಿಗಾರರಿಗೆ ಉದ್ಯೋಗ ದೊರಕುವದು. ಆದರೆ ಇದರಿಂದ ಸಕ್ಕರೆಯ ಉದ್ಯೋಗಕ್ಕೆ ಹೊಡೆತಬೀಳುವದರಿಂದ ಸಕ್ಕರೆ ಉದ್ದಿಮೆದಾರರು ಇದನ್ನು ವಿರೋಧಿಸುವರು. ಸರಕಾರವು ಇವರ ಸಂಕಷ್ಟಗಳನ್ನೆಷ್ಟೇ ಕೇಳಿಕೊಳ್ಳುವಂತೆ ತೋರುತ್ತದೆ

ಆಹಾರ ತಜ್ಞರು ಬೆಲ್ಲವಲ್ಲ ಖನಿಜಯುಕ್ತಾರ್ಥಗಳೂ ಜೀವನ ಸತ್ವಗಳೂ ಸಕ್ಕರೆಯೂ ಇದುವನೆಂದೂ ಅದಕ್ಕಾಗಿ ಬೆಲ್ಲವೇ ಉತ್ತಮ ಆಹಾರವೆಂದೂ ಹೇಳುವರು. ಬೇರೆ ಆಹಾರದಲ್ಲಿಂದ ತನ್ನಲ್ಲಿಲ್ಲದ ಸತ್ವವನ್ನು ಹೀರಿಕೊಂಡೆ ಸಕ್ಕರೆಯು ಹೊಟ್ಟೆಯಲ್ಲಿ ಪಚನವಾಗತ್ತದೆ ಆದ್ದರಿಂದ ಇದಕ್ಕೆ ಉತ್ಪಾದನೆಗೆ ಕಾರಣವಾ

ಗುವ ರಾಸಾಯನವೆನ್ನಬಹುದು ಇಷ್ಟೇ (ಅಂದರೆ ಅದು ಆಹಾರವಾಗಲಾರದು.) ಅಮೇರಿಕನ್ನರು ಸಕ್ಕರೆಗೆ ಸತ್ವಹೀರುವ ಆಹಾರವೆಂದು ಕರೆಯುತ್ತಾರೆ. ಕಾರ್ಖಾನೆಯ ಸಕ್ಕರೆಗಿಂತ ಕೈಯಿಂದ ತಯಾರಿಸಲ್ಪಟ್ಟ ಸಕ್ಕರೆಯಲ್ಲಿ ಹತ್ತುಪಟ್ಟು ಕಬ್ಬಿಣ ಅಂಶವು ಹೆಚ್ಚಿರುವದು. ಕೈಯಿಂದ ತಯಾರಿಸಲ್ಪಟ್ಟ ಸಕ್ಕರೆಯಲ್ಲಿ ಇಷ್ಟೆಲ್ಲ ಗುಣಗಳಿದ್ದರೂ ಕೇಂದ್ರಸರಕಾರವು ಅದಕ್ಕೆ ಶಿರ್ಧಚಂದ್ರವನ್ನು ಕೊಡಲು ನೋಡುತ್ತಿದೆ. ಎಷ್ಟೋ ನಾಗಗಳಲ್ಲಿ ಕಾರ್ಖಾನೆಯಲ್ಲಿ ತಯಾರಾದ ಜೌಕೋರ ಸಕ್ಕರೆಗೆ ಸೀದಾ ನಿರ್ಬಂಧವಿಲ್ಲ ಈ ಸಕ್ಕರೆಯನ್ನು ಬರಿನಂತರು ಎಷ್ಟು ಬೇಕಷ್ಟು ಕೊಂಡುಕೊಳ್ಳುವರು. ಅವರಿಗೆ ಯಾವ ನಿರ್ಬಂಧವಿಲ್ಲ ಆರ್ಥಿಕ ಶಕ್ತಿಯ ಮಿತಿಯೊಂದೇ ನಿರ್ಬಂಧ.

ಅಜ್ಞಾನವನ್ನು ತೊಲಗಿಸಲು ಯಾವಾಗಲೂ ಸಿದ್ಧವಿದ್ದ ಪ್ರಾಂತಿಕ ಸರಕಾರಗಳಿಗೆ ಸ್ವಲ್ಪ ಸೂಚನೆ ಕೊಟ್ಟರೆ ಸಾಕು ಅವು ಕಠೋರ ಉಪಾಯಗಳನ್ನು ಯೋಜಿಸುವವು ಸಂಯುಕ್ತ ಪ್ರಾಂತ ಸರಕಾರವು ಖಾಂಡಸಾರಿ ಸಕ್ಕರೆಯ ನಿಯಂತ್ರಣಾಜ್ಞೆ (ನವಂಬರ ೧೯೪೬) ಯಿಂದ ಖಂಡಸಾರಿ ಮತ್ತೂ ದೇಶೀ ಚೀನಿ ಸಕ್ಕರೆಗಳ ತಯಾರಿಕೆಯನ್ನು ಗೊತ್ತಿಗೆ ಹಚ್ಚಹತ್ತಿದೆ.

ಪದ್ಯದ ಘಟನೆಗಳನ್ನು ನೋಕ್ಷಿಸಿದರೆ ನಾವು ವೈಜ್ಞಾನಿಕ ಹಗ್ಗದ ಉರುಲು ಹಾಕಿಕೊಂಡು ಸಾಯುವವರಿದ್ದೇವೆಂದು ಅನಿಸುತ್ತದೆ. ಶ್ರಮ ಉಳಿಸುವ ಯಂತ್ರಗಳನ್ನು ಬಳಿಕೆಯಲ್ಲಿ ತರಹಚ್ಚಿ ಕೆಲಸಗಳು ಇಲ್ಲದಂತೆ ಮಾಡುವ ಸಾಧನಗಳನ್ನು ಯೋಜಿಸಿ ನಮ್ಮ ಸರಕಾರವು ಜನಸಾಮಾನ್ಯರ ಉದ್ಯೋಗಗಳ ಮೇಲೆ ಗದ್ದೆ ಎತ್ತುತ್ತಿದೆಯೆಂದು ಕೋರುತ್ತದೆ. ನಿರುದ್ಯೋಗ ಮತ್ತು ಅಲ್ಪೋದ್ಯೋಗ ಸಮಸ್ಯೆಗಳಿಂದ ಬೆಂದು ಬೆಂಡಾದ ದೇಶದಲ್ಲಿ ಹೀಗೆ ಮಾಡುವದು ಶಾಸ್ತ್ರೀಯವಾಗಬಹುದೆ?

ಲ್ಯಾಲಪೂರ ಒಕ್ಕಲತನ ಕಾಲೇಜಿನ ಮುಖ್ಯ ಧ್ಯಾಪಕರು ಮೈದಾ ಉತ್ಪಾದನೆಯ ತಜ್ಞರಿದ್ದಾರೆ. ಗೋಧಿಯಲ್ಲಿಯ ಎಲ್ಲ ಸತ್ವಗಳನ್ನು ಹಿಂಡಿ ಒಗೆದು ಕೇವಲ (ಬೂದಿಯಂಥ) ಹಿಟ್ಟನ್ನಷ್ಟೆ ತಯಾರಿಸುವ? ವಿದ್ಯುತ್ ಸಾಧನಗಳು ಅಲ್ಲಿವೆ. ತಿರುಗುವ ರೊಟ್ಟಿಯ ಭಟ್ಟಿಯೊಂದು ಅಲ್ಲುಂಟು ಇದೆಲ್ಲದರ ಉದ್ದೇಶವೇನೆಂದರೆ ಜೇನು ಹುಟ್ಟಿಸಂಥ ಬಿಳೇ ರೊಟ್ಟಿಯನ್ನು (ಬ್ರೆಡ್) ತಯಾರಿಸುವದು ಇದು ಕೇವಲ ಶ್ವೇತ ಮೈದಾದಿಂದ ಸಾಧ್ಯವಾಗುತ್ತದೆ. ಈ ಮುಖ್ಯಾಧ್ಯಾಪಕರಿಗೆ 'ಆಹಾರ ಸಂಹಾರಕ' ರೆಂದೇ ಕರೆಯುವದೇ ಹೆಚ್ಚು ಯೋಗ್ಯವಾಗಲಾರದೆ? ಹೆಚ್ಚು ಶಾಸ್ತ್ರೀಯವಾಗಲಾರದೆ? ಬರಗಾಲದಿಂದ ತೊಳಲುತ್ತಿದ್ದ ದೇಶದಲ್ಲಿ ಇಂಥವರಿಗೆ ಸ್ಥಾನವಿದೆಯೆ?

ಗಿರಣಿಗಳ ಸಹಾಯದಿಂದ ನಿಸರ್ಗವು ಆಹಾರದಲ್ಲಿಟ್ಟ ಪೌಷ್ಟಿಕತೆಯನ್ನು ಹಾಳುಮಾಡುವ ಹುಚ್ಚು ನಮ್ಮ ತಲೆಯಲ್ಲಿ ಸೇರಿದೆ. ಅಂತೆಯೇ ಗಿರಣೀ ಅಕ್ಕಿ, ಗಿರಣೀ ಸಕ್ಕರೆ, ವನಸ್ಪತಿ ತುಪ್ಪಗಳನ್ನು ಬಳಿಕೆಯಲ್ಲಿ ತುಂದಿದ್ದೇವೆ. ಇದೇ ವಿಜ್ಞಾನದಿಂದಾಗುವ ಲಾಭವೆ

——— (ಕರ್ಮವೀರ)

ಬ ದ ನೆ ಹಾ ಳು

೨೪-೪-೪೭ ನೇ ದಿನಾಂಕ ಶ್ರೀ ಬಸವೇಶ್ವರ ಭಜನಸಮಾಜದವರು ಸಾಯಂಕಾಲ ೬ ಗಂಟೆಯಿಂದ ಉದಯ ೬ ಗಂಟೆಯವರೆಗೂ ಭಜನೆಮಾಡಿ ಅದೇ ಸಾಯಂಕಾಲದಲ್ಲಿ ಅತಿ ವಿಜೃಂಭಣೆಯಿಂದ ಮೇರವಣಿಗೆ ಮಾಡಿ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಬಯಲಿನಲ್ಲಿ ಸಭೆ ಜರುಗಿಸಿದರು. ಅದರಲ್ಲಿ ಶ್ರೀ ಸಿ. ದಾಸರಾಯರು (ಹುಬ್ಬಳ್ಳಿ) ಜಯಕ್ರಿಸ್ತಮೂರ್ತಿಆಚಾರ್ಯ ಮುತ್ತಿತರರ ಉಜ್ವಲ ಭಾಷಣಗಳಾದವು.

ಕೊ ಡ್ಲಿ ಗೆ.

ಜನಾಬ್ ಮಕ್ತುಂ ಸಾಹೇಬ್ ಸಬ್ ಇನ್ಸ್ ಪೆಕ್ಟರವರು ಕೂಡ್ಲಿಗೆಯಿಂದ ಹೊಸಳ್ಳಿಗೆ ವರ್ಗಾಯಿಸಲ್ಪಟ್ಟಿದ್ದರಿಂದ 27-4-47 ನೇ ದಿನಾಂಕ ಸಾಯಂಕಾಲ ಅವರನ್ನು ಅತ್ಯಾದರದಿಂದ ಬೀಳ್ಕೊಡಲಾಯಿತು.

220

ದಿಲ್ಲಿಯಲ್ಲಿ ಗಾಂಧೀಜಿ.

ಅಲ್ಪಾವಧಿಯವರೆಗಾದರೂ ಗಾಂಧೀಜಿಯವರ ಸಹವಾಸ ಲಾಭವು ದೊರೆತುದು ಸುಸಂಧಿಯಾಗಿತ್ತು. ಸದಾ ತಮ್ಮ ಸಾನ್ನಿಧ್ಯ ಬಯಸುವವರಿಗೆ ಅವರು ತಮ್ಮ ಕಾರ್ಯವನ್ನು ಬೇರೆ ಬೇರೆ ರೀತಿಯಲ್ಲಿ ಒಪ್ಪಿಸಿ ಕೊಟ್ಟು ಅವರ ವೈಯುಕ್ತಿಕ ಸೇವೆಯವನ್ನು ಪಾತ್ರ ಎಷ್ಟು ಮಾತ್ರವೂ ಒಪ್ಪುತ್ತಿರಲಿಲ್ಲ. ಆದರೂ ಅವರು ಒಂದು ರೀತಿಯಲ್ಲಿ ಗಾಂಧೀಜಿಯವರ ನಿಕಟನರ್ತಿಗ ಳಾಗಿದ್ದರೆಂದೇ ಹೇಳಬಹುದು. ಇನ್ನೂ ತಾವು ತಮ್ಮ ಸಂಚಾರ ಯಾತ್ರೆಯಲ್ಲಿ ಇಡೀ ದೇಶವನ್ನೇ ಕಬಳಿ ಸುತ್ತಿರುವ ಜಾತೀಯ ಜ್ವಾಲೆಯನ್ನು ಅಹಿಂಸಾ ಜಲ ದಿಂದಲೆ ನಂದಿಸಬೇಕೆಂದು ತತ್ಕಾರ್ಯ ಸಾಧನೆಗಾಗಿ ದೇವರನ್ನೇ ಸಂಪೂರ್ಣವಾಗಿ ಮೊರೆಹೊಕ್ಕಿದ್ದರು.

ಅದೊಂದೇ ಭಾವನೆ ಈಗ ಗಾಂಧೀಜಿಯವರನ್ನು ವ್ಯಾಪಿಸಿದೆ. ಬೇರೆ ಯಾದ ವಿಷಯಕ್ಕೂ ಮಹತ್ವ ವಿಲ್ಲೆಂಬುದು ಅವರು ಅಲ್ಲಲ್ಲಿ ಮಾಡಿದ ಪ್ರಾರ್ಥನೋ ತ್ತರ ಭಾಷಣಗಳಿಂದ ಸ್ಪಷ್ಟವಾಗುತ್ತದೆ. ಹೊಸ ವೈಸ ರಾಯರೊಡನೆ ಮಾತುಕತೆ ನಡೆಸಲೆಂದು ಇವರು ಇಲ್ಲಿಗೆ ಬಂದರೂ, ಅನೇಕ ವಿಷಯಗಳಲ್ಲಿ ಇವರ ಸಲ ಹೆಯ ಲಾಭ ತಮಗೆ ದೊರಕುವದೆಂದು ನವಾಲಿ ಸರಕಾರದ ಮಂತ್ರಿಗಳಿಗೆ ಆನಂದವಾಗಿದ್ದರೂ ಇವರ ಮನಸು ಮಾತ್ರ ಬಂಗಾಲ, ಬಿಹಾರ ಮತ್ತು ಪಂಜಾ ಬಗಳಲ್ಲಿ ತೊಡಗಿಕೊಂಡಿತ್ತು.

ಜಾತೀಯ ಹೋರಾಟವು ಅವ್ಯಾಹತವಾಗಿ ಹೀಗೆ ಸಾಗಿದರೆ ತನಗೆ ದೊರೆಯಲಿರುವ ರಾಜಕೀಯ ಸ್ವಾತಂತ್ರ್ಯದಿಂದೇನೂ ಪ್ರಯೋಜನವಾಗದು ಎಂದು ಗಾಂಧೀಜಿಯವರು ಪದೇ ಪದೇ ಸ್ಪಷ್ಟವಾಗಿ ತಿಳಿಸಿ ದ್ದಾರೆ. ಶಾಂತಿ ಸ್ಥಾಪನೆಗಾಗಿ ಬ್ರಿಟಿಷ ಸೈನಿಕರನ್ನು ನಂಬುತ್ತ ಕುಳಿತರೆ ಆ ಸ್ವಾತಂತ್ರ್ಯವು ನಮ್ಮ ಸ್ವಾತಂ ತ್ರ್ಯವೂ ಆಗಲಿಕ್ಕಿಲ್ಲ. ಏನೇ ಆಗಲಿ, ರಾಜಕೀಯ ಸ್ವಾತಂತ್ರ್ಯದೊಡನೆ ದೇಶದಲ್ಲಿ ಸತ್ಯ ಪ್ರೇಮಗಳ ಸಾಮ್ರಾಜ್ಯ ಸ್ಥಾಪಿತವಾಗಿದ್ದರೆ ಆ ಸ್ವಾತಂತ್ರ್ಯದಿಂ ದೇನೂ ಉಪಯೋಗವಿಲ್ಲ.

ಗಾಂಧೀಜಿಯವರು ಇಲ್ಲಿ ಬಂದ ಮೂರು ದಿನ ಗಳವರೆಗೆ ಪ್ರಾರ್ಥನಾ ಸಭೆಯಲ್ಲಿ ಕುರಾಣ ಪಠನಕ್ಕೆ ಯಾರೋ ಆಕ್ಷೇಪವೆತ್ತಿದ್ದರಿಂದ ಆ ಮೂರು ದಿನವೂ ಪ್ರಾರ್ಥನೆ ನಡೆಸಲು ಅವರಿಗೆ ಅವಕಾಶವಾಗಲಿಲ್ಲ. ಹಿಂದೂ-ಮುಸ್ಲಿಂರಲ್ಲಿ ಇಷ್ಟೊಂದು ಗಾಢ ವೈಮನಸ್ಸು ತುಂಬಿಕೊಂಡಿದೆ. ಪ್ರಾರ್ಥನೆಗಾಗಿ ಜನ ಸಮೂಹವು ನಿತ್ಯ ನೆರೆಯುತ್ತಿತ್ತು. ಆದರೆ ಒಬ್ಬಾನೊಬ್ಬ ಆಕ್ಷೇಪಕ ನಿದ್ದರೂ ಸಾಕು, ಗಾಂಧೀಜಿಯವರು ಪ್ರಾರ್ಥನೆ ನಡೆಸುತ್ತಿದ್ದಿಲ್ಲವಾದ್ದರಿಂದ ನೆರೆದ ಜನರು ನಿರಾಶೆ ಯಿಂದ ಹಿಂತಿರುಗಬೇಕಾಗುತ್ತಿತ್ತು. ಪ್ರಾರ್ಥನಾ ಸಭೆಯಲ್ಲಿ ಬರಿ ವಿರೋಧಕರೇ ತುಂಬಿದ್ದರೆ ತಾವು ಸಂತೋಷದಿಂದ ಪ್ರಾರ್ಥನೆ ನಡೆಸಿ ವಿರೋಧಕರು ತಮ್ಮನ್ನು ಕೊಲ್ಲಬಹುದೆಂದರೆ ರಾಮ ರಹಿಮ ನಾವೋ ಚ್ಚಾರಣೆಯಿಂದ ಆ ಪ್ರಾಣವನ್ನೆದುರಿಸುವ ಧೈರ್ಯವೂ ತಮ್ಮಲ್ಲಿದೆ ಎಂಬುದನ್ನು ತೋರಿಸಿಕೊಡಬಹುದಾಗಿತ್ತು ಎಂದರು ಗಾಂಧೀಜಿ. ಪ್ರಾರ್ಥನಾ ಸಭೆಯಲ್ಲಿದ್ದ ಪ್ರಾರ್ಥನೇಚ್ಛುಗಳಲ್ಲಿ ಮತ್ತು ವಿರೋಧಕರಲ್ಲಿ ಹೋ ರಾಟ ಅವರಿಗೆ ಬೇಕಾಗಿತ್ತು. ಮೂರು ದಿನಗಳ ನಂತರ ವಿರೋಧಿಗಳು ತಲೆ ಮರೆಸಿಕೊಂಡರು. ಕೊನೆ ಗೆ ಅಹಿಂಸೆಗೇ ಗೆಲುವಾಯಿತು. ಅವರ ವಿರೋಧದಲ್ಲಿ ಏನೂ ಹುರುಳಿರಲಿಲ್ಲ. ಆದರೆ ಪಂಜಾಬಿನ ಕೆಲವು ಜಿಲ್ಲೆಗಳಲ್ಲಿ ಮುಸ್ಲಿಂ ತಲೆತಿರುಕರು ಇತ್ತೀಚೆಗೆ ನಡೆ

10th year of Publication
Monday, 5th May 1947

CLOTH.

Licensing Policy of the Present Government.

The yarn and cloth position in this district for the overhauling of which, the District Textile Committee submitted proposals to the Government recently, seems to be reverting to the former unsettled condition, consequent on the receipt of the Government Order virtually in favour of the status quo as it existed prior to the re-organisation policy.

It may be recalled that the Prakasam Government (by G.O.No. 4653 dated 19-12-46) had called for the re-organization proposals from the newly constituted Textile Committees keeping in view certain criteria such as promotion of co-operative organisations, accessibility of shops etc.

In pursuance of the Government Order cited above, the Bellary committee having regard to the prevalence of fifty four whole-salers in cloth, all concentrated mostly in Bellary and Adoni, recommended the appointment of the whole-salers taluk-war, one for each taluk-head quarters and for the cancellation of the licences of such of the whole-salers who were also retailers either in their own name or binami. As regards the 745 retailers the Committee suggested the selection of six village centres for each firka to serve the surrounding five-miles zone as the basis and urged for the reduction of the number of the retailers to 298 only.

NEW G. O. for STATUS-QUO.

The present Government, we understand, have issued fresh orders regarding cloth and yarn control position, (Memorandum No. 31327 dated 17-4-47) virtually in favour of the staus quo prior to the advent of the Textile Committees.

The New Order, it is understood, refers to the representations received by the Government that the Collectors have been refusing to renew some of the licences. "The intentions of the Government are clear

222

in the matter. All the licences should be automatically renewed under the new control orders irrespective of the schemes under consideation. The question of cancelling the licences under the new licensing policy will arise only after the schems called for by the Government are approved by the Government." The G O., further clarified the licensing policy as follows:-

(1) Dealers eliminated under the Collector's scheme should be considered for the new shops.

(2) Dealers may have to be eliminated either because of their bad antecedents or for the reasons indicated in the G. O. But the collector should not eliminate any dealer with reference to the latter consideration unless he is certain that the number of dealers in the area is excessive and that their effective control is handicapped in consequence

(3) A Dealer should not be eliminated hy reason only of his having small quotas of mill-cloth. Such dealers can make adequate net profits if they are licensed to deal in handloom cloth also and conduct business in such cloth on a suitable scale." During the application of the Order "results in any doubt," it has been stressed, "as to whether any dealer should be eliminated the benefit of the doubt should go to that dealer and he should be retained."

The effect of this order will perpetuate old order of things, the villagers will not get an inch of cloth. We are verry sorry to see that the present Govt democratic as it is called, has thought it fit to give prefence to the retailers & wholesalers all concentrated in towns deterimental to the interests of villagers.

ಹಳ್ಳಿಗರಿಗೆ ಬಟ್ಟೆ ಕಷ್ಟ ತಪ್ಪಲಿಲ್ಲ.

ಬಟ್ಟೆ ಲೈಸೆನ್ಸ್‌ದಾರರೆಲ್ಲಾ ಪಟ್ಟಣಗಳಲ್ಲೇ ಇದ್ದಾರೆ ಹಳ್ಳಿಜನರಿಗೂ ಬಟ್ಟೆಗಳನ್ನು ಸಮಾನವಾಗಿ ಹಂಚಬೇಕೆಂದು ಪ್ರಕಾಶಂ ಮಂತ್ರಿವರ್ಗದವರು ಸೂಚನೆಗಳನ್ನು ಕೇಳಿದ್ದರು. ಅಪ್ರಕಾರಕ್ಕೆ ಜಿಲ್ಲಾ ಟೆಕ್ಸ್‌ಟೈಲ್ ಕಮಿಟಿಯು ಫಿರ್ಕಾ ಒಂದಕ್ಕೆ ೮ರು ಬಟ್ಟೆ ಲೈಸೆನ್ಸ್‌ದಾರರಿರಬೇಕೆಂದೂ ಮಿಲ್ ಅದಸ್ಯನ ವರ ಕಾಲಕ್ಕೆ ತಿಪ್ಪೆಗಿತಗಳಂತೆ ಬಿಳಿಪ ಲೈಸೆನ್ಸ್‌ದಾರರು ಹೋಗಬೇಕೆಂದೂ ಜಿಲ್ಲಾಕೆಲ್ಲವುಟ್ಟಿಗೆ ಸುಮಾರು 300 ಲೈಸೆನ್ಸ್‌ದಾರರಿದ್ದಾರೆ ಸಾಕೆಂದೂ ಸೂಚಿಸಲು ಇದರಿಂದ ಪಟ್ಟಣದ ಲೈಸೆನ್ಸ್‌ದಾರರಿಗೆ ಕಳವಳವಾ ಯಿತು ಕಷ್ಟಪಟ್ಟು ಶ್ರಮದಿಂದ ಲೈಸೆನ್ಸ್ ಸಂಪಾದಿ ಸಿದ ಪಟ್ಟಣದ ಲೈಸೆನ್ಸ್‌ದಾರರು ಮಂತ್ರಿಗಳನ್ನು ನೋಡಿದೊಡನೆಯೇ ಅವರ ಹೃದಯ ಕರಗಿಹೋಗಿರ ಬೇಕು. ಪೂರ್ವಸಂತೆ ಈ ಬಹದೂರ್ ಮಹಾಶಯರಿ ಗೆಲ್ಲಾ ಲೈಸೆನ್ಸ್ ಪುನರುದ್ಧಾರಮಾಡಬೇಕೆಂಬ ಅಜ್ಞೆ ಯಾಯಿತು ಹಳ್ಳಿಗರು ಬಟ್ಟೆಗಾಗಿ ಶ್ರಮದಿಂದ ಬಹಳ ದೂರಬಂದು ನಿರಾಶರಾಗುವಕಾಲ ಬಡಲಾಗಲಿಲ್ಲ

ಸಿದ ಅತ್ಯಾಚಾರಗಳನ್ನು ಕಂಡು ಎ ಲ್ಲೆ ಲ್ಲಿ ಯೂ ಹಿಂದುಗಳ ತಲೆ ತಿರುಗಿದೆ. ಕೋಪತಾಪದ ಪತ್ರ, ಪ್ರಶ್ನೆಗಳ ಸುರಿಮಳೆ ನಡೆದಿದೆ. ಗಾಂಧೀಜಿಯವರು ತಾವು ಮುಸ್ಲಿಂರೆಂದು ಹೇಳಿಕೊಂಡಿದ್ದೇಕೆ, ರಾಮ ರಹಿಮರಲ್ಲಿ ಭೇದವಿಲ್ಲೆಂದು ಸಾರಿದ್ದೇಕೆ, ಕಲ್ಮಾ ಪಠಣಕ್ಕೆ ಆಕ್ಷೇಪವಿಲ್ಲೆಂದು ಪಂಜಾಬಕ್ಕೆ ಏಕೆ ಹೋಗಲಿಲ್ಲ, ನೀವು ದುಷ್ಟ ಹಿಂದುಗಳಲ್ಲವೆ, ಪಂಚಮದಳದವರಲ್ಲವೆ, ನಿಮ್ಮ ಅಹಿಂಸೆಯು ಹಿಂದುಗಳನ್ನು ಹೇಡಿಗಳನ್ನಾಗಿ ಮಾತ್ರಿಲ್ಲವೆ ಎಂಬ ಅನೇಕಾನೇಕ ಪ್ರಶ್ನೆಗಳು ದಿನಾಲೂ ಬರುತ್ತಿವೆ ಅವರಿಗೆ ಬಂದ ಒಂದು ಪತ್ರದ ಮೇಲಂತೂ 'ಮಹಮ್ಮದ ಗಾಂಧಿ' ಎಂದು ವಿಳಾಸ ವಿತ್ತು.

ಗಾಂಧೀಜಿಯವರು ತಾಳ್ಮೆಯಿಂದ ಶಾಂತ ಚಿತ್ತದಿಂದ ಸಾದಿಸಿದರು. ಕೆಲವರ ಪಾಪಕ್ಕಾಗಿ ಇಸ್ಲಾಂನ್ನು ಹೇಗೆ ನೀವು ಏಕೆ ದೂಷಿಸಬೇಕು? ಸಹಿಷ್ಣುತೆಯೆ ಹಿಂದೂ ಧರ್ಮದ ಅದೇಕೆನಿಖಿಲ ಧರ್ಮಗಳ ಸಾರವಾಗಿರುವುದರಿಂದ ತಾವು ಸನಾತನಿ ಹಿಂದುಗಳು, ತಾವು ಶುಷ್ಟ ಹಿಂದುಗಳಾಗಿದ್ದಷ್ಟೇ ಶುಷ್ಟ ಮುಸ್ಲಿಂರೂ ಸಜ್ಜನ ಕ್ರೈಸ್ತರೂ ಆಗಿರುವುದಾಗಿ ಹೇಳಿದರು. ಮೇಲ್ಕೆಯನ್ನು ಬಯಸುವುದು ಧರ್ಮವಿರುದ್ಧವಾದುದು. ಅಹಿಂಸೆಗೆ ಸಹನೆಯುವು ಅತ್ಯಾವಶ್ಯಕ. ಹಿಂದೂ ಪುರಾಣಗ್ರಂಥಗಳಲ್ಲಿ ದೇವರಿಗೆ ಸಹಸ್ರ ನಾಮಗಳನ್ನು ನಿರ್ದೇಶಿಸಿಲ್ಲವೆ? " ಅವುಗಳಲ್ಲಿ ರಹಿಮ ಹೆಸರೂ ಒಂದಾಗಿರಬಾರದೇಕೆ? ಕಲ್ಮಾವು ದೇವರನ್ನು ಸ್ತುತಿಸಿ ಮಹಮ್ಮದರು ದೇವದೂತರೆಂದಿಷ್ಟೆ ಹೇಳಿದೆ ದೇವರನ್ನು ಸ್ತುತಿಸುವಲ್ಲಿ ನನ್ನಲ್ಲಿ ಚಾಂಚಲ್ಯವಿಲ್ಲ. ಬುದ್ಧ ಝೊರೋಷ್ಟರ-ಯೇಸೂರನ್ನು ದೇವದೂತರೆಂದು ನಾನು ಒಪ್ಪಿದಂತೆ ಮಹಮ್ಮದರನ್ನೂ ದೇವದೂತರೆಂದು ಭಾವಿಸಿದ್ದೇನೆ" ಎಂದರು ಗಾಂಧೀಜಿ ತಾವಿಲ್ಲಿಗೆ ಬಂದ ನೈಸರಾಯರೊಡನೆ, ಮುಖಂಡರೊಡನೆ ವಿಚಾರವಿನಿಮಯದಲ್ಲಿ ತೊಡಗಿರುವುದರಿಂದ ನೌಖಾಲಿ ಬಿಹಾರ ಪಂಜಾಬಗಳಲ್ಲಿಯ ತಮ್ಮ ಕಾರ್ಯವನ್ನು ಕಡೆಗಣಿಸಿದ್ದೇನೆಂದು ಭಾವಿಸಬೇಕಾಗಿಲ್ಲವೆಂದರು. ಕರೆ ಬಂದೊಡನೆ ಪಂಜಾಬಕ್ಕೆ ಹೋಗುವ ತಮ್ಮನ್ನು ಯಾರೂ ತಡೆಯಲಾರರು. ಈಗ ಪಂಜಾಬದಲ್ಲಿ ಹಿಂದೀ ರಾಜ್ಯವಿಲ್ಲ, ಬ್ರಿಟಿಶ ಗವರ್ನರರ ಆಡಳಿತೆ ನಡೆದಿದೆ. ತಾವು ಎಲ್ಲಿದ್ದರೂ ಈ ಎಲ್ಲ ಪ್ರದೇಶಗಳಿಗಾಗಿಯೆ ದುಡಿಯುತ್ತಿರುವುದಾಗಿ ತಿಳಿಸಿದರು. "ನಾನೆಂತು ಪಂಚಮದಳದವನಾಗಬಲ್ಲೆ? ಪಂಜಾಬದಲ್ಲಿ ಹಿಂದುಗಳ ಶೀಖರ ಕಗ್ಗೊಲೆ ನಡೆಯಿತೆಂದು ನನ್ನ ಅಹಿಂಸೆಯನ್ನು ನಾನು ಪಾತಾಳಕ್ಕೆಸೆಯಲಾರೆ. ಬಿಹಾರದಲ್ಲಿಯು ಹಿಂದುಗಳು ಇಷ್ಟೇ ಅತ್ಯಾಚಾರವೆಸಗಿದ್ದಾರೆ. ಹಿಂದು-ಮುಸ್ಲಿಂರು ಕೋಪತಾಪಗಳನ್ನು ತಮ್ಮ ಹೃದಯದಿಂದ ಕಿತ್ತುಹಾಕಬೇಕು. ಹಿಂಸಾವಲಂಬನವು ಹೆಚ್ಚಿನ ಅತ್ಯಾಚಾರಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಅವರಿಬ್ಬರಿಗೂ ಹೇಳುವುದು ನನ್ನ ಕರ್ತವ್ಯವಾಗಿದೆ" ಪರರಾಷ್ಟ್ರ ಪ್ರತಿನಿಧಿಗಳು ಬಂದು ಜಾತೀಯ ಗಲಭೆಯ ವಿಷಯವನ್ನು ತಮ್ಮೊಡನೆ ಪ್ರಸ್ತಾಪಿಸಿದಾಗ ತಮಗೆ ಹೇಗೆ ನಾಚಿಕೆಯಿಂದ ತಲೆಕೆಳಗೆ ಹಾಕಬೇಕಾಯಿತೆಂಬುದನ್ನು ತಿಳಿಸಿದರು. ಈ ತಲೆ ತಿರುಕತನ ಕೆಲವರಲ್ಲಿಯೆ ಸೇರಿದೆ, ಬೇಗನೆ ಇದು ನಷ್ಟವಾಗಲೆಂದು ತಾವು ಪ್ರಾರ್ಥಿಸುತ್ತಿರುವುದಾಗಿ ಅವರಿಗೆ ಹೇಳಬೇಕಾಯಿತು. ಯಾವ ಧರ್ಮದವರೇ ಇರಲಿ, ಭಾರತೀಯರು ಕೂಡಿ ಇರಬೇಕಾಗಿದೆ. ಅನಪೆಲ್ಲ ಒಬ್ಬಳೆ ಭೂಮಿತಾಯಿಯ ಮಕ್ಕಳು, ಅವಳ ಎದೆ ಹಾಲಿನಿಂದಲೆ ಬೆಳೆದವರು. ಭಾರತವು ಬದುಕಿ ಬಾಳಬೇಕಾದರೆ ಈಪರಸ್ಪರ ಹಿಂಸೆ ನಡೆಯಬಾರದು.

ರಾಷ್ಟ್ರೀಯ ಸಪ್ತಾಹದ ನಿಜಾರ್ಥವನ್ನು ಅವರು ಅಮೌಲಿಕ ಭಾಷೆಯಲ್ಲಿ ತಿಳಿಸಿದರು. ಏಪ್ರಿಲ್ ಆರನೇ ತಾರೀಖಿನ ದಿನ ಉಪವಾಸ ನಡೆಸಿ ಪ್ರಾರ್ಥನೆ ಮಾಡಬೇಕು ಎಂದು ಅವರು ಅನೇಕ ವರ್ಷಗಳ ಹಿಂದೆ ಮಾಡಿಕೊಂಡ ಬಿನ್ನಹಕ್ಕೆ ಈಗ ಕಲ್ಪನಾತೀತವಾಗಿ ಇದೀ ರಾಷ್ಟ್ರದ ಪುರಸ್ಕಾರ ದೊರೆತಿದೆ. ಭಾರತದ ಪ್ರತಿಯೊಂದು ಹಳ್ಳಿಯಲ್ಲಿಯೂ ಇಂದು ರಾಷ್ಟ್ರೀಯ ಸಪ್ತಾಹವನ್ನು ಆಚರಿಸಲಾಗುತ್ತಿದೆ. ದಲಿತ ನಿರ್ಗತಿಕ ಅಜ್ಞಾನಿ ಸಮಾಜಕ್ಕೆ ಸ್ವಾತಂತ್ರ್ಯದಿಂದ ನವಜೀವನ

ದೊರೆಯಬಲ್ಲದೆಂಬ ಆಶೆಯಿಂದ ಅಪೂರ್ವ ಜಾಗ್ರತಿ ಉಂಟಾದುದೆ ಈ ಸಪ್ತಾಹದ ಉತ್ಸವದ ಆರಂಭದ ದ್ಯೋತಕ. ಆದರೆ ಈ ಸ್ವಜನಘಾತಕ ಹೋರಾಟವು ಆನವಜೀವನವನ್ನು ನೀಡಬಲ್ಲದೆ? ಪ್ರತಿಯೊಬ್ಬನೂ ಈ ಪ್ರಶ್ನೆಯನ್ನು ವಿಚಾರಿಸಬೇಕು. ಈ ಸಪ್ತಾಹದ ಕೊನೆಯದಿನವಾದ ಹುತಾತ್ಮರ (ಜಾಲಿಯಾನವಾಲಾ ಬಾಗನ್ನು ತನ್ನ ನೆತ್ತರಿನ ಹೊಳೆಯಿಂದ ನೆನೆಸಿದ ಹಿಂದೂ, ಮುಸ್ಲಿಂ, ಶೀಖ ವೀರರ) ದಿನವು ನಮ್ಮ ಉದ್ಧಾರ ವಿನೋಚನೆಗಳಿಗೆ ಕಾರಣವಾದ ಐಕ್ಯದ ಕುರುಹಾಗಬೇಕು. ಆ ಐಕ್ಯವನ್ನು ಸಾಧಿಸಲು ನಾವು ಪುನಶ್ಚ ನಮ್ಮ ಪ್ರಾಣಗಳನ್ನು ಮೀಸಲಾಗಿಡಬೇಕು

ನಿಃಸ್ವಾರ್ಥ ಸೂತ್ರಯಜ್ಞವು ಇಡೀ ವಾರ ನಡೆಯಿತು. ದಿನಗಳೆದಂತೆ ರಾಟೆಯಲ್ಲಿ ಗಾಂಧೀಜಿಯವರ ನಂಬುಗೆ ಹೆಚ್ಚುತ್ತಿದೆ. ಇಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನೀವು ಮನಶ್ಶಾಂತಿಯನ್ನು ಪಡೆದುದು ಹೇಗೆ ಎಂದು ಕೇಳಿದ ಚೀನಿ ಸ್ನೇಹಿತರೊಬ್ಬರಿಗೆ "ರಾಟೆ ತಿರುಗಿಸಿರಿ. ಅದರ ಸಂಗೀತವು ನಿಮ್ಮ ಆತ್ಮಕ್ಕೆ ಶಾಮಕವಾಗುವದು. ನಾವು ನೂಲುವ ನೂಲು ನಮ್ಮ ಜೀವನದ ಹರಿದುಹೋದ ಎಳೆಗಳನ್ನು ಸರಿಪಡಿಸುವದರಲ್ಲಿ ಸಹಾಯಕವಾಗುವದೆಂದು ನಾನು ನಂಬಿದ್ದೇನೆ. ನಿಜವಾದ ಜೀವನದ ತಳಹದಿಯಾದ ಅಹಿಂಸೆಯ ಕುರುಹಾಗಿದೆ ಈ ರಾಟೆ" ಎಂದು ಗಾಂಧೀಜಿ ಉತ್ತರಿಸಿದರು.

ದಿಲ್ಲಿಯ ಪುರಾನಾ ಕಿಲ್ಲೆಯಲ್ಲಿ ಸೇರಿದ್ದ ಏಶಿಯಾ ಪರಿಷತ್ತಿನ ಕೊನೆಯ ಬಹಿರಂಗಾಧಿವೇಶನದಲ್ಲಿ ನೆರೆದಿದ್ದ ಅಪಾರ ಜನ ಸಮುದಾಯವು ಗಾಂಧೀಜಿಯವರನ್ನು ಅಪೂರ್ವವಾಗಿ ಸ್ವಾಗತಿಸಿತು. ಗಾಂಧೀಜಿಯವರು ತಮ್ಮ ಸಹಜ ಸುಂದರ ಮಾತಿನಿಂದ ಆ ಪರಿಷತ್ತಿನ ಪ್ರತಿನಿಧಿಗಳಿಗೆ ಭಾರತದ ಪರವಾಗಿ ಸ್ವಾಗತ ಕೋರಿದರು. ಇದೊಂದು ಸಂಸ್ಮರಣೀಯ ಘಟನೆ. ಈ ಪರಿಷತ್ತು ಪ್ರಥಮ ಸಲ ಭಾರತದಲ್ಲಿ ಸೇರಿದ್ದು ಉಚಿತವೆಂದೂ ಗಾಂಧೀಜಿ ಆಡಿದರು. ಜಗತ್ತಿಗೆ ಎಲ್ಲ ಮಹತ್ವದ ಧರ್ಮಗಳನ್ನು ನೀಡಿದ್ದು ಪೂರ್ವವೆ. ಏಶಿಯಾದ ಎಲ್ಲ ಮಹಾತ್ಮರು ಸಾರಿದಂತೆ ಶಾಂತಿ ಸದಿಚ್ಛೆಗಳ ಸಂದೇಶದ ಮುಖಾಂತರವೇ ಏಶಿಯಾವು ಜಗತ್ತಿಗೆ ಏನನ್ನಾದರೂ ನೀಡಬಲ್ಲದು. ಸತ್ಯ ಶೋಧನೆಗಾಗಿ ಹೊರಟ ಮೂವರು ಫ್ರೆಂಚ ಸಾಧುಗಳ ಕತೆಯನ್ನು ಗಾಂಧೀಜಿಯವರು ಹೇಳಿ ಅವರಲ್ಲಿ ಭಾರತಕ್ಕೆ ಬಂದವನಿಗೆ ಅವನಿಗೆ ಬೇಕಾದದ್ದು ಹರಿಜನ ಕುಟುಂಬ ಒಂದರಲ್ಲಿ ದೊರೆಯಿತೆಂದು ತಿಳಿಸಿದರು. ದಿಲ್ಲಿಯಲ್ಲಿ ಭಾರತವನ್ನು ಕಂಡಿದ್ದೇನೆ ಎಂದು ಇಲ್ಲಿಗೆ ಬಂದಿರುವ ಪ್ರತಿನಿಧಿಗಳು ಭಾವಿಸಬಾರದು. ನಿಜವಾದ ಭಾರತವು ಅದರ ಏಳುಲಕ್ಷ ಹಳ್ಳಿಗಳಲ್ಲಿದೆ. ಜಗತ್ತಿನ ಭದ್ರವಾದ ಪುನರ್ನವನಿರ್ಮಿತಿಗೆ ಹಿಂದೀ ಸಂಸ್ಕೃತಿಯಿಂದೇನಾದರೂ ನೆರವಾಗಬೇಕಾಗಿದ್ದರೆ ಭಾರತದ ರಾಜಕೀಯ ಸ್ವಾತಂತ್ರ್ಯ ಸನ್ನಿಹಿತವಾಗಿರುವಾಗ ಈ ಅಪಾರ ಗ್ರಾಮೀಣ ಜನತೆಯಲ್ಲಿ ಪುನಃ ಜೀವಕಳೆ ತುಂಬಬೇಕು ಎಂದರು ಗಾಂಧೀಜಿ.

ಪರಿಷತ್ತಿನ ಎಲ್ಲ ಪ್ರತಿನಿಧಿಗಳೂ ಬಾಪುವಿನ ಕಡೆಗೆ ಬಂದು ಬರಿ ಆಶೀರ್ವಾದವನ್ನಲ್ಲ ಆದರೆ ಆಶಾ ಸಂದೇಶವನ್ನು ಕೇಳುತ್ತಿರುವ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ಅವರ ಬುದ್ಧನ ಸಂದೇಶವನ್ನು ಪುನರುಜ್ಜೀವಿಸುವದೇ ನಿಮ್ಮ ಕರ್ತವ್ಯವೆಂದು ಬಾಪೂ ತಿಬೇಟದ ಪ್ರತಿನಿಧಿಗಳಿಗೆ ಹೇಳಿದರು. ಗಾಂಧೀಜಿಯವರು ಅರಬರಿಗೆ ಸಹಾನುಭೂತಿ ತೋರಿಸಿ ಯಹುದಿಗಳನ್ನು ಪ್ರೀತಿಯಿಂದ ನಡೆಸುಕೊಂಡು ನಿಮ್ಮ ಹಿತಕ್ಕಾಗಿ ಅವರು ದುಡಿಯುವಂತೆ ಮಾಡಿರಿ ಎಂದು ಹೇಳಿದರು. ಯೆಹೂದಿಗಳು ತಮ್ಮ ವಿಧ್ವಂಸಕ ಚಟುವಟಿಕೆಗಳನ್ನು ನಿಲ್ಲಿಸಬೇಕು. ಹಿಂಸೆಯಿಂದ ನಿಮಗೇನೂ ಲಾಭವಿಲ್ಲೆಂದು ಬಾಪೂ ಯಹೂದಿ ಪ್ರತಿನಿಧಿಗಳಿಗೆ ಸಹಾನುಭೂತಿ ತೋರಿದರು. ಇಂಡೋನೇಶಿಯನರಿಗೂ ವೀಟನಾಮರಿಗೂ ಸಹ ಅಹಿಂಸೆಯ ಉಪದೇಶವನ್ನೇ ಇತ್ತರು. ಹಿಂಸೆಯಿಂದ ಅಧಿಕ ಹಿಂಸೆಯೇ ಹುಟ್ಟುವದು. ಒತ್ತಾಯದ ತಳಹದಿಯ ಮೇಲೆ ಶಾಶ್ವತವಾಗಿ ಯಾವದನ್ನೂ ಕಟ್ಟಲಾಗುವದಿಲ್ಲ. "ನಾವು ಈ

ವರೆಗೆ ಕಂಡವರಿಗಿಂತ ಇವರು ಬಹಳ ಭಿನ್ನರಾಗಿದ್ದಾರೆ''ಂದು ಒಬ್ಬ ಪ್ರತಿನಿಧಿಯು ನನಗೆ ಹೇಳಿದನು ''ಇವರನ್ನು ಕಾಣುವ ಸೌಭಾಗ್ಯ ನಮಗೆ ದೊರೆತಿರದಿದ್ದರೆ ನಮ್ಮ ಭಾರತ ಸಂಚಾರ ಅಪೂರ್ಣವಾಗುತ್ತಿತ್ತು''ಎಂದು ಇತರರು ಹೇಳಿದರು. ''ಇಂಥ ಮುಖಂಡನು ದೊರೆತುದು ನಿಮ್ಮ ಸುದೈವ'' ವೆಂದು ಒಬ್ಬ ಸ್ತ್ರೀ ಪ್ರತಿನಿಧಿಯು ಹೇಳಿದಳು. ''ನಮಗೆ ಇಂಥ ಮುಖಂಡನು ದೊರೆತಿದ್ದರೆ ನಾವು ರಕ್ತಪಾತ ನಡೆಸಬೇಕಾಗಿರಲಿಲ್ಲ'' ವೆಂದೂ ಸೂಚಿಸಿದಳು. ಆದರೆ ನಮ್ಮಲ್ಲಿಯ ಕೆಲವರು ಈ ಅಹಿಂಸೆಯ ಅರ್ಥ ಮಾಡಿಕೊಂಡಿಲ್ಲವಲ್ಲಾ ಎಂದು ನನಗೆ ವ್ಯಸನವಾಯಿತು. ಹೀಗಿದ್ದದ್ದರಿಂದಲೆ ನಮ್ಮಲ್ಲಿ ಎಷ್ಟು ಜನ ನಿಜವಾಗಿ ಗಾಂಧೀಜಿಯವರಿಗೆ ಪ್ರಾಮಾಣಿಕರಾಗಿದ್ದೇವೆ.

ಮೂಲ ವಿದ್ಯಾಭ್ಯಾಸ.

ಮೂಲ ತರಬೇತಿ ಶಾಲೆಗಳನ್ನು ಮುಂದಿನ ವರ್ಷ ಹೆಚ್ಚಿಸುವುದಕ್ಕಾಗಿ ವಾರ್ಧಾದಲ್ಲಿ ಶಿಕ್ಷಣ ಪಡೆಯುವಂತೆ ೧೫ ಉಪಾಧ್ಯಾಯರನ್ನು ಕಳುಹಿಸಲು ಸರಕಾರವು ನಿಶ್ಚಯಿಸಿದೆ. ಇವರು ೯ ತಿಂಗಳಕಾಲ ತರಬೇತು ಪಡೆಯುವರು ಬರುವವರ್ಷ ಏಪ್ರಿಲ್ ತಿಂಗಳ ಅಂತ್ಯದಲ್ಲಿ ಶಿಕ್ಷಣ ಮುಗಿಯುತ್ತದೆ ಈ ಬಗ್ಗೆ ಸರಕಾರವು ರೂಪಾಯಿ ಲಗಾಂ ವೆಚ್ಚಮಾಡುವುದು.

ಅಖಿಲ ಭಾರತ ಚರಕಾ ಸಂಘದವರು ನಡೆಸುವ ''ಖಾದಿ ಪ್ರವೇಶಿಕ'' ಶಿಕ್ಷಣ ವರ್ಗಾದಿನಲ್ಲಿ ತರಬೇತು ಹೊಂದುವಂತೆ ಸಹ ಕೆಲವು ಉಪಾಧ್ಯಾಯರನ್ನೂ ಸರಕಾರವು ಕಳುಹಿಸಲಿದೆ ಇವರು ತರಬೇತು ಹೊಂದಿದರೆ ಮೂಲವಿದ್ಯಾಭ್ಯಾಸ ಯೋಜನೆಯ ಪ್ರಕಾರ ತೆರೆಯಲ್ಪಡುವ ಶಾಲೆಗಳಲ್ಲಿ ನೇಮಿಸಲ್ಪಡಬಹುದು. ಈ ಬಗ್ಗೆ ಸುಮಾರು ರೂ. ೧೫೦೦ ವೆಚ್ಚ ತಗಲಬಹುದು.

ಎಲ್ಲಾ ಬಗೆಯ ಸಂಬಂಧವಾದ ಎಲ್ಲಾ ವಿಷಯಗಳಲ್ಲಿ ಸರಕಾರಕ್ಕೆ ಸಲಹೆಕೊಡುವುದಕ್ಕೋಸ್ಕರ ರಚಿಸಲ್ಪಟ್ಟ ಪ್ರಾಂತಿಕ ಸಲಹಾ ಸಮಿತಿಯು ಅಧಿಕಾರೇತರ ಸದಸ್ಯರ ಪ್ರಯಾಣ ಭತ್ತೆಗೋಸ್ಕರ ಸರಕಾರವು ವರ್ಷಕ್ಕೆ ರೂ. ೫೦೦೦ ತಗಲಬಹುದೆಂದು ನಿರೀಕ್ಷಿಸಲಾಗಿದೆ.

ಮೂಲ ವಿದ್ಯಾಭ್ಯಾಸದ ಕುರಿತು ಸಲಹೆ ಕೊಡುವುದಕ್ಕೆ ಸರಕಾರವು ಒಂದು ಸಮಿತಿಯನ್ನು ನೇಮಿಸಿದೆ ಈ ಸಮಿತಿಯು ಮೂರು ತಿಂಗಳಿಗೊಮ್ಮೆ ಮದ್ರಾಸಿನಲ್ಲಿ ಸೇರುವುದು. ಅಧಿಕಾರೇತರ ಸದಸ್ಯರ ಪ್ರಯಾಣ ಭತ್ತೆಗೆ ವರ್ಷಕ್ಕೆ ಸುಮಾರು ೧೬೦೦ ಖರ್ಚಾಗಬಹುದೆಂದು ಅಂದಾಜುಮಾಡಲಾಗಿದೆ.

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ ಶಿಲ್ಕು-ಟಿಕ್ಕು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೊದ್ದು. ಪರೀಕ್ಷಿಸಿ ಮನಗಾಣಿರಿ.

ನವಭಾರತಕ್ಕೆ ಚಂದಾದಾರರಾಗಿರಿ

ರಾ ಯ ದು ರ್ಗ.

ಗ್ರಾಮೋದ್ಯೋಗಿಗಳ ಸಮಾವೇಶ.

ರಾಯ್ಕದುರ್ಗದ ಅನಂತಮ್ಮನ ಛತ್ರದಲ್ಲಿ ಗ್ರಾಮೋದ್ಯೋಗಿಗಳ ಸಭೆಯು ಸೇರಿತ್ತು. ಹುಜೂರ್ ಸಿರಸ್ತ್ದಾರ ಶ್ರೀ ನಾರಾಯಣಶೆಟ್ಟಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ತಹಶೀಲ್ದಾರ್ ಎ. ಸಿ. ರಾಮಯ್ಯನವರು ಸಭೆಯನ್ನು ಪ್ರಾರಂಭಿಸಿದರು. ಪ್ರಧಾನೋಪನ್ಯಾಸಕರಾದ ಶ್ರೀ ಭೀಮರಾಯರು ತಮ್ಮ ಭಾಷಣಕೊಡುತ್ತಾ ಗ್ರಾಮೋದ್ಯೋಗಿಗಳು ಹೀಗೆ ಇತರರಿಂದ ಅವಮಾನವನ್ನೂ ನಿರಾಕರಣೆಯನ್ನು ಹೊಂದುತ್ತಲಿದ್ದಾರೆಂದು ತಿಳಿಸಿದರು. ಇನ್ನೂ ಹಲವರ ಭಾಷಣಗಳಾದನಂತರ ಅಧ್ಯಕ್ಷರು ಕೊನೆಗೆ ಹೀಗೆ ಹೇಳಿದರು. ಪ್ರತಿಯೊಬ್ಬ ಮನುಷ್ಯನು ಧಾರ್ಮಿಕ ಸೂತ್ರಗಳನ್ನನುಸರಿಸುವುದರ ಮಾತ್ರದಿಂದಲೇ ಮಾನವನ್ನು ಹೊಂದುತ್ತಾನೆ ತನ್ನ ಹೃಯ್ಯ ಕೃತ್ಯಗಳಿಂದ ತನ್ನನ್ನು ಅವವನಕ್ಕೆ ಈಡು ಮಾಡಿಕೊಳ್ಳುತ್ತಾನೆಂದು ಹೇಳಿದರು.

ಗಾಂಜಾ:— ಮಾಲಪ್ಪನ ಮಗ ತಿಪ್ಪಯ್ಯನು 10 ತೊಲೆ ಮೈಸೂರು ಗಾಂಜಾವನ್ನು ಮಾರುತ್ತಿರುವಾಗ ಹಿಡಿಯಲ್ಪಟ್ಟು ಅವನಮೇಲೆ ಕೇಸುಮಾಡಲಾಗಿದೆ.

ನೇಸೆಪೇಟೆಯಲ್ಲಿ ಜೂಜಾಟದ ಮನೆಯನ್ನು ಪೋಲೀಸರು ಪರಿಶೋಧಿಸಿ 40 ರೂಪಾಯಿಗಳನ್ನು ಸ್ವಾಧೀನ ಮಾಡಿಕೊಂಡರು 8 ಜನರು ಹಿಡಿಯಲ್ಪಟ್ಟರು. ಪ್ರತಿಯೊಬ್ಬನಿಗೂ 10 ರೂಪಾಯಿಗಳು ದಂಡ ವಿಧಿಸಲಾಯಿತು.

ಅಕಸ್ಮಿಕಮರಣ:— 50 ಮೇಕೆಗಳು ಸಿಡಿಲಿನ ಹೊಡತಕ್ಕೆಸಿಕ್ಕಿ ಸತ್ತವು ಆದರೆ ಅವುಗಳನ್ನು ಕಾಯುವನು ಆಶ್ಚರ್ಯ ರೀತಿಯಿಂದ ಮರಣವನ್ನು ತಪ್ಪಿಸಿಕೊಂಡನು.

ಬಳ್ಳಾರಿಯ ಕಲೆಕ್ಟರರಾದ ಶ್ರೀ ಕೆ. ಎನ್. ಅನಂತರಾಮನ್ ರವರೂ, ಐ. ಎ. ಟಿ. ಸಿ. ರವರಾದ ಕೆ. ಸುಬ್ಬರಾವ್‌ರವರೂ ಮತ್ತು ಶ್ರೀ ಆರ್. ಆರ್. ನಿಪ್ಪಾನಿಯವರೂ ಸೇರಿ ನೇಸೆಪೇಟೆಯಲ್ಲಿ ಧರ್ಮಾರ್ಥವಾದ ಶೋಧನೆ ಮಾಡಿದರು. ಅವರನ್ನು ರಿವಿನ್ಯೂ ಮತ್ತು ಪೋಲೀಸು ಖಾತೆಗಳವರು ಹಿಂಬಾಲಿಸಿದರು. ಅನೇಕ ಕಳ್ಳ ಮಗ್ಗಗಳೂ 1200 ರೂಪಾಯಿ ಬೆಲೆಬಾಳುವ ಕಳ್ಳನೂಲು ಸಿಕ್ಕಿರುತ್ತದೆ.

ಶಿ ರು ಗು ಪ್ಪ.

ಶ್ರೀ ಹಿರೇಹಾಳು ಮಠ ಚರಪಟ್ಟಾಧ್ಯಕ್ಷರಾದ ಶ್ರೀ ವಿರೂಪಾಕ್ಷಸ್ವಾಮಿಗಳ ಅಧ್ಯಕ್ಷತೆಯಲ್ಲಿ ವಿನಾಂಕ ೨೩ ಮತ್ತು ೨೪ ರಲ್ಲಿ ಶ್ರೀ ಬಸವೇಶ್ವರ, ಶ್ರೀ ದಾರುಕಾಚಾರ್ಯರ ಜಯಂತಿಗಳು ಜರುಗಿಸಲ್ಪಟ್ಟವು. ಶ್ರೀ ಪೆಚ್. ಚನ್ನಬಸಯ್ಯನವರು ಗುರುಗಳ ಗುಣಗಾನ ಮಾಡಿದರು ತರುವಾಯ ಇನ್ನೂ ಕೆಲವರು ಧಾರ್ಮಿಕ ಸಾಮಾಜಿಕ ವಿಷಯಗಳ ಮೇಲೆ ಭಾಷಣ ಮಾಡಿದರು.

ಕಾಂಗ್ರೆಸ್ ಚಳವಳಿ.

ಮೃತಪಟ್ಟವರ ಆಶ್ರಿತರಿಗೆ

ಸರಕಾರದ ಧನಸಹಾಯ.

೧೯೪೧ ನೇ ಇಸವಿಯ ವೈಯಕ್ತಿಕ ಸತ್ಯಾಗ್ರಹ ಹಾಗೂ ೧೯೪೨ ನೇ ಇಸವಿಯ ಅಸಹಕಾರ ಚಳವಳಿದಲ್ಲಿ ಭಾಗವಹಿಸಿ ಕೈದಿಯಾಗಿದ್ದು ಜೈಲಿನಲ್ಲಿ ಮಡಿದ ಆಶ್ರಿತರು ಅಥವಾ ಸಂಬಂಧಿಕರ ಸ್ಥೈಕ ಸಹಾಯಕ್ಕೆ ಅರ್ಹರಾದವರಿಗೆ ಧನ ಸಹಾಯ ಕೊಡಲು ಸರಕಾರವು ನಿಶ್ಚಯಿಸಿದೆ.

ಅದರಲ್ಲಿ ಚಿಂಗಲ್ಪಟ್ಟಿನ ಮೃತ ಶ್ರೀ. ಎಂ. ನಟರಾಜ ಅಯ್ಯರ ಆಶ್ರಿತರಿಗೆ ರೂ. ೩೦೦೦. ೧೯೪೨ ನೇ ಇಸವಿಯ ಚಳವಳದಲ್ಲಿ ನಟರಾಜ ಅಯ್ಯರ್ ಜೈಲಿನಲ್ಲಿದ್ದಾಗ ಜ್ವರದಿಂದ ಪೀಡಿತರಾಗಿ, ಬಿಡುಗಡೆ ಹೊಂದಿದರಾದರೂ ಎರಡು ದಿನಗಳೊಳಗೆ ಮೃತರಾದರು.

ದಕ್ಷಿಣ ಆರ್ಕಾಟಿನ ಶ್ರೀ. ಮುತ್ತುರಂಗಮ್ ಪಿಳ್ಳೆಯ ಆಶ್ರಿತಳಾದ ಶ್ರೀ. ಅಬುರುಪಮ್ಮಳಿಗೆ ರೂ. ೩೦೦೦ ೧೯೪೧ ನೇ ಇಸವಿಯಲ್ಲಿ ವೈಯಕ್ತಿಕ ಸತ್ಯಾ

ಗೃಹ ಹೂ ಡಿ ಜೈಲುವಾಸದಲ್ಲಿದ್ದಾಗ ಮುತ್ತುರಂ ಗವನ್ ಪಿಳ್ಳೆ ಮೃತರಾದರು.

ಕೊಯಂಬತ್ತೂರಿನ ಶ್ರೀ. ರಂಗಸ್ವಾಮಿ ನಾಯಿಡುವಿಗೆ ೧೨೦೦. ಇವರ ಮಗ ೧೯೪೨ ನೇ ಇಸವಿಯ ಚಳವಳಿಯ ಸಂಬಂಧ ಜೈಲಿನಲ್ಲಿದ್ದಾಗ ಮೃತನಾದರು.

ಪಶ್ಚಿಮ ಗೋದಾವರಿಯ ಶ್ರೀ. ಮುದ್ದರಾಜು ವೆಂಕಟರಾಜು ಇವರ ವಿಧವೆ ಮತ್ತು ೫ ಮಕ್ಕಳಿಗೆ ರೂ. ೨೦೦೦. ೧೯೪೨ ನೇ ಇಸವಿಯ ಚಳವಳಿಯಲ್ಲಿ ಮುದ್ದರಾಜು ಭೀಮಾವರದಲ್ಲಿ ನಡೆದ ರಾಜಕೀಯ ಸಭೆಯಲ್ಲಿ ಭಾಗವಹಿಸಿ, ಆಗ ಪೋಲಿಸರು ಗುಂಪಿಗೆ ಹಾಡಿಸಿದ ಫಲವಾಗಿ ಮೃತರಾದರು.

ಪಶ್ಚಿಮ ಗೋದಾವರಿಯ ಶ್ರೀ. ವೆಗಿಸಿನ ನಾರಾಯಣರಾಜು ಇವರ ವಿಧವೆಗೆ ರೂ. ೧೦೦೦. ಇವರು ಮೇಲಿನಸ್ಥಳದಲ್ಲಿ ಪೋಲಿಸರ ಗುಂಡುದಾಳಿಯಿಂದ ಮಡಿದರು.

ದೇವಕೋಟೆಯ ಶ್ರೀ ವಿ. ಧರ್ಮರಾಜನ್, ಇವರ ವಿಧವೆಗೆ ರೂ. ೫೦೦ ಇವರು ಸಹ ಮೇಲೆ ಹೇಳಿದ ಸ್ಥಳದಲ್ಲಿ ಪೋಲಿಸರ ಗುಂಡುದಾಳಿಯಿಂದ ಮೃತರಾದರು.

ಹರಪನಹಳ್ಳಿ ಸಾಹಿತ್ಯ ಸಮ್ಮೇಲನದ ಕಾರ್ಯಕ್ರಮ.

೬—೫—೪೭ ಮಂಗಳವಾರ ಸಾಯಂಕಾಲ ೬ಗಂ ಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ.

೭—೫—೪೭ ಬುಧವಾರ ಉದಯ ೮.೦ ಧ್ವಜಾರೋಹಣ ೮-೩೦ ವಸ್ತು ಪ್ರದರ್ಶನ ತೆರೆಯುವುದು. ೮-೪೫ ಅಧಿವೇಶನ ಪ್ರಾರಂಭ ೧೦-೧೫ ವಿಷಯ ನಿಯಾಮಕ ಸಮಿತಿಯ ಆಯ್ಕೆ.

ಮಧ್ಯಾಹ್ನ ೩-೩೦ ಸಾಹಿತ್ಯ ಗೋಷ್ಠಿ, ಪ್ರಬಂಧ ವಾಚನ ಸ್ಪರ್ಧೆಗಳು, ರಾತ್ರಿ ೯-೩೦ ವಿನೋದಾವಳಿ.

೮—೫—೪೭ ಗುರುವಾರ ಉದಯ ೮.೦ ಧ್ವಜವಂದನೆ ೮-೧೫ ವಿಜ್ಞಾನ ಗೋಷ್ಠಿ ೯-೩೦ ಜನಪದ ಸಾಹಿತ್ಯ ಗೋಷ್ಠಿ.

ಮಧ್ಯಾಹ್ನ ೨.೦ ಲೇಖಕರ ಪರಸ್ಪರ ಪರಿಚಯ (ಪ್ರತ್ಯೇಕ ಸ್ಥಳದಲ್ಲಿ) ೩-೪೦ ಮಹಿಳಾ ಗೋಷ್ಠಿ, ಪರಿಷತ್ತಿನ ಸಕಲ ಸದಸ್ಯರ ವಿಶೇಷ ಅಧಿವೇಶನ ಮತ್ತು ವಾರ್ಷಿಕ ಅಧಿವೇಶನ ೫-೪೦ ಸಾಹಿತ್ಯಗೋಷ್ಠಿ. ರಾತ್ರಿ ವಿನೋದಾವಳಿ.

೯—೫—೪೭ ಶುಕ್ರವಾರ ಉದಯ ೮-೩೦ ಧ್ವಜವಂದನೆ ೮-೪೫ ವಿಶ್ವವಿದ್ಯಾಲಯದ ವಿಷಯದ ಭಾಷಣಗಳು ೯-೧೫ 'ಶ್ರೀ' ಯವರ ಸ್ಮಾರಕ ವಿಚಾರ (ಬಹಿರಂಗ ಅಧಿವೇಶನ)

ಮಧ್ಯಾಹ್ನ ೩-೩೦ ಲಿಪಿ ಸಂಸ್ಕರಣದ ವಿಚಾರ ಬಹಿರಂಗ ಅಧಿವೇಶನ ೬.೦ ಅಧ್ಯಕ್ಷರ ಸಮಾರೋಪ ಭಾಷಣಗಳು ವಿವಿಧ ಪ್ರದರ್ಶನಗಳು.

ರಾತ್ರಿ ೯-೩೦ ವಿನೋದಾವಳಿ

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧. ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:- ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪಿ ಬಳ್ಳಾರಿ, ಹಡಗಲಿ, ಕೂಡ್ಲಿಗಿ. ಲಿದವಾನಿ **ಅನಂತಪುರ:-** ಅನಂತಪುರ, ಬೆಳಗುಪ್ಪ. ಧರ್ಮಾವರಂ, **ಕದಿ:** ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ. ಗುತ್ತಿ. **ಕರ್ನೂಲು:-** ಕರ್ನೂಲು ಪತ್ತಿಕೊಂಡ. **ಕಡಪ:-** ರಾಜಂಪೇಟೆ, ಕಡಪ. **ಚಿತ್ತೂರು:-** ಚಿತ್ತೂರು, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡಿದರ:— ೬ತಿಂಗಳಿಗೆ ಶೇಕಡ ೨½% ವರ್ಷಕ್ಕೆ 3% ೨ವರ್ಷಗಳಿಗೆ ೩½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** ೩½%.

ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:- 3%. **ಬಿ. ವಿ. ಕೇಷಗಿರಿರಾವ್, ಕಾರ್ಯದರ್ಶಿ.**



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. V. M. GIRI & SONS,
(Pro:- M, S Acharya) Car Street, Bellary
2. M/S. . HUSANJEE RAO. M VENKOJI RAO
General Merchants, Car Street Bellary.

ಶುದ್ಧ! ಗ್ಯಾರಂಟಿಯಾದ್ದು!! ಸತ್ಕಾರಿ!!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯು ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್, ಎಂ. ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ. ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ಸುಭಾಸ್
ರಾಷ್ಟ್ರಗೀತೆ.

ಸಿದ್ಧವಾಯಿತು— ಕ್ರಯ ೦—೮—೦

ಸುಂದರ ಮುದ್ರಣ— ಇಲ್ಲಿಯವರೆಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ.—

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .....

.....

.....

Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KESHAVARAO

ಜೈಹಿಂದ್ Reg. No. M. 278

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ವ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೧೯ ಬಳ್ಳಾರಿ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

— ಭಾರತ ರಾಜಕೀಯ —

ರಾಜ್ಯಘಟನೆ:— ವಿಚ್ಛೇದ ಭಾರತವು ವಿಭಾಜ್ಯವಾಗಬಾರದೆಂದು ಕಾಂಗ್ರೆಸ್ ಸಂಸ್ಥೆಯೂ, ವಿಭಜನೆಯಾಗಬೇಕೆಂದು ಮುಸ್ಲಿಂಲೀಗ್ ಸಂಸ್ಥೆಯೂ, ಹಟಹಿಡಿದು ಕೆಲದಿನಗಳ ಕೆಳಗೆ ಗಾಂಧೀ-ಜಿನ್ನಾ ಸಂಭಾಷಣೆಯು ವಿಫಲವಾದದ್ದು ಎಲ್ಲರಿಗೂ ಗೊತ್ತಿದೆ ನೂತನವಾಗಿ ಬಂದಿರುವ ವೈಸ್ರಾಯರಾದ ಲಾರ್ಡ್ ಮೌಂಟ್‌ಬ್ಯಾಟನರು ಏಳುವಾರಗಳ ವರೆಗೆ ಭಾರತ ಧುರೀಣರೊಡನೆ ಮಾತುಕತೆ ನಡೆಸಿ ತಾವೊಂದು ನಿರ್ಣಯಕ್ಕೆ ಬಂದಿರುವರು. ತಮ್ಮ ಈ ನಿರ್ಣಯಕ್ಕೆ ಭಾರತ ಸರ್ಕಾರದ ಒಪ್ಪಿಗೆಯನ್ನು ಪಡೆಯಲು ತಮ್ಮ ಕಾರ್ಯದರ್ಶಿಗಳಾದ ಲಾರ್ಡ್ ಇಸ್ಮೆಯವರನ್ನು ಇಂಗ್ಲೆಂಡಿಗೆ ಕಳುಹಿಸಿರುವರು. ಪಂಡಿತ ಜವಹರಲಾಲ ನೆಹರು, ಸರ್ದಾರ ವಲ್ಲಭಭಾಯಿಪಟೇಲ, ಜಿನ್ನಾ ಲಿಯಾಖತ ಅಲಿಖಾನ್, ಸರ್ದಾರ ಬಲದೇವಸಿಂಗ ಈ ಪಂಚರ ಸಭೆಯನ್ನು ಕರೆದು ತಮ್ಮ ನಿರ್ಣಯವನ್ನು ತಿಳಿಸಲಿರುವರು. ವಿಭಜನೆಯೇ ಆಗಬೇಕೆಂದರೆ ಪಂಜಾಬ್ ಬಂಗಾಳಗಳ ಹಿಂದೂ ಬಹುಸಂಖ್ಯಾಕ ಭಾಗಗಳು ಬೇರೆಯಾಗಬೇಕೆಂದು ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಯವರು ತೀರ್ಮಾನಿಸಿರುವರು. ಲಕ್ಷಣಗಳನ್ನು ನೋಡಲಿಕ್ಕಾಗಿ ವಿಭಜನೆಯಾಗುವುದು ಖಂಡಿತವೆಂದು ಕಾಣುತ್ತದೆ.

ಜಾತೀಯ ಜಗಳ:— ಪಂಜಾಬಿನ, ಅಮೃತಸರ ಲಾಹೋರ್ ಭಾಗಗಳಲ್ಲಿ, ಸರಹದ್ದಿನ ಡೇರಾ ಇಸ್ಮಾಯಿಲ್ ಖಾನದಲ್ಲಿ ಬಂಗಾಳದ ಕಲ್ಕತ್ತಾ, ನವಖಾಲಿ, ಢಾಕಾ ಪ್ರದೇಶಗಳಲ್ಲಿ ಇನ್ನೂ ಕೊಲೆ ಸುಲಿಗೆಗಳು ನಡೆದಿವೆ. ಕೇಂದ್ರ ಸರಕಾರವು ಬಾಧ್ಯತೆಯುಳ್ಳದಾಗಿದ್ದರೆ ಈ ದಂಗೆಗಳನ್ನು ನಿಲ್ಲಿಸುವುದು ಅಸಾಧ್ಯವಾಗಲಿಕ್ಕಿಲ್ಲೆಂದು ಸರ್ದಾರ ಪಟೇಲರು ವಾದಿಸಿ ಪೂರ್ಣಾಧಿಕಾರವನ್ನು ಕೇಳುತ್ತಿರುವರು. ಪೂರ್ಣಾಧಿಕಾರವನ್ನು ಕೊಡಬಾರದೆಂದು ಲೀಗ್ ಮುಖಂಡರು ವಾದಿಸುತ್ತಿರುವರು. ಅಂದರೆ ಲೀಗ್ ಮುಖಂಡರಿಗೆ ದಂಗೆಗಳಲ್ಲಿ ಭಾಗವಿರಬೇಕು. ಅಲ್ಲದೆ ಅಶಾಂತಿಯು ಹೀಗೆಬೇ ಹಬ್ಬುತ್ತಿರಬೇಕೆಂದು ಆಶೆಯಿರಬೇಕು.

ಭಾರತೀಯರಿಗೆ ಅಧಿಕಾರ ದಾನವನ್ನು ಮಾಡುವ ಯೋಜನೆಯನ್ನು ನಿಶ್ಚಯಿಸಲು ವೈಸ್ರಾಯರನ್ನು ಬ್ರಿಟಿಷ್ ಮುಖ್ಯ ಮಂತ್ರಿಗಳು ಆಹ್ವಾನಿಸಿದ್ದಾರೆ. ಅವರು ಜೂನ್ ೨ ರೊಳಗೆ ಹಿಂದಿರುಗುವರು.

230

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸು ಶಾಖೆ: — ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

Our Bellary office is shifted to Sri Mulangi Neelappa's building in Bangalore Road.

ನಮ್ಮ ಬಳ್ಳಾರಿ ಕಾರ್ಯಾಲಯವು ಬೆಂಗಳೂರು ರೋಡಿನಲ್ಲಿರುವ ಶ್ರೀ ಮೂಲಂಗಿ ನೀಲಪ್ಪನವರ ಕಟ್ಟಡಕ್ಕೆ ವರ್ಗಾಯಿಸಿದೆ.

ಪ್ರಾಥಮಿಕ ಶಾಲೋಪಾಧ್ಯಾಯರಸಭೆ

[ಒಬ್ಬ ಉಪಾಧ್ಯಾಯರ ನಿರೀಕ್ಷಕರಿಂದ]

ಶ್ರಮದಫಲ:— ಶ್ರೀ ಜಿ. ಎಸ್. ಮಸ್ತಾನ್ ಸಾಹೇಬರ ಅವಿಶ್ರಾಂತ ಶ್ರಮದ ಫಲವಾಗಿ ಇಷ್ಟು ಜನ ಉಪಾಧ್ಯಾಯರಾದರೂ ಉದ್ದೇಶಸಾಧನೆಗೆ ಕಲೆತರು. ಪ್ರತಿನಿಧಿಗಳಾದರು. ಅಧ್ಯಕ್ಷರಾದ ಶ್ರೀ ಮಹಾಬಲೇಶ್ವರಪ್ಪನವರಾದರೂ ಕರುಣೆಯಿಂದ ಖರ್ಚುಗಳಿಗಾಗಿ ೧೦೦ ರೂ. ಕೊಟ್ಟು ತಮ್ಮ ಸಾನುಭೂತಿಯನ್ನು ವ್ಯಕ್ತವಡಿಸಿದರು. ಈ ಸಭೆಯಿಂದ ಸರ್ವಾನೇಶವಾದ ಉಪಾಧ್ಯಾಯರಲ್ಲಿ ಜೀವನದ ನವಚೈತನ್ಯವು ಪುನಃ ಜಾಗೃತಿಯಾಯಿತು. ಸಂಕಟ ಸಮಯದಲ್ಲಿ ನಾವು ಒಂದಾಗಿ ಹೋರಾಟನನ್ನು ನಡೆಸೋಣವೆಂಬ ಮನವರಿಕೆಯು ಹೊರಸೂಸಿತು.

ಭಾಷಣಗಳ ಹಿನ್ನೆಲೆ:— ಅಧ್ಯಕ್ಷರೂ, ಶ್ರೀ ಜೆ. ಪಿ. ಭಾಸ್ಕರ್ ಇವರೂ, ಉಪಾಧ್ಯಾಯರು ಉಗ್ರಗಾಮಿಗಳಾಗಿ 'Strike-ಸಂಪು' ನಡೆಸಬಾರದೆಂದೂ ವ್ಯವಸ್ಥಾಪಕರಲ್ಲಿ ಶಾಂತಮಾರ್ಗಗಳಿಂದ ಸಂಘಟಿತರಾಗಬೇಕೆಂದು ಸೂಚಿಸಿದರು. ಶ್ರೀ ಕೇಶವರಾಯರು ಆಹಾರ ಬಟ್ಟೆ ಸಮಸ್ಯೆಗಳು ಏಗೆಹರಿದು ಜೀವನದ ಮಟ್ಟವು ಸಾಧಾರಣ ಮನುಷ್ಯನ ಮಟ್ಟಕ್ಕೆ ದೊರೆಯಲು ನಾಗರೀಕಪ್ರಪಂಚದ ಅಧುನಿಕ ಮಾರ್ಗಗಳನ್ನೆಲ್ಲಾ ಅನುಸರಿಸಬೇಕೆಂದರು. ಸ್ವಾಗತಾಧ್ಯಕ್ಷರಾದ ರಾಮಾಚಾರ್ಯ, ಸುಬ್ಬಣ್ಣಾಚಾರ್ಯ ಮತ್ತು ಇತರ ಉಪಾಧ್ಯಾಯ ಮಿತ್ರರು ರಣಕಹಳೆಯನ್ನೇ ಊದಿದರು. ವ್ಯಾಂತೀಕ ಮತ್ತು ಕೇಂದ್ರಸಂಸ್ಥೆಯ ಚಟುವಟಿಕೆಗಳನ್ನು ಬಲ್ಲ ಮಸ್ತಾನಸಾಹೇಬರು ರಾತ್ರೆ ಬಹಳ ಹೊತ್ತಿನವರೆಗೆ ಶಾಂತವಾಗಿ ವಿವರಿಸಲು ಸಹಾಯ ಮಾಡಿದರು.

ತೀರ್ಮಾನಗಳು:— ಎಲ್ಲಾ ಖಾಸಗೀ ಸಂಸ್ಥೆಗಳನ್ನು ರದ್ದುಮಾಡಿ ಸರ್ಕಾರವೇ ಪ್ರಾಥಮಿಕ ವಿದ್ಯಾಭ್ಯಾಸದ ಭಾರವನ್ನು ಹೊರಬೇಕು. ಉಪಾಧ್ಯಾಯರ ಸಂಬಳವು ಕನಿಷ್ಟಕ್ಕೆ ರೂ. ೫೦ ಇರಬೇಕು. ಸ್ಥಾನಿಕ ಸಂಸ್ಥೆ ಮತ್ತು ಶಾಸನ ಸಭೆಗಳಲ್ಲಿ ಉಪಾಧ್ಯಾಯ ಪ್ರತಿನಿಧಿಗಳಿರಬೇಕೆಂಬ ಮುಖ್ಯ ತೀರ್ಮಾನಗಳನ್ನು ಬಿಟ್ಟರೆ ಉಳಿದ ತೀರ್ಮಾನಗಳೆಲ್ಲಾ ಶಾಲೆಯ ಪ್ರಗತಿಗೆ ಸಂಬಂಧಿಸಿದವು ಉಪಾಧ್ಯಾಯರ ನಿತ್ಯ ನಡುವಳಿಕೆ ಜೀವನಕ್ಕೆ ಅನುಕೂಲವಾದುವೆಂದು ಹೇಳಬೇಕು. ಈ ತೀರ್ಮಾನಗಳನ್ನು ಸರ್ಕಾರವು ಎಷ್ಟರವರೆಗೆ ಅಂಗೀಕರಿಸುತ್ತೋ ಕಾಲನೇ ತೋರಿಸಬೇಕು.

(15 ನೆ ಪುಟಕ್ಕೆ ಮುಂದುವರಿದಿದೆ.)

THE NAVA BHARAT

ನವಭಾರತ

ಸಂಪಾದಕ-ಟಿ.ಪಿ.ಕೇಶವರಾವ್

10th year of Publication.

Monday, 19th May 1947

TEXTILE POLICY.

Our readers may remember that in our issue of the 5th instant, we editorially dealt with the present textile policy of the Government of Madras and in that connection we referred to the possibility of the perpetuation of the old order of things, prior to the advent of the Textile Committees. We have been since informed authoritatively that the intention of the Govt; we are glad to note, was only not to dislocate the distribution work pending tha finalisation of the Textile Commitee's recommendations. We are assured that there need be no apprehension that the cloth would not reach the villagers when the scheme is finalised.

We will be guilty of dereliction of duty if we fail to reiterate in this connection the public opinion prevalent all over. It must be remembered that the old textile policy was that adumbrated by the discredited Advisorial regime without reason, rhyme or planning and the public were for the first time taken into consideration through the District Textile and Food Committees. Any departure in these circumstances from the considered recommendations of these public bodies is bound to be viewed by the public as an act derogatory to democracy. For instance, the Textile Committee's recommendations included proposals to grant licences to the Harijans, Lambanis and rural population and whose valid applications for licences as retailers, are pending disposal with the Government for the past several months.

We trust that in the light of the latest assurances the interests of these down-trodden and long over-looked section are safeguarded and that the Govt, will without any more delay expedite matters to help them.

232

ಬಟ್ಟೆಗಳ ಹಂಚುವಿಕೆಯ ಯೋಜನೆ

ಶೀಘ್ರದಲ್ಲಿ ಬಗೆ ಹರಿಸಬೇಕು.

ಕಳೆದ 5-5-47 ರ **ನವಭಾರತ** ಸಂಚಿಕೆಯಲ್ಲಿ ಬಟ್ಟೆಗಳ ಹಂಚುವಿಕೆಯ ಅವ್ಯವಸ್ಥೆಯನ್ನು ಸೂಚಿಸಿ, ಸರಕಾರದ ಇತ್ತೀಚಿನ ಆಜ್ಞೆಯು ಪ್ರಜಾಭಿಪ್ರಾಯದ ವಿರುದ್ಧವೆಂದು ಸೂಚಿಸಿದ್ದೆವು. ಹಳ್ಳಿಗರಿಗೆ ಬಟ್ಟೆಯನ್ನು ದೊರೆಯದಂತೆ ಮಾಡುವುದು ಸರಕಾರದ ಉದ್ದೇಶವಲ್ಲವೆಂದೂ, ಜಿಲ್ಲಾ ಟೆಕ್ಸ್‌ಟೈಲ್ ಕಮಿಟಿಗಳ ಸಿಫಾರ್ಸುಗಳು ನಿಶ್ಚಿತರೂಪಕ್ಕೆ ಬಂದು ಸರಕಾರದ ಮಟ್ಟಿಗೆ ಪಡೆಯುವವರೆಗೆ, ಹಂಚುವಿಕೆಯಲ್ಲಿ ಈರೀತಿ ತಾತ್ಕಾಲಿಕ ವ್ಯವಸ್ಥೆ ಮಾಡಲಾಯ್ತೆಂದೂ ಸಂಬಂಧಿಸಿದ ಅಧಿಕಾರಿಗಳು ನಮಗೆ ಆಶ್ವಾಸನವಿತ್ತಿದ್ದಾರೆ. ಬಹಳ ಸಂತೋಷ,

ಸರಕಾರದ ಮತ್ತು ಸರಕಾರಕ್ಕೆ ಕೊಟ್ಟ ಸೂಚನೆಗಳು ಕಾಗದದಲ್ಲೇ ಉಳಿದರೆ ಏನು ಪ್ರಯೋಜನ? ಸರಕಾರದ ಸೂಚನೆಗಳಂತೆ ಹಳ್ಳಿ ಭಾಗದ ಜನರು ಹರಿಜನ, ಲಂಬಾಣಿಯವರು ಒಟ್ಟೆ ಲೈಸನ್ಸ್‌ಗಳಿಗಾಗಿ ಅರ್ಜಿಯಿಟ್ಟು ಅನೇಕ ತಿಂಗಳುಗಳಾಯಿತು ಯಾವುದ್ದಿಯೂ ಇಲ್ಲ. ಸರಕಾರದ ಮನ್ನಣೆ ಪಡೆದ ಜಿಲ್ಲಾ ಬಟ್ಟೆ ಸಮಿತಿ ಆಹಾರ ಸಮಿತಿಗಳವರು ಕಳುಹಿಸಿದ ಸೂಚನೆಗಳು ತಿಂಗಳುಗಟ್ಟಲೆಯಾದರೂ ಸ್ವೀಕೃತವಾಗಬಾರದೇಕೆ?

ಆಹಾರ ಬಟ್ಟೆ ಮನುಷ್ಯನಿಗೆ ಬೇಕಾದ ಅತ್ಯಾವಶ್ಯಕ ಸಾಮಗ್ರಿಗಳು. ಸರಕಾರದವರು ಬೇರೆ ವಿಷಯಗಳಲ್ಲಿ ಅಲಕ್ಷ್ಯಮಾಡಿದರೆ ಹಿಂದಿನವರಿಗೂ ಈಗಿನವರಿಗೂ ಭಿನ್ನವಿಲ್ಲೆಂಬ ಅಪಾದನೆಯು ಹಬ್ಬುವುದು.

ಕಳೆದ 3—4 ವರ್ಷಗಳಿಂದ ಅನೇಕ ಹಳ್ಳಿಗಳವರಿಗೆ ಬಟ್ಟೆಯು ನ್ಯಾಯ ಮಾರ್ಗಗಳಿಂದ ದೊರೆಯುತ್ತಲಿಲ್ಲ. ಪಟ್ಟಣಗಳವರ ಹಿತಕ್ಕಿಂತ ಹಳ್ಳಿಯವರ ಹಿತವು ಮುಖ್ಯವೆಂಬುದನ್ನು ಈಗಿನ ಸರಕಾರವು ಒಪ್ಪುವದರಲ್ಲಿ ಸಂಶಯವಿಲ್ಲ. ಈ ಕಾರಣ ವ್ಯರ್ಥವಾಗದಂತೆ ಆಶ್ವಾಸನ (Paper assurances) ಕೊಡದೆ ಶೀಘ್ರವಾಗಿ ಕಾರ್ಯಮಗ್ನರಾಗಿ ಈ ವಿಷಯದಲ್ಲಿ ಹಳ್ಳಿಗರ ಹರಿಜನರ ಇತರ ಬಡವರ್ಗಗಳ ಹಿತವನ್ನು ನುಲಕ್ಷಿಸಿ ಆಜ್ಞೆ ಹೊರಡಿಸಲು ಕೋರಿದೆ.

ಕೈಮಗ್ಗ ಕೈಗಾರಿಕೆ

ಬಟ್ಟೆಯ ಕೊರತೆಗೆ ಕಳ್ಳಸಂತೆಯೇ ಮುಖ್ಯ ಕಾರಣ

ಯುದ್ಧದ ಪರಿಣಾಮದಿಂದ ಉಂಟಾದ ಪರಿಸ್ಥಿತಿಗಳಲ್ಲಿ ಬಟ್ಟೆಯ ಕೊರತೆಯೂ ಒಂದಾಗಿದೆ. ಪರದೇಶಗಳಿಂದ ಸಾಕಷ್ಟು ನೂಲಾಗಲಿ ಬಟ್ಟೆಯಾಗಲಿ ಬರಲಿಲ್ಲ. ಭಾರತದ ಗಿರಣಿಗಳಲ್ಲಾಗುವ ವಸ್ತ್ರದ ಉತ್ಪನ್ನದ ಹೆಚ್ಚಿನ ಅಂಶವು ಸೈನ್ಯಕ್ಕಾಗಿ ಸಾಗಿಸಲ್ಪಟ್ಟು ಜನರಿಗೆ ದೊರೆಯುವ ಬಟ್ಟೆಯು ತೀರಾ ಕಮ್ಮಿಯಾಯಿತು. ಯುದ್ಧ ಕಳೆದರೂ ಪರಿಸ್ಥಿತಿ ಏನೂ ಹೆಚ್ಚಿಗೆ ಸುಧಾರಿಸಲ್ಪಟ್ಟಿಲ್ಲ. ಕೇಂದ್ರ ಸರ್ಕಾರವೂ ಪ್ರಾಂತಿಕ ಸರ್ಕಾರವೂ ಉತ್ಪತ್ತಿಯನ್ನು ಹೆಚ್ಚಿಸಿ ದೊರೆಯುವ ಬಟ್ಟೆಯನ್ನು ಸಮಾನವಾಗಿ ಹಂಚುವ ಏರ್ಪಾಡುಮಾಡಲು ಎಲ್ಲ ವಿಧದಿಂದಲೂ ಪ್ರಯತ್ನಿಸಿತು

ನಮ್ಮ ಪ್ರಾಂತದಲ್ಲಿ ಕೈಮಗ್ಗ ಕೈಗಾರಿಕೆಯು ಕೃಷಿಯನ್ನು ಬಿಟ್ಟರೆ ಎರಡನೆಯ ಪ್ರಾಮುಖ್ಯವೃತ್ತಿಯಾಗಿದೆ. ಎಂತಹ ತೊಡಕುಗಳು ಬಂದರೂ ಕುಗ್ಗದೆ ಈವರೆಗೆ ಈ ಕೈಗಾರಿಕೆ ಬಾಳಿ ಬದುಕಿದೆ ಎಂದರೆ ಇದು ನಮ್ಮ ಪ್ರಾಂತದಲ್ಲಿ ಎಷ್ಟು ಪ್ರಾಮುಖ್ಯವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಜನರ ಆರ್ಥಿಕ ಪರಿಸ್ಥಿತಿಯಲ್ಲಿ ಇದು ಎಂತಹ ಸ್ಥಾನವನ್ನು ವಹಿಸಿದೆ ಎಂಬುದಕ್ಕೆ ಈಗಲೂ ನಮ್ಮ ಪ್ರಾಂತದಲ್ಲಿರುವ ೫ ಲಕ್ಷ ಕೈಮಗ್ಗಗಳೇ ಸಾಕ್ಷಿ. ಅಲ್ಲದೆ ಹಿಂದುಸ್ಥಾನದ

ಇತರ ಎಲ್ಲಾ ಪ್ರಾಂತಗಳಿಗಿಂತಲೂ ನಮ್ಮ ಪ್ರಾಂತವು ಹೆಚ್ಚಿನ ಕೈಮಗ್ಗದ ಬಟ್ಟೆಯನ್ನು ಒದಗಿಸುತ್ತದೆ. ಎಂಬುದು ಹೆಮ್ಮೆ ಪಡತಕ್ಕ ವಿಷಯವಾಗಿದೆ. ಈ ಕೈಗಾರಿಕೆಯನ್ನು ಸರಿಯಾದ ರೀತಿಯಲ್ಲಿ ನಡೆಯಿಸಲು ನಮ್ಮ ನೇಕಾರರಲ್ಲಿ ಸಾಕಷ್ಟು ಭಂಡವಾಳವಿಲ್ಲದಿರುವುದರಿಂದ ಸಹಕಾರ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಸಹಾಯ ಮಾಡಲು ಸರ್ಕಾರವು ಯತ್ನಿಸುತ್ತಿದೆ. ಇದರಿಂದ ನೇಕಾರರ ಆರ್ಥಿಕ ಪರಿಸ್ಥಿತಿಯು ಸುಧಾರಣೆ ಹೊಂದುವುದರ ಮೂಲಕ ಈ ಕೈಗಾರಿಕೆಯೂ ಅಭಿವೃದ್ಧಿಹೊಂದುವುದೆಂಬುದೇ ಆ ಶ ಯ ಈ ಸಂಘಗಳು ಬಟ್ಟೆಗಳ ಉತ್ಪತ್ತಿ ವಿಕ್ರಯಗಳನ್ನು ಸರಿಯಾದ ಪರಿಸ್ಥಿತಿಯಲ್ಲಿಟ್ಟು ಕಳೆದ ೮ ವರ್ಷಗಳಲ್ಲಿ ಗ್ರಾಹಕರಿಗೆ ಸಾಕಷ್ಟು ಅನುಕೂಲತೆ ದೊರಕಿಸಿವೆ.

ಅಂಗಡಿಗಳಲ್ಲಿ ಬಟ್ಟೆ ಇಲ್ಲ ಎಂದು ಹೇಳಲು ಇತರ ಕಾರಣಗಳಿಗಿಂತಲೂ ನೂಲು ಹಾಗು ಬಟ್ಟೆಗಳ ಕಳ್ಳಸಂತೆಯೇ ಮುಖ್ಯಕಾರಣ.

ನೇಕಾರರ ಸಹಕಾರ ಸಂಘಗಳು ಇಂತಹ ದುಃಸ್ಥಿತಿಯನ್ನು ಕಮ್ಮಿಮಾಡಲು ಯತ್ನಿಸಿದುವು. ತಮಗೆ ದೊರೆತ ಸಂಪೂರ್ಣ ನೂಲನ್ನು ಬಟ್ಟೆ ನೇಯ್ದು ಗ್ರಾಹಕರಿಗೆ ಕೊಡಲು ಸಿದ್ಧವಾದವು.

1942-43 ರಲ್ಲಿ ಮಧ್ಯಮ ತರಗತಿಯವರಿಗೂ ಬಟ್ಟೆ ದೊರೆಯದಿದ್ದುದರಿಂದ ಬಹಳ ಕಷ್ಟವಾಯಿತು. ಆಗ ಸರಕಾರವು ಪ್ರಾಂತಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳ ಮೂಲಕ ಕಡಮೆ ಕ್ರಯದ ಬಟ್ಟೆಗಳನ್ನು ತಯಾರಿಸುವ ಯೋಜನೆಯೊಂದನ್ನು ಜಾರಿಗೆ ತಂದಿತು. ಪ್ರಾಂತಿಕ ಟೆಕ್ಸ್‌ಟೈಲ್ ಕಮಿಶನರ ಆಫೀನದಲ್ಲಿ ಕೆಲವು ನೇಯ್ಗೆಯ ಕೇಂದ್ರಗಳು ಆರಂಭಿಸಲ್ಪಟ್ಟುವು. ಈ ಯೋಜನೆಯನ್ನು ಪ್ರಾಂತಿಕ ಕೈಗಾರಿಕೆ ನೇಕಾರರ ಸಹಕಾರ ಸಂಘವು ಯಶಶ್ವಿಯಾಗಿ ವಿಸ್ತರಿಸಿತು. ಇದರ ಪರಿಣಾಮವಾಗಿ 192 ಪ್ರಾಥಮಿಕ ನೇಕಾರರ ಸಂಘಗಳು 25,196 ಮಗ್ಗಗಳನ್ನು ಸ್ಥಾಪಿಸಿ ಕೆಲಸ ನಡೆಸುತ್ತಿದ್ದವು. ನಮ್ಮ ಪ್ರಾಂತದ ಜನರ ಉಪಯೋಗಕ್ಕೆ ಅನುಕೂಲವಾಗುವ ಬಟ್ಟೆಗಳನ್ನು ಹೇರಳವಾಗಿ ತಯಾರಿಸಲು ಪ್ರಾರಂಭಿಸಿದವು. ಒಟ್ಟು ಅಗ್ಗ ಬೆಲೆಯ 59 ಲಕ್ಷ ಗಜ ಬಟ್ಟೆಗಳನ್ನು ಈ ಯೋಜನೆಯಿಂದ ತಯಾರಿಸಲು ಸಾಧ್ಯವಾಯಿತು. ಈ ಪೈಕಿ ಸಿಲೋನಿಗೆ ಕಳುಹಿಸಿದ ಒಂದು ಮಿಲಿಯ ಗಜ ಬಟ್ಟೆಯಲ್ಲದೆ ಮಿಕ್ಕುಳಿದ ಬಟ್ಟೆಯೆಲ್ಲಾ ನಮ್ಮ ಪ್ರಾಂತದಲ್ಲೇ ಖರ್ಚಾಯಿತು.

1941-42 ರಿಂದ 1945-46 ರ ವರೆಗೆ ಪ್ರಾಥಮಿಕ ಹಾಗೂ ಮದ್ರಾಸ್ ಕೈಮಗ್ಗ ನೇಕಾರರ ಸಂಘಗಳು ಯಶಶ್ವಿಯಾಗಿ ಕೆಲಸಮಾಡಿವೆ.

ಕಳೆದ ವರ್ಷದಲ್ಲಿ ಪ್ರಾಥಮಿಕ ನೇಕಾರ ಸಹಕಾರ ಸಂಘಗಳು 347 ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಬಟ್ಟೆಯನ್ನು ತಯಾರಿಸಿ 373 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿದುವು. ಪ್ರಾಂತಿಕ ನೇಕಾರರ ಸಂಘದ ಮಾರಾಟದ ಮೌಲ್ಯ 83 ಲಕ್ಷ 75 ಸಾವಿರ ದಷ್ಟಾಗಿದೆ. ಈಗ ಒಟ್ಟು 350 ನೇಕಾರರ ಸಂಘಗಳಿದ್ದು ಸುಮಾರು 52,000 ಮಗ್ಗಗಳಿವೆ. ಇವುಗಳ ಒಟ್ಟು ಉತ್ಪನ್ನ 30 ಲಕ್ಷ ರೂಪಾಯಿಗಳು.

ಈ ಸಂಘಗಳು ಬಟ್ಟೆ ತಯಾರಿಸಲು ತಗಲುವ ಖರ್ಚನ್ನು ಅದಷ್ಟು ಕಮ್ಮಿಮಾಡಿ ಗ್ರಾಹಕರಿಗೆ ಸುಲಭ ಕ್ರಯಕ್ಕೆ ಬಟ್ಟೆ ದೊರೆಯುವಂತೆ ಮಾಡಲು ಪ್ರಯತ್ನಿಸುತ್ತಿರುವುವು. ನೇಯುವವರ ವೇತನವನ್ನು ಕ್ರಮಪಡಿಸಿ ಇವರಿಗೆ ಕೆಲಸಕ್ಕೆ ಸ್ಪತಿಫಲ ದೊರೆಯುವಂತೆ ಮಾಡುವುವು. ನಮ್ಮ ನಾಡಿನಲ್ಲಿ ಅನಾದಿಕಾಲದಿಂದಲೇ ಇದ್ದ ಈ ಕೈಗಾರಿಕೆಯನ್ನು ಪ್ರೋತ್ಸಾಹಿಸುವುದು ಅತ್ಯಾವಶ್ಯಕ. ಹಳ್ಳಿಹಳ್ಳಿಗಳೆಲ್ಲೂ ಕೈಮಗ್ಗದಿಂದ ಬಟ್ಟೆ ತಯಾರಿಸಿ ಆಯಾಯ ಹಳ್ಳಿಗರಿಗೆ ಬೇಕಾದ ಬಟ್ಟೆಗಳನ್ನು ಒದಗಿಸಬಹುದು. ಬೇಸಾಯದೊಡನೆ ಈ ಕೈಗಾರಿಕೆಯನ್ನು ಉಪವೃತ್ತಿಯಾಗಿ ಮಾಡಿಕೊಂಡರೆ ಎಷ್ಟೋ ಬಡ ಕುಟುಂಬಗಳು ಉದ್ಧಾರವಾಗಬಹುದು. ಎಲ್ಲಾ ವಿಷಯಗಳಿಂದಲೂ ಪ್ರಮುಖ್ಯವಾದ ಹೊಟ್ಟೆ-ಬಟ್ಟೆಯ ಪ್ರಶ್ನೆಯನ್ನು ಬಗೆಹರಿಸಲು ಈ ಕೈಗಾರಿಕೆಯು ಅತ್ಯಂತ ಸಹಕಾರಿಯಾಗಿದೆ.

234

ತುಂಗಭದ್ರಾ ಯೋಜನೆ

ಸರಕಾರದ ಪ್ರಕಟನೆ.

ಕಳೆದ ಜನವರಿ ತಿಂಗಳ ಕೊನೆಯ ವಾರದಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಸಾರ್ವಜನಿಕ ಖಾತೆ ಮತ್ತು ಭೂಕಂದಾಯ ಮಂತ್ರಿಗಳ ಸೇರ್ವಿಳಿಯಿಂದ ತುಂಗಭದ್ರಾ ಅಣೆಕಟ್ಟಿನ ಸಂಬಂಧ ಭೂಮಿಯನ್ನು ಸ್ವಾಧೀನಪಡಿಸುವ ವಿಷಯದಲ್ಲಿ ಒಂದು ಸಭೆ ಜರುಗಿತ್ತು. "ಅಣೆಕಟ್ಟಿಗಾಗಿರುವ ಪ್ರದೇಶವು ತಿಮ್ಮಲಾಪುರದಲ್ಲಿರಬೇಕು. ಮಲ್ಲಾಪುರವು ಆಂಧ್ರರಿಗೆ ಸಹಾಯಮಾಡುವ ಉದ್ದೇಶದಿಂದಲೇ ಈಗ ಆರಿಸಲ್ಪಟ್ಟಿದೆ. ಅಣೆಕಟ್ಟಿನಿಂದಾಗಿ ಭೂಮಿಯನ್ನು ಕಳಕೊಳ್ಳುವವರು ಕನ್ನಡಿಗರು. ಮಲ್ಲಾಪುರ ಯೋಜನೆಯಿಂದ ಸುಮಾರು ಮೂರು ಲಕ್ಷ ಎಕರೆ ಖುಷ್ಕಿ ಜಮೀನುಗಳ ಬೇಸಾಯಕ್ಕೆಮಾತ್ರ ಉಪಯೋಗವಾಗುವುದು. ಅದರೆ ಸುಮಾರು ೪೫,೦೦೦ ಎಕರೆಗಳಷ್ಟು ಜಮೀನು ನೀರುಪಾಲಾಗುವುದಲ್ಲದೆ ೨೫,೦೦೦ ಜನರಿಗೆ ಮನೆಮಾರಿಲ್ಲದೆ ನಿರಾಶ್ರಿತರಾಗಿರಬೇಕಾದೀತು. ಅದುದರಿಂದ ಏನೋ ತಪ್ಪು ತಿಳುವಳಿಕೆಯು ಬಂದೇ ಇರಬೇಕು ಸರಕಾರವು ಇದನ್ನು ಚೆನ್ನಾಗಿ ಪರ್ಯಾಲೋಚಿಸುವುದರಿಂದ ಅಂತಹ ವಿಪರೀತವು ಮಾಯವಾದೀತು" ಎಂದು ಜನರು ಮನವಿ ಮಾಡಿಕೊಂಡಿದ್ದರು.

ಮಲ್ಲಾಪುರದ ಪ್ರದೇಶವನ್ನು ೧೯೦೪ರಲ್ಲಿ ತುಂಗಭದ್ರಾ ಪೆನ್ನಾರ್ ಅಣೆಕಟ್ಟುಗಳ ಸುಪರಿಂಟೆಂಡೆಂಟ್ ಇಂಜನಿಯರಾಗಿದ್ದ ಮಿ|| ಮಕಾನ್ಸೆಯವರು ಆರಿಸಿದ್ದಾಗಿದೆ ಇವರು ತುಂಗಭದ್ರಾ, ಕೃಷ್ಣಾ ಕಾಲುವೆಗಳ ವಿಷಯದಲ್ಲಿ ಚೆನ್ನಾಗಿ ಪರಿಶೀಲಿಸಿ, ಈ ಭಾಗವನ್ನು ಆರಿಸಿಕೊಂಡಿದ್ದಾರೆ. ಈ ಪ್ರದೇಶ ನದಿಯ ಎರಡೂ ಕಡೆಗಳಲ್ಲೂ ಬೆಟ್ಟಗಳಿದ್ದು ಅಣೆಕಟ್ಟಿಗೆ ಭದ್ರವಾದ ಅಸ್ತಿವಾರವುಳ್ಳದ್ದಾಗಿದೆ. ಅಲ್ಲದೆ ಇಲ್ಲಿ ಅಣೆಕಟ್ಟನ್ನು ಹೆಚ್ಚು ಉದ್ದವಾಗಿ ಕಟ್ಟಬೇಕಾಗಿಲ್ಲ. ಅದರಲ್ಲಿ ಭಾರಿಯ ನೀರನ್ನು ತುಂಬುವ ಅನುಕೂಲತೆ ಇದೆ. ೧೯೦೬ರಲ್ಲಿ ನೀರಾವರಿಯ ಇನ್‌ಸ್ಪೆಕ್ಟರ್ ಜನರಲರಾದ ಮಿ|| ಬೆಂಟನ್ ಇವರು ಈ ಪ್ರದೇಶವನ್ನು ನೋಡಿ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದಲ್ಲದೆ ಪ್ರಾಮುಖ್ಯ ಕಾರ್ಯಗಳನ್ನು ನಡೆಸಲು ಉತ್ತಮ ಸ್ಥಳವೆಂದು ಸೂಚಿಸಿದ್ದರು. ೧೯೨೯ರಲ್ಲಿ ತುಂಗಭದ್ರಾ ಅಣೆಕಟ್ಟಿನ ಬಗ್ಗೆ ಪ್ರತ್ಯೇಕವಾಗಿ ಕಲಸಮಾಡುತ್ತಿದ್ದ ಮಿ|| ಅಯರ್‌ಲೇಂಡ್, ಎಕ್ಸಿಕೂಡಿವ್ ಇಂಜನಿಯರ್ ಇವರು ತಿಮ್ಮಲಾಪುರದಲ್ಲಿ ಅಣೆಕಟ್ಟುಹಾಕುವುದು ಸಾಧ್ಯವಿದ್ದರೂ, ಮಲ್ಲಾಪುರಕ್ಕಿಂತ ಇಲ್ಲಿ ಕೆಲವು ಸ್ವಾಭಾವಿಕವಾದ ಅನುಕೂಲತೆಗಳು ಹೆಚ್ಚಿದ್ದರೂ, ಹೈದರಾಬಾದು ಸರಕಾರದೊಡನೇಪಾಲಿನಿಂದ ಮಲ್ಲಾಪುರದಲ್ಲೂ ಅಣೆಕಟ್ಟು ಕಟ್ಟುವ ಸಂಭವವೂ ಇದೆ ಎಂದು ಅಭಿಪ್ರಾಯ ಪಟ್ಟರು. ತಿಮ್ಮಲಾಪುರದಲ್ಲಿ ಅಣೆಕಟ್ಟನ್ನು ೯,೫೦೦ ಅಡಿ ಉದ್ದಕ್ಕೆ ಕಟ್ಟುವುದಲ್ಲದೆ, ಇನ್ನೊಂದು ೬,೪೧೦ ಅಡಿ ಉದ್ದದ ಮಣ್ಣಿನ ಅಣೆಕಟ್ಟನ್ನೂ, ಸಂದು ಉಳಿದಲ್ಲಿ ಕಟ್ಟಬೇಕಾಗಿದೆ. ಆದರೆ ಮಲ್ಲಾಪುರದಲ್ಲಿ ಅಣೆಕಟ್ಟು ೬,೧೮೦ ಅಡಿ ಮಾತ್ರ ಉದ್ದವಾಗಿದ್ದರೆ ಸಾಕು. ಇಂಜನಿಯರ ದೃಷ್ಟಿಯಿಂದ ಮಲ್ಲಾಪುರದ ಪ್ರದೇಶವು ತಿಮ್ಮಲಾಪುರಕ್ಕಿಂತ ಎಷ್ಟೋ ಉತ್ತಮವಾಗಿದೆ. ಮಲ್ಲಾಪುರದಲ್ಲಿ ನೀರಿನ ಸಂಗ್ರಹಕ್ಕೆ ಅನುಕೂಲತೆ ಹೆಚ್ಚು. ಹೈದರಾಬಾದು ಸರಕಾರದವರೊಡನೆ ಒಪ್ಪಂದ ಮಾಡಿದ ಪ್ರಕಾರ ೬೫,೦೦೦ಮಿ ಘನ ಅಡಿಗಳಷ್ಟು ವಾತ್ರ ನೀರು ನಮ್ಮ ಪ್ರಾಂತಕ್ಕೆ ಸಿಗಬಹುದಷ್ಟೆ. ಅದುದರಿಂದ ಇಷ್ಟು ನೀರನ್ನು ಮಾತ್ರ ತುಂಬಿಸಿಡಲು ತಿಮ್ಮಲಾಪುರದಲ್ಲಿ ದೊಡ್ಡ ಜಲಾಶಯವನ್ನು ಕಟ್ಟುವುದು ಆರ್ಥಿಕ ದೃಷ್ಟಿಯಿಂದ ಸರಿದೋರುವುದಿಲ್ಲ.

ತಿಮ್ಮಲಾಪುರದಲ್ಲಿರುವ ಸ್ಥಳವು ರೈಲ್ವೇ ಮಾರ್ಗದಿಂದ ಬಹಳ ದೂರದಲ್ಲಿದೆ. ಅಲ್ಲದೆ ಅಲ್ಲಿಗೆ ಹೋಗಬೇಕಾದರೆ ಹಗರಿಯಂತಹ ಅನೇಕ ನದಿಗಳ ಅಡ್ಡವಾಗಿ ಸೇತುವೆಗಳುಳ್ಳ ಸುಮಾರು ೩೬ ಮೈಲು ದೂರದ ರಸ್ತೆ ಮಾಡಬೇಕು. ಮಲ್ಲಾಪುರವು ಹೊಸಪೇಟೆ ರೈಲ್ವೇ ನಿಲ್ದಾಣದಿಂದ ಮೂರೇ ಮೈಲು ದೂರದಲ್ಲಿದೆ ತಿಮ್ಮಲಾಪುರದಲ್ಲಿ ಅಣೆಕಟ್ಟು ಕಟ್ಟಿದರೆ ಮುಂಬಯಿ ಪ್ರಾಂತಕ್ಕೆ ಸೇರಿದ ಸಾರವತ್ತಾದ ಅನೇಕ ಜಮೀನುಗಳು ನೀರು ಪಾಲಾಗುವುವು. ಇದರ ಫಲವಾಗಿ ಅಣೆಕಟ್ಟಿಗಾಗಿ ಕ್ರಯಕ್ಕೆ ತೆಕ್ಕೊಳ್ಳುವ ಜಮೀನಿಗೆ ನಮ್ಮ ಸರಕಾರವು ಮಿತಿಮೀರಿ ಹಣ ಕೊಡಬೇಕಾಗುವುದು. ಅಲ್ಲದೆ ತಿಮ್ಮಲಾಪುರದ ಯೋಜನೆಯಲ್ಲಿ ಉದ್ದವಾದ ಹಾಗು ವಿಶಾಲವಾದ ಕಾಲುವೆಗಳನ್ನು ಮಾಡಬೇಕಾಗುತ್ತದೆ. ಅವುಗಳಿಂದ ಹೆಚ್ಚಾಗಿ ದತ್ತಮಂಡಲದ ತರೀ ಕೃಷಿಗೆ ಮಾತ್ರವೇ ಉಪಯೋಗವಾಗುವುದು. ಇದಕ್ಕಾಗಿ ಭೂಮಿಯನ್ನು ಚೆನ್ನಾಗಿ ಪರೀಕ್ಷಿಸಿ, ಈ ಅಣೆಕಟ್ಟಿನ ನೀರನ್ನು ಒದಗಿಸಿಕೊಳ್ಳುವ ಜಮೀನುಗಳಲ್ಲೆಲ್ಲಾ ಖುಷ್ಕೀಪೈರೇ ಲಾಭದಾಯಕವೆಂದು ಭೂ ಶಾಸ್ತ್ರವನ್ನು ಚೆನ್ನಾಗಿ ತಿಳಿದವರ ಸಲಹೆಮೇರೆಗೆ ಮಲ್ಲಾಪುರದಲ್ಲಿ ಅಣೆಕಟ್ಟು ಕಟ್ಟಲು ನಿರ್ಧಾರವಾಯಿತು ತಿಮ್ಮಲಾಪುರದ ಯೋಜನೆಯಿಂದ ೨೨೮ ಚದರ ಮೈಲು ವಿಸ್ತೀರ್ಣದ ಭೂಮಿ ನೀರಿನಲ್ಲಿ ಮುಳುಗಿಹೋಗುವುದು ಅದರಲ್ಲಿ ೧೨೪ ಗ್ರಾಮಗಳುಳ್ಳ ೧೨೫ ಚದರ ಮೈಲು ವಿಸ್ತೀರ್ಣದ ಪ್ರದೇಶ ಮುಂಬಯಿ ಸಂಸ್ಥಾನಕ್ಕೆ ಸೇರಿದ್ದು. ಆ ಪೈಕಿ ೩೩ ಹಳ್ಳಿಗಳು ಸಂಪೂರ್ಣ ಮುಳುಗಿಹೋಗುವವು. ಮಲ್ಲಾಪುರದಲ್ಲಾದರೆ ಒಟ್ಟು ೧೩೮ ಚದರ ಮೈಲುಗಳಷ್ಟು ಮಾತ್ರ ಮುಳುಗಿ ಹೋಗುವುದು ಅದರಲ್ಲಿ ೫೫ ಚದರ ಮೈಲು ವಿಸ್ತೀರ್ಣ ಮಾತ್ರ ಮುಂಬಯಿ ಸಂಸ್ಥಾನಕ್ಕೆ ಸೇರಿರುತ್ತದೆ. ಈ ವಿಷಯದಲ್ಲಿ ಮುಂಬಯಿ ಸರಕಾರಕ್ಕೆ "ತಿಮ್ಮಲಾಪುರದ ಯೋಜನೆಯಿಂದ ಕಾಯಂ ಆಗಿ ಭೂ ಕಂದಾಯದಲ್ಲಿ ಹೆಚ್ಚಿನ ನಷ್ಟವಾಗುವುದು. ಅಣೆಕಟ್ಟಿನಿಂದಾಗಿ ನೀರಾವಾಲಾಗುವ ಪ್ರದೇಶವು ಧಾರವಾಡ ಜಿಲ್ಲೆಯ ದಕ್ಷಿಣಾರ್ಧದ ಮಧ್ಯಭಾಗದಲ್ಲಿ ಅಡ್ಡವಾಗಿ ವಿಸ್ತರಿಸಿದೆ. ಇಲ್ಲಿ ನೀರು ತುಂಬಿದರೆ ಈ ಜಿಲ್ಲೆಯ ಉತ್ತರ ದಕ್ಷಿಣಭಾಗಗಳು ಬೇರೆ ಬೇರೆಯಾಗಿ ಪರಸ್ಪರವಿರುವ ರಸ್ತೆ ಮೊದಲಾದ ಅನುಕೂಲತೆಗಳೆಲ್ಲಾ ಬೇರೆ ಮಾಡಲ್ಪಟ್ಟು ಆಡಳಿತೆಯಲ್ಲಿ ತುಂಬ ಅಸೌಕರ್ಯವುಂಟಾಗಿ ಈ ಸುತ್ತಮುತ್ತಲಿನ ಅಸಂಖ್ಯಾತ ಕನ್ನಡಿಗರಿಗೆ ಅಪಾರ ನಷ್ಟವುಂಟಾದೀತು. ಆದುದರಿಂದ ತಿಮ್ಮಲಾಪುರದ ಯೋಜನೆಯು ಕನ್ನಡಿಗರಿಗೆ ತುಂಬಾ ಕಷ್ಟವನ್ನೇ ಉಂಟುಮಾಡುವುದೆಂಬುದರಲ್ಲಿ ಸಂಶಯವಿಲ್ಲ.

ಇದಲ್ಲದೆ ತಿಮ್ಮಲಾಪುರವನ್ನು ಅಣೆಕಟ್ಟಿಗಾಗಿ ಆರಿಸುವುದರಿಂದ ಹೆಚ್ಚು ವೆಚ್ಚವಾಗುವುದು ಮಾತ್ರವಲ್ಲದೆ, ಇನ್ನೂ ಅನೇಕ ತೊಡಕುಗಳು ಬರುವುವು. ಆದುದರಿಂದ ತಿಮ್ಮಲಾಪುರದಿಂದ ಕೇವಲ ೩೦ ಮೈಲು ದೂರದಲ್ಲೇ ಇರುವ ಮಲ್ಲಾಪುರ ಪ್ರದೇಶವನ್ನು ಆರಿಸಲಾಯಿತು ಇದರಿಂದ ಆಂಧ್ರರಿಗೆ ಹೆಚ್ಚಿನ ಆದಾಯವಿಲ್ಲ ಈ ಅಣೆಕಟ್ಟಿನಿಂದ ಬಳ್ಳಾರಿ ಜಿಲ್ಲೆಯ ಆಂಧ್ರಭಾಷೆಗಳನ್ನಾಡುವ ತಾಲೂಕುಗಳಿಗೂ ಕರ್ನೂಲು ಜಿಲ್ಲೆಯ ಕೆಲ ತಾಲೂಕುಗಳಿಗೂ ಉಪಯೋಗವಾಗುವುದು ಆದರೆ ತಿಮ್ಮಲಾಪುರದ ಯೋಜನೆಯಿಂದ ಅನಂತಪುರ, ಕಡಪ, ಜಿಲ್ಲೆಗಳಲ್ಲಿ ಅತಿವಿಸ್ತಾರವಾದ ಪ್ರದೇಶಗಳಿಗೆ ಅನುಕೂಲವಾಗುವುದಲ್ಲದೆ, ಮುಂಬಯಿ ಪ್ರಾಂತದ ಸಾವಿರಾರು ಕನ್ನಡಿಗರಿಗೆ ಕೇಡನ್ನುಂಟುಮಾಡಿದಂತಾಗುವುದು. ಆದುದರಿಂದ ಈ ಬಗೆಯ ನೈಷ್ಠುರ್ಯಕ್ಕೆ ಅವಕಾಶವಿಲ್ಲ

ಇಂತಹ ಮಹತ್ವದ ಯೋಜನೆಗಳನ್ನು ಕೈಗೊಳ್ಳುವಾಗ ಜನರಿಗೆ ನಷ್ಟವುಂಟಾಗಬಹುದು. ಆದರೂ ಸಾವಿರಾರು ಮಂದಿಯ ಯೋಗಕ್ಷೇಮಕ್ಕಾಗಿ ಕೆಲವೇ ಜನರು ತ್ಯಾಗಬುದ್ಧಿಯಿಂದ ಅಂತಹ ಕಷ್ಟನಷ್ಟಗಳನ್ನು ಸಹಿಸಿಕೊಳ್ಳುವುದು ನ್ಯಾಯವಾಗಿದೆ ಈ ವಿಷಯದಲ್ಲಿ ಸರಕಾರವು ನ್ಯಾಯವಾದ ಪರಿಹಾರ ದ್ರವ್ಯವನ್ನು

(11 ನೇ ಪುಟಕ್ಕೆ ಮುಂದುವರಿದಿದೆ)

ಹರಪನಹಳ್ಳಿ ಸಾಹಿತ್ಯ ಸಮ್ಮೇಳನ

6—5—47 ಮಂಗಳವಾರ

ಈ ರಾತ್ರೆ ಸಮ್ಮೇಲನದ ನಿಯೋಜಕ ಶ್ರೀ ಶಿ. ಕೆ. ವೆಂಕಟರಾಮಯ್ಯನವರು ಉದ್ಘಾಟಕರಾದ ಶ್ರೀ ಎ. ಬಿ. ಶೆಟ್ಟರು ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಇಜಾರಿ ವಸುಪಾಲಪ್ಪನವರು ಇವರನ್ನು 30 ಜೊತೆ ಎತ್ತುಗಳಿಂದ ಹೂಡಿದ ಸುಂದರವಾದ ಶ್ವೇತರಥದಲ್ಲಿ ಹರಪನಹಳ್ಳಿಯ ಅಲಂಕೃತ ಬೀದಿಗಳಲ್ಲಿ ಒಯ್ಯಲಾಯತು, ವಿವಿಧ ಬೀದಿಗಳಲ್ಲಿ 30 ಕಮಾನುಗಳು ಕಟ್ಟಲ್ಪಟ್ಟಿದ್ದು, ಪ್ರತಿಯೊಂದಂಮೇಲೆ ಪರಿಷತ್ತಿನ ಅಧಿವೇಶನದವರ್ಷ ಮತ್ತು ಅಧ್ಯಕ್ಷರ ಹೆಸರುಗಳನ್ನು ಬರೆಯಲಾಗಿತ್ತು. ಮಲ್ಲಸಜ್ಜನ ವ್ಯಾಯಾಮಶಾಲೆಯ ಬ್ಯಾಂಡು ಸಮವಸ್ತ್ರದ ಸ್ವಯಂಸೇವಕರು ಹರಪನಹಳ್ಳಿಯ ಹುರುಪಿನ ಕಾರ್ಯಕರ್ತರು ಜನರಿಂದೊಡಗೂಡಿದ ಮೆರವಣಿಗೆಯು ಕೈಲಾಸನಗರದ ಬಳಿ ಚದರಿದಾಗ ರಾತ್ರೆ ೨ ಘಂಟೆಗಳಾಯಿತು.

7—5—47 ಬುಧವಾರ:—

30 ನೆಯ ಅಧಿವೇಶನದ ಕಾರ್ಯಕಲಾಪಗಳು ಓಳೆಯ ಧ್ವನಿ ವಾಹಕಯಂತ್ರದ ವ್ಯವಸ್ಥೆಯುಳ್ಳ ಸುಮಾರು ಒಂದು ಸಾವಿರಮಹಿಳೆಯರು ಮತ್ತು ಮೂರು ಸಾವಿರ ಪುರುಷರನ್ನೊಳಗೊಂಡು ಕಿಕ್ಕಿರಿದ ಭವ್ಯವಾದ ಮಂಟಪದಲ್ಲಿ ಪ್ರಾತಃಕಾಲ ಬಾಲಕಿಯರ ಪ್ರಾರ್ಥನೆ ಮಂಜುಳ ಸ್ವಾಗತ ಗೀತೆಗಳಿಂದಾರಂಭವಾದವು ಮದ್ರಾಸ್ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ಪರಿಷತ್ತಿನ ಉದ್ಘಾಟನೆ ಮಾಡಿದ ನಂತರ ಪರಿಷತ್ತಿನ ಪರವಾಗಿ ಉಪಾಧ್ಯಕ್ಷರಾದ ಮಾಸ್ತಿಯವರು ಅವರನ್ನಭಿವಂದಿಸಿ, ಶ್ರೀ ಶಿ. ಕೆ. [illegible]

ಸ್ವಾಗತಾಧ್ಯಕ್ಷರಾದ ಶ್ರೀ ಇಜಾರಿ ವಸುಪಾಲಪ್ಪನವರ ಭಾಷಣವನ್ನು (ವಸುಪಾಲಪ್ಪನವರ ಅಶಕ್ತತೆಯ ಕಾರಣ) ಶ್ರೀ ಶಿರಸಪ್ಪನವರು ಓದಿದರು ಪರಿಷತ್ತಿಗೆ ಯಶಸ್ಸನ್ನು ಕೋರುವ ಸಂದೇಶಗಳು ಆಚಾರ್ಯ ಕೃಪಾಲನಿ, ಡಾ. ರಾಜೇಂದ್ರ ಪ್ರಸಾದ ಸಂಡೂರ ಸಂಸ್ಥಾನಾಧೀಶರು, ಬೊಂಬಾಯಿ ಮುಖ್ಯ ಮಂತ್ರಿ ಖೇರ, ಮದ್ರಾಸ್ ಮಂತ್ರಿಗಳಾದ ಶ್ರೀ ಶೇಕಾರಾವು ರೆಡ್ಡಿ ನಾಥವ ಮೇನನ್ ಭಕ್ತವತ್ಸಲಂ, ಕೂರ್ಮಯ್ಯ ಮುರವಕೊಂಡ ಜಗದ್ಗುರು ಎಸ್. ನಿಜಲಿಂಗಪ್ಪ ಮಗೈರೆ ಅನೇಕರಿಂದ ಬಂದಿದ್ದವು. ಅವನ್ನು ಶ್ರೀ ಟಿ. ಪಂಚಯ್ಯನವರು ಓದಿದರು, ಅಧ್ಯಕ್ಷರ ಭಾಷಣವಾದ ನಂತರ ಪ್ರಾತಃಕಾಲದ ಅಧಿವೇಶನವು ಮುಕ್ತಾಯವಾಯಿತು.

ಸಾಹಿತ್ಯ ಗೋಷ್ಠಿ

ಕನ್ನಡ ಸಾಹಿತ್ಯ ಸಮ್ಮೇಲನದ ಅಂಗವಾಗಿ ಸಾಹಿತ್ಯ ಗೋಷ್ಠಿಯು ಮಧ್ಯಾಹ್ನ 4—30 ಗಂಟೆಗೆ ಕೈಲಾಸ ನಗರದಲ್ಲಿ ಗುಲಬರ್ಗಾದ (ನಿಜಾಮು) ತಾಲೂಕದಾರರಾದ ಶ್ರೀ ಸಿದ್ದಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ಜರುಗಿತು ಹರಪನಹಳ್ಳಿಯವರೂ ಮದ್ರಾಸ ಪ್ರಾಂತದಲ್ಲಿ ಜಿಲ್ಲಾ ಮುನಸೀಫರೂ ಆದ ಶ್ರೀ ಟಿ. ಎಚ್. ಎಂ. ಸದಾಶಿವಯ್ಯನವರು ಮಾನ್ಯ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು ನಂತರ ಹರಪನಹಳ್ಳಿಯವರೇ ಆದ ವಿದ್ವಾನ್ ಜಿ. ಎಂ. ನೀಲಕಂಠ ಶಾಸ್ತ್ರಿಗಳು ನೆರೆದ ಸಭಿಕರನ್ನೂ ಪ್ರತಿನಿಧಿಗಳನ್ನೂ ಅಧ್ಯಕ್ಷರನ್ನೂ ಸ್ವಾಗತಿಸುತ್ತ ಭಾಷಣಮಾಡಿದನಂತರ ಅಧ್ಯಕ್ಷರಾದ ಶ್ರೀ ಸಿದ್ದಯ್ಯ ಪುರಾಣಿಕರ ಭಾಷಣ

ಸಾಹಿತ್ಯ ಗೋಷ್ಠಿಯ ನಂತರ ಕಾವ್ಯಗಾಯನ ಮತ್ತು ಆಶು ಕವಿತಾ ಸ್ಪರ್ಧೆಯಾಯಿತು. ರಾತ್ರಿ ೧೦ ೩೦ ಗಂಟೆಗೆ ಬೆಂಗಳೂರ ಬಾಲಿಕೆಯರ ಶಕ್ತಿ ಪ್ರದರ್ಶನವಾಯಿತು. ನಂತರ ಹರಪನಹಳ್ಳಿ ಅಕ್ಕನ ಬಳಗದವರ "ಅಕ್ಕಮಹಾದೇವಿ" ಎಂಬ ನಾಟಕ ಮೊದಲಾದ ಮನರಂಜನೆ ಕಾರ್ಯಕ್ರಮವಾಗಿ ಅಂದಿನ ಕಾರ್ಯಕಲಾಪಗಳು ಕೊನೆಗಂಡವು

8-೨-1947 ಗುರುವಾರ

ವಿಜ್ಞಾನ ಗೋಷ್ಠಿ

ಸಮ್ಮೇಲನ, ೩೦ ನೇ ಅಧಿವೇಶನದ ಕಾರ್ಯಕಲಾಪಗಳು ಇಂದು ಮುಂಜಾನೆ ಎಂಟು ಘಂಟೆಗೆ ಧ್ವಜವಂದನೆಯಿಂದ ಪ್ರಾರಂಭವಾದವು.

ಶ್ರೀ ಜೋಳದರಾಶಿ ದೊಡ್ಡನಗೌಡರ ಸ್ವಾಗತ ಗೀತೆಯ ನಂತರ ವಿಜ್ಞಾನ ಗೋಷ್ಠಿಯು ನೆರೆಯಿತು. ಡಾ. ಎಂ. ಸಿ. ತುಮ್ಮಿನಕಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು

ಹರಪನಹಳ್ಳಿಯ ಡಾ. ಸಿ. ಎಸ್. ಹಿರೇಮಠ ಎಲ್. ಐ ಎಂ ಇವರು ಸ್ವಾಗತ ಭಾಷಣಮಾಡಿದ ಮೇಲೆ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ಕೆ. ಬಿ. ಜಿನರಾಜ ಹೆಗಡೆಯವರು ಗೋಷ್ಠಿಯ ಉದ್ಘಾಟನೆ ಮಾಡಿದರು.

ಅವರ ಭಾಷಣವು ಇಂತಿದೆ

"ಕನ್ನಡ ಸಾಹಿತ್ಯ ಪರಿಷತ್ತಿನ ಅಂಗವಾಗಿ ವಿಜ್ಞಾನ ಗೋಷ್ಠಿಯು ನಿಧವೇರುವದು, ಇದೇ ಮೊದಲನೆಯ ಸಲ. ಕರ್ನಾಟಕದಲ್ಲಿ ಸಾಕಷ್ಟು ವಿಜ್ಞಾನ ವಿದ್ಯೆಯು ಬೆಳವಣಿಗೆಯಾಗಿಲ್ಲ. ಅದಕ್ಕೆ ಮುಖ್ಯ ಕಾರಣವೇನಂದರೆ ಕರ್ನಾಟಕವು ಇಂದು ಹರಿದು ಹಂಚಿ ಹೋಗಿರುವದು. ಕನ್ನಡದಲ್ಲಿ ಈಗ ವಿಜ್ಞಾನ ವಿಷಯಕ ಪಠ್ಯ ಪುಸ್ತಕಗಳಿರುವುದಿಲ್ಲ.

ತಮಗೆ ಪಠ್ಯ ಪುಸ್ತಕಗಳನ್ನು ಮದ್ರಾಸ ಹಾಗು ಮುಂಬಯಿ ಸರಕಾರಗಳು ತಂತಮ್ಮ ವಿಶ್ವವಿದ್ಯಾಲಯಗಳ ಸಹಕಾರದಿಂದ ತಯಾರಿಸಬೇಕು. ಮಕ್ಕಳ ಪುಸ್ತಕಗಳನ್ನು ಸರಕಾರವೇ ತಯಾರಿಸಿ ಕಡಿಮೆ ಬೆಲೆಗೆ ಮಾರಬೇಕು.

ವಿಜ್ಞಾನ ವಿದ್ಯೆಯು ಯಾವದೇ ಪ್ರಾಂತಕ್ಕಲ್ಲ. ರಾಷ್ಟ್ರದ್ದಲ್ಲ, ಅಂತರ ರಾಷ್ಟ್ರೀಯ ವಿದ್ಯೆ.

ನಂತರ ಶ್ರೀ ಬಿಳಿಯಂಗಡಿ ಹಾಗು ಶ್ರೀ ಟಿ. ಎಜ್ ಎಂ. ಸದಾಸಿವಯ್ಯನವರು ಅಧ್ಯಕ್ಷರಾದ ಶ್ರೀ ಮುಪ್ಪಣ್ಣನವರು ತುಮ್ಮಿನಕಟ್ಟಿಯವರ ಪರಿಚಯ ಮಾಡಿ ಕೊಡುತ್ತ ಅವರು ಇದೇ ಜಿಲ್ಲೆಗೆ ಸೇರಿದವರೆಂದು ಹೇಳಿದರು.

ಜನಪದ ಗೋಷ್ಠಿ

ವಿಜ್ಞಾನ ಗೋಷ್ಠಿಯು ಮುಗಿದ ಕೂಡಲೆ ಜನಪದ ಗೋಷ್ಠಿಯು ಪ್ರಾರಂಭವಾಯಿತು. ಧಾರವಾಡದ ಕವಿಭೂಷಣ ಬೆಟಿಗೇರಿ ಕೃಷ್ಣಶರ್ಮರು ಅಧ್ಯಕ್ಷತೆ ವಹಿಸಿದ್ದರು.

ಸ್ವಾಗತಗೀತೆಯನಂತರ ಪ್ರೊ. ಎಸ್ ಎಸ್. ಮಾಳವಾಡರು ಜನಪದ ಗೋಷ್ಠಿಯ ಉದ್ಘಾಟಕರ ಹಾಗೂ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. "ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಿರಿಯರು ಮತ್ತು ಕಿರಿಯರಲ್ಲಿ ಭೇದಭಾವಗಳಿರಬಾರದೆಂದು ಅಪ್ಪಣೆ ಕೊಡಿಸಿದ್ದಾರೆ. ಇಂದಿನ ಗೋಷ್ಠಿಯ ಅಧ್ಯಕ್ಷ ಹಾಗೂ ಉದ್ಘಾಟಕರಲ್ಲಿ ಒಬ್ಬರು ಹಿರಿಯರು ಇನ್ನೊಬ್ಬರು ಕಿರಿಯರಿರುವರು. ಸ್ವಾಗತ ಸಮಿತಿಯಲ್ಲಿ ತಂದೆ ಮಕ್ಕಳು ಕೂಡಿಯೆ ಇದ್ದಾರೆ ಶ್ರೀ ವಸುಪಾಲ ಪ್ಪನವರು ಅದರ ಅಧ್ಯಕ್ಷರಾಗಿದ್ದರೆ ಅವರ ಮಕ್ಕಳಾದ ಶ್ರೀ ಶಿರಸಪ್ಪನವರು ಕಾರ್ಯದರ್ಶಿಗಳಾಗಿದ್ದಾರೆ. ಹಿರಿಯರು ಕಿರಿಯರಲ್ಲಿ ಭೇದಭಾವಕ್ಕೆ ಅವಕಾಶ ಕೊಡದೆ ಹರಪನಹಳ್ಳಿಯ ಕಾರ್ಯಕರ್ತರು ತಮ್ಮ ಜಾಣ್ಮೆಯನ್ನು ತೋರಿಸಿದ್ದಾರೆ.

ಉದ್ಘಾಟಕರಾದ ಶ್ರೀ ಹಾಲಪ್ಪನವರು ವಯಸ್ಸಿನಲ್ಲಿ ಕಿರಿಯರಾಗಿದ್ದರೂ ಅವರ ಉತ್ಸಾಹವು ಹಿರಿದಾಗಿದೆ, ಜನಪದ ಸಾಹಿತ್ಯದ ದೃಷ್ಟಿ ಅವರಲ್ಲಿದೆ.

ಮೈಸೂರ ಆಕಾಶವಾಣಿಯ ಹಳ್ಳಿಗರ ಕಾರ್ಯಕ್ರಮವನ್ನು ಅವರು ಯಶಶ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ.

ಶ್ರೀ ಬೆಟಗೇರಿಯವರು ಹಿರಿಯರು. ಅವರನ್ನೇ ಕೇಳಿದರೆ ಅವರು ತಾವು ಬೆಟ್ಟಗೆರೆಯವರೆಂದು ಹೇಳುವರು. ಅವರು ಶಬ್ದಗಳನ್ನು ಎಚ್ಚರದಿಂದ ತೂಕವಾಗಿ ಮತ್ತು ಬಹುಮಟ್ಟಿಗೆ ಶುದ್ಧವಾಗಿ ಉಪಯೋಗಿಸುವರು. ಅವರು ಕಥೆಗಾರರು, ಕವಿಗಳು. ಕಾದಂಬರಿಕಾರರು ಮತ್ತು ಪ್ರತಿಕಾಕರ್ತರಿರುವರು. ಅವರ ಹೆಸರು ಸಾಕಷ್ಟು ಮುಂದೆ ಬಂದಿಲ್ಲ. ಬಹುಶಃ ಇದಕ್ಕೆ ಪ್ರಚಾರದ ಅಭಾವವೇ ಕಾರಣ ವಿರಬಹುದು" ಎಂದರು.

ನಂತರ ಶ್ರೀ ಜಿ. ಎಸ್. ಹಾಲಪ್ಪನವರು ಗೋಷ್ಠಿಯನ್ನು ಉದ್ಘಾಟಿಸುತ್ತ ಇಂತೆಂದರು." ಇಂದು ಹರಪನಹಳ್ಳಿಯಲ್ಲಿ ಸಾಹಿತ್ಯದ ಹಬ್ಬ ನಡೆದಿದೆ, ಹರಪನಹಳ್ಳಿಯು ಸಾಹಿತ್ಯ ಸಂಸ್ಕೃತಿಗಳ ನೆಲೆವೀಡಾಗಿದೆ. ಇಲ್ಲಿ ಮೊದಲು ಪ್ರಸಿದ್ಧ ಜಟ್ಟಿಜಟ್ಟಿಗಳಲ್ಲಿ ಕಾಳಗ ನಡೆಯುತ್ತಿತ್ತು. ಈಗ ಹುಲಿಗಳೊಡನೆ ಕಾಳಗವಾಡುವ ಶೂರರೂ ಈ ಪ್ರದೇಶದಲ್ಲಿರುವರು.

ಶ್ರೀ ಮೈದೂರು ತಿರುಮಲಾಚಾರ್ಯರು ಸ್ವಾಗತಾಧ್ಯಕ್ಷರ ಭಾಷಣವನ್ನು ಮೃದುಮಧುರ ಶೈಲಿಯಲ್ಲಿ ಹೇಳಿದರು. ಲಾವಣಿಯ ನಂತರ ಪ್ರಾತಃಕಾಲದ ಕಾರ್ಯಕ್ರಮವು ಕೊನೆಗಂಡಿತು.

ಅಪರಾಹ್ನದಲ್ಲಿ ಮಹಿಳಾಗೋಷ್ಠಿಯ ಅಧ್ಯಕ್ಷಿಣಿಯರಾದ ಶ್ರೀಮತಿ ಪಾರ್ವತಿಬಾಯಿ ಕೇಸರಿಯವರ ನೇತೃತ್ವದಲ್ಲಿ ಸಾಂಗವಾಯಿತು. ಶ್ರೀಮತಿ ಕೆ. ಹಿ. ಮು. ಸರ್ವಮಂಗಳಮ್ಮನವರು ಸ್ವಾಗತ ಸಮಿತಿಯ ಪರವಾಗಿ ಸ್ವಾಗತವನ್ನು ಎಲ್ಲರಿಗೂ ನೀತಿಪರು ಸಾಯಂಕಾಲ ಸಾಹಿತ್ಯ ಗೋಷ್ಠಿಯು ಮುಂದುವರಿದು ಕವನಗಳೂ ಭಾಷಣಗಳೂ ಸಾಗಿದವು. ಪ್ರಬಂಧ ವಾಚನವಾಯಿತು ರಾತ್ರಿ ರಾಯರ ಮದುವೆ ಅಥವಾ ತಲೆಯ ಮರೆಯಲ್ಲಿ ಎಂಬ ನಾಟಕದ ಪ್ರದರ್ಶನವಾಯಿತು.

9-5-47 ಶುಕ್ರವಾರ:—

ಇಂದು ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಕುರಿತ ಭಾಷಣಗಳಾಗಿ 'ಶ್ರೀ' ಯವರ ಸ್ಮಾರಕ, ಲಿಪಿ ಸಂಸ್ಕರಣದವಿಚಾರಗಳಾದವು. ಬಹಿರಂಗ ಅಧಿವೇಶನದಲ್ಲಿ ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಟೀಕಾಕಾರರನ್ನು ಖಂಡಿಸುತ್ತಾ ಸಮ್ಮೇಳನವು ಯಶಶ್ವಿಯಾಯಿತೆಂದರು. ರಾತ್ರಿ ಮಳೆಎಂದಿತಾದ ಕಾರಣ ಸ್ವಲ್ಪ ತೊಂದರೆಯಾಯಿತು.

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರು.

ಮೇ ತಿಂಗಳಲ್ಲಿ ಪರೀಕ್ಷೆಗಳಾಗಿ, ಜೂನ್ ದಲ್ಲಿ ಪ್ರಮೋಷನ್‌ಗಳಾಗತಕ್ಕದ್ದಿದ್ದು ಉಪಾಧ್ಯಾಯ ವಿದ್ಯಾರ್ಥಿಗಳಿಗೆ ನಿಕಟಸಂಬಂಧವಿದೆ ಹೀಗಿದ್ದು ಉಪಾಧ್ಯಾಯರನ್ನು ಅನುಕೂಲ ಸ್ಥಳಗಳಿಂದ ಪ್ರತಿಕೂಲಸ್ಥಳಗಳಿಗೆ ವರ್ಗಾಯಿಸಬಾರದು. ಮಿಡ್ ಡೆ ಮೀಲ್ ನಿಂದ ಬಹಳಿಗೊಂದಲವಾಗುತ್ತಲಿದೆ. ಇದರಿಂದ ಉಪಾಧ್ಯಾಯರ ಸಂಬಂಧವನ್ನು ತಪ್ಪಿಸುವುದುತ್ತಮ. ನಮ್ಮ ಸಂಘದ ಪರವಾಗಿ ತೀರ್ಮಾನಗಳನ್ನು ಮಾಡಿ ನಮ್ಮ ಅಧ್ಯಕ್ಷರು ಇದಕ್ಕಾಗಿ ಎಷ್ಟೇ ಶ್ರಮಿಸುತ್ತಿದ್ದರೂ D. L. O. ಯವರು ಇಂಕ್ರಿಮೆಂಟ್ ಸ್ಟೇಲ್ ಆಫ್ ಪೇ ಯಾವುದೂ ಇತ್ಯರ್ಥ ಮಾಡಲಿಲ್ಲ. ಸತ್ತ ಉಪಾಧ್ಯಾಯರ ಪ್ರಾವಿಡೆಂಟ್ ಫಂಡ್ ವರ್ಷಗಟ್ಟಲೆಯಾದರೂ ಕೊಟ್ಟಿಲ್ಲ. ಮಂಜೂರಾಡಿದ T. A. ಕೊಟ್ಟಿಲ್ಲ. ಹೀಗಾದರೆ ನಮ್ಮನ್ನು ಕಾಪಾಡುವರಾರು? ಕೇಳುವರಾರು? ಇದಕ್ಕೆ ಅಧ್ಯಕ್ಷರು ತಕ್ಕ ಚರ್ಯೆ ತೆಗೆದುಕೊಳ್ಳುವರೇ? ಮತ್ತೊಂದುಸಲ ಕಲೆಕ್ಟರವರಿಗೂ ಲೇಬರ್ ಕಮಿಶನರಿಗೂ ತಿಳಿಸಿ ಶೀಘ್ರಪರಿಹಾರ ಒದಗಿಸಿಕೊಡಬೇಕೆಂದು ಪ್ರಾರ್ಥನೆ.

[ಒಬ್ಬ ಲೇಬರ್ ಉಪಾಧ್ಯಾಯ]

ತುಂಗಭದ್ರಾ ಯೋಜನೆ.

(7 ನೇ ಪುಟದಿಂದ ಮುಂದುವರಿದುದು)

ಕೊಟ್ಟು ಆಣೆಕಟ್ಟಿನಿಂದಾಗಿ ಜಮೀನು ಕಳಕೊಳ್ಳುವ ವರ ಕಷ್ಟ ಪರಹಾರ ಮಾಡುವದೆಂಬುದರಲ್ಲಿ ಸಂಶಯ ಬೇಡ. ಮೇಲೆ ವಿವರಿಸಿದ ಎಲ್ಲಾ ವಿಷಯಗಳನ್ನೂ ಚೆನ್ನಾಗಿ ಪರಿಶೀಲಿಸಿ ಸಾರ್ವಜನಿಕರು ಈಗ ಸರಕಾರವು ಕೈಗೊಂಡ ಈ ಮಹತ್ಕಾರ್ಯದಲ್ಲಿ ಸಂಪೂರ್ಣ ಬೆಂಬಲವಿತ್ತು ಯಶಸ್ವಿಗೊಳಿಸುವರೆಂದು ಆಶಿಸಲಾಗಿದೆ.

ಆದರ್ಶ ವಿವಾಹ.

ಸತ್ಯನಾರಾಯಣ—ಲಕ್ಷ್ಮೀದೇವಿ.

ಕಾಂಗ್ರೆಸ್ ಮತ್ತು ಹರಿಜನ ಕಾರ್ಯಕರ್ತರಾದ ಶ್ರೀ ಜಿ. ಎನ್. ಸತ್ಯನಾರಾಯಣ-ಲಕ್ಷ್ಮೀದೇವಿಯ ಆದರ್ಶವಿವಾಹವು ನಗರೇಶ್ವರ ದೇವಸ್ಥಾನದಲ್ಲಿ ೯-೫-೪೭ ರ ದಿನ ಸಾಂಗವಾಯಿತು. ಈ ವಿವಾಹಕ್ಕೆ ಏರ್ಪಡಿಸಿ ಸಮಸ್ತ ಜವಾಬ್ದಾರಿಯನ್ನು ಹೊತ್ತವರು ಶ್ರೀ ಡಿ ಎಲ್. ಗಂಗಾಧರಶೆಟ್ಟಿ ಬಿ. ಎ. ಬಿ. ಎಲ್. ಅಡ್ವೊಕೇಟರು ಮತ್ತು ಅವರ ಸತೀಮಣಿ. ವಿವಾಹವು ಶುದ್ಧ ಖಾದಿವಸ್ತ್ರಗಳ ಧಾರಣೆಯಿಂದ ನಡೆಯಿತು. ಸಂತೋಷಕೂಟದಲ್ಲಿ ಶ್ರೀ ಸುಬ್ರಮಣ್ಯಂ, ಕೇಶವರಾವು, ಗು. ನರಸಪ್ಪ, ಗಂಗಾಧರಸೆಟ್ಟಿ, ಡಾ. ವೆಂಕಟರಮಣ, ಲ ನ. ಶರ್ಮ ಮತ್ತು ಎಸ್. ವಿ ಶೆಟ್ಟಿ ಇವರು ಆದರ್ಶ ವಿವಾಹದ ಮಹತ್ವವನ್ನು ಕುರಿತು ಹೇಳಿ ವಧೂವರರನ್ನಾಶೀರ್ವದಿಸಿದರು. ವಧುಲಕ್ಷ್ಮೀದೇವಿಯು ಶ್ರೀಮಂತರನ್ನು ತ್ಯಾಜ್ಯವಾಡಿ ದೇಶಭಕ್ತ ವರನನ್ನು ಸ್ವೀಕರಿಸಿದ್ದು ಸಂತೋಷದ ಸಂಗತಿಯೆಂದೂ ಈ ಮುದುವೆಯ ಬಾಧ್ಯತೆಯನ್ನು ವಹಿಸುವಲ್ಲಿ ತಮ್ಮ ಸತೀಮಣಿಯಿಂದ ಸಹಾಯವು ದೊರೆಯಿತೆಂದೂ ಗಂಗಾಧರಶೆಟ್ಟರು ಹೇಳಿ ಎಲ್ಲರನ್ನೂ ವಂದಿಸಿದರು. ಆರ್ಯವೈಶ್ಯಯುವಜನ ಸಂಘದವರು ವಧೂವರರಿಗೆ ರೂ. ೧೧೬ ಕಾಣಿಕೆ ಇತ್ತರು. ಇತರ ಅನೇಕ ಮಿತ್ರರು ಇವರಿಗೆ ಬಹುಮಾನಗಳನ್ನು ಕೊಟ್ಟರು.

'ನವಭಾರತಕ್ಕೆ ಕಾಣಿಕೆ'

ಈ ಆದರ್ಶ ವಿವಾಹದ ಶುಭ ಅವಸರದಲ್ಲಿ ಶ್ರೀ ಗಂಗಾಧರಶೆಟ್ಟರು 'ನವಭಾರತ' ಕ್ಕೆ ೧೧/- ರೂ. ಕಾಣಿಕೆಯನ್ನಿತ್ತು ಇತರರಿಗೆ ಮಾರ್ಗದರ್ಶಿಗಳಾದರು.

ಕೊಟ್ಟೂರು.

ಬಣಜಾರ ಹಾಸ್ಟೆಲ್:— ಬರುವ ಜೂನ್ ತಿಂಗಳ ಪ್ರಾರಂಭದಿಂದ ಇಲ್ಲಿ ಮದ್ರಾಸ್ ಸರ್ಕಾರದ ಮತ್ತು ಜನತೆಯ ಸಹಕಾರದಿಂದ ಬಣಜಾರ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಲು ನಿಶ್ಚಯವಾಗಿದೆ. ಇದಕ್ಕೆ ಪ್ರೋತ್ಸಾಹವಿತ್ತ ಸಕಲರನ್ನೂ ವಂದಿಸಬೇಕಾಗಿದೆ.

ಕಾರ್ಯಕಾರೀಸಮಿತಿ:— ಶ್ರೀಗಳಾದ ಜಾಗಟಗೆರಿ ಚನ್ನಬಸಪ್ಪನವರು, ಸತ್ಯನಾರಾಯಣಶೆಟ್ಟರು, ಅ. ಶಿದ್ದಪ್ಪನವರು, ತೋಟ್ಯಾನಾಯ್ಕ, ಹೀರ್ಯಾನಾಯ್ಕ, ಫತ್ಯಾನಾಯ್ಕ, ಶಂಕರನಾಯ್ಕ. ಈ ವಿದ್ಯಾರ್ಥಿನಿಲಯದಲ್ಲಿ ವಸತಿಯನ್ನಪೇಕ್ಷಿಸುವ ವಿದ್ಯಾರ್ಥಿಗಳು ಜೂನ್ 1 ನೆಯ ತಾರೀಖಿನೊಳಗಾಗಿ ಸಂಘಾಧ್ಯಕ್ಷರಾದ ಶಂಕರನಾಯ್ಕರ ಪತ್ರಿಗೆ ಅರ್ಜಿಹಾಕಬೇಕು.

ಕುಂಚೂರು.

ಕಳೆದ ತಿಂಗಳು ೨೪ ನೆಯ ದಿನಾಂಕ ಇಲ್ಲಿ ಬಸವೇಶ್ವರ ಜಯಂತಿಯು ವಿಜೃಂಭಣೆಯಿಂದ ಜರುಗಿಸಲ್ಪಟ್ಟು ಆಕಾಲಕ್ಕೆ ಶ್ರೀ ವೇದಮೂರ್ತಿ ಗಿರಿಯಾಪುರ ಮಠದ ರುದ್ರಯ್ಯ ಶಾಸ್ತ್ರಿಗಳ ಶಿವಕೀರ್ತನೆಯು ನಡೆಯಿತು. ಬಸವಜಯಂತಿಯ ಮಹಾತ್ಮೆಯನ್ನು ಕುರಿತು ಶ್ರೀಗಳಾದ ಧರ್ಮಪ್ಪ, ಚನ್ನಬಸಯ್ಯ, ಕ್ರಿಪ್ಪಪ್ಪ ಇವರು ಭಾಷಣಗೈದ ನಂತರ ವಂದೇಮಾತರಂ ಗೀತೆಯಿಂದ ಸಭೆಯು ಮುಗಿಯಿತು.

ಬಿದಿರಹಳ್ಳಿ.

ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಶ್ರೀ ಶಂಕರಾಚಾರ್ಯರ ಜಯಂತಿಯು ಅತಿ ವಿಜೃಂಭಣೆಯಿಂದ ನೆರವೇರಿತು. ಅನೇಕರ ಭಾಷಣಗಳಾದವು.

ಹಳ್ಳಿಗಳು ಏನಾಗಿವೆ?

ಹಳ್ಳಿಗಳನ್ನು ತಿರುಗಿ ಅಭಿವೃದ್ಧಿಗೊಳಿಸುವುದೇ ನಮ್ಮ ಸರಕಾರದ ಪ್ರಾಮುಖ್ಯ ಧ್ಯೇಯವಾಗಿದೆ.

ಮಿ॥ ಎಲ್. ಸಿ. ಪಾಯಿಸ್, ಬಿ. ಎ., ಬಿ ಎಲ್., ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಇವರಿಂದ

[ನಮ್ಮ ದೇಶದಲ್ಲಿ ಜಗತ್ತನ್ನೇ ಬೆರಗುಗೊಳಿಸುವ ಬುದ್ಧಿವಂತರಿದ್ದಾರೆ. ಸಂಪತ್ತಿನ ರಾಶಿಯೇ ನಮ್ಮ ದೇಶದಲ್ಲಿ ಅಡಗಿಕೊಂಡಿದೆ. ಏನಿದ್ದರೇನು? ಇಂದು ಪ್ರಪಂಚದಲ್ಲಿರುವ ದೇಶಗಳಲ್ಲೆಲ್ಲಾ ಹಿಂದೂಸ್ಥಾನವು ಬಡದೇಶವಾಗಿದೆ. ನಮ್ಮ ದೇಶದಲ್ಲಿ ೯೦೦ ಜನರಿಗೆ ಒಬ್ಬ ವೈದ್ಯನಿರುವನು. ಸಾವಿರದಲ್ಲಿ ೧೬೭ ಮಕ್ಕಳು ಸಾಯುತ್ತಿದ್ದಾರೆ. ನಮ್ಮ ದೇಶ ಹಳ್ಳಿಗಳ ದೇಶ. ಹಳ್ಳಿಗಳು ಸುಧಾರಣೆ ಹೊಂದದೆ ದೇಶದ ಏಳಿಗೆ ಇಲ್ಲ ನಾವೆಲ್ಲಾ ಇಂದು ಸ್ವಾತಂತ್ರ್ಯವನ್ನು ಸಾಗಿಸುತ್ತಿದ್ದೇವೆ ಹಿಂದು, ಮುಸಲ್ಮಾನ್, ಕ್ರಿಶ್ಚಿಯನ್, ಅಲ್ಪಸಂಖ್ಯಾಕ–ಅಧಿಕ ಸಂಖ್ಯಾಕ ಎಂದು ಎಲ್ಲರೂ ಒಂದಾಗಿ ದುಡಿದು, ನಮ್ಮ ಮೋಕ್ಷನನ್ನು ನಾವು ಸಾಧಿಸಿಕೊಳ್ಳುವುದೇ ಹಿಂದೂಸ್ಥಾನದ ನಿಜವಾದ ಸ್ವಾತಂತ್ರ್ಯ ಇತ್ಯಾದಿ ಭಾವನೆಗಳನ್ನು ಈ ಲೇಖನವು ವ್ಯಕ್ತಗೊಳಿಸುತ್ತಿದೆ.]

ಜನತಾ ಸರ್ಕಾರವು ಇಂದು ಅಧಿಕಾರದಲ್ಲಿದೆ. ಹಳ್ಳಿಗಳನ್ನು ಪುನಃ ಉದ್ಧರಿಸುವುದೇ ನಮ್ಮ ಸರ್ಕಾರದ ಪ್ರಾಮುಖ್ಯ ಗುರಿಯಾಗಿದೆ. ಎಲ್ಲಕ್ಕಿಂತಲೂ ಮೊದಲು ನಾವೆಲ್ಲಾ ಇಂದು ಸ್ವಾತಂತ್ರ್ಯವೆಂಬ ಭವ್ಯನುಂದಿರದ ಹೊಸ್ತಿಲಿನಲ್ಲಿ ನಿಂತಿದ್ದೇವೆ ಎಂಬುವನ್ನು ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕು. ಸ್ವಾತಂತ್ರ್ಯವೆಂದರೆ ನಮ್ಮ ಮೋಕ್ಷನನ್ನು ನಾವೇ ಸಾಧಿಸಿಕೊಳ್ಳುವುದು. ಅಂದರೆ ನಮ್ಮ ದೇಶದ ಉನ್ನತಿಗಾಗಿ ನಾವೇ ದುಡಿಯುವುದು. ನಾವೆಂದರೆ ಯಾರೆಂಬುದೂ ಇಂದು ನಮ್ಮ ದೇಶದಲ್ಲಿ ದೊಡ್ಡ ಸಮಸ್ಯೆಯಾಗಿದೆ. ಆದರೆ ಎಲ್ಲರೂ "ನಾವು" ಎಂದರೆ, ಹಿಂದುಗಳೂ ಹಿಂದುಗಳಲ್ಲದವರೂ, ಕ್ರಿಶ್ಚಿಯನರೂ ಕ್ರಿಶ್ಚಿಯನರಲ್ಲದವರೂ, ಮುಸಲ್ಮಾನರೂ ಮುಸಲ್ಮಾನರಲ್ಲದವರೂ, ಅಧಿಕ ಸಂಖ್ಯಾಕರೂ ಎಂಬುದನ್ನು ಎಂದೆಂದೂ ಮರೆಯಬಾರದು. ನಮ್ಮ ದೇಶದ ಕೀರ್ತಿ ಜಗತ್ತಿಗೇ ತಿಳಿದಿದೆ ಸಾವಿರಾರು ವರ್ಷಗಳಿಂದ ನಮ್ಮ ರಾಷ್ಟ್ರವು ಪ್ರಸಿದ್ಧವಾಗಿದೆ. ಅಂತಹ ಮಹತ್ತಾದ ಹಿಂದೂಸ್ಥಾನವನ್ನು ಇಂದು ನಾವು ಹೊಸ ಚೈತನ್ಯದಿಂದ ತುಂಬುವಂತೆ ಮಾಡುತ್ತಿದ್ದೇವೆ. ಅಂತಹ ಮಹಾಕಾರ್ಯವು ನಮ್ಮ ಮುಂದೆ ಕಾದಿದೆ. ಹಿಂದೂಸ್ಥಾನವು ಹೊಸದಾಗುವುದು ಮಾತ್ರವಲ್ಲ. ಅದನ್ನು ಸುಖ ಶಾಂತಿಗಳಿಂದ ತುಂಬುವಂತೆ ಮಾಡುವುದೂ ನಮ್ಮೆಲ್ಲರ ಕರ್ತವ್ಯವಾಗಿದೆ. ಮಹಾತ್ಮಾಗಾಂಧಿಯವರು ಹೇಳುವಂತೆ ದೇಶದ ಉದ್ಧಾರವನ್ನು ಜಾತಿ ಮತಗಳ ದೃಷ್ಟಿಯಿಂದ ಸಾಧಿಸಹೊರಟರೆ ಎಂದೂ ಮುಂದುವರಿಯೆವು. ಜನಾಂಗವೇ ಅಭಿವೃದ್ಧಿ ಹೊಂದಬೇಕೆಂದು ಪ್ರತಿಯೊಬ್ಬನೂ ಬಯಸಬೇಕು. ಮಹಾತ್ಮಗಾಂಧಿಯವರು "ತಾಳ್ಮೆ, ದಯೆ, ಸಹಕಾರ, ಒಳ್ಳೆಯ ಭಾವನೆಗಳು ಪರಸ್ಪರವಾಗಿ ಒಬ್ಬನಿಗೆ ಇನ್ನೊಬ್ಬನಲ್ಲಿ, ಒಂದು ಪಂಗಡಕ್ಕೆ ಇನ್ನೊಂದು ಪಂಗಡದಲ್ಲಿ ಇಲ್ಲವಾದರೆ, ಅಭಿವೃದ್ಧಿಯ ಮಾತೇ ಕೇವಲ ಬರಿದಾದ ಕನಸೆಂದು ಸಾರುತ್ತಿದ್ದಾರೆ.

ನಮ್ಮ ದೇಶದ ಜನಸಂಖ್ಯೆಯನ್ನು ನೋಡಿದರೆ ನಾವು ಜಗತ್ತಿನ ಜನಸಂಖ್ಯೆಯಲ್ಲಿ ಐದನೇ ಒಂದು ಪಾಲಿನಷ್ಟು ಇರುವೆವು. ನಮ್ಮಮುಂದೆ ಸಾರವುಳ್ಳ ಸಾವಿರಾರು ಎಕರೆ ಜಮೀನುಗಳಿವೆ. ಎಲ್ಲಾ ಬಗೆಯ ಸಹಜವಾದ ಅನುಕೂಲತೆಗಳೂ ನಮ್ಮ ಭೂಮಿಗಳಿ

ಗಿವೆ. ನಮ್ಮದೇಶದಲ್ಲಿ ಜಗತ್ತನ್ನೇ ಬೆರಗುಗೊಳಿಸುವ ಬುದ್ಧಿವಂತರಿದ್ದಾರೆ. ಸಂಪತ್ತಿನ ರಾಶಿಯೇ ನಮ್ಮ ದೇಶದಲ್ಲಿ ಅಡಗಿಕೊಂಡಿದೆ. ಏನಿದ್ದರೇನು? ಇಂದು ಹಿಂದೂಸ್ಥಾನವು ಜಗತ್ತಿನಲ್ಲಿರುವ ದೇಶಗಳಲ್ಲೆಲ್ಲಾ ಅತ್ಯಂತ ಬಡದೇಶವಾಗಿದೆ.

೧. ಗಣಿಗನೆಯ ಇಸವಿಯ ಅಂದಾಜಿನಂತೆ ನಮ್ಮ ದೇಶದಲ್ಲಿ ಪ್ರತಿಯೊಬ್ಬನಿಗೆ ೬೫ ರೂಪಾಯಿಗಳ ಉತ್ಪನ್ನವಿದ್ದರೆ ಇಂಗ್ಲೆಂಡ್ ಅಮೆರಿಕಗಳಲ್ಲಿ ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ.

೨. ನಮ್ಮ ಆಹಾರವೂ ಸರಿಯಾದ ಪ್ರಮಾಣದಲ್ಲಿಲ್ಲ. ಪೌಷ್ಟಿಕ ವಸ್ತುಗಳ ನ್ಯೂನತೆಯಿಂದ ತುಂಬಿದೆ.

೩. ಬೇರೆ ದೇಶಗಳೊಡನೆ ಹೋಲಿಸಿ ನೋಡಿದರೆ ಹಿಂದೂಸ್ಥಾನದ ಉತ್ಪನ್ನವು ಎಷ್ಟೋ ಕಡಿಮೆಯಾಗಿದೆ. ಈಜಿಪ್ಟಿನಲ್ಲಿ ಒಂದು ಎಕರೆ ಜಮೀನಿನಲ್ಲಿ ಸುಮಾರು ೧೯೧೫ ರಾತ್ತಲ್ ಗೋಧಿ, ೨೯೯೫ ರಾತ್ತಲ್ ಅಕ್ಕಿ, ೨೦೩೦ ರಾತ್ತಲ್ ಕಬ್ಬು, ೫೩೫ ರಾತ್ತಲ್ ಹತ್ತಿ ಬೆಳೆಯುವುದು. ಹಿಂದೂಸ್ಥಾನದಲ್ಲಿ ಒಂದು ಎಕರೆಗೆ ೬೬೦ ರಾತ್ತಲ್ ಗೋಧಿ, ೧೩೪೦ ರಾತ್ತಲ್ ಅಕ್ಕಿ, ೨೪೯೪ ರಾತ್ತಲ್ ಕಬ್ಬು, ೬೯ ರಾತ್ತಲ್ ಹತ್ತಿ ಬೆಳೆಯುವುದು. ಇದರ ಫಲವಾಗಿ ಹಿಂದೂಸ್ಥಾನವು ತನ್ನ ಆಹಾರಕ್ಕಾಗಿ ಪರದೇಶಗಳನ್ನು ಆಶ್ರಯಿಸಬೇಕಾಗಿದೆ.

೪. ಬಟ್ಟೆಯ ವಿಚಾರ ಹೇಳುವುದಿದ್ದರೂ ನಮ್ಮ ದೇಶದ ಪರಿಸ್ಥಿತಿ ತೀರ ಶೋಚನೀಯವಾಗಿದೆ. ಅಮೆರಿಕಾದಲ್ಲಿ ಪ್ರತಿಯೊಬ್ಬನಿಗೆ ೬೪ ಗಜ ಬಟ್ಟೆ ದೊರೆತರೆ, ನಮ್ಮ ಪ್ರಾಂತದಲ್ಲಿ ಏಳು ಗಜ ಮಾತ್ರ ದೊರೆಯುವುದು.

೪. ವ್ಯವಸಾಯದ ಬಗ್ಗೆ ಮಾಡಿದ ಸಾಲಗಳೋ ಮಿತಿಮೀರಿವೆ, ಗಣಿಗನೆಯ ಇಸವಿಯ ಲೆಕ್ಕದಂತೆ ಸುಮಾರು ೧೮೦೦ ಕೋಟಿ ರೂಪಾಯಿಗಳಷ್ಟು ಇವೆ. ಸಾಲ ಕೊಡುವವರೂ, ಆರ್ಥಿಕ ಪರಿಸ್ಥಿತಿಯಲ್ಲಿ ಸರಿಯಾದ ಹಿಡಿತವಿಲ್ಲದಿರುವುದು. ಉಪಕಸಬುಗಳಾದ ಗುಡಿ ಕೈಗಾರಿಕೆಗಳ ಅವನತಿ, ಸರಕಾರದ ಭೂ ತೆರಿಗೆ ಧೋರಣೆ, ಕಡಿಮೆ ಬೆಳೆಯಾಗುವುದು, ಇತ್ಯಾದಿ ಅನೇಕ ಕಾರಣಗಳು ನಮ್ಮನ್ನು ಈ ಅವಸ್ಥೆಗೆ ಗುರಿ ಮಾಡಿದುವು.

೬. ರಸ್ತೆಗಳ ವಿಷಯವಾಗಿ ಹೇಳುವುದಿದ್ದರೆ, ಜಪಾನಿನಲ್ಲಿ ಪ್ರತಿ ಚದರ ಮೈಲಿಗೆ ಮೂರು ಮೈಲುಗಳಷ್ಟು ರಸ್ತೆ ಇದ್ದರೆ ನಮ್ಮ ದೇಶದಲ್ಲಿ ಅದರಲ್ಲೂ ಬ್ರಿಟಿಷರ ಕೈವಶದಲ್ಲಿರುವ ಭಾಗದಲ್ಲಿ ಚದರ ಮೈಲಿಗೆ ಒಂದೇ ಫರ್ಲಾಂಗ್ ರಸ್ತೆ ಇರುವುದು. ಇಂಗ್ಲೆಂಡಿನಲ್ಲಿ ಚದರ ಮೈಲಿಗೆ ಎರಡು ಮೈಲಿಗಳಷ್ಟು ರಸ್ತೆ ಇದೆ.

೭. ಆರೋಗ್ಯ, ನೀರಿನ ಅನುಕೂಲತೆ ವಸತಿ ಇತ್ಯಾದಿಗಳನ್ನು ಪರಿಶೀಲಿಸಿದರೆ ಎಷ್ಟೋ ಶೋಚನೀಯವಾಗಿದೆ. ಒಬ್ಬ ಲೇಖಕರು ಹೇಳುವಂತೆ ಸುಂದರವಾದ ಹಳ್ಳಿಗಳ ಒಡಲಿಗೆ ಸೆಗಣಿಯ ರಾಶಿಗಳು ಕಾಣುತ್ತಿವೆ ಎಂಬುದು ಸತ್ಯವಾಗಿದೆ. ಹಳ್ಳಿಗಳನ್ನು ದಾಟಿಹೋಗುವುದೆಂದರೆ ಒಂದು ಕಠಿಣ ಅನುಭವವಾಗಿದೆ. ಕೊಳಕು ವಾಸನೆಗಳಿಂದ ಕಣ್ಣು ಮೂಗುಗಳನ್ನು ಮುಚ್ಚಿಕೊಂಡೇ ಹೋಗಬೇಕು. ಇದಕ್ಕೆಲ್ಲಾ ಹಳ್ಳಿಗರಿಗೆ ಆರೋಗ್ಯ ವಿಷಯದಲ್ಲಿ ಸರಿಯಾದ ಶಿಕ್ಷಣವಿಲ್ಲದಿರುವುದೇ ಕಾರಣ. ಹಳ್ಳಿಯ ಕೊಳಕನ್ನು ತುಂಬಿಸಲು ಹೊಂಡಗಳನ್ನು ತೋಡುವಂತೆ ಏರ್ಪಡಿಸಬೇಕು. ಪಾಯಖಾನೆಗಳನ್ನು ಉಪಯೋಗಿಸುವಂತೆ ಏರ್ಪಡಿಸಬೇಕು. ಹೀಗೆ ಮಾಡುವುದರಿಂದ ಹಳ್ಳಿಗರಿಗೆ ಆರೋಗ್ಯದ ಅನುಕೂಲತೆ ಮಾತ್ರವಲ್ಲದೆ ಗದ್ದೆಗಳಿಗೆ ಗೊಬ್ಬರವೂ ದೊರೆಯುವುದು.

ನೀರಿನ ಸೌಕರ್ಯವೇ ಹಳ್ಳಿಗಳಲ್ಲಿ ಸರಿಯಾಗಿರುವುದಿಲ್ಲ. ಹಳ್ಳಿಗಳಲ್ಲೂ ಪಟ್ಟಣಗಳಲ್ಲೂ ನೀರಿನ ಸೌಕರ್ಯವನ್ನು ಒದಗಿಸುವುದು ಅತ್ಯಾವಶ್ಯಕ. ಬ್ರಿಟಿಷ್ ಹಿಂದೂಸ್ಥಾನದ ೧೫೦೦ ಪಟ್ಟಣಗಳಲ್ಲಿ ೧೯೩೬ ಇಸವಿಯಲ್ಲಿ ೨೫೦ ಪಟ್ಟಣಗಳಿಗೆ ಮಾತ್ರ ಸುರಕ್ಷಿತವಾದ ನೀರಿನ ಸರಬರಾಯಿ ಇತ್ತು. ಹಳ್ಳಿಗಳಲ್ಲಿ ನೀರನ್ನು ಹಾಳು ಮಾಡದಂತೆ ನೋಡಿಕೊಳ್ಳುವ ಪದ್ಧತಿಯೇ ಇದ್ದಂತೆ ಕಾಣುವುದಿಲ್ಲ. ಕೊಳಕಾದ ಹೊಂಡ, ಬಾವಿ

ಕೆರೆಗಳು ಅಥವಾ ಕಾಲಿವೆ ಇವುಗಳ ನೀರು ಕುಡಿಯುವುದಕ್ಕೂ, ಸ್ನಾನ ಮೊದಲಾದುವುದಕ್ಕೂ ಉಪಯೋಗಿಸಲ್ಪಡುತ್ತಿವೆ. ತೆಂಗಾಶಿ ಎಂಬ ಹಳ್ಳಿಯನ್ನು ನಾನು ಸಂದರ್ಶಿಸಿದಾಗ ಅಲ್ಲಿಯ ಜನರು ಅಲ್ಲಿಯ ನದಿಯ ಜಾಕಟ್ಟಿನಲ್ಲಿ ನಿಂತಿರುವ ಕೊಳಕು ನೀರನ್ನು ಕುಡಿಯುವುದಕ್ಕೂ ಸ್ನಾನಾದಿಗಳಿಗೂ ಉಪಯೋಗಿಸುವುದನ್ನು ನೋಡಿದರೆ ವ್ಯಸನವಾಗುತ್ತಿದೆ. ಕಾಲೆರಾ ಸಿಡುಬು ಗಳು ಬಂತೆಂದರೆ ನೂರಾರು ಜನರನ್ನು ನಾಶಮಾಡುತ್ತಿವೆ ಎಂದು ಅಲ್ಲಿಯ ಹಳ್ಳಿಗರು ಹೇಳಿದರು. ಇಂತಹ ಪರಿಸ್ಥಿತಿಗಳನ್ನು ಎಲ್ಲೆಲ್ಲೂ ನಮ್ಮ ದೇಶದಲ್ಲಿ ಹೋಗಲಾಡಿಸಬೇಕು.

ಹೆರಿಗೆ, ಶಿಶುಪೋಷಣೆಯ ವಿಚಾರವಾಗಿ ನೋಡಿದರೂ ನಮ್ಮ ದೇಶದಲ್ಲಿ ಶಿಶುಮರಣವು ಇಡಿ ಜಗತ್ತಿನಲ್ಲಿ ಹೆಚ್ಚೆಂದು ಹೇಳಬಹುದು. ಆಸ್ಟ್ರೇಲಿಯಾದಲ್ಲಿ ಸಾವಿರ ಹೆರಿಗೆಯಲ್ಲಿ ೩೮ ಮಕ್ಕಳು ಸತ್ತರೆ ಇಂಗ್ಲೆಂಡಿನಲ್ಲಿ ೫೫ ಸಾಯುತ್ತಾರೆ. ಅಮೆರಿಕದಲ್ಲಿ ೪೮, ಆದರೆ ಹಿಂದೂಸ್ಥಾನದಲ್ಲಿ ೧೬೭ ಮಕ್ಕಳು ಸಾವಿರದಲ್ಲಿ ಸಾಯುತ್ತಿದ್ದಾರೆ. ಎಂದರೆ ಯಾರಿಗೆಕಾನೆ ದುಃಖವಾಗಲಿಕ್ಕಿಲ್ಲ? ಆದುದರಿಂದ ಹೆರಿಗೆ ಆಸ್ಪತ್ರೆಗಳನ್ನು ಹಳ್ಳಿಗಳಲ್ಲೂ ಪಟ್ಟಣಗಳಲ್ಲೂ ಹೆಚ್ಚೆಚ್ಚು ತೆರೆಯುವುದು ಅತ್ಯಗತ್ಯವಾಗಿದೆ, ಈ ಬಗೆಯ ಆಸ್ಪತ್ರೆಗಳು ಹೆಂಗಸರಿಗೆ ಶಿಶುಪೋಷಣೆಯ ವಿಚಾರದಲ್ಲಿ ಬೇಕಾದ ಅನುಭವ ಕೊಡುವುವು. ರಷ್ಯಾದೇಶದ ಆಸ್ಪತ್ರೆಗಳು ಪ್ರಪಂಚದಲ್ಲೇ ಅತ್ಯುತ್ತಮವಾದುವುಗಳೆಂದು ಹೇಳುತ್ತಾರೆ

ಆಸ್ಪತ್ರೆಗಳು ಹಳ್ಳಿಗಳಲ್ಲಿ ತೀರಾವಿರಳ. ಹಳ್ಳಿಗಳಲ್ಲಿ ಎಲ್ಲಾ ಅನುಕೂಲತೆಗಳುಳ್ಳ ಆಸ್ಪತ್ರೆಗಳನ್ನು ತೆರೆಯಬೇಕು ಹಿಂದುಸ್ಥಾನದಲ್ಲಿ ೯೦೦೦ ಜನಕ್ಕೆ ಒಬ್ಬ ಡಾಕ್ಟರನೂ, ೬೬,೦೦೦ ಜನಕ್ಕೆ ಒಬ್ಬ ನರ್ಸಿನಂತೆಯೂ ಇದ್ದಾರೆ, ಇಂಗ್ಲೆಂಡಿನಲ್ಲಿ ಪ್ರತಿ ೬೭೦ ಜನರಿಗೆ ಒಬ್ಬ ಡಾಕ್ಟರನೂ, ಪ್ರತಿ ೪೫೫ ಜನರಿಗೆ ಒಬ್ಬ ನರ್ಸಿನಂತೆ ಲೆಕ್ಕವಾಗಬಹುದು

ನಮ್ಮ ದೇಶದ ಜನರಲ್ಲಿ ಶೇಕಡಾ ೧೨ ಜನರು ಮಾತ್ರ ಓದುಬರಹ ಬಲ್ಲವರು ಇಂಗ್ಲೆಂಡ್, ಅಮೇರಿಕ, ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ವಿದ್ಯಾವಂತರಾಗಿದ್ದಾರೆ. **ಹಿಂದೂಸ್ಥಾನಕ್ಕೆ** ಹೆಚ್ಚಿನ ಮತ್ತು ಉತ್ತಮವಾದ ಯೋಗ್ಯ ವಿದ್ಯಾಭ್ಯಾಸವು ಬೇಕು. ನಮ್ಮ ಜನರನ್ನೆಲ್ಲಾ ಹಿಂದೂಸ್ಥಾನದ ಯೋಗ್ಯ ನಾಗರೀಕರನ್ನಾಗಿ ಮಾಡುವಂತಹ ವಿದ್ಯಾಭ್ಯಾಸವೇ ನಮಗೆ ಬೇಕಾದುದು. ನಮ್ಮ ವಿದ್ಯಾಭ್ಯಾಸವು ನಮಗೆ ನಮ್ಮ ದೇಶದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಚೆನ್ನಾಗಿ ತಿಳಿಕೊಳ್ಳುವ ಶಕ್ತಿಯನ್ನು ಕೊಡುವುದಾಗಿರಬೇಕು. ನಮಗೆ ಬೇಕಾದುವುಗಳನ್ನು ನಾವೇ ತಿಳಿಕೊಳ್ಳುವಂತೆ ಮಾಡುವುದಾಗಿರಬೇಕು. ನಮ್ಮ ಸಂಸ್ಕೃತಿಯನ್ನು ಹೆಚ್ಚಿಸಿ, ಮುಂದಿನ ನಮ್ಮ ಜನಾಂಗಕ್ಕೆ ಅದನ್ನು ಒದಗಿಸುವಂತಿರಬೇಕು. ಹೆಚ್ಚೇಕೆ? ನಮ್ಮ ವಿದ್ಯಾಭ್ಯಾಸವು ನಮ್ಮ ದೇಶದ ಒಳ್ಳೆಯದಕ್ಕಾಗಿ ನಮ್ಮನ್ನು ಕೆಲಸ ಮಾಡುವಂತೆ ಮಾಡುವುದಾಗಿರಬೇಕು. ಇಂದು ನಮ್ಮ ನಾಡಿನ ಪರಿಸ್ಥಿತಿಯನ್ನು ನೋಡಿದರೆ ಎಷ್ಟೋ ಬಗೆಯಿಂದ ನಾವು ಹಿಂದುಳಿದಿದ್ದೇವೆ

ಪ್ರಜಾಪ್ರಭುತ್ವದ ಹಾಗೂ ಮಾನವತೆಯ ಬೆಲೆ ಇವುಗಳ ದೃಷ್ಟಿಯಿಂದ ವಿಚಾರಿಸಿದರೆ, **ರಷ್ಯನರ ಯೋಜನೆಯು ನಮಗೆ ಮಾದರಿಯು ಯೋಜನೆಯಾಗಿಲ್ಲ. ಅವರ ಪದ್ಧತಿಯಂತೆ ವೈಯಕ್ತಿಕವಾದ ಸ್ವಾತಂತ್ರ್ಯವಿಲ್ಲ, ಅಭಿವೃದ್ಧಿಯಿಲ್ಲ.**

ಹಿಂದೂಸ್ಥಾನದ ಏಳಿಗೆಗೆ ಪ್ರಾಮುಖ್ಯವಾದ ಯೋಜನೆಯೆಂದರೆ ಹಳ್ಳಿಗಳನ್ನು ಪುನರ್-ನಿರ್ಮಾಣ ಮಾಡುವುದು. ಏಕೆಂದರೆ ಹಿಂದೂಸ್ಥಾನವು ಹಳ್ಳಿಗಳ ದೇಶವಾಗಿದೆ ನಮ್ಮ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ ಕೊಂಬತ್ತು ಜನರು ಹಳ್ಳಿಗಳಲ್ಲೇ ವಾಸಮಾಡುತ್ತಿರುವರು. **ಹಳ್ಳಿಗಳೇ ನಮ್ಮ ದೇಶದ ಜೀವನಾಡಿಗಳು ಹಳ್ಳಿಗಳೇ ಹಿಂದುಸ್ಥಾನದ ಕೋಟಿಗಟ್ಟಲೆ ಜನರಿಗೆ ಅನ್ನಕೊಡುತ್ತಿರುವುವು.** ನಗರಗಳಲ್ಲಿರುವ ಕೈಗಾರಿಕಾ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಮಜೂರ

ರಲ್ಲಿ ಹೆಚ್ಚಿನವರು ಹಳ್ಳಿಗಳಿಂದಲೇ ಬಂದವರು. ಹಿಂದುಸ್ತಾನದ ಜನರ ಜೀವನಕ್ಕೆ ಆಧಾರವಾದುವು ಗಳೂ ಹಳ್ಳಿಗಳೇ ಆಗಿವೆ. (ಮುಂದುವರಯುವುದು.)

ಪ್ರಾ. ಶಾಲೋಪಾಧ್ಯಾಯರ ಸಭೆ.

(2 ನೆ ಪುಟದಿಂದ)

ಲೋಪಗಳು ಮತ್ತು ಸಾಧನೆಯ ಮಾರ್ಗಗಳು:–

ಬಡತನ, ಕುಟುಂಬಭಾರ, ದೂರಭಾರಗಳಿಂದ ಜಿಲ್ಲೆಯ ಸಾಕಷ್ಟು ಸಂಖೆಯ ಪ್ರಾಥಮಿಕೋಪಾಧ್ಯಾಯರು ಸಭೆಗೆ ಬಂದಿರಲಿಲ್ಲ. ಜಿಲ್ಲೆಯಲ್ಲೇ ಸಾಕಷ್ಟು ಐಕಮತ್ಯವಿಲ್ಲದಿದ್ದರೆ ಕಾರ್ಯಸಾಧನೆ ಹೇಗಾಗಬೇಕು? ಇಷ್ಟುಪ್ರತಿನಿಧಿಗಳು ಸಾಲದೇ ಎಂದು ಕೆಲವರು ಪ್ರಶ್ನಿಸಬಹುದು ಆದರೆ ಬರದಿರುವ ಉಪಾಧ್ಯಾಯರಿಂದ ಸಹಕಾರಕೊಡುವ ಪತ್ರಗಳಿಲ್ಲ. ಪ್ರತಿನಿಧಿಯ ಚಂದಾ ಮೊಬಲಗಿಲ್ಲ ಕೆಲಸವು ಹೇಗೆ ನಡೆಯಬೇಕು? ಎಲ್ಲಾಕಾರ್ಯಗಳಿಗೂ ದುಡ್ಡೇದೊಡ್ಡಪ್ಪ. ಪ್ರತಿಯೊಬ್ಬ ಪ್ರಾಥಮಿಕೋಪಾಧ್ಯಾಯನೂ ಕನಿಷ್ಟಕ್ಕೆ ಒಂದೊಂದು ರೂಪಾಯಿ ಸಲ್ಲಿಸಿದರೆ ಎಷ್ಟೋಕೆಲಸವಾದೀತು. ಇದು ಬೋರ್ಡುಶಾಲೋಪಾಧ್ಯಾಯರ ಹಿತಕ್ಕೆ ಸಂಬಂಧಿಸಿದುದು ಈ ಕಾರಣ ಅವರೊಡನೆ ನಾವು ಸಹಕರಿಸುವುದು ಬೇಡವೆಂತ ಲೇಬರ್, ಮುನಿಸಿಪಾಲ್ಟಿ, ಮತ್ತು ಇತರ ಶಾಖೆಗಳವರು ಉದಾಸೀನಮಾಡಿದರೆ ಕೊನೆಯಲ್ಲಿ ಎಲ್ಲರಿಗೂ ನಾವುವೇ? ಈ ಬೇರೆ ಬೇರೆಯೆಂಬ ಭಾವನೆ ಎಂದು ನಾಶವಾಗುತ್ತೋ ಅಂದೇ ಪ್ರಾಥಮಿಕೋಪಾಧ್ಯಾಯರ ಮುಕ್ತಿ.

ಉಪಾಧ್ಯಾಯರ ಸಂಬಳಗಳ ಪುನರ್ವಿಮರ್ಶೆಯಾಗಲಿದೆ ಎಂದು ಈಗ ಸರಕಾರದ ಪ್ರಕಟನೆ ಹೊರಟಿದೆ:— ಹೆಚ್ಚುಗಲಾಟೆ ಮಾಡಿದವರಿಗೆ ಹೆಚ್ಚಿನ ಮತ್ತು ಶೀಘ್ರವಾಗಿ ಅನುಕೂಲವಾಗುತ್ತದೆ. ಈ ಕಾರಣ ಜಿಲ್ಲಾ ಪ್ರಾಥಮಿಕೋಪಾಧ್ಯಾಯರನ್ನೆಲ್ಲಾ ಸಂಘಟಿಸಲು ಜಿಲ್ಲಾ ಕಾರ್ಯದರ್ಶಿಗಳು ತಡಮಾಡದೆ ಜಿಲ್ಲೆಯನ್ನೆಲ್ಲಾ ಸಂಚರಿಸಿ ಉಪಾಧ್ಯಾಯರಿಗೆ ಮೆತ್ತೆ ಅನ್ಯಾಯವಾಗುವುದಾದರೆ ಅವರನ್ನು ಮುಂದಿನ ಹೋರಾಟಕ್ಕೆ ಸಿದ್ಧಪಡಿಸಬೇಕು. ಉಪಾಧ್ಯಾಯರಿಗೆ ಒಂದು ಪ್ರಚಾರಸಾಧನವು ನಮ್ಮ ಜಿಲ್ಲೆಯಲ್ಲಿಲ್ಲ. ಎಲ್ಲಾ ಸಮಾಚಾರಗಳೂ ಕಾಲಕಾಲಕ್ಕೆ ತಿಳಿಯಲು ವೃತ್ತ ಪತ್ರಿಕೆಯೇ ಒಂದು ಸಾಧನ.

'ನವಭಾರತ' ಸಂಪಾದಕರು ನಮ್ಮ ಮೇಲೆ ಕೃಪೆಯಿಟ್ಟು ನಮ್ಮ ಹಿತಕ್ಕೆ ಸಂಬಂಧಿಸಿದ ಸಮಾಚಾರಗಳನ್ನೆಲ್ಲಾ ವಾರವಾರವೂ ಪ್ರಕಟಿಸಲು ಒಪ್ಪಿರುವರು. ಈಕಾರಣ ಜಿಲ್ಲೆಯ ಪ್ರತಿಯೊಂದು ಶಾಲೆಯವರೂ **'ನವಭಾರತ'**ವನ್ನು ತರಿಸಿಕೊಂಡರೆ ಆ ಮೂಲಕ ಎಲ್ಲಾ ಸಮಾಚಾರಗಳೂ ತಿಳಿಯುತ್ತವೆ. ಪ್ರಾಥಮಿಕೋಪಾಧ್ಯಾಯರು ಈ ಮುಖ್ಯ ವಿಷಯಕ್ಕೆ ಗಮನ ಕೊಡಬೇಕೆಂದು ಕೋರುತ್ತೇನೆ.

Woolen Coatings, Silk Sarees, Benares and other latest designs Handloom and Mill made Clothes Et .
Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕು–ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು. ಖಚ್ಚಿಸಿ ಮನಗಾಣಿರಿ.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1 M/S. V. M. GIRI & SONS,
(Pro:- M, S Acharya) Car Street, Bellary

2 M/S. . HUSANJEE RAO, M VENKOJI RAO
General Merchants, Car Street Bellary.

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ಶೀತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್, ಎಂ ವೆಂಕೋಜರಾವ್. ತೇರುಬೀದಿ, ಬಳ್ಳಾರಿ.
2) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦.

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ್ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ನುಮ್ಮ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ-ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಸಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... .. ..

....

....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVARAO

ಜೈಹಿಂದ್ Reg. No. M. 4748

ನವಚೈತನ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೨೦ | ಬಳ್ಳಾರಿ ಮೇ ೨೬ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ ಕೇಶವರಾವ್.

ನಮ್ಮ ಹಳ್ಳಿಗಳ ಗೋಳಿನ ಬಾಳು

ಹಿಂದಕ್ಕೆ ಬೇಕಾದಷ್ಟುಬೆಳೆದು. ಬೇಕಾದಷ್ಟು ಉಂಡು ಬೇಕಾದಷ್ಟು ಧಾನ್ಯವನ್ನು ದಾನಮಾಡಿದ ನೇಗಿಲ ಯೋಗೀರೈತ ಇಂದು ಉಣಲು ಆಹಾರವಿಲ್ಲದೆ, ಉಡಲು ಬಟ್ಟೆಇಲ್ಲದೆ ನಿಯಂತ್ರಣದ ಪ್ರವಾಹ ಕ್ಕೆಸಿಕ್ಕಿ ಕೊಚ್ಚಿಕೊಂಡು ಹೋಗುತ್ತಲಿದ್ದಾನೆ. ವಿಶಾಲವಾದ ಕೃಷಿಕ್ಷೇತ್ರದಲ್ಲಿ ಕಷ್ಟಪಟ್ಟು ದುಡಿದು, ಬೇಕಾದ್ದನ್ನು ಉಂಡು, ಬೇಕಾದ್ದನ್ನು ತಿಂದು ತೇಗಿದ ಕರ್ಮಯೋಗಿ ರೈತ ಇಂದು ಕಾಳಸಂತೆ, ಲಂಚಗುಳಿತನ, ನಿಯಂತ್ರಣ, ಈ ಈ ಮೂರು ಬ್ಯೂಗಿಗಳಲ್ಲಿ ಬೆಂದು ಬೆಂಡಾಗಿ ಬೂದಿಯಾಗುತ್ತಲಿದ್ದಾನೆ.

ಸರ್ಕಾರವು ಜನತೆಗೆ ಉಂಟಾಗಿರುವ ಜೀವನದ ಈ ತೊಡಕನ್ನು ನಿವಾರಿಸಲೋಸುಗ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ಡಿಪೋವನ್ನು ತೆರೆದು ಆಯಾ ಡಿಪೋಗಳಿಗೆ ಆಯಾಹಳ್ಳಿಗೆ ಬೇಕಾದ ಧಾನ್ಯ, ಎಂಣೆ, ಮುಂತಾದವುಗಳನ್ನು ಸಂಗ್ರಹಿಸಿ, ಡಿಪೋಗಳಿಗೆ ಡಿಪೋಕೀಪರ್‌ರನ್ನು ನೇಮಿಸಿ, ಅದನ್ನೆಲ್ಲಾ ಸರಿಯಾಗಿ ಹಂಚುವಂತೆ ಏರ್ಪಾಟುಮಾಡಿತು. ಆದರೆ ಭಾರತೀಯರ ಜನಜೀವನಾಕಾಶದಲ್ಲಿ ಇಂದು ಕಾಳಸಂತೆಯ ಕಾರ್ಗತ್ತಲೆಯ ಕಾರ್ಮೋಡಗಳು ಕವಿದು, ಜನತೆಗೆ ಜೀವನದ ಬೆಳಕು ಕಾಣದಾಗಿದೆ. ಅದರಂತೆಯೇ ಕಾಳಸಂತೆಯ ಕಾಲನು ಸರ್ಕಾರೀಡಿಪೋಗಳಲ್ಲಿಯು ಕೂಡಾ ಕಾಲಿಟ್ಟನು. ಅಧಿಕ ಧನದಾಶೆಯಿಂದ ಡಿಪೋಕೀಪರರು ಜನತೆಗೆ ಸರಿಯಾಗಿಹಂಚದೆ, ವಸ್ತುಗಳನ್ನೆಲ್ಲಾ ಕಾಳಪೇಟೆಯಲ್ಲಿಟ್ಟು ಮಾರತೊಡಗಿದರು. ಇದರಿಂದ ಜನತೆಗೆ ಸರಿಯಾಗಿ ವಸ್ತುಗಳು ಸಿಗದೆ, ಜನತೆ ಆರ್ತನಾದ ಮಾಡುತ್ತಲಿದೆ. ಅಸಮರ್ಥ ನೌಕರ ವೃಂದದಿಂದಲೂ ಅನಿಯಂತ್ರಣಗಳಿಂದಲೂ ಸರ್ಕಾರೀ ಡಿಪೋಗಳು ಕೂಡಾ ಕಾಳಸಂತೆಯ ಪೇಟೆಗಳಾದವು. ಪ್ರತಿಯೊಂದು ಹಳ್ಳಿಯ ಬಾಳು ಗೋಳಿಗೀಡಾಗಿಬಿಟ್ಟಿತು. ಇಂದಿನ ಕಾಂಗ್ರೆಸ್ ಸರ್ಕಾರ, ಜನತಾ ಸರ್ಕಾರದ ಆಡಳಿತದಲ್ಲಿಯೂ ಕೂಡಾ ಜನತೆಯ ಜೀವನ ಮಟ್ಟವು ಸುಧಾರಿಸದೆ. ಲಂಚ ಬಡಕತನ, ಕಾಳಸಂತೆಗಳು ಹೆಚ್ಚಾಗುವದೆಂದರೆ ಜನತೆಯ ದುರ್ದೈವವೇಸರಿ.

ಸರ್ಕಾರಿ ಡಿಪೋಗಳನ್ನು ಕೂಡಾ ಕಾಳಸಂತೆಯ ಪೇಟೆಗಳನ್ನಾಗಿ ಮಾಡಿದ ಇದೋ ಕಾಳಸಂತೆಯ ಖೂಳರೇ ಜನತಾ ಪ್ರೀತಿಗೆ ಪಾತ್ರರಾಗಿಬಾಳಿರಿ. ಜನತೆಯನ್ನು ಕಾಳಸಂತೆಯ ಕೋಟೆಯ ಕೊತ್ತಲಿನಲ್ಲಿ ನೂಕಬೇಡಿರಿ. ಅದೋ ಕಾಳಸಂತೆಯ ಕೋಟೆಯ ಗೋಡೆಗಳು ಅಪ್ಪಳಿಸಿ ಕುಸಿ ಕುಸಿದು ಬೀಳುತ್ತಿರುವವು.

[ವಾ. ಚಂದ್ರಶೇಖರಗೌಡ–ಕೋಡಿಹಳ್ಳಿ]

To,

The President District Labour School Teachers' Association, Bellary.

MEMORANDUM OF THE COLLECTOR, BELLARY.

K N. ANANTARAMAN Esq., I. C S,

Refec. 6177'46-L. 2. dated 13-5-1947.

Labour Department—Labour Schools—Bellary District—Labour School Teachers' Association memorandum—reply.

Reference:— Memorandum dated 14th March 1947 from the President District Labour Schools Teachers' Association, Bellary.

The Bellary District Labour School Teachers' Association has not yet been accorded recognition by Government and as such any meeting covered by this un-recognised body is improper and it is not entitled for any reply to the resolution passed by it.

The President of the Association, is however, informed as follows with reference to various points raised in the memorandum submitted on 14-3-47.

Point 1. **Confirmation of all unconfirmed Teachers**:— As per G. O. Ms. No. 355 P. W. D. dated 2-2-46, teachers with service of 10 years or more were confirmed subject to a maximum of 50% of posts in each of the three grades, viz,, Lower, Higher and Secondary Grades. The number of teachers in grade and the number confirmed are as follows: —

	Total Posts.	No. confirmed.
Lower Elementary Grade.	14	7
Higher Elementary Grade.	59	29
Secondary Grade.	1	0

The Association is informed that what is permissible under the ing rules has been done.

Proposals to confirm all teachers with service of ten years or mo are under consideration of Government and their orders are awaited.

Point 2. **Enhancement of rate of mid-day meals and service of mid-day meals for 6 days in the week:**— This has been referred to the Labour Commissioner with my recommendation and his orders are awaited.

Suppiy of dress, books etc.,:— Harijan pupils are supplied dress, books etc., once a year to the extent permitted by funds allotted.

Supply of ointment for scabies etc.,:— The ointment for scabies is being distributed and teachers by Dt, Labour and Labour Revenue Inspector during their tours.

As regards eyedrops, medical authorities have been addressed in the matter.

Point 3 **Sanction of scales of pay and increments and payment of arrear T. A.:**— As regards payment ot arrears of pay due to change form Lower grade to Higher grade and payment of arrears of T. A., the Accountant General is being addressed for permission to pay arrears overdue more than a year.

Grant of increments to teachers arises only when they satisfy departmental tests prescribed The Labour Comm'r has been addressed for instructions said to have been issued very recently. His reply is awaited. The question of sanction of increments will be taken up immediately on receipt of the instructions from the Labour Commissioner. However, increment certificates of three L. S Teachers viz., (1) D. Kristappa (2) N. Appalli and (3) D. Venkiah have been put up to the Treasury Deputy Collector for pre-audit.

Point 4 **Mutual transfer of teachers:**— Mutual transfers can be made subject to the approval of the District Educational Officer. Besides, frequent transfers will adversely affect the standard of schools and will not enable inspecting officer to gauge their work. Hence mutual transfers once during two years appear reasonable When teachers apply for mutual transfers only to avoid certain statics they cannot be ordered The Association is informed that the Collector has no objection to the principle of mutual transfers provided the circumstances that necessitate such mutual transfers are justifiable.

24

Point 5:— No extradorinary conditions are prevailing at present to apt any enhancement in the contingent amount of Rs 0 8-0 per school at present

Point 6:— Appointments to fill up vacancies, whenever they arise, are being made strictly in conformity with the existing rules, preference being given to candidates with previous service in Labour Department. This is purely on administrative matter and consultation with the Association to fill up such vacancies is wholly unnecessary.

Point 7:— Any difficulties experienced by the teachers in securing food grains etc., whenever brought to notice, are being referred to Tahsildars and Taluk Supply Officers for redress. No preferential treatment over others can be given to L. S teachers regarding supply of food grains etc.,

Point 8:— The pay bills are passed by 1st of each month by Dt. Labour Officer and sent to Treasury Section for adjustment Necessary steps to ensure speedy adjustment of pay bills of Labour School Teachers have already deen taken so that the teachers may receive their pay by the end of the second week.

Point 9:— As regrrds final payment of G. P F. amounts of late Sri H Laxmappa and Sri Hanumantappa, the matter is still under correspondence with the Accountant General. Steps are being taken to settle their claims expeditiously

Point 10:— Teachers who have completed their probation of two years service can enrol themselves as subscribers to the G. P. F. The initiative entirely lies with them Required forms are being sent to them when applied for for resubmission duly filled in. They will be sent to the Accountant General for assigning G. P. F Account No.

Point 11:— The payment of subsistance allowance can be made to the teachers during the period of suspension at the discretion of the responding authority. Besides, care is being taken to issue orders of posting to teachers under suspension sufficiently early so that they can join duty immediately on the expiry of the suspension period cases of teachers placed under suspension and not paid any allowance will be reviewed and the allowance paid in deserving cases.

ಹಳ್ಳಿಗಳು ಏನಾಗಿವೆ.

(ಕಳೆದ ವಾರದಿಂದ ಮುಂದುವರಿದುದು)

ಹಿಂದುಸ್ಥಾನದಲ್ಲಿ ಗ್ರಾಮ ಸಮಿತಿಗಳು ಅಥವಾ ಗ್ರಾಮ ಪಂಚಾಯಿತಿಗಳು ಅತಿ ಪುರಾತನ ಕಾಲದಿಂದಲೇ ವಾಡಿಕೆಯಲ್ಲಿದ್ದುವು. ಅವುಗಳು ಅನಾದಿಯಿಂದಲೇ ಪ್ರಚಾರಕ್ಕೆ ಬಂದು ಚಿರಕಾಲ ಬಾಳತಕ್ಕವುಗಳು. ರಾಮಾಯಣ-ಭಾರತಗಳಲ್ಲಿ ಇಂತಹ ಸಮಿತಿಗಳ ಕುರಿತು ಆಧಾರಗಳು ದೊರೆಯುತ್ತಿವೆ. ೧೯ನೆಯ ಶತಮಾನದ "ಕಾರ್ಲ್‌ಮಾರ್ಕ್ಸ್" ನು ಬರೆದ "ದಸ್ ಕೆಪಿಟಲ್" ಎಂಬ ಗ್ರಂಥದಲ್ಲೂ ಹಿಂದುಸ್ಥಾನದ ಗ್ರಾಮಪಂಚಾಯಿತಿಗಳ ಕುರಿತು ಸೂಚನೆ ಇದೆ. ಪರದೇಶದ ಯಾತ್ರಿಕರೂ, ಉದ್ದಾಮ ಲೇಖಕರೂ ಈ ಕುರಿತು ಬರೆದಿದ್ದಾರೆ. ಸರ್ ಚಾರ್ಲ್ಸ್ ಮೆಟ್‌ಕಾಲ್ಫೆ ಎಂಬುವನು ಬ್ರಿಟಿಷರಿಗೆ ಈ ಗ್ರಾಮ ಸಮಿತಿಗಳನ್ನು ಹಾಗೆಯೇ ಬಿಡುವಂತೆ ಸೂಚಿಸಿದ್ದರೂ ಬ್ರಿಟಿಷರು ಭೂ ಕಂದಾಯವನ್ನು ಹೆಚ್ಚಿಸುವ ನ್ಯಾಯಸ್ಥಾನ—ನ್ಯಾಯನಿರ್ವಹಣೆ ಇವುಗಳನ್ನೆಲ್ಲಾ ಕೇಂದ್ರೀಕರಿಸಿ ತಮ್ಮ ಕೈಯಲ್ಲಿಟ್ಟುಕೊಳ್ಳಬೇಕೆಂಬ ಆಸೆಯಿಂದ ಕೆಲವುಕಡೆ "ರೈತುವಾರಿ" ಪದ್ಧತಿಯನ್ನು ಜಾರಿಗೆ ತಂದು ಈ ಚಿಕ್ಕ ಚಿಕ್ಕ ಗ್ರಾಮ ಪಂಚಾಯಿತಿಗಳನ್ನು ಸಂಪೂರ್ಣ ನಾಶಮಾಡಿದರು. **ಬ್ರಿಟಿಷರು ಬೇಗನೇ ಹಿಂದುಸ್ಥಾನದಿಂದ ಹೊರಡಲಿರುವರು** ಜನತಾ ಸರ್ಕಾರವು ಇಡೀ ಹಿಂದುಸ್ಥಾನದಲ್ಲೇ ಅಧಿಕಾರಕ್ಕೆ ಬಂದು ಮಹಾತ್ಮಾ ಗಾಂಧಿಯವರ ಪ್ರಾಮುಖ್ಯ ಯೋಜನೆಯಾದ ಗ್ರಾಮ ಪುನರ್-ನಿರ್ಮಾಣ ಯೋಜನೆಯನ್ನು ಮುಂದುವರಿಸುತ್ತದೆ. ಈ ಯೋಜನೆಯು ಜನರ ದಿನ ದಿನದ ಜೀವನದಲ್ಲಿ ಹೆಚ್ಚಿನ ಸಂಬಂಧವುಳ್ಳದ್ದಾಗಿದೆ. ಕೆಲವು ಫಿರ್ಕಗಳನ್ನು ಇದಕ್ಕಾಗಿ ಆರಿಸಲಾಗಿದೆ. ಫಿರ್ಕ ಅಭಿವೃದ್ಧಿ ಯೋಜನೆಯಲ್ಲಿ ಹಳ್ಳಿಗರ ಆವಶ್ಯಕತೆಗಳನ್ನೆಲ್ಲಾ ಪರಿಶೀಲಿಸಿ, ಅದನ್ನು ಒದಗಿಸುವ ಏರ್ಪಾಡು ಮಾಡಲಾಗಿದೆ. ಮುಖ್ಯವಾಗಿ ಕೃಷಿ, ಗುಡಿ ಕೈಗಾರಿಕೆ, ಆರೋಗ್ಯ, ವಿದ್ಯಾಭ್ಯಾಸ, ರಾಜನೀತಿ ಇತ್ಯಾದಿಗಳೆಲ್ಲಾ ಈ ಯೋಜನೆಯಲ್ಲಿ ಸೇರಿಕೊಂಡಿವೆ. ಈ ಯೋಜನೆಯು ಕೆಳಗಿನ ಮಟ್ಟದಲ್ಲಿ ಆರಂಭಿಸಲ್ಪಟ್ಟು ಉನ್ನತಿಗೇರಿಸಲ್ಪಡುವುದು.

ಗ್ರಾಮ ಸಮಿತಿಗಳು ಆಗಾಗ ಪ್ರದರ್ಶನಗಳನ್ನು ಏರ್ಪಡಿಸುವುದರಿಂದ ಜನರಲ್ಲಿ ಪರಸ್ಪರ ಸ್ಪರ್ಧೆಯುಂಟಾಗಿ ಜನರು ತಮ್ಮ ನಿಪುಣತೆಯನ್ನು ಹೆಚ್ಚಿಸುವ ಅನುಕೂಲತೆ ಬರುವುದು. ಇದರಿಂದ ಅವರಿಗೂ ಬೇರೆಯವರಿಗೂ ಸಾಕಷ್ಟು ಹಿತವಾಗುವುದು. ಕೆಲವರು ಪ್ರದರ್ಶನ ಬಹುಮಾನಗಳಿಗೆ ಹೀಗೆ ವೆಚ್ಚಮಾಡುವ ಹಣವನ್ನು ಬೇರೇನಾದರೂ ಪ್ರಯೋಜನವುಳ್ಳ ಕೆಲಸಕ್ಕೆ ಉಪಯೋಗಿಸಬಹುದೆಂದು ಹೇಳಬಹುದು. ಆದರೆ ಇಂತಹ ಬಹುಮಾನಗಳು ಹಳ್ಳಿಗರಲ್ಲಿ ಸ್ಪರ್ಧೆಯನ್ನು ಹೆಚ್ಚಿಸಿ, ಕೃಷಿ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯವಾಗುವುದರಲ್ಲಿ ಸಂಶಯವಿಲ್ಲ. ಹೀಗೆ ಬಹುಮಾನಹೊಂದಿದ ಬೇಸಾಯಗಾರನು ಸುಧಾರಿತರೀತಿಯ ಕೃಷಿಯ ವಿಚಾರವಾಗಿ ಅನೇಕ ವಿಷಯಗಳನ್ನೂ ಕಲಿತುಕೊಳ್ಳಬೇಕಾಗಿದೆ.

ಪ್ರದರ್ಶನಗಳೂ, ಸ್ಪರ್ಧೆಗಳೂ ಜಾನುವಾರುಗಳ ಬೆಳವಣಿಗೆಯಲ್ಲಿ ತುಂಬ ಸಹಕಾರಿಗಳಾಗಬಹುದು. ಇವು ಹಳ್ಳಿಗರನ್ನು ಒಳ್ಳೆಹಾಲಿಗಾಗಿ ಒಳ್ಳೆ ಜಾತಿಯ ದನಗಳನ್ನೂ, ಉಳುವುದಕ್ಕೆ ಉತ್ತಮವಾದ ಎತ್ತುಗಳನ್ನು ಉಪಯೋಗಿಸುವುದಕ್ಕೂ ಪ್ರೋತ್ಸಾಹಿಸುವವು. ಅಲ್ಲದೆ ಪ್ರದರ್ಶನಗಳು ಎಲ್ಲಿಗೆ ಎಂತಹ ಜಾನುವಾರುಗಳು ಯೋಗ್ಯವಾದುವುಗಳೆಂದು ಅರಿಸಿಕೊಳ್ಳುವ ಶಕ್ತಿಯನ್ನು ಹಳ್ಳಿಗರಿಗೆ ಉಂಟುಮಾಡುವುವು.

ಹೀಗೆ ಗ್ರಾಮೋದ್ಧಾರ ಕಾರ್ಯದಲ್ಲಿ ಸರ್ಕಾರವೂ ಹಳ್ಳಿಗರೂ ಅನ್ಯೋನ್ಯ ಪ್ರೀತಿಯಿಂದ ಮುಂದುವರಿದರೆ ಇಂದು ಹಾಳು ಮೋರೆಯುಳ್ಳ ನನ್ನ ಪ್ರಾಂತವಹಾಗೂ ಭಾರತದ ಲಕ್ಷಗಟ್ಟಲೆ ಹಳ್ಳಿಗರು ಬೇಗನೆ ನಗುಮೋರೆಯುಳ್ಳವರಾಗಿ ಸಂತೋಷದಿಂದ ತುಂಬಿ ತುಳುಕದೆ ಇರಲಾರರು. ಅಂತಹ ಶುಭದಿನಗಳು ಬರಲಿ ಎಂದು ಎಲ್ಲರೂ ಹಾರೈಸೋಣ

ನ ಕ ಲೀ ತು ಪ್ಪ,

(ಜೆ. ಸಿ. ಕು ಮಾ ರ ಪ್ಪ.)

—o— —o—

ವನಸ್ಪತಿ 'ತುಪ್ಪ'ದ ಸಂಬಂಧದಲ್ಲಿ ನಾ ವು ಬರೆದ ಬರೆಹಗಳಿಗಾಗಿ ಸಾರ್ವಜನಿಕರಿಂದ ಪ್ರ ಶಂ ಸಾರ್ಹ ಪತ್ರಗಳ ಕಾರಖಾನೆದಾರರಿಂದ ಸ್ವಾಭಾವಿಕ ವಾಗಿ ತೆಗಳುವ ಪತ್ರಗಳ ಸುರಿಮಳೆಯಾಗಿದೆ. ನಮ್ಮ ಕಡೆಗೆ ಗೌರವಾರ್ಹ ಗೆಳೆಯರೊಬ್ಬರು ಈ ಪದಾರ್ಥಕ್ಕೆ "ನಕಲಿ" (ಇಮಿಟೇಶನ) ತುಪ್ಪ ಎಂದು ಕರೆದಿದ್ದಾರೆ. ಯುರೋಪಿನಲ್ಲಿ ಬೆಣ್ಣೆ ಇಮಿಟೇಶನಿಂದ ಮಾಡಿದ ಪದಾರ್ಥಗಳಿಗೆಲ್ಲ 'ಮಾರ್ಗರಾಯಿನ್' ಎಂದು ಕಾಯದೆಬದ್ಧ ಹೆಸರು ಕೊಟ್ಟಿರುವರಂತೆ. ಈ ಹೆಸರಿಗೂ ಕಾಯದೆಯಿಂದ ಮನ್ನಣೆ ಸಿಕ್ಕುವುದೆಂದು ಆಶಿಸುತ್ತೇವೆ 'ನಿರ್ಬಲೀಕೃತ ವನಸ್ಪತಿ ಎಣ್ಣೆ' ಎಂದು ಮತ್ತೊಂದು ಹೆಸರನ್ನೂ ಇಡಬಹುದಾಗಿದೆ.

ಕಾರಖಾನೆದಾರರು ಎಬ್ಬಿಸಿದ ಕೂಗು ಮತ್ತು ಅದಕ್ಕೆ ನಮ್ಮ ಪ್ರತಿಕ್ರಿಯೆಯನ್ನು ಕೆಳಗೆಕೊಟ್ಟಿದೇವೆ

ಕಾರಖಾನೇದಾರರ 'ಶಾಸ್ತ್ರಜ್ಞ' ಸೇವಕನೊಬ್ಬನು ಹೀಗೆ ಬರೆಯುತ್ತಾನೆ.

"ಆಕಳ ತುಪ್ಪದ ಗೂಡ ವನಸ್ಪತಿಯನ್ನು ತುಲನೆ ಮಾಡಿದ್ದಾದರೆ ನಿಶ್ಚಿತವಾಗಿ ಅದು ಪೋಷಕ ದ್ರವ್ಯಗಳಲ್ಲಿ ಕಡಮೆ ತರಗತಿಯದಾಗಿದೆ. ಆದರೆ ಅದನ್ನು ಯಾವ ಎಣ್ಣೆಯಿಂದ ಮಾಡಲಾಗಿದೆಯೋ ಆ ಎಣ್ಣೆಯ ಕೂಡ ತುಲನೆಮಾಡಿ ನೋಡಿದ್ದಾದರೆ ನಿಶ್ಚಿತವಾಗಿ ಅದು ಹೆಚ್ಚು ಪೌಷ್ಟಿಕ ಪದಾರ್ಥವಾಗಿದೆಂದು ಗೊತ್ತಾಗುವದು. ಏಕೆಂದರೆ ಅದಕ್ಕೆ ಹೆಚ್ಚು ರುಚಿಯಿದೆ ಮತ್ತು ಅದನ್ನು ಹೆಚ್ಚುದಿನ ಇಡಲಿಕ್ಕೆ ಬರುವದು. ಈ ಹೇಳಿಕೆ ಅರ್ಧಸತ್ಯ ಮತ್ತು ವಸ್ತುಸ್ಥಿತಿಯನ್ನು ಹತ್ತಿಕ್ಕುವ ಸಂಗತಿಗಳಿಂದ ಕೂಡಿದ್ದಾಗಿದೆ. ಇವುಗಳ ಆಧಾರದ ಮೇಲೆಯೇ ಕಾರಖಾನೆದಾರರು ತಮ್ಮಪಕ್ಷವನ್ನು ಸಮರ್ಥಿಸುತಿರುವರು. ತುಪ್ಪದಕೂಡ ತುಲನೆ ಮಾಡುವಾಗ ವನಸ್ಪತಿ 'ಆಹಾರಸತ್ವ'ದಲ್ಲಿ ಕಡಮೆ ತರಗತಿಯದಾಗಿದೆಂದು ಒಪ್ಪುತ್ತಾರೆ. ಅರ್ಥಾತ್ ಪೌಷ್ಟಿಕತೆಯಲ್ಲಿ ಅದು ಕಡಮೆ ದರ್ಜೆಯದೆಂದು ಒಪ್ಪುತ್ತಾರೆ.

ಆದರೆ ಎಣ್ಣೆಯಗೂಡ ತುಲನೆ ಮಾಡುವಾಗ ಪೌಷ್ಟಿಕತೆಯ ಕಡೆಗೆ ಗಮನಿಸುವದಿಲ್ಲ. ಆದರೆ ಅದು ಬಹಳ ದಿನ ಬಾಳುವದು ಮತ್ತು ಹೆಚ್ಚುರುಚಿಕರವಾಗಿದೆಂದು ಹೇಳುವರು. ವಾಚಕರಿಗೆ ಶ್ರೀಮ್ಯ ಆಹಾರ ಪದಾರ್ಥ ಎಂದರೆ ಪೌಷ್ಟಿಕತೆಯೆಂದೇ ಅರ್ಥವಾಗುವದು.

ತುಲನೆ ಮಾಡುವದಾದರೂ ಹತ್ತೀಕಾಳಿನ ಎಣ್ಣೆ ಇಲ್ಲವೆ ಶೇಂಗಾ ಎಣ್ಣೆ ಗೂಡ ಮಾಡುವರಲ್ಲದೆ ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಅಥವಾ ಸಾಸವಿ ಎಣ್ಣೆಯ ಗೂಡ ಮಾಡುವದಿಲ್ಲ ಈ ಎಣ್ಣೆಗಳನ್ನೆ ಸಾಮಾನ್ಯವಾಗಿ ಆಹಾರವೆಂದೂ ಸೇವಿಸಲಾಗುತ್ತದೆ.

ಇದಲ್ಲದೆ ಗಿರಣಿಗಳಲ್ಲಿ ತಯ್ಯಾರಾದ ಎಣ್ಣೆಯೊಂದಿಗೆ ತುಲನೆ ಮಾಡುವರಲ್ಲದೆ ಗಾಣಗಳಲ್ಲಿ ತಯಾರಾದ ಎಣ್ಣೆಯ ಗೂಡ ಮಾಡುವದಿಲ್ಲ ವಾಚಕರಲ್ಲಿ ತಪ್ಪು ತಿಳಿವಳಿಕೆಯನ್ನುಂಟು ಮಾಡುವದಕ್ಕಾಗಿಯೆ ಹೀಗೆ ಮಾಡಲಾಗುತಿದೆಂಬುದು ಸುಸ್ಪಷ್ಟವಾಗಿದೆ.

ಕಾರಖಾನೆದಾರರು ದೊಡ್ಡ ಪ್ರಮಾಣದಲ್ಲಿ ಜಾಹೀರಾತಿನ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರು ಗೊಂದಲದಲ್ಲಿ ಬೀಳುವದು ಸ್ವಾಭಾವಿಕ ಅವರು ವನಸ್ಪತಿಯನ್ನು ಮಾರ್ಗೆರಾಯಿನಕ್ಕೆ ಹೋಲಿಸುತ್ತಾರೆ ಈ ತುಲನೆ ಸಬಲವಾಗಿರುವದಿಲ್ಲ. ವನಸ್ಪತಿಯನ್ನು ಗಿರಣಿಯಲ್ಲಿ ತಯಾರಾದ ಹತ್ತೀಕಾಳಿನ ಎಣ್ಣೆ ಇಲ್ಲವೆ ಶೇಂಗಾದಿ ಎಣ್ಣೆಯಿಂದ ಸಿದ್ಧಮಾಡುತಿದ್ದರೆ ಮಾರ್ಗೆರಾಯಿನ್

ಇಂಥ ಕಡಿಮೆ ತರಗತಿಯ ನಿರ್ಗಂಧೀಕೃತವನಸ್ಪತಿ ಎಣ್ಣೆಗಳಿಂದ ತಯಾರಮಾಡುವರೆಂದು ತಿಳಿಯುವ ದಿಲ್ಲ ನಿರ್ಗಂಧೀಕೃತ ಎಣ್ಣೆಗಳು ಅಸ್ತಿತ್ವದಲ್ಲಿ ಬರುವ ಮೊದಲೆ ಈ ಮಾರ್ಗರಾಯಿನ್‌ವನ್ನು ಮಾಡುತಿದ್ದ ರೆಂಬುದು ಗೊತ್ತಾಗುತ್ತದೆ. ಸಾಮಾನ್ಯವಾಗಿ ಅದನ್ನು ವೃದುಪ್ರಾಣಿಕೊಬ್ಬಿನಿಂದ ಅಥವಾ ಪ್ರಾಣಿಕೊಬ್ಬು ಮತ್ತು ವನಸ್ಪತಿ ಎಣ್ಣೆಗಳ ಮಿಶ್ರಣದಿಂದ ಮಾಡಲಾಗುತ್ತಿದೆ. ಹಾಲಿನಲ್ಲಿ ಅದನ್ನು ಕಡಿದು ಮತ್ತು ಬಫ್ರಿನಲ್ಲಿ ಕೂಡಿಸಿ ಹಾಲಿನ ಪದಾರ್ಥವೆಂದು ಅದು ತೋರುವಂತೆ ಯೋಜಿಸಲಾಗುತ್ತಿದೆ. ವನಸ್ಪತಿ ಕೊಬ್ಬಿನಿಂದ ತಯಾರಾದ ಈ ಮಾರ್ಗರಾಯಿನ್ ಯುರೋಪ ಮತ್ತು ಅಮೇರಿಕೆಯಲ್ಲಿ ಹೆಚ್ಚಾಗಿ ಉಪಯೋಗಿಸಲಾಗುತಿದೆ ಮತ್ತು ಪ್ರಮುಖ ಸಂಶೋಧಕರು ಇದು ಆರೋಗ್ಯಕರ ಮತ್ತು ಪೌಷ್ಟಿಕವಾಗಿದೆಂದು ಒಮ್ಮತದಿಂದ ಒಪ್ಪುವರಾದ್ದರಿಂದ ಗಿರಣಿಗಳಲ್ಲಿ ತಯಾರಾದ ಕಡಮೆತರಗತಿಯ ಈ ವನಸ್ಪತಿ ಎಣ್ಣೆಯೇ ಅಷ್ಟೇ ಪೌಷ್ಟಿಕವಾಗಿದೆಂದು ಯಾವ ತರ್ಕ ಸರಣಿಯಿಂದಲೂ ಹೇಳಲಿಕ್ಕೆ ಬರಲಾರದು. ಈ ತರ್ಕ ಸರಣಿಯನ್ನು ಇನ್ನಷ್ಟು ಮುಂದೆ ಜಗ್ಗಿ ತುಪ್ಪಪೌಷ್ಟಿಕ ಪದಾರ್ಥವಾದ್ದರಿಂದ ವನಸ್ಪತಿ ತುಪ್ಪವೂ ಪೌಷ್ಟಿಕವಾಗಿದೆಂದು ಏಕೆ ಹೇಳಬಾರದು?

ಅವರು ವನಸ್ಪತಿಯ ಬೆಲೆಯನ್ನು ಡೇರೀ ತುಪ್ಪದಗೂಡ ಹೋಲಿಸಿ ಅದು ಒಂದು ಮೂರಾಂಶವಿದೆಂದು ಹೇಳಿಕೊಳ್ಳುತಿರುವರು. ನಿಜವಾಗಿ ತುಲನೆ ಮಾಡಬೇಕಾದರೆ ಗಿರಣಿಗಳಲ್ಲಿ ತಯಾರಾದ ಶೇಂಗಾದ ಎಣ್ಣೆಯ ಬೆಲೆಗೆ ಈ ವನಸ್ಪತಿಯ ಬೆಲೆಯನ್ನು ಹೋಲಿಸಿ ನೋಡಬೇಕು ಆಗ ವನಸ್ಪತಿ ಬೆಲೆ ಗಂಜಿಕೆ ಗಂರಷ್ಟು ಹೆಚ್ಚು ತುಟ್ಟಿ ಎನಿಸದಿರಲಾರದು. ಸಂಶಯಗ್ರಸ್ತರಾಗದ ಸಾರ್ವಜನಿಕರ ಮೇಲೆ ಈ ಭಾರವಾದ ಕರವನ್ನು ಕಾರಖಾನೆದಾರರು ಹೇಗೆ ಜನರಿಗೆ ಹೆಚ್ಚಿಗೆ ಇಲ್ಲವೆ ಆ ಪ್ರಮಾಣದಲ್ಲಿ ಯಾವ ಹಿತವನ್ನು ಸಾಧಿಸಿರುವರೆಂದು ಕೇಳುವ ಅಧಿಕಾರ ನಮಗಿಲ್ಲವೆ?

ತಪ್ಪು ತಿಳಿವಳಿಕೆಯನ್ನುಂಟುಮಾಡುವಂಥ ಇಂಥ ಜಾಹೀರಾತುಗಳನ್ನು ಪ್ರಕಟಿಸಿದ್ದಕ್ಕಾಗಿ ಕಾರಖಾನೇದಾರರು ಸಂರಕ್ಷಣ [ಪದಾರ್ಥಗಳ ಮಾರಾಟ] ನಿಯಮಗಳನ್ವಯ ಖಟ್ಲೆಗೆ ಗುರಿಯಾಗಲರ್ಹರಾಗಿರುವರೆಂದೂ ಬಳಕೆಗಾರರನಪ್ಪ ವರಿಹಾರಕ್ಕೂ ಅವರು ಹೊಣೆಗಾರರಾಗಿರುವರೆಂದೂ ಯಾರಾದರೂ ಅಭಿಪ್ರಾಯ ಪಡಬಹುದಾಗಿದೆ.

ಗ್ರೇಟ ಬ್ರಿಟನ್‌ದಲ್ಲಿ ಗಾಣದಲ್ಲಿ ತಯಾರಾದ ಆಲಿವ್ ಎಣ್ಣೆಯನ್ನು ಬಹಳವಾಗಿ ಪ್ರಶಂಸಿಸಲಾಗುತ್ತದೆ. ನನ್ನಮಟ್ಟಿಗೆ ಹೇಳಬೇಕಾದರೆ ಗಿರಣಿ ಎಣ್ಣೆಗಳಿಗಿಂತ ಗಾಣಗಳಲ್ಲಿ ತಯಾರಾದ ಎಣ್ಣೆಗಳು ಹೆಚ್ಚು ಶ್ರೇಷ್ಠವೆಂದು ನನ್ನ ಅಭಿಪ್ರಾಯ ಗಾಣಗಳಲ್ಲಿ ತಯಾರಾದ ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಇಲ್ಲವೆ ಸಾಸವಿ ಎಣ್ಣೆಗಿಂತ ವನಸ್ಪತಿ ಎಣ್ಣೆ ಶ್ರೇಷ್ಠವಾಗಿದೆಂದು ಕಾರಖಾನೆದಾರರು ಸಿದ್ಧಮಾಡಬಲ್ಲರೆಂದು ನಾವು ಅಪೇಕ್ಷಿಸಿದ್ದೆವು. ಅಂದರೇನೆ ಅವರಿಗೆ ವಾದಿಸಲು ಒಂದು ಬಗೆಯ ಸ್ಥೈರ್ಯ ಬರುವದು. ಗಾಣದ ಎಣ್ಣೆ ಖಚ್ಚಾಗುವದರಿ ಆ ಪದ್ಧತಿಯ ದೋಷವಲ್ಲ. ಅದರೆ ಗಾಣಿಗನ ಅಜಾಗರೂಕತೆಯೆ ಕಾರಣ.

'ದೇಶದಲ್ಲಿ ಕೊಬ್ಬಿನ ಪ್ರಚಂಡ ಕೊರತೆ'ಯಿದೆಂದು ಕಾರಖಾನೆದಾರರು ಕೊಚ್ಚಿಕೊಳ್ಳುತಿರುವರು. ಯಾವದೇ ರೀತಿಯಲ್ಲಿ ಅವರು ಕೊಬ್ಬಿನ ಪ್ರಮಾಣವನ್ನು ಹೆಚ್ಚಿಸಿರುವರೇ? ಅವರು ಸಾಧಿಸಿದ್ದೆಂದರೆ ಒಳ್ಳೆ ಆಹಾರಸತ್ವವನ್ನು ಕೆಟ್ಟ ಮತ್ತು ವೆಚ್ಚದ ಪದಾರ್ಥವನ್ನಾಗಿ ಮಾರ್ಪಡಿಸಿದ್ದು. ಅದು "ಹೆಚ್ಚು ರುಚಿಕರ ಮತ್ತು ಬಹಳ ದಿನತಾಳುವಂತೆ" ಮಾತ್ರ ಮಾಡಲಾಗಿದೆ.

ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಎರಡು ಮಾರ್ಗಗಳಿವೆ. ಮೊದಲನೆಯದಾಗಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವದು; ಎರಡನೆಯದಾಗಿ ತಿನ್ನುವ ಎಣ್ಣೆ ಕಾಳುಗಳು ಹೊರಗೆ ಹೋಗದಂತೆ

ವಿಧಿಸಿ ಮತ್ತು ಎಣ್ಣೆ ಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಿ ಗಾಣದಲ್ಲಿ ತಯಾರಾಗುವ ಎಣ್ಣೆಯ ಉತ್ಪಾದನೆಯನ್ನು ಹೆಚ್ಚಿಸುವದು.

ವನಸ್ಪತಿಯಲ್ಲಿರುವ ನಿಕೆಲ್‌ದ ಪರಿಣಾಮಗಳು ಬಹಳ ದಿನಗಳ ನಂತರ ವಿಷಕಾರಿಯೆಂದು ಸಿದ್ಧವಾಗಬಹುದು' ಎಂದು ಹಿಂದುಸ್ಥಾನ ವನಸ್ಪತಿ ಕಾರಖಾನೇದಾರ ಸಂಘದ ಜೆರಮನ್‌ರು ತಮ್ಮ ಪತ್ರದಲ್ಲಿ ಉಲ್ಲೇಖಿಸಿ ಯಾವದೇ ಬಗೆಯ ದುಷ್ಪರಿಣಾಮಗಳಿಗಾಹುತಿಯಾಗದೆ ಮಾನವರು ದೊಡ್ಡ ಪ್ರಮಾಣದಲ್ಲಿ ನಿಕೆಲ್‌ನ್ನು ಸೇವಿಸಿ ಹೊರಗೆ ಬಿಡಬಲ್ಲರೆಂದು ಕಂಡು ಬಂದದ್ದರಿಂದ ನಿಕೆಲ್ಲಿನಿಂದ ಯಾವದೇ ಬಗೆಯ ಹಾನಿಯಿಲ್ಲೆಂದೂ ಆಶ್ವಾಸಿಸಿದ್ದಾರೆ. ಜನರು ಉಪಯೋಗಿಸುತಿರುವ ಕ್ಯಾರೆಟ್, ಉಳ್ಳಿಗಡ್ಡಿ, ಟೋಮಟೊ ಲೆಬ್ಯುಸ್ ಮೊದಲಾದವುಗಳಲ್ಲಿ ವನಸ್ಪತಿಯಲ್ಲಿರುವದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ನಿಕೆಲ್ ಇರುವದೆಂದೂ ಅಭಿಪ್ರಾಯಪಡುತ್ತಾರೆ. ಪಲ್ಲೆ ಕಾಯಿಗಳಲ್ಲಿರುವ ನಿಕೆಲ್ ವಿಶ್ರಾಣರೂಪವಾಗಿದ್ದು ವನಸ್ಪತಿಯಲ್ಲಿಯ ನಿಕೆಲ್ ನಿಶ್ಚಿತವಾಗಿ ಒಗ್ಗಲಾರದ ಪದಾರ್ಥವೆಂಬ ಸಂಗತಿ ಅವರಿಗೆ ತಿಳಿದಿಲ್ಲೆಂದು ತೋರುತ್ತದೆ. ಇಂಥ ಪದಾರ್ಥಗಳ ಸೇವನೆಯ ಸಂಬಂಧದಲ್ಲಿ ಮಾನವ ಶರೀರದ ಯೋಗ್ಯತೆಯಲ್ಲಿ ಮಹತ್ವದ ಭೇದ ಉಂಟಾಗುವದೆಂಬುದು ಇದರಿಂದ ಗೊತ್ತಾಗುವದು. ಒಂದನ್ನು ಹೊರಗೆ ಹಾಕಬಹುದು. ಆದರೆ ಮತ್ತೊಂದು ಒಳಗೆ ವಿಷಕಾರಿ ಪದಾರ್ಥವಾಗಿ ಪರಿಣಮಿಸಬಹುದು.

ಕರ್ನಲ್ ಸೋಖೆಯವರು ಇಲಿಗಳ ಮೇಲೆ ಮಾಡಿದ ಪ್ರಯೋಗಗಳು ಎರಡು ತಿಂಗಳ ಮಾತ್ರ ಹಳೆಯುವೆಂದು ಹೇಳಿ ಜೆರಮನ್‌ರು ಅವನ್ನು ಕೀಳ್ಕಳೆಯುತ್ತಾರೆ. ಸರ್ ಎಸ್. ಎಸ್ ಸೋಖೆಯವರನ್ನು ಎತ್ತಿಹಿಡಿಯಲು ನಾವೇನೂ ಹೊರಟಿಲ್ಲ. ತಮ್ಮ ರಕ್ಷಣೆ ಮಾಡಿಕೊಳ್ಳಲು ಅವರು ಸಾಕಷ್ಟು ಸಮರ್ಥರಿರುವರು ಪ್ರಶ್ನೆಯನ್ನೂ ಅಧಿಕಾರಿಗಳ ವಿಚಾರಣೆಯಲ್ಲಿರುವಾಗ ಇನ್ನೂ ನಿರ್ಣಯಿಸಲ್ಪಡದಿದ್ದ ಸಾಕ್ಷಿ ಪುರಾವೆಗಳ ಮೇಲೆಯೆ ವನಸ್ಪತಿಯನ್ನು ನಿಷೇಧಿಸುವದೊಪ್ಪತಕ್ಕ ಮಾರ್ಗವಾಗಿ ಇಡೀ ದೇಶದ ವಿಶೇಷತಃ ಆಹಾರ ಪದಾರ್ಥೋದ್ಯಮಕ್ಕೆ ಅಪಕಾರಮಾಡಿದಂತಾಗುತ್ತದೆಂದು ಮುಂತಾಗಿ ಜೆರಮನ್‌ರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿ ತಜ್ಞ ಸಮಿತಿಯವರು ತಮ್ಮ ನಿರ್ಣಯಗಳನ್ನು ಹೊರಗೆಡುವವರೆಗೆ ಟೀಕೆಯನ್ನು ನಿಲ್ಲಿಸಿರೆಂದು ಉಪದೇಶಿಸುತಿರುವರಿಂದು ಅವರು ತಪ್ಪು ಸ್ಥಳದಲ್ಲಿ 'ಸೇಫ್ಟೀ ವಾಲ್ವ್' ಇಡುತಿರುವರೆಂದು ನಮಗೆನಿಸುತ್ತದೆ. ಮಗುವೊಂದನ್ನು ಕರೆದುಕೊಂಡು ನಾನು ಅರಣ್ಯದೊಳಗಿಂದ ಅಡ್ಡಾಡಿದೆನೆಂದು ತಿಳಿಯಿರಿ. ಆಗ ಆ ಮಗುವು ಅರಣ್ಯದಲ್ಲಿಯ ಹಣ್ಣುಗಳನ್ನು ಹರಿಯಹತ್ತಿದರೆ ಮತ್ತು ಅದೇ ಹಾದಿಯಿಂದ ಹೋಗುವ ಹಳ್ಳಿಗರಿಬ್ಬರು ಆ ಹಣ್ಣುಗಳ :ವಿಷಕಾರಿಗುಣದ ಬಗ್ಗೆ ಪರಸ್ಪರ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದರ ವಿಷಕಾರಿ ಸ್ವಭಾವದ ಈ ಪ್ರಶ್ನೆ "ಸಬ್ ಜ್ಯುಡಿಸ್" ಆಗಿರುವವರೆಗೆ ಆ ಮಗು ಹಣ್ಣನ್ನು ತಿನ್ನುತ್ತಾ ಹೋಗಲಿ ಎಂದು ನಾನು ಹೇಳಬೇಕೆ? ತದ್ವಿರುದ್ಧವಾಗಿ ಆ ಹಣ್ಣುಗಳು ಆರೋಗ್ಯಕರವಾಗಿವೆಂದು ಸಿದ್ಧವಾಗುವವರೆಗೆ ಅವನ್ನು ತಿನಕೂಡದೆಂದು ಮಗುವಿಗೆ ವಿಧಿಸುವದೆ ಜಾಣತನದ ಮಾರ್ಗವಾಗಿರುವದು. ಅದೇ ರೀತಿಯಾಗಿ ಈ ಪ್ರಶ್ನೆ 'ಸಬ್ ಜ್ಯುಡಿಸ್' ಆಗಿದೆಂದು ಜೆರಮನರಿಗೆನಿಸಿದರೆ ವನಸ್ಪತಿಯು ಅಪಾಯಕರವಾಗಿಲ್ಲ ಎಂದು ಸ್ಪಷ್ಟ ರೀತಿಯಿಂದ ಸಿದ್ಧವಾಗುವವರೆಗೆ ಅದರ ಉತ್ಪಾದನೆಯನ್ನೆ ನಿಲ್ಲಿಸಿಬಿಡುವದು ಉಚಿತವೆಂದು ನಮ್ಮ ಅಭಿಪ್ರಾಯ. ವನಸ್ಪತಿ ಅನಾರೋಗ್ಯಕರವಾಗಿಲ್ಲೆಂದು ಸಿದ್ಧಪಡಿಸುವ ಹೊಣೆಯಂತೂ ಕಾರಖಾನೆದಾರರ ಮೇಲೆಯೆ ಇದೆಂಬುದು ನಿರ್ವಿವಾದ. ವನಸ್ಪತಿ ಕಾರಖಾನೆದಾರರು ಕಾಯದೆಬದ್ಧ ತಡೆಯಿಲ್ಲದೆ ತಾವೆ ಈ ಸಮಂಜಸ ಮಾರ್ಗವನ್ನು ಅನುಸರಿಸುವರೆಂದು ನಂಬುತ್ತೇವೆ.

ಚೂರಿಯಿಂದ ಇರಿಯುವ ಮತ್ತು ಕೊಲೆಮಾಡುವ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗುವದೆಂದು (ಅಥವಾ ಕಠಿನೀರಿನಶಿಕ್ಷೆ) ಮಧ್ಯಪ್ರಾಂತದ ಸರಕಾರದವರು ಪ್ರಕಟಿಸಿರುವರು.

ದಿ ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಲೇಬರ್ ಸ್ಕೂಲ್ ಟೀಚರ್ಸ್ ಅಸೋಸಿಯೇಷನ್, ಬಳ್ಳಾರಿ.

ಲೇಬರ್ ಶಾಲೋಪಾಧ್ಯಾಯರ ಬೇಡಿಕೆಗಳು

ಕಲೆಕ್ಟರವರ ಉತ್ತರ.

Memorandum of the collector Bellary. K. N. Anantharaman Esq., I. C. S. Ref 6177/46 L 2. Dated 13—5—1947.

[ಬಳ್ಳಾರಿ ಜಿಲ್ಲಾ ಕಲೆಕ್ಟರರಾದ ಶ್ರೀ ಕೆ. ಯರ್. ಅನಂತರಾಮನ್ ಐ. ಸಿ. ಯಸ್. ರವರು ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘಾಧ್ಯಕ್ಷರಿಗೆ ಹೀಗೆ ಬರೆದಿರುವರು]

ನೀವು 14-3-'47 ರ ದಿನ ಕೊಟ್ಟ ಅರ್ಜಿಯ ಅಂಶಗಳಿಗೆ ಜವಾಬು ಕೊಡುವ ವಿಷಯಕ್ಕೆ ನಿಮ್ಮ ಸಂಘವು ಇನ್ನೂ ರಿಕಗ್ನಾಯಿಸ್ ಆಗಿಲ್ಲ ಈ ಕಾರಣ ನಿಮಗೆ ಉತ್ತರಕೊಡಲು ನಾವು ಬದ್ಧರಲ್ಲವಾದರೂ ನೀವು ಕೇಳಿದ ಅಂಶಗಳಿಗೆ ಈ ಪ್ರಕಾರ ಸಮಾಧಾನ ಕೊಡುತ್ತೇವೆ.

ಉಪಾಧ್ಯಾಯರ ಕಾಯಂ ವಿಷಯ:— ಜಿ. ಒ. 355 P. W. D. 2-2-46 ರ ಪ್ರಕಾರಕ್ಕೆ 10 ವರ್ಷಗಳಿಗಿಂತ ಹೆಚ್ಚಿನ ಸರ್ವಿಸುಳ್ಳ ಮೂರು ಗ್ರೇಡುಗಳಲ್ಲಿನ 50% ಉಪಾಧ್ಯಾಯರು ಕಾಯಂ ಮಾಡಲ್ಪಟ್ಟಿರುವರು. ಲೋಯರ್‌ನಲ್ಲಿ 14 ಜನರಿಗೆ 7 ಜನ, ಹೈಯರ್‌ನಲ್ಲಿ 59 ಕ್ಕೆ 29 ಜನ, ಸೆಕಂಡರಿಯಲ್ಲಿ ಒಬ್ಬರಿಗೆ ಒಬ್ಬರನ್ನು ಕಾಯಂ ಮಾಡಲಾಗಿದೆ. ಈಗಿರುವ ರೂಲ್ಸು ಪ್ರಕಾರಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡಲಾಗಿದೆ. 10 ವರ್ಷ ಅಥವಾ ಹೆಚ್ಚಿನ ಸರ್ವಿಸಿನವರನ್ನು ಕಾಯಂ ಮಾಡುವ ಯೋಜನೆ ಸರ್ಕಾರದ ವಿಮರ್ಶೆಯಲ್ಲಿದೆ. ಅವರ ಉತ್ತರ ನಿರೀಕ್ಷಣೆಯಲ್ಲಿದ್ದೇವೆ

ಮಿಡ್‌ಡೇ ಮಿಲ್:— 6 ದಿನಗಳು ಊಟ ಕೊಡಲು ನಾವು ಲೇಬರ್ ಕಮಿಷನರಿಗೆ ಸಿಫಾರ್ಸು ಮಾಡಿದ್ದೇವೆ ಅವರ ಉತ್ತರ ನಿರೀಕ್ಷಣೆ ಮಾಡುತ್ತಿರುವೆವು.

ಪುಸ್ತಕ ಬಟ್ಟೆ ಪೂರೈಕೆ:— ನಮಗೆ ಕೊಟ್ಟ ಹಣದ ಪೂರೈಕೆಗನುಸಾರವಾಗಿ ವರ್ಷಕ್ಕೊಂದು ಸಲ ಹರಿಜನ ಬಾಲ ಬಾಲೆಯರಿಗೆ ಬಟ್ಟೆ ಪುಸ್ತಕ ಕೊಡಿಸುತ್ತಿದ್ದೇವೆ

ಕಜ್ಜಿ ವಗೈರೆ ರೋಗಗಳಿಗೆ ಔಷಧ:— ಲೇಬರ್ ಆಫೀಸರ್, ಲೇಬರ್ ರಿನಿಸ್ಪೆಕ್ಟರ್‌ರವರು ತಮ್ಮ ಸಂಚಾರದಲ್ಲಿ ಕಜ್ಜಿಗೆ ಮುಲಾಮು ಕೊಡುತ್ತಿರುವರು. ಕಣ್ಣಿಗೆ ಪಟುಕದ ನೀರು ಕೊಡುವ ವಿಷಯಕ್ಕೆ ಬರೆದಿದ್ದೇವೆ.

ಸ್ಕೇಲ್ ಆಫ್ ಪೇ ಇಂಕ್ರಿಮೆಂಟ್, ಟಿ. ಎ. ಬಾಕಿ:— ಈ ಬಾಕಿಗಳೆಲ್ಲಾ ಒಂದು ವರ್ಷಕ್ಕಿಂತ ಹೆಚ್ಚಾಗಿರುವ ಕಾರಣ ಅಕೌಂಟೆಂಟ ಜನರಲ್‌ರ ಒಪ್ಪಿಗೆಗೆ ಬರೆದಿದ್ದೇವೆ. ಡಿಪಾರ್ಟುಮೆಂಟಿನವರಿಟ್ಟಿರುವ ಟಿಪ್ಪಣಿಗಳನ್ನು ಪೂರ್ತಿ ಸುವುದಾದರೆ ಇಂಕ್ರಿಮೆಂಟ್ ಕೊಡಲಾಗುತ್ತೆ. ಈ ವಿಷಯದಲ್ಲಿ ಲೇಬರ್ ಕಮಿಶನರವರಿಂದ ನಮಗೆ ಸೂಚನೆಗಳು ಬೇಕು.

ರಾಜಿ ಕಬೂಲಿವರ್ಗ:— ಡಿ. ಇ. ಒರ ಒಪ್ಪಿಗೆಯಿಂದ ಸ್ಕೂಚುಯಲ್ ಟ್ರಾನ್ಸ್‌ಫರ್ ಮಾಡಬಹುದು. ಪದೇ ಪದೇನರ್ಗಾಯಿಸುವದರಿಂದ ತನಿಖೆ ಅಧಿಕಾರಿಗಳಿಗೆ ಉಪಾಧ್ಯಾಯರು ಮಾಡಿದ ಕೆಲಸ ಗೊತ್ತಾಗುವುದಿಲ್ಲ ಶಾಲೆಯ ಅಭಿವೃದ್ಧಿಗೆ ಕುಂದಾಗುತ್ತದೆ. **ರಾಜಿ ಅರ್ಜಿಗಳಾದರು ಎರಡು ವರ್ಷಗಳಿಗೊಂದುಸಲವಾದರೆ ಒಳ್ಳೆಯದು** ಏನೋ ಕೆಲ ಲೋಪಗಳನ್ನು ತಪ್ಪಿಸಿಕೊಳ್ಳಲು ರಾಜಿವರ್ಗಕ್ಕೆ ಬರೆದುಕೊಂಡರೆ ಸಾಗಲಾರದು. **ನ್ಯಾಯವಾದವುಗಳನ್ನು** ಸಮರ್ಥಿಸುವದರಲ್ಲಿ ಕಲೆಕ್ಟರಿಗೆ ಆಕ್ಷೇಪಣೆ ಇಲ್ಲ

ಕಟಿಂಜೆನ್ಸಿ:— ಪ್ರತಿಶಾಲೆಗೆ ೧-೫-೦ ಹೆಚ್ಚುಮಾಡುವದು ಈಗಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ.

ನಿಯಾಮಕ— ಖಾಲಿಬಿದ್ದಾಗ ಗೂಲ್ಸ್‌ಪ್ರಕಾರಕ್ಕೆ ಉಪಾಧ್ಯಾಯರ ನಿಯಾಮಕವಾಗುತ್ತೆ ಲೇಬರ್ ಡಿಪಾರ್ಟಮೆಂಟಿನಲ್ಲಿ ಹಿಂದೆ ಸರ್ವಿಸ್‌ಮಾಡಿದವರಿಗೆ ರಿಯಾಯ್ತಿಕೊಡಲಾಗುತ್ತೆ ಅವರೆ ಇವುಗಳನ್ನು ತುಂಬುವಾಗ ನಿಮ್ಮ ಸಂಘದವರ ಸಲಹೆ ತೆಗೆದುಕೊಳ್ಳುವುದನಾವಶ್ಯಕ.

ಆಹಾರಧಾನ್ಯದ ಪೂರೈಕೆ:— ಆಹಾರಧಾನ್ಯ ದೊರಕುವುದು ಕಷ್ಟವೆಂದು ಸೂಚಿಸಿದ ಸಂದರ್ಭಗಳಲ್ಲಿ ತಹಶೀಲ್ದಾರ್, ತಾಲೂಕು ಸಪ್ಲೈ ಆಫೀಸರವರ ಮುಖಾಂತರ ಅನುಕೂಲಮಾಡಿಸಬಹುದು. ಲೇಬರ್ ಉಪಾಧ್ಯಾಯರಿಗಾಗಿಯೇ ಪ್ರತ್ಯೇಕಾನುಕೂಲ ಮಾಡುವುದು ಸಾಧ್ಯವಿಲ್ಲ.

ಸಂಬಳದ ಶೀಘ್ರ ಬಟವಾಡೆ:— ಇದಕ್ಕಾಗಿ ತಕ್ಕ ಚರ್ಯೆತೆಗೆದುಕೊಳ್ಳಲಾಗಿದೆ. ಲೇಬರ್ ಆಫೀಸರ್ ಮೊದಲನೇ ತಾರೀಖಿಗೆ ಬಿಲ್‌ಮಾಡಿ ಟ್ರೈಜರಿ ಸೆಕ್ಷನ್ನಿಗೆ ಅಡ್ಜಸ್ಟ್‌ಮೆಂಟಿಗಾಗಿ ರವಾನಿಸುತ್ತಾರೆ. ಹೆಚ್ಚೆಂದರೆ ಎರಡನೇವಾರದೊಳಗಾಗಿ ಸಂಬಳ ಮುಟ್ಟುವುದು.

ಸತ್ತ ಉಪಾಧ್ಯಾಯರ ಪ್ರಾವಿಡೆಂಟ ಫಂಡ್:— G P. F ಲೆಕ್ಕಪತ್ರ ಮತ್ತು ಹನುಮಂತಪ್ಪನವರದು ಅಕೌಂಟೆಂಟ ಜನರಲ್‌ರಿಂದ ಒಪ್ಪಿಗೆ ಬಂದೊಡನೆ ಕೊಡಲಾಗುವುದು. ಶೀಘ್ರತೆಗಾಗಿ ಚರ್ಯೆತೆಗೆದುಕೊಳ್ಳಲಾಗಿದೆ

ಜಿ. ಪಿ. ಯಫ್ ಫಂಡು:— ಎರಡುವರ್ಷ ಸರ್ವೀಸಾದ ಉಪಾಧ್ಯಾಯರು ತಮಗೆ ಇಷ್ಟವಿದ್ದಲ್ಲಿ ಆಫೀಸಿಗೆ ಬರೆದು ಫಾರಂತರಿಸಿಕೊಂಡು ಭರ್ತಿಮಾಡಿ ಕಳುಹಿಸಿದರೆ ಅದಕ್ಕೆ ಏರ್ಪಾಟುಮಾಡಲಾಗುತ್ತೆ. ಇದು ಉಪಾಧ್ಯಾಯರಿಗೇ ಸಂಬಂಧಿಸಿದುದು.

ಸಸ್ಪೆಂಡಿನ ಪರಿಹಾರ:— ಅಧಿಕಾರಿಗಳು ತಮ್ಮ ನಿವೇಚನೆಗೆ ತೋರಿದಂತೆ ಸಸ್ಪೆಂಡಾದ ಕಾಲಕ್ಕೆ ಪರಿಹಾರ ಕೊಡುವರು. ಕಾಲಾವಧಿಯ ನಂತರ ತಕ್ಷಣ ಅವರಿಗೆ ಸ್ಥಳ ಒದಗಿಸುವರು. ಸಸ್ಪೆಂಡಾಗಿ ಏನೂ ಅಲೋಯನ್ಸ್ ಹೊಂದದಿರುವ ಉಪಾಧ್ಯಾಯರ ಕೇಸುಗಳು ವಿಮರ್ಶಿತವಾಗುವುವು.

ಪಂಜಾಬ್ ಬಂಗಾಳಗಳಲ್ಲಿ ಬೇರೆ ಮಂತ್ರಿಗಳು } —ಪಂಜಾಬ್—

ಬಂಗಾಳಗಳ ಹಿಂದೂ ಬಹುಸಂಖ್ಯಾಕ ಪ್ರಾಂತಗಳಲ್ಲಿ ಪ್ರತ್ಯೇಕ ಮಂತ್ರಿವರ್ಗವೇಪಡಬೇಕೆಂಬ ಬೇಡಿಕೆಗೆ ಬಹಳ ಪುಷ್ಟಿ ದೊರೆಯುತ್ತಲಿದೆ. ವೈಸ್ರಾಯರು ಈ ಯೋಜನೆಯನ್ನು ಒಪ್ಪಿರುವರೆಂದು ತಿಳಿಯಬಂದಿದೆ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

Our Bellary office is shifted to Sri Mulangi Neelappa's building in Bangalore Road.

ನಮ್ಮ ಬಳ್ಳಾರಿ ಕಾರ್ಯಾಲಯವನ್ನು ಬೆಂಗಳೂರು ರೋಡಿನಲ್ಲಿರುವ ಶ್ರೀ ಮೂಲಂಗಿ ನೀಲಪ್ಪನವರ ಕಟ್ಟಡಕ್ಕೆ ವರ್ಗಾಯಿಸಿದೆ.

Woolen Coatings, Silk Sarees, Benares and other latest designs Handloom and Mill made Clothes Et .
Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಸಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂದ್ದು. ಪರೀಕ್ಷಿಸಿ ಮನಗಾಣಿರಿ.

ನವಭಾರತಕ್ಕೆ ಚಂದಾದಾರರಾಗಿರಿ

ಶ್ರೀಧರಘಟ್ಟ.

ಜಿಲ್ಲಾ ಮತ್ತು ತಾಲೂಕಾ ಕಾಂಗ್ರೆಸ್ ಅಧಿಕಾರಿಗಳು 1-5-47 ನೆಯ ತೇದಿ ಬಂದು ದಕ್ಷಾತ್ರೇಯ ಆಶ್ರಮದ ಆವರಣದಲ್ಲಿ ಕಾಂಗ್ರೆಸ್ ಶಕ್ತ ಹರಿಜನೋದ್ಧಾರ ರಚನಾತ್ಮಕ ಕಾರ್ಯಗಳ ವಿಷಯದಲ್ಲಿ ಉಪನ್ಯಾಸ ಕೊಟ್ಟರು. ಆ ಕಾಲಕ್ಕೆ ಈ ಗ್ರಾಮದ ಶ್ರೀ ಮುದೇನೂರು ಕಲ್ಲಪ್ಪನವರು ಬಡಹರಿಜನರಿಗೆ ಅನ್ನ ದಾನಮಾಡಿದ್ದು ಪ್ರಶಂಸನೀಯವಾದ ಕಾರ್ಯವಾಗಿದೆ.

ಹೈದರಾಬಾದಿನ ನಿಜಾನುರಿಗೆ ಬೀರಾರ್ ಕೊಡುವದಿಲ್ಲೆಂದು ಇಂಡಿಯಾಸರ್ಕಾರವು ಖಂಡಿತವಾಗಿ ತಿಳಿಸಿಬಿಟ್ಟಿದೆ. ಸರ್ ವಿಜಾರ್ ಇಸ್ಮಾಯಿಲರನ್ನು ಮಂತ್ರಿಪದವಿಯಿಂದ ರಾಜೀನಾಮೆ ಕೊಡುವಂತೆ ಮಾಡಿದ ನಿಜಾಮರು ಪಾಕಿಸ್ತಾನವನ್ನು ಸೇರುವ ಹೊಂಚು ಹಾಕಿರುವರೆಂದು ವ್ಯಕ್ತವಾಗುತ್ತದೆ.

ಮದ್ರಾಸ್ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಸರ್ ಸೊಂಟಿ ರಾಮಮೂರ್ತಿಯವರು ಬೊಂಬಾಯಿಗವರ್ನರರಾಗಿ ನಿಯುಕ್ತರಾಗಿದ್ದಾರೆ ಬೊಂಬಾಯಿ ಗವರ್ನರರು ವೈಸ್ರಾಯರಾಗಿ ಡೆಲ್ಲಿಗೆ ಹೋಗಿದ್ದಾರೆ.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. . HUSANJEE RAO. M VENKOJI RAO
General Merchants, Car Street Bellary.

2 M/S V. M. GIRI & SONS.
(Pro:- M. S Acharya) Car Street, Bellary

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್, ಎಂ ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ. ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦'

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟುದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾ ಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವ ವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—

—ಕಾಂಗ್ರೆಸ್ ಸ್ವರೂಪ ದರ್ಶನ—

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ.	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ. ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To

SRI..... .. ..

....

....

Printed at Krishna Press Bellary QH No. B 17 FOR (Q.H. NO. B-5.)
Edited & Published by T. B. KESHAVARAO

ಜೈಹಿಂದ್ Reg. No. M. 474

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೨೧ | ಬಳ್ಳಾರಿ ಜೂನ್ ೨ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶ: ಟಿ. ಬಿ. ಕೇಶವರಾವ್.

ಬಸವಿ ಪದ್ಧತಿಗೆ ಗಳಗಳ ನೆಯ ಕಲಂ

ಸುಮಾರು ೩೦ ಹರಿಜನ ಬಾಲಿಕೆಯರು ಪಾರಾದರು.

ಬಳ್ಳಾರಿತಾಲೂಕು ಕಪ್ಪಗಲ್ಲಿನಲ್ಲಿ ಅನೇಕ ವರ್ಷಗಳಿಗೊಂದು ಸಲ ನಡೆಯುವ ಮಾರೆಮ್ಮನ ಜಾತ್ರೆಯನ್ನು ಈ ಸಲ ಇಪ್ಪತ್ತು ವರ್ಷಗಳ ನಂತರ ಈವರ್ಷ ಜೇಷ್ಠ ಶುದ್ಧ ಅಷ್ಟಮಿ ಮಂಗಳವಾರ ೨೭-೫-೧೯೪೭ ನಡೆಸಬೇಕೆಂದು 'ಅಸಾದಿ' ಕುಲದವರೂ, ಅವರಯ ಜಮಾನರೂ ನಿಶ್ಚಯಿಸಿದ್ದರು. ಹರಿಜನರಲ್ಲಿ ಬೈಲಾಟಿಗಳನ್ನಾಡಿ, ವ್ಯಭಿಚಾರ ವೃತ್ತಿಯಿಂದ ಜೀವಿಸುವವರಿಗೆ 'ಅಸಾದಿ'ಯವರೆಂದು ಕರೆಯುವ ವಾಡಿಕೆಇದೆ. ಆದಿನ ಮಾರೆಮ್ಮನ ಹಬ್ಬವಾಡಿ ಕುರಿ, ಕೋಣಗಳನ್ನು ವಧೆ ಮಾಡಿ ಚಿಕ್ಕ ಕೂಸುಗಳಿಂದ ಪ್ರಾರಂಭಮಾಡಿ ವಯಸ್ಕರಾದ ಸ್ತ್ರೀಯರಿಗೆಲ್ಲಾ ಮುದ್ರವತ್ತಿ ಅವರು 'ಬಸವಿ' ಯರಾಗಲು ಅರ್ಹರೆಂದು ಸೇರಿದ ಸಭಿಕರೆದುರಿಗೆ ಸಾರುವಮುಂಟು. ಈ ವರ್ಷ ಅನೇಕ ಹಳ್ಳಿಗಳಿಂದ 'ಅಸಾದಿ'ಯರು ಚಿಕ್ಕಚಿಕ್ಕ ಬಾಲಿಕೆಯರನ್ನು ಕರೆತಂದಿದ್ದರು. ಈ ಬಸವೀ ತಾಳಿಯನ್ನು ಕಟ್ಟಿಸಿಕೊಳ್ಳಲು ಸುಮಾರು ೩೦ ಬಾಲೆಯರು ಅಹುತಿಯಾಗ ಬೇಕಿದ್ದಿತು. ಅದು ಜಿಲ್ಲಾ ಮ್ಯಾಜಿಸ್ಟೇಟರ ಗಳಗಳ ನೆಯ ಕಲಂನಿಂದ ತಪ್ಪಿಹೋಯಿತು.

ಸಾರ್ವಜನಿಕರ ನೀತಿಯನ್ನು ಕೆಡಿಸುವ, ವ್ಯಭಿಚಾರ ವೃತ್ತಿಯಿಂದ ಪ್ರಜೆಗಳಲ್ಲಿ ಕೆಟ್ಟರೋಗಗಳನ್ನು ವ್ಯಾಪ್ತಮಾಡುವ ಈ ಕ್ರೂರಪದ್ಧತಿಯು ಈ ಕಾಲಕ್ಕೆ ತಕ್ಕುದಲ್ಲವೆಂದೂ, ಅದಕ್ಕಾಗಿಯೇ ಸರ್ಕಾರದವರು ಶಾಸನಮಾಡಿ Immoral Traffic Act ಅನೀತಿವ್ಯಾಪಾರ ಪ್ರತಿಬಂಧಕ ಕಾಯ್ದೆಮಾಡಿ ಜಾರಿಗೇತಂದಿರುವುದನ್ನೂ ಇವರಿಗೆ ತಿಳಿಸಲಾಯಿತು. ಇದರಿಂದಾಗುವ ಅನರ್ಥಗಳನ್ನುಹೇಳಿ ಹರಿಜನರ ಏಳಿಗೆಯು ಆಗಬೇಕೆಂದರೆ ಈ ವ್ಯಭಿಚಾರವೃತ್ತಿಯನ್ನು ಬಿಡಬೇಕೆಂದು ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ಹೇಳುತ್ತಲೇ ಬಂದರು ಬಹುಸಂಖ್ಯಾಕರು ಅವರ ಮಾತುಲಾಲಿಸಿದರೂ, ಅಲ್ಪಸಂಖ್ಯಾಕರಾದ ಕೆಲವರು

ವಳವಳಿಗೇ ಕಳ್ಳತನದಿಂದ 'ಬಸ್ಸಿ'ಯರನ್ನಾಗಿ ಮಾಡತೊಡಗಿದರು. ಈ ಕಾರಣದಿಂದ ನ್ಯಾಯ ನೀತಿ ಪರಜನರಿಗೆ ಉದ್ಯೋಗಕ್ಕೆ ಕಾರಣವಾಗಿ ಹರಿಜನರ ಮೇಲೆ ಅಸಹ್ಯವು ಹುಟ್ಟಿತು.

ಈ ಅನಾವಶ್ಯಕ ದ್ವೇಷ ಮತ್ತು ಅನೀತಿಪರವಾದ ವ್ಯಾಪಾರವನ್ನು ನಿಲ್ಲಿಸಬೇಕೆಂದು ಸಂಕಲ್ಪಿಸಿ, ಬಳ್ಳಾರಿ ಜಿಲ್ಲಾ ಹರಿಜನಸೇವಕ ಸಂಘದ ಪ್ರಧಾನಕಾರ್ಯದರ್ಶಿಗಳಾದ ಶ್ರೀ ಟಿ. ಬಿ. ಕೇಶವರಾಯರೂ, ವಿಜಿಲೆನ್ಸ್ ಸೊಸೈಟಿ ಕಾರ್ಯದರ್ಶಿಗಳಾದ ಶ್ರೀ ಬಿ. ವಿ. ಶೇಷಗಿರಿರಾಯರೂ, ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಸಂದರ್ಶಿಸಿ ಇದ್ದ ಎಲ್ಲಾ ವಿಷಯಗಳನ್ನೂ ವ್ಯಕ್ತಪಡಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಭಯಂಕರ ಅನರ್ಥವನ್ನು ತಪ್ಪಿಸಲು ಕೂಡಲೇ ವಪ್ಪಿ ಈ ಜಾತ್ರೆಯನ್ನು ನಡೆಯದಂತೆ ೧೪೪ ನೆಯ ಕಲಂ ಜಾರಿಮಾಡಿ ನಿಲ್ಲಿಸಿಬಿಟ್ಟರು. ಪೋಲೀಸಿನವರೂ, ಸಂಘದ ಕಾರ್ಯದರ್ಶಿಗಳೂ ಅಲ್ಲಿಗೆ ಹೋದಾಗ ಒಂದು ವರ್ಷದಿಂದ ಇಪ್ಪತ್ತು ವರ್ಷ ವಯಸ್ಸಿನವರೆಗಿನ ಸುಮಾರು ೩೦೦ ಬಾಲೆಯರು ಸಿದ್ಧರಾಗಿಡಲ್ಪಟ್ಟಿದ್ದು ತಿಳಿಯಬಂದಿತು. ಪೋಲೀಸರು ದೂರದೂರ ಹಳ್ಳಿಗಳಿಂದ ಬಂದವರನ್ನೆಲ್ಲಾ ಹಿಂದಕ್ಕೆ ಕಳುಹಿಸಿಬಿಟ್ಟರು. ಈ ಕಲಂ ೧೫ ದಿನಗಳು ಜಾರಿಯಲ್ಲಿರುತ್ತೆ.

[ವ್ಯಭಿಚಾರವೃತ್ತಿಯು ಅಪರಾಧ ಅದರಲ್ಲೂ ವಯಸ್ಸಿಗೆ ಬರದ ಬಾಲೆಯರಿಗೆ ಕ್ರೂರಪದ್ಧತಿಯಿಂದ ಮುದ್ರೆವತ್ತಿ ವ್ಯಭಿಚಾರ ವೃತ್ತಿಗೆ ಪ್ರೇರೇಪಿಸುವುದು ಘೋರ ಅಪರಾಧ. ಪೆನಲ್ ಕೋಡ್ ಶಾಸನವೇ ಇದನ್ನು ಪ್ರತಿಬಂಧಿಸಲು ಸಾಕು ಇಂಥಾ ಪದ್ಧತಿಗಳು ಎಲ್ಲೆಲ್ಲಿಕಂಡು ಬರುವುವೋ ಅವುಗಳನ್ನು ನ್ಯಾಯನೂರ್ಗಗಳಿಂದ ಪ್ರತಿಬಂಧಿಸಲು ಕಾರ್ಯಕರ್ತರು ಮುಂದೆ ಬರಬೇಕು ಇದನ್ನು ಹೆಚ್ಚಿನ ಶಿಕ್ಷಾರ್ಹವಾಡಲು ಸರ್ಕಾರವು ಮತ್ತೊಂದು ಶಾಸನವನ್ನು ತರಲಿದೆ. ಸದ್ಯಕ್ಕೆ ಸರ್ಕಾರದ ಅಪ್ಪಣೆ ಪಡೆದು ಯಾವ ಭಾಗಕ್ಕಾದರೂ ಈ ಅನೀತಿಪರ ಶಾಸನದ ಪ್ರಯೋಗನಾಡಿ ಇದನ್ನು ಪ್ರತಿಬಂಧಿಸಬಹುದು—

ಸಂಪಾದಕ ನವಭಾರತ]

ಕೂಡ್ಲಿಗಿ ತಾಲೂಕು ರೈತರ ಪರಿಷತ್ತು.

(ನೆಹರೂ ತರುಣ ಸಂಘದಾಶ್ರಯದಲ್ಲಿ)

ಬಳ್ಳಾರಿ ಜಿಲ್ಲಾ ಕೂಡ್ಲಿಗಿ **ನೆಹರೂ ತರುಣ ಸಂಘ**ದಾಶ್ರಯದಲ್ಲಿ ಕೂಡ್ಲಿಗಿ ತಾಲೂಕು ರೈತರ ಪರಿಷತ್ತನ್ನು 1947 ಜೂಲೈ 6ಂಗಳ ಕೊನೆಯವಾರದಲ್ಲಿ ಸಮಾವೇಶಗೊಳಿಸಲು ನಿಶ್ಚಯಿಸಲಾಗಿದೆ. ಹಳ್ಳಿಯ ರೈತರು ಭಯಂಕರ ಆರ್ಥಿಕ ಪರಿಸ್ಥಿತಿಯಲ್ಲಿ ಆಹಾರ ಬಟ್ಟೆ ಮತ್ತು ಇತರ ಅವಶ್ಯಕ ವಸ್ತುಗಳ ಅಭಾವದಿಂದ ಬೆಂದು ಬೆಂಡಾಗುತ್ತಿರುವರು ಯಾರಿಂದಲೂ ಪರಿಹಾರವು ದೊರೆವುದು ಅಸಾಧ್ಯವಾಗಿ ಬಿಟ್ಟಿದೆ ರೈತನ ಏಳಿಗೆಯೇ ದೇಶದ ಕಲ್ಯಾಣಕ್ಕೆ ಅಸ್ತಿಭಾರ ಸರ್ಕಾರದವರು ಇದನ್ನರಿಯಬೇಕು ಅವರ ಬಾಧ್ಯತೆಯನ್ನು ಗುರ್ತಿಸುವಂತೆ ಮಾಡುವುದು, ನಮಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ತೀರ್ಮಾನಗಳನ್ನು ಮಾಡುವುದು, ಸರ್ಕಾರದವರು ಅದಕ್ಕೆ ಮನ್ನಣೆ ಕೊಡುವಂತೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಕಾರಣ ಎಲ್ಲಾ ರೈತ ಒಂಧುಗಳೂ ಈ ಉದ್ಯಮಕ್ಕೆ ಸಹಾಯಮಾಡಲು ನಮ್ಮ ಕೋರಿಕೆ.

ಕಾರ್ಯದರ್ಶಿ

ನೆಹರೂ ತರುಣ ಸಂಘ

ಕೂಡ್ಲಿಗಿ

ಜಿನ್ನಾ—ಒಣಿ

ಪೂರ್ವ, ಪಶ್ಚಿಮ ಪಾಕಿಸ್ತಾನಗಳನ್ನು ಸೇರಿಸಲು ತಮಗೆ 1200 ಮೈಲಿ ಉದ್ದದ ಒಂದು ಓಣಿ ಬೇಕೆಂದು ಕೇಳುವ ಜಿನ್ನಾ ಸಾಹೇಬರವರ ಹುಚ್ಚು ಯೋಜನೆಯನ್ನು ಎಲ್ಲಖಂಡಿಸಿರುವರು.

ನವಭಾರತಕ್ಕೆ ಚಂದಾದಾರರಾಗಿರಿ

THE DEDICATION OF MINOR GIRLS

for the purposes of prostitution

IS AN OFFENCE.

'ಬಸವಿ' ಬಿಡುವಪದ್ಧತಿಗೆ ಶಿಕ್ಷೆಯುಂಟು.

ಇಂಡಿಯನ್ ಪಿನಲ್‌ಕೋಡ್ ೩೭೨ ಮತ್ತು ೩೭೩ ಶೆಕ್ಷನ್‌ಗಳ ಸಾರಾಂಶ.

——[o]——

Indian Penal Code.

372 Whoever sells, lets to hire or otherwise disposes of any person under the age of 18 years with intent that such person shall at any age be employed or used for the purpose of prostitution or illicit intercourse with any person or for any unlawful and immoral purpose, or knowing it to be likely that such person will at any age be employed or used for any such purpose, shall be punished with imprisonment of either description for a term which may extend to ten years, and shall also be liable to fine.

373 Whoever buys, hires or otherwise obtains possession of any person under the age of 18 years with intent that such perron shall at any age be employed or used for the purpose of prostitution or illicit intercourse with any person or for any unlawful and immoral purpose, or knowing it to be likely that such person will at any age be employed or used for any such purpose shall be punished with imprisonment of either description for a term which may extend to ten years and shall also be liable to fine.

372— ಹದಿನೆಂಟು ವರ್ಷ ವಯಸ್ಸಿನವಳಿಗಿರುವ ಬಾಲೆಯನ್ನು ವ್ಯಭಿಚಾರ ವೃತ್ತಿಗೆ ಪ್ರವೇಶಿಸಲು ಅಥವಾ ವಯಸ್ಸಿಗೆ ಬಂದಾಗ ಆ ವೃತ್ತಿಗೆ ಹಾಕಲು ಯಾರಾದರೂ ಅಂಥಾ ಹುಡುಗಿಯನ್ನು ಮಾರಿದರೆ ಆ ಕೆಲಸಕ್ಕೆ ತಾತ್ಕಾಲಿಕವಾಗಿ ಅಪ್ಪಣೆ ಕೊಡುವ ಕೆಲಸ ಮಾಡಿದರೆ ಹತ್ತು ವರ್ಷಗಳವರಿಗಿನ ಅವಧಿಯ ಶಿಕ್ಷೆ ಮತ್ತು ದಂಡಕ್ಕೆ ಗುರಿಯಾಗಬಹುದು.

373 ಹದಿನೆಂಟು ವರ್ಷವಯಸ್ಸಿನೊಳಗಣ ಬಾಲೆಯನ್ನು ಅಂಥಾ ಉದ್ದೇಶಕ್ಕಾಗಿ ಕೊಂಡವರೂ ಆಹುದುಗಿಯ ವ್ಯಭಿಚಾರವೃತ್ತಿಯಿಂದ ಜೀವನಮಾಡುವರೂ ಹತ್ತುವರ್ಷದ ಅವಧಿಯವರೆಗೆ ಶಿಕ್ಷೆ ಮತ್ತು ದಂಡಕ್ಕೆ ಪಾತ್ರರಾಗುವರು.

ಬಳ್ಳಾರಿ ಜಿಲ್ಲೆಯ ಅನೇಕ ಭಾಗಗಳಲ್ಲಿ ವಿಧವಿ ಕುಲಗಳವರಲ್ಲಿ ಬಸವಿ ಬಿ ಡು ವ ಪದ್ಧತಿಯುಂಟು ಗರ್ಭದಲ್ಲಿರುವ ಕೂಸುಗಳಿಂದ ಮೊದಲು ಮಾಡಿ, ಈ ಗಾಗಲೇ ವ್ಯಭಿಚಾರದಲ್ಲಿರುವ ವಯಸ್ಸು ಹೆಣ್ಣುಮಕ್ಕಳಿಗೆ ಮುದ್ರೆಯೊತ್ತುವ ಯಾ ತಾಳಿಕಟ್ಟುವ ಪದ್ಧತಿಯು ಜಾತ್ರೆಗಳಲ್ಲಿ ಆಗುತ್ತಲಿದೆ ಇದನ್ನು ತಪ್ಪಿಸಲು ಸಾಕಷ್ಟು ಸುಧಾರಕರು ನುಂದೆ ಬಂದಿದ್ದರೆ ಎಂದೋ ಈ ಕ್ರೂರಪದ್ಧತಿಯನ್ನು ಅಂತಗೊಳಿಸಬಹುದಾಗಿತ್ತು. ಈ ಕೆಲಸಕ್ಕೆ ಅಸಹ್ಯವನ್ನು ಸೂಚಿಸುವ ಸಜ್ಜನರು ಔದಾಶೀನ್ಯದಿಂದ **"ಎಲ್ಲಾದರೂ ಹಾಳಾಗಿ ಹೋಗಲಿ, ಯಾವ ಭಾವಿಯಲ್ಲಾಗಲಿ ಬೀಳಲಿ, ನಮಗೇಕೆ"** ಎಂದು ದುರ್ಲಕ್ಷಿಸುತ್ತಾ ಇರುವರು. ಮತ್ತೆ ಕೆಲವರು ಹೆಣ್ಣು ಮಾಡುವ ಸ್ವಾರ್ಥಕಾರಣಗಳಿಗಾಗಿ ಇದನ್ನೆಲ್ಲಾ ಮುಚ್ಚಿಡುವರು. ಹರಿಜನರಾಗಲಿ, ಇತರ ಬಡವರಾಗಲಿ ಊರಿನ ಮುಖ್ಯಸ್ಥರನ್ನು ಸರಿ ಮಾಡಿಕೊಂಡು ಈ ಕೆಲಸಗಳನ್ನು ನಿರಾಟಂಕವಾಗಿ ಸಾಗಿಸುತ್ತಲಿರುವರು.

ಇದರ ಪರಿಣಾಮವಾಗಿ ದೇಶದ ನೀತಿಯು ಪತನವಾಗಿ ಭಯಂಕರ ರೋಗಗಳು ಹಬ್ಬಿ ಎಂಥಾ ನಿಪುಣ ಡಾಕ್ಟರರಿಂದಲೂ ಗುಣವಾಗದೆ ಅನೇಕ ಸ್ತ್ರೀ ಪುರುಷರು ವಂಶಪಾರಂಪರ್ಯವಾಗಿ ಯಾತನೆಗೆ ಗರಿಯಾಗುವರು ಪ್ರಜೆಗಳಲ್ಲಿ ಸಾಕಷ್ಟು ಅಂದೋಳನವಿಲ್ಲದಿದ್ದರೆ ಯಾವ ಸರ್ಕಾರವಾದರೂ ಏನುಮಾಡೀತು? ಶಾಸನಗಳನ್ನು ಜಾರಿಮಾಡಿ ಯಶಶ್ವಿಯಾಗಿಸುವ ಕಾರ್ಯ ಬಹುಮಟ್ಟಿಗೆ ಊರ ಜನರ ಪ್ರಜೆಗಳ ಸಹಾಕಾರವನ್ನೇ ಕೂಡಿದೆ.

ನಾಡಿನ ಹಿತವನ್ನು ಬಯಸುವವರು ಮಾತ್ರ ಇದಕ್ಕಾಗಿ ಅಲ್ಲಲ್ಲಿ ಒಬ್ಬಿಬ್ಬರಿಗೆ ಶಿಕ್ಷೆಮಾಡಿಸಬೇಕು ಏತಕ್ಕೆಂದರೆ ಬರೀವಣ ಮಾತುಗಳಿಂದ ನೀತಿಬೋಧೆಯಿಂದ ಈ ಕೆಲಸಗಳಾಗುವುದಿಲ್ಲ.

ಮಾರೆಮ್ಮನ ಹಬ್ಬಮಾಡಿಕೊಳ್ಳಲುಮಾತ್ರ ಅಪ್ಪಣೆ.

ಕಪ್ಪಗಲ್ಲಿನಲ್ಲಿ ಮಾರೆಮ್ಮನ ಹಬ್ಬಮಾಡಿಕೊಳ್ಳಲು ಮಾತ್ರ ಕಲೆಕ್ಟರವರು ಅಪ್ಪಣೆ ಕೊಟ್ಟಿರುತ್ತಾರೆ. ಗಳಳ ನೆಯ ಸೆಕ್ಷನ್ ಸ್ವಲ್ಪಸಡಿಲವಾಡಿ ಬಸವಿಯರನ್ನು ಬಿಡಬಾರದೆಂಬ ಆಜ್ಞೆಯನ್ನು ಜಾರಿಯಲ್ಲಿಟ್ಟು ಹಬ್ಬಮಾಡಿಕೊಳ್ಳಬಹುದೆಂದು ಹೇಳಿರುವರು ಕಪ್ಪಗಲ್ಲಿನ ದೊಡ್ಡಮನುಷ್ಯರೂ, ಹರಿಜನ ಅಸಾದಿಯವರೂ ಬಸವಿಯರನ್ನು ದೇವರಿಗೆ ಬಿಡುವುದಿಲ್ಲೆಂಬ ಮುಚ್ಚಳಿಕೆಯನ್ನು ಕಲೆಕ್ಟರವರಿಗೆ ಬರೆದು ಕೊಟ್ಟರು. ಈ ಮಾರೆಮ್ಮನಹಬ್ಬವು ೩೦ ನೆಯ ತಾ. ಶುಕ್ರವಾರ ಶಾಂತವಾಗಿ ನೆರವೇರಿತು.

ಹಡಗಲೀ ತಾಲೂಕಿನಲ್ಲಿ ಹರಿಜನೋದ್ಧಾರ ಪ್ರ ಚಾ ರ.

೨೯ ನೆಯ ಗುರುವಾರ ಸಾಯಂಕಾಲ ಬಳ್ಳಾರಿಜಿಲ್ಲಾ ಹರಿಜನಸೇವಕ ಸಂಘದ ಅಧ್ಯಕ್ಷ ಕಾರ್ಯದರ್ಶಿಗಳಾದ ಶ್ರೀ ಟಿ ಜಿ ಸತ್ಯನಾರಾಯಣ ಮತ್ತು ಶ್ರೀ ಟಿ. ಬಿ. ಕೇಶವರಾಯರು ಕಾಂಗ್ರೆಸ್ ಕಾರ್ಯದರ್ಶಿ ಅಸುಂಡಿ ತಿರುಮಲರಾಯರು, ಹೊಸಪೇಟೆ ಲೇಬರ್ ಲೀಡರ್ ಲಕ್ಷ್ಮಣ ಮೂರ್ತಿಯವರು ಹೊಳಗುಂದಿ ಮತ್ತು ಹಡಗಲಿಗಳಲ್ಲಿ ಹರಿಜನಾಭಿವೃದ್ಧಿಯಮೇಲೆ ಭಾಷಣಕೊಟ್ಟರು ಹಡಗಲಿಯಲ್ಲಿ ಒಂದುಸಾವಿರಕ್ಕಿಂತಲೂ ಹೆಚ್ಚಿಗೆ ಸ್ತ್ರೀಪುರುಷರು ನೆರೆದಿದ್ದರು ಸರಕಾರದನೀತಿ, ಹರಿಜನರು ಅವರಿಗೆ ಮಾಡಿಸುವ ಸೌಕರ್ಯಗಳು, ಹರಿಜನರು ಬಿಡಬೇಕಾದ ಕುಪದ್ಧತಿಗಳು, ಕಾಲಕ್ಕನುಸಾರವಾಗಿ ಅನುಸರಿಸಬೇಕಾದ ಒಳ್ಳೆಯ ಪದ್ಧತಿಗಳನ್ನು ಕುರಿತು ಭಾಷಣಗಳಾದವು.

ಬಂಗಾಳವ ಕಲ್ಕತ್ತಾನಗರ, ಪಂಜಾಬದ ಲಾಹೋರ, ಅಮೃತಸರಗಳಲ್ಲಿ ಜಾತೀಯ ದಂಗೆಯು ಅಡಗಿಲ್ಲ. ಇರಿತ, ಮರಣಗಳು ಸಾಗಿಯೇ ಇವೆ.

ಅಖಂಡ ಭಾರತ ★ ಸ್ವತಂತ್ರ ಭಾರತ
ವಿಭಕ್ತ ಭಾರತ ★ ಗುಲಾಮ ಭಾರತ

ವೈಸರಾಯ್ ಮೌಂಟ್‌ಬ್ಯಾಟನ್ ಬ್ರಿಟಿಷ್ ಸರಕಾರದೊಡನೆ ಚರ್ಚೆಗೆಂದು ಹೋದ ಘಟನೆ ದೇಶದ ಗಾಳಿಯನ್ನೆಲ್ಲ ಊಹೆಯಿಂದ ತುಂಬಿ ಬಿಟ್ಟಿದೆ. ದಿನದಿನವೂ ವಿಧವಿಧವಾದ ಸುದ್ದಿ ಕೇಳಿ ಬರಹತ್ತಿದೆ. ಆದರೆ ಎಲ್ಲ ಹುರಿಕಾರರೂ ಒಂದೇ ಒಂದು ಹಾಡುಹಾಡುತ್ತಾ ಇದ್ದಾರೆ. ಅದು ಭಾರತ ವಿಭಜನೆಯ ಗೀತ, ಐಕ್ಯತೆಯ ಚರಮಗೀತ.

ಮುಸ್ಲಿಂಲೀಗ್ ಅಖಂಡ ಭಾರತದ ಬದ್ಧ ಶತ್ರು ಭಾರತದ ಐಕ್ಯತೆಯ ಕಟ್ಟಾವಿರೋಧಿ ಜನಾಬ್ ಜಿನ್ನಾ ಮತ್ತು ಅವರ ಕೈಗೊಂಬೆ ಲೀಗ್ ಎಬ್ಬಿಸಿದ ಪಾಕಿಸ್ತಾಡದ ಬೊಬ್ಬೆ ವಿಷಪ್ರಚಾರ, ಕಹಿಫಲ ಕೊಡುವ ಕಾಲ ಹತ್ತಿರ ಬರುವಂತಿದೆ. ಎಲ್ಲೆಲ್ಲಿಯೂ, ಎಲ್ಲೆಡೆಯಿಂದಲೂ ಭಾರತದ ವಿಭಜನೆ ಕಟ್ಟಿಟ್ಟ ಘಟನೆ ಎಂಬ ಮಾತು ಕೇಳಿ ಬರುತ್ತಿದೆ.

ಬ್ರಿಟಿಷ್ ಸರಕಾರದ ಯೋಜನೆ ಇನ್ನೂ ಪ್ರಸಿದ್ಧ ಆಗಿಲ್ಲ. ನದು ಅದ ಹೊರತೂ ಕಾಂಗ್ರೆಸಿನ ಧೋರಣೆ ನಿಶ್ಚಯವಾಗಿ ತಿಳಿಯುವಂತಿಲ್ಲ. ಆದರೆ ಇಷ್ಟು ಮಾತ್ರ ಅನೇಕ ಕಾಂಗ್ರೆಸ್ ವರಿಷ್ಠರಿಂದ ಕೇಳಿ ಬರುತ್ತಿದೆ. ಭಾರತ ಇಬ್ಭಾಗ ಆಗುವುದೇ ಆದರೆ ಪಂಜಾಬ ಬಂಗಾಲಗಳು ಎರಡೆರಡು ಹೋಳು ಆಗಲೇಬೇಕು. ಈ ಪ್ರಸ್ತಾಪಕ್ಕೆ ಜಿನ್ನಾಸಾಹೇಬರು ಶತಾಯಗತಾಯ ವಿರೋಧಿಗಳೆಂದು ಸಾರಿಕೊಂಡಿದ್ದಾರೆ. ಅಲ್ಲದೆ ಪೂರ್ವ ಪಾಕಿಸ್ತಾನವನ್ನೂ, ಪಶ್ಚಿಮ ಪಾಕಿಸ್ತಾನವನ್ನೂ ಕೂಡಿಸುವ ಓಣಿಯೊಂದೂ ಬೇಕಂತೆ ಅವರಿಗೆ ಓಣಿಯಲ್ಲಿ ಭೂಪಾಲ ಹೈದರಾಬಾದುಗಳನ್ನು ಸೇರಿಸುವ ಹೊಂಚಿರಬಹುದು. ಪಾಕಿಸ್ತಾನ ಪ್ರವಾದಿಯದ್ದು.

ಪೂರ್ಣ ಸ್ವತಂತ್ರ ಭಾರತದ ಕಲ್ಪನೆಹಾಗೂ ಹೋಳು ಹೋಳಾದ ಹಿಂದುಸ್ಥಾನದೊಡ್ಡ ವಿರೋಧಾಭಾಸ ಭಾರತ ಹೋಳಾಗುವುದಾದರೆ ಸ್ವಾತಂತ್ರ್ಯ ಶುದ್ಧ ಸುರೀಚಿಕೆ. ಭಾರತ ಸ್ವಾತಂತ್ರ್ಯದ ಪ್ರಥಮ ಶತ್ರು ಜಿನ್ನಾ, ಲೀಗ್ ಸರ್ ಸಿ. ಪಿ. ನಿಜಾಮು ಮತ್ತು ಭೂಪಾಲ ನವಾಬ ಇವರೆಲ್ಲಾ ಜಿನ್ನಾ ಪರಂಪರೆಯವರು ಅಂತಲೇ 'ಭಾರತ'ಯ ವಿಚ್ಛೇದಕ್ಕೆ ಕತ್ತಿ ಹಿಡಿದುನಿಂತ ಕಟುಕಗಣ ಅವರು.

ಪಾಕಿಸ್ತಾನ, ರಾಜಸ್ತಾನಗಳೆಂಬ ಗುಲಾಮಿ ಸ್ತಾನಗಳ ಹುಚ್ಚು ಹರಿಯಬೇಕು. ಸ್ವತಂತ್ರ ಭಾರತ ಒಂದೇ ಆಗಿ ಉಳಿಯಬೇಕು. [ಜಾಗೃತಿ]

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಆತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸುತ್ತೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ಮಾರಲ್ಪಡುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂಪ್ಪು. ಪರೀಕ್ಷಿಸಿ ಮನಗಾಣಿರಿ.

ಬೀಹಾರಕ್ಕೆ ಎಚ್ಚರಿಕೆ.

ಅಲ್ಪಸಂಖ್ಯಾಕರ ಮೇಲೆ ಮತ್ತೇನಾದರೂ ಕೈಮಾಡಿದರೆ, ನನ್ನನ್ನು ಕೊಂದಂತೆಯೇಸರಿ ಎಂದು ಮಹಾತ್ಮ ಗಾಂಧಿಯವರು ಬೀಹಾರಿಗಳಿಗೆ ಎಚ್ಚರಿಸಿದ್ದಾರೆ.

ಅಹಿಂಸೆ–ಜೀವನದ ವಸ್ತುಸ್ಥಿತಿ.

(ಮೋ. ಕಂ ಗಾಂಧಿ)

ಪ್ರಶ್ನೆ: ೧ ನಿಮ್ಮ ಅಹಿಂಸೋಪದೇಶದ ವರ್ಚಸ್ಸಿಗೊಳಗಾಗಿ ಹಿಂದುಗಳು ಶೀಘ್ರದಲ್ಲಿಯೇ ಮುಸ್ಲಿಂ ಲೀಗಿನ ಅನುಯಾಯಿಗಳ ಕೈಲಿ ಸೋಲಬೇಕಾಗಬಹುದು. ಗೋಪ್ಯವಾಗಿ ಮುಸ್ಲಿಮರನ್ನು ಸಶಸ್ತ್ರರಾಗಿ ಮಾಡಲಾಗುತಿದೆಯೆಂಬ ನಂಬಿಕೆ ಹಬ್ಬಿರುವದರಿಂದ ಈ ಸಂಶಯ ಸರ್ವ ಸಾಮಾನ್ಯವಾಗಿ ಪ್ರಚಲಿತವಾಗಿದೆ.

ಉತ್ತರ: ೧ ಈ ಪೂರ್ವಪಕ್ಷ ಗಂಭೀರವಾದುದು ನಿಜವಾಗಿದ್ದಲ್ಲಿ ಇದು ಪ್ರಾಂತಿಕ ಸರಕಾರಗಳ ಮೇಲಿನ ಘನವಾದ ಅಪವಾದವೇ ಸರಿ ಹೇಗೆ ಇರಲಿ, ಹಿಂದುಗಳು ಘೋರತರವಾದ ಆಯುಧಕ್ಕಿಂತಲೂ ಪ್ರಬಲವಾದ ನನ್ನ ಅಹಿಂಸೋಪದೇಶದ ವರ್ಚಸ್ಸಿಗೊಳಗಾಗಿದ್ದರೆ ಎಷ್ಟು ಒಳಿತಾಗುತ್ತಿತ್ತು. ಯಾವನೇ ಗುರುವಿನ ಉಪದೇಶಗಳು ವಿಕೃತಗೊಳಿಸಲ್ಪಟ್ಟಿರೆ ಅದಕ್ಕೆ ಅವನನ್ನು ದೂರುವದು ಸರಿಯೆ? ರೇಖಾಗಣಿತದ ಸಿದ್ಧಾಂತಗಳನ್ನು ಕೂಡ ಅನೇಕ ವಿದ್ಯಾರ್ಥಿಗಳು ವಿಕೃತಗೊಳಿಸುವದನ್ನು ನಾವು ನೋಡಿಲ್ಲವೆ? ಇದಕ್ಕೆ ಶಿಕ್ಷಕರು ಹೊಣೆಯೆ? ನನ್ನನ್ನು ಬಹಳಾದರೆ ಅಹಿಂಸೆಯ ಅಕ್ಷನು ಉಪದೇಶಕನೆಂದು ಟೀಕಿಸಬಹುದು. ಹಾಗಿದ್ದರೆ ನನ್ನ ಉತ್ತರಾಧಿಕಾರಿಯಾದರೂ ನನಗಿಂತ ಸಮರ್ಥನೂ ಯಶಸ್ವಿಯೂ ಆಗಲೆಂದು ದೇವರನ್ನು ಬೇಡೋಣ.

ಪ್ರಶ್ನೆ: ೨ ಬ್ರಿಟಿಶರು ಹಿಂದುಸ್ತಾನದಿಂದ ಹೊರಟುಹೋದ ಮೇಲೆ ದೇಶದಲ್ಲಿ ಅನಾಯಕತೆ ಅವ್ಯವಸ್ಥೆಗಳು ಹಬ್ಬುವ ಸಂಭವವುಂಟು. ಆದ್ದರಿಂದ ರಾಷ್ಟ್ರೀಯವಾದಿಗಳು ಒಡನೆಯೆ ಆಗ್ನ್ಯಸ್ತ್ರಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳುವದನ್ನು ಕಲಿಯತೊಡಗದೆ ಹೋದರೆ, ಹೋರಾಡುವದೊಂದರಲ್ಲಿ ವಿಶ್ವಾಸವುಳ್ಳ ಮುಸ್ಲಿಂಲೀಗ್ ಅನುಯಾಯಿಗಳ ಕಾಲಕೆಳಗೆ ಸಿಕ್ಕಿ ಅವರು ಕಷ್ಟಪಡಬೇಕಾದೀತಷ್ಟೇ ಅಲ್ಲ ಕೊನೆಗೆ ಅವರ ಪಾದಾಕ್ರಾಂತರಾಗಬೇಕಾದೀತೆಂಬ ಭಯವುಂಟಾಗಿದೆ. ಪಾಕಿಸ್ತಾನ ಬರಲಿ, ಬಾರದಿರಲಿ, ಈ ಉಪದ್ರವ ಬಂದೇತೀರುವದು. ಏಕೆಂದರೆ ಇದರ ಹಿಂದೆ ಬ್ರಿಟಿಶ ಸಾಮ್ರಾಜ್ಯವಾದದ ಗುಪ್ತ ಕೈಚಳಕವಿದೆ. ಇಂಥ ರಾಜಕೀಯ ಪರಿಸ್ಥಿತಿ ದೇಶವನ್ನು ಆಕ್ರಮಿಸಬಹುದೆಂಬ ವಿಶಾಲ ಸಂಭಾವ್ಯತೆಯನ್ನು ಗಮನಿಸಿ ವೈಯಕ್ತಿಕ ಆತ್ಮರಕ್ಷಣೆಗಾಗಿಯಾದರೂ ನಿಮ್ಮ ಅಹಿಂಸಾತತ್ವವನ್ನು ಸಡಿಲಿಸಲಾರಿರಾ?

ಉತ್ತರ: ೨ ನೀವು ಕಲ್ಪಿಸಿಕೊಂಡಂತೆ ಮುಸ್ಲಿಂಲೀಗಿಗೆ ಭಯಪಡುವ ರಾಷ್ಟ್ರೀಯರು, ಆ ಘನವಾದ ಹೆಸರಿಗೆ ಅರ್ಹರಲ್ಲ. ರಾಷ್ಟ್ರೀಯರು, ತಮ್ಮ ಕ್ರಿಯಾಕ್ಷೇತ್ರದಿಂದ ಮುಸ್ಲಿಂಲೀಗ್ ಅನುಯಾಯಿಗಳನ್ನು ಹೊರಗಿರಿಸಬಲ್ಲರೆ? ಮತಗಳಿಗೆ ಗಾಳ ಹಾಕುವ ಸಾಧನಗಳನ್ನು ನಾನು ಭಾವಿಸುತ್ತಿಲ್ಲ. ಮುಸ್ಲಿಂರೂ ಇತರರಂತೆ ಹಿಂದೀಯರು ಮತ್ತು ಅವರಿಗೂ ರಾಷ್ಟ್ರೀಯರ ಆಸ್ಥೆ ಆರೈಕೆ ಸಿಗುವದವಶ್ಯ ಎಂಬ ಭಾವನೆಯಿಂದ ನಾನು ಹೇಳುತಿದ್ದೇನೆ. ಮುಂದಾಳುಗಳಿಗೀಗ ಅಹಿಂಸೆಯಲ್ಲಿ ವಿಶ್ವಾಸವುಳಿದಿರದಿದ್ದರೆ ಅವರು ಧೈರ್ಯದಿಂದ ಮುಚ್ಚುಮರೆಯಿಲ್ಲದೆ ಹಾಗೆ ಹೇಳಿ ಆ ಪ್ರಕಾರ ತಮ್ಮ ವ್ಯವಸ್ಥೆ ಮಾಡಲಿ. ನನ್ನ ಪಾಲಿಗೆ ಬದಲಾವಣೆಗೆಡೆಯೇ ಇಲ್ಲ. ನನ್ನ ಪಾಲಿಗೆ ಅಹಿಂಸೆ ಬರಿ ಸಿದ್ಧಾಂತವಲ್ಲ, ಅನುಭವ ಬಾಹುಳ್ಯದಿಂದ ಸಿದ್ಧವಾದ ಜೀವನದ ವಸ್ತುಸ್ಥಿತಿ. ಕಬ್ಬನ್ನು ತಿಂದುತಿಂದು ಬಾರಿಬಾರಿಗೂ ಸವಿಯಾಗಿದೆಯೆಂದು ಮನಗಂಡವನು ಅದು ಕಹಿಯಾಗಿದೆಯೆಂದು ಹೇಳಲು ಹೇಗೆ ತಾನೆ ಒಡಂಬಟ್ಟಾನು? ಅದು ಕಹಿಯಿದೆಯೆಂದು ಹೇಳುವವರು ಕಬ್ಬನ್ನು ತಿಂದಲ್ಲ, ಅದರಂತಿರುವ ಬೀರೇನನ್ನೋ ತಿಂದಿರಬೇಕು. ಸಾಮ್ರಾಜ್ಯವಾದಿಗಳ ಗುಪ್ತ ಅಥವಾ ಬಹಿರಂಗ ಕೈವಾಡಕ್ಕೆ ಅದು ಇದೆಯೆಂದು ವಾದಕ್ಕಾಗಿ ಒಪ್ಪಿದರೂ ಅಹಿಂಸೆ ಹೆದರತಕ್ಕದ್ದಲ್ಲ.

ತಾನೇ ಸಾಲಗಾರ, ತಾನೇ ನ್ಯಾಯಾಧೀಶ, ತಾನೇ ಪಂಚ.

(ಜೆ. ಸಿ. ಕುಮಾರಪ್ಪನವರಿಂದ)

ಹಿಂದೊಂದು ಸಂಚಿಕೆಯಲ್ಲಿ ಹಿಂದುಸ್ತಾನದ ಸ್ಟರ್ಲಿಂಗ್ ಶಿಲ್ಕುಗಳ ನಿಜವಾದ ಸ್ವರೂಪವನ್ನು ವಿವರಿಸಿದ್ದೆವು. ಹಿಂದುಸ್ತಾನದ ಹೆಸರಿಗೆ ಆಗಾಗ್ಗೆ ಖರ್ಚು ಹಾಕಿದ ಅನೇಕ ವೆಚ್ಚಗಳೂ ಆ ಮೇಲೆ ನಮ್ಮ ಉತ್ಪನ್ನದಿಂದ ಕೆಲವಂಶವನ್ನು ಬಳಸಿಕೊಂಡು ಹಾಗು ಇಲ್ಲಿಂದ ಸರಕುಗಳನ್ನು ಒಯ್ದು ಆ ಬಗ್ಗೆ ಜಮಾಬರೆದ ಅಂಕಿಗಳೂ ಸೇರಿ ಈ ಶಿಲ್ಕು ಸಂಗ್ರಹವಾಯಿತು. ಸರಕುಗಳನ್ನು ಒಯ್ಯುವಾಗ ಕರಾರು ಮಾಡಿಕೊಂಡು ಒಯ್ಯದೆ ಹೆಚ್ಚು ಕಡಿಮೆ ಮುಟ್ಟುಗೋಲು ಹಾಕಿದಂತೆಮಾಡಿ ಕಸಿದುಕೊಳ್ಳಲಾಯಿತು. ಈ ಎಲ್ಲ ಸಾಲಗಳನ್ನು ನಿಷ್ಪಕ್ಷಪಾತ ನ್ಯಾಯಮಂಡಲದ ಯೋಗ್ಯ ಪರಿಶೀಲನೆಗೆ ಒಳಪಡಿಸಿದಲ್ಲಿ ಹಿಂದುಸ್ತಾನಕ್ಕೆ ಒಟ್ಟು ೫೭೦೦ ಕೋಟಿ ರೂಪಾಯಿ ಬರಬೇಕಾಗುವದೆಂಬದನ್ನೂ ನಾವು ತೋರಿಸಿ ಕೊಟ್ಟಿದ್ದೆವು. ಅಂತೆಯೇ, ಲಾರ್ಡ್ ಕ್ಲೈವನ ಕಾಲದಿಂದ ಇದುವರೆಗೆ ಹಿಂದುಸ್ತಾನದ ಹೆಸರಿಗಾದ ಜಮಾ ಖರ್ಚುಗಳನ್ನೆಲ್ಲ ಪರೀಕ್ಷಿಸಲು ನಿಷ್ಪಕ್ಷಪಾತ ನ್ಯಾಯ ಮಂಡಲವೊಂದನ್ನು ನೇಮಿಸಬೇಕೆಂಬೂ ಸೂಚಿಸಿದ್ದೆವು.

ಕೆಲ ದಿನಗಳ ಕೆಳಗೆ ಬ್ರಿಟಿಶ ಹಣಕಾಸಿನ ಮಂತ್ರಿಯಾದ ಡಾ. ಹ್ಯೂ ಡಾಲ್ಟನ್ನರು ಬ್ರಿಟನ್ನಿನ ಪ್ರಚಂಡ ಬಲವನ್ನು ಅವರಿಂದ ಹೆರವರಿಗೆ ಸಲ್ಲಬೇಕಾಗಿರುವ ನ್ಯಾಯವಾದ ಸಾಲವನ್ನು ಮುಳುಗಿಸುವ ಕೆಲಸಕ್ಕೆ ಉಪಯೋಗಿಸುವ ಬೆದರಿಕೆ ಹಾಕಿದರು. ಬಲಾಢ್ಯನ ಶಕ್ತಿಯ ಉಪಯೋಗ ದುರ್ಬಲರನ್ನೂ ಬಡವರನ್ನೂ ರಕ್ಷಿಸುವದರಲ್ಲಿ ಅದರಿ ಮಾತ್ರ ಅದಕ್ಕೆ ಫನತೆ ಪ್ರಾಪ್ತವಾಗುವದಲ್ಲದೆ ಬಡಿಗೆ ಹಿಡಿದವನ ಇಚ್ಛೆಯನ್ನು ನಡೆಸುವಂತೆ ಜಗತ್ತನ್ನು ಬೆದರಿಸಲು ಉಪಯೋಗಿಸಿದರೆ ಅದರ ಸಾರ್ಥಿಕ್ಯವಾದಂತಾಗಲಿಲ್ಲ.

ಇದೀಗ ಇನ್ನೊಂದು ಸುದ್ದಿ ಬಂದಿದೆ. ಪಾರ್ಲಮೆಂಟಿನಲ್ಲಿ ಕರ್ನಲ ಕ್ರಾಸ್ಬಿಯೆಟ ಆಯರರು ಬ್ರಿಟನ್ನಿನಿಂದ ಸಲ್ಲಬೇಕಾಗಿರುವ ಯುದ್ಧ ಸಾಲಗಳನ್ನು ಬಹಳ ಮಟ್ಟಿಗೆ ಇಳಿಸಲಾಗುವದೆಂಬ ಡಾ. ಡಾಲ್ಟನ್ನರ ಹೇಳಿಕೆ ಬ್ರಿಟಿಶ ಸರಕಾರದ ಧೋರಣೆಗನುಗುಣವಾಗಿದೆಯೇನೆಂದು ಕೇಳಿದಾಗ, ಮುಖ್ಯಮಂತ್ರಿ ಅಟ್ಲಿಯವರು ಹೀಗೆ ಉತ್ತರ ಕೊಟ್ಟರು: "ಸ್ಟರ್ಲಿಂಗ್ ಪ್ರದೇಶದಲ್ಲಿರುವ ದೇಶಗಳ ಬಗ್ಗೆ ಹೇಳುವದಾದರೆ ಈ ಧೋರಣದಲ್ಲಿ ಹೊಸದೇನೂ ಇಲ್ಲ. ಅದು ಡಿಸೆಂಬರ ೧೩, ೧೯೪೫ ರ ಆಂಗ್ಲೊ-ಅಮೇರಿಕನ್ ಹಣಕಾಸಿನ ಒಪ್ಪಂದದ ೧೦ ನೆ ಕಲಮಿನಲ್ಲಿ ಉಲ್ಲೇಖಿಸಲ್ಪಟ್ಟಿದೆ."

ತಮಗೆ ಅನುಕೂಲವಾದಾಗ ಈ ಜನರು ಕರಾರುಗಳು ಅನುಲ್ಲಂಘ್ಯವೆಂದೂ ಹೊಣೆಗಳನ್ನು ಪೂರೈಸಲೇ ಬೇಕೆಂದೂ ವಾದಿಸುವರು. ತಮಗೆ ಬೇಡವಾದಾಗ ತಮಗಲ್ಲದೆ ಬೇರಾರಿಗೂ ಸರಿಗಾಣದ ನೆವಗಳನ್ನು ಮುಂದೊಡ್ಡುವರು. ಹಿಂದುಸ್ತಾನ ಸಾಲಗಾರನಾಗಿದ್ದಾಗ ಈ ಸಾಲಗಳು ಸರಿಯಾಗಿಲ್ಲವೆಂದು ನಾವು ಸಂಶಯವನ್ನು ತೋರಿಸಿದರೂ ನಮ್ಮ ಹೇಳಿಕೆಯನ್ನು ಕೇಳಿಕೊಳ್ಳಲು ಕೂಡ ಅವರು ಸಿದ್ಧರಾಗಿಲ್ಲ. ಇವೇ ಸಾಲಗಳನ್ನು ಬ್ರಿಟಿಶರು ತಮಗೆ ತಾವೇ ಹಿಂದುಸ್ತಾನದ ಕಂದಾಯದಿಂದ, ಹಿಂದೀ ಜನತೆಗೆ ಹೇಳದೆ ಕೇಳದೆ, ಸಲ್ಲಿಸಿಕೊಂಡಿದ್ದಾರೆ.

ಅಗಂತುಕ ಕಾರಣಗಳಿಂದ ಏನೋ ಹಿಂದುಸ್ತಾನವಿಂದು ಸಾವುಕಾರ ದೇಶವನಾಗಿದೆ. ಅದಕ್ಕೆ ಇಂದು ಬರಬೇಕಾಗಿರುವ ಸಾಲ ಸ್ಟೇಜ್ಟೈಯಿಂದ ಬ್ರಿಟನ್ನಿಗೆ ಯುದ್ಧ ಸಾಮಗ್ರಿಗಳನ್ನೊದಗಿಸಿದ್ದರಿಂದ ಕೂಡಿಬಿದ್ದದ್ದಲ್ಲ ಬೇಡಿಸಿದ್ದನ್ನೆಲ್ಲ ಹಿಂದುಸ್ತಾನದ ಬ್ರಿಟಿಶ ಸರಕಾರ ತೆಗೆದುಕೊಂಡಿತು ಬದಲಿಗೆ ಕಾಗದದ ನೋಟುಗಳನ್ನು ಹಂಚಲಾಯಿತು. ಇದರಿಂದ ದೇಶದಲ್ಲಿ ಆರ್ಥಿಕ ಸಂಘಟನೆ ತೂಕತಪ್ಪಿತು. ಜನರಿಗೆ ಹೇಳಲಾರದ ಯಾತನೆಗಳನ್ನು ಅನುಭವಿಸಬೇಕಾಗಿ ಬಂತು. ಕಟ್ಟಕಡೆಗೆ, ಬಂಗಾಲದ ಬರಗಾಲ ಮಾತ್ರವಲ್ಲ

ಆದರಿಂದೀಚೆಗೆ ಪದೇಪದೇ ಒದಗುತಿರುವ ಬರಗಾಲಗಳಿಗೂ ಆರ್ಥಿಕ ಕಷ್ಟಪಡದ ಈ ವಿಶಾಲನೆಯೇ ನೂಲಕವಾಗಿದೆಯೆಂದು ತೋರಿಸಿ ಕೊಡಬಹುದು. ಹಿಂದು ಸ್ಥಾನದ ಬಡವರು ದೈಹಿಕ ಯಾತನೆಗೊಳಗಾದುದು ಮಾತ್ರವಲ್ಲ, ಲಕ್ಷಾಂತರ ಸಂಖ್ಯೆಯಲ್ಲಿ ಜೀವಕಳೆದುಕೊಂಡರು ಆದುದರಿಂದ ಸಾಲವನ್ನು ಸೂಟು ಬಿಡಬೇಕೆಂಬ ಬ್ರಿಟಿಷ್ನಿನ ಬೇಡಿಕೆ ಯೋಗ್ಯವಿಲ್ಲೆಂಬುದು ಸ್ಪಷ್ಟವಾಗುವದು.

ಬಲಾಢ್ಯನಾದ ಸಾಲಗಾರನು ತನ್ನ ಹೊಣೆಯಿಂದ ತಪ್ಪಿಸಿಕೊಳ್ಳಲು ಇಚ್ಛಿಸಿದರೆ ಸಾಲಿಗ ಸಾಲಗಾರರ ನಡುವೆ ಅಸಂತೃಪ್ತಿ, ದ್ವೇಷ, ವೈಮನಸ್ಸುಗಳುತ್ಪನ್ನವಾಗದಂತೆ ತಡೆಯುವದು ಅಸಾಧ್ಯ ಭೂಮಂಡಲ ವ್ಯಾಪಿ ಯುದ್ಧಗಳು ಹುಟ್ಟುವದು ಇಂಥ ಬೀಜಗಳಿಂದಲೆ ಬಲಿಷ್ಠರು ತಮ್ಮ ಶಕ್ತಿಯನ್ನು ನ್ಯಾಯದ ಗಂಟಲು ಮುರಿಯಲುಪಯೋಗಿಸದಂತೆ ಮಾಡಲು ನಮಗೆ ಇಚ್ಛೆ ಇದ್ದರೆ ಇಂಥ ವಿಷಯಗಳನ್ನು ತೀರ್ಮಾನಿಸಲು ಅಂತರ್ರಾಷ್ಟ್ರೀಯ ನ್ಯಾಯಮಂಡಲವೊಂದಿರಬೇಕು. ಈ ಮತ್ತು ಇಂಥ ಬೇರೆ ಪ್ರಶ್ನೆಗಳನ್ನು ತೀರ್ಮಾನಿಸಲು ಅಂಥ ಒಂದು ಸಂಸ್ಥೆಯನ್ನು ಸ್ಥಾಪಿಸಿ ಸಾಲಗಾರನು ತಾನೇ ನ್ಯಾಯಾಧೀಶನ ಮತ್ತು ಪಂಚಮಂಡಲದ ಪಾತ್ರವನ್ನು ವಹಿಸಿಕೊಳ್ಳದಂತೆ ಮಾಡಲು ಯುಕ್ತರಾಷ್ಟ್ರಸಂಘಕ್ಕೆ ಸಾಧ್ಯವಂಟೆ?

ಹಂಪಾಪಟ್ಟಣದ
ಬೋರ್ಡು ಶಾಲೋಪಾಧ್ಯಾಯರು
"ನವಭಾರತ ಸಂಪಾದಕರಿಗೆ"

ನಾವಿಬ್ಬರೂ, ಏಪ್ರಿ, ೩೬ ೫-೪೭ ಶನಿವಾರ ಭಾನುವಾರ ಹಂಪಾಪಟ್ಟಣವನ್ನು ಹರಿಜನಕಾರ್ಯಕ್ಕಾಗಿ ಸಂದರ್ಶಿಸಿದೆವು. ನಾವು ಹಿಂದೆ ಬಂದಾಗಲೂ ಈಗಲೂ ಶಾಲೆಯು ಮುಚ್ಚಿದ್ದಿತು. ಶಾಲೆಯಲ್ಲಿ ಉಪಾಧ್ಯಾಯರು ಹರಿಜನ ಬಾಲಕರನ್ನು ಸೇರಿಸುವದಿಲ್ಲವೆಂತಲೂ, ಉಪಾಧ್ಯಾಯರು ಸನಾತನಿಗಳಾದ ಶೀಲವಂತರೆಂದು ಹೇಳಿಕೊಂಡು, ಬಂದ ೩-೪ ಹುಡುಗರನ್ನು ನೂರು ನಾಲ್ಕು ವರ್ಷಗಳ ಕೆಳಗೆ ಹೊರಗಟ್ಟಿರುವುದು ಅತ್ಯಂತ ಆಶ್ಚರ್ಯವಾಗಿದೆ. ಈಗ ಶಾಲೆಯಲ್ಲಿ ಯಾರೂ ಹರಿಜನ ಬಾಲಕರಿಲ್ಲ. ಈ ಶಾಲೆಯಲ್ಲಿ ಉಪಾಧ್ಯಾಯರು ಬಹಳ ದಿನಗಳಿಂದ ಕೆಲಸ ಮಾಡುತ್ತಿದ್ದು ವಿದ್ಯಾಮಂದಿರವನ್ನು ತಮ್ಮ ಸ್ವಂತಮಠವಾಗಿಟ್ಟುಕೊಂಡು ತಮ್ಮ ಮನಬಂದಂತೆ ನಡೆಸುತ್ತಿರುವುದು ಗ್ರಾಮಸ್ಥರ ಹೇಳಿಕೆಗಳಿಂದ ಗೊತ್ತಾಯಿತು. ಈ ಕಾರಣದಿಂದ ಹರಿಜನರು ಪ್ರಾಯಶೇಟ ಶಾಲೆಯನ್ನು ಪ್ರಾರಂಭಿಸುವರಿದ್ದಾರೆ. ಅಸ್ಪೃಶ್ಯತಾ ನಿವಾರಣೆ ಮತ್ತು ಹರಿಜನರಾಭಿವೃದ್ಧಿಗೆ ಈಗಿನ ಸರ್ಕಾರವು ಕಂಕಣ ತೊಟ್ಟಿದೆ ಅಲ್ಲದೆ ಅವರಿಗಾಗಿಯೇ ಒಬ್ಬ ಮಂತ್ರಿಗಳು ಇರುವರು. ಇಂಥಾ ೨೦ ನೆಯ ಶತಮಾನದಲ್ಲೂ, ಇಂಥಾ ಹಿಂಸುಳಿದ ಉಪಾಧ್ಯಾಯನಿರುವುದು ವಿಷಾದಕರವಾಗಿದೆ ಸರ್ಕಾರದವರು ಇವರ ಮೇಲೆ ತಕ್ಕ ಚರ್ಯೆ ತೆಗೆದುಕೊಳ್ಳಬೇಕು.

ಅಲ್ಲಿದೆ ಧಾನ್ಯದ ಡಿಪೋದಲ್ಲಿ ಹರಿಜನರಿಗೂ ಬಡವರಿಗೂ ಕಾಳು, ಜವ್ವಿ ಎಣ್ಣೆ ಸರಿಯಾಗಿ ಕೊಡುತ್ತಿಲ್ಲವುದಿಲ್ಲೆಂದು ಗೊತ್ತಾಗಿದೆ. ಇದನ್ನು ಸರಿಪಡಿಸಬೇಕು.

ಕೊಟ್ರಪ್ಪನೆಸ್ಸಿ ಹಡಗಲಿ
ಬಿ ಕೆಂಚಯ್ಯಲ್ಲಪ್ಪ-ನಾಗ್ತಿಬಸಾಪುರ.

[We draw the attention of the District Board Educational Officer to the complaint stated above and request him to redress the same if true. **Editor Navabharat**]

ಬ್ರಿಟಿಷ ಸರ್ಕಾರದೊಡನೆ ಭಾರತಕ್ಕೆ ಅಧಿಕಾರ ವ್ಯವಹಾರಮಾಡುವ ಪದ್ಧತಿಗಳನ್ನು ನಿಶ್ಚಯಿಸಲು ಹೋಗಿದ್ದ ವೈಸ್ರಾಯರಾದ ಲಾರ್ಡ್ ವೌಂಟ್‌ಬ್ಯಾಟರನ್ನು ಶುಕ್ರವಾರ ಸಾಯಂಕಾಲ ಬಂದರು. ಭಾರತದ ಧುರೀಣರನ್ನು ೨ ನೆಯ ತಾ. ಸೋಮವಾರ ಕಾಣಲಿದ್ದಾರೆ.

ಪ್ರಜಾಪ್ರಭುತ್ವವೇ ಸಾಮ್ಯವಾದದ ತಳಹದಿ

ನಿರಂಕುಶಾಧಿಕಾರವಾಗದಿರಲು ಅದೇ ರಕ್ಷೆ

(ಬರೆದವರು : **ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ**)

[ಜಗತ್ತಿನಲ್ಲಿ ಸಾಮ್ಯವಾದೀ ಚಳುವಳಿಗಳೆಲ್ಲ ಅನಿವಾರ್ಯವಾಗಿ ನನ್ನ ನಿರಂಕುಶಾಧಿಕಾರದ ರೂಪವನ್ನೇ ತಳೆಯುತ್ತಿರುವುದೇಕೆ? ಸಾಮ್ಯವಾದೀ ಸಿದ್ಧಾಂತದಲ್ಲೇ ನಿರಂಕುಶಾಧಿಕಾರದ ಬೀಜ ಅಡಗಿದೆಯೇನು? ಇಲ್ಲ. ಸಾಮ್ಯವಾದೀ ಆದರ್ಶಕ್ಕೆ ಪ್ರಜಾತಂತ್ರ ಪದ್ಧತಿ ದಾರಿಯಾಗಬೇಕು. ಬರೆದವರ ಮಾತಿನಲ್ಲೇ ಹೇಳುವುದಾದರೆ "ಪ್ರಜಾತಂತ್ರ ಪದ್ಧತಿ ಪ್ರತಿ ಸಾಮ್ಯವಾದಿಯ ಜೀವನದರ್ಶನವಾಗಬೇಕು, ಸಾಮ್ಯವಾದೀ ಪ್ರಜಾಪ್ರಭುತ್ವವನ್ನು ಸ್ಥಾಪಿಸಬಯಸುವ ಪ್ರತಿ ಸಾಮ್ಯವಾದೀ ಪಕ್ಷವು ಸ್ವೀಕೃತ ಕಾರ್ಯಪದ್ಧತಿಯಾಗಬೇಕು." ಆಗ ಮಾನವ ಜೀವನದ ಕ್ಲಿಷ್ಟ ಸಮಸ್ಯೆಗಳ ಪರಿಹಾರದ ಸೂತ್ರ ಸಿಕ್ಕಂತಾದೀತು. ನಿಜವಾಗಿ ಸಮಷ್ಟಿವಾದಕ್ಕೂ (ಕಮ್ಯೂನಿಸಂ) ಸಾಮ್ಯವಾದಕ್ಕೂ (ಸೋಷಲಿಸಂ) ಇರುವ ಅಂತರ ಪ್ರಜಾತಂತ್ರ ಪದ್ಧತಿಗೆ ಸಾಮ್ಯವಾದ ಕೊಡುವ ಮಹತ್ವದಿಂದಲೇ ಹುಟ್ಟಿದೆ. ಇದನ್ನೇ ಶ್ರೀಮತಿ ಕಮಲಾದೇವಿಯರ ಈ ಲೇಖನ ಗಂಭೀರವಾಗಿ ಚರ್ಚಿಸುತ್ತದೆ ಪ್ರಜಾಪ್ರಭುತ್ವಾತ್ಮಕ ಸಾಮ್ಯವಾದೀ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ]

"ಮೊದಲನೆಯ ಮಹಾಯುದ್ಧ ಮುಗಿದಂದಿನಿಂದ ಜಗತ್ತಿನಲ್ಲಿ ಸಾಮ್ಯವಾದೀ ಚಳುವಳಿ ಒಂದಾದ ಮೇಲೊಂದು ವಿಷಮ ಪರಿಸ್ಥಿತಿಯನ್ನು ಎದುರಿಸಬೇಕಾದ ಪ್ರಸಂಗ ಬಂದಿದೆ. ಹಿಟ್ಲರ್ ಅಧಿಕಾರಾರೂಢನಾದರೂ ಮತ್ತು ರಷ್ಯದಲ್ಲಿ ನಿರಂಕುಶಾಧಿಕಾರ ಜನ್ಮ ತಳೆದು ಭದ್ರಗೊಂಡುದೂ ಆದಾಗ ಸಾಮ್ಯವಾದೀ ಚಳುವಳಿಯು ಪ್ರಾಣೋತ್ಕ್ರಮಣ ಪರಿಸ್ಥಿತಿ ಸನಿಯಕ್ಕೆ ಬಂದಂತೆ ಅನಿಸಿತು. ಎಷ್ಟೋ ಮಂದಿ ಸಾಮ್ಯವಾದಿಗಳೂ ಸಂಕಲ್ಪ ಚಿತ್ತರೂ ಮತ್ತು ಬುದ್ಧಿಕುಶಲರೂ ಆಗಿದ್ದವರೂ ತಾವು ತಪ್ಪುದಾರಿ ಹಿಡಿದರೆಂಬ ನಿಶ್ಚಯಕ್ಕೆ ಒಲ್ಲದ ಮನಸ್ಸಿನಿಂದ ಬರಬೇಕಾಯಿತು. ನಿರಂಕುಶಾಧಿಕಾರದ ಕಾಲಿನ ತುಳಿತಕ್ಕೆ ಸಾಮ್ಯವಾದೀ ಕಾರ್ಯಕರ್ತರು ಸಿಕ್ಕು ನುಚ್ಚುನೂರಾಗಿದ್ದರು. ಅವರೊಡನೆ ಆಕರ್ಷಕವಾದ ಸಾಮ್ಯವಾದೀ ಆದರ್ಶಗಳೂ ಹುಡಿಗೂಡಿದುವೆಂಬ ನಿರಾಶೆ ಹಾಗೂ ವಿಚಾರ ಭ್ರಾಂತಿ ಕವಿಯಿತು ಅಂತಲೇ ಸಾಮ್ಯವಾದದ ಪ್ರಜಾತಂತ್ರ ಪದ್ಧತಿಯ ವಿಶಿಷ್ಟ ಲಕ್ಷಣವನ್ನು ಉಳಿಸಲೋಸುಗ ಸುಯೋಜಿತ ಸಾಮುದಾಯಿಕ ಆರ್ಥಿಕ ವ್ಯವಸ್ಥೆಯ ತತ್ವಕ್ಕೆ ಶರಣುಹೋದರು ಸಾಮ್ಯವಾದಿಗಳು. ಆಗ ಕೆಲವರು 'ನ್ಯೂ ಡೀಲ್' (ಅಮೆರಿಕಕ್ಕೆ ರೂಜ್ವೆಲ್ಟರು ಕೊಟ್ಟ ಹೊಸ ಆರ್ಥಿಕ ಯೋಜನೆಯ ಪ್ರಣಾದಕರಾದರು, ಮತ್ತೆ ಕೆಲವರು ಮಿಶ್ರ ಆರ್ಥಿಕ ವ್ಯವಸ್ಥೆಯ ಪಂಥದವರಾದರು; ಇನ್ನೂ ಕೆಲವರು ಬಂಡವಾಳಶಾಹೀ ವ್ಯವಸ್ಥೆಗೇ ಜೋತು ಬಿದ್ದರು"— ಹೀಂಗೆಂದು ಅಮೆರಿಕದ 'ನ್ಯೂ ಲೀಡರ್' ಪತ್ರಿಕೆಯಲ್ಲಿನ ಲೇಖನದ ವಾದ.

'ಎರಡನೆಯ ಇಂಟರ್‌ನ್ಯಾಷನಲ್' ನ ನಾಯಕತ್ವ ಮುರಿದು ಆ ಸಂಸ್ಥೆಯ ಇತಿಶ್ರೀ ಆದ ಬಳಿಕ ಅದರಲ್ಲಿನ ಅಂಗ ಸಂಸ್ಥೆಗಳು ಜನತೆಯನ್ನು ಮತ್ತು ಸಾಮಾನ್ಯ ಕಾರ್ಯಕರ್ತರನ್ನು ಸಂಘಟಿಸಿ ತಮ್ಮ ಕರ್ತವ್ಯ ಪೂರಯಿಸಲು ಅಸಮರ್ಥವಾದುವು. ಈ ಕಾರಣದಿಂದಲೇ ಸಾಮ್ಯವಾದೀ ಚಳುವಳಿ ಕುಸಿದುಬಿತ್ತು. ಒಂದು ನೇರಾದ ಸಾಮಾಜಿಕ ಸಿದ್ಧಾಂತದ ಗಹನವಾದ

ಅನುಭವದ ಅರಿವಿಲ್ಲವಿದ್ದರೆ ಮಾತ್ರ ಅಂಥ ಅಪಘಾತ ಸಂಭವಿಸೀತು ಏಕೆಂದರೆ. ಬರಿಯ ನಂಬಿಕೆ ವಿಶ್ವಾಸಗಳಿದ್ದರೆ ಮಾತ್ರವೇ ಸಾಲದು. ಒಂದು ಆದರ್ಶದ ಬಗ್ಗೆ ಬಲವಾದ ಮಾನಸಿಕ ಆಕರ್ಷಣೆ, ಪುನಃ ಪುನಃ ಪ್ರಕಟವಾದ ಇಚ್ಛಾ ವಿಚಾರ, ಅನುಕೂದಲವಾದ ಮಾನಸಿಕ ಹದ ಇವೆಲ್ಲವುಗಳಿದ್ದರೆ ನಂಬಿಕೆ ಸ್ವಭಾವಸಿದ್ಧವಾಗಿ ಕನ್ನ ತಾನೇ ಹುಟ್ಟುತ್ತದೆ. ಅಂಥ ನಂಬಿಕೆ ಸಂಕಲ್ಪ ಆಗಬೇಕಾದರೆ ಅನುಭವದ ರಾಸಾಯನಿಕ ಪ್ರಯೋಗ ಆಗಬೇಕಾದೀತು.

ಅಂಥ ಅನುಭವ ಬಂದೀತು ಹೇಗೆ? ಎಂಬುದೇ ಇಂದಿನ ಪ್ರಶ್ನೆ. ಸಾಮ್ಯವಾದೀ ರಾಷ್ಟ್ರರಚನೆಗೆ ಮಾರ್ಗವಾದ ಕಾರ್ಯಕ್ರಮದ ಮೂಲಕ ಎಂಬುದೇನೋ ನಿಜ. ಅಂತಲೇ ಸಾಮ್ಯವಾದೀ ಸಮಾಜ ಸೃಷ್ಟಿಗೆ ದೊಡ್ಡ ಉತ್ಪಲ್ಲಟವೆಂಬ ಅರ್ಥ ಕೊಡುವ ಕ್ರಾಂತಿಯೊಂದೇ ಸಾಲದು. ಈ ಉದ್ಯಮಕ್ಕೆ ವ್ಯಾಮಾಣಿಕವಾದ ಶ್ರದ್ಧಾಯುಕ್ತ ಪ್ರಯತ್ನ ಅತ್ಯಗತ್ಯ.

ಹಿತಸಂಬಂಧಗಳ ಸಂಘರ್ಷ ಎಲ್ಲಾದರೊಂದೆಡೆ ಬಾರದೆಯೇ ಜಗತ್ತಿನಲ್ಲಿ ಜನರು ಬದುಕುವುದು ಅಸಾಧ್ಯವೆಂಬುದನ್ನೂ ಈ ಸಂದರ್ಭದಲ್ಲಿ ನೆನಪಿಡಲೇಬೇಕು. ಜೀವನದಲ್ಲಿ ಸಮರಸ ಹುಟ್ಟಬೇಕಾದರೆ ಅಂತರಂಗದಲ್ಲಿ ತೃಪ್ತಿ ಬಂದಾಗ, ನಮ್ಮ ಕನಸು ನನಸಾದಾಗ, ನಮ್ಮ ಆಶೆ ಆಕಾಂಕ್ಷೆಗಳು ಈಡೇರಿದಾಗ. ಜೀವನದಲ್ಲಿ ಎಲ್ಲ ಐಹಿಕ ಬೇಡಿಕೆಗಳೂ ಪೂರ್ಣ ಆಗುವುದು ಶಕ್ಯವಿಲ್ಲ; ಎಲ್ಲ ಮಾನಸಿಕ ಅಗತ್ಯಗಳ ತೃಪ್ತಿ ದೊರೆಯದು. ಹಾಗೆರದೇ ಎಲ್ಲ ಕ್ಷೇತ್ರದಲ್ಲಿಯೂ ಜನರ ಎಲ್ಲ ಬೇಡಿಕೆಗಳನ್ನು ಒದಗಿಸಬಲ್ಲ ಸಮಾಜ ಮನಷ್ಯನ ಬೆಳವಣಿಗೆಯ ಇಂದಿನ ಮಟ್ಟದಲ್ಲಿ ತೀರಾ ಕಲ್ಪನಾ ಸಾಮ್ರಾಜ್ಯ ಮಾತ್ರ

ದಿಗ್ದರ್ಶಕ ಆದರ್ಶ

ಅಂತಲೇ ಅತ್ಯಂತ ಸಮರ್ಥವಾದ ಮತ್ತು ದಕ್ಷವಾದ ಸಮಾಜ ವ್ಯವಸ್ಥೆಯಲ್ಲೂ ಸಂಘರ್ಷ ಅನಿವಾರ್ಯ. ಸತ್ಯವಾಗಿ ಹೇಳುವುದಾದರೆ ಸಂಘರ್ಷವೂ ಸೌಹಾರ್ದದಷ್ಟೇ ಜೀವನದಲ್ಲಿ ಅಂಗವಾಗಿ ಅಡಗಿದೆ. ಸಾಮ್ಯವಾದೀ ಸಮಾಜದಲ್ಲಿ ಕೋಪ ಅರಿಯದ ಮಾತೆಂದು ಯಾರಾದರೂ ಹೇಳಬಹುದು. ಸಮಾಜಕ್ಕೂ ವ್ಯಕ್ತಿಗೂ ಇರುವ ಸಂಬಂಧ ಎಷ್ಟು, ಹದವಾಗಿ ಹೊಂದಿಕೆ ಆದೀತೋ ಅಷ್ಟು ಹೆಚ್ಚಿನ ಪ್ರಮಾಣದಲ್ಲಿ ಅದು ಕಡಿಮೆ ಆದೀತೆಂದು ಮಾತ್ರ ಹೇಳಬಹುದು. ಅಲ್ಲದೆ ಹೆಚ್ಚು ಸಮರಸಪೂರ್ಣ ಸನ್ನಿವೇಶ ಈ ಕ್ರಿಯೆಗೆ ಪೂರಕವಾದೀತು.

ಆದುವರಿಂದ ಜೀವನದ ತಿಕ್ಕಾಟದ ಸನ್ನಿವೇಶಗಳನ್ನು ಅತ್ಯಂತ ಕನಿಷ್ಠ ಪ್ರಮಾಣಕ್ಕೆ ಇಳಿಸುವುದೇ ಯಾವದೇ ಸಮಾಜದ ಸಿದ್ಧಾಂತದ ಗುರಿಯಾಗಿರಬೇಕು. ಸಾಮ್ಯವಾದವೂ ಇಂಥಸೂಕ್ಷ್ಮ ಕೆಲಸಗಳನ್ನು ಆಗಿಸಬಲ್ಲ ಸಂಸ್ಥೆಗಳನ್ನೂ ವಿಧಾನವನ್ನೂ ಸಿದ್ಧಪಡಿಸಬೇಕು. ಪ್ರಜಾಪ್ರಭುತ್ವಾತ್ಮಕ ಸಾಮ್ಯವಾದದಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಬಲಾತ್ಕಾರವಾಗಲೀ ಅತಿ ಕಡಿಮೆ ಇರುವ ಮತ್ತು ಅತಿ ಹೆಚ್ಚು ಸಾಮೂಹಿಕ ಕರ್ತವ್ಯ ಇರುವಂಥ ವಿಧಾನಗಳನ್ನು ಯೋಚಿಸಿ ತನ್ಮೂಲಕ ಸಂಘರ್ಷವನ್ನು ಅತಿಕಡಿಮೆ ಮಾಡುವುದೇ ಆದರ್ಶ. ಸಾಮ್ಯವಾದೀ ಸಮಾಜ ಸ್ಥಾಪನೆಗಾಗಿ ದುಡಿಯುವಾಗ ಇದನ್ನೇ ದಿಗ್ದರ್ಶಕ ಆದರ್ಶವನ್ನಾಗಿ ಇಟ್ಟುಕೊಳ್ಳುತ್ತಾರೆ.

ಸಮಾನತೆಯ ಏಕರೂಪತೆಯಲ್ಲ

ಆಶಾಭಂಗ, ಭ್ರಾಂತಿವಿಮೋಚನೆ ಇವುಗಳಿಂದ ಸಮಾನತೆಯ ತಪ್ಪು ಕಲ್ಪನೆ ಆಗುತ್ತದೆ. ಆಗ ಸಮಾನತೆಯೆಂಬುದನ್ನು ಒಂದುತನವೆಂದಾಗಲೀ, ಏಕರೂಪತೆಯಿಂದಾಗಲೀ ತಪ್ಪುತಿಳಿಯುತ್ತಾರೆ. ನಿಜವಾಗಿ ನೋಡಿದರೆ ಏಕರೂಪತೆಯಿಂದ ಸಮಾನ ನ್ಯಾಯ ಸಿಗದು. ಏಕೆಂದರೆ ಒಬ್ಬ ವ್ಯಕ್ತಿಗೆ ಸಾಧುವಾದುದೂ, ಯೋಗ್ಯವಾದುದೂ ಇನ್ನೊಂದು ವ್ಯಕ್ತಿಗೆ ಹಾನಿಕರವಿರಬಹುದು (ಮೂಲಪ್ರತಿಫಲ ಮುಂತಾದ ವಿಷಯಗಳ ಹೊರತಾಗಿ). ಸಮಾಜಕ್ಕೆ ಉಪಯುಕ್ತವಾದ ಎಲ್ಲ ರೀತಿಯ ಕೆಲಸಗಳೂ ಸಮಾಜ ದೃಷ್ಟಿಯಿಂದ

THIS SPACE RESERVED FOR

The Rayalaseema Bank Limited, Bellary.

OUR OFFICE

Now at Moolangi Neelappa's Buildings Bangalore Road, Bellary

ರಾಯಲ ಸೀಮ ಬ್ಯಾಂಕಿನ ನಮ್ಮ ಬಳ್ಳಾರಿ ಕಛೇರಿಯು
ಈಗ ಬೆಂಗಳೂರು ರೋಡಿನಲ್ಲಿನ ಮೂಲಂಗಿ ನೀಲಪ್ಪನವರ ಕಟ್ಟಡದಲ್ಲಿದೆ.

ಅಷ್ಟೇ ಅಗತ್ಯವೆನಿಸಿದರೂ ವ್ಯಕ್ತಿಯ ದೃಷ್ಟಿಯಿಂದ ಒಂದೇ ರೀತಿಯ ಅಗತ್ಯತೆ ಅವುಗಳಲ್ಲಿ ಕಾಣದೆ ಇರ ಬಹುದು. ಇಂಥವುಗಳಲ್ಲಿ ವ್ಯಕ್ತಿಯ ಒಲವು, ದೈಹಿಕ ಶಕ್ತಿ ಮತ್ತು ಇಷ್ಟ ಇವೆಲ್ಲಾ ಸಮಾಜದಷ್ಟೇ ಪ್ರಬಲ ಅಂಶಗಳಾಗುತ್ತವೆ.

ಆದಕಾರಣ ಪ್ರಜಾಸತ್ತಾತ್ಮಕ ಆದರ್ಶವನ್ನೇ ನಾವು ಸೂಚಕವನ್ನಾಗಿಟ್ಟುಕೊಳ್ಳಬೇಕು. ಅಥವಾ ಹೆಚ್ಚು ಬಳಿಕೆಯಲ್ಲಿರುವಂತೆ ಸಮಾನ ಅಸಕ್ತಿಯೇ ಸೂಚಕ ತತ್ವವಾಗಿರಬೇಕು. ಭಾವಗಳ ಹೊಂದಿಕೆ ಕುಟುಂಬದಲ್ಲಿ ಸುಲಭ— ಆದರೂ ತಿಕ್ಕಾಟ ಇಲ್ಲದಿಲ್ಲ. ಸಮಾಜದಲ್ಲಿ ಬಹಳ ಕಷ್ಟ ಸಾಧ್ಯ ಅಂಥ ಹೊಂದಿಕೆ. ಆದರಲ್ಲೂ ಆಧುನಿಕ ಸಮಾಜದಲ್ಲಂತೂ, ಸಾಮೂಹಿಕ ಸಂಪ್ರದಾಯಗಳ ಒಂಧನ ಸಡಿಲಗೊಂಡಿರುವುದರಿಂದ ಮತ್ತು ತತ್ಸಂಬಂಧವಾದ ಸಹಕಾರ ಹಾಗೂ ಬಾಂಧವ್ಯದ ಬಿಗಿ ಇಲ್ಲದಿರುವ ಕಾರಣದಿಂದ ಅಂಥ ಭಾವಗಳ ಹೊಂದಿಕೆ ತೀರಾ ಕಷ್ಟಸಾಧ್ಯ. ಆದುದರಿಂದ ಇಂದಿನ ಸಮಾಜ ಯಂತ್ರವನ್ನು ನಿಯಂತ್ರಿಸಿ, ಅದರಲ್ಲಿ ಅಡಕವಾದ ವಿವಿಧ ಗುಂಪುಗಳ, ವಿಭಿನ್ನ ಹಿತಗಳ' ಹದವಾದ ಹೊಂದಿಕೆ ಕೊಡಬಲ್ಲ ತಂತ್ರವೊಂದನ್ನು ಕಂಡುಹಿಡಿಯಬೇಕು.

ಮಾನವ ಜೀವನದ ಘನತೆ

ಮನುಷ್ಯನ ಸಮುದಾಯ ಜೀವನದ ಗುರಿ ನಿರ್ಮಾಣ ಶಕ್ತಿಯುಳ್ಳ ವ್ಯಕ್ತಿಗಳ ಸಮಾಜ; ವ್ಯವಸ್ಥಿತ ಪದ್ಧತಿಯೊಂದನ್ನನುಸರಿಸುತ್ತ ನಡಿಯುವ ಯಂತ್ರದ ಗೊಂಬೆಗಳ ಸಮಾಜವಲ್ಲ. ಈ ಗುರಿಯೇ ನಿಜವಾದ ಸಾಮ್ಯವಾದೀ ಸಿದ್ಧಾಂತದ ಪೂರ್ವಪಕ್ಷ. ಆದುದರಿಂದ ಸ್ವತಂತ್ರ ವ್ಯಕ್ತಿಗಳು ಸಮಾಜಕ್ಕೆ ತಮ್ಮ ಜೀವನದ ವ್ಯವಸ್ಥೆಯನ್ನು ಮಾಡಿಕೊಳ್ಳಲು ಅನುಕೂಲ ಸನ್ನಿವೇಶ ಕಲ್ಪಿಸಬೇಕು. ಸಾಮ್ಯವಾದೀ ತತ್ವದಲ್ಲಿ ವ್ಯಕ್ತಿಯ ಬಗ್ಗೆಗಂಭೀರ ಕಲ್ಪನೆಯುಂಟು. ಮಾನವನ ಜೀವನದ ವಿಭಿನ್ನ ರೂಪ-ರಾಗಗಳ ಅರಿವು ಅಡಕವಾಗಿದೆ ಅದರಲ್ಲಿ.

(ಮುಂದುವರಿಯುವುದು)

ಬಳ್ಳಾರಿ ಜಿಲ್ಲಾ ಬಣಜಾರ ಸಭೆ

ಬಣಜಾರ (ಲಂಬಾಣಿ) ಹಾಸ್ಟೆಲ್.

ಕೊಟ್ಟೂರಿನಲ್ಲಿ 9-6-'47 ಸೋಮವಾರ ಬಣಜಾರ ಹಾಸ್ಟೆಲ್ ಪ್ರಾರಂಭೋತ್ಸವವನ್ನು ಹೊಸಪೇಟೆ ಕಲೆಕ್ಟರ್ ಜನಾಬ್ ರಿಯಾಜುದ್ದೀನ್ ಸಾಹೇಬರು ನೆರವೇರಿಸಲಿದ್ದಾರೆ. ಅಂದು ಶ್ರೀ ಬಿ. ಅನಂತಾಚಾರ್ಯ M. L. A. ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಲಂಬಾಣಿ ಸಭೆಯು ನಡೆಯಲಿದೆ. ಬಣಜಾರ ಜನರಿಗೆ ಸಂಬಂಧಿಸಿದ ಮುಖ್ಯ ತೀರ್ಮಾನಗಳಾಗಲಿರುವ ಕಾರಣ ಎಲ್ಲರೂ ಬರಲು ಕೋರಿಕೆ.

—ಮಾರ್ಗದರ್ಶಿ- ಜಿಲ್ಲಾ ಬಣಜಾರಸಂಘ.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. . HUSANJEE RAO, M VENKOJI RAO
General Merchants, Car Street Bellary.
2 M/S. V. M. GIRI & SONS,
(Pro:- M, S Acharya) Car Street, Bellary

ಶುದ್ಧ ! ಗ್ಯಾರಂಟಿಯಾದ್ದು !! ಸತ್ವಕಾರಿ !!!

—ಪೈರ ಎಳ್ಳೆಣ್ಣೆ—

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಿಕೆದಾರರು ಉಳ್ಳವರು. 1) ಎಂ. ಹುಸೇಂಜಿರಾವ್, ಎಂ. ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ಸು ಭಾ ಸ್
ರಾ ಷ್ಟ್ರ ಗೀ ತೆ.

ಸಿದ್ಧವಾಯಿತು— ಕ್ರಯ ೦—೮—೦'

ಸುಂದರ ಮುದ್ರಣ— ಇಲ್ಲಿಯವರೆವಿಗೆ ಪ್ರಭಾತ ಫೇರಿ ರಾಷ್ಟ್ರೀಯ ಸಮಾವೇಶಗಳಲ್ಲಿ ಹಾಡಲ್ಪಟ್ಟ ಎಲ್ಲಾ ಮುಖ್ಯ ದೇಶಭಕ್ತ ಕವಿಗಳ ಕನ್ನಡ ಮತ್ತು ಹಿಂದೀ ಭಾಷೆಯಲ್ಲಿನ ರಾಷ್ಟ್ರಗೀತೆಗಳ ಸಮಗ್ರ ಸಂಗ್ರಹ. ಕರ್ನಾಟಕದಲ್ಲಿ ರಾಷ್ಟ್ರ ಗೀತೆಗಳ ಇಷ್ಟು ದೊಡ್ಡ ಸಂಗ್ರಹವು ಇದುವರೆಗೆ ಪ್ರಕಟವಾಗಿಲ್ಲ. ಸ್ವಲ್ಪೇ ಪ್ರತಿಗಳು ಪ್ರಕಟವಾಗಿವೆ. ಹೆಚ್ಚು ಕೊಳ್ಳುವವರಿಗೆ ಕಮಿಷನ್ ಕೊಡಲಾಗುತ್ತದೆ.

'ನವಭಾರತ' ಕಾರ್ಯಾಲಯ ಬಳ್ಳಾರಿ.

—ರಾಷ್ಟ್ರೀಯ ಪುಸ್ತಕಗಳು.—
— ಕಾಂಗ್ರೆಸ್ ಸ್ವರೂಪ ದರ್ಶನ —

ರಾಷ್ಟ್ರೀಯ ಶಿಕ್ಷಣ	0—8—0
ಅಸ್ಪೃಶ್ಯತಾ ನಿವಾರಣೆ	0—12—0
ಪ್ರಾಂತಭಾಷೆ-ರಾಷ್ಟ್ರಭಾಷೆ	0—6—0
ಖಾದಿ	0—8—0
ಕಾಂಗ್ರೆಸ್ ಮತ್ತು ಸ್ವಯಂಸೇವಕದಳ.	0-10-0
ಸತ್ಯಾಗ್ರಹ (ಇತಿಹಾಸ-ತಂತ್ರ)	0—8—0

ವಿ ಪಿ. ಖರ್ಚುಬೇರೆ. ಇನ್ನು ಅನೇಕ ಪುಸ್ತಕಗಳು ದೊರೆಯುತ್ತವೆ —

ನವಭಾರತ ಕಾರ್ಯಾಲಯ, ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI..... ....

....

....

Printed at Krishna Press Bellary QH NO. B 17 FOR (Q.H. NO. B-5.)
Edited & bliPushed by T. B. KESHAVARAO

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೨೨ ಬಳ್ಳಾರಿ ಜೂನ್ ೯ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ ಕೇಶವರಾವ್.

ಬ್ರಿಟಿಷರ — ಪ್ರಕಟನೆ

ಭಾರತದ ವಿಭಜನೆ.

ಹಿಂದೂಸ್ತಾನದ ವೈಸ್ರಾಯರು ಸರ್ಕಾರದ ಸೂಚನೆಗಳನ್ನು ಪ್ರಕಟಿಸಿರುವರು. ವೈಸ್ರಾಯರು ಪಂಡಿತ ಜವಹರಲಾಲನೆಹರು, ಜಿನ್ನಾ, ಸರ್ದಾರ ಬಲದೇವಸಿಂಗರು 3ನೆಯ ತಾ. ರಾತ್ರಿ ಆಕಾಶವಾಣಿಯಲ್ಲಿ ಭಾಷಣಮಾಡಿದರು. ಕಾಂಗ್ರೆಸಿನ ಪರವಾಗಿ ನೆಹರೂರವರು ಸೂಚನೆಗಳನ್ನೊಪ್ಪಿ ಶಾಂತವಾತಾವರಣದಲ್ಲಿ, ಅಧಿಕಾರ ಪ್ರದಾನವಾಗಬೇಕೆಂದರು ಜಿನ್ನಾರವರು ಲೀಗ್ ಕೌನ್ಸಿಲ ಸಭೆಯಲ್ಲಿ ಈ ಸೂಚನೆಗಳನ್ನಿಟ್ಟು ವಪ್ಪಿಗೆ ಪಡೆಯುವ ಯತ್ನಮಾಡುವದಾಗಿಯೂ, ಎಲ್ಲವೂ ಶಾಂತರೀತಿಯಿಂದ ನೆರವೇರಬೇಕೆಂತ ಹೇಳಿದರು ಸರ್ದಾರ ಬಲದೇವಸಿಂಗರು ಸಿಕ್ಖರ ಒಪ್ಪಿಗೆಯನ್ನು ಕೊಟ್ಟರು

ಈ ಯೋಜನೆಯ ಮುಖ್ಯಾಂಶಗಳೇನೆಂದರೆ

(೧) ಹಿಂದುಸ್ತಾನದ ವಿಚ್ಛೇದನೆಯನ್ನು ಕೂಡ ಕೈಕೊಳ್ಳುವದು.

ಬಂಗಾಲ ಮತ್ತು ಪಂಜಾಬ ಪ್ರಾಂತಗಳನ್ನೂ ವಿಭಾಗಿಸಲಾಗುವದು.

(೨) ವಿಚ್ಛೇದನೆಯು ಪೂರ್ಣವಾಗುವವರೆಗೆ ಈಗಿನ ನಡುಗಾಲ ಸರಕಾರದಲ್ಲಿ ಬದಲಾವಣೆಯಿಲ್ಲ. ಅನಂತರ ಎರಡು ಪ್ರತ್ಯೇಕ ಸರಕಾರಗಳನ್ನು ಪೂರ್ಣ ಅಧಿಕಾರದೊಂದಿಗೆ ಸ್ಥಾಪಿಸಲಾಗುವದು.

(೩) ಪ್ರಾಂತಿಕ ಶಾಸನ ಸಭೆಗಳು ವಿಚ್ಛೇದನೆಯ ಬಗ್ಗೆ ಮತ ಕೊಡಬೇಕು.

(೪) ಸಂರಕ್ಷಣೆ, ಸಾರಿಗೆ ಮತ್ತು ವಿದೇಶ ವ್ಯವಹಾರ ವಿಷಯಗಳನ್ನು ವಿಭಾಗಿಸುವದಕ್ಕೆ ಸಮಯ ಬೇಕಾಗುವದರಿಂದ ಆಯಾ ಘಟನಾ ಸಮಿತಿಗಳು ನಿರ್ಣಯಕ್ಕೆ ಬರುವವರೆಗೆ ಸಂಯುಕ್ತ ವ್ಯವಸ್ಥೆ ಇಡಲಾಗುವದು.

(೫) ಗಡಿನಾಡ ಪ್ರಾಂತದಲ್ಲಿ ಈಗಿನ ಮಂತ್ರಿಮಂಡಲವನ್ನು ಬದಲಿಸದೆ ಅವರ ಪ್ರಾಂತವುಯಾವ ಘಟನಾ ಸಮಿತಿ ಸೇರುವದೆಂಬ ಬಗ್ಗೆ ಜನಮತ ತೆಗೆದುಕೊಳ್ಳಲಾಗುವದು.

(೬) ಬಂಗಾಲದ ಭವಿಷ್ಯ ನಿರ್ಣಯವಾಗುವವರೆಗೆ ಶಿಲ್ಹೇಟ ಜಿಲ್ಲೆಯು ಈಗಿನಂತೆ ಅಸಾಮದಲ್ಲಿರಬೇಕು. ಆ ಮೇಲೆ ಅದರ ಅಭಿಪ್ರಾಯಾನುಸಾರ ಅಸಾಮ ಇಲ್ಲವೆ ಬಂಗಾಲಕ್ಕೆ ಜೋಡಿಸಲಾಗುವದು.

(೭) ಸಾರ್ವಭೌಮಾಧಿಕಾರ ಮುಗಿಯುವದರಿಂದ ಬ್ರಿಟಿಶ ಸರಕಾರವು ಸಂಸ್ಥಾನಗಳೊಡನೆ ಯಾವದೇತರದ ಒಪ್ಪಂದ ಮಾಡಿಕೊಳ್ಳುವದಿಲ್ಲ ಅವು ಒಂದಿಲ್ಲೊಂದು ರಾಜ್ಯವನ್ನು (ಡೊಮಿನಿಯನ್) ಸೇರುವಂತೆ ಪ್ರಯತ್ನಿಸಲಾಗುವದು.

ಉತ್ಪತ್ತಿ ಹೆಚ್ಚಾಗಲೇ ಬೇಕು

ಕೆಲಸಗಾರರ ಸಹಕಾರವಿಲ್ಲದೆ ಕೈಗಾರಿಕೆಗಳಿಗೆ ಏಳಿಗೆಯಿಲ್ಲ.

ಮಾನ್ಯ ಶ್ರೀ ಸಿ ರಾಜಗೋಪಾಲಾಚಾರ್ಯರ ಭಾಷಣ.

ದೇಶದ ಏಳಿಗೆಯು ಅದರ ನೈಪ್ಪಿಡಾಯಕ ವ್ಯಾಪಾರ ವ್ಯವಹಾರಗಳ ಮೇಲೆ ಹೊಂದಿಕೊಂಡಿದೆ ಎಂಬುದನ್ನು ನಾನು ಜೆನ್ನಾಗಿ ತಿಳಿದಿರುವೆನು ವಿವಿಧ ವ್ಯಾಪಾರ ಸಂಸ್ಥೆಗಳ ಕಷ್ಟನಷ್ಟಗಳ ವಿಷಯು ನಮಗೆಲ್ಲರಿಗೂ ತಿಳಿದಿದೆ ಇವುಗಳ ಕುರಿತು. ಕೇಂದ್ರ ಸರಕಾರಕ್ಕೆ ಅನೇಕ ಮನವಿಗಳೂ ಬಂದಿವೆ

ಪ್ರಂಪಚದಲ್ಲೆಲ್ಲಾ ಇದು ಒಂದು ಅತ್ಯಂತ ಕಷ್ಟ ಕಾಲವಾಗಿದೆ ಬೇರೆ ದೇಶಗಳ ಕುರಿತು ಅಲ್ಲಿಯ ಜನರಿಂದಲೂ ಪತ್ರಿಕೆಗಳಿಂದಲೂ ಅಲ್ಲಿಯ ಪರಿಸ್ಥಿತಿ ತಿಳಿಯದೆ ಇಲ್ಲ ಇಂಗ್ಲೆಂಡಿನ ಹಾಗೂ ಯುರೋಪಿನ ಜನರು ನಮ್ಮಷ್ಟು ಸುಖಿಗಳಾಗಿಲ್ಲವೆಂದು ನಾನು ಖಂಡಿತವಾಗಿ ಹೇಳಬಹುದಾಗಿದೆ. ನಮ್ಮ ಕಷ್ಟಗಳು ಬೇರೆ ದೇಶಗಳ ಜನರು ಅನುಭವಿಸುತ್ತಿರುವುದಕ್ಕಿಂತ ಎಷ್ಟೋ ಕಳೆಮೆ ಕಳದ ಯುದ್ಧಕಾಲದಲ್ಲಿ ಅಪಾರ ನಷ್ಟವಾಯಿತು. ಜನರು ಉತ್ಪಾದಕ ಕಾರ್ಯದಲ್ಲಿ ತೊಡಗದೆ ನಾಶಕಾರ್ಯದಲ್ಲೇ ಮುಂದುವರಿದಿದ್ದರು. ಆರು ಅಮೂಲ್ಯ ವರ್ಷಗಳನ್ನು ವ್ಯರ್ಥಹಾಳು ಮಾಡಿದ ಅನಂತರ ಯಾವ ವ್ಯಕ್ತಿಗಾಗಲೀ, ರಾಷ್ಟ್ರಕ್ಕಾಗಲೀ ಸುಖಸಂತೋಷದಲ್ಲಿರಲು ಸಾಧ್ಯವಿಲ್ಲ. ಈ ನಷ್ಟಗಳ ಅಸ್ತಿವಾರಗಳ ಮೇಲೆ ನಾವು ದಿನದಿಂದ ದಿನಕ್ಕೆ ಜೀವಿಸುತ್ತಿದ್ದೇವೆ ಮುಂಚಿನ ಕಾಲದಂತಿದ್ದರೆ, ಈ ದೇಶದಲ್ಲಿ ನಮ್ಮ ಪ್ರಸ್ತುತದಂತಿರುವ ದುರಂತಗಳಿಂದ ಬಹುದೂರವಿರುತ್ತಿದ್ದೆವು. ಆದರೆ ಇಂದಿಗೆ ಪ್ರಪಂಚದ ಒಂದು ಭಾಗದಲ್ಲಿ ಯುದ್ಧನಡೆಯುವುದಾದರೆ, ಇತರ ಭಾಗಗಳಲ್ಲಿರುವ ಜನರು ಸಂಕಷ್ಟ ಪಡಬೇಕಾಗುತ್ತದೆ. ಇದಲ್ಲದೆ ನಮಗೆ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ್ದರೆ, ಬಹುಶಃ ನಮ್ಮ ಸ್ಥಿತಿ ಬೇರೆಯಾಗಿರುತ್ತಿತ್ತು. ನಮಗೆ ಯಾವುದಾದರೂ ಪರಿಹಾರವು ದೊರೆಯುತ್ತಿತ್ತು ನಮ್ಮ ಮುಂದಿರುವ ಪ್ರಶ್ನೆಯೆಂದರೆ, ನಾವು ಹೇಗಾದರೂ ನಮ್ಮ ಮೊದಲಿನ ಸ್ಥಿತಿಗೆ ಬರಬೇಕು. ನಾವು ಅನೇಕ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಮುಖ್ಯ ವಿಷಯವೆಂದರೆ, ಉತ್ಪತ್ತಿ ಹೆಚ್ಚಿಸುವದಕ್ಕೆ ನಾವು ಅತ್ಯಧಿಕ ಯತ್ನಸಡಿಸಬೇಕಾಗಿದೆ. ಹಾಗೆ ನಾವು ಮಾಡದಿದ್ದರೆ, ಎಲ್ಲಾ ಪಕ್ಷ ಪಂಗಡಗಳವರು ಅಂತಹ ಕೆಲಸದಲ್ಲಿ ನಮ್ಮೊಡನೆ ಸಹಕರಿಸದಿದ್ದರೆ, ನಾವು ಸುಲಭವಾಗಿ ಚೇತರಿಸಿಕೊಳ್ಳಲಾರೆವು.

ವ್ಯಾಪಾರ ನಿಯಂತ್ರಣ.

ಇನ್ನೊಂದು ಮುಖ್ಯ ಪ್ರಶ್ನೆಯೆಂದರೆ. ನಿಯಂತ್ರಣ, ಈ ವಿಷಯವನ್ನು ಪರೀಕ್ಷಿಸುವಾಗ ನಾವು ನಮ್ಮ ಸ್ವಂತ ಹಿತಗಳನ್ನು ಲೆಕ್ಕಿಸಕೂಡದು. ನಾನು ವ್ಯಾಪಾರಸ್ಥರ ಕಷ್ಟಗಳನ್ನು ತಿಳಿದಿರುವೆನು. ನಿಯಂತ್ರಣಗಳು ರದ್ದಾಗಬೇಕೆಂದು ಅನೇಕರು ಆಶಿಸಬಹುದು ಆದರೆ ನಿಯಂತ್ರಣವಿಲ್ಲದಿದ್ದರೆ ಏನಾಗಬಹುದು. ಅವರು ಆಲೋಚಿಸುವುದಿಲ್ಲ ಈಗಿನಂತಿರುವ ಕಷ್ಟದ ಕಾಲದಲ್ಲಿ ಪ್ರಾಂತದಿಂದ ಪ್ರಾಂತಕ್ಕೆ ಮಾತ್ರವಲ್ಲ, ಪ್ರಾಂತದೊಳಗೆ ಸಹ ಹಂಚುವುದರಲ್ಲಿ ನಿಯಂತ್ರಣವು ಅವಶ್ಯವೆಂದು ನಾನು ಭಾವಿಸುತ್ತೇನೆ. ಯಾವ ಒಗೆಯ ನಿಯಂತ್ರಣವೂ ಇಲ್ಲದೆ ಪ್ರತಿಯೊಂದು ವಸ್ತುವನ್ನು ಸ್ವತಂತ್ರವಾಗಿ ಬಿಟ್ಟುಬಿಡಲು ನನಗೆ ಧೈರ್ಯಸಾಕಾಗುವುದಿಲ್ಲ. ಈ ವಿಷಯವು ನಮ್ಮಲ್ಲಿ ಸಾಕಷ್ಟು ದಾಸ್ತಾನು ಇದೆಯೋ ಇಲ್ಲವೋ ಎಂಬುದರ ಮೇಲೆ ಹೊಂದಿಕೊಂಡಿದೆ.

ಅಮದು ಮಾಡಿದ ವಿದೇಶೀ ಸಾಮಾಗ್ರಿಗಳಲ್ಲಿ ಹೆಚ್ಚಿನ ಅಂಶವನ್ನು ಸರಕಾರವು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ತನ್ನ ಇಲಾಖೆಗಳ ಮೂಲಕ ಹಂಚುತ್ತಿರುವುದು, ಜನತೆಯ ಹಿತ ರಕ್ಷಣೆಗಾಗಿ ಅಲ್ಲದೆ ಬೇರೆ ಇಲ್ಲ. ಪರದೇಶಗಳಿಂದ ಸಂಗಾವಾಗಿ ಅಮದು ಆದರೆ ಇಲ್ಲಿಯ ಜನರ ಉತ್ಪಾದಕ ಕಾರ್ಯಗಳಿಗೋ

ಸ್ಥರ ಬೆಲೆಗಳ ಮೇಲೆ ನಿಯಂತ್ರಣವನ್ನಿರಿಸಲು ಕಷ್ಟವಾದೀತು. ಈ ದೇಶದಲ್ಲಿ ತಯಾರಿಸಿದ ವಸ್ತುಗಳ ಬೆಲೆಗಳನ್ನು ಪರದೇಶಗಳಿಂದ ಆಮದು ಮಾಡಿದ ವಸ್ತುಗಳ ಬೆಲೆಗಳ ಮಟ್ಟಕ್ಕೇರಿಸಿದರೆ, ದೇಶವು ಹಾಳಾಗಿಹೋಗುವುದು. ದೇಶದಲ್ಲಿರುವ ಬಡವರು ಕಷ್ಟದಲ್ಲಿ ಬೀಳಬೇಕಾಗುವುದು.

ಮದ್ರಾಸ್ ಪ್ರಾಂತದಲ್ಲಿ ಇನ್ನೂ ಹೆಚ್ಚಿಗೆ ಕೈಗಾರಿಕೆಗಳು ಸ್ಥಾಪಿಸಲ್ಪಡಬೇಕಾಗಿದೆ. ಆದರೆ ಇಲ್ಲಿ ದೊಡ್ಡದೊಡ್ಡ ಗಿರಣಿಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲು ಕಷ್ಟವಾಗುವುದೆಂದು ತೋರುತ್ತದೆ. ನಮ್ಮ ಕೈಗಾರಿಕೆಗಳು ಅಭಿವೃದ್ಧಿಹೊಂದಬೇಕಾದರೆ ಮಜೂರ ಸಮಸ್ಯೆಯನ್ನು ತೃಪ್ತಿಕರವಾದ ರೀತಿಯಲ್ಲಿರಿಸಬೇಕಾಗಿದೆ. ಕೆಲಸಗಾರರ ಸಹಕಾರವಿಲ್ಲದೆ ಕೈಗಾರಿಕೆಗಳಿಗೆ ಏಳಿಗೆಯಿಲ್ಲ

ಕೇಂದ್ರ ಸರಕಾರವೂ ದೇಶದ ಮುಖಂಡರೂ ಅನೇಕ ಪ್ರಾಂತಗಳಲ್ಲಿ ಶಾಂತಿಯನ್ನು ಪುನಃ ನೆರೆನಿಲ್ಲಿಸುವುದಕ್ಕೂ ಬೇಕಾದ ಮಾರ್ಗಗಳನ್ನು ಕಂಡು ಹಿಡಿಯುವುದರಲ್ಲಿಯೂ ಹಿಂದುಸ್ಥಾನಕ್ಕೋಸ್ಕರ ಒಂದು ಹೊಸ ರಾಜ್ಯಾಂಗ ಘಟನೆಯನ್ನು ರಚಿಸುವುದರಲ್ಲಿಯೂ ನಿರತರಾಗಿರುವರು. ಮದ್ರಾಸ್ ನಗರವು ಜಾತೀಯ ಗಲಭೆಗಳಿಗೆ ಎಂದಿಗೂ ತುತ್ತಾಗಲಾರದೆಂದು ನನಗೆ ಭರವಸೆ ಇದೆ. ರಾಜಕೀಯ ತೊಂದರೆಯು ಪ್ರಥಮತಃ ತೀರ್ಮಾನಿಸಲ್ಪಡಬೇಕು. ಕೈಗಾರಿಕೆಗೆ ಸಂಬಂಧಪಟ್ಟ ಸಮಸ್ಯೆಯನ್ನು ಅನಂತರ ಬಗೆಹರಿಸಬಹುದು.

ಹಿಂದೂಸ್ತಾನ ಪಾಕಿಸ್ತಾನಗಳೆಂಬುದಾಗಿ ವಿಭಜಿಸಲ್ಪಟ್ಟಿರೂ ಕೊನೆಯಲ್ಲಿ ಒಂದಾಗುವರೆಂದು ಮಹಾತ್ಮ ಗಾಂಧಿಯವರು ಆಶಿಸಿದ್ದಾರೆ. ಅನೇಕ ಕಾರಣಗಳಿಗಾಗಿ ಆರ್ಥಿಕವಾಗಿ ಸ್ವಾವಲಂಬಿಯಲ್ಲದ ಪಾಕಿಸ್ತಾನ ರಾಷ್ಟ್ರಗಳು ಹಿಂದೂಸ್ತಾನವನ್ನು ಸೇರುವವೆಂದು ಅನೇಕರ ಅಭಿಮತವಿದೆ.

ಬಳ್ಳಾರಿ.

ಕಾರೀಕು 31-5-47 ನೆಯ ಪ್ರಾತಃಕಾಲ ಕಲೆಕ್ಟರ್ ಶ್ರೀ ಅನಂತರಾಮನ್‌ರವರ ಅಧ್ಯಕ್ಷತೆಯಲ್ಲಿ ಆಹಾರ ಬಟ್ಟೆಯ ಪರಿಸ್ಥಿತಿಯು ಜಿಲ್ಲಾ ಸಮಿತಿ ಸಭೆಯಲ್ಲಿ ವಿಮರ್ಶಿತವಾಯಿತು. ಲೀಗ್ ಶಾಸನ ಸಭ್ಯರಾದ ಮಹಮ್ಮದ್ ಇಸ್ಮಾಯಿಲ್‌ರ ಪ್ರಶ್ನೆಗಳಿಗುತ್ತರ ಕೊಡುತ್ತಾ ಇನ್‌ಸ್ಪೆಕ್ಟಿಂಗ್ ಅಸಿಸ್ಟೆಂಟ್ ಕಮಿಷನರವರಾದ ಶ್ರೀ ಸುಬ್ಬರಾಯರು ಬಟ್ಟೆಹೊಲಿಯುವವರಿಗೂ ಸಹ ಬಟ್ಟೆಯನ್ನೊದಗಿಸಿ ಸಹಾಯಮಾಡಲು ಸಹಾನುಭೂತಿಯಿಂದ ವಿಚಾರಿಸುವುದಾಗಿ ಹೇಳಿದರು. ಸುಮಾರು 200 ಜನ ಹೊಲಿಯುವವರು ಹಾಜರಿದ್ದರು. ಅದವಾನಿಯಲ್ಲಿ ಜಮುಖಾನಗಳನ್ನು ನೇಯುವ ಎರಡುಸಾವಿರ ಜಮುಖಾನದ ಮಗ್ಗಗಳಿಗೆ ೨೨೧ ಗಂಟುಗಳಷ್ಟು ನೂಲುಬೇಕಾಗಿದ್ದು ಸರ್ಕಾರದವರು ೧೨೦ ಬೇಲುಗಳನ್ನು ಮಾತ್ರ ಕೊಡಲಿರುವುದನ್ನು ಹೆಚ್ಚಿಸುವುದಕ್ಕಶಕ್ಯವೆಂದು ಸೂಚಿತವಾಯಿತು. ಹೋಟೆಲುಗಳವರಿಗೆ ಕೊಡುತ್ತಿದ್ದ ಸಕ್ಕರೆಯಲ್ಲಿ ¼ ಅಂಶ ಕಡಿಮೆಮಾಡಲು ನಿಶ್ಚಿತವಾಯಿತು. ಶ್ರೀ ಲಿಂಗಾರೆಡ್ಡಿ ಮತ್ತು ಹನುಮಂತರೆಡ್ಡಿಯವರು ಕಾಳಿನ ಸಂಗ್ರಹದ ವಿಷಯಕ್ಕೆ 'ಜುಲುಂ' ನಡೆದಿದ್ದನ್ನು ವಿವೇದಿಸಿದರು. ಆಹಾರ ದಾನ್ಯಗಳ ಸಂಗ್ರಹದ ಕಾಲಕ್ಕೆ ಗ್ರಾಮ ಮತ್ತು ಸಮಿತಿ ಸದಸ್ಯರೊಂದಿಗೆ ಹೋಗಲು ರೆವಿನ್ಯೂ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡುವುದಾಗಿ ಕಲೆಕ್ಟರವರು ತಿಳಿಸಿದರು.

ಉಜ್ಜಿನಿಗೆ ಕಾಳಿನಸಂಗ್ರಹದ ಅಧಿಕಾರಿಗಳು ಬಂದಾಗ ದೌರ್ಜನ್ಯನಡೆಯಿತೆಂದು ನಮ್ಮ ಸುದ್ದಿಗಾರರು ತಿಳಿಸಿದ್ದಾರೆ. ಈ ವಿಷಯದಲ್ಲಿ ಶಕ್ಯ ಚರ್ಯೆ ತೆಗೆದುಕೊಳ್ಳಲು ಕಲೆಕ್ಟರವರಿಗೆ ತಿಳಿಸಲಾಗಿದೆ.

ಪಂಜಾಬಿನ ಗುರಗಾಂವ ಜಿಲ್ಲೆಯ ಸುಮಾರು ೪೦ ಹಳ್ಳಿಗಳು ಜಾತೀಯಕಲಹದ ಕಾರಣಗಳಿಗಾಗಿ ಸಂಪೂರ್ಣ ದಗ್ಧಮಾಡಲ್ಪಟ್ಟಿವೆ.

—: ಉಪಾಧ್ಯಾಯರ ಸಂಕಷ್ಟ :—

ವಿದ್ಯಾಮಂತ್ರಿಗಳ ಭರವಸೆ.

ಮಾನ್ಯ ವಿದ್ಯಾಮಂತ್ರಿ ಶ್ರೀ ಟಿ ಎಸ್- ಅವಿನಾಶಲಿಂಗಂ ಇವರು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸ್ಥಿತಿಗತಿಗಳನ್ನು ಸುಧಾರಿಸಲು ಭರವಸೆ ಇತ್ತಿದ್ದಾರೆ. ಉಪಾಧ್ಯಾಯರ ಕಷ್ಟಗಳು ಸರಕಾರದ ದೃಷ್ಟಿಯಿಂದ ಅತ್ಯಂತ ಗಮನಾರ್ಹಗಳಾಗಿವೆ. ಅದರೆ ಇನ್ನೊಮ್ಮೆ ವೇತನವನ್ನು ಹೆಚ್ಚಿಸುವ ತನಕ ತಮ್ಮ ಬೇಡಿಕೆಗಳನ್ನು ತಮ್ಮಲ್ಲೇ ವಿಚಾರಿಸಿಕೊಳ್ಳಬೇಕೆಂದು ಆಶಿಸುತ್ತಾರೆ. ಈಗಿನ ವೇತನ ಪರಿಷ್ಕಾರದಿಂದ ಸರಕಾರಕ್ಕೆ 247 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುವುದು. ಆ ಸೈಕಿ ವಿದ್ಯಾ ಇಲಾಖೆಯವರಿಗಾಗಿ 120 ಲಕ್ಷಗಳಷ್ಟು ಸಲ್ಲುವುದು. ಸ್ಥಳೀಯ ಸಂಸ್ಥೆಗಳು ಉಪಾಧ್ಯಾಯರಿಗಾಗಿ 60 ಲಕ್ಷ ರೂಪಾಯಿಗಳ ಹೆಚ್ಚಿಗೆ ಖರ್ಚು ಮಾಡಬೇಕಾಗುವುದು. ಹೀಗೆ ಒಟ್ಟು 180 ಲಕ್ಷ ರೂಪ್ಯಾಗಳು ವಿದ್ಯಾಭ್ಯಾಸಕ್ಕಾಗಿ ಹೆಚ್ಚಿಗೆ ಖರ್ಚಾಗುವುದು. ಕಡಮೆ ಎಂದರೆ ತಿಂಗಳಿಗೆ 50 ರೂಪಾಯಿಗಳ ವೇತನವಿರಬೇಕೆಂದೂ ಶಿಕ್ಷಕರ ಮಕ್ಕಳಿಗೆಲ್ಲಾ ಉಚಿತವಾಗಿ ವಿದ್ಯಾಭಾಸ ಕೊಡುವ ಏರ್ಪಾಡಿರಬೇಕೆಂದೂ ಉಪಾಧ್ಯಾಯವರ್ಗದ ಕೇಳಿಕೆಯಾಗಿದೆ. ಈ ಬಗ್ಗೆ ಹೆಚ್ಚು ಕಡಿಮೆ 6 ಕೋಟಿ ರೂಪಾಯಿಗಳಷ್ಟು ಪ್ರತ್ಯೇಕವಾಗಿ ಖರ್ಚಾಗಬಹುದು. ಇಂತಹ ಅನುಕೂಲತೆಗಳು ಒದಗಿದರೆ ಉಪಾಧ್ಯಾಯ ವೃತ್ತಿಯು ಆದರ್ಶವೃತ್ತಿಯೂಗುವುದಲ್ಲದೆ ಅದಕ್ಕೆ ಸಲ್ಲಬೇಕಾದ ಸ್ಥಾನ-ಮಾನಗಳೂ ದೊರೆತಂತಾದೀತು. ಸದ್ಯಕ್ಕೆ ಉಪಾಧ್ಯಾಯರ ಸಂಕಷ್ಟಗಳನ್ನು ಸಾಧ್ಯವಿದ್ದಷ್ಟು ಪರಿಹಾರ ಮಾಡಲು ಸರಕಾರವು ಪ್ರಯತ್ನಿಸುವುದೆಂದೂ ಮಾನ್ಯ ವಿದ್ಯಾ ಮಂತ್ರಿಗಳು ಸಾರಿದ್ದಾರೆ.

ಬಳ್ಳಾರಿಯು ಆಂಧ್ರವಿಶ್ವವಿದ್ಯಾಲಯ ಕ್ಷೇತ್ರಕ್ಕೆ ಸೇರಬಾರದು.

ಮದ್ರಾಸ್ ಶಾಸನ ಸಭ್ಯರಾದ ಶ್ರೀ ಬೆಲ್ಲೂಣಿ ಭೀಮರಾಯರು ಅಧ್ಯಕ್ಷತೆ ವಹಿಸಿದ ಜಿಲ್ಲಾ ಕರ್ನಾಟಕ ಸಂಘದವರಾಶ್ರಯದಲ್ಲಿ ಕರೆದ ಸಾರ್ವಜನಿಕ ಸಭೆಯಲ್ಲಿ ಈ ಕೆಳ ತೀರ್ಮಾನವು ಈನೆಯ ದಿನಾಂಕ ಸ್ವೀಕೃತವಾಯಿತು.

"ಮ. ಶಾ. ಸ ನಿಯಮಿಸಿದ ಆಂಧ್ರ ವಿಶ್ವವಿದ್ಯಾಲಯ ಸಮಿತಿಯು ತನ್ನ ವರದಿಯನ್ನೊಪ್ಪಿಸಿ ಬಳ್ಳಾರಿ, ಕಡಪ, ಕರ್ನೂಲು ಚಿತ್ತೂರು ಜಿಲ್ಲೆಗಳ ವಿದ್ಯಾ ಸಂಸ್ಥೆಗಳು ಆಂಧ್ರ ವಿಶ್ವವಿದ್ಯಾಲಯದ ಕ್ಷೇತ್ರಕ್ಕೊಳಪಡಬೇಕೆಂಬ ತೀರ್ಮಾನವನ್ನು ಈ ಸಭೆಯು ಖಂಡಿಸುತ್ತದೆ. ಘಟನಾಸಮಿತಿಯು ತನ್ನ ವರದಿಯನ್ನು ವಪ್ಪಿಸುವವರೆಗೆ ಈ ಐದು ಜಿಲ್ಲೆಗಳೂ ಮದ್ರಾಸ್ ವಿದ್ಯಾಸಿಯ ಕ್ಷೇತ್ರದಲ್ಲೇ ಇರಬೇಕೆಂದು ತೀರ್ಮಾನಿಸುತ್ತದೆ.

ಬಳ್ಳಾರಿಯು ಆಂಧ್ರ ವಿದ್ಯಾಲಯಕ್ಕೆ ಸೇರಬಾರದೆಂದು ವೈಯಕ್ತಿಕವಾಗಿ ಪತ್ರವ್ಯವಹಾರ ನಡೆದುದನ್ನು ಅಧ್ಯಕ್ಷರು ಸೇಳಿದರು. ಮದ್ರಾಸಿನಲ್ಲಿ ಸೇರಿದ ಸಭೆಯಲ್ಲಿ ತನ್ನ ಖಂಡಿತ ವಿರೋಧವನ್ನು ವ್ಯಕ್ತಪಡಿಸಿಯೂ ಆಂಧ್ರಕ್ಕೆ ಸೇರಬೇಕೆಂಬ ತೀರ್ಮಾನವನ್ನು ಸಮಿತಿಯು ಮಾಡಿದುದಕ್ಕೆ ತಮ್ಮ ವಿರೋಧವನ್ನು ಸೂಚಿಸುತ್ತಾ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ ಟೇಕೂರು ಸುಬ್ರಹ್ಮಣ್ಯಂರವರು ಮಾತಾಡಿದರು. ನಂತರ ರಾಯಲಸೀಮ ಮಹಾಸಭಾ ಕಾರ್ಯದರ್ಶಿಗಳಾದ ಶ್ರೀ ಲಿಂಗಾರೆಡ್ಡಿ—ಚಂದ್ರಶೇಖರಶಾಸ್ತ್ರಿ— ಮರುಳಸಿದ್ದಯ್ಯ ಚನ್ನಬಸಪ್ಪ—ಇವರು ಭಾಷಣ ಮಾಡಿದ ನಂತರ ಸಭೆಯು ಮುಕ್ತಾಯವಾಯಿತು.

ಅಮೃತಸರದಲ್ಲಿ ಪುನಃ ದಂಗೆಯಾಗಿ ನಿಗರದಲ್ಲಿ ಅಗ್ನಿನಾರಾಯಣನ ತಾಂಡವ ನೃತ್ಯವಾಯಿತು. ಗುಂಡುಗಳಿಂದ ಅನೇಕರುಸತ್ತರು.

ಪುಂಡಾಟಿಕೆಯ ಖಂಡನೆ.

ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಡಾ. ರಾಜೇಂದ್ರಪ್ರಸಾದರ ಸಲುವಾಗಿ ಮದ್ರಾಸ ಸಮುದ್ರ ದಂಡೆಯಲ್ಲಿ ಟಿಳಕ ಘಾಟನ ಮೇಲೆ ಕೂಡಿದ ಸಭೆಯಲ್ಲಿ ಸಾವಿರಗಟ್ಟಲೆ ಜನ ಸಮ್ಮಿಲಿತರಾಗಿದ್ದರೆಂಬ ಸುದ್ದಿ ಪ್ರಸಿದ್ಧವಾಗಿದೆ. ರಾಜಾಜಿಯವರು ಅಲ್ಲಿಗೆ ಬಂದುಬು ವೇದಿಕೆಯ ಮೇಲೆ ಅಯೋಗ್ಯ ಪ್ರದರ್ಶನ ಮೆಟ್ಟುಗಳನ್ನು ಒಗೆಯುವದು, ಕಲ್ಲುಗಳನ್ನು ಮತ್ತು ಉಸಕನ್ನು ಎಸೆಯುವದು ಮೊದಲಾದ್ದಕ್ಕೆ ಕಾರಣವಾಯಿತೆಂದು ತೋರುತ್ತದೆ. ಈ ಬಗೆಯ ಪ್ರದರ್ಶನವೆಂದರೆ ಕೇವಲ ಪುಂಡಾಟಿಕೆ ಮತ್ತು ಕಟ್ಟಳೆ ವಿರುದ್ಧವರ್ತನ ದೇಶದಲ್ಲೆಲ್ಲ ಕಡೆಗೆ ಈ ಬಗೆಯ ವೃತ್ತಿ ಕಂಡು ಬರುತ್ತದೆ. ಯಾವದೊಂದು ದೇಶದ ಸಾರ್ವಜನಿಕ ಜೀವನಕ್ಕೆ ಇದು ಕಲಂಕಪ್ರದವಾಗಿದೆ. ಅಹಿಂಸಾ ಮಾರ್ಗದಿಂದ ಮಹತ್ವದ ರಾಜಕೀಯ ಧ್ಯೇಯಗಳನ್ನು ಸಾಧಿಸಿಕೊಳ್ಳಬೇಕೆಂದು ಬದ್ಧಪ್ರತಿಜ್ಞವಾದ ನಮ್ಮ ದೇಶಕ್ಕಂತೂ ಇದು ಹೆಚ್ಚು ಕಲಂಕಪ್ರದವಾಗಿದೆ.

ನಮ್ಮ ದೇಶದಂಥ ವಿಶಾಲ ದೇಶದಲ್ಲಿ ಅಧಿಕಾರದಲ್ಲಿದ್ದವರು ಅನುಸರಿಸುವ ಮಾರ್ಗದ ಬಗ್ಗೆ ಅಸಮಾಧಾನಗೊಳ್ಳುವ ಸಂದರ್ಭಗಳು ಅನೇಕ ಬರುವುದುಂಟು. ಸರಕಾರವೇನು ಸರ್ವಜ್ಞವಲ್ಲ. ಮಂತ್ರಿಗಳ ಸಮೀಪವರ್ತಿಗಳಾದ ಜನರಿಂದ ಅನೇಕ ಸಲ ಸರಕಾರ ಅಡ್ಡ ಮಾರ್ಗ ಹಿಡಿಯುವುದುಂಟು. ನಮ್ಮ ಗಾಲ ಸರಕಾರದ ಮಂತ್ರಿಗಳ ಗಮನಕ್ಕೆ ತರುವಂಥ ಅನೇಕ ವಿಷಯಗಳು ಮದ್ರಾಸದ ಜನತೆಗೆ ಇರಬಹುದು. ಇದುಯೋಗ್ಯ ಮತ್ತು ಸ್ವಾಭಾವಿಕವೂ ಆಗಿದೆ. ತಮ್ಮ ಬೇಕು ಬೇಡಿಕೆಗಳ ಪರಿಚಯ, ಮಂತ್ರಿಗಳಿಗೆ ಮಾಡಿಕೊಡುವದೂ ಸಾರ್ವಜನಿಕರ ಕರ್ತವ್ಯವಾಗಿದೆ. ರಾಷ್ಟ್ರ ಹಾಕಿಕೊಟ್ಟ ಮಾರ್ಗದಿಂದ ಮಂತ್ರಿಗಳು ನಡೆಯದಿದ್ದರೆ ಅವರಿಗೆ ಎಚ್ಚರಿಕೆ ಕೊಡುವದೂ ಜನತೆಯ ಹಕ್ಕಾಗಿರುವದು. ಆದರೆ ಅದೇ ಕಾಲಕ್ಕೆ ಹೀಗೆಲ್ಲ ಮಾಡುವ ಮಾರ್ಗ ಮತ್ತು ಸಾಧನಗಳು ನ್ಯಾಯ ಮತ್ತು ಭೂಷಣಪ್ರದವಾಗಿರಬೇಕು. ಮದ್ರಾಸ ಸಭೆಯಲ್ಲಿ ಸ್ವೀಕರಿಸಿದಂಥ ಗುಂಡಗಿರಿಯ ಮಾರ್ಗಗಳಿಂದ ಕದಾಚಿತ ಅದನ್ನೆಸಗಿದವರಿಗೆ ತಿಳಿಯದಷ್ಟು ಕೂಡ ಉದ್ದೇಶಕ್ಕೆ ಹಾನಿ ತಟ್ಟುವದು. ಅತಿಥಿಗಳಿಗೆ ಅದು ಅಪಮಾನಕಾರಕ. ನಮ್ಮ ಸಾರ್ವಜನಿಕ ಜೀವನದ ಕೀಳ್ಮಟ್ಟದ ದ್ಯೋತಕವದು. ನಾವು ಸ್ವರಾಜ್ಯ ಮತ್ತು ಪ್ರಜಾಪ್ರಭುತ್ವದತ್ತ ಮುಂದೆ ಸಾಗಿದಂತೆ ಜನತೆಯ ಕಷ್ಟನಷ್ಟಗಳನ್ನು ಮಂತ್ರಿಗಳ ಮತ್ತು ಸರಕಾರದ ಗಮನಕ್ಕೆ ತಂದುಕೊಡುವ ಸಂದರ್ಭಗಳಲ್ಲಿ ಈಗಿನಿಂದಲೇ ಆತ್ಮಸಂಯಮನ ಮತ್ತು ಶಿಸ್ತು ಸಂವರ್ಧಿಸಿಕೊಳ್ಳುವದು ಅತ್ಯವಶ್ಯವಾಗಿದೆ.

ಇದನ್ನು ಸಾಧಿಸುವದಕ್ಕಾಗಿ ಆಯಾ ಪಕ್ಷ ಪಂಗಡಗಳ ಧುರೀಣರು ತಮ್ಮ ಅನುಯಾಯಿಗಳಿಗೆ ಶಿಕ್ಷಣ ಕೊಡಬೇಕೆಂದು ನಾವು ಸೂಚಿಸ ಬಯಸುತ್ತೇವೆ. ನಿಯಮಿತ ವರ್ಗಗಳನ್ನಿಟ್ಟು ಇಲ್ಲವೆ ಪ್ರಚಾರ ಮಾರ್ಗದಿಂದ ತಮ್ಮ ತಮ್ಮ ಪಕ್ಷಗಳ ಕಷ್ಟನಷ್ಟಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ಯೋಗ್ಯ ಮಾರ್ಗಗಳ ಬಗ್ಗೆ ಶಿಕ್ಷಣ ಕೊಡಬೇಕು. ತಾವು ಮಾಡತಕ್ಕ ಕಾರ್ಯದಲ್ಲಿ ಇದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕಾದುದು ಅವಶ್ಯವಾಗಿದೆ. ಇಲ್ಲದಿದ್ದರೆ ಕಟ್ಟಳೆಗೆಟ್ಟತನ ಮತ್ತು ಬೇಶಿಸ್ತು ಎಲ್ಲೆಡೆ ಹಬ್ಬಿ ದೇಶದ ಸಾರ್ವಜನಿಕ ಜೀವನವನ್ನೆ ಹದಗೆಡಿಸುವದು. [ಹರಿಜನ]

ಹರಪನಹಳ್ಳಿ.

"ಬಳ್ಳಾರಿ, ಅನಂತಪುರ, ಕರ್ನೂಲು ಜಿಲ್ಲೆಗಳ ಕನ್ನಡ ಪ್ರದೇಶಗಳನ್ನು ಆಂಧ್ರ ವಿಶ್ವವಿದ್ಯಾಲಯದ ಕ್ಷೇತ್ರಕ್ಕೆ ಸೇರಿಸಲು ಮತ್ತೆ ಆಂಧ್ರರ ಪ್ರಯತ್ನಗಳಾಗುತ್ತಲಿವೆ. ಇದನ್ನು ಎಲ್ಲರೂ ತಡೆಯಬೇಕು. ಉಗ್ರವಾಗಿ ಪ್ರತಿಭಟಿಸಬೇಕು. ಎಲ್ಲಾ ಸಂಘ, ಸಂಸ್ಥೆಗಳೂ ಪರಿಣಾಮಕಾರಿಯಾಗುವಂತೆ ಕೆಲಸಮಾಡಬೇಕು." ಎಂದು ಹರಪನಹಳ್ಳಿ ಸಾಯಿ ಬಾಬ ಸಂಘದವರು ಪ್ರಕಟಿಸಿದ್ದಾರೆ.

ಲೀಗಿನವರೊಡನೆ ಹೇಗೆ ನಡೆದುಕೊಳ್ಳಬೇಕು?

ಗಾಂಧೀಜಿಯೊಡನೆ ಪ್ರಶ್ನೋತ್ತರ

ಪ್ರಶ್ನೆ ೧– ಲೀಗಿನ ಧುರೀಣರು ಮತ್ತು ಅನುಯಾಯಿಗಳು ತಮ್ಮ ಧ್ಯೇಯ ಸಾಧನೆಯನ್ನು ಅಹಿಂಸಾ ಮಾರ್ಗದಿಂದ ಮಾಡಿಕೊಳ್ಳಬೇಕೆಂಬ ನಂಬಿಗೆಯನ್ನು ತಳೆದಿಲ್ಲ. ಹೀಗಿರುವಾಗ ಅವರು ಹೃದಯ ಪರಿವರ್ತನ ಮಾಡುವ ಬಗೆ ಹೇಗೆ? ಇಲ್ಲವೆ ಹಿಂಸಾತ್ಮಕ ಕೃತ್ಯಗಳಿಂದಾಗುವ ಹಾನಿಯ ಬಗ್ಗೆ ಅವರ ಮನವರಿಕೆ ಮಾಡಿಕೊಡುವದೆಂತು?

ಉತ್ತರ ೧–ಹಿಂಸೆಯನ್ನು ಅಹಿಂಸೆಯಿಂದಲೆ ಯಶಸ್ವಿಯಾಗಿ ಎದುರಿಸಬಲ್ಲೆವು. ಇದೊಂದು ಹಳೆಯ ಸಿದ್ಧವಾದ ಸತ್ಯ. ಅಹಿಂಸೆಯ ಕಾರ್ಯಕ್ಷಮತೆಯ ನಿಜವಾದ ಅರಿವು ಈ ಪ್ರಶ್ನೆಕಾರನಿಗೆ ಇರುವದಿಲ್ಲ. ಅವನಿಗೆ ಅದೆಲ್ಲ ಗೊತ್ತಿದ್ದರೆ ಹಿಂಸೆಯ ಅಸ್ತ್ರದ ಆಟ ಅದು ಅಣು ಬಾಂಬು ಇದ್ದರೂ–ನಿಜ ಅಹಿಂಸೆಯ ಮುಂದೆ ಸ್ವಲ್ಪೂ ನಡೆಯುವುದಿಲ್ಲ. ಈ ಬಲಿಷ್ಠ ಶಸ್ತ್ರದ ಉಪಯೋಗವೆಂತು ಮಾಡಿಕೊಳ್ಳಬೇಕೆಂಬುದು ಬಹಳ ಕಡಮೆ ಜನರಿಗೆ ಗೊತ್ತಿದೆಂಬ ಮಾತು ಮಾತ್ರನಿಜ. ಅದಕ್ಕಾಗಿ ಪ್ರಚಂಡ ಮನಃಶಕ್ತಿ ಮತ್ತು ತಿಳಿವಳಿಕೆ ಬೇಕಾದುದಕ್ಕಿಂತ ಭಿನ್ನವಾಗಿದೆ ಇದು. ಮಾನಸಿಕ ಅಶಕ್ತತೆಯ ಪರಿಣಾಮವಾಗಿಯೆ ಅಹಿಂಸೆಯಿಂದ ಹಿಂಸೆಯನ್ನೆದುರಿಸುವದು ಯಾವನೊಬ್ಬನಿಗೆ ಕಠಿಣವೆನಿಸುವದು.

ಪ್ರಶ್ನೆ ೨– ಲೀಗಿನ ಬೆಂಬಲಿಗರೊಡನೆ ತಿಕ್ಕಾಟ ಬಹುಶಃ ಹಿಂಸಾತ್ಮಕ ಸ್ವರೂಪದ ಹೋರಾಟ ಅಪರಿಹಾರ್ಯವಾಗಿದೆಂದು ಅನೇಕ ಜನರಿಗೆ ಈಗ ಎನಿಸಹತ್ತಿದೆ. ಲೀಗು, ಬಂಗಾಲ ಮತ್ತು ಪಂಜಾಬ ವಿಭಜನೆಗೆ ಒಪ್ಪುವನರಿಗೆ ಅವರ ಪಾಕಿಸ್ತಾನದ ಬೇಡಿಕೆ ಅನ್ಯಾಯದ್ದೆಂದು ರಾಷ್ಟ್ರೀಯರು ಭಾವಿಸುತ್ತಾರೆ. ಈ ಪರಿಸ್ಥಿತಿಯನ್ನು ಎದುರಿಸುವುದಕ್ಕಾಗಿ ಯಾವ ಮಾರ್ಗಗಳನ್ನು ನಾವು ಅನುಸರಿಸಬೇಕು?

ಉತ್ತರ ೨– ಮೊದಲನೆ ಪ್ರಶ್ನೆಗೆ ಕೊಟ್ಟ ಉತ್ತರ ಸರಿಯಾಗಿದೆಂದು ಗ್ರಹಿಸಿದರೆ ಎರಡನೇ ಪ್ರಶ್ನೆ ಉದ್ಭವಿಸುವದೇ ಇಲ್ಲ. ಆದರೆ ಪರಿಸ್ಥಿತಿಯನ್ನು ತಿಳಿಪಡಿಸುವದಕ್ಕೋಸುಗ ಈ ಪ್ರಶ್ನೆಯನ್ನು ಚರ್ಚಿಸಬಹುದಾಗಿದೆ. ಬಹುಸಂಖ್ಯಾಕ ಮುಸ್ಲಿಮರು ಕಾಯದೇ ಅಜಂ ಜಿನ್ನಾರ ಆಜ್ಞೆಯಂತೆ ನಡೆದದ್ದಾದರೆ ಹಿಂಸಾತ್ಮಕಹೋರಾಟ ಅಸಂಭವನೀಯವೆ; ಇಲ್ಲವೆ ಬಹುಸಂಖ್ಯಾಕ ಹಿಂದುಗಳು ಅಹಿಂಸಾ ಮಾರ್ಗವನ್ನು ಅನುಸರಿಸಿದ್ದಾದರೆ ಮುಸಲ್ಮಾನರು ಎಷ್ಟೇ ಹಿಂಸೆಯನ್ನು ನಡೆಸಿದರೂ ಅದು ಅಯಶಸ್ವಿಯಾಗಿಯೆ ಪರಿಣಮಿಸುವುದು. ಆದರೂ ಈ ಸಂಬಂಧದಲ್ಲಿ ಒಂದು ಮಾತನ್ನು ಪೂರ್ಣವಾಗಿ ತಿಳಿದುಕೊಳ್ಳಬೇಕು. ಅಹಿಂಸಾವಾದಿಗಳು ವಿಚಾರದಲ್ಲಿ ಕೂಡ ಹಿಂಸೆಗೆ ಅವಕಾಶ ಕೊಡಬಾರದು ಕೃತಿಯಲ್ಲಿ ಹಿಂಸೆಯ ಪ್ರಶ್ನೆಯಂತೂ ದೂರೇ ಉಳಿಯಿತು. ಪಾಕಿಸ್ತಾನ ತಪ್ಪಾಗಿದ್ದರೆ ಬಂಗಾಲ ಮತ್ತು ಪಂಜಾಬದ ವಿಭಜನೆ ಅದನ್ನು ಸರಿಪಡಿಸಲಾರದು ಎರಡು ಅನ್ಯಾಯಗಳು ಒಂದು ನ್ಯಾಯವನ್ನುಂಟುಮಾಡಲಾರವು.

ಪ್ರಶ್ನೆ ೩– ಸಾಮ್ಯವಾದದ ತತ್ವದನ್ವಯ ಕ್ರಾಂತಿಯಾದರೆ ಜಾತೀಯತೆ ಹಿಮ್ಮೆಟ್ಟಲ್ಪಟ್ಟು ಆರ್ಥಿಕ ಪ್ರಶ್ನೆ ಮುಂದೆ ಬರುತಿದೆಂದು ಸಾಮ್ಯವಾದಿಗಳಲ್ಲಿ ಬಹುಸಂಖ್ಯಾಕರು ಹೇಳಿಕೊಳ್ಳುವದುಂಟು. ಇದನ್ನು ನೀವು ಒಪ್ಪುವಿರೋ? ಇಂಥ ಕ್ರಾಂತಿಸಂಭವಿಸಿದ್ದಾದರೆ 'ರಾಮರಾಜ್ಯ' ವೆಂದು ನೀವು ಕರೆಯುವ 'ದೇವರಾಜ್ಯ'ದ ಸ್ಥಾಪನೆಯಾಗಬಲ್ಲದೆ?

ಉತ್ತರ ೩– ನೀವು ಊಹಿಸುವ ಆರ್ಥಿಕ ಹೋರಾಟದಿಂದ ಹಿಂದೂ ಮುಸಲ್ಮಾನರ ತಿಕ್ಕಾಟವೇನೋ ಸ್ವಲ್ಪ ಕಡಮೆಯಾಗಬಹುದು. ಹಿಂದೂ ಮುಸಲ್ಮಾನರ ತಿಕ್ಕಾಟ ಒಂದು ವೇಳೆ ಕೊನೆಗೊಂಡರೂ ನಮ್ಮ ಎಲ್ಲ ಸಂಕಷ್ಟಗಳ ನಿವಾರಣೆಯಾಗದು. ಆಗುವದೇನು? ದಾಸ್ಯ ಕೊನೆಗೊಂಡು ಸ್ವಾತಂತ್ರ್ಯದ ಉದಯವಾಯಿತೆಂದರೆ ಸಮಾಜದಲ್ಲಿಯ ಎಲ್ಲ ಅಶಕ್ತತೆಗಳೆಲ್ಲ ಮೇಲೆ ಬರಲಿಕ್ಕೆ ಬೇಕು, ಅದರ ಬಗ್ಗೆ ಅನ

ವಶ್ಯಕವಾಗಿ ತಲೆಕೆಡಿಸಿಕೊಳ್ಳುವಲ್ಲಿ ಹುರುಳಿಲ್ಲ. ಇಂಥ ಸಮಯದಲ್ಲಿ ನಾವು ತಲೆಯನ್ನು ಶಾಂತವಾಗಿಟ್ಟು ಕೊಂಡರೆ ಸಮಸ್ಯೆಗಳಿಲ್ಲ ಬಗೆಹರಿಯುವವು. ಆರ್ಥಿಕ ಪ್ರಶ್ನೆಯ ಮಟ್ಟಿಗೆ ಹೇಳಬೇಕಾದರೆ ಏನೇ ಆದರೂ ಅದನ್ನು ಬಗೆಹರಿಸಲಿಕ್ಕೆ ಬೇಕಾಗುವದು. ಇಂದು ಆರ್ಥಿಕ ಅಸಮಾನತೆ ವಿಪರೀತಕ್ಕೆಳಸಿದೆ. ಸಾಮ್ಯವಾದದ ತಳಹದಿಯೆ ಆರ್ಥಿಕ ಸಮಾನತೆ. ಇಂತ ಅತ್ಯಂತ ಅನ್ಯಾಯದ ಅಸಮಾನತೆಯ ಪರಿಸ್ಥಿತಿಯಲ್ಲಿ ರಾಮ ರಾಜ್ಯವೆಂದಿಗೂ ಸಂಸ್ಥಾಪಿತವಾಗದು. ಸದ್ಯದ ಪರಿಸ್ಥಿತಿಯಲ್ಲಿ ಕೆಲವರೆ ಶ್ರೀಮಂತಿಕೆಯಲ್ಲಿ ಲೋಲಾಡುತಿರುವರು. ಅದರೆ ಜನಸಾಮಾನ್ಯರಿಗೆ ತಿನ್ನಲಿಕ್ಕೆ ಕೂಡಾ ಸಾಕಷ್ಟು ಸಿಕ್ಕುವುದಿಲ್ಲ. ದಕ್ಷಿಣ ಆಫ್ರಿಕೆಯಲ್ಲಿ ನಾನು ಇರುವಾಗಲೆ ಸಾಮ್ಯವಾದದ ತತ್ವವನ್ನು ನಾನು ಒಪ್ಪಿಕೊಂಡೆ. ಸಾಮ್ಯವಾದಿಗಳಿಗೆ ಇಲ್ಲವೆ ಬೇರೆಯವರಿಗೆ ನಾನು ವಿರೋಧಿಸುವದು, ಶಾಶ್ವತವಾದ ಸುಧಾರಣೆಯನ್ನು ಮಾಡಬೇಕಾದರೆ ಹಿಂಸಾ ಮಾರ್ಗವೆ ಯೋಗ್ಯವೆಂಬ ಅವರ ತಿಳಿವಳಿಕೆಗಾಗಿ.

ಪ್ರಶ್ನೆ ೪– ಅರಸನು, ಜಮೀನದಾರ ಇಲ್ಲವೆ ಬಂಡವಲದಾರನು ಬಡವರ ಟ್ರಸ್ಟಿಯಾಗಿರಬೇಕೆಂದು ನೀವು ಪ್ರತಿಪಾದಿಸುತಿರುವಿರಿ. ಇಂಥವರಾರಾದರೂ ಇಂದು ಇರುವವರೆಂದು ನೀವು ಭಾವಿಸುವಿರಾ? ಆ ರೀತಿ ಅವರು ಪರಿವರ್ತನ ಹೊಂದಬಹುದೆಂದಾದರೂ ನಿಮಗೆನಿಸುವದೊ?

ಉತ್ತರ ೪– ಯಥಾರ್ಥವಾಗಿ ಯಿಲ್ಲದಿದ್ದರೂ ಕೆಲಮಟ್ಟಿಗಾದರೂ ಅದರಂತೆ ನಡೆಯುವ ತೀರ ಸ್ವಲ್ಪ ಜನ ಈಗಲಾದರೂ ಇರುವರೆಂದು ನನಗೆನಿಸುತ್ತದೆ. ಆ ದಿಸೆಯಲ್ಲಿ ನಿಶ್ಚಿತವಾಗಿ ಅವರು ಪ್ರಯತ್ನಿಸುತಿರುವರು. ಸದ್ಯದ ರಾಜೇಸಾಹೇಬರು ಮತ್ತು ಉಳಿದವರು ಬಡವರ ಟ್ರಸ್ಟಿಗಳಾಗಬಲ್ಲರೊ ಎಂದು ಕದಾಚಿತ್ ಕೇಳಬಹುದು. ಅವರು ತಾವಾಗಿಯೆ ಟ್ರಸ್ಟಿಗಳಾಗಿ ಪರಿವರ್ತಿಸದಿದ್ದರೆ, ಹಾಗೆ ಮಾರ್ಪಾಟು ಹೊಂದಲು ಪರಿಸ್ಥಿತಿ ಅವರನ್ನು ಒತ್ತಾಯ ಪಡಿಸುತ್ತದೆ. ಸರ್ವನಾತಕ್ಕೆ ಅವರು ಸಿದ್ಧರಾದರೆ ಮಾತ್ರ ಆ ಮಾತು ಬೇರೆ. ಪಂಚಾಯತ ರಾಜ್ಯಸ್ಥಾಪನೆಯಾದಾಗ ಹಿಂಸೆಗೆಂದಿಗೂ ಶಕ್ಯವಾಗದಿದ್ದಂಥ ಕಾರ್ಯವನ್ನು ಸಾರ್ವಜನಿಕಾಭಿವ್ಯಾಯ ಮಾಡಬಲ್ಲುದು. ಜನಸಾಮಾನ್ಯರಿಗೆ ತಮ್ಮ ಶಕ್ತಿಯ ಅರಿವಾಗುವವರೆಗೆ ಮಾತ್ರ ಜಮೀನದಾರರು, ಬಂಡವಾಲದಾರರು ಮತ್ತು ಅರಸರು ಅಧಿಕಾರು ನಡೆಸಬಲ್ಲರು. ಜಮೀನದಾರಿ ಇಲ್ಲವೆ ಬಂಡವಲುಗಾರಿಕೆಯನ್ನು ಜನರು ಬಹಿಷ್ಕರಿಸಿದ್ದಾದರೆ ಅದು ನಿಷ್ಪ್ರಯೋಜಕವಾಗಿ ಸಾಯಲಿಕ್ಕೆ ಬೇಕು. ಪಂಚಾಯತ ರಾಜ್ಯದಲ್ಲಿ ಪಂಚಾಯತದ ಅಪ್ಪಣೆಯೇ ಮನ್ನಿಸಲ್ಪಡುತಿದೆ; ಈ ಪಂಚಾಯತವಾದರೊ ತನ್ನ ನ್ನಾರಿಸಿದ ಕಾಯದೆ ಕಾನೂನುಗಳಿಗೊಳಪಟ್ಟೇ ಕಾರ್ಯಮಾಡುವದು.

ಪ್ರಜಾಪ್ರಭುತ್ವವೇ ತಳಹದಿ

(ಕಳೆದ ವಾರದಿಂದ ಮುಂದುವರಿದಿದೆ)

ಸ್ವತಂತ್ರ ವಾತಾವರಣ ಸೃಷ್ಟಿಯಾಗದಿದ್ದರೆ ಈ ರೂಪರಾಗಗಳ ವಿಕೃತ ಸಂಭವಿಸಿದ ವಿರೂಪಕ್ಕೂ ಅಪಶ್ರುತಿಗೂ, ಅವಕಾಶ ಆಗಬಹುದಾದ ಸಂಭವದ ಕಲ್ಪನೆಯೂ ಸಾಮ್ಯವಾದೀ ಸಿದ್ಧಾಂತದಲ್ಲಿ ಉಂಟು. ಅಂತಲೇ ಪ್ರಜಾಪ್ರಭುತ್ವಾತ್ಮಕ ವಿಧಾನಗಳ ಮಹತ್ವ.

ಇಂದಿನ ಅಂಜಿಕೆ

'ಮಾರ್ಕ್ಸ್‌ವಾದ' ವೆಂದರೆ ನಗ್ನ ನಿರಂಕುಶಾಧಿಕಾರವೆಂದೇ ಇಂದು ಪ್ರಚಲಿತ ಅಂಜಿಕೆ ಇದೆ; ಕೆಲವರು ಇದನ್ನು ಸಿದ್ಧಾಂತವೆಂದೇ ಸ್ಥಾಪಿಸುತ್ತಾರೆ. ಇಂಥವಾದಕ್ಕೆ ರಷ್ಯದಲ್ಲಿ ನಡೆದ ಘಟನೆಗಳೂ, ಜರ್ಮನಿಯಲ್ಲಿ ರಾಷ್ಟ್ರೀಯ ಸಾಮ್ಯವಾದದ ಸೋಗಿನಲ್ಲಿ ಸಂಭವಿಸಿದ ಘಟನೆಗಳೂ ಆಧಾರ ಕೊಟ್ಟಿವೆ. ಎಷ್ಟೋಮಂದಿಗೆ ಈ ಎರಡೂ ದೇಶಗಳ ಪರಿಸ್ಥಿತಿ ಒಂದೇ ಅಂತ ಅನಿಸಿದೆ. ಎರಡರಲ್ಲೂ ಪ್ರಭುತ್ವದ ಸರ್ವಸ್ವಾಮ್ಯ ಉಂಟು, ಪ್ರಭುತ್ವವಾದರೋ ಒಂದು ರಾಜಕೀಯ ಪಕ್ಷದ ಹಿಡಿತದಲ್ಲಿ.

ವರ್ಗಶಾಹಿಯಲ್ಲ—ಪಕ್ಷಶಾಹಿ

ವರ್ಗವೊಂದರ ಮುಂದಾಳುತನ ತಪ್ಪಿ ರಾಜಕೀಯ ಪಕ್ಷವೊಂದರ ಮುಂದಾಳುತನ ಬಂದೀತು. ಆಗ ಆ ಪಕ್ಷದ ನಾಯಕತನವೂ ಪ್ರತ್ಯೇಕತತೆಯ 'ಮಠ'ವೊಂದರಂತೆ ಆದೀತು. ಹೊಸ ಶ್ರೀಮಂತ ವರ್ಗವೊಂದು ಹುಟ್ಟೀತು. ರಷ್ಯದಲ್ಲಿ 'ಸ್ಟಾಖನೋವೈಟ' ರಾಗಲಿಲ್ಲವೇ. ಹಾಗೆ, ಈ ಹೊಸವರ್ಗವಿಂದಿನ ಶ್ರೀಮಂತ ವರ್ಗದಂತೆಯೇ, ಶಾಸ್ತ್ರೀಯ ಶಕ್ತಿಯನ್ನೆಲ್ಲ ತಮ್ಮ ಸರ್ವಮಾನ್ಯ ಮಾಡಿಕೊಂಡು, ಹಿಂದಿನ ಶ್ರೀಮಂತರು ಸಂಪತ್ತಿನ ಸರ್ವಾಧಿಕಾರಿಗಳಾದಂತಾಗಿ ಸಾಮಾನ್ಯ ಜನತೆಯ ಸಂಪರ್ಕ ಹರಿದುಕೊಂಡಾರು; ಅವರ ಪ್ರತಿನಿಧಿಗಳೆನಿಸಿಕೊಳ್ಳುವ ಹಕ್ಕನ್ನು ನೀಗಿಕೊಂಡಾರು. ಇಂಥ ಪರಿಸ್ಥಿತಿ ಉದ್ಭವಿಸಿದರೂ 'ಸಮಾನ ಅವಕಾಶ'ದ ಜೀವನ ಏನೂ ಮಾಯವಾಗಲಿಕ್ಕಿಲ್ಲ. ಕೂಲಿಕಾರನ ಮನೆಯ ಹುಡುಗನೂ ವ್ಯವಸ್ಥಾಪಕನ ಪದವಿಗೇರುವ ಅವಕಾಶ ಇದ್ದೇ ಇದ್ದೀತು.

ಆದರೆ ಅದೆಂದಿಗೂ ಸಾಮ್ಯವಾದೀ ಸಮಾಜದ ತಳಪಾಯ ಆಗುವುದು ಶಕ್ಯವಿಲ್ಲ. ಸಾಮ್ಯವಾದಿಗಳು ಬಾರಿಬಾರಿಗೂ ಕೂಗುವ ಗೊಡ್ಡು ಘೋಷಣೆಗಳ ಬಗ್ಗೆ ಮರುಳಾಗದಿರಲು ಅದನ್ನು ಎಚ್ಚರಿಕೆಯೆಂದು ನಾವು ಭಾವಿಸಬೇಕು-ಅಷ್ಟೆ. ಸುಳ್ಳು ಸಾಮ್ಯವಾದೀ ಸಮಾಜದಲ್ಲಿ ಸಾಧಾರಣವಾಗಿ ಆರ್ಥಿಕ ವರ್ಗವೊಂದು ಸ್ಥಳದಲ್ಲಿ ರಾಜಕೀಯ ಅಥವಾ ಮತ್ತೊಂದು ಆರ್ಥಿಕ ವರ್ಗವೇ ಅಧಿಕಾರಕ್ಕೆ ಬಂದೀತು; ಆದರೆ ಹೊಸವರ್ಗದ ನೀತಿ, ದೃಷ್ಟಿ ಹಾಗೂ ಯೋಗ್ಯತೆ ಬೇರೆ ಇರಬಹುದು-ಏನೇ ಇರಲಿ ವರ್ಗಶಾಹಿ ಮುಂದುವರಿಯುವಂತೆಯೇ ಅಲ್ಲವೇ? ಅಂತಲೇ ಈ ಘಟ್ಟದಲ್ಲಿ ನಮ್ಮ ವಿಚಾರಧಾರೆಯನ್ನು 'ಸಾಧನೆಯ ತಂತ್ರ'ದ ಕಡೆಗೆ, ಪ್ರಗತಿ ಹೊಂದುವ ಮಾರ್ಗದ ಕಡೆಗೆ, ಹೊರಳಿಸಬೇಕು.

ಪ್ರಜಾತಂತ್ರವೇ ಸಾಮ್ಯವಾದೀ ಜೀವನದ ಮಾರ್ಗ

ಸಾಧನೆಯ ಮಾರ್ಗವೇ ಬಹುಮಟ್ಟಿಗೆ ಸಾಧಿಸಬೇಕಾದ ಗುರಿಯಾಗಿ ಪರಿಣಮಿಸುತ್ತದೆ, ಏಕೆಂದರೆ ಸಾಧನೆಯಲ್ಲಿ ಅನುಭವದ ಸಾರ ಸೇರಿರುತ್ತದೆ. ಅಂತಲೇ ಪ್ರಜಾತಂತ್ರ ಪದ್ಧತಿ ಪ್ರತಿ ಸಾಮ್ಯವಾದಿಯ ಜೀವನ ದರ್ಶನವಾಗಿರಬೇಕು, ಸಾಮ್ಯವಾದೀ ಪ್ರಜಾ ಪ್ರಭುತ್ವವನ್ನು ಕಟ್ಟಬಯಸುವ ಪ್ರತಿ ಸಾಮ್ಯವಾದೀ ಪಕ್ಷದ ಸ್ವೀಕೃತ ಕಾರ್ಯ ಪದ್ಧತಿಯಾಗಿರಬೇಕು.

ಪಂಚಾಯ್ತು ಬೋರ್ಡು ಮತ್ತು ಗ್ರಾಮೋದ್ಯೋಗಿಗಳು.

(ಎನ್. ಸಣ್ಣನಗೌಡ ನಿಟ್ಟೂರು.)

16-6-47 ರಲ್ಲಿ ಕೂಡಿದ ದ್ವಿತೀಯ ಮದ್ರಾಸ್ ಪ್ರಾಂತದ ಪಂಚಾಯ್ತಿ ಸಭೆಯಲ್ಲಿ ಗ್ರಾಮೋದ್ಯೋಗಿಗಳು ಪಂಚಾಯ್ತಿ ಬೋರ್ಡುಗಳ ಅಧೀನ ಸ್ಥರಾಗಿ ದುಡಿಯಲು ಸೂಚಿತವಾಗಿದೆ. ಇದು ಅನ್ಯವ ಹಾರ್ಯವೂ, ಗ್ರಾಮೋದ್ಯೋಗಿಗಳ ಗೌರವಕ್ಕೆ ಕುಂದು ತರುವಂಥಾದ್ದೂ ಆಗಿದೆ. ಸರ್ಕಾರವು ಇವರಿಗೆ ಗೌರವ ಸಂಭಾವನೆ ಕೊಡುತ್ತಿದೆಯಾಗಲಿ ಇವರು ವೂರಾವೇತನದ, ಸರ್ಕಾರದ ವೂರಾನೌಕರರಲ್ಲ. ವಂಶಪಾರಂಪರ್ಯದ ಹಕ್ಕನ್ನನ್ನುಭವಸುತ್ತಿರುವ, ಗೌರವಸ್ಥರಾದ ಗ್ರಾಮೋದ್ಯೋಗಿಗಳು ಊರಿನ ವಾರ್ಟೀ ಜಾಲಗಳಿಗೊಳಗಾದ ಪಂಚಾಯ್ತಿ ಬೋರ್ಡಿನವರ ಅಧೀನಕ್ಕೊಳಗಾಗಬೇಕೆಂದರೆ ಗ್ರಾಮದ ಹಿತವು ಸಾಧಿಸಲಾರದು ರೆವಿನ್ಯೂ ಕೆಲಸಕ್ಕೂ ಧಕ್ಕೆತಟ್ಟುವುದು. ಪಂಚಾಯ್ತಿ ಬೋರ್ಡು ಅಧ್ಯಕ್ಷರು ಅನಧಿಕಾರಿಗಳಾದ ಸ್ವತಂತ್ರರಿರುವ ಕಾರಣ ತಹಶೀಲ್ದಾರರು ಅವರಮೇಲೆ ಚರ್ಯೆತೆಗೆದುಕೊಳ್ಳಲು ಬಾರದು. ಗ್ರಾಮಾಧಿಕಾರಿಗಳೂ, ಪಂಚಾಯ್ತಿ ಬೋರ್ಡಿನವರೂ ಒಂದಾದರೆ ರೆವಿನ್ಯೂ ಅಧಿಕಾರಿಗಳೊಡನೆ ಸಂಪರ್ಕವೇ ಇಲ್ಲದಂತಾಗುತ್ತದೆ ರೆವಿನ್ಯೂ ಅಧಿಕಾರಿಗಳೂ, ಗ್ರಾಮೋದ್ಯೋಗಿಗಳೂ ಒಂದಾದರೆ ಊರಿನಲ್ಲಿ ಪಾರ್ಟಿ ಬೆಂಕಿಗೆ ಎಣ್ಣೆಸುರಿದಂತಾಗುವುದು.

ಪಂಚಾಯ್ತಿ ಬೋರ್ಡುಗಳಿಗೆ ರೆವಿನ್ಯೂ ಇನ್ಸ್ಪೆಕ್ಟರ್ ಗ್ರೇಡಿನವರನ್ನು ನ್ಯವಸ್ಥಾಪಕರನ್ನಾಗಿ (Executive officers) ನಿಯಮಿಸಬೇಕು. ಸರ್ಕಾರದ ಸೂತ್ರವು ನಮ್ಮದಿರುವ ಕಾರಣ ಈ ಪುಟ್ಟ ಅಧಿಕಾರಿಗಳಿಂದ ತೊಂದರೆಯಾಗಲಾರದು ಪಂಚಾಯ್ತಿ ರಾಜ್ಯಸ್ಥಾಪನೆಗಾಗಿ ಸಂಪೂರ್ಣವಾಗಿ ಊರಿನವರಿಗೇ ಬಿಡುವುದು ಅನಪೇಕ್ಷಿತವಾಗಿದೆ. ಪಂಚಾಯ್ತಿ ಬೋರ್ಡಿನವರು ರೆವಿನ್ಯೂಹಣ ಸಂಗ್ರಹಿಸುವುದು ಸಾಧ್ಯವಿಲ್ಲ. ಇದರಲ್ಲಿ ಪೂರ್ಣ ಬದಲಾವಣೆಯಾಗಬೇಕು. ಗ್ರಾಮೋದ್ಧಾರವಾಗಲು ಗ್ರಾಮದಲ್ಲಿ ಕೇಂದ್ರ ಮತ್ತು ಪ್ರಾಂತಗಳಿಂದ ಸಂಗ್ರಹವಾಗುವ ಹಣದ ¼ರ ಅಂಶವು ಹಿಂದಕ್ಕೆ ಕೊಡಲ್ಪಡಬೇಕು.

ಆಹಾರ ಸಂಗ್ರಹ

ಬರಗಾಲವನ್ನು ಬಯಸಬೇಡಿರಿ

ಯುದ್ಧದ ಮೊದಲು ನಮ್ಮ ಪ್ರಾಂತದಲ್ಲಿ ಸುಮಾರು 49 ಲಕ್ಷ ಟನ್‌ಗಳಷ್ಟು ಅಕ್ಕಿ ದೊರೆಯುತ್ತಿತ್ತು. ಅದು ಪ್ರಾಂತದ ಜನರಿಗೆಲ್ಲಾ ಸಾಕಾಗುವಂತಿದ್ದಿಲ್ಲ. ಬರ್ಮಾ ಸಯಾಮುಗಳಿಂದ ಕತಮೆಯಾದ ಸುಮಾರು 451,000 ಟನ್ ಅಕ್ಕಿಯು ಅಮದಾಗುತ್ತಿತ್ತು 1946 ನೇ ಇಸವಿಯ ನವಂಬರ 1 ನೇ ತಾರೀಕಿನಿಂದ 1947 ನೇ ಇಸವಿಯ ಅಕ್ಟೋಬರ 13 ರವರೆಗೆ ನಮ್ಮ ಪ್ರಾಂತದಲ್ಲಿ ಬೆಳೆದ ಅಕ್ಕಿ 7,495,000 ಟನ್ನುಗಳು. ಹೀಗೆ ಅಕ್ಕಿಯ ಉತ್ಪತ್ತಿಯಲ್ಲಿ ಹೆಚ್ಚಾಗಲು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವ ಬಗ್ಗೆ ಚಳವಳಿ ಮಾಡಿದ್ದೇ ಕಾರಣವಾಗಿದೆ. ಅಂತಹ ಒತ್ತಾಯವಿಲ್ಲದಿದ್ದರೆ ಇಷ್ಟು ಅಕ್ಕಿ ನಮ್ಮಲ್ಲಿ ಬೆಳೆಯುತ್ತಿದ್ದಿಲ್ಲ.

7,495,000 ಟನ್ ಅಕ್ಕಿಯೆಂದರೆ ಲೆಕ್ಕಿಸತಕ್ಕುದಾಗಿದೆ. ಈ ಸಂಖ್ಯೆಯು ಯುದ್ಧಕ್ಕಿಂತ ಮೊದಲಿನ ಉತ್ಪತ್ತಿಯಲ್ಲಿ 100,000 ಟನ್‌ಗಳಷ್ಟು ಕಡಿಮೆಯಾಗಿದೆ. ಆದರೆ ಕಳೆದ ವರುಷದ ಉತ್ಪತ್ತಿಯ 3,827,000 ಟನ್‌ಗಳೊಡನೆ ಹೋಲಿಸಿದರೆ ಎಷ್ಟೋ ಹೆಚ್ಚಾದರೂ ಉತ್ಪತ್ತಿ ಖರ್ಚುಗಳನ್ನು ಹೋಲಿಸಿದರೆ ಸುಮಾರು 556,000 ಟನ್ನುಗಳಷ್ಟು ಕಡಮೆಯಾಗುವುದು. ಈ ಕಡಮೆಯಾಗುವ ಅಂಶವು ಬರ್ಮಾ ಸಯಾಮ್‌ಗಳಿಂದ ಬರುತ್ತಿತ್ತು. ಈಗ ಈ ಅಂಶವನ್ನು ಭರ್ತಿಮಾಡುವುದೆಂದರೆ ದೊಡ್ಡ ಸಮಸ್ಯೆಯಾಗಿದೆ.

ಅಕ್ಕಿಯ ಪೂರೈಕೆಯು ಸಾಕಷ್ಟು ಇಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಪರಿಸ್ಥಿತಿಯು ಹೊರಗಿನಿಂದ ಅಕ್ಕಿ ಬರುವವರೆಗೆ ಇಲ್ಲದೇ ಇಲ್ಲಿ ಬೆಳೆಯುವವರೆಗೆ ಹೀಗೆಯೇ ಇರಬೇಕಾಗುತ್ತದೆ. ಪ್ರಾಂತದ ಜನಸಂಖ್ಯೆಯಾದರೋ ದಿನದಿನ ಹೆಚ್ಚುತ್ತಿದೆ. ಪ್ರಾಂತವು ಸ್ವಾವಲಂಬಿಯಾಗುವ ತನಕವೂ ಅಕ್ಕಿಯ ಕೊರತೆ ತಪ್ಪಿದ್ದಲ್ಲ. ಆದುದರಿಂದ ನಮ್ಮ ಪ್ರಾಂತದಲ್ಲಿರುವ ಆಹಾರ ಧಾನ್ಯಗಳನ್ನು ಸರಿಯಾಗಿ ಹಂಚಿಕೊಡುವುದಕ್ಕಾಗಿ ರೇಶನ್ ಪದ್ಧತಿಯನ್ನು ಪ್ರತಿಯೊಬ್ಬನೂ ಇಷ್ಟಪಡುತ್ತಿಲ್ಲವಾದರೂ ಯಶಸ್ವಿಯಾಗಿ ಮುಂದುವರಿಸಬೇಕಾಗುತ್ತಿದೆ ನಿಯಂತ್ರಣವನ್ನು ತೆಗೆದುಹಾಕಿದರೆ ಸಾಮಗ್ರಿಗಳ ಬೆಲೆ ಏರುವುದಲ್ಲದೆ ಲಾಭದಾಯಕವೂ ಆಗಿ ಪಟ್ಟಣಗಳೆಲ್ಲಾ ಆಹಾರವಿಲ್ಲದೆ, ತೊಂದರೆಪಡಬೇಕಾದೀತು. ಅಷ್ಟೇ ಅಲ್ಲ. 1943 ನೇ ಇಸವಿಯ ಬರಗಾಲದ ಪರಿಸ್ಥಿತಿಯೂ ಬರಬಹುದು. ದಿಲ್ಲಿಯ ಸುದ್ದಿಯಂತೆ ಆಹಾರ ಸಾಮಗ್ರಿಗಳ ಅಮದು ಅತಿ ಕಡಮೆಯಾಗಿದೆ ಆದುದರಿಂದ ಬರುವ ಆರು ತಿಂಗಳ ಬಗ್ಗೆ ನಾವು ನಮ್ಮಲ್ಲಿರುವ ಸಾಮಗ್ರಿಗಳ ಮೇಲೆ ಆಧಾರವಾಗಿರಬೇಕಾಗಿದೆ ಉತ್ಪತ್ತಿದಾರರಿಂದ ಹೆಚ್ಚುಳಿಯುವ ಧಾನ್ಯಗಳನ್ನು ಸಂಪೂರ್ಣವಾಗಿ ಸಂಗ್ರಹಿಸುವುದು ಅತ್ಯಾವಶ್ಯಕ. ಇಲ್ಲವಾದರೆ ನಾವೆಲ್ಲಾ ಉಪವಾಸ ಬೀಳಬೇಕಾದೀತು. ಸಂಗ್ರಹದ ಪರಮಾವಧಿ 1,730,700 ಟನ್‌ಗಳು ಎಂದು ನಿಶ್ಚಯಿಸಲಾಗಿದೆ.

12 ಔನ್ಸ್ ರೇಶನನ್ನು ಜಾರಿಯಲ್ಲಿಡಬೇಕಾದರೆ ಸಂಗ್ರಹವು ಇನ್ನೂ ಹೆಚ್ಚಬೇಕು.

ಈವರೆಗೆ ಮಾಡಿದ ಸಂಗ್ರಹವು ಆಗಬೇಕಾದಷ್ಟು ಆಗಲಿಲ್ಲ. ಮಾರ್ಚಿತಿಂಗಳ ಕೊನೆಯವರೆಗೆ ಶೇಕಡಾ 38 ರಷ್ಟು ಮಾತ್ರ ಸಂಗ್ರಹವಾದರೆ ಕಳೆದ ವರುಷದ ಅಂತ್ಯದಲ್ಲಿ ಶೇಕಡಾ 45 ರಷ್ಟು ಸಂಗ್ರಹವಾಗಿತ್ತು. ಏಪ್ರಿಲ್‌ನಲ್ಲಿ ಸಂಗ್ರಹವಾದುದೂ ಅಷ್ಟು ತೃಪ್ತಿಕರವಾಗಿಲ್ಲ. ಕಳೆದ ತಿಂಗಳಲ್ಲಿ ಹೆಚ್ಚಿನ ಸಂಗ್ರಹಕ್ಕಾಗಿ ಕಾರ್ಯ ಕೈಕೊಳ್ಳುವುದು ಅಗತ್ಯವಾಯಿತು.

ಕಳೆದ ವರುಷ ಆರಂಭಿಸಲ್ಪಟ್ಟ ಹೊಸ ಪದ್ಧತಿಯಂತೆ ಗ್ರಾಮಸಮಿತಿಗಳು ಸರಿಯಾಗಿ ಸಂಗ್ರಹಮಾಡಿಲ್ಲವೆಂದು ತಿಳಿದುಬಂತು. ಅಲ್ಲದೆ ಅಂತಹ ಸಮಿತಿಗಳು ರೇಶನ್ ಕಾರ್ಡುಗಳನ್ನು ಪರಿಶೋಧನೆಮಾಡುವುದು, ಅಕ್ಕಿ ಜೋಳ ಇತ್ಯಾದಿಗಳನ್ನು ಪಡೆಯುತ್ತಿರುವವರನ್ನು ಪ್ರತ್ಯೇಕಿಸಿ ಲೆಕ್ಕ ತಯಾರಿಸುವುದು ಇತ್ಯಾದಿ ಸಮಿತಿಗಳ ಅಧಿಕಾರದಲ್ಲಿರುವ ಕಾರ್ಯಗಳನ್ನೂ ಯಶಸ್ವಿಯಾಗಿ ಮಾಡಿದಂತೆ ಕಂಡುಬರಲಿಲ್ಲ.

ಈ ವರ್ಷದ ಮೊದಲಲ್ಲಿ ಹೊಸತಾಗಿ ರಚಿಸಲ್ಪಟ್ಟ ಉತ್ಪಾದಕ ಗ್ರಾಹಕರ ಸಹಕಾರ ಸಂಘಗಳು ಸಂಗ್ರಹ ಕಾರ್ಯವನ್ನು ಸಂಪೂರ್ಣವಾಗಿ ವಹಿಸಿಕೊಂಡುವು ಆ ವಿಷಯದಲ್ಲಿ ಅನೇಕಟೀಕೆ ಟಿಪ್ಪಣಿಗಳು ಈಗಾಗಲೇ ಎಲ್ಲರಿಗೂ ತಿಳಿದಿವೆ. ಈ ಸಂಘಗಳು ಹೆಚ್ಚುಳಿಯುವ ಜಿಲ್ಲೆಗಳಾದ ಕೃಷ್ಣಾ, ಗೋದಾವರಿ ಡೆಲ್ಟಾಗಳಲ್ಲಿ ಸಂಪೂರ್ಣ ಅಧಿಕಾರ ನಡೆಸುತ್ತಿದ್ದುವು. ಆದರೆ ಇವುಗಳಿಂದ ಬೇಕಾದಷ್ಟು ಧಾನ್ಯ ಸಂಗ್ರಹ ಮಾಡಲು ಆಗಲಿಲ್ಲ. ಮುಂದೆ ಮಾಡುವಂತೆಯೂ ಕಾಣಲಿಲ್ಲ. ಆದುದರಿಂದ ಅವುಗಳ ಲೈಸೆನ್ಸುಗಳನ್ನು ರದ್ದುಮಾಡಲಾಯಿತು. ಪ್ರಜೆಗಳ ಹಿತವನ್ನೇ ಬಯಸುತ್ತಿರುವ ಯಾವ ಸರಕಾರವೂ ಆಹಾರ ವಿಷಯದಲ್ಲಿ ಅಸಡ್ಡೆ ತೋರಿಸುವುದು ಯುಕ್ತವಾಗಿಲ್ಲ ಇದರಿಂದ ಈ ಸಂಘಗಳು ಮುಂದೆ ಸರಿಯಾಗಿ ಕೆಲಸಮಾಡಿಯಾವು ಎಂದು ಸುಮ್ಮನಾಗಲು ಸಾಧ್ಯವಿಲ್ಲ. ಗಿರಣಿಗಳ ಮಾಲಿಕರು ಕಳೆದ ವರುಷದಲ್ಲಿ ಈ ಸಂಘಗಳಿಗಿಂತಲೂ ಯಶಸ್ವಿಯಾಗಿ ಸಂಗ್ರಹಮಾಡಿದ್ದರು ಆದುದರಿಂದ ಸಂಘಗಳ ಲೈಸನ್ಸುಗಳನ್ನು ರದ್ದುಮಾಡಿದ್ದರಲ್ಲಿ ಆಶ್ಚರ್ಯವಿಲ್ಲ.

ನವಣೆ, ಸಜ್ಜೆ ಇತ್ಯಾದಿಗಳ ಬೆಳೆಯೂ ದೇಶದಲ್ಲಿ ಮಿತಿಮೀರಿ ಮಳೆಸುರಿದುದರಿಂದ ಕಡಮೆಯಾಯಿತು. ಆದುದರಿಂದ ಅಂತಹ ಧಾನ್ಯಗಳ ಸಂಗ್ರಹವು ಅತ್ಯವಶ್ಯವಾಗಿದೆ. ಈಗ ನಮ್ಮಲ್ಲಿರುವ ದಾಸ್ತಾನಿನಿಂದ ಮುಂದೆ ಆರು ವಾರಗಳಿಗೆ ಮಾತ್ರ ಸಾಕಾಗಬಹುದು. ಹೊರಗಿನಿಂದ ಬರುವ ಸಂಭವವಿಲ್ಲದಿದ್ದುದರಿಂದ ಇಲ್ಲಿಯ ಸಂಗ್ರಹದ ಮೇಲೆಯೇ ಹೆಚ್ಚು ಆಧರಿಸಿಕೊಂಡಿರಬೇಕಾಗಿದೆ. ಮುಂದೆ ಆರು ತಿಂಗಳಲ್ಲಿ 12 ಔನ್ಸ್ ರೇಶನ್ ಕೊಡಲು ಬೇಕಾಗುವಷ್ಟು ಸಂಗ್ರಹಿಸುವುದೇ ನಮ್ಮ ಗುರಿಯಾಗಬೇಕು. ಆದುದರಿಂದ ಪ್ರತಿಯೊಬ್ಬನೂ ಸಂಗ್ರಹ ಕಾರ್ಯದಲ್ಲಿ ಸಹಕರಿಸಬೇಕಾಗಿದೆ.

ಆಹಾರಪರಿಸ್ಥಿತಿ.

[ನಮ್ಮ ದೇಶದಲ್ಲಿ ಆಹಾರದ ಪರಿಸ್ಥಿತಿಯು ತೃಪ್ತಿಕರವಾಗಿಲ್ಲ. ಆದರೂ ಈ ವಿಷಯದಲ್ಲಿ ಯಾರೂ ನಿಷ್ಕಾರಣವಾಗಿ ಹೆದರಬೇಕಾಗಿಲ್ಲ ಉತ್ಪಾದಕರೆಲ್ಲಾ ತಮ್ಮಲ್ಲಿ ಹೆಚ್ಚುಳಿದ ಆಹಾರ ಸಾಮಗ್ರಿಗಳನ್ನು ತ್ವರೆಯಿಂದ ಸಂಗ್ರಾಹಕರಿಗೆ ಒಪ್ಪಿಸಿಕೊಟ್ಟು, ಸಂಗ್ರಹದ ಕಾರ್ಯವು ಸುಧಾರಿಸಿದರೆ ಮುಂದಿನ ಕಷ್ಟತರವಾದ ಕೆಲತಿಂಗಳುಗಳನ್ನು ತೃಪ್ತಿಕರವಾಗಿ ದೂಡಲು ಸಾಧ್ಯವಾಗದಿದ್ದರೂ ಬರುವ ಕಷ್ಟಗಳನ್ನು ಎದುರಿಸಿ ಸುಧಾರಿಸಿಕೊಳ್ಳಬಹುದೆಂದು ನಿಶ್ಚಯವಾಗಿ ಹೇಳಬಹುದು ಎಂದು ಮಾನ್ಯ ಡಾ|| ರಾಜೇಂದ್ರ ಪ್ರಸಾದರು ಇತ್ತೀಚೆಗೆ ಮದ್ರಾಸಿಗೆ ಬಂದಾಗ ಅಭಿಪ್ರಾಯಪಟ್ಟಿದ್ದಾರೆ]

ನವಭಾರತಕ್ಕೆ ಚಂದಾದಾರರಾಗಿ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:**— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಬಳ್ಳಾರಿ, ಹಡಗಲಿ, ಕೂಡ್ಲಿಗಿ, ಆದವಾನಿ, **ಅನಂತಪುರ:**— ಅನಂತಪುರ, ಬೆಳಗುಪ್ಪ, ಧರ್ಮಾವರಂ, ಕದಿರಿ ಪಾವಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:— **ಪತ್ತಿಕೊಂಡ.**
ಕಡಪ:— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡ್ಲ

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ;— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು: 3½%.**
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, **ಬಳ್ಳಾರಿ.**

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂಮ್ದು. ಪರೀಕ್ಷಿಸಿ ಮನಗಾಣಿರಿ.

ಗಾಂಧಿ-ಜಿನ್ನಾ
ಅನ್ಯಾಯ ಹಿಂಸೆಗಳಿಗೆ ಅವಕಾಶವಿರಬಾರದು.

ಹಿಂದೂಸ್ಥಾನದ ಕೀರ್ತಿಗೆ ಅತ್ಯಂತ ಕಳಂಕ ತರುವ ಅನ್ಯಾಯ-ಹಿಂಸೆಗಳು ನಡೆದಿವೆ. ಇಂತಹ ದುರಂತಗಳಿಗೆ ಜೊತೆಗಾರರು ಯಾರೇ ಇರಲಿ, ಇವುಗಳಿಂದಾಗಿ ವಿಪತ್ತಿಗೀಡಾದವರು ಯಾರೇ ಆಗಲಿ, ನಾವು ಈ ಪಾತವೀ ಕೃತ್ಯಗಳಿಗಾಗಿ ವಿಷಾದಪಡುತ್ತೇವೆ. ಇಂತಹ ಕೃತ್ಯಗಳಿಂದ ನಿರಪರಾಧಿಗಳಾದ. ಬಡಪಾಯಿಗಳು ತಡೆಯಲಾರದ ಕಷ್ಟನಷ್ಟಗಳಿಗೆ ಗುರಿಯಾದರು. ಜನರನ್ನು ಉದ್ರೇಕಗೊಳಿಸುವ ಕಾರ್ಯಕಲಾಪಗಳಿಗಾಗಲೀ, ಭಾಷಣ, ಲೇಖನಗಳಿಗಾಗಲೀ ಕೈಹಾಕಬಾರದೆಂದು ಜಾತಿ ಮತ ಭೇದವಿಲ್ಲದೆ ಹಿಂದುಸ್ಥಾನದ ಎಲ್ಲಾ ಪಂಗಡಗಳನ್ನು ಈ ಮೂಲಕ ಏಕ ಕಂಠದಿಂದ ಕೇಳುತ್ತಿದ್ದೇವೆ.

ಸ್ಥಾನಿಕ ಸಂಸ್ಥೆಗಳ

(ಜಿಲ್ಲಾಬೋರ್ಡು ಮುನಿಸಿಪಾಲಿಟಿ ಪಂಚಾಯ್ತಿ)

ಉಪಾಧ್ಯಾಯರ ವೇತನದಲ್ಲಿ ಬಡ್ತಿ

—I. ಎಲಿಮೆಂಟರಿ ಶಾಲೆಗಳು—

ಈ ಕೆಳಗಿನ ಹೆಚ್ಚಳ 1-1-1947 ರಿಂದ ಜಾರಿಯಲ್ಲಿ ಬರುವುದೆಂದು ಪ್ರಕಟವಾಗಿದೆ.

(a) **ಲೋಯರ್ ಎಲಿಮೆಂಟರಿ ಗ್ರೇಡ್**-20-1-30 ರಿಂದ 23-1-33 ಅಂದರೆ 3 ರೂ. ಬಡ್ತಿ

(b) **ಹೈಯ್ಯರ್ ಎಲಿಮೆಂಟರಿ ಗ್ರೇಡ್‌ನವರಿಗೆ** 25-1-40 ಕೊಟ್ಟು 5/-ಕ್ರಾಫ್ಟ್ ಅಲೋಯರ್ಸ್ ಕೊಡುತ್ತಿದ್ದರು. ಆದರೆ ಈಗ ಅದನ್ನು 30-1-45 ಕ್ಕೆ ಹೆಚ್ಚಿಸಿ ಕ್ರಾಫ್ಟ್ ಅಲೋಯರ್ಸ್ ಇಲ್ಲದಂತೆ ಮಾಡಿರುವರು.

(c) **ಸೆಕಂಡರಿ ಗ್ರೇಡ್**- ನವರಿಗೆ 35-1½-65 ಕೊಟ್ಟು ಮಾಸಿಕ 5/- ಕ್ರಾಫ್ಟ್ ಅಲೋಯರ್ಸ್ ಕೊಡಲು ನಿಶ್ಚಯಿಸಲಾಗಿತ್ತು. ಆದರೆ ಈಗ 40-1½-55-2-75 ಕೊಟ್ಟು ಕ್ರಾಫ್ಟ್ ಅಲೋಯರ್ಸ್ ಇಲ್ಲದಂತೆ ಮಾಡಿರುವರು.

ನೇಲ್ಯಾಡಿಸಿದ (b. c.) ಉಪಾಧ್ಯಾಯರು ಇನ್ನೆರಡು ವರ್ಷಗಳೊಳಗಾಗಿ ಯಾವುದಾದರೊಂದು ಕಲೆ (Craft) ಯಲ್ಲಿ ಉತ್ತೀರ್ಣರಾಗಬೇಕು.

ಉಪಾಧ್ಯಾಯರಿಗೆ ಟೀಚಿಂಗ್ ಗ್ರಾಂಟು ಲೋಯರ್ ಎಲಿಮೆಂಟರಿ ಅನಟ್ರೇನ್ಡ 11/- ಟ್ರಾಯನಿಂಗ್ ಆದವರಿಗೆ 18/- ಹೈಯರ್ ಎಲಿಮೆಂಟರಿ 25-½ 30 ಸೆಕಂಡರಿಗ್ರೆಡ್ 35-1-45

ಮ್ಯಾನೇಜುಮೆಂಟುಗಳವರು ಕೊನೆಯಪಕ್ಷ ಹೈಯರ್‌ನವರಿಗೆ 30/- ಸೆಕಂಡರಿಯವರಿಗೆ 40/- ಕೊಡಬೇಕು.

11 ಸೆಕಂಡರಿ ಶಾಲೆಗಳು

ಸೆಕಂಡರಿಗ್ರೇಡ ಉಪಾಧ್ಯಾಯರಿಗೆ 45-2-48 ಕ್ಕೆ ಹೆಚ್ಚಿಸಲಾಗಿದೆ. L. T. ಉಪಾಧ್ಯಾಯರಿಗೆ 75-5-145 ಕ್ಕೆ ಏರಿಸಲಾಗಿದೆ. ಸೆಕಂಡರಿಗ್ರೇಡ್ ಟ್ರೇನ್ಡ ಹಿಂದೂಸ್ತಾನಿ ಪಂಡಿತರಿಗೆ 50-2-90 ಇತರರಿಗೆ 40-1½-70

ಶುದ್ಧ! ಗ್ಯಾರಂಟಿಯಾದ್ದು!! ಸತ್ಯಕಾರಿ!!! —ಹೈರ ಎಕ್ಸೆಲ್ಸೊ—
ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್,ಎಂ ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ ಎಂ. ಗಿರಿ ಅಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)
ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .. ..
....
....

Printed at Krishna Press Bellary QH NO. B 17 FOR (Q.H. NO. B-5.)
Edited & bliPushed by T. B. KESHAVA RAO

ಪೈಸೆಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೨೪ | ಬಳ್ಳಾರಿ ಜೂನ್ ೨೩ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶ ಟಿ. ಬಿ. ಕೇಶವರಾವ್.

ರೈತರು ಜಮೀನ್ದಾರರ ಭೂಮಿಗಳನ್ನೆಲ್ಲಾ ಹಂಚಿಕೊಂಡರು.

ಮದ್ರಾಸ್ ಪ್ರಾಂತ್ಯದ ಕೃಷ್ಣಾ ಜಿಲ್ಲೆಯ 30 ಹಳ್ಳಿಗಳಲ್ಲಿ ರೈತರು ಚಲ್ಲಪಲ್ಲಿ ಜಮೀನ್ದಾರರಿಗೆ ಸೇರಿದ ಭೂಮಿಗಳನ್ನೆಲ್ಲಾ ಹಂಚಿಕೊಂಡು, ತಮ್ಮ ತಮ್ಮ ಹದ್ದುಗಳನ್ನು ನಿರ್ಣಯಿಸಿಕೊಳ್ಳುತ್ತಿರುವರು. ಈ ಕಾರ್ಯವು ಜೂನ್ ತಿಂಗಳ ಪ್ರಾರಂಭದಿಂದ ಸಾಗಿದೆ ಜಮೀನ್ದಾರರಿಗೆ ಸೇರಿದ 2000 ಎಕರೆಗಳನ್ನು ಈ ಪ್ರಕಾರವಾಗಿ ಹಂಚಿಕೊಂಡಿರುವರೆಂದು ಗೊತ್ತಾಗಿದೆ ಮದ್ರಾಸ್ ಸರ್ಕಾರದವರು ಜಮೀಂದಾರಿ ಬಿಲ್ಲಾತಂದು, ಜಮೀಂದಾರೀ ಪದ್ಧತಿಯನ್ನೇ ನಿರ್ಮೂಲಗೊಳಿಸಲಿರುವವರಿಂದ ಅದಕ್ಕೆ ಪೂರ್ವದಲ್ಲಿ ರೈತರು ಭೂಮಿಗಳನ್ನಾಕ್ರಮಿಸಿದರೆ ತಮಗೆ ಅದರ ಹಕ್ಕು ದೊರೆಯುವುದೆಂದು ನಂಬಿರುವರು. ನಿಯಮ ನಿಬಂಧನೆಗಳನ್ನುಲ್ಲಂಘಿಸಿ ಹೀಗೆ ಮಾಡುತ್ತಿರುವದನ್ನು ಮುಖ್ಯಮಂತ್ರಿಗಳು ಖಂಡಿಸಿ, ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಾಗಿ ಹೇಳಿದರು.

ಕೆಲ್ಕತ್ತ:— ಈವಾರ ಎರಡು ಹಲ್ಲೆಗಳಾಗಿ 28 ಜನರನ್ನು ಬಂಧಿಸಲಾಗಿದೆ.

ಹೈಯರ್ ಉಪಾಧ್ಯಾಯರಿಗೆ ಸೂಚನೆ.

ವಿಶ್ವ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವುದ ಕ್ಕೋಸ್ಕರ ಅರ್ಹರಾದ ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೈಂಡ್ ಅಧ್ಯಾಪಕರಿಗೆ, ಸೆಕಂಡರಿ ಗ್ರೇಡಿನ ಟಿ. ಎಸ್. ಎಲ್. ಸಿ. ಪರೀಕ್ಷೆಗೆ ಖಾಸಗಿ ಉಮೇದು ವಾರರಾಗಿ ಕುಳಿತುಕೊಳ್ಳುವ ಬಗ್ಗೆ ಕೊಟ್ಟ ಒಪ್ಪಿಗೆಯನ್ನು, ಸರಕಾರ ಉದ್ಯೋಗಕ್ಕೆ ಸೇರಲು ಅರ್ಹರಾಗುವಂತೆ ಮಾಡಲು ಸಾಕಷ್ಟು ಮಾರ್ಕುಗಳು ದೊರೆತ ಹಾಯರ್ ಎಲಿಮೆಂಟರಿ ಗ್ರೇಟ್ ಅಧ್ಯಾಪಕರ ವರ್ಗಕ್ಕೆ ಸಹ ಕೊಡಲಾಗಿದೆ.

ಕಳೆದ ವರ್ಷ ಆರಂಭಿಸಿದ ಸೆಕಂಡರಿ ಗ್ರೇಡ್ ಟ್ರೈನಿಂಗಿನ ಅವಸರದ ಶಿಕ್ಷಣ ಪದ್ಧತಿಯನ್ನು ರದ್ದು ಪಡಿಸಲಾಗಿದೆ. ಮುಂಚಿನ ಎರಡು ವರ್ಷ ಕಾಲಾವಧಿಯ ಶಿಕ್ಷಣ ಪದ್ಧತಿಯನ್ನು ಪುನಹ ಜಾರಿಗೆ ತರಲಾಗಿದೆ. 1947-48 ನೇ ವರ್ಷಕ್ಕೋಸ್ಕರ ಶಿಕ್ಷಣವು 1947 ನೇ ಅಗೋಸ್ತಿನಲ್ಲಿ ಆರಂಭವಾಗುತ್ತದೆ.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ

29 ನೆಯ ದಿನಾಂಕ ಜಿಲ್ಲಾ ಕಾಂಗ್ರೆಸ್ ಸಮಿತಿಯು ಮಧ್ಯಾನ್ಹಕ್ಕೆ ನಾರಾಯಣದೇವರಕೆರೆಯಲ್ಲಿ ಸಮಾವೇಶವಾಗಿ ಘಟನೆ, ಹೊಸಪೇಟೆನಗರ ಜುನಾವಣೆ ಮತ್ತು ಅಧ್ಯಕ್ಷರ ಅಪ್ಪಣೆಯಿಂದ ಇತರ ವಿಷಯಗಳು ಚರ್ಚೆಗೆ ಬರಲಿವೆ.

1947 S. S. L. C. Examination

(*Passed Candidates.*)

ಬಳ್ಳಾರಿ ಜಿಲ್ಲೆಯಲ್ಲಿ 1947 ರ ಎಸ್. ಎಸ್. ಎಲ್. ಸಿ. ಪರೀಕ್ಷೆ ಫಲಿತಾಂಶ.

ವಾರ್ಡಲಾ ಹೈಸ್ಕೂಲ್	ಬಳ್ಳಾರಿ.	...	40	ವಿದ್ಯಾರ್ಥಿಗಳು	...	ಉತ್ತೀರ್ಣರಾದರು
ಮುನಿಸಿಪಲ್ "	ಹೊಸಪೇಟೆ.	...	32	"	...	"
ಮುನಿಸಿಪಲ್ "	ಅದವಾನಿ.	...	27	"	....	"
ಮುನಿಸಿಪಲ್ "	ಬಳ್ಳಾರಿ.	....	24	"	...	"
ಸೆಂಟಜಾನ್ಸ "	"	...	24	"	...	"
ಗರ್ಲ್ಸ್ ಹೈಸ್ಕೂಲ್	"	...	16	"	...	"
S. G. ಹೈಸ್ಕೂಲ್	"	...	16	"	...	"
ಬೋರ್ಡ ಹೈಸ್ಕೂಲ್	ರಾಯದುರ್ಗ	...	13	"	...	"
— " —	ಹರಪನಹಳ್ಳಿ	....	9	"	....	"
— " —	ಕೊಟ್ಟೂರು	...	9	"	...	"
— " —	ಎಮ್ಮಿಗನೂರು	....	7	"	....	"
— " —	ಹಡಗಲಿ	...	6	"	...	"
— " —	ಆಲೂರು	...	5	"	....	"
— " —	ಕಂಪ್ಲಿ	....	2	"	...	"
ಮುನಿಸಿಪಲ್ ಮುಸ್ಲಿಂ ಹೈಸ್ಕೂಲ	ಬಳ್ಳಾರಿ		6	"	...	"
			236			

ಕೂಡ್ಲಿಗಿ ಹೈಸ್ಕೂಲ್ ಫಲಿತಾಂಶ ಬರುವ ವರ್ಷ ನೀಕ್ಷಿಸಬೇಕಾಗಿದೆ. ಸಿರುಗುಪ್ಪೆಯಲ್ಲಿ ಈ ವರ್ಷ ಹೈಸ್ಕೂತ್ ಪ್ರಾರಂಭವಾಗಿದೆ. ಒಟ್ಟಿನಲ್ಲಿ 236 ವಿದ್ಯಾರ್ಥಿಗಳು ಬಳ್ಳಾರಿ ಜಿಲ್ಲೆಯಿಂದ ಈ ವರ್ಷ ಉತ್ತೀರ್ಣರಾಗಿರುವರು. ಬಹುಸಂಖ್ಯಾಕರು ಕಾಲೇಜ ವಿದ್ಯಾಭ್ಯಾಸಕ್ಕೆ ಅತುರರಿರುವರು. ಇವರಿಗೆ ಅಸಕ್ತಿ ಇರೇ ವ ವಿಷಯಗಳಲ್ಲಿ ಕಾಲೇಜುಗಳಲ್ಲಿ ಸ್ಥಳವು ದೊರೆಯುವುದನುಮಾನ.

ಬಳ್ಳಾರಿ ವೀರಶೈವ ಕಾಲೇಜಿನವರು ಜಿಲ್ಲೆಯ ಬೇಡಿಕೆಯನ್ನಾದರೂ ಪೂರೈಸುವರೆಂಬ ವಿಶ್ವಾಸ್ಯ ವಿದೆ. 'ಕಾಮರ್ಸ' ಭಾಗವನ್ನೇ ಬೇರ್ಪಡಿಸಿದರೆ ಅನುಕೂಲ. ಜಂಟಿಯು ಬೇಡ ಏಕೆಂದರೆ ಬೇಡಿದವರಿಗೆಲ್ಲಾ ಸಾಯ್ನ್ಸ ಭಾಗಗಳು ದೊರೆಯಲಾರವು. ಸೀಟುಗಳೂ ಕಡಮೆ. ಲ್ಯಾಬರೇಟರಿಯೂ ದೊಡ್ಡದಲ್ಲ. ಈ ಕಾರಣ ಮುಂದೆ ಅಭಿವೃದ್ಧಿಗೆ ಬರುವ ಮಾರ್ಗಕ್ಕೆ ಸಹಾಯಕವಾದ Commerce ಗೆ ಪ್ರಾಶಸ್ತ್ಯ ಕೊಡಲು ನಮ್ಮ ಸೂಚನೆ.

THE NAVA BHARAT
ನವಭಾರತ
ಸಂಪಾದಕ-ಟಿ.ಪಿ.ಕೇಶವರಾವ್

10th year of Publication.
Monday, 23rd June 1947

ಯುದ್ಧದ ಭಯ.

ಕಳೆದ ಯುದ್ಧಾನಂತರ ಜಗತ್ತಿನಲ್ಲಿ ಅಮೆರಿಕ, ರಷ್ಯಾ, ಬ್ರಿಟನ್, ಹೀಗೆ ಮೂರು ಪ್ರಬಲ ರಾಷ್ಟ್ರಗಳು ಳಿದಿವೆ. ಬ್ರಿಟನ್‌ದೇಶವು ಅಮೆರಿಕಾಕ್ಕೆ ಸಾಲ ಕೊಡ ಬೇಕಾಗಿದ್ದು, ಅನೇಕ ವಿಷಯಗಳಲ್ಲಿ ಅದಕ್ಕೆ ರುಣಿ ಯಾಗಿದೆ. ಬ್ರಿಟನ್ನಿನಲ್ಲಿ ಜನಬಲವಿದ್ದರೂ, ಧನ ಸಾಮಗ್ರಿಗಳ ಬಲವಿಲ್ಲ. ತನ್ನ ಆಹಾರ ಪೂರೈಕೆಗಾಗಿ ಬ್ರಿಟನ್, ಅಮೆರಿಕಾದ ಸಹಾಯವನ್ನು ಇಂದಿಗೂ ಹೊಂದುತ್ತಲಿದೆ. ಇಂಗ್ಲೀಷಿನವರಾದರೂ ಯುದ್ಧ ದಿಂದ ಯಶಶ್ರೀಗಳಾಗಿ ಪಾರಾಗಿರುವುದೂ ಕೂಡ ಅಮೆ ರಿಕಾದವರ ಸಹಾಯದಿಂದಲೇ! ತಮ್ಮ ದೇಶವೇ ಪರಾ ವಲಂಬಿಯಾಗಿರುವಾಗ, ಇಂದಿನವರೆಗೆ ಅಧೀನವರ್ತಿ ಯಾದ ಭಾರತ ದೇಶವನ್ನಾಳುವುದು ಹುಚ್ಚತನವೆಂದು ಶೀಘ್ರದಲ್ಲಿ ಅಧಿಕಾರ ಪ್ರದಾನಮಾಡಿ ಹೋಗಲಿದ್ದಾರೆ.

ಅಂದ ಮೇಲೆ ಲೆಕ್ಕಕ್ಕೆ ಬರುವ ಪ್ರಬಲರಾಷ್ಟ್ರಗ ಳೆಂದರೆ ಅಮೆರಿಕಾ ರಷ್ಯಾ, ಪ್ರಪಂಚದಲ್ಲಿ ಹರಡಿರುವ ಪ್ರತಿಯೊಂದು ಭಾಗದಲ್ಲಿಯೂ ಅಮೆರಿಕಾ ದೇಶವು ತನ್ನ ಪ್ರತಿಭೆಯನ್ನು ಬೀರಿ, ವ್ಯಾಪಾರ, ಉದ್ಯೋಗ, ರಾಜಕೀಯ ಬಲುಮೆಯನ್ನು ಹರಡಲು ಯತ್ನಿಸುತ್ತ ಲಿದೆ. ರಷ್ಯಾವಾದರೂ ಕೂಡ ಪ್ರತ್ಯಕ್ಷವಾಗಿಯಲ್ಲವಾ ದರೂ, ತನ್ನ ಪ್ರತಿಭೆಯನ್ನು ಹೆಚ್ಚಿಸಲು ಯತ್ನಿಸುತ್ತ ಲಿದೆ ರಷ್ಯದ ಚಟುವಟಿಕೆಗಳು ಈಗ ಮಧ್ಯ ಯೂರೋ ಪನಲ್ಲಿ ಅಧಿಕವಾಗುತ್ತಾ ನಡೆದಿವೆ. ಬಾಲ್ಕನ್ ರಾಷ್ಟ್ರ ಗ್ರೀಸ್ ತುರ್ಕಿಗಳಲ್ಲಿ ಈ ಮೂರು ರಾಷ್ಟ್ರಗಳವರೂ ಸೇರಿ ತಮ್ಮ ಚದುರಂಗದಾಟ ಸಾಗಿಸಿದ್ದಾರೆ. ಸಣ್ಣ ಪುಟ್ಟದೇಶಗಳನ್ನು ಯಾವಾಗಬೇಕಾದರೂ, ನುಂಗಿ ನೀರುಕುಡಿಸಲು ಸಶಕ್ತವಾದ ಈ ರಾಷ್ಟ್ರಗಳು ತಮ್ಮ ಅಧಿಕಾರಕ್ಕೆ ಒಳಗಾಗಬೇಕೆಂದು ಪಾರ್ಟಿಗಳನ್ನು ಮಾಡಿ ಆ ಸಣ್ಣದೇಶಗಳಲ್ಲಿ ಅವರಿಗೆ ಶಸ್ತ್ರ ಪೂರೈಕೆ ಮಾಡುತ್ತಿರುವರು. ಅಮೆರಿಕದಲ್ಲಿ ಹಿಂದೆ ಉಪಾಧ್ಯ ಕ್ಷರಾಗಿದ್ದ ಸರ ಹೆನ್ರಿವಾಲೇಸರು, ರಷ್ಯಾವು ಮಧ್ಯ ಪೂರ್ವದಲ್ಲಿ ತನ್ನ ಅಧಿಕಾರ ಚಾಚುವುದಾದರೆ ಅಮೆ ರಿಕಾವು ರಷ್ಯಾದ ಮೇಲೆ ಯುದ್ಧ ಸಾರಬೇಕೆಂದು ಪ್ರಕಟಿಸಿರುವರು. ಯೂರೋಪದಲ್ಲಿ ತುರ್ಕಿ ಬಾಲ್ಕನ್ ರಾಷ್ಟ್ರಗಳಿದ್ದಂತೆ ಆಶಿಯಾದಲ್ಲಿ ಚೀನಾದೇಶವಾದರೂ ಯುದ್ಧದ ಕಡಿಗಳನ್ನು ಒದಗಿಸುತ್ತಲಿದೆ. ಈದೇಶಗಳಲ್ಲಿ ಸಾಹುಕಾರೀ ರಾಷ್ಟ್ರವಾದ ಅಮೆರಿಕಾ, ಬಡವರ ಮತ್ತು ಕೂಲಿಕಾರರ ಪ್ರತಿನಿಧಿಯಾದ ರಷ್ಯಾ ತಮ್ಮ ತಮ್ಮ ಪಕ್ಷಗಳನ್ನು ಬಲಗೊಳಿಸಿ, ಸಣ್ಣರೀತಿಯಲ್ಲಿ ಯುದ್ಧವು ನಡೆದೇ ಇದೆ.

ಜಗತ್ತಿನ ಇಂದಿನ ವಿಜ್ಞಾನ ಪ್ರಗತಿಯಲ್ಲಿ ಯು ದ್ಧವೆಂದರೆ ಇಡೀ ಪ್ರಪಂಚದ ಸಾಮೂಹಿಕ ನಾಶವೆನ್ನ ಬಹುದು. ಅಣುಬಾಂಬು ಮತ್ತು ಇತರ ನಾಶಕಾರೀ ಆಸ್ತ್ರಗಳ ಅವಿಷ್ಕಾರದಿಂದ ಜಗತ್ತು ಭಯಭೀತವಾಗಿ ತಲ್ಲಣಿಸಿ ಹೋಗಿದೆ. ಆಹಾರ, ಬಟ್ಟೆಗಳ ಕೊರತೆ ಯಿಂದ ಜನಸಾಮಾನ್ಯರು ಬೆಂದು ಬಳಲುತ್ತಿರುವರು. ಪ್ರಬಲ ರಾಷ್ಟ್ರಗಳ ಸಾಮ್ರಾಜ್ಯಕಾಂಕ್ಷೆಯಿಂದ ಜಗ ತ್ತು ನಾಶವಾಗಬೇಕೋ?

ಅಂತು ಕತ್ತಲೆಯಲ್ಲಿ ಇವರಿಗೆ ಮಾರ್ಗದರ್ಶಕರು ಇಲ್ಲದಂತಾಗಿದೆ ಭಗವಂತನ ಲೀಲೆ ಹೇಗಿನವೋ ಭವಿಷ್ಯ ಗರ್ಭದಲ್ಲೇನಿದೆಯೋ ಕಾಲನೇ ಬಲ್ಲ!!

ಗಾಂಧಿ—ಜಿನ್ನಾ ಭೇಟಿ

ವೈಸ್ರಾಯಿ ಭವನದಲ್ಲಿ ಗಾಂಧೀಜಿಯವರು 17 ನೆಯ ತಾ. ವೈಸ್ರಾಯರೊಡನೆ ಮಾತಾಡುತ್ತಿರು ವಾಗಲೇ ಜಿನ್ನಾರವರು ಬಂದರು ಕೆಲಕಾಲ ಜಾಯಿಂ ಟಾಗಿ ಮಾತುಕತೆ ನಡೆಯಿತು.

ಬಳ್ಳಾರಿ ಸೆಂಟ್ರಲ್ ಸ್ಟೋರ್ಸದಲ್ಲಿ ಸರ್ಕಾರಿಮಾಲಿನ ಕಳವು.

ಹೋಟಲ ಮಾಲೀಕರು ಮತ್ತು ಗುಮಾಸ್ತರ ಬಂಧನ.

ಜಿಲ್ಲಾಕ್ಕೆಲ್ಲಾ ಆಹಾರವನ್ನು ಪೂರೈಸಲು ಹೊಣೆಗಾರಿಕೆಯನ್ನು ಹೊತ್ತ ಶಿಂಟ್ರಲ್ ಕೋ ಆಪರೇಟಿವ್ ಸ್ಟೋರ್ಸದಿಂದ ಮಾಲು ಕಳುವಾಗುತ್ತಿರುವುದು ಬಯಲಿಗೆ ಬಿದ್ದಿದೆ. ಜಿಲ್ಲೆಯಲ್ಲಿಯ ಪ್ರಾಥಮಿಕ ಶಾಲೆಗಳ ಬಡಹುಡುಗರಿಗೆ ಉಚಿತಾರ್ಥವಾಗಿ ಹಾಲಿನ ಪೂರೈಕೆಮಾಡಲು ಮದ್ರಾಸ್ ಸರ್ಕಾರದವರು ಪರದೇಶಗಳಿಂದ ಹಾಲಿನ ಪುಡಿಯ ಡಬ್ಬಿಗಳನ್ನು ತರಿಸಿ ಸುರಕ್ಷಿತೆಗಾಗಿ ಸ್ಟೋರ್ಸದಲ್ಲಿಟ್ಟಿದ್ದರು. ಸುಮಾರು 250 ಡಬ್ಬಿಗಳ ಪೈಕಿ ಕಳೆದೆರಡು ತಿಂಗಳಲ್ಲಿ 123 ಡಬ್ಬಿಗಳು ಮಾಯವಾಗಿರುವುದನ್ನು ಸ್ಟೋರ್ಸದಧಿಕಾರಿಗಳು ಮನ್ನೆ ಕಂಡುಹಿಡಿದು ಪೋಲೀಸರಿಗೆ ವರದಿಮಾಡಿದ್ದರು ಒಂದೊಂದು ಡಬ್ಬಿಯಲ್ಲಿ 25 ಪೌಂಡುಗಳಷ್ಟು ಹಾಲಿನ ಪುಡಿಯಿದ್ದು ಕಳುವಾದ ಮಾಲಿನ ಬೆಲೆಯು 3000/-ರೂ ಗಳೆಂದು ಅಂದಾಜು ಮಾಡಲಾಗಿದೆ. ಹಿಂದೆ ಗುಮಾಸ್ತರಾಗಿದ್ದವರೊಬ್ಬರು ಈಗಿನವರೊಡನೆ ಕಲೆತು ನಗರದ ಹೋಟಲಗಳವರಿಗೆ ಮಾರಿದರೆಂಬ ಸಾಕ್ಷ್ಯವು ಪೋಲೀಸರಿಗೆ ದೊರೆತಂತೆ ಕಾಣುತ್ತದೆ. ಕಳೆದ ಬಾನುವಾರ ಹೋಟಲ ಮಾಲೀಕರ ಮನೆಗಳನ್ನು ಹೋಟಲುಗಳನ್ನು ಪರಿಶೋಧಿಸಿ 93 ಡಬ್ಬಗಳನ್ನು ಹೊರತೆಗೆದು ಎಂಟು ಹೋಟಲಗಳ ಮಾಲೀಕರನ್ನೂ ಗುಮಾಸ್ತ ಮತ್ತೀರ್ವರನ್ನೂ ಬಂಧಿಸಿ, ಮಾಲೀಕರನ್ನು ಜಾಮೀನ ಮೇಲೆ ಬಿಟ್ಟಿರುವರು. ಬಂಧಿತರಾಗಿದ್ದವರಲ್ಲಿ ಕೆಲವರು ಸ್ಟೋರ್ಸದ ಶೇರು ಹೋಲ್ಡರುಗಳೆಂದು ಗೊತ್ತಾಗಿದೆ.

ಅಮೃತಸರ:- ಈ ವಾರ ಕೊಳ್ಳಿ, ಇರಿತಗಳು ಸಂಭವಿಸಿದವು. ಮನೆಗಳಿಗೆ ಬೆಂಕಿಹಚ್ಚಲಾಗಿದೆ.

ಮಲ್ಲಸಜ್ಜನ ವ್ಯಾಯಾಮಶಾಲೆ ಬಳ್ಳಾರಿ

(ವಿ ದ್ಯಾ ರ ಣ್ಯ ರ ದಿ ನ)

17-6-47 ನೆಯ ಮಂಗಳವಾರ ಶ್ರೀ ಬಿ. ಭೀಮರಾಯರ ಅಧ್ಯಕ್ಷತೆಯಲ್ಲಿ ಶ್ರೀ ಕಪ್ಪಗಂತುಲ ಸುಬ್ಬರಾಯರು ಶ್ರೀ ವಿದ್ಯಾರಣ್ಯರಮೇಲೆ ಮಾತನಾಡುತ್ತಾ ಧೈರ್ಯ, ಶೌರ್ಯ, ಸಾಹಸಗಳ ದ್ಯೋತಕವಾದ, ಭಾರತ ಸಂಸ್ಕೃತಿಗೆ ಮೂಲಸ್ಥಾನವಾದ ಈ ನಾಡಿನ ಯುವಕರು ದೇಶಾಭಿಮಾನಿಗಳಾಗಿಯೂ, ದಪ್ಪ ಪುಷ್ಟರಾಗಿಯೂ ಆಗಿ ಭಾವೀ ಭಾರತದ ರಚನೆಗೆ ಸಹಾಯಕರಾಗಲೆಂದು ಒಳ್ಳೆ ಆವೇಶಯುಕ್ತವಾದ ಭಾಷಣವನ್ನಿತ್ತರು.

ಬ ಳ್ಳಾ ರಿ.

ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಶ್ರೀ ತೆಂಗಿನಕಾಯಿ ಶಾಂತಪ್ಪನವರು ಹೀಗೆ ತಿಳಿಸುತ್ತಾರೆ.

"ಸಂಘದ ಸಾಧಾರಣ ಸಭೆಯು 29-6-47 ನೆಯ ತಾ. ಮಧ್ಯಾನ್ಹಾತ್ಪರ 3 ಘಂಟೆಗೆ ಹೀರದ ಸೂಗಮ್ಮನವರ ಚೌಕಿಯಲ್ಲಿ ಸಮಾವೇಶವಾಗುವುದು. ಪರಿಶೋಧಿತವಾದ ಲೆಕ್ಕ ಬಡ್ಜೆಟ್ ಸ್ವೀಕೃತವಾಗಿ ವ್ಯವಸ್ಥಾಪಕ ಸಮಿತಿ ಚುನಾವಣೆ ನಡೆಯಲಿದೆ ಎಲ್ಲಾ ಸದಸ್ಯರೂ ಆಗಮಿಸಲು ಕೋರಿಕೆ. ಈವರ್ಷ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ವೇತನ ಭೋಜನ ಸಿಗಲಾರದು"

ಜಾತೀಯ ದಂಗೆ.

ಲಾಹೋರ:- 16 ನೆಯ ದಿನ ಬಾಂಬು ಒಗೆದದ್ದರ ಪರಿಣಾಮವಾಗಿ ಕಗಲಿದವನೊಬ್ಬನು ತಕ್ಷಣವೇ ಮಡಿದನು.

ಮುಲ್ತಾನ:- ಇಲ್ಲಿ ಬಾಂಬ ಸ್ಫೋಟವಾಯಿತು. ಯಾರಿಗೂ ಹಾನಿ ಸಂಭವಿಸಿಲ್ಲ.

ಶ್ರೀನಗರ:- ಇಲ್ಲಿಂದ 40 ಮೈಲು ದೂರದ ಹಳ್ಳಿಯೊಂದರಲ್ಲಿ ಜಾತೀಯ ದಂಗೆಯಾಗಿ ಒಬ್ಬನು ಮರಣಹೊಂದಿರುವನು. ಅನೇಕರನ್ನು ಹಿಡಿಯಲಾಗಿದೆ

ಮದ್ರಾಸ ಸರ್ಕಾರದ ಖಂಡನೆ
(ಹರಿಜನ ಪತ್ರಿಕೆಯಿಂದ)

ನಿಷ್ಪ್ರಯೋಜಕ ಕಾರ್ಯಕ್ರಮವಿಲ್ಲದೆ ಬರಿದೆ ಭಾರ್ಮಿಕ ಪ್ರತಿಜ್ಞೆಗಳನ್ನು ಮಾಡುವುದರಿಂದಾಗುವ ಅಪಾಯವನ್ನು ಯೇಸುಕ್ರಿಸ್ತನು ಒಂದು ಕತೆಯಲ್ಲಿ ಹೇಳಿದ್ದಾನೆ. ಮನುಷ್ಯನ ಅಶುದ್ಧ ಭಾವವು ದೇಹದಿಂದ ಹೊರ ಹೊರಟು ಹೋದಾಗ, ಶುದ್ಧ ಭಾವವು ಅಸ್ಥಳವನ್ನು ಬಂದು ಆಕ್ರಮಿಸದಿರುವಾಗ, ಹೊರ ಹೋಗಿದ್ದ ಅಶುದ್ಧ ಭಾವವು ತನಗಿಂತ ಅಶುದ್ಧವಾದ ಏಳು ಬೇರೆಯ ಭಾವಗಳನ್ನು ಕರೆದುಕೊಂಡು ಪುನಃ ದೇಹವನ್ನು ಪ್ರವೇಶಿಸುತ್ತದೆ, ಆಗ ಎಷ್ಟೇ ಸದುದ್ದೇಶವುಳ್ಳ ಮನುಷ್ಯನಾದರೂ ಮೊದಲಿಗಿಂತ ಹೆಚ್ಚು ಕೆಟ್ಟ ಸ್ಥಿತಿಗೆ ಇಳಿಯುತ್ತಾನೆ.

ಮದ್ರಾಸ ಸರಕಾರವು ಮಾಡುತ್ತಿರುವ ಕೃತ್ಯಗಳಿಂದ ಮೇಲಿನ ಮಾತಿನ ಸತ್ಯತೆಯು ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿದೆ ಅದು ಸಲಹೆಗಾರ ಆಡಳಿತವನ್ನು ಕೊನೆಗೊಳಿಸಿತು. ಪ್ರಕಾಶಂರವರ ಮಂತ್ರಿತ್ವದಲ್ಲಿ ಒಳ್ಳೆಯ ನಿರ್ಧಾರಗಳನ್ನು ಮಾಡಿತು, ಮತ್ತು ಈಗ ಪುನಃ ನಿದ್ರಾಸಮಾಧಿಸ್ಥವಾದಂತೆ ತೋರುತ್ತದೆ

ಸಿರ್ಕಾರ್ ಗ್ರಾಮೋದ್ಯೋಗದ ಅಧಿಕಾರಿಗಳಿಗೆ ಉಚ್ಚಾಟನೆಯ ಹುಕುಂ ಕೊಟ್ಟಸುದ್ದಿ ಬಂದಿದೆ. ಶ್ರೀ ಆರ್ ವಿನಾಯಕ ಪಿಳ್ಳೈಯವರಂತಹ ಗಾಂಧೀ ತತ್ವದ ಆರ್ಥಿಕ ಕ್ರಮದಲ್ಲಿ ಶ್ರದ್ಧೆ ಉತ್ಸಾಹಗಳಿಟ್ಟು ಸರಕಾರೀ ಉದ್ಯೋಗದ ಬಾಗಿಲನ್ನು ಹೊಕ್ಕವರಿಗೆ ಬಡಿದೆಬ್ಬಿಸಿದಂತಾಗಿದೆ ಇವರು ರಚನಾತ್ಮಕ ಪ್ರವೀಣರು ಮತ್ತು ಹಿಂದೆ ಒಳ್ಳೆಯ ಕೆಲಸ ಮಾಡಿ ಹೆಸರು ಗಳಿಸಿದವರು. ಮಂತ್ರಿಮಂಡಲದವರು ಅನುಸರಿಸುತ್ತಿರುವ ಧೋರಣೆಗಳ ಬಗ್ಗೆ ನಮ್ಮ ಆಕ್ಷೇಪವಿಲ್ಲ ಅವುಗಳ ನಿಷ್ಪತ್ತಿಯು ಆಯಾ ಮತದಾರ ಕ್ಷೇತ್ರದವರಿಗೆ ಸೇರಿದ್ದು. ಮಂತ್ರಿಗಳು ಜನೇಚ್ಛೆಗೆ ವಿರುದ್ಧವಾಗಿ ನಡೆದುಕೊಂಡರೆ ಅವರನ್ನು ಪದಚ್ಯುತ ಮಾಡುವುದಕ್ಕಾಗಲಿ, ಕಡೆಯ ಪಕ್ಷ ತಮ್ಮವರಲ್ಲವೆಂದು ತಿರಸ್ಕರಿಸುವುದಕ್ಕಾಗಲಿ ಬೇಕಾದ ಕಾರ್ಯಕ್ರಮ ಕೈಗೊಳ್ಳುವುದು ಜನರ ಪಾಲಿನ ಕರ್ತವ್ಯ. ಮಂತ್ರಿ ಮಂಡಲವು ನೇರವಾಗಿ ನಮ್ಮ ಧ್ಯೇಯವಿಂಥದು, ನಾವು ಇಂಥ ಧ್ಯೇಯವನ್ನು ಅನುಸರಿಸುತ್ತಿದ್ದೇವೆ ಎಂದು ನಿರ್ಧರಿಸಿ ಹೇಳುವದಷ್ಟೇ ನಮಗೆ ಬೇಕಾದದ್ದು. ಬಟ್ಟೆಯ ಧೋರಣೆ ಬದಲಾಯಿಸಿದ್ದು ಮತ್ತು ಮೇಲಿನ ಅಧಿಕಾರಿಗಳನ್ನು ನಿವೃತ್ತಗೊಳಿಸಿದ್ದು ಗಾಳಿಯೆತ್ತ ಬೀಸುತ್ತಿದೆಯೆಂಬುದನ್ನು ಸೂಚಿಸುತ್ತವೆ. ಮತ್ತು ನಮ್ಮನ್ನು ಹೆದರಿಸುವುದೆಂದರೆ ಮನುಷ್ಯನ ಮೊದಲಸ್ಥಿತಿಗಿಂತ ಕಡೆಯಸ್ಥಿತಿ, ಇನ್ನೂ ಹೆಚ್ಚು ಕೆಟ್ಟದ್ದಾದೀತು ಎಂಬುದೇ.

ಜೆ. ಸಿ. ಕುಮಾರಪ್ಪ

ಹಿಂದುಸ್ತಾನದ ವಿಭಜನೆಗೆ ಅವಕಾಶ ಕೊಟ್ಟಿದ್ದಕ್ಕೆ ನಮ್ಮ ಮುಂದಾಳುಗಳನ್ನು ನಾವು ಬೇಕಷ್ಟು ಶಪಿಸಬಹುದು. ಆದರೆ ಸಾಮ್ರಾಜ್ಯವಾದಿಗಳು ಕಾಲು ಕೀಳುವಾಗ ಎಲ್ಲೆಡೆಗಳಲ್ಲಿಯೂ ಇದೇ ಪಾಡು ಎಂದು ತೋರಿಸಲು ಆಧಾರಗಳು ದೊರೆಯುತ್ತವೆ. ಆಯರ್ಲಂಡಿನ ಸ್ವಾತಂತ್ರ್ಯ ಚಳವಳಿಯನ್ನು ಮುರಿಯಲಾರದೆ ಕಳೆದ ಯುದ್ಧಾನಂತರ ಅಲ್ಲಿಂದ ಹಿಂದೆಗೆಯುವಾಗ ಅಂಥ ಸಣ್ಣ ದ್ವೀಪದಲ್ಲಿ ಅಲಸ್ಟರ ಪ್ರಾಂತವನ್ನು ಒಂದು "ಪಾಕಿಸ್ತಾನ" ಮಾಡಿ ಬ್ರಿಟಿಶರು ಕಾಲ್ಕಿತ್ತರು. ಇಜಿಪ್ತಿಗೆ ಸೇರಿದ ಸುದಾನ ಭಾಗದ ವಿಭಜನ ಚಳವಳಿಗೆ ಉತ್ತೇಜನ ಕೊಟ್ಟು ಅದನ್ನು ಇಜಿಪ್ತಿನಿಂದ ಬೇರ್ಪಡಿಸಲು ಬ್ರಿಟಿಶರು ಹಂಚಿಕೆ ನಡೆಸಿದ್ದಾರೆ. ಇಂಡೋ ಚೀನದಲ್ಲಿ ಫ್ರೆಂಚರು "ಕೋಚೀನ" (ಕಪ್ಪು ಭಾಗ)ವನ್ನು ಬೇರ್ಪಡಿಸಲು ಹವಣಿಸಿದ್ದಾರೆ. ಪಾಲಿಸ್ತಾನವನ್ನು ಅರಬ ಯಹೂದ್ಯರಲ್ಲಿ ಹಂಚುವ ಎಷ್ಟುಗಡೆ ನಡೆದಿದೆ. ಡಚ್ಚರು ಇಂಡೊನೇಶಿಯಾದಲ್ಲಿನ ಪ್ರತ್ಯೇಕತಾವಾದಿಗಳಿಗೆ ಬೆಂಬಲ ಕೊಟ್ಟು ಜಾವಾದ ಪಶ್ಚಿಮ ಭಾಗದಲ್ಲೊಂದು "ಸ್ವತಂತ್ರ" ರಾಜ್ಯ ಬೇಕೆಂಬ ಚಳವಳಿ ಹುಟ್ಟಿಸಿದ್ದಾರೆ.

ಬ್ರಹ್ಮಚರ್ಯ (ಮಹಾತ್ಮಗಾಂಧಿ.)

ಕಳೆದ ವಾರ ನಾನು ವಿವರಿಸಿದ ಬ್ರಹ್ಮಚರ್ಯದ ಪಾಲನೆಗಾಗಿ ಯಾವ ರಕ್ಷಾ ದುರ್ಗಗಳನ್ನು ಕಟ್ಟಿಸ ಬೇಕೆಂಬದನ್ನು ನಾವು ಪ್ರಶ್ನಿಸುವಾ. ಉತ್ತರ ಸ್ಪಷ್ಟ ವಿದೆಂದೆನಿಸುತ್ತದೆ. ಬ್ರಹ್ಮಚರ್ಯಕ್ಕೇನು ರಕ್ಷಾ ದುರ್ಗ ಗಳ ಅವಶ್ಯಕತೆಯಿಲ್ಲ. ಹೀಗೆ ಹೇಳುವುದೇನೋ ಸುಲಭ ಮತ್ತು ಮನೋಹರವಾಗಿ ತೋರುತ್ತದೆ ಆದರೆ ಆ ಹೇಳಿಕೆಯಲ್ಲಡಕವಾದ ರಹಸ್ಯವನ್ನು ತಿಳಿ ದುಕೊಳ್ಳುವುದು ಕಠಿನ, ಅ ದ ರ ಂ ತೆ ಆಚರಿಸುವು ದಂತೂ ಅದಕ್ಕಿಂತ ಕಠಿನವಾಗಿದೆ. ನಿಜ ಬ್ರಹ್ಮಚಾ ರಿಗೆ ರಕ್ಷಾ ದುರ್ಗಗಳ ಅವಶ್ಯಕತೆಯಿಲ್ಲೆಂಬುದು ನಿಜ. ಆದರೆ ಆ ಅವಸ್ಥೆಯನ್ನು ಮುಟ್ಟಬೇಕೆಂದು ಬಯಸುವವನಿಗೆ, ಮಾವಿನ ಅಗಿಗೆ ಸುತ್ತಲೂ ಗಟ್ಟಿ ಮುಟ್ಟಾದ ಬೇಲಿ ಅವಶ್ಯವಾಗಿದ್ದಂತೆ ನಿಃಸಂದೇಹ ವಾಗಿ ರಕ್ಷಾ ದುರ್ಗಗಳ ಅವಶ್ಯಕತೆಯಿದೆ. ಮಗು ವೊಂದು ತಾಯಿಯ ತೊಡೆಯ ಮೇಲಿಂದ ತೊಟ್ಟಿಲ ದಲ್ಲಿ ಒರಗುವುದು; ಅಲ್ಲಿಂದ ಒ ತ್ತು ವ ಗಾಡಿಯಲ್ಲಿ ಕೂಡ್ರುವದು, ಯಾರ ಸಹಾಯವೂ ಇಲ್ಲದೆ ನಡೆಯ ಲಿಕ್ಕೆ ಬರುವವರೆಗೆ ಈ ಕ್ರಮ ನಡದೆ ಇರುವುದು. ಅನವಶ್ಯಕವಾಗಿರುವಾಗ ಸಹಾಯವನ್ನಾಶ್ರಯಿಸು ವುದು ನಿ ಶ್ಚಿ ತ ವಾ ಗಿ ಅಪಾಯಕಾರಕವಾಗಿದೆ. ಹನ್ನೊಂದು ವ್ರತಗಳಲ್ಲಿ ಬ್ರಹ್ಮಚರ್ಯವೊಂದಾಗಿದೆಂದು ನಾನು ಕಳೆದ ವಾರಸ್ಪಷ್ಟಪಡಿಸಿದೆ. ಅದರಿಂದ ಉಳಿದ ಹತ್ತು ವ್ರತಗಳೂ ನಿಶ್ಚಯವಾಗಿ ಬ್ರಹ್ಮಚರ್ಯಕ್ಕೆ ಸಹಾಯಕವಾಗಿವೆಂಬುದು ಸಿದ್ಧವಾಗುತ್ತದೆ. ಅವುಗ ಳಲ್ಲಿ ಮತ್ತು ರಕ್ಷಾ ದುರ್ಗಗಳಲ್ಲಿನ ಭೇದವೆಂದರೆ ಮೊದಲನೆಯದು ಶಾಶ್ವತವಾಗಿದ್ದು ಎರಡನೆಯದು ತಾತ್ಪೂರ್ತಿಕವಾಗಿದೆ. ಬ್ರಹ್ಮಚರ್ಯದ ನಿಃಶೇಷ ಭಾಗ ಗಳೇ ಅವು.

ಬ್ರಹ್ಮಚರ್ಯ ಮಾನಸಿಕ ಪರಿಸ್ಥಿತಿ. ಮನುಷ್ಯನ ಬಾಹ್ಯಾಚರಣೆ ಅಂತರಾತ್ಮದ ಲ ಕ್ಷ ಣ ಮತ್ತು ಸಾಕ್ಷೀಭೂತವಾಗಿದೆ ವಿಷಯಸುಖವನ್ನು ತೊರೆದು ಬಿಟ್ಟವನು ಯಾವದೇ ರೂಪದಲ್ಲಿ ಅದಕ್ಕೆಳಸಲಾರನು. ಹೆಣ್ಣುಮಗಳು ಎಷ್ಟೇ ಮೋಹಕಳಾಗಿದ್ದರೂ ವಿಷ ಯೇಚ್ಛಾರಹಿತ ಗಂಡಸಿನ ಮೇಲೆ ಅವಳ ಆ ಸೌಂದ ರ್ಯದಿಂದ ಯಾವ ಪರಿಣಾಮವೂ ಆಗದು. ಹೆಣ್ಣುಮಗ ಳಿಗೂ ಇದೇ ನಿಯಮ ಅನ್ವಯಿಸುವದು. ಆದರೆ ಈ ವಿಷಯೇಚ್ಛೆಯನ್ನು ಜಯಿಸದಿದ್ದ ಯಾವ ಗಂಡುಸಾ ಗಲಿ ಹೆಂಗಸಾಗಲಿ ತನ್ನ ತಂಗಿ ಇಲ್ಲವೆ ಅಣ್ಣ ಅಥವಾ ಮಗಳು ಇಲ್ಲವೆ ಮಗನನ್ನು ಕೂಡ ಕಣ್ಣೆತ್ತಿ ನೋಡಕೂ ಡದು. ಮಿತ್ರರಿಗೆ ಈ ಬಗೆಯ ಸಲಹೆಯನ್ನು ನಾನು ಕೊಟ್ಟದ್ದುಂಟು. ಅ ದ ರಿ ಂ ದ ಅವರ ಕಲ್ಯಾಣವೂ ಆದುದುಂಟು.

ನನ್ನ ಮಟ್ಟಿಗೆ ಹೇಳಬೇಕಾದರೆ ದಕ್ಷಿಣ ಆಫ್ರಿ ಕೆಯಲ್ಲಿ ನಾನಿರುವಾಗ ಹೆಂಗಸನ್ನು ನೋಡಿದ ಕೂಡಲೆ ಯಾವ ಕಾಮುವಾಸನೆ ನನ್ನಲ್ಲಿ ಉಂಟಾಗುತ್ತಿದ್ದಿಕೊ ನಾನು ಹಿಂದುಸ್ತಾನಕ್ಕೆ ಮರಳಿದ ಪ್ರಾರಂಭ ದಿನಗ ಳಲ್ಲಿ ಅದೇ ಕಾಮುವಾಸನೆ ನನ್ನಲ್ಲಿ ಉಂಟಾಗುತ್ತಿ ದ್ದಿತು; ಇದನ್ನು ಹೊಡೆದು ಹಾಕುವದಕ್ಕಾಗಿ ನಾನು ಬಹಳ ಹೋರಾಡಬೇಕಾಯಿತೆಂಬುದನ್ನು ಲಜ್ಜೆ ಯಿಂದ ಒಪ್ಪಬೇಕಾಗುತ್ತದೆ. ಮನುಷ್ಯನಿಗೆ ಒಗ್ಗ ದಂಥ ನಿರರ್ಥಕ ಭೀತಿಗೂ ಇದೇ ಮಾತು ಅನ್ವಯಿ ಸುವದು

ಸ್ವಭಾವತಃ ನಾನು ಅಂಜುಬುರುಕನು. ಕತ್ತಲೆ ಯಲ್ಲಿ ಮಲಗಲು ನಾನು ಅಂಜುತಿದ್ದೆನು. ಕೋಣೆ ಯಲ್ಲಿ ಒಬ್ಬನೇ ಮಲಗುವದೆಂದರೆ ದೊಡ್ಡದೊಂದು ಶೌರ್ಯದ ಕೆಲಸ ಮಾಡಿದಂತಾಗುತಿತ್ತು ನನಗೆ. ಆ ಬಗೆಯ ಅಂಜುಬುರುಕು ತನವನ್ನು ನಾನು ಕಳೆದು ಕೊಂಡಿದ್ದೇನೆಂದು ಅನಿಸುತ್ತೇನೆ. ಆದರೂ ದಾರಿ

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:—** ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:—** ಕರ್ನೂಲು:- ಪತ್ತಿಕೊಂಡ. **ಕಡಪ:—** ರಾಜಂಪೇಟೆ, ಕಡಪ, **ಚಿತ್ತೂರು,—** ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ;— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed. Prices very reasonable Trial Solicited

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ. ನಂ. 15
ಹಳೇ ಮಾರ್ಕೆಟ್. ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕ್ ಬಟ್ಟೆಯ ಸೀರೆ ಜಾಕೆಟ್ ಪೀಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೊದ್ದು. ಪರೀಕ್ಷಿಸಿ ಪುನಗಾಣಿರಿ.

ಸಂಸ್ಥಾನಗಳು ಸ್ವತಂತ್ರವಾಗಲಾರವು

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯು ಸಮಾವೇಶವಾದಾಗ ಸಂಸ್ಥಾನಗಳು ಸ್ವತಂತ್ರವಾಗಲು ಬರುವುದಿಲ್ಲೆಂದೂ, ಅವಕ್ಕೆ ಸಾರ್ವಭೌಮಾಧಿಕಾರವು ಪ್ರಾಪ್ತವಾಗುವುದಿಲ್ಲೆಂದೂ ಅವು ಹಿಂದೀ ಒಕ್ಕೂಟವನ್ನು ಸೇರಬೇಕೆಂದೂ ತೀರ್ಮಾನವಾಗಿದೆ ಹೈದರಾಬಾದ್, ತಿರುವಾಂಕೂರು ಸಂಸ್ಥಾನಗಳು ಸ್ವತಂತ್ರವಾಗಬೇಕೆಂಬ ಇಚ್ಛೆಯನ್ನು ನೈಜಾಮರೂ, ದಿವಾನ ರಾಮಸ್ವಾಮಿ ಅಯ್ಯರರೂ ವ್ಯಕ್ತಪಡಿಸಿರುವರು. ಇವನ್ನು ಪ್ರತಿಭಟಿಸಿ ಡಾ. ಅಂಬೇದ್ಕರರೂ ಸಹ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಅವುಗಳ ಸ್ವಾತಂತ್ರ್ಯವು 5 ವರ್ಷಕೂಡ ಉಳಿಯುವ ಸಂಭವವಿಲ್ಲೆಂದು ಸಾರಿದ್ದಾರೆ.

ಆದರೆ ಜಿನ್ನಾರವರು ಸಂಸ್ಥಾನಗಳು ಸ್ವತಂತ್ರವಾಗುಳಿಯಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿರುವರು

ನವಭಾರತಕ್ಕೆ ಚಂದಾದಾರರಾಗಿರಿ

ಸರ್ಕಾರೀ ಪ್ರಕಟನೆ

ಕೆಲವು ವಿದ್ಯಾಸಂಸ್ಥೆಗಳಲ್ಲಿ ಹರಿಜನ ವಿದ್ಯಾರ್ಥಿಗಳನ್ನು ಅಸಭ್ಯ ರೀತಿಯಲ್ಲಿ ನಡೆಸುವುದು, ವಿದ್ಯಾಸಂಸ್ಥೆಗಳಿಗೆ ಸೇರಿದ ವಸತಿ ಗೃಹಗಳಿಗೆ 'ಪ್ರವೇಶಕೊಡದಿರುವುದು, ಪ್ರವೇಶ ಕೊಟ್ಟರೂ ಇತರ ಜಾತಿಯವರನ್ನು ನಡೆಸಿದಂತೆ ನಡೆಸದಿರುವುದು, ಇತ್ಯಾದಿ ವರ್ತನೆಗಳು ಅನ್ಯಾಯವಾಮುವುಗಳು. ಇಂತಹ ಭೇದದ ವರ್ತನೆಗಳು ಸರಕಾರಕ್ಕೆ ತಿಳಿದು ಬಂದರೆ ಮತ್ತು ಎಚ್ಚರಿಕೆಗಳು ನಿಷ್ಪ್ರಯೋಜನವಾದರೆ ಅಪರಾಧಿಗಳಾದ ಅಧ್ಯಾಪಕರನ್ನು ಕಠಿಣ ರೀತಿಯಲ್ಲಿ ಶಿಕ್ಷಿಸಲಾಗುವುದಲ್ಲದೆ, ಸಂಸ್ಥೆಗಳಿಗೆ ಕೊಡುವ ಗ್ರಾಂಟ್‌ಗಳನ್ನು ತುಂಬ ಕಡಿಮೆ ಮಾಡಲಾಗುವುದು.

ಕ್ಷಯ ರೋಗದ ಆಸ್ಪತ್ರೆ

ಬಳ್ಳಾರಿಯಲ್ಲಿ ಕ್ಷಯರೋಗದ ಕೈದಿಗಳಿಗೋಸ್ಕರವಾಗಿರುವ ಆಸ್ಪತ್ರೆಯನ್ನು ಸಾರ್ವಜನಿಕರಿಲ್ಲರ ಉಪಯೋಗಕ್ಕೋಸ್ಕರ ಸಹ ಬಿಡಲಾಗಿದೆ. ಈ ಆಸ್ಪತ್ರೆಯನ್ನು ವೈದ್ಯ ಖಾತೆಗೆ ವರ್ಗಾಯಿಸಲಾಗಿದೆಯಲ್ಲದೆ, ಈಗ ಇರುವ 175 ಹಾಸಿಗೆಗಳ ಸಂಖ್ಯೆಯನ್ನು 200 ಕ್ಕೆ ಏರಿಸಲಾಗಿದೆ.

ಕೊಪ್ಪಳ.

ಈ ಭಾಗದಲ್ಲಿ ಸರಹದ್ದಿನ ಭದ್ರತೆಗಾಗಿಡಲ್ಪಟ್ಟ ಅರಬ್ಬೀ ಸೈನಿಕರು ಊರಿನ ಅಂಗಡಿಗಳನ್ನೂ, ಆಸ್ತಿಗಳನ್ನೂ ಲೂಟಿ ಮಾಡಿರುವರೆಂದೂ ಧಾರ್ವಾಡದಿಂದ ಪೋಲೀಸರ ಸಹಾಯವು ಹೋಗಿರುವದೆಂದೂ ಪ್ರಕಟವಾಗಿದೆ.

ಬದಲಿ ಹಾಳು

ಗ್ರಾ. ಏ. ಸಂಘದವತಿಯಿಂದ ಶ್ರೀ ವಿದ್ಯಾರಣ್ಯರ ಪುಣ್ಯತಿಥಿಯು ಆಚರಿಸಲಾಯಿತು. ಶ್ರೀರಂಗನ ಗೌಡರಿಂದ ಧ್ವಜಾರೋಹಣವಾಗಿ ಶ್ರೀ ಮಾಹುಲೀಕರ ಇವರಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ರಂಗನಗೌಡು ದತ್ತಾತ್ರೇಯಗೌಡ ವಗೈರೆ ಮಹನೀಯರು ಭಾಷಣ ಮಾಡಿದರು.

ದೇವಾಲಯ ಪ್ರವೇಶ

1947 ನೇ ಇಸವಿ ಮದ್ರಾಸ್ ದೇವಾಲಯ ಪ್ರವೇಶಾಧಿಕಾರ ಅಕ್ಟ (ಸೆಕ್ಷನುಗಳು 2 ರಿಂದ 11 ರವರಿಗೆ), 2-6-47 ರದಿನ ಈ ಪ್ರಾಂತದಲ್ಲಿ ಜಾರಿಗೆ ಬಂದಿದೆ. ಈ ಕುರಿತ ಇಸ್ತಿಹಾರೊಂದು ಈಗಾಗಲೇ 28-5-47 ರ ಫೋರ್ಟ್ ಸೈಂಟ್ ಜಾರ್ಜ್ ಗೆಜೇಟಿನಲ್ಲಿ ಪ್ರಕಟವಾಗಿದೆ. ಈ ಅಕ್ಟಿನ ನಿಯಮುಗಳ ಪ್ರಕಾರ, ಬಹಿಷ್ಕರಿಸಲ್ಪಟ್ಟ ವರ್ಗದವರುದೇವಾಲಯ ಪ್ರವೇಶಿಸುವ ಹಾಗೂ ಪೂರ್ಣಹಕ್ಕನ್ನು ಕೊಟ್ಟಿದೆ. ಅದಕ್ಕೆ ಯಾವುದೇ ಅಧಿಕಾರಿಯ ಒಪ್ಪಿಗೆ ಅವಶ್ಯವಿಲ್ಲ ಈ ಅಕ್ಟ ಪ್ರಕಾರ ನಿಯಮಗಳನ್ನು ತಯಾರಿಸಲು ಸರಕಾರಕ್ಕೆ ಸಲಹೆ ಕೊಡುವ ಬಗ್ಗೆ ಒಂದು ಸಮಿತಿಯು ಈಗಾಗಲೇ ನೇಮಿಸಲ್ಪಟ್ಟಿದೆ.

1947 ನೇ ಇಸವಿ ಜೂನ್ 2 ನೇ ತಾರೀಕಿನಿಂದ, ಸಾಮಾನ್ಯ ಹಿಂದುಗಳಿಗಿರುವಂತೆ ಹರಿಜನರಿಗೆ ಸಹ ಹಿಂದೂ ದೇವಾಲಯಗಳನ್ನು ಪ್ರವೇಶಿಸುವ ಮತ್ತು ಅವುಗಳಲ್ಲಿ ಆರಾಧನೆ ನಡೆಸುವ ಹಕ್ಕು ಇರುವುದು ಈ ಅಕ್ಟ ಈಪ್ರಾಂತದಲ್ಲಿರುವ ಎಲ್ಲಾ ಸಾರ್ವಜನಿಕ ದೇವಾಲಯಗಳಿಗೂ ತಿರುಪತಿ ದೇವಾಲಯಕ್ಕೂ ಅನ್ವಯಿಸುತ್ತದೆ.

ಮುನಿಸಿಪಲ್ ಚುನಾವಣೆ.

1947 ನೇ ಇಸವಿ ಜೂನ್ ಜುಲೈತಿಂಗಳುಗಳಲ್ಲಿ ಪ್ರಾಂತದ ಮುನಿಸಿಪಾಲಿಟಿಗಳಿಗೆ ಚುನಾವಣೆಗಳು ನಡೆಯುವವು. ಅವುಗಳ ಕಾರ್ಯಕ್ರಮವು ಹೀಗಿದೆ:—

ಪ್ರಕಟಣೆ	.... 26 ನೇ ಜೂನು.
ಹೆಸರು ಸೂಚಿಯ ಸ್ವೀಕಾರ 7 ರಿಂದ 9 ನೇ ಜುಲೈ	
ಹೆಸರು ಸೂಚಿಯ ಪರಿಶೋಧನೆ....	10 ನೇ ಜುಲೈ
ಪ್ರಕಟಣೆ (ಅಪ್ಪೀಲುಗಳಿಲ್ಲದಿದ್ದರೆ)	14 ನೇ ಜುಲೈ
ಚುನಾವಣೆ	.... 31 ನೇ ಜುಲೈ
ಓಟುಗಳ ಏಣಿಕೆ...	.... 1 ಆಗಷ್ಟ್

ಯನ್ನು ತಪ್ಪಿ ಕತ್ತಲೆಯ ರಾತ್ರಿಯಲ್ಲಿ ಒಬ್ಬನೇ ಘೋರಾರಣ್ಯದಲ್ಲಿ ಅಲೆದಾಡುವ ಪ್ರಸಂಗ ಬಂದರೆ ಮತ್ತು ಪರಮಾತ್ಮನೇ ನನ್ನ ರಕ್ಷಕನಾಗಿರುವನೆಂಬು ದನ್ನು ನಾನು ಮರೆತುಬಿಟ್ಟರೆ ನನ್ನ ಪರಿಸ್ಥಿತಿ ಏನಾಗು ವುದೆಂಬುದನ್ನು ನಾನರಿಯೆ. ಬಾಲ್ಯದಲ್ಲಿಯ ನನ್ನ ಈ ಅಂಜುಬುರುಕುತನವು ಸಂಪೂರ್ಣವಾಗಿ ಹೋಗಿ ರದಿದ್ದರೆ, ಕಾಮುವಾಸನೆಯನ್ನು ನಿಯಂತ್ರಿಸುವದ ಕ್ಕಿಂತ, ಘೋರಾರಣ್ಯದಲ್ಲಿ ಏಕಾಕಿಯಾಗಿರುವಾಗ ನಿರ್ಭೀತನಾಗಿರುವದು ನಿಶ್ಚಯವಾಗಿ ಹೆಚ್ಚು ಕಠಿನ ವಾಗುತಿದ್ದಿತು.

ಬ್ರಹ್ಮಚಾರಿಯಾಗತಕ್ಕವನು ಪಾಲಿಸತಕ್ಕ ಕೆಲ ವ್ರತ ನಿಯಮಗಳನ್ನು ಹಿಂದುಸ್ತಾನದಲ್ಲಿ ಹಿಂದಿನ ವರು ಹಾಕಿಕೊಟ್ಟದ್ದುಂಟು. ಅವನು ಹೆಂಗಸರ, ಪ್ರಾಣಿಗಳ ಮತ್ತು ಕಂಚುಕಿಗಳ ಮಧ್ಯದಲ್ಲಿರಬಾ ರದು. ಒಬ್ಬಳೆ ಹೆಣ್ಣುಮಗಳಿಗೆ ಇಲ್ಲವೆ ಹೆಣ್ಣುಮ ಕ್ಕಳ ಗುಂಪಿಗೆ ಅವನು ಪಾಠ ಹೇಳಿಕೊಡಬಾರದು, ಹೆಂಗಸು ಕುಳಿತ ಚಾಪೆಯ ಮೇಲೆ ಅವನು ಕೂಡ್ರ ಬಾರದು,

ಹೆಣ್ಣುಮಗಳದೇಹದ ಯಾವದೆ ಅವಯವವನ್ನು ಅವ ನುನೋಡಬಾರದು. ಹಾಲು, ಮೊಸರು, ತುಪ್ಪ ಇಲ್ಲವೆ ನೆಣವಿರ್ದ ಯಾವಪದಾರ್ಥಗಳನ್ನೂ ಸೇವಿಸಬಾರದು, ಎಣ್ಣೆಮಜ್ಜನಮಾಡಿಕೊಳ್ಳಬಾರದು ಎಂದು ಮುಂತಾ ಗಿ ನಿಯಮುಗಳನ್ನು ಹೇಳಲಾಗಿದೆ ದಕ್ಷಿಣ ಆಫ್ರಿಕೆ ಯಲ್ಲಿರುವಾಗ ನಾನು ಇದನ್ನೆಲ್ಲ ಓದಿದೆ ಅಲ್ಲಿ ನನಗೆ ಕೆಲಜನರ ಪರಿಚಯವಾಯಿತು. ಅವರು ಬ್ರಹ್ಮ ಚರ್ಯವನ್ನು ಆಚರಿಸುತಿದ್ದರು. ಆದರೆ ಮೇಲೆ ಉಲ್ಲೇ ಖಿಸಿದ ವ್ರತಗಳನ್ನು ಪಾಲಿಸುವದು ಅವಶ್ಯವೆಂಬುದು ಇವರಿಗೆ ಸ್ವಲ್ಪೂ ಗೊತ್ತಿರಲಿಲ್ಲ. ನಾನು ಆ ನಿಯಮ ಗಳನ್ನು ಪಾಲಿಸುತಿರಲಿಲ್ಲ ಅವನ್ನು ಪಾಲಿಸದಿದ್ದುದ ಕ್ಕಾಗಿ ನಾನೇನೂ ನೀಚತರನಾಗಿರಲಿಲ್ಲ ನಾನು ಹಾಲು, ತುಪ್ಪ ಮತ್ತು ಉಳಿದ ಪ್ರಾಣಿಗಳ ಕೊಬ್ಬು ತಿನ್ನುವದನ್ನು ಬಿಟ್ಟುಗೊಟ್ಟೆನೇನೋ ನಿಜ, ಆದರೆ ಬೇರೆ ಕಾರಣಗಳಿಗಾಗಿ. ನಾನು ಹಿಂದುಸ್ತಾನಕೆ ಬಂದ ಎರಡು ಮೂರು ವರ್ಷಗಳ ನಂತರ ಈ ಪ್ರಯ ತ್ನದಲ್ಲಿ ನಾನು ಆಯಸಶ್ವಿಯಾದೆ. ಆದರೆ ಇಂದು ಹಾಲು ಮತ್ತು ತುಪ್ಪದ ಬದಲು ಯಾವದೆ ಪರಿಣಾ ಮಕಾರಿಯಾದ ಕಾಯಿಪಲ್ಲೆ ನನಗೆ ದೊರೆತದ್ದಾದರೆ ಪ್ರಾಣಿಕೊಬ್ಬುಗಳನ್ನೆಲ್ಲ ನಾನು ಸಂತೋಷದಿಂದ ಬಿಟ್ಟುಗೊಡುವೆ. ಆದರೆ ಆ ಮಾತು ಬೇರೆ. ನಿಜ ವಾದ ಬ್ರಹ್ಮಚಾರಿಯು ತನ್ನ ವೀರ್ಯವನ್ನೆಂದಿಗೂ ಕಳೆದುಕೊಳ್ಳುವುದಿಲ್ಲ. ತದ್ವಿರುದ್ಧವಾಗಿ ಅವನು ದಿನಾಲು ಅದನ್ನು ಹೆಚ್ಚಿಸಿಕೊಳ್ಳಲು ಶಕ್ತನಾಗುವನು. ಅದಕ್ಕಿಂತ ಹೆಚ್ಚಿನ ಮಾತೆಂದರೆ ಅದನ್ನು ಅವನು ಸಂಗ್ರಹಿಸಿಕೊಳ್ಳುವನು ಆದುದರಿಂದ ಜನರು ತಿಳಿದು ಕೊಳ್ಳುವ ರೀತಿಯಲ್ಲಿ ಅವನು ಎಂದಿಗೂ ವೃದ್ಧನಾಗು ವದಿಲ್ಲ, ಅವನ ಬುದ್ಧಿಯೆಂದಿಗೂ ಮಂಕಾಗುವದಿಲ್ಲ. ನಿಜಬ್ರಹ್ಮಚಾರಿಯಾಗಬಯಸುವವನಿಗೆ ಮೇಲೆ ಉಲ್ಲೇಖಿಸಿದ ನಿರ್ಬಂಧಗಳ ಅವಶ್ಯಕತೆಯೂ ಇಲ್ಲೆಂ ದು ನನಗೆನಿಸುತ್ತದೆ. ಬಾಹ್ಯ ನಿರ್ಬಂಧಗಳಿಂದ ಸಂ ಪಾದಿಸತಕ್ಕ ಸದ್ಗುಣ ಬ್ರಹ್ಮಚರ್ಯವಲ್ಲ. ಹೆಣ್ಣು ಮಗಳಕೂಡ ಅವಶ್ಯ ಸಂಬಂಧ ಬೆಳಿಸಿಕೊಳ್ಳುವದನ್ನು ತಪ್ಪಿಸಿಕೊಳ್ಳುವನು. ಬಹ್ಮಚರ್ಯದ ಪೂರ್ಣರಹಸ್ಯ ವನ್ನು ತಿಳಿದುಕೊಂಡಿಲ್ಲೆಂದೆ ಹೇಳಬೇಕಾಗುವದು.

ವ್ರತ ನಿರ್ಬಂಧಗಳು ಸ್ವಲ್ಪೂ ಇಲ್ಲದೆ ಜೀವನ ವನ್ನು ಸಾಗಿಸತಕ್ಕದ್ದೆಂಬದಕ್ಕೆ ನಾನು ಮೇಲೆ ಹೇಳಿ ದುದು ಸ್ವಲ್ಪಾದರೂ ಪ್ರೋತ್ಸಾಹಕರವಾಗುತಿದೆಂದು ವಾಚಕರು ಕ್ಷಣ ಹೋತ್ತುಕೂಡ ಕಲ್ಪಿಸಬಾರದು. ಅಲ್ಲದೆ ಕಪಟಾಚರಣೆಯ ನ್ಯಾಯ ಪ್ರಯತ್ನಕೂ ಅವಕಾಶವಿಲ್ಲ.

ಭೋಗಾಸಕ್ತಿ ಮತ್ತು ಕಪಟಾಚರಣೆ ಪಾಪವು ಯವಾಗಿದ್ದು ಅವನ್ನು ಬಿಟ್ಟುಗೊಡತಕ್ಕದ್ದು.

ನಿಜ ಬ್ರಹ್ಮಚಾರಿಯು ಮಿಥ್ಯಾ ನಿರ್ಬಂಧಗ ಳನ್ನು ತಿರಸ್ಕರಿಸುವನು. ತನ್ನ ಮಿತಿಗನುಸಾರವಾಗಿ

ಅವನು ನಿರ್ಬಂಧಗಳನ್ನು ಹಾಕಿಕೊಳ್ಳಲಿಕ್ಕೆ ಬೇಕು. ಅವು ಅನವಶ್ಯವೆಂದೆನಿಸಿದ ಕೂಡಲೆ ಅವನು ಅದನ್ನು ಮುರಿಯಬಹುದು. ನಿಜವಾದ ಬ್ರಹ್ಮಚರ್ಯವೆಂದರೇ ನೆಂಬುದನ್ನು ಮೊದಲು ತಿಳಿದುಕೊಳ್ಳತಕ್ಕದ್ದು. ಅನಂತರ ಅದರ ಮಹತ್ವವನ್ನು ಅರಿತುಕೊಳ್ಳತಕ್ಕದ್ದು. ಕೊನೆಯದಾಗಿ ಈ ಅಮೂಲ್ಯ ಸದ್ಗುಣವನ್ನಳವಡಿಸಿಕೊಳ್ಳುವುದಕ್ಕಾಗಿ ಪ್ರಯತ್ನಿಸತಕ್ಕದ್ದು. ದೇಶದ ನಿಜವಾದ ಸೇವೆ ಮಾಡಬೇಕಾದರೆ ಈ ವ್ರತವನ್ನು ಪಾಲಿಸುವದವಶ್ಯವೆಂದು ನನ್ನ ಅಭಿಪ್ರಾಯ.

ಬ್ರಿಟಿಶ ಸರಕಾರದ ಸದ್ಯದ ಯೋಜನೆಗಳು ಫಲಕಾರಿಯಾದರೆ ಸ್ವತಂತ್ರ ಹಿಂದುಸ್ತಾನದ ಮೊದಲನೆ ಒಕ್ಕೂಟ ಸರಕಾರಕ್ಕೆ ಪಂಡಿತ ಜವಾಹರಲಾಲರು ಅಧ್ಯಕ್ಷರಾಗಿ ನೇಮಿಸಲ್ಪಡಬಹುದೆಂದು ತಿಳಿಯುತ್ತದೆ. ಪ್ರಾಂತಿಕ ಗವರ್ನರರು ಅಗಸ್ಟ ೧೫ ಕ್ಕೆ ರಾಜೀನಾಮೆ ಕೊಡಬಹುದೆಂದೂ ಅವರ ಸ್ಥಾನದಲ್ಲಿ ಹೊಸ ಗವರ್ನರರನ್ನು ನೇಮಿಸುವ ಅಧಿಕಾರ ಒಕ್ಕೂಟದ ಅಧ್ಯಕ್ಷನದೆಂದೂ ಹೇಳಲಾಗಿದೆ. ಪ್ರಾಂತಗಳ ಗವರ್ನರರೆಂದು ಈಗಿನ ಮುಖ್ಯ ಮಂತ್ರಿಗಳೇ ನೇಮಿಸಲ್ಪಡಬಹುದು. ಮುಂಬಯಿಗೆ ಮುರಾರಜಿ ದೇಸಾಯರೂ ಮದ್ರಾಸಿಗೆ ರಾಜಾಜಿಯವರೂ ಗವರ್ನರರಾಗಬಹುದೆಂದೂ ಸುದ್ದಿಯೆದ್ದಿದೆ.

ಆಸಾಮದ ಸಿಲ್ಹೆಟ ಜಿಲ್ಲೆಯು ಪೂರ್ವಬಂಗಾಳದ ಪಾಕಿಸ್ತಾನಕ್ಕೆ ಸೇರದ ಸ್ವತಂತ್ರವಾಗುಳಿಯಬಹುದೆಂದು ಅಲ್ಲಿಯ ಪ್ರಾಂತೀಯ ಲೀಗ್ ಅಧ್ಯಕ್ಷರು ಅಭಿಪ್ರಾಯಪಟ್ಟಿರುವರು.

ಗಡಿನಾಡ ಗಾಂಧಿಯವರೆಂದು ಹೆಸರು ಪಡೆದ ಖಾನ ಅಬ್ದುಲಗಫರ ಖಾನರಿಗೆ ಪ್ರಾಂತೀಯ ಕಾಂಗ್ರೆಸಸಮಿತಿ, ಶಾಸನಸಭೆಯ ಕಾಂಗ್ರೆಸ್‌ಪಕ್ಷ, ಕೆಂಪಂಗಿಯವರದಳ ಗಡಿನಾಡವಿಷಯದಲ್ಲಿ ಸರ್ವಾಧಿಕಾರವನ್ನು ಒಪ್ಪಿಸಿವೆ.

ಬಳ್ಳಾರಿ.

ಶ್ರೀ ತಾರಾನಾಥ ಆಯುರ್ವೇದ ವಿದ್ಯಾಪೀಠ

15 ನೆಯ ತಾ. ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸಮಿತಿಯ ಸಭೆಯು ಸೇರಿ ಶ್ರೀ ಮಾಚಾನಿ ಸೋಮಪ್ಪನವರು ಅಧ್ಯಕ್ಷರಾಗಿಯೂ, ಡಿ. ವಿ. ಚಾರಿಯವರು ಉಪಾಧ್ಯಕ್ಷರಾಗಿಯೂ, ಟಿ. ಜಿ. ಸತ್ಯನಾರಾಯಣರು ಖಜಾಂಚಿಗಳಾಗಿಯೂ, ಡಾ. ವೆಂಕಟರಮಣ, ಮಾಲೀರವರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟರು. ಜುಲೈ ಮೂರನೆಯ ವಾರದಲ್ಲಿ ವಿದ್ಯಾಪೀಠದ ಆರಂಭವಾಗುವದಿದ್ದು ಇದಕ್ಕಾಗಿ ಮಾನ್ಯನುಂಕ್ರಿಗಳಾದ ಶ್ರೀ ಎ ಬಿ. ಶೆಟ್ಟಿ, ಶೀತಾರಾಮರೆಡ್ಡಿಯವರನ್ನು ಆಮಂತ್ರಿಸಲಾಗಿದೆ

ರಷ್ಯಾ—ಅಮೆರಿಕಾ—ತಿಕ್ಕಾಟ.

ರಷಿಯಾವು ಮಧ್ಯ ತುರ್ಕಿಸ್ಥಾನದಲ್ಲಿ ಪ್ರವೇಶ ಮಾಡಬಯಸಿದರೆ ಅಮೆರಿಕಾವು ಅದರ ವಿರುದ್ಧ ಯುದ್ಧ ಹೂಡಬೇಕಾಗುವುದೆಂದು ಹಿಂದಿನ ಉಪಾಧ್ಯಕ್ಷರಾದ ಹೆನ್ರಿವಾಲೇಸರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಮಧ್ಯ ಮತ್ತು ಪೂರ್ವ ಯೂರೋಪಪದಲ್ಲಿ ಬಾಲ್ಕನ್ ರಾಷ್ಟ್ರಗಳಲ್ಲಿ ಅಮೆರಿಕಾ ಮತ್ತು ರಷ್ಯಾದಸಮವೆ ಜಮರಂಗದಾಟ ನಡೆದಂತಿದೆ. ರಾಜಕೀಯ ಚಟುವಟಿಕೆಗಳು ಜೋರಾಗಿನಡೆದಿವೆ. ರಷ್ಯಾವು ತನಗಡಿನಾಡನು ವಿಸ್ತರಿಸಬಾರದೆಂದು ಒತ್ತಿ ಹೇಳಲಾಗಿದೆ.

ಹೈದ್ರಾಬಾದ ನಿಜಾಮರು ಒಂದು ಫರ್ಮಾನ ಹೊರಡಿಸಿ. ಬ್ರಿಟಿಷರ ಭಾರತವಿಭಜನೆಯಿಂದ ಹೈದ್ರಾಬಾದವು ಸ್ವತಂತ್ರವಾಗುಳಿಯುವುದೆಂದು ಸಾರಿದ್ದಾರೆ. ಹಾಗೆಯೇ ತಿರುವಾಂಕೂರು ದಿವಾನರಾದ ರಾಮಸ್ವಾಮಯ್ಯರವರು ಘೋಷಿಸಿದ್ದಾರೆ ಆದರೆ ಸಂಸ್ಥಾನಗಳಲ್ಲಿ ಸಾರ್ವಭೌಮಾಧಿಕಾರ ಪ್ರಜರಿಗೇ ಸೇರಿದೆಯೆಂದೂ ಪ್ರತ್ಯೇಕ ಸ್ವಾತಂತ್ರ್ಯಬಯಸುವ ನರೇಂದ್ರರು ಜನರ ವೈರಿಗಳೆಂದೂ ಅಖಿಲ ಭಾರತ ಸಂಸ್ಥಾನೀಪ್ರಜಾಪರಿಷತ್ತು ತೀರ್ಮಾನಿಸಿದೆ.

Brief Prospectus of Taranath Ayurveda Vidyapeetha, BELLARY.

This institution is started in memory of late revered Pandit Taranath of Tungabhadra and is situated at Sanganakal about 2 miles away from Bellary which has all the facilities of a town and the calm atmosphere of a village.

This institution is managed by a Governing Body consisting of the following members:—

1. Sri. M. Somappa, (President)
2. Sri. D. Venugopalachari, B.A., B.L., Advocate (Vice President)
3. Sri. T. G. Satyanarayana, Merchant Bellary (Treasurer)
4. Dr S Venkatramana, } Joint Secretaries.
5. Dr. B. K. Marla }
6. Sri H. Linga Reddy, B.A., B L., Advocate Bellary
7. Sri. Tekur Subhrmanyam B.A., B.L., President D. C. C.

ADMISSION.

1. The Vidyapeetha is open to all irrespective of cast or creed.
2. The applicant must be at least 18 years of age.
3. The minimum qualification is S S.L.C. passed or any other equivalent examination. But the principal may admit students who do not possess the above qualification, if they pass the Vidyapeetha entrance examination.
4. The application should be on a specified form accompanied by a Registration fee of Rs 5 only. The forms can be had from the Secretary.
5. The application for admission must reach the Secretary of the Vidyapeetha before **5—7—47.**
6. The boarding and lodging arrangements will as far as possible be made by the Vidyapeetha
7. Students are required to maintain perfect discipline prescribed by the Vidyapeetha.

TRAINING.

This Vidyapeetha is intended to provide such training to the students as will enable them to become competent practitioners of Ayurveda with a good working knowledge of allopathic system also. The course extends to four years at the end of which the students will have to appear for the degree examination of the Vidyapeetha. The

students are required to pass the Bhishak Examination of the A. A. Maha Mandal, Benares, before they appear for the degree examination of our Vidyapeetha. This Vidyapeetha trains the students for Visharada and Ayurveda Acharya Examinations of All-India Ayurveda Maha Mandal, Benares.

COURSE OF STUDY.

The following syllabus is subject to the approved of Board of Indian Medicine Madras.

1. **Classics**: The students will also be coached up in Sanskrit and Hindustani to enable them tc read and understand Ayurvedic Texts.
2. **Principles of Ayurveda.**
3. **Swastha-Vritha and Hygiene.**
4. Shareera and western Anatomy and physiology (half of the portion.)
5. Dravya-Guna with general science (Physics & Chemistry) to enable the students to learn Western Materia Medica.
6. Roga-Vignana-Diagnosis.
7. Practical Training in Dravya-Guna. Identification of Drugs in the Herbarium and Hill-side.
8. Cultural Classes.
   Selection from Bhagavad-Gita-Imitation of Christ-and selections from Kuran-Sharif.

II YEAR.

1. Classics, Sanskrit and Hindi
2. Kaya-Chikitsa with Clinics.
3. Physiology and Anatomy (Complete)
4. Fundamental Principles of Ayurveda.
5. Rasa tantras with Pharmacy training.
6. Agatha Tantra—Toxicology and Western Material Medica.
7. Shalya and Shalakya (Minor Surgery)
8. Cultural classes.

III YEAR.

1. Practical training to attend on in-patients and out-patient including nursing and compounding.
2. Medicine with comparative study of both the systems of medi cine mentioned above.
3. **Diagnosis** with the use of all the modern medical instruments in the light of **Ayurveda.**
4. **Materia Medica Ayurvedic and allopathic**

5. Medical Jurisprudence
6. Chikitsatatva Pradipika
7. Charka, Sushruta and Vagbhata and Madhava-Nidanam
8. Cultural Classes.

IV YEAR.

Completion of all the above subjects including Gynacology, Midwifery and obstetrics. The students are required to treat independently under the supervision of the Doctor-in-charge at least 200 cases in the Vidvapeetha Hospital and be in full charge of 6 beds at least for 3 months.

TERMS AND VACATION.

The Academic year of the College is divided into two terms. The first term begins on the 15th July and ends on the 29th December. The second term begins on 5th of January and ends on the 30th of April.

There are thus two vacations, one short winter vacation and the other long summer vacation. Students who have to undergo practical training during the vacation are required to stay in the Vidyapeetha.

FEES.

A fee of Rs. 120 is charged for every year which can be paid in two instalments of Rs 60 each at the beginning of every term
Gymkhan fees, Library fees and Laboratory fees
will have to be paid at the beginning of every term.

DEPOSITS.

A deposit of Rs 25 must be paid by all the students on admission. Any loss of books in the library or breakage in the Laboratory for which the student is responsible must be made good by him, immediately. The deposit is returned to the students at the time of leaving the institution.

EXAMINATIONS.

The institution holds two examinations one at the end of each term. The examination for the final year students are held usually in the 3rd week of April.

Students can answer the papers in Telugu-Kannada, Hindi, Urdu or in English for Bhishak Examinations of All-India Ayurveda Mahamandal Benares, and for the examinations of our Vidyapeetha

All Communications should be addressed to:

THE SECRETARY,

Taranath Ayurveda Vidyapeetha, BELLARY.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. . RUSANJEE RAO, M VENKOJI RAO
General Merchants, Car Street Bellary.

2. M/S. V. M. GIRI & SONS,
(Pro:- M, S Acharya) Car Street, Bellary

ಶುದ್ಧ ! ಗ್ಯಾರಂಟಿಯಾದ್ದು !! ಸತ್ಯಕಾರಿ !!!

— ಪೈರ ಎಳ್ಳೆಣ್ಣೆ —

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್, ಎಂ. ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ. ಎಂ. ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ತಾರಾನಾಥ ಆಯುರ್ವೇದ ವಿದ್ಯಾಲಯ ಬಳ್ಳಾರಿ.

ಈ ವಿದ್ಯಾಲಯವು 15—7—1947 ಕ್ಕೆ ಪ್ರಾರಂಭವಾಗಲಿದೆ. ಗವರ್ನಮೆಂಟು ರಿಜಿಸ್ಟ್ರೇಷನ್ ಪಡೆಯಲು ಅರ್ಹವಾಗುವಂತೆ (Board of Indian Medicine Madras) ಮದ್ರಾಸ್ ಸರ್ಕಾರದ ನಿಯಮಗಳನ್ನನುಸರಿಸಿ-ಶಿಕ್ಷಣ ಪ್ರಣಾಲಿ, ಪರೀಕ್ಷೆಗಳ ಏರ್ಪಾಟು ಮಾಡಲಾಗಿದೆ. ವಿದ್ಯಾಲಯದ ಮನ್ನಣೆಗೂ (Recognition) ಸರ್ಕಾರದ ಸಹಾಯಕ್ಕೂ ಯತ್ನಗಳು ಸಾಗಿವೆ. ವಿದ್ಯಾಲಯವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲ್ಲಿ-ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವದು. ಬಹುಕಾಲದವರೆಗೆ ಪ್ರೇಮವಿದ್ಯಾಪೀಠದಲ್ಲಿ ಶಿಕ್ಷಕರಾಗಿದ್ದವರೇ ಇಲ್ಲಿಯ ವ್ಯಾಧ್ಯಾಪಕರಾಗಿರುವರು S. S. L. C. ಯಾ ಮೆಟ್ರಿಕ್ ಮುಗಿಸಿದವರಿಗೆ ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷಣ ಹೊಂದಿದವರಿಗೆ ಪ್ರವೇಶಾರ್ಹತೆಯು ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0—1—6 ಸ್ಟಾಂಪ್ ಇಟ್ಟು ಕೆಳಿಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ.
ತಾರಾನಾಥ ಆಯುರ್ವೇದ ವಿದ್ಯಾಲಯ ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... .. ..
....
.....

Printed at Krishna Press Bellary QH No. B 17 FOR (Q.H. NO. B-5.)
Edited & bliPdished by T. B. KESHAVA RAO

ಜೈಹಿಂದ್

Reg. No. M. 4746

ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಸಂಚಿಕೆ ೩೫ ಬಳ್ಳಾರಿ ಜೂನ್ ೩೦ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶ ಟಿ. ಬಿ. ಕೇಶವರಾವ್.

ಪರದೇಶಿ ಮಾಲು ಕೊಳ್ಳುವವರಿಗೆ ಎಚ್ಚರಿಕೆ.

ಫವುಂಟನ್ ಪೆನ್–ಪೆನ್ಸಿಲ್–ಗಡಿಯಾರ–ಕತ್ತಿ–ಕತ್ತರಿ–ಚಾಕು–ಬ್ಲೇಡ್–ವಗೈರೆ ಸಾಮಾನುಗಳ ಬೆಲೆಯು ದಿನದಿನಕ್ಕೆ ಇಳಿಯುತ್ತಾ ಇದೆ. ಒಂದು ಹಡಗಿನ ಸಾಮಾನು ಬಂತೆಂದರೆ ದೇಶದ ಅಂಗಡಿಗಳೆಲ್ಲಾ ತುಂಬುತ್ತವೆ. **"ಆತುರ ಪಡಬೇಡಿರಿ, ನಿಮಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಸ್ವಲ್ಪ ಸಾವಧಾನ ಮಾಡಿರಿ,"** ಎಂದು ಕೇಂದ್ರಸರಕಾರದ ಉದ್ಯೋಗ ಮತ್ತು ಪೌರೈಕೆ ಶಾಖೆಯವರು ಒಂದು ಪ್ರಕಟನೆ ಹೊರಡಿಸಿರುವುದು, ನ್ಯಾಯವೂ, ಉಚಿತವೂ, ಆಗಿರುತ್ತದೆ.

ಏಕೆಂದರೆ 3 ತಿಂಗಳ ಕೆಳಗೆ 5 ರು. ಬೆಲೆಯಿದ್ದ ಫವುಂಟನ್ ಪೆನ್ ಈಗ 2 ರು. ಗೆ ದೊರೆಯುತ್ತದೆ. ಮಾಜಣಿಗೆಯ ಬೆಲೆ 12 ಆಣೆ ಇದ್ದದ್ದು 8 ಆಣೆಗಳಿದೆ. ಹೆಚ್ಚು ಉತ್ಪನ್ನ ಮಾಡುವವರ ಹಣೆಯ ಬರಹವೇ ಇಷ್ಟು ಎಲ್ಲಾ ಮಾರುವ ಸ್ಥಳಗಳಲ್ಲಿ ಸಾಮಾನುಗಳು ತುಂಬಿದ ಮೇಲೆ ಬೇಡಿಕೆಯು ಕಡಿಮೆಯಾದ ಮೇಲೆ ಬೆಲೆಯನ್ನೂ ಕಡಮೆ ಮಾಡಿದರು.

ಈ ಕಾರಣ ಪರದೇಶೀ ಮಾಲನ್ನು ಕೊಳ್ಳುವವರು ಸ್ವಲ್ಪ ಸಾವಧಾನ ಮಾಡಿದರೆ ಬಹುಸುಲಭ ಬೆಲೆಗೆ ದೊರೆಯುತ್ತದೆ. ಬೆಲೆಯಿಪ್ಪೇ ಆಗಲಿ ದೇಶೀಯವನ್ನು ಪ್ರೋತ್ಸಾಹಿಸುವುದೊಳ್ಳಿಯದು. ಏಕೆಂದರೆ ನಮ್ಮ ಹಣ ನಮ್ಮ ಭಾಗದಲ್ಲೇ ಇರುತ್ತದೆ.

ಸಜ್ಜಕ್ಕೆ ಸಂಪುಬೇಡ

ಮದ್ರಾಸ್ ಪ್ರಾಂತದ ಪ್ರಾಥಮಿಕೋಪಾಧ್ಯಾಯರ ಮಂಡಲವು ಸಂಬಂಧಿಸಿದ ಅಧಿಕಾರಿಗಳನ್ನೂ, ಮಂತ್ರಿಗಳನ್ನೂ ಕಂಡು ಸಾಕಷ್ಟು ಸಮಾಧಾನಕರವಾದ ಉತ್ತರಗಳನ್ನು ಪಡೆದು ಪ್ರಾಂತದಲ್ಲಿನ ಉಪಾಧ್ಯಾಯರು ಈ ಹಿಂದೆ ನಿಶ್ಚಯಿಸಿದಂತೆ ಸಂಪು ಹೂಡುವುದು ಸದ್ಯಕ್ಕೆ ಬೇಡವೆಂದು ಹೇಳಿಕೆ ಕೊಟ್ಟಿರುವರು. ದಕ್ಷಿಣಬಾಗದ ಒಂದೆರಡು ಜಿಲ್ಲೆಗಳಲ್ಲಿ ಪ್ರಾಂತದ ಮಂಡಳವನ್ನು ಲಕ್ಷಿಸಿದಂತೆ ಕಾಣಲಿಲ್ಲ.

ಬಿಡುವು.

ಬರುವ ವಾರ 'ನವಭಾರತ' ಕಾರ್ಯಾಲಯಕ್ಕೆ ಬಿಡುವಿರುವ ಕಾರಣ ೧೪-೭-೪೭ ರ ಸಂಚಿಕೆಯಿಂದ ಹೊರಡುವುದು.

In the Court of the District Judge, Bellary

O. P. 39/47

In the matter of the estate of late Gummanur Hanumantha Rao (Giremma)

PUBLIC NOTICE.

The petitioner Gandhavidi Ramaiah of Hindupur, the assignee from G. Tirumala Rao brother's son of late Gummanur Hanumantha Rao f a mortgage debt due to tho estate by S. Subhadramma and her son S. Raghavendra Rao of Bellary has made an application to the above court for the grant of a succession certificate in respect of the debt and the matter stands posted to 10—7—47 for hearing.

Anybody desiring to oppose may do so either in person or by a pleader on the said date before the above court at 10 A. M, failing which the matter will be decided ex-parte.

B. O. of Court

B. K. GURURAJA RAO,

Pleader for Petitioner.

ಘಟನಾಸಮಿತಿ ಅಧ್ಯಕ್ಷರ ರಾಜೀನಾಮೆ

ಹಿಂದೂಸ್ತಾನ ಘಟನಾಸಮಿತಿ ಅಧ್ಯಕ್ಷರಾದ ಡಾಕ್ಟರ್ ರಾಜೇಂದ್ರಪ್ರಸಾದರು ರಾಜೀನಾಮೆ ಕೊಟ್ಟಿರುವರು. ಅವರ ಸ್ಥಳಕ್ಕೆ ಶ್ರೀ ಎಂ. ವಿ. ಮೌಲಂಕರರು ಆರಿಸಲ್ಪಡುವ ಸಂಭವವಿದೆ.

ಲಾಹೋರಿನಲ್ಲಿ ದಂಡಿನಕಾಯ್ದೆಯನ್ನು ಜಾರಿಯಲ್ಲಿ ತರಲು ಉಭಯ ಪಕ್ಷಗಳವರೂ ವೈಸ್ರಾಯರನ್ನು ಬೇಡಿದ್ದಾರೆ.

ಬಳ್ಳಾರಿ ಜಿಲ್ಲಾ ಜಡ್ಜರವರ ಕೋರ್ಟಿನಲ್ಲಿ

(ಒ. ಪಿ. 39/47)

ದಿವಂಗತ ಗುಮ್ಮನೂರು (ಹನುಮಂತರಾವು) ಗಿರೆಮ್ಮ ಇವರ ಆಸ್ತಿ ವ್ಯವಹಾರದ ವಿಷಯವಾಗಿ

—ಸಾರ್ವಜನಿಕ ಪ್ರಕಟನೆ—

ಬಳ್ಳಾರಿ ವಾಸಸ್ಥರಾದ ಎಸ್. ಸುಭದ್ರಮ್ಮ, ಇವರ ಮಗ ರಾಘವೇಂದ್ರರಾವು ಇವರಿಬ್ಬರು ಸೇರಿ ಲೇಟು ಗಿರಿಮ್ಮನವರಿಗೆ ಬರೆದುಕೊಟ್ಟ ತೋರಾಯಿಕ ಪತ್ರದ ಬಾಕಿಯನ್ನು, ಹಿಂದೂಪುರದ ಗಂಧವಿದಿ ರಾಮಯ್ಯನವರು ಕ್ರಮವಾದ ಪ್ರತಿಫಲಕ್ಕೆ, ಲೇಟು ಗುಮ್ಮನೂರು ಹನುಮಂತರಾಯರ ತಮ್ಮನ ಮಗ ಜಿ. ತಿರುಮಲರಾಯರಿಂದ ಟ್ರಾನ್ಸ್ಫರು ಹೊಂದಿ, ಸದರಿ ಬಾಕಿ ವಸೂಲಿಗಾಗಿ ಮೇಲ್ಕಂಡ ಕೋರ್ಟಿನಲ್ಲಿ ವಾರಸತ್ವದ ಸರ್ಟಿಫಿಕೇಟು ಹೊಂದುವಬಗ್ಗೆ ಅರ್ಜಿ ದಾಖಲು ಮಾಡಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯು 10-7-47 ಕ್ಕೆ ನಾಯ್ದಿ ಇದೆ.

ಇದನ್ನು ವಿರೋಧಿಸುವ ಉದ್ದೇಶವುಳ್ಳವರ್ಯಾರಾದರೂ ಇದ್ದಲ್ಲಿ, ಅವರು ತಾವು ಸ್ವತಃ ಆಗಲಿ ಅಥವಾ ವಕೀಲರ ಮೂಲಕವಾಗಲಿ ಸದರಿ 10-7-47 ನೆಯ ದಿನ ಉಪಯ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಬೇಕು ಇಲ್ಲವಾದರೆ ಇವರ ವಿಷಯವಾದ ತೀರ್ಮಾನವು ಅವರ ಪರೋಕ್ಷದಲ್ಲಿ ಆಗಲಿರುವದೆಂದು ಈ ಮೂಲಕ ತಿಳಿಸೋಣವಾಗಿದೆ.

(ಕೋರ್ಟಿನವರ ಉತ್ತರದ ಪ್ರಕಾರಕ್ಕೆ)

ಬಿ. ಕೆ. ಗುರುರಾಜರಾವು

ಅರ್ಜಿದಾರರ ವಕೀಲರು

ರಷ್ಯಾದಲ್ಲಿ ಭಾರತ ರಾಯಭಾರಿ:—

ಪಂಡಿತ ಜವಹರಲಾಲರ ತಂಗಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ನಿಯುಕ್ತರಾಗಿದ್ದಾರೆ. ಇದಕ್ಕೆ ಸಾರ್ವಭೌಮರ ಒಪ್ಪಿಗೆ ದೊರೆತಿದೆ.

10th year of Publication
Monday, 30th June 1947

ಮೋಟಾರ ಸಾರಿಗೆಯ ದುರವಸ್ಥೆ

ಜನತೆಯ ಆರ್ಥಿಕಮಟ್ಟವು ಏರಿದೆ. ಕೂಲಿಕಾರರಿಂದ ಮೊದಲು ಎಲ್ಲರ ಕೈಯಲ್ಲಿ ಹಣವಿದೆ. ಹೋಟೆಲು ಸಿನಿಮಾ ಮುಂದಿರಗಳು ತುಂಬಿರುವಂತೆ ಒಂದೂರಿಂದ ಮತ್ತೊಂದೂರಿಗೆ ಹೋಗುವ ಪ್ರಯಾಣೀಕರ ಸಂಖ್ಯೆಯೂ ಅಧಿಕವಾಗುತ್ತಾ ನಡೆದಿದೆ. ಇರುವ ಬಸ್‌ಗಳು ಸಾಲುವುದಿಲ್ಲ. ಅದರಲ್ಲೂ ಹತ್ತರ ಪ್ರಯಾಣಮಾಡುವ, ಯಾ- ಮಧ್ಯದಾರಿಯಿಂದ ಇನ್ನೊಂದೂರಿಗೆ ಹೋಗಲಿರುವವರ ಅವಸ್ಥೆಯಂತೂ ಹೇಳತೀರದು. ಸರ್ಕಾರದವರು ಹತ್ತರಪ್ರಯಾಣಗಳಿಗಾಗಿ (Short distance buses) ಬಸ್‌ಗಳನ್ನೇರ್ಪಡಿಸುವರೆಂದು ಹೇಳಿದ್ದರು ಇಲ್ಲಿಯವರೆವಿಗೆ ಇಂಥಾ ಬಸ್‌ಗಳಿಗೆ ಪರ್ಮಿಟ್ ಕೊಟ್ಟಿಲ್ಲ. ಅಲ್ಲದೆ ಇತರಪರ್ಮಿಟ್‌ಗಳಲ್ಲಿ ಸ್ಥಳದೊರೆಯುವುದು ಕಷ್ಟವಾಗಿದೆ. ಬಳ್ಳಾರಿ ಹೊಸಪೇಟೆ ಅದವಾನಿಗಳಂಥ ನಗರಗಳಲ್ಲಿ ಕಲಸಕ್ಕಾಗಿಬಂದ ಹಳ್ಳಿಗರು ಬಸ್‌ಗಳಲ್ಲಿ ಸ್ಥಳಸಿಗದೆ ಉಪವಾಸ ಕಾಲ ಕಳೆಯಬೇಕಾಗಿದೆ.

ಅಮೆರಿಕಾದಿಂದ ಬಸ್‌ಗಳು ಬೇಕಾದಷ್ಟು ಬಂದು ಕೊಳೆಯುತ್ತಲಿವೆ. ಕಡಪಾದಲ್ಲಿರುವ, ಮದ್ರಾಸಿನಲ್ಲಿರುವ ಸಾರಿಗೆ ಅಧಿಕಾರಿಗಳು ಹೊಸಬಸ್‌ಗಳಿಗೆ 'ಪರ್ಮಿಟ್' ಕೊಡದಿರುವ ಕಾರಣ ಅರ್ಥವಾಗುವಂತಿಲ್ಲ, ಪೆಟ್ರೋಲ್‌ಗೆ ಕೊರತೆಯಿದ್ದರೆ, ಗ್ಯಾಸ್ ಬಸ್‌ಗಳಿಗೆ ಅಪ್ಪಣೆ ಯೇಕೆ ಕೊಡಬಾರದು? ಸರ್ಕಾರದವರು ತಕ್ಕ ಸಮಾಧಾನ ಕೊಡಬೇಕು.

ಈ ಆಸ್ಪತ್ರೆಯನ್ನು ದೂರಕ್ಕೆ ಕಳುಹಿಸಬೇಡಿರಿ

ಬ್ರೂಸ್‌ಪೇಟೆ, ಗಾಂಧಿನಗರ, ಸತ್ಯನಾರಾಯಣ ಪೇಟೆಗಳಿಗೆ ಸಮೀಪವಿರುವ ಡಿಸ್ಪೆನ್ಸರಿ ಹೆಡ್ ಕ್ವಾರ್ಟರ್ ಆಸ್ಪತ್ರೆಯನ್ನು ಇವುಗಳಿಗೆ ಸುಮಾರು ೩ ಮೈಲಿ ದೂರವಿರುವ ವೆಲ್ಲೆಸ್ಲಿ ಸ್ಯಾನಿಟೋರಿಯಂ ಕಟ್ಟಡಕ್ಕೆ ರವಾನಿಸಬೇಕೆಂಬ ಸಲಹೆಯು ಬಂದಿದೆ ಈ ಸಲಹೆಯನ್ನು ಸಾರ್ವಜನಿಕರು ವಿರೋಧಿಸುವದರಲ್ಲಿ ಯಾವ ಸಂಶಯವೂ ಇಲ್ಲ ಏತಕ್ಕೆಂದರೆ ಈ ಭಾಗದಲ್ಲಿ ವಾಸಿಸುವ ಸುಮಾರು ೫೦ ಸಾವಿರ ಜನರಿಗೆ ಇದು ಮಧ್ಯವರ್ತಿ ಸ್ಥಳದಲ್ಲಿದೆ ಹಳ್ಳಿಗಳಿಂದ ಬರುವವರಿಗೂ ಇದು ಅನುಕೂಲವಾಗಿದೆ. ವಾಹನದ ಅಸೌಕರ್ಯ, ರೋಗಿಗಳ ನಿಶ್ಶಕ್ತತೆ, ಬಡತನ ಇವುಗಳನ್ನೆಲ್ಲಾ ಗಮನಿಸಿ ಈ ಹುಚ್ಚು ಸಲಹೆಯನ್ನು ಯಾರೂ ಒಪ್ಪದಿರಲು ನಮ್ಮ ಸೂಚನೆ.

ಜಯಶ್ರೀ ನಾಟಕಮಂಡಳಿ ಅದವಾನಿ ಸುಭದ್ರಾಪರಿಣಯ

(ಹರಿಜನೋದ್ಧಾರ ಕಾರ್ಯಕ್ಕೆ ಸಹಾಯ)

೨೫ ನೆಯ ಬನಾಂಕ ಅದವಾನಿಯ ಹರಿಜನರು ಬಳ್ಳಾರಿ ಜಿಲ್ಲಾ ಹರಿಜನಸೇವಕ ಸಂಘದ ಅಧ್ಯಕ್ಷರಾದ ಶ್ರೀ ಟಿ. ಜಿ. ಸತ್ಯನಾರಾಯಣರ ಅಧ್ಯಕ್ಷತೆಯಲ್ಲಿ ಸ್ಪಾರ್‌ಸಿನೆಮಾ ಭವನದಲ್ಲಿ **'ಸುಭದ್ರಾಪರಿಣಯ'**ವೆಂಬ ನಾಟಕವನ್ನು ಎಲ್ಲಾವಾದ್ಯ ವಿಶೇಷಗಳಿಂದಭಿನಯಿಸಿದರು ಇದಕ್ಕೆ ಬಳ್ಳಾರಿ ನಾಗರೀಕರು ಚನ್ನಾಗಿ ಪ್ರೋತ್ಸಾಹ ಕೊಟ್ಟರು ಜಿಲ್ಲೆಯ ಕಾರ್ಯಕ್ಕಾಗಿ ಬಳ್ಳಾರಿ ನಾಗರೀಕರಿಂದ ಸುಮಾರು ೧೦೦೦ ರೂ. ವರೆಗೂ ಸಂಗ್ರಹವಾಯಿತು ಶ್ರೀ ರಾಜಗೋಪಾಲಶೆಟ್ಟರು ಅಧ್ಯಕ್ಷರ ಔದಾರ್ಯ, ಸೇವಾಬ್ಧಿಗಳಿಗಾಗಿ ಕೊಂಡಾಡಿದರು. ಶ್ರೀ ಟಿ. ಜಿ. ಯವರು ನಾಗರೀಕರ ಪ್ರೋತ್ಸಾಹಕ್ಕಾಗಿ ಎಲ್ಲರನ್ನೂ ವಂದಿಸಿದರು.

ತಾಪತ್ರಯ.

[ನೊಂದವನೊಬ್ಬ]

ಹಳ್ಳಿಗಳು ಹಾಳಾಗುತ್ತಲಿವೆ—ಪಟ್ಟಣಗಳು ಬೆಳೆಯುತ್ತಲಿವೆ.

ಇಂದಿನ ಹಳ್ಳಿಗಳಲ್ಲಿ ಸ್ಮಶಾನ ದೃಶ್ಯವು ತಾಂಡವವಾಡುತ್ತಲಿವೆ. ಊರಿನ ಡಿಪೋಕೀಪರ್ ಮತ್ತು ನಾಲ್ಕೈದು ಕುಟುಂಬಗಳನ್ನು ಬಿಟ್ಟರೆ ಇನ್ನುಳಿದವ ನ್ನೆಲ್ಲಾ ನಿರ್ಗತಿಕರಾಗಿ, ಜೀವನದಲ್ಲಿ ನಿರುತ್ಸಾಹವುಳ್ಳ ವರಾಗಿ ಕಾಲ ಕಳೆಯುತ್ತಲಿರುವರು. ಆ ಹಾರಕ್ಕೆ ಕಾಳು ದೊರೆಯುವಂತಿಲ್ಲ ಕಳ್ಳಸೇಟಿಗೆ ಹೋಗೋಣವೆಂದರೆ ಕೈಲಿಕಾಸಿಲ್ಲ. ಹೊಲವಲ್ಲಾಗಲಿ, ಮನೆಯಲ್ಲಾಗಲಿ ಉದ್ಯೋಗವಿಲ್ಲ ಕೆಲ ಸಂದರ್ಭಗಳಲ್ಲಿ ಹಣ ಕೊಟ್ಟರೂ ಸಾಮಾನು ಸಿಗುವುದಿಲ್ಲ. ಹೊಟ್ಟೆನೋವಿನಿಂದ ಸಾಯುತ್ತಿರುವನವರಿಗಾಗಲಿ, ಮನೆಯಲ್ಲಿ ಪೆರಿಗೆಯಿದ್ದು, ಬಾಣಂತಿಗೆ ಅಗತ್ಯವಿರುವದೆಂದು ಕೇಳಿಕೊಂಡರಾಗಲಿ, ವಿವಿಧ ರೋಗಗಳಿಂದ ನರಳುತ್ತಿರುವವರಿಗಾಗಲಿ, ರೋಗದಿಂದ ಮುಕ್ತರಾಗಿ ಗಟ್ಟಿ ಆಹಾರವನ್ನು ಜೀರ್ಣಿಸಿಕೊಳ್ಳಲು ಅಶಕ್ತರಿರುವವರಿಗಾಗಲಿ ಡಿಪೋದಲ್ಲಿ ಅಕ್ಕಿಯು ದೊರೆಯುವಂತಿಲ್ಲ.

ಬೇಕಾದವರು, ಬೇಡಾದವರು ಎಂಬ 'ಬ್ಲಾಕ್‌ಲೀಸ್ಟ್' ಡಿಪೋ ಘೋರೆಯ ಹತ್ತಿರವಿರುತ್ತದೆ. ಅವನಿಗೆ 'ಜೀವಕಾರುಣ್ಯ'ವೆಂಬುದೇ ಇಲ್ಲ. ಅವನಿಗೆ ಆರಾಧ್ಯದೇವತೆ 'ಲಕ್ಷ್ಮಿ'. ಈಕೆಯನ್ನು ಒಲಿಸಲು ಮಾರ್ಗಗಳು ಗೊತ್ತು. ಕೆಲಸಂದರ್ಭಗಳಲ್ಲಿ ಆಹಾರ ಧಾನ್ಯ ವೂರ್ಯೆಕೆ ಅಧಿಕಾರಿಗಳು (T. S. O. & F. S O,) ಈ ಡಿಪೋ ಕೀಪರುಗಳಿಗೆ ಹೃತ್ಪೂರ್ವಕ ಸಹಾಯವನ್ನು ಒದಗಿಸುತ್ತಾರೆ. ಪಟ್ಟಣಕ್ಕೆ ಧಾನ್ಯ ಅಕ್ಕಿ ಚಿಮ್ಮಿ ಎನ್ನೆತರಲು ಹೋದ ಡಿಪೋಕೀಪರ್ ಒಂದೊಂದು ಸಲ ದಾರಿಯಲ್ಲೇ ಸಾಮಾನುಗಳನ್ನು ಅದೃಶ್ಯವಾಡಿಕೊಂಡು ಬರುತ್ತಾನೆ. ಕೇಳಿದರೆ ಶೆಂಟ್ರಲ್ ಸ್ಟೋರದಲ್ಲಿ ಸ್ಟಾಕ್ ಇಲ್ಲವೆಂದು ಹೇಳುತ್ತಾನೆ. ಡಿಪೋಕೀಪರ್ ಕಳ್ಳನೋ, ಸ್ಟೋರದವನು ಕಳ್ಳನೋ ಅಥವಾ ಇಬ್ಬರೂ ಕಳ್ಳರೋ ಹೇಗೆ ಹೇಳಬೇಕು?

ಇನ್ನು ಊರಿನ ದಣಿಗಳು. ದಣೀ! ಕಾಳುಕೊಡಪ್ಪ, ಎಂದು ಕೇಳಿದರೆ ಕಲ್ಲನ್ನಾದರೂ ಕರಗಿಸಬಹುದು. ದಣಿಯ ಎದೆಯು ಕರಗುವುದಿಲ್ಲ. ಬ್ಲಾಕ್ ಮಾರ್ಕೆಟ್ ದೇವತೆಯು ಪಣದ ಚೀಲಗಳನ್ನು ಹಿಡಿದು ರುನ್ ರುನ್ ಎಂದು ಝೇಂಕಾರ ಮಾಡುತ್ತಾ, ನಮ್ಮ ದಣಿಯನ್ನು ಸ್ವಪ್ನದಲ್ಲಿಯೂ ಬಿಡುವಂತಿಲ್ಲ ಹೀಗಾಗಿ ಬಡವರಿಗೆ ಕಾಳೆಲ್ಲಿಂದ ಬರಬೇಕು?

ಪ್ರಜಾ ಸರ್ಕಾರ ಸ್ವಲ್ಪ ನೋಡೋಣ. ಪಟ್ಟಣಗಳಲ್ಲಿ ಕಾಳುಕೊಡಬೇಕಾದ ಅನಿವಾರ್ಯ—ಸೀದಾ ಮಾಡಿ (Statutory Rationing) ಹಳ್ಳಿಗಳಲ್ಲಿ ಬ್ಲಾಕ್‌ಲೀಸ್ಟ್ ಪ್ರಕಾರವಾಗಿಯಾದರೂ ವ್ಯವಸ್ಥಿತವಾಗಿ ಕಾಳು ತಲಪುವಂತೆ ಮಾಡದೆ ಇರುತ್ತಾರೆ [Informal Rationing] ಒಂದುವಾರ ಕಾಳು ಕೊಡದೆ ಇದ್ದರೆ ಅಥವಾ ಕಡಮೆ ಕೊಟ್ಟರೆ ಪಟ್ಟಣದವರು ಬೊಬ್ಬೆ ಇಡುತ್ತಾರೆ. ಪಟ್ಟಣದವರಿಗೆ ಬಾಯಿಯುಂಟು, ಹಳ್ಳಿಯವರಿಗೆ ಬಾಯಿ ಇಲ್ಲ. ಪಟ್ಟಣದವರಿಗೆ ಅರ್ಜಿ ಬರೆಯಲು ಬರುತ್ತದೆ. ಮೀಟಿಂಗುಗಳಲ್ಲಿ ಭಾಷಣ ಕೊಡಲು ಬರುತ್ತದೆ. ಪೇಪರುಗಳಲ್ಲಿ ಬಯ್ಯಲು ಬಲ್ಲರು. ಪಟ್ಟಣಗಳಲ್ಲೇ ಕಲೆಕ್ಟರ್ ಇರುತ್ತಾರೆ. ಶೆಂಟ್ರಲ್ ಸ್ಟೋರ್ಸ ಇರುತ್ತದೆ. ಇಲ್ಲನೇ ಅಡರಾಜಾಜಿಯಾದರೂ ಉಂಟು. ಹಳ್ಳಿಗಳಲ್ಲೇನಿದೆ ಬೊಂಬೆ!

ಇಷ್ಟಾಯಿತು ಹೊಟ್ಟೆಗೆ ಅನ್ನ ಬೇಡ, ಮೈಗೆ ಬಟ್ಟೆ ಬೇಡವೆ? ಅದಕ್ಕೂ ಅಷ್ಟೇ! ಮೊದಲು ಪಟ್ಟಣದವರಿಗೆ ಕೊಟ್ಟು ಆಮೇಲೆ ಏನಾದರೂ ಉಳಿದರೆ ಕಳುಹಿಸುತ್ತಾರೆ ಅನೇಕ ಸಲ ಚಿಲ್ಲರೆ ವ್ಯಾಪಾರಿಯು ಬಟ್ಟೆ ತಂದದ್ದೂ ಕೂಡ ಗೊತ್ತಾಗುವುದಿಲ್ಲ. ಸಾಕಷ್ಟು ರೊಕ್ಕ ಕೈಲಿದ್ದರೆ, ಹಳ್ಳಿಯವನು ಹೆಚ್ಚಾಗಿ ಬಟ್ಟೆ ಇರುವ ಪಟ್ಟಣಕ್ಕೆ ಬಂದು 'ಬ್ಲಾಕ್ ಮಾರ್ಕೆಟ್' ಹುಡುಕುತ್ತಾ ಹೋಗಬೇಕು. ಇಲ್ಲವಾದರೆ ಹೊಲಿದ ಬಟ್ಟೆಗಳನ್ನು ಕೊಳ್ಳಬೇಕು. ಈ ರೆಡಿ ಮೇಡ್‌ದವರಿಗೆ ಲೆಕ್ಕವಿಲ್ಲದಷ್ಟು ತುಂಡು ಬಟ್ಟೆ ಬರುತ್ತೆ. ನಮಗೆ ಆ ತುಂಡು ಬಟ್ಟೆಯ ಸೋಸ್ತಿಯೂ ಇಲ್ಲ

(9 ನೆಯ ಪುಟಕ್ಕೆ ಮುಂದುವರಿದಿದೆ)

ಹರಿಜನರ
ಪಂಚಕಲಶದ ಮೆರವಣಿಗೆಗಳು

ಹಾಲಹರ್ವಿಯಲ್ಲಿ (ಆಲೂರುತಾಲೂಕು.)—ಈ ಊರಿನಲ್ಲಿ ಹರಿಜನರು (ಮಾದಿಗರು) ಮದುವೆ ಮೆರವಣಿಗೆಯನ್ನು ತೆಗೆದುಕೊಂಡು ಹೋಗಲೆತ್ನಿಸಿದಾಗ ಹೋಗಬಾರದೆಂದು ಮತ್ತೊಂದುಪಕ್ಷದ ಹರಿಜನರು (ಚಲವಾದಿ—ಬೇಗಾರ) ಮತ್ತು ಊರಿನ ಕೆಲವರು ಅಡ್ಡಿಮಾಡಿದರು. ಇದರಿಂದಶಾಂತಿ ಭಂಗವಾಗುವುದೆಂದು ಆಲೂರಿನ ಸಬ್‌ಮ್ಯಾಜಿಸ್ಟ್ರೇಟರು ೧೪ನೆಯ ಕಲಮು ಜಾರಿಮಾಡಿ ಮೆರವಣಿಗೆಯನ್ನು ಪ್ರತಿಬಂಧಿಸಿದರು. ಅಲ್ಲಿಯ ಹರಿಜನರು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಪೀಲು ಮಾಡಿದರು. ಹರಿಜನರು ಹಿಂದೂಗಳಾದ ಕಾರಣ ಇತರ ಹಿಂದೂಗಳಂತೆ ಅವರಿಗೂ ಕೂಡ ಬೀದಿಗಳಲ್ಲಿ ವಿಧಿವತ್ತಾಗಿ ಹೋಗುವ ಹಕ್ಕುಂಟೆಂದು ತೀರ್ಮಾನಿಸಿ ಮೆರವಣಿಗೆಗೆ ಅಪ್ಪಣೆ ಕೊಟ್ಟು ಪೋಲೀಸ್ ಬಂದೋಬಸ್ತು ಕೊಟ್ಟರು.

೨೨-೬-೪೭ನೆಯ ಭಾನುವಾರ ಜಿಲ್ಲಾಮ್ಯಾಜಿಸ್ಟ್ರೇಟರೂ ಕೂಡ ಅಲ್ಲಿಗೆ ಹೋಗಿದ್ದರು ಮೆರವಣಿಗೆಯು ಬೀದಿಗಳಲ್ಲಿ ಹಾದು ಹೋಗುವಾಗ ಸ್ವಲ್ಪಕಲ್ಲುಗಳ ತೂರಾಟವಾಗಿ ಶಾಂತವಾಯಿತು. ಮೆರವಣಿಗೆಯೇನೋ ಸಾಗಿತು. ಪೋಲೀಸರು ಈ ಸಂದರ್ಭದಲ್ಲಿ ಅರು ಜನರನ್ನು ಬಂಧಿಸಿರುವರು.

ಗುತ್ತಿಗನೂರು (ಬಳ್ಳಾರಿ ತಾಲೂಕು) ಇಲ್ಲಿ ಹರಿಜನರು ಪಂಚಕಲಶದಿಂದ ಮೆರವಣಿಗೆಯಲ್ಲಿ ಹೋಗಲು ಊರಿನವರೂ ಬೇಗಾರಿಗಳೂ ಅಡ್ಡವಿದ್ದಾರೆಂದು ತಿಳಿದುಬಂದಕಾರಣ ಕುರುಗೋಡಿನ ಮರಿಬಸವನಗೌಡರೂ, ಜಿಲ್ಲಾ ಹರಿಜನ ಸೇವಕಸಂಘದ ಕಾರ್ಯದರ್ಶಿಗಳೂ ಊರಿನವರನ್ನೆಲ್ಲಾ ಕರೆಸಿ ಹಿತೋಪದೇಶ ಮಾಡಿ ಎಲ್ಲರೂ ಕಲೆತು ಶಾಂತಿಯಿಂದ ಕಾರ್ಯನಿರ್ವೇರಿಸಲು ವಿನ್ನಯಿಸಿದರು. ಸಂಧಾನಗಳು ವಿಫಲವಾದ ಕಾರಣ ಹರಿಜನರು ತಮ್ಮ ಹಕ್ಕನ್ನು ಚಲಾಯಿಸಲು ೨೩-೬-೪೭ನೆಯ ಸೋಮವಾರವನ್ನು ನಿರ್ಣಯಿಸಿದರು. ಊರಿನಕೆಲ ಮುಖ್ಯಸ್ಥರು ಬಳ್ಳಾರಿಗೆ ಬಂದು ಶ್ರೀ ಪಂಪನಗೌಡ, ಅಡ್ವೊಕೇಟರ ಮುಖಾಂತರ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಇಟ್ಟರು. ಈ ಕಾಲದಲ್ಲಿ ಇಂಥಾ ಅರ್ಜಿಗಳನ್ನಿಟ್ಟು "ತಮ್ಮ ಧರ್ಮಕ್ಕೆ ಕುಂದುಬರುವುದೆಂಬ ಕಾರಣಗಳನ್ನು" ಒಡ್ಡುವುದು ಮೂರ್ಖತನವೆಂದು ಅದನ್ನು ಜಿ. ಮ್ಯಾ. ರು ಹೊಡೆದು ಹಾಕಿದರು.

೨೩ನೆಯ ದಿನಾಂಕ ಸೋಮವಾರ ಮೆರವಣಿಗೆಗಾಗಿ ಬಳ್ಳಾರಿ ಜೂನಿಯರ್ ಸರ್ಟಿಫಾಯ್ಡ್ ಶಾಲೆಯ ಬ್ಯಾಂಡು ಬಂದಿದ್ದಿತು. ಪಂಚಕಲಶವನ್ನು ಧರಿಸಿದ ಪಂಚ (ಐದುಜನ) ಮುತ್ತೈದೆಯರು ಮಾರಿದೇವತೆಯನ್ನೊಳಗೊಂಡು ಸಾವಿರಾರು ಜನರಿಂದ ಕೂಡಿ ಊರಬೀದಿಗಳಲ್ಲಿ ಹೋಗಿ ಅಕ್ಕಸಾಲೆಯವರ ಮನೆ ಹತ್ತಿರವಿರುವ ಕಾಳಮ್ಮ ದೇವತೆಗೆ, ಊರಿನ ಹನುಮಪ್ಪಗೆ, ಊರಿನ ದೇವತೆಗೆ, ಪೂಜೆಗೈದು ಹೊಸಕೇರಿಗೆ ಹೋಗಿ ಬನ್ನಿಗಿಡದ ಪೂಜೆಯನಂತರ ಪುನಃ ಸ್ವಸ್ಥಾನವನ್ನು ಸೇರಿದರು. ಈ ಉತ್ಸವಕ್ಕಾಗಿ ಕುರುಗೋಡು, ಯಲ್ಲಾಪುರ, ಬಾದನಟ್ಟಿ, ಸಿದ್ದಮನಹಳ್ಳಿ, ಕುಡುತಿನಿ ವಗೈರೆ ಅನೇಕಗ್ರಾಮಾದಗಳಿಂದ ಸಾವಿರಾರು ಜನ ಹರಿಜನರು ಬಂದು ಅಮಿತೋತ್ಸಾಹದಿಂದ ಮೆರವಣಿಗೆಯಲ್ಲಿ ಭಾಗವಹಿಸಿದರು ಮೆರವಣಿಗೆಯ ಫೋಟೋ (ಛಾಯಾಚಿತ್ರ) ತೆಗೆಯಲಾಯಿತು.

ಮೆರವಣಿಗೆಯನಂತರ ದೊಡ್ಡಸಭೆಯಾಗಿ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರೂ, ಬಾದನಹಟ್ಟಿ ವೆಂಕೋಬರಾಯರೂ, ಶ್ರೀ ಸಿ ಟಿ. ಶ್ರೀನಿವಾಸನ್‌ರವರೂ ಹಿತೋಪದೇಶವಾಡಿ ಎಲ್ಲರೂ ಅಣ್ಣ, ತಮ್ಮಂದಿರಂತೆ ಇರಬೇಕೆಂದೂ, ಯಾವ ಕಲಹ ಕಲಾಪಗಳಿಗೆ ಹೋಗದೆ ತಮ್ಮಲ್ಲಿರುವ ದುಷ್ಟ ದುರ್ಗುಣಗಳನ್ನೆಲ್ಲಾ ಬಿಡಬೇಕೆಂದೂ ಉಪನ್ಯಶಿಸಿದರು ಬಂದ ಹರಿಜರಿಗೆಲ್ಲಾ ಊರಿನ ಹರಿಜನರು ಆತಿಥ್ಯ ಮಾಡಿದರು.

ಪರಮಾತ್ಮನಾರು ? ಎ ಲ್ಲಿ ರು ವ ನು ?

ಬ್ರಹ್ಮ [ಪರಮಾತ್ಮ] ಸಾಕ್ಷಾತ್ಕಾರಕ್ಕೆ ಬ್ರಹ್ಮ ಚರ್ಯವೆ ಸರಿಯಾದ ಮಾರ್ಗವೆಂದು ನಾನು ವಿವರಿಸಿದ್ದೇನೆ. ಪರಮಾತ್ಮ ಎಂದರೇನು ? ಅವನಾರು ? ಎಂಬ ಪ್ರಶ್ನೆ ಕೂಡಲೆ ಉದ್ಭವಿಸುತ್ತದೆ. ಮಾನವನಿಗೆ ಈ ಪ್ರಶ್ನೆಯ ಉತ್ತರ ಗೊತ್ತಿದ್ದರೆ ಅವನ ಸಾಕ್ಷಾತ್ಕಾರಕ್ಕೆ ಅವಶ್ಯವಾದ ಮಾರ್ಗವನ್ನು ಹುಡುಕಲು ಅವನು ಸಮರ್ಥನಾಗುವನು.

ಪರಮಾತ್ಮನೆಂದರೆ ಒಂದು ವ್ಯಕ್ತಿಯಲ್ಲ. ಕಾಲ ಕಾಲಕ್ಕೆ ಪರಮಾತ್ಮ ಮಾನವ ರೂಪವನ್ನು ಧರಿಸಿ ಅವತರಿಸುವನೆಂದು ಹೇಳುವುದು ಕೇವಲ ಅರ್ಧ ಸತ್ಯ ಇಂಥ ಅವತಾರೀ ಪುರುಷರು ಪರಮಾತ್ಮ ಸದೃಶನೆಂದೆ ಇದು ಬೋಧಿಸುವುದು. ಪರಮಾತ್ಮ ಸರ್ವವ್ಯಾಪಿಯಾಗಿರುವುದರಿಂದ ಮಾನವಹೃನ್ಮಂದಿರದಲ್ಲಿ ಅವನು ವಾಸಿಸುವನು. ಆದುದರಿಂದ ಪ್ರತಿಯೊಬ್ಬ ಮಾನವ ಜೀವಿಯು ಅವನ ಅವತಾರವೆಂದು ಹೇಳಬೇಕಾಗುವುದು ಆದರೆ ಇದರಿಂದ ಎನೂ ಗೊತ್ತಾಗುವುದಿಲ್ಲ. ರಾಮ ಕೃಷ್ಣಾದಿಗಳಲ್ಲಿ ಪರಮಾತ್ಮನ ಗುಣಗಳನ್ನು ನಾವು ಕಾಣುವುದರಿಂದ ಅವು ಅವನ ಅವತಾರಗಳೆಂದು ನಾವು ಕರೆಯುತ್ತೇವೆ. ನಿಜವಾಗಿ ಹೇಳಬೇಕಾದರೆ ಅವೆಲ್ಲ ಮಾನವನ ಕಲ್ಪನಾಸೃಷ್ಟಿಯೆ ಅವರು ನಿಜವಾಗಿ ಬಾಳಿದರೊ ಇಲ್ಲವೆ ಅಸ್ತಿತ್ವದಲ್ಲಿಯೆ ಇಗಲಿಲ್ಲವೊ ಎಂಬದು ಮಾನವರಲ್ಲಿ ಆ ಅವತಾರಗಳ ಬಗ್ಗೆ ಇದ್ದ ಕಲ್ಪನೆಗೆ ಬಾಧಕ ತರಲಾಗದು. ಇತಿಹಾಸದ ರಾಮ ಕೃಷ್ಣರಿಂದ ಅನೇಕ ಸಲ ಸಂತಯಕ್ಕವಕಾಶ ಉಂಟಾಗುವದು. ಆದರೆ ಅದನ್ನು ಎಲ್ಲ ಬಗೆಯ ತರ್ಕಸರಣಿಯಿಂದ ಹೊಡೆದು ಹಾಕಲಿಕ್ಕೆ ಬೇಕು.

ಪರಮಾತ್ಮ ಒಂದು ಶಕ್ತಿಯೆಂಬುದು ಅಬಾಧಿತ ಸತ್ಯ. ಜೀವನದ ಸಾರಸರ್ವಸ್ವನವನು. ವಿಶುದ್ಧ ನಿರ್ದುಷ್ಟ ಚೇತನನು, ಅನಾದಿಯು. ಹೀಗಿದ್ದರೂ ಎಲ್ಲರೂ ಆ ಸರ್ವವ್ಯಾಪಿ ಜೀವಂತ ಶಕ್ತಿಯ ಲಾಭ ಪಡೆಯಲು ಇಲ್ಲವೆ ಆಶ್ರಯ ಹೊಂದಲು ಸಮರ್ಥರಾಗಲಾರರು. ವಿಚಿತ್ರವಲ್ಲವೆ ಇದು ? ವಿದ್ಯುತ್ತು ಒಳ್ಳೆ ಪ್ರಚಂಡ ಶಕ್ತಿ. ಎಲ್ಲರೂ ಅದರ ಪ್ರಯೋಜನ ಪಡೆಯಲಾರರು. ಅದನ್ನು ಉತ್ಪಾದಿಸುವ ಬಗ್ಗೆ ಕೆಲವು ವಿಧಾನಗಳವೆ ಅದೊಂದು ನಿರ್ಜೀವ ಶಕ್ತಿ ಆ ವಿದ್ಯುಚ್ಛಕ್ತಿಯ ವಿಧವಿಧಾನಗಳು ಗೊತ್ತಾದರೆ, ಅದನ್ನುಪಯೋಗಿಸಲು ಬಹಳ ಪರಿಶ್ರಮ ಪಟ್ಟರೆ ಮಾತ್ರ ಮಾನವನು ಅದರ ಪ್ರಯೋಜನ ಪಡೆಯಬಲ್ಲನು.

ಪರಮಾತ್ಮನೆಂದು ನಾವು ಕರೆಯುವ ಜೀವಂತ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಅವನ ಬಗ್ಗೆ ಜ್ಞಾನ ಮಾಡಿಕೊಂಡು ಅವನು ಹಾಕಿಕೊಟ್ಟ ಮಾರ್ಗದಂತೆ ನಡೆದರೆ ಮಾತ್ರಸಾಧ್ಯ, ಅವನ ಆ ವಿಧಿಗಳನ್ನು ತಿಳಿದುಕ್ಕೊಳಬೇಕಾದರೆ ಬಹಳ ಪರಿಶ್ರಮಪಡಬೇಕಾಗುವದೆಂಬುದು ಸ್ಪಷ್ಟವೆ ಇದೆ. ಬ್ರಹ್ಮಚರ್ಯವೆಂಬ ಒಂದೇ ಹೆಸರಿನಿಂದ ಅದನ್ನು ಕರೆಯುಬಹುದು ರಾಮನಾಮೋಚ್ಚಾರನೆ ಆ ಬ್ರಹ್ಮಚರ್ಯ ಪಾಲನೆಗೆ ರಾಜಮಾರ್ಗ. ಅನುಭವದಿಂದಲೆ ನಾನು ಹೀಗೆ ಹೇಳಬಲ್ಲೆ ಭಕ್ತರು ಮತ್ತು ತುಳಸೀದಾಸರಂಥ ಸಾಧುಸತ್ಪುರುಷರು ಈ ರಾಜಮಾರ್ಗವನ್ನು ನಮಗೆ ತೋರಿಸಿಕೊಟ್ಟಿರುವರು. ನನ್ನ ಸ್ವಂತ ಅನುಭವಕ್ಕೆ ಅನವಶ್ಯಕ ಮಹತ್ವವನ್ನು ಯಾರೂ ಕೊಡುವ ಅವಶ್ಯಕತೆಯಿಲ್ಲ ಆದರೂ ಕಾಂಚನದಲ್ಲಿ ಈ ರಾಮನಾಮದ ಮಹತ್ವ ನನಗೆ ಹೆಚ್ಚಾಗಿ ಹೊಳೆಯಿತೆಂದು ಹೇಳಿದರೆ ತಪ್ಪಾಗಲಾರದು. ನಮ್ಮೆಲ್ಲರ ಕಷ್ಟನಿವಾರಣೆಗೆ ರಾಮನಾಮವೆ ರಾಮಬಾಣ ಉಪಾಯವೆಂದು ಅಲ್ಲಿಯೆ ನನಗೆ ಮನವರಿಕೆಯಾಯಿತು. ಆ ರಾಮ ಬಾಣದ ಪೂರ್ಣ ಉಪಯೋಗಮಾಡುವವನಿಗೆ ಯತ್ಕಿಂಚಿತ್ ಹೊರಗಿನ ಸಹಾಯದಿಂದ ಉದ್ದಿಷ್ಟ ಸಾಧ್ಯವಾಗುವದೆಂದು ಕಂಡುಬರದಿರಲಾರದು ರಾಮನಾಮವನ್ನು ನಮ್ಮ ಹೃನ್ಮಂದಿರದಲ್ಲಿ ಸ್ಥಾಪಿಸಿಕೊಂಡ

ದ್ದಾದರೆ ಪರಂಪರಾಗತ ಬ್ರಹ್ಮಚರ್ಯ ವಾಲನ ನಿಯಮವು ಅದರ ಮುಂದೆ ನಿಃಸತ್ವವೆನಿಸುವದು. ಈ ದೃಷ್ಟಿಯಿಂದ ವಿಚಾರಮಾಡುತ್ತ ಹೋದಂತೆ ನನಗೆ ಇದರ ಮಹತ್ವದ ಅರಿವಿಕೆಯಾಗಹತ್ತಿದೆ. ಆ ಬಳಿಕವೆ ನಮಗೆ ಆಶಕ್ತಿಯ ಅಲೌಕಿಕ ಪ್ರಭಾವ ಮತ್ತು ಸಾಮರ್ಥ್ಯ ಗೊತ್ತಾಗುವದು. ಈ ಅನುಪಮ ಮತ್ತು ಸರ್ವತ್ರ ವಿಜಯಪ್ರದವಾದ ಅಸ್ತ್ರವನ್ನು ದಕ್ಷತೆಯಿಂದ ಪರಿಶೋಧಿಸುವಾಗ ಸಾಧ್ಯಸಾಧನಗಳಲ್ಲಿಯ ಭೇದವನ್ನು ಕಾಣುವದೆ ಕಠಿನವೆನಿಸುವದು. ಈ ರೀತಿಯಾಗಿ ಹನ್ನೊಂದು ವ್ರತಗಳು ಪರಮಾತ್ಮನ ಸಾಕ್ಷಾತ್ಕಾರಕ್ಕೆ ನಮ್ಮನ್ನು ಸಮರ್ಥರನ್ನಾಗಿ ಮಾಡಲು ಸಾಧನಗಳಾಗಿವೆ ಈ ಹನ್ನೊಂದು ವ್ರತಗಳಲ್ಲಿ ಸತ್ಯವೇ ಸಾಧನ. ರಾಮ ನೆಂದು ಕರೆಯಲ್ಪಡುವ ಪರಮಾತ್ಮನೇ ಸಾಧ್ಯ. ರಾಮ ನಾಮವೇ ಸಾಧನವಾಗಿದ್ದು ಸತ್ಯವೇ ಸಾಧ್ಯವೆಂದು ಹೇಳುವುದೂ ಅಷ್ಟೇ ಸತ್ಯಪೂರ್ಣವಾಗಿದೆ.

ಅದರೆ ಮೂಲ ಮಾತಿಗೆ ಹೊರಳುವ ವಿಷಯವಾಸನೆಯನ್ನು ಸಂಪೂರ್ಣವಾಗಿ ನಿಯಂತ್ರಿಸುವುದೇ ಬ್ರಹ್ಮಚರ್ಯವೆಂದು ಪರಂಪರಾಗತವಾಗಿ ಭಾವಿಸುತ ಬಂದದ್ದಾಗಿದೆ. ಆ ಸಾಧ್ಯವನ್ನು ಮುಟ್ಟಬೇಕಾದರೆ ರಾಮನಾಮವೆ ಶ್ರೇಷ್ಠವಾದ ಸಾಧನ. ರಾಮನಾಮದ ಮಹತ್ವವನ್ನು ಮತ್ತು ಸಾಮರ್ಥ್ಯವನ್ನು ಸಿದ್ಧಪಡಿಸಲು ನಿಃಸಂದಿಗ್ಧ ನಿಯಮಗಳಿವೆ ಕೆಲ ತಿಂಗಳಗಳ ಹಿಂದೆ ನಾನು ಈ ನಿಯಮಗಳನ್ನು ಕೆಲ ಮಟ್ಟಿಗೆ ವಿವರಿಸಿದ್ದೇನೆ ಅದರೆ ಅವುಗಳನ್ನು ಮತ್ತೆ ವಿವರಿಸುವುದು ಅನಿವಾರ್ಯವಾಗಿದೆ.

ನೆತ್ತರ ಹಣ

ಮೂರು ತಿಂಗಳೊಳಗೆ ೧೫ ಕೋಟಿ ರೂ. ಬೆಲೆಬಾಳುವ ಜರ್ಮನ ಕೈಗಾರಿಕೆಯ ಯಂತ್ರಗಳನ್ನು ಯುದ್ಧದಿಂದಾದ ನಷ್ಟವನ್ನು ತುಂಬುವದರಸಲುವಾಗಿ ಹಿಂದು ಸ್ಥಾನವು ತರಿಸಿಕೊಂಡಿದೆಯೆಂದು ಒಂದು ವಾರ್ತಾವಿಭಾಗ ಸಂತೋಷದಿಂದ ತಿಳಿಸುತ್ತದೆ. ಇದು ಪ್ಯಾರಿಸ್ ಸಮ್ಮೇಲನದ ಫಲಿತಾಂಶ.

ಇದು ನಮ್ಮ ಬಗ್ಗೆ ಜರ್ಮನರ ಸದ್ಭಾವನೆ ಬೆಳೆವಂತೆ ಮಾಡುವುದೋ ಇಲ್ಲವೆ ಅಣು ಬಾಂಬಿನ ಧನಗಳಸಾಮ್ರಾಜ್ಯಶಾಹಿಯ ಸನ್ನಿಧಿಯಲ್ಲಿ ಅವರು ಭಾರತಕ್ಕೆ ಸ್ಥಾನಕೊಡುವಂತೆ ಮಾಡುವುದೋ ?

ಜಪಾನಿನಲ್ಲಿ ಯುದ್ಧನಷ್ಟ ಪೂರೈಕೆಗಾಗಿ ಸಿಗುವ ವಸ್ತುಗಳಲ್ಲಿ ನೂರಕ್ಕೆ ಗಲ ರಷ್ಟು ತನಗೆ ಬೇಕೆಂದು ಭಾರತ ಬೇಡಿದೆಯೆಂದು ಗೊತ್ತಾಗಿದೆ. ಮತ್ತು ಅವುಗಳನ್ನು ಪರಿಶೀಲಿಸಿ ಕರುವ ನ್ಯವಸ್ಥೆ ಮಾಡಲು ಇಲ್ಲಿಂದ ನಮ್ಮ "ಔದ್ಯೋಗಿಕ ಸಂಘ" ದವರು ಜಪಾನಿಗೆ ಪ್ರಯಾಣ ಮಾಡಲಿರುವರೆಂದೂ ತಿಳಿದು ಬಂದಿದೆ.

"ಒಳ್ಳೆಯ ನೆರಿಹೊರೆಯವರಯ್ಯಾ!" ಎನಿಸಿಕೊಳ್ಳುವ, ಸ್ವರಾಜ್ಯಗಂಗೆಯ ಉಗಮವನ್ನು ಅಪವಿತ್ರಗೊಳಿಸುವ ಇಂತಹ ಕಾರ್ಯಗಳನ್ನು ಈಗಲೇ ಕೈಕೊಳ್ಳುವುದೆಂದು ದುರಂತ ಪ್ರಸಂಗವೇ ಸರಿ.

ಮನುಷ್ಯ ಅಥವಾ ಮೃಗ

ಕೂಲಿಯವರು ಸಿಕ್ಕದ ಊರುಗಳಲ್ಲಿ "ಕೆಲಸ ಕದಿಮೆ ಮಾಡುವ ಯಂತ್ರ"ಗಳನ್ನು ಬಳಸುತ್ತಾರೆ; ಅವು ಕೂಲಿಯವರು ಬಹಳವಾಗಿರುವ ದೇಶಗಳಲ್ಲಿ "ನಿರುದ್ಯೋಗಿ ಪ್ರಾಣಿಗಳೆ" ನಿಸುತ್ತವೆ. ಮೊದಲು ಶ್ರಮಕದಿಮೆ ಮಾಡುವ ಸಾಧನಗಳು ಬಂದೊಡನೆ ಕಸಬುದಾರರಿಗೆ ಕೆಲಸವಿಲ್ಲದಂತಾಯಿತು. ಅನಂತರ "ಹಳ್ಳಿಯ ಹುಂಬರು ತಿನ್ನುವ ಹೊಟ್ಟೆ"ಗಾಗಿ ಮನುಷ್ಯನು ಪಶುಗಳೊಡನೆ ಸ್ಪರ್ಧೆಗೆ ನಿಲ್ಲಬೇಕಾಗುತ್ತದೆ.

ಇದು ರಿಕ್ಷಾ ಕೂಲಿಗಳ ಪದ್ಧತಿಯಾಗಿದೆ. ಅವರು ಟಾಂಗಾ ಕುದುರೆಗಳೊಡನೆ ಸ್ಪರ್ಧಿಸಬೇಕಾಗಿದೆ. ಟಾಂಗಾಕ್ಕೆ ಒಂದು ಕುದುರೆ ಒಬ್ಬ ಸಾರಥಿ ಬೇಕಾಗುತ್ತದೆ. ರಿಕ್ಷಾದಲ್ಲಿ ಕುದುರೆಯಿಲ್ಲ; ಕುದುರೆ ಮತ್ತು ಸಾರಥಿ—ಈ ಇಬ್ಬರ ಕೆಲಸವನ್ನೂ ಕದಿಮೆ ಕೂಲಿಗೆ ರಿಕ್ಷಾವಾಲನೇ ನಿರ್ವಹಿಸುತ್ತಾನೆ. ಹೀಗೆ ಮನುಷ್ಯತ್ವದಿಂದ ಮನುಷ್ಯನು ಪಶುತ್ವಕ್ಕೆ ಬೀಳುತ್ತಾನೆ ಮನುಷ್ಯನ ದೇಹರಚನೆ ಕುದುರೆಯಂತಿಲ್ಲ ಅದುದರಿಂದ ಈ ಕೆಲಸದಿಂದ ಅವನಿದೆಗೆ ಬಹಳ ಪೆಟ್ಟಾಗು

ತ್ತದೆ. ಮತ್ತು ತನ್ನ ಅನ್ನದ ತುತ್ತಿನೊಡನೆ ಜಾಗ್ರತೆಯಾಗಿ ಮುಸಣವನ್ನು ಕಾಣುತ್ತಾನೆ.

ಅಂತಹ ಹೀನ ಕಾರ್ಯವನ್ನು ನಡೆಯಲು ಬಿಡುವ ಯಾವ ಸಮಾಜವೇ ಆಗಲಿ ರಾಕ್ಷಸೀಕೃತ್ಯ ಮಾಡಿದ ಅಪರಾಧಕ್ಕೆ ಗುರಿಯಾಗುತ್ತದೆ. ಪ್ರಾಣಿದಯಾಸಂಘಗಳನ್ನು ಜನರು ಸಂಘಟಿಸಿದ್ದಾರೆ: ಆದರೆ ದಾರಿದ್ರ್ಯದ ಒತ್ತಾಯಕ್ಕೊಳಗಾಗಿ ದನಗಳ ಆಹಾರಕ್ಕೆ ಬಾಯಿ ನೀರುಬಿಡುವ ಜನರ ಆರ್ತಸ್ವರವನ್ನು ಕೇಳುವವರಾರೂ ಇಲ್ಲವೆ?

ಕಡೆಯಪಕ್ಷ, ಒಂದಾದರೂ ಸ್ಥಳದಲ್ಲಿ ಸ್ವಾತಂತ್ರ್ಯ ಮೂಡಿಬರುವ ಈ ಕಾಲದಲ್ಲಿ ಸಮಾಜ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತೊಡಗಿರುವುದು ಸಂತೋಷದ ಸಂಗತಿ.

ಸುಮಾತ್ರದ ವೇಡಾನ ನಗರದಲ್ಲಿ ಚೀನೀಯರು ಅಲ್ಲಿ ತಿರುಗುತ್ತಿದ್ದ ೯೦ ರಿಕ್ಷಾಗಳನ್ನು ಕೊಂದು ನಾಶಗೊಳಿಸಿದರು. ಕೂಲಿಗಳಿಗೆ ನೂರು ನಾಣ್ಯಗಳನ್ನಿತ್ತು ಚೀನಾಕ್ಕೆ ಕರೆದೊಯ್ದರು; ಕೆಲವರಿಗೆ ಅಲ್ಲೇ ಬೇರೆಯ ಕೆಲಸ ಕೊಡಿಸಿದರು.

ಮದ್ರಾಸ್ ನಾಗಪುರಗಳಂತಹ ನಮ್ಮ ರಿಕ್ಷಾ ಮಯ ಪಟ್ಟಣಗಳು ಅವರಿಂದ ಒಂದು ನೀತಿಪಾಠ ಕಲಿತುಕೊಂತು ತಮ್ಮಲ್ಲಿ ಸಾಮಾಜಿಕ ಕರ್ತವ್ಯೋದ್ಬೋಧವಾಗಿದೆಯೆಂದು ತೋರಿಸುವರೇ? ಈ ಕುತ್ಸಿತ ಯಾನವನ್ನು ಬಹಿಷ್ಕರಿಸುವುದನ್ನು ಬಿಟ್ಟು ಮದ್ರಾಸು ಅದಕ್ಕೆ ಅಪ್ಪಣೆ ಕೊಡುವ ಸಿದ್ಧತೆ ನಡೆಸಿದೆ. ಇಂತಹ ದುಸ್ಥಿತಿಗೊಳಗಾದ ಮಾನವಕುಲವಿಭಾಗಕ್ಕೆ ಸ್ವರಾಜ್ಯದಿಂದ ಯಾವ ಪ್ರಯೋಜನ ಉಂಟಾದಂತಾಯಿತು?

—ಸ್ವತಂತ್ರ-ಪಠಾಣಿಸ್ತಾನ—

ಸರಹದ ಪ್ರಾಂತದಲ್ಲಿ ಪಠಾಣರು ಸ್ವತಂತ್ರರಾಗುಳಿಯಬೇಕೆಂದೂ ಅವರಿಗೆ ಪ್ರತ್ಯೇಕವಾದ ಪಠಾಣಿಸ್ತಾನವು ಬೇಕೆಂದೂ, ಆತಳಹದಿಯ ಮೇಲೆ ಚುನಾವಣೆ ನಡೆಯದಿದ್ದರೆ, ತಾವು ಅದನ್ನು ಬಹಿಷ್ಕರಿಸುವುದಾಗಿಯೂ ಅಲ್ಲಿಯ ಮುಖಂಡರಾದ ಖಾನ್ ಅಬ್ದುಲಗಫರಖಾನರು ಹೇಳಿಕೆ ಕೊಟ್ಟಿರುವರು.

ಸೆಕಂಡರಿ ಶಾಲೆಗಳ ಮೇಲ್ವಿಚಾರಣೆ.

ಅಧ್ಯಾಪಕರ ಜವಾಬುದಾರಿ.

ಸೆಕಂಡರಿ ಶಾಲೆಗಳ ಮುಖ್ಯೋಪಾಧ್ಯಾಯರಿಗೂ ಇತರ ಉಪಾಧ್ಯಾಯರಿಗೂ ಶಾಲೆಗಳ ಮೇನೇಜಿಂಗ್ ಕಮಿಟಿಗಳಲ್ಲಿ ಪ್ರಾತಿನಿಧ್ಯವಿರಬೇಕೆಂಬ ವಿದ್ಯಾಭ್ಯಾಸದ ಕುರಿತ ಪ್ರಾಂತಿಕ ಸಲಹಾಸಮಿತಿಯ ಶಿಫಾರಸನ್ನು ಮದ್ರಾಸ್ ಸರಕಾರವು ಒಪ್ಪಿಕೊಂಡಿದೆ.

ಮದ್ರಾಸ್ ವಿದ್ಯಾಸಂಬಂಧ ನಿಯಮಗಳಲ್ಲಿ ಅದಷ್ಟು ಬೇಗನೇ ತಕ್ಕ ತಿದುಪಡಿ ಪ್ರಕಾರ ಸದ್ಯಕ್ಕೆ ಮೇನೇಜಿಂಗ್ ಸಮಿತಿಯಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಒಬ್ಬ ಸದಸ್ಯರಾಗಿರುವರು. ಮೇನೇಜಿಂಗ್ ಕಮಿಟಿ ಇಲ್ಲದ ಶಾಲೆಗಳಿಗೆ ಸಲಹಾ ಸಮಿತಿ ಇರುವವು. ಅಂತಹ ಸಮಿತಿಯಲ್ಲಿ ಶಾಲೆ ಮುಖ್ಯೋಪಾಧ್ಯಾಯರು, ಅಧ್ಯಾಪಕರಿಂದಲೇ ಆರಿಸಲ್ಪಟ್ಟ ಒಬ್ಬ ಸದಸ್ಯ, ಹೆತ್ತವರ ಸಂಘದ ಒಬ್ಬ ಪ್ರತಿನಿಧಿ ವಿದ್ಯಾಖಾತೆಯು ನೇಮಿಸಲ್ಪಟ್ಟವನೊಬ್ಬ (ಅಲ್ಲಿಯೇ ವಾಸಿಸುವವನಾಗೂ ವಿದ್ಯಾವಿಷಯದಲ್ಲಿ ಶ್ರದ್ಧಾಸಕ್ತಿ ಇರುವವನಿರುವುದು ಉತ್ತಮ), ಶಾಲೆಯು ಮೇನೇಜ್‌ಮೆಂಟಿನವರು ನೇಮಿಸಿದ ಇಬ್ಬರು ಸದಸ್ಯರು, ಶಾಲೆಯು ಕರೆಸ್ಪಾಂಡೆಂಟ್, ಇಷ್ಟು ಸದಸ್ಯರಿರುವರು.

ಹೆಮ್ಮಕ್ಕಳ ಶಾಲೆಯು ಮೇನೇಜಿಂಗ್ ಕಮಿಟಿಯಲ್ಲಿ, ಅಥವಾ ಸಲಹಾ ಸಮಿತಿಯಲ್ಲಿ, ಮುಖ್ಯೋಪಾಧ್ಯಾಯಿನಿ ಅಲ್ಲದೆ ಕಡಿಮೆಯಲ್ಲಿ ಇತರ ಎರಡು ಉಪಾಧ್ಯಾಯಿನಿಯರಾದರೂ ಸದಸ್ಯರಾಗಿರಬೇಕು.

ಪ್ರತಿ ಶಾಲೆಗೆ ಅದರ ಉದ್ಯೋಗಿಗಳ ಒಂದು ಸಮಿತಿ ಇರುವುದು. ಶಿಸ್ತು ಬಡತಿ, ಚುನಾವಣೆ ಇತ್ಯಾದಿ ವಿಷಯಗಳಲ್ಲಿ ಮುಖ್ಯೋಪಾಧ್ಯಾಯರಿಗೆ ಸಲಹೆ ಕೊಡುವ ಅಧಿಕಾರವು ಈ ಉದ್ಯೋಗಿಗಳ ಸಮಿತಿಗಿರುವುದು. ಮುಖ್ಯೋಪಾಧ್ಯಾಯರಿಂದ ಒಪ್ಪಲ್ಪಟ್ಟ ಇತರ ವಿಷಯಗಳನ್ನು ಸಹ ಈ ಸಮಿತಿಯು ಆಲೋಚಿಸಬಹುದು.

ತಾ ಪ ತ್ರ ಯ

(4 ನೆಯ ಪುಟದಿಂದ ಮುಂದುವರಿದುದು)

ಸಾಕಪ್ಪ! ಹಳ್ಳಿಯ ಭವಣೆ ಎಂದು ಹಳ್ಳಿಗರೆಲ್ಲಾ ಪಟ್ಟಣ ಸೇರುತ್ತಲಿರುವರು. ಪಟ್ಟಣದಲ್ಲಿ ಕೂಲಿಯೂ ದೊರೆಯುತ್ತದೆ. ಕಾಳೂ ದೊರೆಯುತ್ತದೆ. ಅಲ್ಲಿ ಸೀದಾ ವ್ಯವಸ್ಥೆಯೂ ಚನ್ನಾಗಿದೆ. ಈ 4-5 ವರ್ಷಗಳಲ್ಲಿ ಪಟ್ಟಣಗಳ ಜನಸಂಖ್ಯೆ ದ್ವಿಗುಣವಾಗಿದೆ. ಬಳ್ಳಾರಿ ಜನಸಂಖ್ಯೆ 80 ಸಾವಿರಕ್ಕೆ ಬಂದಿದೆ. ಆದವಾನಿಯದು 50 ಸಾವಿರಕ್ಕೇರಿದೆ. ಹೊಸಪೇಟೆಯದು 40 ಸಾವಿರ ವಿದ್ಯೀತು.

ಹಳ್ಳಿಗಳ ಉದ್ಧಾರಕ್ಕೆ ಸಮಿತಿಗಳನ್ನು ಏರ್ಪಡಿಸಿ ಗ್ರಾಮೋದ್ಧಾರ ಅಧಿಕಾರಿಗಳನ್ನು ಹೆಚ್ಚಿನ ಸಂಬಳಗಳಿಂದ ನಿಯುಕ್ತ ಮಾಡುತ್ತಲಿರುವ ಈ ಕಾಂಗ್ರೆಸ್ ಸರ್ಕಾರದವರು ಹಳ್ಳಿಗಳಿಗೆ ಕಾರ್ಯತಃ ಸಹಾಯಮಾಡಿ ಕಾಗದದ ಯೋಜನೆಗಳಿಗೆ (Paper Schemes) ಬೆಂಬಲ ಕೊಡಬಾರದೆಂದು ಬೇಡುತ್ತೇನೆ.

ತಿರುವಾಂಕೂರು ಸಮಸ್ಯೆ:—

ದಿವಾನರಾದ ಸರ್. ಶಿ. ಪಿ. ರಾಮಸ್ವಾಮಯ್ಯರವರು ಪಟಹಿಡಿದು ಸಂಸ್ಥಾನವು ಸರ್ವತಂತ್ರವಾಗಬೇಕೆಂದು ಹೇಳಿರುವುದನ್ನು ಮಹಾತ್ಮಗಾಂಧಿಯವರು ತೀಕ್ಷ್ಣವಾಗಿ ಖಂಡಿಸಿ, ಇವರ ಉದಾಹರಣೆಯು ಇತರ ಸಂಸ್ಥಾನಗಳು ಅನುಸರಿಸಿದರೆ ದೇಶದ ಐಕ್ಯವೇ ನಾಶವಾಗುವುದೆಂದರು. ಅಲ್ಲಿಯ ಕಾಂಗ್ರೆಸ್ ಸತ್ಯಾಗ್ರಹ ಹೂಡುವುದರಲ್ಲಿದೆ. ಹಿಂದೂಸ್ತಾನ ಸರ್ಕಾರವು ತಿರುವಾಂಕೂರಿನಮೇಲೆ ಕಠಿಣ ಚರ್ಯೆಗಳನ್ನು ತೆಗೆದುಕೊಳ್ಳುವುದೆಂದು ಒಂದು ವಾರ್ತಾ ಸಂಸ್ಥೆಯು ತಿಳಿಸುತ್ತದೆ.

ಹಿಂದೂಸ್ತಾನದಲ್ಲಿ ಎರಡು ವಿವಾಹಪದ್ಧತಿಗಳನ್ನು ನಿರ್ಮಿಸಿ ತಕ್ಕ ಅಧಿಕಾರ ಪ್ರದಾನಮಾಡಲು ಪಾರ್ಲಿಮೆಂಟಿನಲ್ಲಿ ಮಸೂದೆಯು ಬರಲಿದೆ.

ಹರಿಜನರಿಗೆ ಬಟ್ಟೆ ಲೈಸೆನ್ಸ್ ಕೊಡುವುದು ನಿಶ್ಚಯವಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ತಮಗೆ ಮಿಲ್ ಬಟ್ಟೆ ಮಾರಲು ಜಿಲ್ಲರೆ ವ್ಯಾಪಾರಿಗಳ ಲೈಸೆನ್ಸ್ ಕೊಡಬೇಕೆಂದು ನೂರಾರು ಜನರು ಅರ್ಜಿ ಇಟ್ಟಿದ್ದರು. ಈಗಿನ ಮಂತ್ರಿವರ್ಗದವರು ಪಟ್ಟಣದಲ್ಲಿನ ಮತ್ತು ಶ್ರೀ ಆದೆಪ್ಪನವರ ಕಾಲಕ್ಕೆ ಲೈಸೆನ್ಸ್ ಹೊಂದಿದವರನ್ನು ಕಾರಣಗಳಿಲ್ಲದೆ ತೆಗೆಯಬಾರದೆಂದು ಆಜ್ಞೆಮಾಡಿದರು.

ಆದರೆ ಈ ಆಜ್ಞೆಯನ್ನು ಹಿಂದುಳಿದವರಿಗೆ ಅನ್ವಯಿಸಬಾರದೆಂದೂ. ಬಟ್ಟೆಸಿಗದ ಬಡವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳಲಾಗಿತ್ತು. ಆ ಪ್ರಕಾರಕ್ಕೆ ಹರಿಜನರಿಗೂ, ಲಂಬಾಣಿಗಳಿಗೂ ಲೈಸೆನ್ಸ್ ಕೊಡಬಹುದೆಂದು ಉತ್ತರವಾಗಿದೆ. ಇಷ್ಟರೊಳಗಾಗಿ ಅರ್ಜಿ ಇಟ್ಟವರಿಗೆ ಹಳ್ಳಿಗಳನ್ನು ವಿಂಗಡಿಸಿ, ಬಟ್ಟೆ ಪೂರೈಕೆಮಾಡಲು ಏರ್ಪಾಟಾಗಲಿದೆ.

ಅಧಿಕಾರಿಯು ಅಪಹಾಸ್ಯಮಾಡಿದನು:—

ಸಿಂಧ ಸರಕಾರದ ಪರವಾಗಿ ಬಂದ ಒಬ್ಬ ಅಧಿಕಾರಿಯು ಘಟನಾಸಮಿತಿಯನ್ನು ನೋಡಿ ಮಾಹಿತಿ ಹೊಂದಬೇಕೆಂದು ಇಚ್ಛಿಸಿ ಅಲ್ಲಿಂದ ಮಹತ್ವದ ಕಾಗದಪತ್ರ ಫೈಲುಗಳನ್ನು ಅಪಹರಿಸಿಕೊಂಡು ಹೋಗಿರುವನೆಂದು ಗೊತ್ತಾಗಿದೆ. ಅಲ್ಲಿ ಕೆಲಸಮಾಡುತ್ತಲಿದ್ದ ಲೀಗ್ ನೌಕರರು ಈ ಕಳ್ಳತನಕ್ಕೆ ಸಹಾಯವಾದರಂತೆ.

ಸಿಂಧುದೇಶವು ಪಾಕಿಸ್ತಾನ ಘಟನಾಸಮಿತಿಯನ್ನು ಸೇರಲು ಕ್ಷಿಪ್ರ ವಿಶೇಷ ಪ್ರಯತ್ನಗಳಿಂದ ನಿಶ್ಚಯಿಸಿತು

ರಾ. ಬ. ವಿತಲ ಶೇಷಪ್ಪನವರ ದಾನ

ಬಳ್ಳಾರಿ ಬ್ರಾಹ್ಮಣ ಬೀದಿಯಲ್ಲಿನ ನಾಗೇಶ್ವರ ದೇವಸ್ಥಾನಕ್ಕೆ ಸುಮಾರು ೧೫ ಸಾವಿರ ರೂ. ವರಿನಿಗೂ ಖರ್ಚುಮಾಡಿ ಸುಂದರವಾದ ಗೋಪುರ ಬಂಗಾರ ಪಂಚಕಲಶವನ್ನು ರಾವಬಹದೂರರು ನಿರ್ಮಿಸಿದರು.

ಆದವಾನಿ

ಕರ್ನಾಟಕ ಏಕೀಕರಣ ಸಂಘದ ಕಾರ್ಯಕಾರೀ ಸಮಿತಿಯು ೨೨ ನೆಯ ದಿನಾಂಕ ರಾ. ಬ ಕೆಮ್ಮಿರೆಡ್ಡಿಯವರ ಛತ್ರದಲ್ಲಿ ಶ್ರೀ ಬ ರಂಗನಗೌಡರ ಧ್ಯಕ್ಷತೆಯಲ್ಲಿ ಸಮಾವೇಶವಾಗಿ ಕೆಳ ತೀರ್ಮಾನಗಳಾದವು.

ಆದವಾನಿಯಲ್ಲಿ ಕನ್ನಡ ಹೈಸ್ಕೂಲನ್ನು ಸ್ಥಾಪಿಸಲು ೨ ಲಕ್ಷ ರೂ. ದಾನಕೊಟ್ಟ ಶ್ರೀ ಎಲೆ ಮಲ್ಲೇಶಪ್ಪನವರು ಅಭಿನಂದನಾರ್ಹರು ಜಿ. ಕ. ಏ. ಸಂಘದ ಕಛೇರಿ ಆದವಾನಿಯಲ್ಲಿದ್ದು ಗೌ. ಕಾರ್ಯದರ್ಶಿಗಳು ಮಾ. ಬಸಣ್ಣನವರಿರಬೇಕೆಂದೂ. ಹೈದರಾಬಾದಿಗೆ ಸಿಗುವಷ್ಟು ಪ್ರತಿಫಲವು ಒಳ್ಳಾರಿ ಜಿಲ್ಲೆಗೂ ದೊರೆಯುವಂತೆ ಮಾಡಬೇಕೆಂದೂ, ಆ ಪ್ರಕಾರ ತುಂಗಭದ್ರಾ ನೀರಾವರಿ ಯೋಜನೆಯಲ್ಲಿ ಬದಲಾವಣೆಗಳನ್ನು ಮಾಡಬೇಕೆಂದೂ ಮದ್ರಾಸ್ ಸರ್ಕಾರವನ್ನು ಕೇಳಬೇಕೆಂದಾಯಿತು.

ಹಡಗಲಿ ತಾಲೂಕಿನಲ್ಲಿ ಹರಿಯುವ ಹಗರಿನೆ ಚಿಮ್ಮಹಳ್ಳಿ–ಕೋಗಳಿ ಹತ್ತರ ಅಣೆಕಟ್ಟು ಕಟ್ಟಿ ನೀರಾವರಿಯೋಜನೆ ಕೈಕೊಳ್ಳಬೇಕು ಮುಂದೆ ಬರಲಿರುವ ಭಾಷಾವಾರ ಪ್ರಾಂತರಚನೆಯಲ್ಲಿ ಬಳ್ಳಾರಿಜಿಲ್ಲೆಯು ಇಬ್ಭಾಗವಾಗದಂತೆ ಕರ್ನಾಟಕಕ್ಕೆ ಸೇರ್ಪಡವಂತಾಗಬೇಕು.

ಎಮ್ಮಿಗನೂರು

18 ನೆಯ ತಾ. ಇಲ್ಲಿಯ ಉನ್ನತ ಪಾಠಶಾಲೆಯಲ್ಲಿ ಆದವಾನಿ ಡೆಪ್ಯುಟಿ ಇ. ಗಳೊಂದಿಗೆ ದಯವಾಡಿಸಿದ ಡಿ. ಇ ಒರವರಾದ ಶ್ರೀ ನರಸಿಂಹಶಾಸ್ತ್ರಿಗಳು ಪ್ರಾಥಮಿಕೋಪಾಧ್ಯಾಯರ ಸಮಾವೇಶದಲ್ಲಿ ಉಪಾಧ್ಯಾಯರಿಗೆ ಸಂಪು ಹೂಡಬಾರದೆಂದೂ, ಅದರಿಂದ ಅನರ್ಥಗಳಾಗುವವೆಂದೂ, ತಾವು ಶಿಕ್ಷಾಚರ್ಯೋಗಳನ್ನು ತೆಗೆದುಕೊಳ್ಳಬೇಕಾಗಬಹುದೆಂದೂ ಜ್ಞೋಧಿಸಿದರು.

ರಾಯಲಸೀಮೆ ಕಾಲೇಜ ಬಳ್ಳಾರಿ.

ಬಳ್ಳಾರಿ ನಗರದ ಇಪ್ಪತ್ತೇಳು ಪ್ರಮುಖರನ್ನೊಳಗೊಂಡ ಇಂಗ್ಲಿಷ್, ಕನ್ನಡ, ತೆಲುಗು, ಭಾಷೆಗಳಲ್ಲಿನ ವಿಜ್ಞಾಪನ ಪತ್ರಿಕೆಯೊಂದು ಹೊರಬಿದ್ದಿದೆ. ಕಲೆ ವಿಜ್ಞಾನ, ಮತ್ತು ವಾರಿಶ್ರಾಮಿಕ ಸಂಬಂಧೀ ಶಿಕ್ಷಣವನ್ನು ಕೊಡತಕ್ಕಂಥ ಕಳಾಶಾಲೆಯನ್ನು ಬಳ್ಳಾರಿಯಲ್ಲಿ ಸ್ಥಾಪಿಸಲು ೨೫ ಲಕ್ಷ ರೂ. ಗಳ ಮೊತ್ತಕ್ಕೆ ರಾಯಲಸೀಮೆ ಜಿಲ್ಲೆಗಳವರು ಸಹಾಯ ಮಾಡಬೇಕೆಂದು ವಿನ್ನಯಿಸಲಾಗಿದೆ ಇದಕ್ಕೆ ಬಳ್ಳಾರಿ ಮುನಿಸಿಪಲ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಯಸ್. ವೇದಾಂತಂರವರು ಚಾಲಕರು

Woolen Coatings, Silk Sarees, Benares and other latest designs Handloom and Mill made Clothes Etc., Colours Guaranteed. Prices very reasonable Trial Solicited

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಕ್ಕು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂಪ್ಪು. ಪರೀಕ್ಷಿಸಿ ಮನಗಾಣಿರಿ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:—** ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ. ಆದವಾನಿ, **ಅನಂತಪುರ:—** ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:—** ಕರ್ನೂಲು:- **ಪತ್ತಿಕೊಂಡ.**
ಕಡಪ:— ರಾಜಂಪೇಟೆ, ಕಡಪ, **ಚಿತ್ತೂರು,—** ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

ಲಾಹೋರಿನಲ್ಲಿ ದಂಗೆ
ಅಗ್ನಿಯಿಂದ ಭಯಂಕರ ಅನಾಹುತ.

ಪಂಜಾಬಿನ ಮುಖ್ಯಪಟ್ಟಣವಾದ ಲಾಹೋರಿನಲ್ಲಿ ಹಿಂದೂ ಮುಸಲ್ಮಾನ ಬಡೆದಾಟವು ಭೀಕರವಾಗುತ್ತಾ ನಡೆದಿದೆ. ಬಾಂಬುಗಳನ್ನು ಎಸೆದ ಕಾರಣ ಅನೇಕರಿಗೆ ಗಾಯಗಳಾಗಿ ೯ ಜನರು ಸತ್ತರೆಂದು ಗೊತ್ತಾಗಿದೆ. ಅಲ್ಲಲ್ಲಿ ಬೆಂಕಿ ಹಚ್ಚಿದ ಕಾರಣ ಬೀದಿ ಬೀದಿಗಳೇ ನಾಶವಾಗಿವೆ ಬೆಂಕಿಯನ್ನಾರಿಸಲು ನೀರಿನ ನಳಗಳೇ ಕೆಲಸಕ್ಕೆಬಾರದೆ ಕೆಟ್ಟುಹೋಗಿದ್ದವು ೨—೩ ದಿನಗಳು ಜನಗಳು ಹೊರಕ್ಕೆ ಬಾರದಂತೆ 'ಕರಫ್ಯೂ' ಆಜ್ಞೆಯಾಗಿದ್ದರೂ ಇತ್ತಂಡದ ಜನರು ಹೋರಾಟಕ್ಕೆ ಅಣಿಯಾಗುತ್ತಿರುವುದನ್ನು ತಪ್ಪಿಸಲು ಪೋಲೀಸರು ಮಿಲಿಟರಿಯವರೂ ಅನೇಕಸಲ ಗುಂಡುಹಾರಿಸಬೇಕಾಯಿತು. ಕೋಟ್ಯಂತರ ಮೂಲಿನ ನಾಶವಾಗಿದೆ.

ಅಮೆರಿಕಾದಿಂದ ಹಿಂದೂಸ್ತಾನಕ್ಕೆ ಗೋಧಿಯ ಪೂರೈಕೆಯಾಗುವ ಸಂಭವವಿದೆ. ಈ ವಾರ ಒಂದು ಹಡಗಿನಷ್ಟು ಗೋಧಿಯು ಪೂರೈಕೆಯಾಯಿತು.

ಪ್ರಾಂತಗಳ ವಿಭಜನೆ.

ಈ ವಾರ ಪಂಜಾಬ ಬಂಗಾಲಗಳಲ್ಲಿ ಮತಗಣನೆಯಾಗಿ ಅವು ವಿಭಜಿಸಲ್ಪಡಬೇಕೆಂದು ನಿಶ್ಚಿತವಾಯಿತು. ಮುಸಲ್ಮಾನರಿಲ್ಲಾ ವಿಭಜನೆಯಾಗಬಾರದೆಂದೂ, ಪಾಕಿಸ್ತಾನ ಘಟನಾಸಮಿತಿಗೆ ಸೇರಬೇಕೆಂದೂ ಮತಕೊಟ್ಟರು, ಪಶ್ಚಿಮ ಬಂಗಾಳ ಪೂರ್ವ ಪಂಜಾಬಗಳು ಅಯಾಪ್ರಾಂತಗಳಿಂದ ಬಿಡುಗಡೆಯಾಗಿ ವಿಭಜಿಸಲ್ಪಡಬೇಕೆಂದೂ ಈಗಿನ ಘಟನಾಸಮಿತಿಗೇ ಸೇರಬೇಕೆಂದೂ ಹಿಂದೂಗಳು ಮತಕೊಟ್ಟರು ಹೀಗಾಗಿ ವಿಭಜಿಸಲ್ಪಡುವುದು ನಿಶ್ಚಿತವಾಯಿತು. ಇದಕ್ಕಾಗಿ ಕಾಂಗ್ರೆಸ್ ಲೀಗ್‌ಪಕ್ಷದ ಸಮಿತಿಗಳು ಅಯಾಪ್ರಾಂತಗಳಲ್ಲಿ ವಿರಚಿತವಾಗಿ ಹಣಕಾಸು ಮತ್ತು ಇತರ ವಿಷಯಗಳನ್ನು ನಿರ್ಣಯಿಸಿ ಭಾಗಗಳನ್ನು ನಿರ್ದೇಶಿಸಲು ಸರಹದ್ ಸಮಿತಿಗಳು ವಗೈರೆ ರಚಿತವಾದವು

ಪಾಕಿಸ್ತಾನವು ಅರಬ್ಬೀರಾಷ್ಟ್ರಗಳ ಸದಸ್ಯತ್ವಕ್ಕೆ ಅರ್ಹವಿಲ್ಲ, ಮುಸಲ್ಮಾನ ರಾಷ್ಟ್ರಗಳ ಸಂಘವನ್ನು ಪ್ರಪಂಚದಲ್ಲಿ ನಿರ್ಮಿಸುವುದು ನಮ್ಮ ಇಷ್ಟವಿಲ್ಲ ಎಂದು ಅರಬರಾಷ್ಟ್ರ ಸಂಘದ ಕಾರ್ಯದರ್ಶಿಗಳು ಹೇಳಿಕೆ ಕೊಟ್ಟಿರುತ್ತಾರೆ.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. . HUSANJEE RAO, M VENKOJI RAO
General Merchants, Car Street Bellary.

2. M/S. V. M. GIRI & SONS,
(Pro:- M, S Acharya) Car Street, Bellary

ಶುದ್ಧ ! ಗ್ಯಾರಂಟಿಯಾದ್ದು !! ಸತ್ಪಕಾರಿ !!!

— ಪೈರ ಎಳ್ಳೆಣ್ಣೆ —

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜರಾವ್, ಎಂ. ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ ಎಂ. ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

ಈ ವಿದ್ಯಾಪೀಠವು 15—7—1947 ಕ್ಕೆ ಪ್ರಾರಂಭವಾಗಲಿದೆ. ಗವರ್ನ್‌ಮೆಂಟು ರಿಜಿಸ್ಟ್ರೇಷ್ರು ನ್ ಪಡೆಯಲು ಅರ್ಜಿವಾಗುವಂತೆ (Board of Indian Medicine Madras) ಮದ್ರಾಸ್ ಸರ್ಕಾರದ ನಿಯಮನಗಳನ್ನನುಸರಿಸಿ-ಶಿಕ್ಷಣ ಪ್ರಣಾಲಿ, ಪರೀಕ್ಷೆಗಳ ಏರ್ಪಾಟು ಮಾಡಲಾಗಿದೆ. ವಿದ್ಯಾಪೀಠದ ಮನ್ನಣೆಗೂ (Recognition) ಸರ್ಕಾರದ ಸಹಾಯಕ್ಕೂ ಯತ್ನಗಳು ಸಾಗಿವೆ. ವಿದ್ಯಾಪೀಠವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲ್ಲಿ-ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವದು. ಬಹುಕಾಲದವರೆಗೆ ಪ್ರೇಮನಿದ್ಯಾಪೀಠದಲ್ಲಿ ಶಿಕ್ಷಕರಾಗಿದ್ದವರೇ ಇಲ್ಲಿಯ ಪ್ರಾಧ್ಯಾಪಕರಾಗಿರುವರು S. S. L. C. ಯಾ ಮೆಟ್ರಿಕ್ ಮುಗಿಸಿದವರಿಗೆ ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷಣ ಹೊಂದಿದವರಿಗೆ ಪ್ರವೇಶಾರ್ಹತೆಯು ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0—1—6 ಸ್ಟ್ಯಾಂಪ್ ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ.
ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .. ..
....
....

Printed at Krishna Press Bellary QH No. B 17 FOR (Q.H. No. B-5.)
Edited & bliPushed by T. B. KESHAVA RAO

ಸಂಖ್ಯೆ ಪ. ೬. II

'ಪ್ರಭಾತ'

1947

ಪ್ರಭಾತ ಸಂಚಿಕೆ

3-7-1947

ಸಂಚಿಕೆಗಳು 2೬೦ಕ್ಕೆ ಏಳು

ಪ್ರತಿಗಳು 1೦೦ಕ್ಕೆ ೨೧೪.

ಜೈಹಿಂದ್ Reg. No. M. 4746

ನವಭಾರತ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಸಂಚಿಕೆ ೨೬ ಬಳ್ಳಾರಿ ಜೂಲೈ ೩ ಗುರುವಾರ ೧೯೪೭ ಸಂಪಾದಕ ಮತ್ತು ಪ್ರಕಾಶ ಟಿ. ಬಿ. ಕೇಶವರಾವ್.

Special Supplement

ಬಿಡುವು.

ಬರುವ ವಾರ 'ನವಭಾರತ' ಕಾರ್ಯಾಲಯಕ್ಕೆ ಬಿಡುವಿರುವ ಕಾರಣ ೧೪-೭-೪೭ ರ ಸಂಚಿಕೆಯಿಂದ ಹೊರಡುವುದು.

ಮಹಾತ್ಮ ಗಾಂಧಿ, ಪಂಡಿತ ಜವಹರಲಾಲ ರೂರವರು ಹರಿದ್ವಾರಕ್ಕೆ ಹೋಗಿ ಫ್ರಾಂಟಿಯರ್ ತ್ತು ಪಂಜಾಬುಗಳಿಂದ ಬಂದ ನಿರಾಶ್ರಿತರನ್ನು ರೂಧಾನಗೊಳಿಸಿ ಸಂತ್ರಸ್ತರ ಪರಿಹಾರಕ್ಕಾಗಿ ತಕ್ಕ ಸೂಚನೆಗಳನ್ನು ಸರ್ಕಾರಕ್ಕೆ ಕೊಟ್ಟು ದೆಹಲಿಗೆ ಮರ ಬಂದರು

ಜಿಲ್ಲಾ ಪ್ರಾಥಮಿಕೋಪಾಧ್ಯಾಯರಿಗೆ ಸೂಚನೆ

ನಿಮಗೆ ಪ್ರಮಾಣ ಪತ್ರವನ್ನು ಕಳುಹಿಸಲಾಗಿದೆ ಟುಗೂ ಐಕ್ಯವಾಗಿ ಪ್ರಾಂತದ ನಿಯಂತ್ರಣಕ್ಕೆ- ನಿದ್ದರೆ ನಮ್ಮ ಭವಿಷ್ಯವು ನಿರಾಶಿಯುದಾಗು ನಾವು ದಯವಿಟ್ಟು ತಮ್ಮ ಸಹಿಯನ್ನು ಮಾಡಿ ಅಜ್ಜೆರಿ.

ಮುಸ್ತಾನಸಾಹೇಬ್
ಕಾರ್ಯದರ್ಶಿ

ಹಿಂದೀ ಪರೀಕ್ಷೆಗಳ ಮಾಹಿತಿ

ಪ್ರಾರಂಭಿಕ ಪರೀಕ್ಷೆಗಳಾದ ಪ್ರಾಥಮಿಕ ಮಧ್ಯಮ ರಾಷ್ಟ್ರಭಾಷೆ, ಉನ್ನತ ಪರೀಕ್ಷೆಗಳಾದ ಪ್ರವೇಶಿಕ ವಿಶಾರದ ವಿಶೇಷಯೋಗ್ಯತ-ಇವು ಆಗಷ್ಟ 16—17 ರ ದಿನ ನಿಶ್ಚಿತ ಕೇಂದ್ರಗಳಲ್ಲಿ ನಡೆಯಲಿವೆ. ಪರೀಕ್ಷೆಗಳಿಗೆ ಕೂಡಲು ಇಚ್ಛಿಸುವರು. ಜೂಲೈ 10 ರ ಒಳಗಾಗಿ ತಮ್ಮ ಅರ್ಜಿಗಳನ್ನು ಶುಲ್ಕ ಸಮೇತವಾಗಿ ಕಳುಹಿಸಬೇಕು.

ಹಿಂದೀ ಪ್ರಚಾರ ಮಂದಿರ, ಬಳ್ಳಾರಿ.

ಅಕ್ಕಿಯ ಅಭಾವ

ಮದ್ರಾಸ್ ಪ್ರಾಂತದಲ್ಲಿ ಅಕ್ಕಿಯ ಪೊರ್ಯೆಕೆ ಸರಿಯಾಗಿ ಆಗುತ್ತಲಿಲ್ಲ. ಜಿಲ್ಲೆಗಳಿಂದ ಬೇಡಿಕೆಗಳು ಬರುತ್ತಲಿವೆ. ಜನರಿಗೆ ಈಗಾಗಲೆ ಕಡಮೆ ದೊರೆಯುತ್ತಲಿದ್ದು ಜನರು ಭಯಭೀತರಾಗಿದ್ದಾರೆ

ಜಾತೀಯ ಐಕ್ಯಕ್ಕೆ ಸಹಾಯ ಮಾಡಿರಿ

ಬಳ್ಳಾರಿ ಜಿಲ್ಲಾ ಮ್ಯಾಜಿಸ್ಟೇಟರು ವೃತ್ತ ಪತ್ರಿಕಾ ಸಂಪಾದಕರಿಗೆ ಜಾತೀಯ ಐಕ್ಯಕ್ಕೆ ಸಹಾಯ ಮಾಡಲು ಕೋರಿದರು.

In the Court of the District Judge, Bellary

O. P 39/47

In the matter of the estate of late Gummanur Hanumantha Rao (Giremma)

PUBLIC NOTICE.

The petitioner Gandhavidi Ramaiah of Hindupur, the assignee from G. Tirumala Rao brother's son of late Gummanur Hanumantha Rao of a mortgage debt due to the estate by S. Subhadramma and her son S. Raghavendra Rao of Bellary has made an application to the above court for the grant of a succession certificate in respect of the debt and the matter stands posted to 10—7—47 for hearing.

Anybody desiring to oppose may do so either in person or by a pleader on the said date before the above court at 10 A. M., failing which the matter will be decided ex-parte

B O of Court

B. K. GURURAJA RAO,

Pleader for Petitioner.

ಬಟ್ಟೆಗಳ ಕಂಟ್ರೋಲ್ ತೆಗೆಯಬೇಕೆಂದು ಬೊಂಬಾಯಿ ಪ್ರಾಂತದವರ ಅಭಿಪ್ರಾಯವಾದರೆ, ಅದು ಇರಬೇಕೆಂಬುದು ಉಳಿದ ಪ್ರಾಂತಗಳ ಅಭಿಮತ. ಇನ್ನೂ ಕೆಲ ತಿಂಗಳು ಚಿವ್ವಿ ಎಣ್ಣೆ ಪೆಟ್ರೋಲ್ ಕಂಟ್ರೋಲ್ ತೆಗೆಯಲು ಸಾಧ್ಯವಿಲ್ಲೆಂದು ಕೇಂದ್ರ ಸರಕಾರದವರು ಪ್ರಶಿದ್ಧಿಸಿರುತ್ತಾರೆ.

ಬಳ್ಳಾರಿ ಜಿಲ್ಲಾ ಜಡ್ಜರವರ ಕೋರ್ಟಿನಲ್ಲಿ

(ಒ ಪಿ. 39,47)

ದಿವಂಗತ ಗುಮ್ಮನೂರು (ಹನುಮಂತರಾವು) ಗಿರೆಮ್ಮ ಇವರ ಆಸ್ತಿ ವ್ಯವಹಾರದ ವಿಷಯವಾಗಿ

—ಸಾರ್ವಜನಿಕ ಪ್ರಕಟನೆ—

ಬಳ್ಳಾರಿ ವಾಸಸ್ಥರಾದ ಎಸ್. ಸುಭದ್ರಮ್ಮ, ಇವರ ಮಗ ರಾಘವೇಂದ್ರರಾವು ಇವರಿಬ್ಬರು ಸೇರಿ ಲೇಟು ಗಿರೆಮ್ಮನವರಿಗೆ ಬರೆದುಕೊಟ್ಟ ತೋರಾಯಕ ಪತ್ರದ ಬಾಕಿಯನ್ನು, ಹಿಂದೂಪುರದ ಗಂಧವಿದಿ ರಾಮಯ್ಯನವರು ಕ್ರಮವಾದ ಪ್ರತಿಫಲಕ್ಕೆ, ಲೇಟು ಗುಮ್ಮನೂರು ಹನುಮಂತರಾಯರ ತಮ್ಮನ ಮಗ ಜಿ. ತಿರುಮಲರಾಯರಿಂದ ಟ್ರಾನ್ಸ್ಫರು ಹೊಂದಿ, ಸದರಿ ಬಾಕಿ ವಸೂಲಿಗಾಗಿ ಮೇಲ್ಕಂಡ ಕೋರ್ಟಿನಲ್ಲಿ ವಾರಸತ್ವದ ಸರ್ಟಿಫಿಕೇಟು ಹೊಂದುವಬಗ್ಗೆ ಅರ್ಜಿ ದಾಖಲು ಮಾಡಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯು 10-7-47 ಕ್ಕೆ ವಾಯ್ದೆ ಇದೆ.

ಇದನ್ನು ವಿರೋಧಿಸುವ ಉದ್ದೇಶವುಳ್ಳವರಾರಾದರೂ ಇದ್ದಲ್ಲಿ, ಅವರು ತಾವು ಸ್ವತಃ ಅಥವಾ ವಕೀಲರ ಮೂಲಕವಾಗಲಿ ಸದರಿ 10-7-47 ನೆಯ ದಿನ ಉದಯ 10 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಬೇಕು ಇಲ್ಲವಾದರೆ ಇದರ ವಿಷಯವಾದ ತೀರ್ಮಾನವು ಅವರ ಸಮೋಕ್ಷದಲ್ಲಿ ಆಗಲಿರುವದೆಂದು ಈ ಮೂಲಕ ತಿಳಿಸೋಣವಾಗಿದೆ.

(ಕೋರ್ಟಿನವರ ಉತ್ತರದ ಪ್ರಕಾರ)

ಬಿ. ಕೆ. ಗುರುರಾಜರಾವು

ಅರ್ಜಿದಾರರ ವಕೀಲರು

ಮದ್ರಾಸ್ ಪ್ರಾಂತದವರು ಮತ್ತೆ ಎಂಟು ಜಿಲ್ಲೆಗಳಲ್ಲಿ ಪಾನ ನಿಷೇಧ ಮಾಡಲಿರುವರು.

ಘಟನಾ ಸಮಿತಿ ಸದಸ್ಯರಾದ ಮದ್ರಾಸ್ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಯಾಗಿದೆ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:—** ಅನಂತಪುರ, ಧೂರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:—** ಕರ್ನೂಲು:— ಪತ್ತಿಕೊಂಡ.
ಕಡಪ:— ರಾಜಂಪೇಟೆ, ಕಡಪ, **ಚಿತ್ತೂರು,—** ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ. ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Etc. Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಬಟ್ಟೆಗಳು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂನ್ದು. ಪರೀಕ್ಷಿಸಿ ಮನಗಾಣರಿ.

ಪಠಾಣಿಸ್ತಾನ.

ಸರಹದ್ದು ಪ್ರಾಂತದಲ್ಲಿನ ಜನರು ಪಾಕಿಸ್ತಾನವನ್ನು ಸೇರುವರೋ, ಉಳಿದ ಭಾಗವನ್ನು ಸೇರುವರೋ ಎಂಬ ಬಗ್ಗೆ, ಜನಮತ ಗಣನೆಯಾಗಲಿದೆ. ಅದು ಈ ವಾರ ನಡೆಯಲಿದೆ. ಫ್ರಾಂಟಿಯರ್ ಕಾಂಗ್ರೆಸ್ ಸಮಿತಿ, ಖುದಾಯಿ ಖಿದ್ಮತಗಾರ ಸಂಸ್ಥೆ ಮತ್ತು ಜಲ್ಮೇ ಫಕ್ತೂನ್ ಎಂಬ ಹೊಸ ಸಂಸ್ಥೆ ಖಾನ ಅಬ್ದುಲ ಗಫರಖಾನರಿಗೆ ಅಧಿಕಾರಕೊಟ್ಟು, ಅವರ ಮಾರ್ಗದ ರ್ಶನವನ್ನು ಬೇಡಿತ್ತು. ಈ ಗಖಾನ ಅಬ್ದುಲ್ ಗಫರಖಾನರವರು ಒಂದು ಹೇಳಿಕೆಯನ್ನು ಹೊರಡಿಸಿ ಈ ಮತಗಣನೆಯನ್ನು ತಾವು ಬಹಿಷ್ಕರಿಸಿರುವುದಾಗಿ ಘೋಷಿಸುತ್ತಾರೆ. ಜನಾಭಿಪ್ರಾಯವನ್ನು ತಾವು ಬೇಡಿರುವುದಾಗಿಯೂ ಪೊರಕರುವುದಾದರೂ ಮುಂದೆ ಪ್ರಾಂತದ ಏಕೀಕರಣವಾಗಿಕೊಳ್ಳಬೇಕಾಗಿದೆ.

ಬೊಂಬಾಯಿ ಪ್ರಾಂತದಲ್ಲಿ ಆರು ವಾರಗಳಿಗಾಗುವಷ್ಟು ಮಾತ್ರ ಆಹಾರವಿದೆಯಂತೆ. ಅಲ್ಲಿನ ಸೀದಾದಲ್ಲಿ ಕಡಮೆಯಾಗುವದೆಂದು ಆಹಾರ ಮಂತ್ರಿಗಳು ತಿಳಿಸಿದ್ದಾರೆ.



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. . BUSANJEE RAO. M VENKOJI RAO
General Merchants, Car Street Bellary.

2 M/S. V. M. GIRI & SONS,
(Pro:- M, S Acharya) Car Street, Bellary

ಶುದ್ಧ ! ಗ್ಯಾರಂಟಿಯಾದ್ದು !! ಸತ್ಪಕಾರ !!!

— ಪೈರ ಎಳ್ಳೆಣ್ಣೆ —

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು. ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿಡಬಹುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್, ಎಂ ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ. ಎಂ ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

ಈ ವಿದ್ಯಾಪೀಠವು 15—7—1947 ಕ್ಕೆ ಪ್ರಾರಂಭವಾಗಲಿದೆ. ಗವರ್ನಮೆಂಟು ರಿಜಿಸ್ಟ್ರೇಷನ್ ಪಡೆಯಲು ಅರ್ಹವಾಗುವಂತೆ (Board of Indian Medicine Madras) ಮದ್ರಾಸ್ ಸರ್ಕಾರದ ನಿಯಮಗಳನ್ನನುಸರಿಸಿ-ಶಿಕ್ಷಣ ಪ್ರಣಾಲಿ, ಪರೀಕ್ಷೆಗಳ ಏರ್ಪಾಟು ಮಾಡಲಾಗಿದೆ. ವಿದ್ಯಾಪೀಠದ ಮನ್ನಣೆಗೂ (Recognition) ಸರ್ಕಾರದ ಸಹಾಯಕ್ಕೂ ಯತ್ನಗಳು ಸಾಗಿವೆ. ವಿದ್ಯಾಪೀಠವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲ್ಲಿ-ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವದು. ಬಹುಕಾಲದವರೆಗೆ ಪ್ರೇಮವಿದ್ಯಾಪೀಠದಲ್ಲಿ ಶಿಕ್ಷಕರಾಗಿದ್ದವರೇ ಇಲ್ಲಿಯ ಪ್ರಾಧ್ಯಾಪಕರಾಗಿರುವರು S. S. L. C ಯಾ ಮೆಟ್ರಿಕ್ ಮುಗಿಸಿದವರಿಗೆ ಅಥವಾ ಅದಕ್ಕಿಂತ ಹೆಚ್ಚಿನ ಶಿಕ್ಷಣ ಹೊಂದಿದವರಿಗೆ ಪ್ರವೇಶಾರ್ಹತೆಯು ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0—1—6 ಸ್ಟ್ಯಾಂಪ್ ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ,
ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... .. ..
....
... .

Printed at Krishna Press Bellary QH No. B 17 FOR (Q.H No. B-5.)
Edited & bliPushed by T. B. KESHAVA RAO

ಜೈಹಿಂದ್ Reg. No. M. 4746

ಕರ್ನಾಟಕ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂಪುಟ ೬ ಬಳ್ಳಾರಿ ಜೂಲೈ ೧೪ ಸೋಮವಾರ ೧೯೪೬ ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ ೩೭ ಟಿ. ಬಿ. ಕೇಶವರಾವ್.

ಡಾ|| ಎಸ್. ಎನ್. ತಾರಾನಾಥ ಸಿಯುವರು.

ಇವರ ಸಾರಕಕ್ಕಾಗಿ ತೀಘ್ರವಾಗಿ ಬಳ್ಳಾರಿಯಲ್ಲಿ ತಾರಾನಾಥ ಆಯುರ್ವೇದ ವಿದ್ಯಾಪೀಠವು ಸ್ಥಾಪಿತವಾಗಲಿದೆ.

ಮದ್ರಾಸ್ ಜಿಲ್ಲೆಗಳಲ್ಲಿ 1947 ರಲ್ಲಿ S. S. L. G. ಪರೀಕ್ಷೋತ್ತೀರ್ಣ ಮತ್ತು ಕಾಲೇಜ್ ವ್ಯಾಸಂಗಕ್ಕೆ ಅರ್ಹರಾದವರ ಸಂಖ್ಯೆ [18000]

	ಜಿಲ್ಲೆಗಳ ಹೆಸರು	ಪರೀಕ್ಷೆಗೆ ಕೂತವರು	ಉತ್ತೀರ್ಣರಾದವರು	ಶೇಕಡ ಪ್ರಮಾಣ
1	ಮಲಬಾರ್	3822	1828	48
2	ಮದ್ರಾಸ್	3234	2011	62
3	ತಂಜಾವೂರು	2699	1472	55
4	ಕೃಷ್ಣಾ	2290	894	39
5	ಗುಂಟೂರು	2103	1027	49
6	ಪೂರ್ವಗೋದಾವರಿ	2027	1018	49
7	ಮಧುರ	1824	1086	59
8	ತಿನ್ನವೆಲ್ಲಿ	1778	1053	59
9	ದಕ್ಷಿಣ ಕನ್ನಡ	1753	1114	64
10	ವಿಶಾಖಪಟ್ಟಣ	1628	796	49
11	ತಿರುಚುನಾಪಲ್ಲಿ	1554	1045	67
12	ಪಶ್ಚಿಮಗೋದಾವರಿ	1487	647	44
13	ಕೊಯಂಬತ್ತೂರು	1417	861	61
14	ಉತ್ತರ ಆರ್ಕಾಟು	1463	673	53
15	ರಾಮನಾಡು	1156	762	66
16	ನೆಲ್ಲೂರು	1035	506	49
17	ಸೇಲಂ	832	516	62
18	ದಕ್ಷಿಣ ಆರ್ಕಾಟು	860	425	49
19	ಚಿತ್ತೂರು	775	396	51
20	ಚಂಗಲ್ಪಟ್	726	432	59
21	ಅನಂತಪುರ	623	254	41
22	ಬಳ್ಳಾರಿ	553	236	43
23	ಕರ್ನೂಲು	553	223	40
24	ಕಡಪ	433	214	49
25	ಪುದುಕೋಟಿ	387	188	49
26	ಬೆಂಗಳೂರು	286	202	71
27	ಕೊಡಗು	175	102	58
28	ನೀಲಗಿರಿ	191	89	52
	ಒಟ್ಟು ಮೊತ್ತ	37464	18080	48

47



10th year of Publication.
Monday, 14th July 1947

ಅಕ್ಕಿಯ ಸೀದಾ ಮತ್ತೆ ಕಡಮೆಯಾಯಿತು.

ಮದ್ರಾಸ್ ಸರ್ಕಾರದವರು ಪ್ರಾಂತದಲ್ಲಿ 13—7—47 ರಿಂದ ಅಕ್ಕಿಯ ರೇಷನ್ 10 ಔನ್ಸ್‌ಗಳಿಂದ 8 ಔನ್ಸ್‌ಗಳಿಗೆ ಇಳಿಸಿರುವುದು ಶೋಚನೀಯವಾಗಿದೆ. ಕಳೆದೆರಡು ತಿಂಗಳುಗಳಲ್ಲಿ ಎರಡು ಸಲ ಅಕ್ಕಿಯ ಪ್ರಮಾಣವನ್ನು ತಗ್ಗಿಸಿರುವರು. ಗೋಧಿಯೂ—ಬೇರೊಂದು ಆಹಾರ ವಸ್ತುಗಳು ದೊರೆಯದಿರುವ ಈ ಕಠಿಣ ಕಾಲದಲ್ಲಿ 'ಜನತೆಯ—ಆಹಾರ'ವೊಂದಿಗೆ ಸರ್ಕಾರದವರು ನಿಷ್ಠುರವಾಗಿ ವರ್ತಿಸುತ್ತಿರುವುದು ಅಕ್ಷಮ್ಯವಾಗಿದೆ. ಹಳ್ಳಿಯ ಭಾಗದಲ್ಲಿ ನೆಲಗಡಲೆ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಲೂಗಡ್ಡೆಯನ್ನು ಕಡಮೆಯಾದುದಕ್ಕೆ ಕೊಡುವರೆಂದು ಪ್ರಕಟಿಸಿರುತ್ತಾರೆ. 2-3 ವರ್ಷಗಳಿಂದ ಸಾಕಷ್ಟು ಪ್ರಮಾಣದ ಮತ್ತು ಸಾಯಾದ ಆಹಾರವನ್ನು ದೊರೆಯದೆ ಹಳ್ಳಿಯ ಪ್ರದೇಶಗಳಲ್ಲಿ ಜನತೆಯ ಆರೋಗ್ಯವು ಕೆಟ್ಟಿದೆ. ಪೌಷ್ಟಿಕಾಂಶ ಸತ್ವವನ್ನು ಕೊಡುವ ಆಹಾರ ವಸ್ತುಗಳ ಅಭಾವದಿಂದ ಜನರು ಕಂಗೆಟ್ಟು ನಿರ್ವೀರ್ಯರಾಗಿದ್ದಾರೆ. ಪಟ್ಟಣಗಳಲ್ಲಿ ಅಲ್ಪವರಮಾನದ ಮತ್ತು ಮಕ್ಕಳೊಂದಿಗಿರುವ ಕುಟುಂಬಸ್ಥರು—ಕುಟುಂಬ ಭರಣೆ ಮಾಡಲಾರದೆ ಕಂಗೆಟ್ಟು ಹೋಗಿರುವರು. ಅವರಿಗೆ ವಾರದಲ್ಲಿ ಒಂದೆರಡು ದಿನಗಳ ಉಪವಾಸ ತಪ್ಪಿದ್ದಲ್ಲ. ದೊಡ್ಡವರು ಉಪವಾಸವಿದ್ದು, ಅಷ್ಟೇ ಪ್ರಮಾಣದ ಆಹಾರವನ್ನು ದಿನಕ್ಕೊಂದೆರಡು ಸಲ ಬೇಡುವ ಮಕ್ಕಳಿಗೆ ಇಡುವರು. ಈ ವಾತಾವರಣವೇ ಭೀಕರವಾಗಿದೆ.

ಜನಸಾಮಾನ್ಯರು ಆಹಾರ, ಬಟ್ಟೆಗಳ ಕೊರತೆಗೆ ಕಾರಣವಾದ ಸರ್ಕಾರದ ಬಾಧ್ಯತೆಯನ್ನು ಪ್ರಶ್ನಿಸುವ ಇಡೀ ಹಿಂದೂಸ್ತಾನದಲ್ಲಿ ಆಹಾರ ಧಾನ್ಯಗಳ ಅದರಲ್ಲೂ ಅಕ್ಕಿಯ ಕೊರತೆಯಿದೆ ಎಂಬುದನ್ನು ಜನತೆಯು ಗುರ್ತಿಸುವುದಿಲ್ಲ. ಧಾನ್ಯ ಸಂಗ್ರಹ ಗುದಾಮುಗಳಲ್ಲಿ ಧಾನ್ಯವೆಷ್ಟಿದೆ. ? ಸಂಗ್ರಹವೆಷ್ಟಾಗಿದೆ ಮತ್ತು ಎಷ್ಟಾಗಲಿದೆಯೆಂಬ ಲೆಕ್ಕವು ಸರಕಾರದಲ್ಲಿ ತಪ್ಪಿದೆಯೆಂದು ನಮ್ಮ ಭಾವನೆ. ಸರಕಾರಕ್ಕೆ ಅಂಕೆ—ಸಂಖೆಗಳ ಲೆಕ್ಕವು ಮೊದಲೇ ತಿಳಿದಿದ್ದರೆ, ಪರಪ್ರಾಂತಗಳಿಂದ ಸಾಕಷ್ಟು ಪೂರ್ವದಲ್ಲಿ ಧಾನ್ಯಗಳನ್ನೇಕೆ ತರಿಸಲಿಲ್ಲವೋ ಊಹಿಸಲಸಾಧ್ಯವಾಗಿದೆ. ಬೊಂಬಾಯಿ ಮತ್ತು ಇತರ ಪ್ರಾಂತಗಳಲ್ಲಿ ಸಂಬಂಧಿಸಿದ ಪ್ರಾಂತೀಯ ಅಧಿಕಾರಿಗಳು ಸಾಕಷ್ಟು ಎಚ್ಚರಿಕೆ ತೆಗೆದುಕೊಂಡಿರುವರು. ಇತರ ಪ್ರಾಂತಗಳಲ್ಲಿನ ಪರಿಸ್ಥಿತಿಯು ಇಷ್ಟು ಕೆಟ್ಟಿಲ್ಲ.

ಒಟ್ಟಿನಲ್ಲಿ ಆಹಾರ ಬಟ್ಟೆಗಳನ್ನು ಜನತೆಗೆ ಸಾಕಷ್ಟು—ಸರಿಯಾಗಿ ಪೂರೈಕೆ ಮಾಡದಿರುವ ನಿಸ್ಸಹಾಯ ಪರಿಸ್ಥಿತಿಯು ಕಾಂಗ್ರೆಸ್ ಸರ್ಕಾರಕ್ಕೆ ಒಂದು ಸಂಸ್ಥೆಯು ಜನಪ್ರಿಯವಾಗದೆ, ಅದರ ವಿಷಯಕ್ಕೆ ಅನಿಷ್ಟಭಾವನೆಯು ಹಬ್ಬುತ್ತಿರುವುದು ಸಾಮಾನ್ಯವಾಗಿ ಎಲ್ಲರಿಗೂ ಗೋಚರವಾಗುತ್ತಲಿದೆ. ಸರ್ಕಾರದವರು ಆಹಾರ ಧಾನ್ಯಗಳನ್ನು ಬೆಳೆಯುವ ರೈತರಿಗೆ ನೆಲ್ಲಿನ ಬೆಲೆಯನ್ನು ಹೆಚ್ಚಿಸಿ ಕೊಳ್ಳುವವರಿಗೆ ಕಷ್ಟವನ್ನುಂಟುಮಾಡುವದಿಲ್ಲವೆಂದು ಹೇಳಿದರು. ಆದರೆ ಈಗ ಹೆಚ್ಚಿಸಿದರು. ಒಂದು ಆಜ್ಞೆ ಮಾಡುವುದು, ತಕ್ಷಣದಲ್ಲೇ ಅದನ್ನು ಬದಲಾಯಿಸುವುದು. ಈಗಿನ ಸರ್ಕಾರದ ವೈಶಿಷ್ಟ್ಯವಾಗಿದೆ. ಇದಕ್ಕೆ ಪರಿಸ್ಥಿತಿಯು ಕಾರಣವೋ, ಮಂತ್ರಿಗಳ ಜಾಣತನದ ಅಭಾವವೋ, ಹೇಳಲಿಕ್ಕೆ ಬರುವಂತಿಲ್ಲ.

ಈಗ ಕಡಮೆ ಮಾಡಿರುವ ಧಾನ್ಯವನ್ನು ಶೀಘ್ರವಾಗಿ ಮತ್ತೆ ಪೂರ್ವ ಪ್ರಮಾಣಕ್ಕೆ ತರಲಿರುವರೆಂದು ಪ್ರಕಟವಾಗಿರುವುದು ಸತ್ಯವಾಗಲೆಂದು ನಮ್ಮ ಬಯಕೆ–ಆದರೂ, ನವಂಬರ್ ತಿಂಗಳವರೆವಿಗೆ ಜನತೆಯು ಹೇಗೆ ಕಾಲಕಳೆಯಬೇಕೋ ತಿಳಿಯದಾಗಿದೆ ಸರಕಾರವು ಶೀಘ್ರವಾಗಿ ಪೂರ್ವಪ್ರಮಾಣದ 12— ಔನ್ಸ್ ಆಹಾರವನ್ನು ಜನತೆಗೆ ಒದಗಿಸಲು ಸರ್ವವಿಧದ ಪ್ರಯತ್ನಗಳನ್ನು ಮಾಡಬೇಕೆಂದು ನಾವು ಆಗ್ರಹ ಪೂರ್ವಕವಾಗಿ ಸೂಚಿಸುತ್ತೇವೆ.

ಮದ್ರಾಸ್ ಪ್ರಾಂತದ
ಲೇಬರ್ ಕಮೀಶನರ್‌ರವರ
ಉತ್ತರಗಳು

ತಮ್ಮನ್ನು 3-7-47 ನೆಯ ತಾ॥ ಬಂದು ಕಾಣಬೇಕೆಂದು ಲೇಬರ್ ಕಮಿಶಾನರ್‌ರವರು ತಿಳುಹಿಸಿದ ಕಾರಣ ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರು ಸಂಘದ ಅಧ್ಯಕ್ಷರಾದ ಶ್ರೀ ಟಿ. ಬಿ. ಕೇಶವರಾಯರು 3ನೆಯ ತಾ. ಮದ್ರಾಸ್ ಪ್ರಾಂತದ ಲೇಬರ್ ಕಮೀಶನರ್ ಆದ ಶ್ರೀ ರಾವಸಾಹೇಬ ಶಿ. ಜಿ. ರೆಡ್ಡಿಯವರನ್ನೂ, ಅವರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ವಿ. ಬಾಲಸುಂದರಂರವರನ್ನೂ, ಮದ್ರಾಸಿನ ಕಛೇರಿಯಲ್ಲಿ ಕಂಡು ಲೇಬರ್ ಶಾಲೋಪಾಧ್ಯಾಯರ ಮತ್ತು ಹರಿಜನಸಮಸ್ಯೆಗಳನ್ನು ಕುರಿತು ದೀರ್ಘವಾಗಿ ಚರ್ಚಿಸಿದರು.

ಸಂಕ್ಷಿಪ್ತವಾಗಿ ಮುಖ್ಯಾಂಶಗಳು ಹೀಗಿವೆ—

"ಉಪಾಧ್ಯಾಯರಿಗೆ ಬರಬೇಕಾದ ಸ್ಕೇಲ್ ಆಫ್‌ಪೇ ಇಕ್ವಿಮೆಂಟ್, ಮತ್ತು T. A ವಿಷಯಕ್ಕೆ ಕಲೆಕ್ಟರವರೇ ಎಲ್ಲಾ ನ್ಯಾಯವಾದ ರೀತಿಯಲ್ಲಿ ನಿರ್ಣಯಿಸಲು ಬರುತ್ತದೆ. ಈಗಿನ ಪರಿಸ್ಥಿತಿಯನ್ನನುಸರಿಸಿ ಶಾಲೆಗಳಿಗೆ ಬೇಕಾದ ಫಾರ್ಮುಗಳು, ಫರ್ನೀಚರ್ ಮತ್ತು ಹೆಚ್ಚಿನ ಕಂಟ್ರಿಜನ್ಸಿ ಅಲೋಯನ್ಸ್‌ಗಾಗಿ ಬೇಕಾದ ಹೆಚ್ಚಿನ ಹಣಕ್ಕಾಗಿ ಕಲೆಕ್ಟರವರು ನಮ್ಮಲ್ಲಿ ಬೇಡಿಕೆ ಕಳುಹಿಸಿದರೆ, ನಾವು ಅದನ್ನು ಸಹಾನುಭೂತಿಯಿಂದ ಪರಿಶೀಲಿಸಿ ಸಹಾಯ ಮಾಡಲಿಕ್ಷಿಸುತ್ತೇವೆ. ವಾರದಲ್ಲಿ 6 ದಿನಗಳು ಮಧ್ಯಾನ್ಹದ ಊಟಕೊಡಲು ಸರ್ಕಾರಕ್ಕೆ ಸಿಫಾರಸು ಮಾಡುತ್ತೇವೆ ಬಂದೊಡನೆ ಜಾರಿಯಲ್ಲಿ ತರಬಹುದು ಸಣ್ಣ ಪುಟ್ಟ ಬೇಡಿಕೆಗಳನ್ನೆಲ್ಲಾ ಕಲೆಕ್ಟರವರೇ ಬಗೆಹರಿಸಬಹುದು"

"ಇನ್ನು ನಿಮ್ಮ ಸಂಘದ ಮಾನ್ಯತೆ (Recognation) ಯ ವಿಷಯಕ್ಕೆ ಸರ್ಕಾರದ ನಿಯಮಗಳನ್ನು ನಾವು ಪಾಲಿಸಬೇಕಾಗುತ್ತದೆ. ಆದರೆ ನೀವು ಹೇಳುವಂತೆ **ರಾಜಕೀಯಕ್ಕೆ ಸಂಬಂಧವಿಲ್ಲದ ಹರಿಜನ ಸೇವಕಸಂಘದ ಕಾರ್ಯಕರ್ತರು ಸಂಘದ ಅಧ್ಯಕ್ಷರಾಗಲು ನಮ್ಮ ಆಡ್ಡಿಇಲ್ಲ. ನೀವು ಆಪ್ಲಿಕಾರ ತೀರ್ಮಾನಿಸಿ ಕಳುಹಿಸಿರಿ. ಸರ್ಕಾರಕ್ಕೆ ಸಿಫಾರ್ಸು ಮಾಡುತ್ತೇವೆ. ಅವರ ಸ್ವೀಕೃತಿಬಂತೆಂದರೆ ನಿಮ್ಮ ಸಂಘವನ್ನು ಮಾನ್ಯಮಾಡುತ್ತೇವೆ**'

ಇನ್ನು ಹರಿಜನೋದ್ಧಾರಕ್ಕೆ ಬೇಕಾದ ಹಣವನ್ನು ಈಗಿನ ನಿಯಮಗಳನ್ವನುಸರಿಸಿ ಕಲೆಕ್ಟರ್‌ರವರು ಕೇಳಬಹುದು. ಭಾವಿಗಳ ಅಂದಾಜಾಪಟ್ಟಿ (Estimates) ಬಂದರೆ ಕೇಳಿದಷ್ಟು ಹಣಕೊಡುತ್ತೇವೆ ಅನೇಕ ವರ್ಷಗಳಲ್ಲಿ ನಾವು ಸ್ಯಾಂಕ್ಷನ್ ಮಾಡಿದಹಣ ಖರ್ಚಾಗದೆ ಉಳಿದುಹೋಗಿದೆ. ಸರ್ಕಾರದವರು ಹರಿಜನೋದ್ಧಾರಕ್ಕಾಗಿ ಸಲವೆ ಸೂಚನೆಗಳನ್ನು ಕೊಡಲು ಒಂದು ಸಮಿತಿಯನ್ನು ನಿರ್ಮಿಸಿರುತ್ತಾರೆ. ಅವರ ಸಲಹೆಗಳನ್ನು ಸರ್ಕಾರವು ಮಾನ್ಯ ಮಾಡುವುದರಲ್ಲಿ ಸಂಶಯವಿಲ್ಲ

ಹೈದ್ರಾಬಾದ ಸಂಸ್ಥಾನದ ವಾರಂಗಲ್ಲಿನಲ್ಲಿ ಜಾತೀಯ ಗಲಭೆಯಾಗಿ ಹಿಂದೂಗಳು ಬೆಜವಾಡ ಪ್ರಾಂತಕ್ಕೆ ಓಡಿ ಬಂದಿರುವರೆಂದು ಪ್ರಕಟವಾಗಿದೆ. ಪೋಲೀಸರು ಗುಂಡುಹಾರಿಸಿದ ಕಾರಣ ೨ ಜನರು ಸತ್ತಿರುವರು.

ರಾಯಲಸೀಮೆ ಆಂಧ್ರಕ್ಕೆ

ಗೋಪಾಲರೆಡ್ಡಿಯವರ ವಾದ

ಪ್ರಾಂತ ನಿರ್ಮಾಣದ ನಂತರ ಬಳ್ಳಾರಿ ಮತ್ತು ಅನಂತಪುರದ ಕೆಲಭಾಗಗಳು ಕರ್ನಾಟಕ ಪ್ರಾಂತಕ್ಕೆ ಹೋಗುತ್ತವೆ. ಉಳಿದ ಜಿಲ್ಲೆಗಳವರಿಗೆ ಹೊಸವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಸಾಧ್ಯವೇ ಇಲ್ಲ. ಈ ಕಾರಣ ರಾಯಲಸೀಮೆಯವರು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಬೇಕಾದುದು ಯುಕ್ತವಾಗಿದೆ.

ಖಾದಿ ಉತ್ಪತ್ತಿ—ಸರ್ಕಾರದ ಸಹಾಯ

ಅಖಿಲ ಭಾರತ ಚರಖಾಸಂಘದ ಶ್ರೀ ಕೃಷ್ಣದಾಸ್ ಜಾಜೂಜಿಯವರು ಮದ್ರಾಸಿಗೆ ಬಂದಾಗ ಖಾದಿಯ ಯೋಜನೆಯನ್ನು ಸಾಫಲ್ಯಗೊಳಿಸಲು ಮುಖ್ಯ ಮಂತ್ರಿ ಮತ್ತು ಔದ್ಯೋಗಿಕ ಮಂತ್ರಿಗಳೊಡನೆ ವಿಚಾರ ವಿನಿಮಯಮಾಡಿದರು. ಈ ಕಾಲಕ್ಕೆ ಆಂಧ್ರ ತಮಿಳು ಮತ್ತು ಕೇರಳ ಚರಖಾಸಂಘದ ಕಾರ್ಯದರ್ಶಿಗಳು ಹಾಜರಿದ್ದರು. ಸರಕಾರದವರು ತಮ್ಮ ಸಹಾಯ ಕೊಡಲು ನಿಶ್ಚಯಿಸಿರುವರು.

ಸರ್ಕಾರದ ಸಾರಿಗೆ ವ್ಯವಸ್ಥೆ

ಪಂಚ ವಾರ್ಷಿಕ ಯೋಜನೆ

ದೇಶದಲ್ಲಿರುವ ಖಾಸಗಿ ಮಾಲೀಕರನ್ನೆಲ್ಲಾ ತೆಗೆದು ಐದು ವರ್ಷಗಳೊಳಗಾಗಿ ಮೋಟಾರ ಬಸ್‌ಗಳನ್ನು ನಡೆಸುವ ವ್ಯವಸ್ಥೆಯನ್ನು ಮದ್ರಾಸ್ ಸರ್ಕಾರವು ವಹಿಸುವುದೆಂದು ಪ್ರಕಟವಾಗಿದೆ. ಶೇಕಡಾ 20 ಭಾಗದ ಬಸ್‌ಗಳನ್ನು ವರ್ಷ ವರ್ಷವೂ ವಹಿಸುವದೆಂದು ಹೇಳಲಾಗಿದೆ.

ಶತವಾರ್ಷಿಕ ವರ್ಧಂತಿ

ಡಾಕ್ಟರ್ ಅನಿಬಿಸೆಂಟರ್‌ರವರ ಶತವಾರ್ಷಿಕ ವರ್ಧಂತ್ಯುತ್ಸವವು ಬಳ್ಳಾರಿ ಸನ್ಮಾರ್ಗ ಸಮಾಜ ಭವನದಲ್ಲಿ 6—7—47 ನೆಯ ಸಾಯಂಕಾಲ ಶ್ರೀ ಬೆಲ್ಲೂಣ ಭೀಮರಾಯರಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಶ್ರೀ ಕೆ. ನಾರಾಯಣರಾವ್‌ರೂ, ಅಧ್ಯಕ್ಷರೂ ಡಾ. ಬೆಸೆಂಟರ ದೂರದೃಷ್ಟಿ, ದೇಶಸೇವೆ—ಹಿಂದೂ ಧರ್ಮಪ್ರೇಮ ಮೈರೆ ವರ್ಣಿಸಿ ಗುಣಗಾನ ಮಾಡಿದರು.

ಗ್ರಾಮ ಆಹಾರ ಸೀದಾಅಂಗಡಿ

ಬಾಯಿಲೆ ಬಸಪ್ಪ ಕೈಲೆ ವಿಷಪ್ಪ— ಹಳ್ಳಿಗಳ ಸೀದಾ ಅಂಗಡಿಗಳು ಬಹಳ ದಿವಾಳಿ ಆಗಿವೆ. ಆಹಾರ ಧಾನ್ಯ ಇಲ್ಲದಂತಾಗಿದೆ ಹದಿನೈದು ದಿನಗಳಿಗಾಗುವಷ್ಟು ಧಾನ್ಯ ಯಾವಾಗಲೂ ನಿಧಿ ಇರಬೇಕೆಂಬ ನಿಯಮವಿದ್ದು, ಹದಿನೈದು ದಿನಗಳಾದರೂ ಸೀದಾ ಹಂಚುವಿಕೆಇಲ್ಲಾ ಬಾಯಿಲೆ ಬಸಪ್ಪ ಕೈಲೆ ವಿಷಪ್ಪ ಅಲ್ಲವೇ? ಈ ಹಳ್ಳಿಗಳ ಗೋಳು ಕೇಳುವರ್ಯಾರು? ಸರಕಾರವು ಒತ್ತಾಯದಿಂದ ಕಾಳು ಕೇಳುತ್ತಲೂ ಸುಲಿಗೆ ವಸೂಲಿ ಮಾಡುತ್ತಲೂ ಇದೆ. ಸುಲಿಗೆ ನಡಿಸಿದಂತೆ ಹಂಚುವಿಕೆ ಏಕೆ ಇಲ್ಲಾ? ಸುಲಿಗೆ ಪದ್ಧತಿ ಜಾರಿಯಲ್ಲಿದ್ದುದಾದರೆ ಗ್ರಾಮಸಂಘಗಳೇಕೆ? ಗ್ರಾಮ ಸಂಘಗಳ ಕೊಲೆಮಾಡಬೇಕೆಂಬ ಉದ್ದೇಶವೇನಾದರೂ ಇದೆಯೇ? ಪಟ್ಟಣಿಗರ ತಾಲ್ಲೂಕುಗಳ ವ್ಯವಸ್ಥೆಯಂತೆ ಹಳ್ಳಿಗಳ ವ್ಯವಸ್ಥೆಮಾಡುವ ಮಹಸೀಮರು ಇರುವರೇ? ಇದ್ದುದಾದರೆ ಹಳ್ಳಿಗಳ ಕಡೆ ಲಕ್ಷ್ಯಕೊಡುವಿರಾ?

ಶೆಟ್ರಿ ಕೊಟ್ರಬಸಪ್ಪ,
ಓರ್ವ ಗ್ರಾಮ ಸೀದಾಸಂಘ ಸದಸ್ಯ.

ಬೀರಾರ ಪ್ರಾಂತವನ್ನು ಬರಮಾಡಿಕೊಳ್ಳಲು ಹೈದರಾಬಾದ ನಿಜಾಮರು ದೆಹಲಿ ಪ್ರಭುತ್ವದವರ ಬಳಿ ವಿಚಾರ ವಿಮರ್ಶೆಗಾಗಿ ಒಂದು ಶಿಷ್ಟಮಂಡಲವನ್ನು ಕಳುಹಿಸಲಿದ್ದಾರೆಂದು ಸೊನ್ನಾಗಿರಿ ಕೇಂದ್ರದ ಕಾಂಗ್ರೆಸ್ ಪ್ರಭುತ್ವವು ಇದನ್ನು ವಿರೋಧಿಸಲಿದೆ.

ನಮ್ಮ ರಾಷ್ಟ್ರಧ್ವಜ

ಈಗಿರುವ ನಮ್ಮ ರಾಷ್ಟ್ರಧ್ವಜದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಾಗಿ ಹೊಸಧ್ವಜವು ಆಗಷ್ಟ 15 ಕ್ಕೆ ಜಾರಿಯಲ್ಲಿ ಬರಲಿದೆ.

ಬಳ್ಳಾರಿ ಜಿಲ್ಲಾ ವಾಲ್ಮೀಕಿ ನಾಯಕರ ಮಹಾಸಭೆ.

— ಕೊಟ್ಟೂರು —

ಕಳೆದ ತಿಂಗಳು 30 ನೆಯ ತಾ|| ನಡೆದ ಸಭೆಯಲ್ಲಿ ಬಳ್ಳಾರಿ ಜಿಲ್ಲಾ ವಾಲ್ಮೀಕಿ ನಾಯಕರ ಮಹಾಸಭೆಯನ್ನು ಸಮಾವೇಶಗೊಳಿಸಲು ನಿಶ್ಚಯವಾಗಿ ಶ್ರೀ ಬ್ಯಾಡಿಗಿ ಫಕೀರಪ್ಪನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯ ರಚನೆಯಾಯಿತು ಕೂಡ್ಲಿಗೆ ಪಂಚಾಯ್ತಿ ಬೋರ್ಡು ಅಧ್ಯಕ್ಷರಾದ ಭೀಮಪ್ಪನವರು ಉಜ್ಜಿನಿ ತಳವಾರ ಚನ್ನಪ್ಪನವರು—ಉಪಾಧ್ಯಕ್ಷರು ಹುಗ್ಗೇರ ಹಾಲಪ್ಪನವರು ಕೋಶಾಧಿಕಾರಿಗಳು ಕಾರ್ಯದರ್ಶಿಗಳು ಮಾಳ್ವಿ ದೇವೇಂದ್ರಪ್ಪನವರು, ಸಹಕಾರ್ಯದರ್ಶಿಗಳು ಗೋನಾಳು ಬಸಪ್ಪನವರು—ಸಮಿತಿಯಲ್ಲಿ ಪ್ರತಿನಿಧ್ಯಸ್ವರೂಪದ ೧೦ ಜನ ಸದಸ್ಯರಿರುವರು.—ವಾಲ್ಮೀಕಿ ನಾಯಕ ಸಮಾಜದ ಆರ್ಥಿಕ ನೈತಿಕ ಸಾಮಾಜಿಕ ರಾಜಕೀಯ ಏಳ್ಗೆಯಾಗಬೇಕೆಂಬ ಹಂಬಲವಿರುವ ಸಮಾಜ ಬಂಧುಗಳೆಲ್ಲರೂ ಕೊಡುಗೈಯಿಂದ ಸಹಾಯ ಮಾಡಲು ಸ್ವಾಗತ ಸಮಿತಿಯವರು ಕೋರುತ್ತಾರೆ. ಪ್ರಚಾರೋದ್ದೇಶದಿಂದ ಶ್ರೀ ದೇವೇಂದ್ರಪ್ಪನವರು ಸಂಚರಿಸಲಿದ್ದಾರೆ.

ವಿದ್ಯಾರ್ಥಿ ಕಾಂಗ್ರೆಸ್ ಹೂವಿನಹಡಗಲಿ

೨ನೆಯ ತಾ|| ನಡೆದ ಸಭೆಯಲ್ಲಿ ಕೆ. ಯಂ. ಜಂಬಯ್ಯನವರು ಉಪಾಧ್ಯಕ್ಷರಾಗಿಯೂ, ಪಾಟೀಲ ಚಂದ್ರಶೇಖರಗೌಡರು ಪಸ್ಮರಾಜನ್‌ರು ಕಾರ್ಯದರ್ಶಿಗಳಾಗಿಯೂ, ಪಾ. ಬಸವನಗೌಡರು ಕೋಶಾಧ್ಯಕ್ಷರಾಗಿಯೂ ಆರಿಸಿಬಂದರು.

—: ಮೆಟ್ರಿ :—

ಶ್ರೀ ಮಹದೇವಯ್ಯನವರು ತಮ್ಮ ದೀರ್ಘಕಾಲದ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾದ ಕಾರಣ ಅವರನ್ನು ಸನ್ಮಾನಿಸಲು ಶ್ರೀ ಪ್ರಾಜ್ಞೇಶಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ೧೦೦ ರೂ. ಕಾಣಿಕೆ ಸಮರ್ಪಿಸಲಾಯಿತು, ವಿವಿಧ ವಿನೋದದಾಟ ಉಪಾಹಾರದ ನಂತರ ಅಧ್ಯಕ್ಷರೂ ಇತರ ಭಾಷಣಕಾರರೂ ಶ್ರೀ ಮಹದೇವಯ್ಯನವರ ಗುಣಗಾನ ಮಾಡಿದರು.

ಸಿಂಧ ಗೋಧಿ ಕಳುಹಿಸುವುದಿಲ್ಲ

ಕೇಂದ್ರದವರು ತಮ್ಮ ವಾಗ್ದಾನಗಳನ್ನು ಪೂರೈಸಲಿಲ್ಲವಾದ ಕಾರಣ ನಾವು, ಆಹಾರ ಧಾನ್ಯಗಳು ಕಡಮೆಬಿದ್ದ ಪ್ರಾಂತಗಳಿಗೆ ಧಾನ್ಯವನ್ನು ಕಳುಹಿಸಲಾಗುವುದಿಲ್ಲೆಂದು ಸಿಂಧ ಸರಕಾರದವರು ಹೇಳಿರುತ್ತಾರೆ. ಕೇಂದ್ರ ಸರಕಾರದ ಮಂತ್ರಿಗಳು ಇದಕ್ಕೆ ಆಶ್ಚರ್ಯವನ್ನು ವ್ಯಕ್ತಪಡಿಸಿ ಇಂಥಾ ಅನುಮಾನಕ್ಕೆ ಕಾರಣವಿಲ್ಲೆಂದು ಸೂಚಿಸಿರುವರು.

ಮುಸಲ್ಮಾನ ರಾಜ್ಯವಾದ ಪಾಕಿಸ್ತಾನದಲ್ಲಿ ಹಿಂದೂಸ್ತಾನದಲ್ಲಿ ಕೊಡುವಷ್ಟೇ ಸಂಬಳ —ಸಾರಿಗೆ ಕೊಡುವರೆಂದು ಬಂಗಾಲದ ಪ್ರಧಾನರಾದ ಸುಹ್ರವರ್ದಿಯವರು ಹೇಳುತ್ತಾರೆ.

ಈ ವರ್ಷದ ಆಗಷ್ಟ 15 ರಿಂದ ಬೀರಾರ ಪ್ರಾಂತದ ಭವಿಷ್ಯವು ಅನಿಶ್ಚಿತವಾಗಿ ಅದು ಹೈದ್ರಾಬಾದಿಗೆ ಸೇರಬಹುದೆಂದು ಹೇಳುತ್ತಾರೆ. ಈ ವಿಷಯದಲ್ಲಿನ ಶಾಸನ ಸಮಸ್ಯೆಯನ್ನು ಬಗೆಹರಿಸಲು ಮದ್ರಾಸಿನ ಸುಪ್ರಸಿದ್ಧ ಅಡ್ವೊಕೇಟರಾದ ಅಲ್ಲಾಡಿ ಕೃಷ್ಣಾಸ್ವಾಮಿ ಅಯ್ಯರರವರು ಸೂಚಿಸಿರುವರು.

ಹೊಳಲಗುಂದಿ ಲೇಖಕರಿಗೆ

ನೀವು ನಿಮ್ಮೂರಿನ ಪೋಸ್ಟ್‌ಮೇಸ್ತರವರು ಕಾಲಿನ ಮೂರ್ಖತನಕ್ಕೆ ಕಾರಣವೆಂದು ಆರೋಪಣೆಗೊಳಿಸಿ ಬರೆದ ಲೇಖನಕ್ಕೆ ಸಹಿಮಾಡಿರುವುದಿಲ್ಲ ಬರೆದವರ್ಯಾರೆಂಬುದು ಪ್ರಕಟನೆಗೆ ಅಲ್ಲವಾದರೂ, ಸಂಪಾದಕರಿಗೆ ಗೊತ್ತಿರಬೇಕು. ನಿಮ್ಮ ಅಡ್ರಸ್ ತಿಳಿಸಿ ಬರೆಯಿರಿ.

ಪಾಕಿಸ್ತಾನ, ಹಿಂದೂಸ್ತಾನ
ಗವರ್ನರ ಜನರಲ್‌ರನಿಯಾಮಕಕ್ಕೆ
— ಬ್ರಿಟಿಷ್ ಒಪ್ಪಿಗೆ —

ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಆಟ್ಲಿಯವರು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡುತ್ತಾ ಪಾಕಿಸ್ತಾನಕ್ಕೆ ಜಿನ್ನಾರವರು, ಹಿಂದೂಸ್ತಾನಕ್ಕೆ ಈಗಿನ ವೈಸ್ರಾಯರಾದ ಲಾರ್ಡ ಮೌಂಟ ಬಾಟನ್‌ರವರು ಗವರ್ನರ ಜನರಲ್‌ರಾಗಿರಬೇಕೆಂದು ಭಾರತ ಮುಖಂಡರ ಹೆಯೆಂದೂ, ಅದು ಒಪ್ಪಲ್ಪಡುವದೆಂದೂ. ಸೂಚಿಸಿರು. ಪ್ರಥಮದಲ್ಲಿ ಎರಡೂ ಡೋಮಿನಿಯನ್‌ಗಳಿಗೆ ಒಬ್ಬರೇ ಗವರ್ನರ್ ಜನರಲ್ ಇರಬೇಕೆಂದು ನಿಶ್ಚಯವಾಗಿದ್ದಿತು. ಇದನ್ನನುಸರಿಸಿ ಕಾಂಗ್ರೆಸ್‌ನವರು ಲಾರ್ಡ ಮೌಂಟ ಬ್ಯಾಟನ್‌ರ ಹೆಸರನ್ನು ಸೂಚಿಸಿದ್ದರು. ಆದರೆ ಮುಸ್ಲಿಂಲೀಗಿನವರು ಹಟವಿಡಿದು ತಮಗೆ ಪ್ರತ್ಯೇಕ ಗವರ್ನರ ಜನರಲ್ ಬೇಕೆಂದು ಹೇಳಿದ ಕಾರಣ, ಅವರಿಗೆ ಬೇಕಾದ ಜಿನ್ನಾರವರು ಈ ಪದಕ್ಕೆ ಯುಕ್ತರಾದರು. ಪಂಡಿತ ಜವಹರಲಾಲ ನೆಹರೂರವರು ಭಾರತದ ಮುಖ್ಯ ಮಂತ್ರಿಗಳಾಗುವರೆಂಬುದರ ಸಂಶಯವಿಲ್ಲ.

ಕಲ್ಕತ್ತಾದಲ್ಲಿ ಭೀಕರ ದಂಗೆ

ಕಲ್ಕತ್ತೆಯಲ್ಲಿ ಜಾತೀಯ ಪೋರಾಟದ ಭೀಕರ ಸ್ವರೂಪವು ಮತ್ತೆ ಕೆರಳಿದೆ ಬಾಂಬುಗಳು, ಬಂದೂಕ, ರಿವಾಲ್ವರ್ ಮಸ್ಕೆರೆ ಶಸ್ತ್ರಾಸ್ತ್ರಗಳಿಂದ ಇಬ್ಬಣಗಳು ಪೋರಾಡಲಿಕ್ಕಾರಂಭಿಸಿವೆ ಪೋಲೀಸ್ ಇನ್‌ಸ್ಪೆಕ್ಟರ ಕೊಲೆಯ ನಂತರ ಅವರ ಶವವ ಮೆರವಣಿಗೆಯು ತೆಗೆದಾಗ ಪೋಲಿಸರೇ ಕೊಲೆ ಮಾಡಿಗೆಗಳಿಗಾರಂಭಿಸಿದರೆಂದು ದಿವಾನ ಜವಾಹರಲಾಲರು ಹೇಳಿಕೆಯನ್ನಿತ್ತಿರುವರು ಇದನ್ನು ಸರ್ಕಾರದವರು ಪ್ರತಿಬಂಧಿಸಿದ್ದರೆ—ಕಲ್ಕತ್ತೆಯು ಸುಟ್ಟು ಬೂದಿಯಾಗುವದೆಂದೂ, ಅದರ ಸರ್ವನಾಶವು ಕಟ್ಟಿಟ್ಟದ್ದೆಂದೂ ಅವರು ಹೇಳಿದ್ದಾರೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್

ಸಮಿತಿಯ ಸಭೆಯು ಮೈಸೂರು ನಗರದಲ್ಲಿ 10 ನೆಯ ತಾ|| ಸಾಯಂಕಾಲ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದಿತು. 75 ಪ್ರತಿನಿಧಿಗಳ ಪೈಕಿ 50 ಜನರು ಹಾಜರಿದ್ದರು. ಸಾಬಾಡೆ, ಅಧ್ಯಾಪಕ, ಭದ್ರಣ್ಣ ಇವರ ಮೃತ್ಯುವಿಗಾಗಿ ಶೋಕ ಸೂಚಕ ನಿರ್ಣಯಗಳಾದವು. ತಮ್ಮ ನಿರಂಕುಶ ಪ್ರಭುತ್ವವನ್ನು ಉಳಿಸಿಕೊಳ್ಳಲು ಪೋಲೀಸರಿಂದ ಅತ್ಯಾಚಾರಗಳನ್ನು ಮಾಡಿಸುತ್ತಿರುವ ಜಾಥ ಮತ್ತು ಹೈದರಾಬಾದ ಸಂಸ್ಥಾನಗಳ ಅತ್ಯಾಚಾರವನ್ನು ಖಂಡಿಸಲಾಯಿತು. ನೀಲಗಿರಿಯನ್ನು ಕರ್ನಾಟಕ ಪ್ರಾಂತೀಯ ಕ್ಷೇತ್ರಕ್ಕೆ ಸೇರಿಸಬೇಕೆಂದೂ, ಪ್ರಾಂತನಿರ್ಮಾಣಕ್ಕಾಗಿ ಸರಹದ್ದ ಸಮಿತಿ ರಚಿಸಲು ಘಟನಾ ಸಮಿತಿಯನ್ನು ಕೇಳಬೇಕೆಂದೂ, ತೀರ್ಮಾನಗಳಾದವು. ತಿರುವಾಂಕೂರು' ಹೈದರಾಬಾದ್‌ಗಳು ಸ್ವತಂತ್ರ ಸಾರಿದುದಕ್ಕಾಗಿ ಅವುಗಳನ್ನು ಖಂಡಿಸಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಮತ್ತೊಂದು ನಿರ್ಣಯವಾಯಿತು.

ಮದ್ರಾಸಿನಲ್ಲಿ
ಅಕ್ಕಿಯ ಕೊರತೆ ಕೇಂದ್ರದ ಸಹಾಯ

ಮದ್ರಾಸಿನಲ್ಲಿ ಈ ವಾರದಿಂದ 8 ಔನ್ಸ್ ಅಕ್ಕಿ ಕೊಡುತ್ತಿರುವುದು ಸರಿಯಷ್ಟೆ. ಇದರಿಂದ ಜನತೆಯು ಆರೋಗ್ಯವ ಕೆಡುವುದೆಂದೂ. ಕೇಂದ್ರವು ಸಹಾಯ ಮಾಡಬೇಕೆಂದೂ ಕೋರಲಾಗಿತ್ತು. ನವಂಬರ್ 1 ನೆಯ ತಾ|| ನ ಸನುಯಕ್ಕೆ ಕೇಂದ್ರವು ಸಹಾಯ ಮಾಡುವ ಭರವಸೆಯಿತ್ತಿದೆ.

ಹಿಂದೂ ಭಾಗವಾದ ಪಶ್ಚಿಮ ಬಂಗಾಲಕ್ಕೆ ೧೧ ಮಂತ್ರಿಗಳು ನಿರ್ಪಟ್ಟಿರುವರು, ಅವರು ಮುಸ್ಲಿಂ ಲೀಗ್ ಮಂತ್ರಿಗಳೊಡನೆ ಸಹಕರಿಸಿ ಕೆಲಸ ಮಾಡಬೇಕೆಂದಾಗಿದೆ.

ಆಸ್ಪತ್ರೆಯನ್ನು ಸ್ಥಳಾಂತರಿಸಬೇಡಿರಿ. ಬಳ್ಳಾರಿ ಜನತೆಯ ಬೇಡಿಕೆ

ಜಿಲ್ಲಾ ಕಲೆಕ್ಟರ್ ಅನಂತರಾಮನ್‌ರವರು—ಸಾರ್ವಜನಿಕಾಭಿಪ್ರಾಯವನ್ನು ತಿಳಿಯಲೋಸುಗ ನಿರ್ಪಡಿಸಿದ ಸಭೆಯಲ್ಲಿ (2—7—47) ಬಳ್ಳಾರಿ ಮಹಾಜನರ ಪರವಾಗಿ ಶ್ರೀಗಳಾದ ಕೆ ನರಸಿಂಹ ಶಾಸ್ತ್ರಿ, ವೆಂಕಟರಾಮಶೆಟ್ಟಿ, ಡಿ. ಯಸ್. ಹನುಮಂತರಾವು, ರಾಜಗೋಪಾಲಶೆಟ್ಟಿ ಜೆ. ಪಿ. ಭಾಸ್ಕರ್, ಎ. ವೀರಾಸ್ವಾಮಿ, ಡಾಕ್ಟರ್ ಅಚ್ಚಯ್ಯ ಯು. ಕೆ. ಎಲ್. ನಾರಾಯಣರಾಯರು ಅಧಿಕಾರಿಗಳ ಸೂಚನೆಯನ್ನು ಖಂಡಿಸಿ ಈಗಿರುವ ಜನರಲ್ ಆಸ್ಪತ್ರೆಯನ್ನು ಪಟ್ಟಣಕ್ಕೆ ನಾಲ್ಕು ಮೈಲು ದೂರವಿದ್ದು ಯಾವ ಅನುಕೂಲಗಳೂ ಇಲ್ಲದಿರುವ ಕಂಟೋನ್ಮೆಂಟ್‌ಗೆ ಸಾಗಿಸಬಾರದೆಂದರು. ಈಗಿರುವ ಆಸ್ಪತ್ರೆಯ ಕಟ್ಟಡವು ಲೇಟ್ ಸಭಾಪತಿಮುದಲಿಯಾರ್‌ರವರಿಂದ ಇದೇ ಉದ್ದೇಶಕ್ಕಾಗಿ ದಾನರೂಪವಾಗಿ ಕೊಡಲ್ಪಟ್ಟಿದ್ದು, ಈ ಸ್ಥಳಕ್ಕೆ ಕ್ಷಯರೋಗಿಗಳನ್ನು ತಂದರೆ–ಅವರ ವಾರಸ್ತಾರರು ಸರ್ಕಾರದ ಮೇಲೆ ದಾವೆತರುವರೆಂದು ಶ್ರೀಚಂದ್ರಶೇಖರಶಾಸ್ತ್ರಿಗಳು ಬರೆದ ಪತ್ರವನ್ನು ಕಲೆಕ್ಟರವರು ಓದಿದರು'

ದೂರವಿದ್ದರೇನಾಯಿತು ? ಬಸ್ ಮೇಲೆ ಹೋಗಬಹುದು. ಇಲ್ಲಿನ ಕಟ್ಟಡಕ್ಕಿಂತ ಅದು ವಿಶಾಲವಾಗಿದೆ. ಅಲ್ಲಿ ವಿದ್ಯುತ್ಯಂತ್ರವೂ ಚನ್ನಾಗಿದೆಯೆಂದರು ನಾವು ಈ ಹಿಂದೆ ಸೂಚಿಸಿದಂತೆ ಈ ಹುಚ್ಚುಬೇಡಿಕೆಯನ್ನು ಎಲ್ಲರೂ ಖಂಡಿಸಿದನಂತರ ಜನಾಭಿಪ್ರಾಯವನ್ನು ಸರಕಾರಕ್ಕೆ ತಿಳಿಸಲು ಅಧ್ಯಕ್ಷರೊಪ್ಪಿದರು.

ಬಳ್ಳಾರಿ ಮುನಿಸಿಪಾಲಿಟಿ ಸ್ಟ್ರೈಕ್

ಬಳ್ಳಾರಿ ಮುನಿಸಿಪಾಲಿಟಿಗೆ ಸಂಬಂಧಿಸಿದ ನೌಕರರು ಸಂಪು ಹೂಡುವುದಾದರೆ ಅವರ ಮೇಲೆ ಶಿಸ್ತುಭಂಗದ ಚರ್ಯೆ ತೆಗೆದುಕೊಳ್ಳುವುದಾಗಿ ನೋಟೀಸಿಗೆ ಉತ್ತರ ಕೊಡುತ್ತಾ ಕಮೀಶನರ್‌ರವರು ಹೇಳಿರುತ್ತಾರೆ.

ಬಳ್ಳಾರಿಜಿಲ್ಲಾ ಲೇಬರ್ ಶಾಲೋಪಾಧ್ಯಾಯರಿಗೆ ಸಭಾಸೂಚನೆ

ಜನರಲ್‌ಬಾಡಿ ಮೀಟಿಂಗಿನ ಸಭೆಯು ಸಂಸ್ಥೆಯ ರೆಕಗ್ನಿಷ್ಯ ಸಂಬಂಧವಾಗಿ ಬಂದ ಕಲೆಕ್ಟರವರ ಪತ್ರ, ಲೇಬರ್ ಕಮೀಶನರ್‌ರವರು ಸಂಘಾಧ್ಯಕ್ಷರಿಗೆ ತಿಳುಹಿಸಿದ ಅಂಶಗಳನ್ನು, ವಿಮರ್ಶಿಸಿ ತೀರ್ಮಾನಿಸಲು 20–7–47 ಭಾನುವಾರ ಸಾಯಂಕಾಲ 8 ಘಂಟೆಗೆ ಬಳ್ಳಾರಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಸಮಾವೇಶವಾಗಲಿದೆ. ಎಲ್ಲಾ ಲೇಬರ್ ಶಾಲೋಪಾಧ್ಯಾಯರು ಬರಲು ವಿನಂತಿ. ಅಧ್ಯಕ್ಷರ ಅಪ್ಪಣೆಯಿಂದ ಇತರ ವಿಷಯಗಳು ಚರ್ಚೆಗೆ ಬರಬಹುದು.

ಎಂ. ಇ. ಜೋನಾಥನ್
ಕಾರ್ಯದರ್ಶಿ

ಲೋಯರ್‌ಗ್ರೇಡ್ ಉಪಾಧ್ಯಾಯರು

ಲೋಯರ್ ಎಲಿಮೆಂಟರಿ ಗ್ರೇಡ್ ಉಪಾಧ್ಯಾಯರ ಕನಿಷ್ಟ ಸಂಬಳವು ೨೦ ರು. ಗಳಿಗೆ ಕಡಮೆ ಇರಬಾರದೆಂದು ಸರ್ಕಾರವು ನಿಶ್ಚಯಿಸಿದೆ. ಮ್ಯಾನೇಜುಮೆಂಟುಗಳವರು ಸರ್ಕಾರದವರು ಕೊಡುವ ಗ್ರಾಂಟ್ ಜೊತೆಗೆ ತಮ್ಮ ಹಣವನ್ನು ಕೂಡಿಸಿಕೊಡಬೇಕಂತೆ. ಇದು ಜುಲೈ 1 ನೆಯ ತಾ. ನಿಂದ ಜಾರಿಯಲ್ಲಿ ಬರಲಿದೆ.

ಹಾಗಲೂರು— ಹೊಸಹಳ್ಳಿ

30–6–1947 ನೆಯ ಸೋಮವಾರ ಇಲ್ಲಿನ ಬೀದಿಗಳಲ್ಲಿ ಹರಿಜನರ ಮದುವೆ ಮೆರವಣಿಗೆಯು ವಧೂವರರನ್ನು ಕೂರ್ಡ್ರಿಸಿದ ಅಲಂಕೃತ ಗಾಡಿಯಲ್ಲಿ ಶಾಂತವಾಗಿ ಸಾಗಿತು. ಈ ಮೆರವಣಿಗೆಯ ಪೂರ್ವದಲ್ಲಿ ಜಿಲ್ಲಾ ಹರಿಜನಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರು ಜಾತೀಯ ಸೌಹಾರ್ದತೆ, ಈಗಿನ ಪರಿಸ್ಥಿತಿಯನ್ನು ಕುರಿತು ಉಪನ್ಯಾಸಿಸಿದರು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:—** ಅನಂತಪುರ, ಧೂಮ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:—** ಕರ್ನೂಲು:- ಪತ್ತಿಕೊಂಡ. **ಕಡಪ:—** ರಾಜಂಪೇಟೆ, ಕಡಪ, **ಚಿತ್ತೂರು,—** ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ;— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.

ಕರೆಂಟು ಅಕೌಂಟು: ¼%, **ಸೇವಿಂಗ್ಸ್ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Et , Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ. ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದ್ದು. ಪರೀಕ್ಷಿಸಿ ಮನಗಾಣಿರಿ.

ಕೂಡ್ಲಿಗಿ ತಾ॥ ರೈತರ ಪರಿಷತ್ತು.
ಮುಂದೆ ಹಾಕಲಾಗಿದೆ.

ಈಗಿನ ಋತುಮಾನದಲ್ಲಿ ಮಳೆಗಾಳಿಗಳ ಅನಾನುಕೂಲತೆಯಿಂದ ವಾತಾವರಣವು ಕೆಟ್ಟಿದೆ. ಅಲ್ಲದೆ ರೈತರು ತಮ್ಮ ಹೊಲಗೆಲಸಗಳ ಕಾರಣ ಪರಿಷತ್ತನ್ನು ಮುಂದೆಹಾಕಲು ಕೇಳಿ ಕೊಂಡಿರುವದರಿಂದ ಮುಂಬರುವ ಡಿಶಂಬರ್ 1947ರಲ್ಲಿ ಕೂಡ್ಲಿಗಿ ತಾಲೂಕು ರೈತರಪರಿಷತ್ತು ನೆಹರೂ ತರುಣಸಂಘದಾಶ್ರಯದಲ್ಲಿ ನಡೆಯಲಿರುವದೆಂದು ಈ ಮೂಲಕ ಎಲ್ಲರಿಗೂ ತಿಳಿಸಬಯಸುತ್ತೇನೆ.

ಕೆ. ಶಿದ್ಧರಾಮನಗೌಡ,
ಕಾರ್ಯದರ್ಶಿ.

ನವಭಾರತಕ್ಕೆ ಚಂದಾದಾರರಾಗಿರಿ



Guarranteed Pure Pyra Gingelly oil

Best for Pickles, Cooking & Cooling.

DISTRIBUTORS:—

1. M/S. . HUSANJEE RAO. M VENKOJI RAO
General Merchants. Car Street Bellary.

2 M/S. V. M. GIRI & SONS.
(Pro:- M, S Acharya) Car Street, Bellary

ಶುದ್ಧ ! ಗ್ಯಾರಂಟಿಯಾದ್ದು !! ಸತ್ಪಕಾರಿ !!!

— ಪೈರ ಎಳ್ಳೆಣ್ಣೆ —

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯು ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಿದು.
ಉಪ್ಪಿನಕಾಯಿಗೆ ಈ ಎಣ್ಣೆಯನ್ನುಪಯೋಗಿಸುವದರಿಂದ ಬಹಳಕಾಲ ಕೆಡದಂತಿರುವುದು.

ಹಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್ ಎಂ ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ಎಸ್. ಎಂ ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್ಯ)

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

ಈ ವಿದ್ಯಾಪೀಠವು 15—7—1917 ಕ್ಕೆ ಪ್ರಾರಂಭವಾಗಲಿದೆ. ಗವರ್ನಮೆಂಟು ರಿಜಿಸ್ಟ್ರೇಷನ್ ಪಡೆಯಲು ಅರ್ಜಿವಾಗುವಂತೆ (Board of Indian Medicine Madras) ಮದ್ರಾಸ್ ಸರ್ಕಾರದ ನಿಯಮಗಳನ್ನನುಸರಿಸಿ-ಶಿಕ್ಷಣ ಪ್ರಣಾಲಿ, ಪರೀಕ್ಷೆಗಳ ವಿಚಾರಣೆ ಮಾಡಲಾಗಿದೆ. ವಿದ್ಯಾಪೀಠದ ಮನ್ನಣೆಗೂ (Recognition) ಸರ್ಕಾರದ ಸಹಾಯಕ್ಕೂ ಯತ್ನಗಳು ಸಾಗಿವೆ. ವಿದ್ಯಾಪೀಠವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲ್ಲಿ-ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವದು ಬಹುಕಾಲದವರೆಗೆ ಪ್ರೇಮವಿದ್ಯಾಪೀಠದಲ್ಲಿ ಶಿಕ್ಷಕರಾಗಿದ್ದವರೇ ಇಲ್ಲಿಯು ವ್ಯಾಖ್ಯಾಪಕರಾಗಿರುವರು S. S. L. C ಯಾ ಮೆಟ್ರಿಕ್ ಮುಗಿಸಿದವರಿಗೆ ಔಷಧಾ ಅಧಿಕ್ಯಂತ ಹೆಚ್ಚಿನ ಶಿಕ್ಷಣ ಹೊಂದಿದವರಿಗೆ ಪ್ರವೇಶಾರ್ಹತೆಯು ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0- 1—6 ಸ್ಟ್ಯಾಂಪ್ ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ
ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5 0—0
6 ತಿಂಗಳಿಗೆ	3-0-0	Six months	3 0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... ....

1-6-47 The Executive Officer
Panchayat Board
P. KAMPLI (Dt. Bellary)

Printed at Krishna Press Bellary QH NO. B 17 FOR (Q.H NO. B-5)
Edited & bliPusbed by T. B. KESHAVA RAO

15

ಜೈಹಿಂದ್ Reg. No. M. 4746

ಕರ್ನಾಟಕ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಕಟ್ಟು ೬ ಸಂಚಿಕೆ ೨೮ ಬಳ್ಳಾರಿ ಜುಲೈ ೨೧ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶ ಟಿ. ಬಿ. ಕೇಶವರಾವ್.

ಉಚಿತ ಭೋಜನ ವ್ಯವಸ್ಥೆ

ಬಳ್ಳಾರಿ ಜಿಲ್ಲಾ ಕೋಷಿಗಿ ಬೋರ್ಡ್ ಹೈಸ್ಕೂಲಲ್ಲಿ ನಾಲ್ಕನೆಯ ಫಾರಂ ಓದಲಿಚ್ಛಿಸುವ ಕೆಲ ಗು ವಿದ್ಯಾರ್ಥಿಗಳಿಗೆಲ್ಲಾ ಉಚಿತ ಭೋಜನ ವಸತಿಗಳ ಏರ್ಪಾಟಿದೆ. ನೇರಬಯಸುವವರು ಹೈ ಸ್ಕೂಲ ಸಮಿತಿ ಅಧ್ಯಕ್ಷರಿಗೆ ತಿಳಿಸಿರಿ

ಆಹಾರ ಕೊಡಿರಿ.

ಬಳ್ಳಾರಿ ಸಾಂಬಮೂರ್ತಿಮೈದಾನ, ಮಿಲ್ಲರ್ ಪೇಟೆ, ಹಿರಾಳುಕ್ಷಡ, ಕಾಲುಬಜಾರುಗಳಲ್ಲಾದ ಸಭೆಗಳಲ್ಲಿ ಶ್ರೀ ಎಂ ಸತ್ಯವಂತರಾಯರು ಈಗಿರುವ ಕಠಿಣ ಆಹಾರ ಪರಿಸ್ಥಿತಿಗೆ ಹೆಚ್ಚಿನ ಹಣವು ಕಡಮೆ ಜನರಲ್ಲಿ ಹಂಚಿಹೋಗಿದೆ. ಜನರು ಬ್ಲಾಕ್ ಮಾರ್ಕೆಟದಲ್ಲಿ ಮಾರಲು ಕೊಳ್ಳಲು ತಯಾರಿರುವುದು, ವಸ್ತುಗಳ ಹೇಳಿ 300 ರೂ ಗಿಂತಲೂ ಹೆಚ್ಚಿನ ಆದಾಯವಿರುವವರಿಂದ ತೆರಿಗೆಯ ರೂಪದಲ್ಲಿ ಹಣ ಸಂಗ್ರಹಿಸಿ ಒಳ್ಳೆಯ ಬೆಲೆಗೆ ಕೊಂಡು ಕಡಮೆ ದರಕ್ಕೆ ಮಾರಲು ಸೂಚಿಸಿದರು.

ಹರಿವಾಣ

ಭಾಷಾವಾರ ಪ್ರಾಂತ ಗಡಿನಾಡ ಸಮಸ್ಯೆಗಳ ಕುರಿತು ಶ್ರೀ ನೊಡ್ಡಬಸವನಗೌಡರ ಅಧ್ಯಕ್ಷತೆಯಲ್ಲಿ ಶ್ರೀ ದೇಶಾಯಿಯವರ ಭಾಷಣವಾಯಿತು.

ಬಳ್ಳಾರಿ ಜಿಲ್ಲಾ ಆಹಾರ ಸಮಿತಿ.

ಆಹಾರ ಧಾನ್ಯಗಳ ಸಂಗ್ರಹ ಸದ್ಯದ ಪರಿಸ್ಥಿತಿ ನಿವೇದಿಸಲಾಯಿತು. ಧಾನ್ಯ ಸಂಗ್ರಹ ಕಾರ್ಯದಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೇಳಲಾಯಿತು. ಕಾಳಿನಲ್ಲಿ ಕಲ್ಲು ಉಸುಕನ್ನು ಬೆರೆಸಿ ಮಾರುವ ಸ್ಪೀರ್ ಏಜಂಟರ ಕೃತ್ಯಕ್ಕೆ ಅಧ್ಯಕ್ಷರ ಗಮನವನ್ನು ಕೆಲ ಸದಸ್ಯರು ಸೆಳೆದರು. ಹೋಟೆಲುಗಳಲ್ಲಿ ಹೆಚ್ಚು ದುಡ್ಡು ತೆಗೆದುಕೊಂಡು ಕಡಮೆ ಪ್ರಮಾಣದ ಮತ್ತು ಕೆಟ್ಟ ತಿಂಡಿ ಸಾಮಾನು ಕೊಡುತ್ತಿರುವದನ್ನು ನಿರ್ಬಂಧಿಸಿ ಬೆಲೆಯನ್ನು ನಿಗದಿಮಾಡಲು ಹೊಸಪೇಟೆ ಶ್ರೀ ಅನಂತಾಚಾರ್ಯರಿಗೆ ಒಪ್ಪಿಸಲಾಯಿತು. ಹಡಗಲಿ ತಾಲೂಕಿನಲ್ಲಿ ಬಂಡಿ ಬಾಡಿಗೆ ಹೆಚ್ಚು ಕೊಡಲು (25% ಜಾಸ್ತಿ) ನಿಶ್ಚಯವಾಯಿತು. ಜಿಲ್ಲಾಕ್ಕೆ ಬರುವ 950 ಟೀಲ ಸಕ್ಕರೆ ಹಂಚಿಕೆಯ ವ್ಯವಸ್ಥೆಗೊಳಿಸಲು ಕಲೆಕ್ಟರವರ ರೊಪ್ಪೆ ಹೊಸ ಹೋಟೆಲುಗಳವರಿಗೆ ಯೋಗ್ಯತೆಗನುಗುಣವಾಗಿ ಹಂಚಲು ಹೇಳಿದರು. ಬೆಲ್ಲವನ್ನು ಹೊರಗೆ ಕಳುಹಿಸಲು 'ಪರ್ಮಿಟ್' ಕೊಡುವ ನಿಶ್ಚಯವಾಯಿತು ಉಳ್ಳಿಗಡ್ಡೆ ಬೆಲೆಯೇರುತ್ತಿರುವದರಿಂದ ಬರುವ ಮೀಟಿಂಗ್‌ವರಿಗೆ ಕಾಯಲು ನಿಶ್ಚಯವಾಯಿತು.

ನಾನೇಕೆ ಊರು ಬಿಟ್ಟೆ.

ನಾನೊಂದು ಸಣ್ಣ ಪಾಠಶಾಲೆಯನ್ನು 1936 ರಲ್ಲಿ ಸ್ಥಾಪಿಸಿದೆ. ಅದು ಈಗ ಉನ್ನತ ಪ್ರಾಥಮಿಕ ಪಾಠಶಾಲೆಯಾಗಿದೆ ಅದರ ಕ್ರಮೇಣ ಅಭಿವೃದ್ಧಿಯನ್ನು ಬಳ್ಳಾರಿ ಪುರ ಜನರು ಅರಿಯದೆ ಇಲ್ಲ ನನ್ನ ವಯಸ್ಸು 30 ಮಾತ್ರ ಆದರೆ ಈ ಅಲ್ಪವಯಸ್ಸಿನೊಳಗಾಗಿ ಆರ್ಜನೆಯು ಚನ್ನಾಗಿದ್ದರೂ ಸಾಂಸಾರಿಕ ಕ್ಲೇಶಗಳು ಅಧಿಕವಾಗಿದ್ದವು ಕಾಲ ವೈಪರೀತ್ಯದಿಂದ ಮಾತಾ—ಪಿತೃಗಳಿಗೆ ಕಷ್ಟಕಾಲವೊದಗಿ ಅವರನ್ನು ನನ್ನಬಳಿ ಕರೆತಂದೆನಾದರೂ ಉಭಯತ್ರರ ಕಷ್ಟಸುಖಗಳ ಭಾಗಿಯಾಗಲು ಅನರ್ಹನಾದೆ. ನನ್ನ ಅಭಾಗ್ಯವಿಧಿಯಿಂದ ಅವರನ್ನು ಹೊರಗಟ್ಟುವ ಮಹಾಪುರುಷನಾದೆ. ಆವರು ಹೊರಹೋದನಂತರ ಕ್ಲೇಶ ಪಶ್ಚಾತ್ತಾಪಗಳಾದವು. ನಾನು ಮನೆಯೂರಿ ಸಾಲದಿಂದ ಸಂಪೂರ್ಣ ವಿಮುಕ್ತನಾದೆನು. ಸ್ಥಾಪಿಸಿದ ಶಾಲೆಗೆ ಕಾಂದುಬರದಂತೆ ಬೇರೊಬ್ಬ ಯೋಗ್ಯವ್ಯಕ್ತಿಯ ಸ್ವಾಧೀನಮಾಡಿದೆ. ಮಾತಾ ಪಿತೃಗಳನ್ನಗಲಿದ ನನ್ನ ತಮ್ಮನನ್ನು ಪುನಃ ಕೂಡಿಕೊಳ್ಳಲು ಪ್ರಾರ್ಥಿಸಿ, 14—6—47 ನೆಯ ದಿನ ಪೂಜ್ಯರ ಸೇವೆಗೆ ಅನರ್ಹನಾದ ನಾನು ನನ್ನ ಪ್ರೇಮೀ ಬಂಧು ಮಿತ್ರರಿಂದ ಅಗಲ ಬೇಕೆಂದು ನಿಶ್ಚಯಿಸಿ ದೂರವಾದೆನು.

ನನ್ನ ವಿಷಯಕ್ಕೆ ಅನ್ಯಮತದ ಸಂಬಂಧ ಮಿತಂಕು ವಿವಾಹ ಜಾರತ್ವದ ದೋಷಾರೋಪಣೆಗಳನ್ನು ಹೊರಿಸಿ ಪರಿಣಾಮಗಳಿಗೆ ಭಯಭೀತನಾಗಿ ಊರುಬಿಟ್ಟೆನೆಂದು ನನ್ನ ಆಂತರಿಕ ಕಾರಣಗಳನ್ನರಿಯದೆ ಆಡಿಕೊಳ್ಳಬಹುದು ಇಂಥಾ ವಿಷಯಗಳನ್ನು ಮುಚ್ಚುವುದು ಸಾಧ್ಯವಿಲ್ಲ. ಮಡದಿಯನ್ನು ಬಿಡುವುದೂ ಸಾಧ್ಯವಿಲ್ಲ. ಈ ನಿಂದಾರೋಪಣೆಗೆ ಲೇಶಮಾತ್ರವೂ ಆಧಾರವಿಲ್ಲ. ಪುರುಷರುಪಾಧ್ಯಾಯರಿರುವ ಶಾಲೆಗಳಲ್ಲಿ ಸ್ತ್ರೀಯರು ನಿಂದಾರೋಪಣೆಗೆ ಗುರಿಯಾಗುವುದು ಸ್ವಾಭಾವಿಕವಿದೆ. ಪುರುಷರೂ ಕೂಡ ಅವರ ಜೀವನ ಮಾರ್ಗಕ್ಕೆ ಆಗಾರವನಾದ ಕೆಲಸಮಾಡುವರೆಂದು ನಂಬಬಾರದು ಜಗತ್ತಿನಲ್ಲಿ ಇಂಥಾ ಕತೆಗಳು ಹುಟ್ಟಿಸಾಯುತ್ತವೆ. ಇದನ್ನು ಖಂಡಿತ ನಂಬಬೇಡಿರಿ

ನನ್ನ ಕಾರಣದಿಂದ ಮಾತಾಪಿತೃಗಳಿಗಾದ ದುಃಖವನ್ನು ನೋದಲಾರದೆ ವೈರಾಗ್ಯ ಮಾರ್ಗವನ್ನವಲಂಬಿಸಿ ಊರು ಬಿಟ್ಟ ಸ್ವಯಂಕೃತಾಪರಾಧಕ್ಕೆ ಪಶ್ಚಾತ್ತಾಪ ಪಡುತ್ತಾ ದೈವಪ್ರಾರ್ಥನೆಯಲ್ಲಿ ಮಗ್ನನಾಗಿದ್ದೇನೆ ನನ್ನ ಉದಾಹರಣೆಯಿಂದ ತಂದೆತಾಯಿಗಳ ಮನನೋಯಿಸಿದ, ನೋಯಿಸಲಿರುವ ವ್ಯಕ್ತಿಗಳು ಪಾಠಕಲಿಯಲೆಂದು ನನ್ನ ಬೇಡಿಕೆ

— ನ ಮ ಸ್ತೆ —

ಅಭಾಗ್ಯನಾದ
ಮಾತಾಪಿತೃಗಳನ್ನಗಲಿದ ವ್ಯಕ್ತಿ.

(ADVT)

ಭಾರತ ಸ್ವಾತಂತ್ರ್ಯ ಮಸೂದೆ:— ಪಾರ್ಲಿಮೆಂಟಿನ ಕಾಮನ್ಸ್‌ಸಭೆಯಲ್ಲಿ ಭಾರತ ಸ್ವಾತಂತ್ರ್ಯ ಮಸೂದೆಯ ತೃತೀಯ ವಾಚನವಾಯಿತು.

ಬರ್ಮಾದೇಶವು ಸಂಪೂರ್ಣ ಸ್ವಾತಂತ್ರ್ಯವಾಗಿರಬೇಕೆಂದು ಅಲ್ಲಿಯ ನಾಯಕರಾದ ಅಂಗಸಾನರವರು ಸಾರಿದ್ದಾರೆ.

ಹೈದರಾಬಾದಿನ ನಿಜಾಮರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪಿಸಲ್ಪಡಬೇಕೆಂಬುದಾಗಿ ಅಲ್ಲಿನ ಕಾಂಗ್ರೆಸ್ ಸಾರಿದೆ. ಅಲ್ಪರೀತಿಯಲ್ಲಿ ಕಾಂಗ್ರೆಸ್ ಸಂಸ್ಥೆಯ ಅಸಹಕಾರವು ನಡೆದಿದೆ.

ಮಾನ್ಯ ಡ್ಯಾನಿಯಲ್ ಥಾಮಸ್

ಮದ್ರಾಸ್ ಸರ್ಕಾರದ ಮದ್ಯನಿಷೇಧ ಶಾಖೆಯ ಮಾನ್ಯ ಮಂತ್ರಿಗಳಾದ ಡಾನಿಯಲ್ ಥಾಮಸ್‌ರವರು 17 ನೆಯ ತಾ. ಬಳ್ಳಾರಿಗೆ ಆಗಮಿಸಿ ಮದ್ಯನಿಷೇಧದ ಬಗ್ಗೆ ಸಲಹೆ ಸೂಚನೆಗಳನ್ನು ಅಧಿಕಾರೀ ಅಧಿಕಾರೇತರ ಸಭೆಯಲ್ಲಿ ವಿವೇಚಿಸಿ ಪ್ರೊಹಿಬಿಷನ್ ಶಾಲೆಯನ್ನು ಸಂದರ್ಶಿಸಿ ಆ ಸಾಯಂಕಾಲವೇ ತೆರಳಿದರು.

ರಶಿಯವು ಬಿಗುವಿನಿಂದೇಕಿದೆ ?

ದ್ವಿತೀಯ ಮಹಾ ಯುದ್ಧದಿಂದ ರಶಿಯದ ಪರಿಸ್ಥಿತಿ ಬಹಳ ಕೆಟ್ಟಿದೆ; ಯುದ್ಧ ಪೂರ್ವದ ಪರಿಸ್ಥಿತಿಯನ್ನೂ ಬಲವನ್ನೂ ಪಡೆಯಲು ಅದಕ್ಕೆ ಇನ್ನೂ ಬಹುಕಾಲಬೇಕು ಎಂದು ರಶಿಯನ್ನರೂ ಹೇಳುತ್ತಾರೆ ಇತರರೂ ಹೇಳುತ್ತಾರೆ. ಹೀಗಿದ್ದರೂ ಕೂಡ ಅದರ ಅಂತರಿಕ ಪರಿಸ್ಥಿತಿಯು ಬಲಹೀನವಾಗಿದ್ದರೂ ಅದು ಅಮೇರಿಕೆಯೊಡನೆ ಒಂದು ಒಪ್ಪಂದಕ್ಕೆ ಬಾರದಿರುವದು ರಹಸ್ಯವಾಗಿಯೇ ಇದೆ.

ರಶಿಯವು ಜರ್ಮನಿ ಹಾಗೂ ಆಸ್ಟ್ರಿಯಗಳ ವಿಷಯಗಳಲ್ಲಿ ಶಾಂತಿಯ ಬಗ್ಗೆ ತನ್ನ ಸೂಚನೆಗಳನ್ನು ಬಿಟ್ಟು ಇತರ ಯಾರ ಸೂಚನೆಯನ್ನೂ ಒಪ್ಪುತ್ತಿಲ್ಲ. ಈ ಮೂತು ಮಿತ್ರರ ಮುಸ್ಸಂದ್ದಿಗಳಿಗೆ ಬಗೆ ಹರಿಯದ ಸಮಸ್ಯೆಯಾಗಿದೆ. ತನ್ನ ಬಲಾಢ್ಯತೆಯ ಬೆಳೆಸಿಕೊಳ್ಳುವ ದೃಷ್ಟಿಯಿಂದ ಬಲಹೀನವಾದ ಬೇಕವು ಆದಷ್ಟು ಬೇಗ ಒಂದು ಒಪ್ಪಂದಕ್ಕೆ ಬರಬಹುದು— ಬರಬೇಕಾಗಿತ್ತು. ಎಂದು ಅವರ ಕಲ್ಪನೆ. ಆದರೆ ಮಾಸ್ಕೋದಲ್ಲಿ ಆಗ ದಿವಸಗಳವರೆಗೆ ಚರ್ಚೆನಡೆಸಿದ ನಂತರ ಪೂರ್ವ ಅಮೇರಿಕೆಯ ಸ್ಪೇಟ ಸೆಕ್ರೆಟರಿ ಮಾರ್ಶಲ್ಲರು ರಶಿಯದಲ್ಲಿ ಈಂಥ ಮನೋವೃತ್ತಿಯ ಈ ತರಹದ ಅತುರ—ಆಕಾಂಕ್ಷೆಗಳ ಕುರುಹನ್ನೇನೂ ಕಾಣಲಿಲ್ಲ. ಈ ಮಾತು ಕಥೆಗಳಲ್ಲಿ ರಶಿಯದ ಆರ್ಥಿಕ ಅವಶ್ಯಕತೆಗಳು ಜರ್ಮನಿ ಮತ್ತು ಆಸ್ಟ್ರಿಯಗಳ ವಿಷಯದಲ್ಲಿ ರಶಿಯವು ಒಂದು ಒಪ್ಪಂದಕ್ಕೆ ಬರಬಹುದು ಎಂಬ ಮಾತನ್ನು ಸೂಚಿಸುವದೇ ವಿನಃ ಹೆಚ್ಚಿನ ಫಲಿತಾಂಶವೇನೂ ಕಂಡು ಬರಲಿಲ್ಲ

ಆಸ್ಟ್ರಿಯದ ವಿಷಯದಲ್ಲಿ ರಶಿಯವು ಕೇಳುವ ಅಧಿಕಾರ ವಿಚಾರಗಳಿಂದ ಆಸ್ಟ್ರಿಯದೊಡನೆ ಮಾಡಿಕೊಳ್ಳುವ ಒಪ್ಪಂದವು ಕಾರ್ಯಕಾರಿಯಾಗದು ಎಂದು ಅಮೇರಿಕನ್ನರು ಭಾವಿಸುತ್ತಿದ್ದಾರೆ. ರಶಿಯದ ಸೂಚನೆಗಳಿಂದ ಆಸ್ಟ್ರಿಯದ ಮೇಲೆ ರಶಿಯಕ್ಕೆ ಆರ್ಥಿಕ ಪ್ರಭುತ್ವವನ್ನು ಒದಗಿಸಿ ಆಸ್ಟ್ರಿಯದ ಸ್ವಾತಂತ್ರ್ಯ ಸಾಧನೆಯ ಸಂದರ್ಭಗಳೇ ಬಾರದಂತೆ ಮಾಡುವಂತಿವೆ ಎಂದು ಅಮೇರಿಕನ್ನರಿಗೆ ತಿಳಿದು ಬಂದ ವಿಚಾರವಾಗಿದೆ,

ಜರ್ಮನಿ ಮತ್ತು ಆಸ್ಟ್ರಿಯಗಳಿಂದ ತನಗೆ ಬೇಕಾದುದೆಲ್ಲವನ್ನೂ ಮಿತ್ರರಾಷ್ಟ್ರಗಳು ಕೊಡಲೊಪ್ಪದಿರುವಾಗ ಸಿಕ್ಕಷ್ಟನ್ನಾದರೂ ಪಡೆಯೋಣವೆಂದು ರಶಿಯವು ಏಕೆ ಇಚ್ಛಿಸುತ್ತಿಲ್ಲವೆಂಬುದು ತಿಳಿಯದಾಗಿದೆ.

ರಶಿಯದ ಬಲಹೀನತೆಯ ವಿಚಾರವು ನಿಜವಾಗಿಯೂ ಯಾವ ತರಹದ್ದಿದೆ? ಅಮೇರಿಕೆಯ ಬಲವೆಷ್ಟು? ಅದರ ನಿರ್ಧಾರದ ಬಲವೆಷ್ಟು? ಎಂಬ ವಿಚಾರಗಳೇ ಈ ಸಮಸ್ಯೆಯ ಉತ್ತರಕ್ಕಾಧಾರ.

ರಶಿಯವು ತನ್ನ ಅಂತರಂಗದ ದೌರ್ಬಲ್ಯದ ಸುದ್ದಿಗಳನ್ನು ಹಲವು ಸಲ ಸ್ವಲ್ಪ ಮಾತ್ರವೂ ಹೋಗಗೊಡದಿರುವಂತೆ, ಹಲವು ಸಲ ಅದನ್ನು ಬಣ್ಣಿಸಿ ವರ್ಣಿಸಿ ಹೊರಗೆ ಕಳಿಸುತ್ತದೆ. ತುಸು ಸಮಯದ ಹಿಂದೆ ರಶಿಯದ ವಿದೇಶ ಉಪಮಂತ್ರಿಗಳಾದ ಎಂಡ್ರಿ ವಿಶಿನಿಸ್ಕಿಯವರು ನಾಜಿಗಳು ರಶಿಯದಲ್ಲಿ ಹಾಳು ಮಾಡಿದ ಪ್ರದೇಶಗಳನ್ನೂ ಉದ್ಯೋಗಗಳನ್ನೂ ಮೊದಲಿನ ಸ್ಥಿತಿಗೆ ತರಬೇಕಾದರೆ ಜರ್ಮನಿಯಿಂದ ಈಗ ಸಿಗುತ್ತಿರುವ ಪರಿಹಾರದ್ರವ್ಯಗಳು ಇನ್ನೂ ಕನಿಷ್ಟ ೬-೭ ವರ್ಷಗಳವರೆಗಾದರೂ ಈಗಿನ ಪ್ರಮಾಣದಲ್ಲಿ ದೊರೆಯುತ್ತಿರಬೇಕು ಎಂದು ಹೇಳಿದರು. ರಶಿಯದ ಉದ್ಯೋಗ ವ್ಯವಸಾಯ ಪಂಚ ವಾರ್ಷಿಕ ಯೋಜನೆ ಮೊದಲಾದವುಗಳ ಪರಿಸ್ಥಿತಿಯು ತುಂಬಾ ಕಠಿಣವಾಗಿದೆಯೆಂದು ರಶಿಯದ ಅನೇಕ ಅಧಿಕಾರಿಗಳು ಆಡಿಕೋರಿಸಿದ್ದಾರೆ.

ಕಲ್ಲಿದ್ದಲಿನ ಉತ್ಪತ್ತಿಯು ಈಗ ಯುದ್ಧಪೂರ್ವದಷ್ಟು ಆಗುತ್ತಿದ್ದರೂ ಯಂತ್ರಸಾಮಗ್ರಿಗಳ ಉತ್ಪತ್ತಿಯಾಗುತ್ತಿಲ್ಲ. ರಶಿಯಕ್ಕೆ ಈಗ ಜರ್ಮನಿಯಿಂದ ಹಾಗೂ ಇತರ ಕಡೆಗಳಿಂದ ಉಕ್ಕು ಬಹು ಅವಶ್ಯವಾಗಿ ಬೇಕಾಗಿರುವ ಸಾಮಗ್ರಿಯಾಗಿದೆ.

(10 ನೇ ಪುಟವನ್ನು ನೋಡಿರಿ,)

ರಿತ್ತಿ ಶಾಸ್ತ್ರಿಗಳ ಜಾಗತಿಕ ಭವಿಷ್ಯ

ಪಾಕಿಸ್ತಾನ ಕಲಹ ಇನ್ನೂ ಹೆಚ್ಚಬಹುದು

ಸುಧಾಸರು ಜೀವಂತರಿದ್ದಾರೆ

ಹಾವೇರಿ ೧ — ಹೊಸರಿತ್ತಿಯ ಜ್ಯೋತಿರ್ಮಾರ್ತಾಂಡ ಪಂಡಿತ ದೈವಜ್ಞ ಮೃತ್ಯುಂಜಯಾಲಂಕಾರ ಶಂಕರ ಶಾಸ್ತ್ರಿಗಳು ಈ ವರ್ಷದ ರಾಜಕೀಯ ಭವಿಷ್ಯದಲ್ಲಿ ಈ ರೀತಿ ಉಲ್ಲೇಖಿಸಿರುವರು.

ಹಿಂದುಸ್ತಾನ ಬ್ರಹ್ಮದೇಶಗಳಿಗೆ ಈ ವರ್ಷವು ಸಮಾಧಾನಕರ ತೋರುವದಿಲ್ಲ. ಹಿಂದು-ಮುಸಲ್ಮಾನ ಲೀಗ ಕಾಂಗ್ರೆಸ ನಡುವೆ ಷಡಷ್ಟಕ ಯೋಗವಿದೆ. ದಿಲ್ಲಿ ಮುಂಬಯಿಗಳಲ್ಲಿ ದಂಗೆ ಮೊದಲಾದ ಅತ್ಯಾಚಾರಗಳು ಕಂಡುಬರುವವು. ಗಡಿನಾಡಿನಲ್ಲಿ ಚಳಿಗಾಲದವರೆಗೆ ಸಂಭವಿಸಬಹುದಾದ ಅನಾಹುತ ಊಹಿಸುವದು ಸಾಧ್ಯವಿಲ್ಲ. ಪಾಕಿಸ್ತಾನ ಸಂಬಂಧದಲ್ಲಿ ಅಂತಃಕಲಹವುಂಟಾಗುವದು ಯೋಗವಿದೆ.

ಹಿಂದುಸ್ತಾನಕ್ಕೆ ಅಸಾಹತ ಸ್ವರಾಜ್ಯವಿಗುವದೆಂದು ಹಿಂದಕ್ಕೆ ನಾವು ನಮ್ಮ ಪಂಚಾಂಗದಲ್ಲಿ ಬರೆದದ್ದು ನಿಜವಾಗಿ ಅದರಂತೆ ಈಗ ನಡೆದಿರುವದು. ಈಗ ನಡೆದ ವೃದ್ಧಪರ್ವದಲ್ಲಿ ಶನಿದಶಾದಲ್ಲಿ ಶನಿಭುಕ್ತಿ 79 ವರ್ಷ 7 ತಿಂಗಳ 27 ದಿವಸವರೆಗೆ ಇರುವದರಿಂದ ತಾ|| 11—12—47 ನೇ ದಿನ ಆಗುವ ಶನಿ ಮಂಗಳ ಯುತಿಯೋಗದಿಂದ ಮಹಾತ್ಮರು ಪ್ರಕೃತಿಕಡೆಗೆ ಹೆಚ್ಚುಲಕ್ಷ ಕೊಡಬೇಕಾಗುವದು. ಆದರೆ ಅವರ ರಾಜಕಾರಣವು ಒಳ್ಳೆಯ ಶಶ್ವಿಯಾಗುವದು. ಸುಭಾಷಚಂದ್ರರ ಜನ್ಮಾಂಗ ಚಕ್ರ ನೋಡಲಾಗಿ ಅವರು ಜೀವಂತ ಇರುವರೆಂದೂ ಕೆಲಕಾಲದಲ್ಲಿ ಅವರು ತಪಶ್ಚರ್ಯ ಮುಗಿಸಿ ಪುನಃ ರಾಜಕಾರಣದಲ್ಲಿ ಪ್ರವೇಶ ಮಾಡುವರೆಂದೂ ತೋರುವದು. ಘಟನಾಸಮಿತಿಯ ಕೆಲಸವು ದಿಲ್ಲಿ ರಾಜಧಾನಿ ರಾಶಿಯಲ್ಲಿ ಹರ್ಷಲ್ ಗ್ರಹವಿರುವವರೆಗೆ ಸುರಕ್ಷಿತನಡೆಯುವದು ಹಾಗು ಸ್ವತಂತ್ರ ಸಾರ್ವಭೌಮ ರಾಜ್ಯಘಟನೆಯ ಯೋಗವಿದೆ. ಸ್ಟರ್ಲಿಂಗ ಸಾಲದ ಪ್ರಶ್ನೆ ಕಠಿಣವಾದರೂ ಬ್ರಿಟಿನದೊಳಗಿನ ಯಂತ್ರಸಾಮಗ್ರಿ, ಸರಕು ಮೊದಲಾದವು ಯೋಗ್ಯ ಕಿಮ್ಮತ್ತಿಗೆ ದೊರೆಯುವ ಸಂಭವವುಂಟು ಸಂಸ್ಥಾನಗಳ ಪ್ರಜೆಗಳ ಹಕ್ಕಿನವಿಷಯವು ಕಠಿಣವಾಗಿದ್ದು ಈಗ ಪಕ್ಷದ ದುರಾಗ್ರಹದಿಂದ ಅದು ಮತ್ತಷ್ಟು ದುಸ್ತರವಾಗಿ ೧೯೪೯ ನೇ ಇಸ್ವಿಯಂತಹ ರಣಕವನದ ಯೋಗ ತೋರುವದು.

ಪಾಕಿಸ್ತಾನ ಪ್ರಶ್ನೆ ಈಗ ಬಲಿಷ್ಠ ತೋರಿಬರುತ್ತಿದ್ದಾಗ್ಯೂ ಒಟ್ಟಿನಲ್ಲಿ ಅದು ದುರ್ಬಲವಾಗಿದೆ. ಪಾಕಿಸ್ತಾನದ ಯಾವದೇ ಕಲಹ ಇಷ್ಟಕ್ಕೆ ಮುಗಿಯದೆ ೧೬—೮-೪೮ ನೇ ದಿನ ಪಂಚಗ್ರಹ ಯೋಗ ಒಂದೇ ರಾಶಿಯಲ್ಲಿ ಕೂಡುವದರಿಂದ ಹಾಗು ಒಂದೇ ನಕ್ಷತ್ರದಲ್ಲಿ ಬಂದಿದ್ದರಿಂದ ಹಿಂದುಸ್ತಾನದಲ್ಲಿ ನಾಲ್ಕುಕಡೆಗೆ ಹಬ್ಬುವಷ್ಟು ಪಂಚಗ್ರಹ ಯೋಗದಲ್ಲಿ ೭ ಕೋಟಿ ಜನರು ಮೃತರಾಗುವರೆಂದು ವರಾಹಮಿಹಿರಾಚಾರ್ಯರ ಹೇಳಿಕೆಯಿದೆ. ಈ ಪಂಚಗ್ರಹ ಯೋಗದಲ್ಲಿ ಭೂಕಂಪ, ಅತಿವೃಷ್ಟಿ, ಬರಗಾಲ, ಮಹಾರೋಗ ಭಯ, ಸ್ವಚಕ್ರ ಪರಚಕ್ರ ಭಯ ಮೊದಲಾದವುಗಳನ್ನು ಶ್ರೀ ವಿದ್ಯಾರಣ್ಯರು ಉಲ್ಲೇಖಿಸಿರುವರು ಆದರೆ ಕೊನೆಗೆ ಎಲ್ಲ ಅನಿಷ್ಟಗಳು ದೂರಾಗಿ ಅಖಂಡತ್ವದ ಯೋಗ ಬಲಿಷ್ಠವಿರುವದು

ಇಂಗ್ಲಂಡ— ಸದ್ಯದ ಮಂತ್ರಿಮಂಡಳವು ಅಪ್ರಿಯವಾಗುವ ಸಂಭವವಿದೆ ಸಾರ್ವತ್ರಿಕ ಚುನಾವಣೆ ಮುಂಗಾಲ ಅಥವಾ ಚಳಿಗಾಲದಲ್ಲಿ ಆಗಬಹುದು. ಆದರೆ ಯುದ್ಧ ಭಯವಿರುವದು. ಶರತ್ಕಾಲದಲ್ಲಿ ಸ್ವಲ್ಪಕಾಲ ಚರ್ಚಿಲರು ಅಧಿಕಾರಕ್ಕೆ ಬರುವ ಸಂಭವವುಂಟು.

ರಶಿಯಾ— ಸ್ಟಾಲಿನರ ವಿರುದ್ಧ ಜನರು ಚಳಿವಳಿನಾಡಬಹುದು. ಅಧ್ಯಕ್ಷ ಪದದ ವಿಷಯಕ್ಕೆ ಗೊಂದಲವಾಗಬಹುದು. ಅಧ್ಯಕ್ಷ ಪದವಿಂದ ಸ್ಟಾಲಿನರು ಚ್ಯುತರಾಗುವ ಯೋಗವಿದೆ. ಸ್ಪೇನ ರಶಿಯಾಗಳ ನಡುವೆ ವೈಮನಸ್ಸು ಹೆಚ್ಚಾಗಿ ಯುದ್ಧಭಯ ತೋರುವದು.

ಅಮೇರಿಕೆ— ರಾಜಕೀಯ ವಾತಾವರಣದಲ್ಲಿ ಅನೇಕ ಸ್ಥಿತ್ಯಂತರಗಳು ಆಗುವ ಯೋಗವಿದೆ.

ಮಳೆ

ಹಿಂದುಸ್ತಾನ— ೧೮ ಜುಲೈಯಿಂದ ೨೨ ಜುಲೈ ವರೆಗೆ ಅತಿವೃಷ್ಟಿ ಯೋಗವಿದೆ. ಆಗಷ್ಟ ಸೆಪ್ಟಂಬರ ಮಳೆಗಾಲವು ಉತ್ತಮವಿದೆ. ಆದರೆ ಈವರ್ಷ ಗಾಳಿ ಚಮತ್ಕಾರವಿರುವದರಿಂದ ವಿಶೇಷವಾಗಿ ಕರ್ನಾಟಕದಲ್ಲಿ ಮಳೆ ಬಗ್ಗೆ ಕಾಳಜಿ ಉಳ್ಳವನಾಗುವ ಸಂಭವವುಂಟು. ಮುಖ್ಯವಾಗಿ ೧೫-೭-೪೭ ನೇ ದಿನ ರವಿ ಬುಧಯುತಿ ಇದ್ದುದರಿಂದ ಹಿಂದೆಮುಂದೆ ೭ ದಿನಗಳಲ್ಲಿ ವಿಪುಲವೃಷ್ಟಿಯಾಗುವದು.

ಸಿಲ್ಹೆಟ್ ಜಿಲ್ಲೆ—ಪಾಕಿಸ್ತಾನಕ್ಕೆ ಸೇರಬೇಕು.

ಅಸಾಮಿನ ಸಿಲ್ಹೆಟ್ ಜಿಲ್ಲೆಯು ಪೂರ್ವಬಂಗಾಳದ ಪಾಕಿಸ್ತಾನವನ್ನು ಸೇರಬೇಕೆಂದು ವೈಸ್ರಾಯಿ ಭವನದಿಂದ ಅಧಿಕೃತ ಪ್ರಕಟನೆಯು ಹೊರಟಿದೆ. ಈ ನಾಡಗಳ ಮೇಲೆ 424619 ಜನರು ಮತದಾನಮಾಡಿದರು 239619 ಜನರು ಪಾಕಿಸ್ತಾನ ಸೇರಬೇಕೆಂದರು. 184040 ಜನರು ಅಸಾಮಿನಲ್ಲಿ ಉಳಿಯಬೇಕೆಂದರು 100 ಕ್ಕೆ 77 ಜನರು ಮತದಾನಮಾಡಿದರು. ಸತ್ತನರೆಲ್ಲಾ ಮತದಾನ ಮಾಡಿದರೆಂದು ದೂರಿಯವರೆಗೂ ದೂರುಗಳು ಹೋಗಿವೆ

ತುಂಬಿತನಕ್ಕೆ ಕುಂಟನೆವ

ಕೋಳಿ ಈಯುವ ಮೊದಲೇ ತತ್ತಿ ಎಣಿಸುವ ಸಂಸ್ಥಾನಗಳು

ಭಾರತವು ಅಖಂಡವಾಗುಳಿದಿದ್ದರೆ ತಿರುವಾಂಕೂರು ಅವಶ್ಯವಾಗಿ ಅಂಥ ಒಕ್ಕೂಟದಲ್ಲಿ ಸೇರುತ್ತಿತ್ತು ದೇಶದ ವಿಭಜನೆಯಾದ ಬಳಿಕ, ಗಡಿನಾಡಿನ ಸ್ವಾತಂತ್ರವನ್ನು ಸಾರಲು ಅಭ್ಯಂತರವೇನು?" ಎಂದು ತಿರುವಾಂಕೂರಿನ ದಿವಾಣರಾದ ಸರ್. ಸಿ.ಪಿ. ರಾಮಸ್ವಾಮಿ ಅಯ್ಯರರು ಬ್ರಿಟಿಶ ಸಾರ್ವಭೌಮಾಧಿಕಾರವು ನಷ್ಟವಾದೊಡನೆ ತಿರುವಾಂಕೂರು ಸ್ವತಂತ್ರವಾಗುವದೆಂಬ ಮಾತನ್ನು ಹೇಳುವಾಗ ಅಂದಿದ್ದಾರೆ.

ತಿರುವಾಂಕೂರಿನಲ್ಲಿ— ಸ್ವತಂತ್ರವಾಗುವೆವೆನ್ನುವ ಎಲ್ಲ ಸಂಸ್ಥಾನಗಳಲ್ಲಿ ನಿಷ್ಪಕ್ಷಪಾತದ ಮತಗಣನೆಯನ್ನು ನಡೆಸಿ ಸ್ವಾತಂತ್ರ್ಯ ಇಲ್ಲವೆ ಭಾರತದ ಎರಡು ಘಟನಾ ಸಮಿತಿಗಳಲ್ಲಿ ಸೇರುವದನ್ನು ಪ್ರಜಾಭಿಪ್ರಾಯದಂತೆ ನಿರ್ಣಯಿಸಬೇಕು ಎಂಬ ಮಾತಿಗೆ ಪ್ರತಿಮಾಡುತ್ತ ದಿವಾಣರು ಹೀಗೆ ಹೇಳಿದ್ದಾರೆ.

"ಮತಗಣನೆಗೆ ನಾನು ಸಿದ್ಧನಿದ್ದೇನೆಂದು ಹೇಳಿದ್ದೇನೆ. ಮೂರು ತಿಂಗಳಲ್ಲಿ ತಿರುವಾಂಕೂರಿನ ಎಲ್ಲ ವಯಸ್ಕರ ಯಾದಿ ಸಿದ್ಧವಾಗಿ ಮತಗಣನೆ ನಡೆಯುವದು 'ನಿನಗೆ ಸ್ವಾತಂತ್ರ್ಯಬೇಕೇ ಬೇಡವೇ' ಎಂಬುದನ್ನೂ ಪ್ರಜೆಗಳಿಗೆ ಕೇಳುವವನಿದ್ದೆ. ಆದರೆ ಇತ್ತೀಚೆಗೆ ಬಹಳಷ್ಟು ಘಟನೆಗಳು ಸಂಭವಿಸಿವೆ ತಿರುವಾಂಕೂರಿನ ಪ್ರಜೆಗಳು ಸರಕಾರದ ಬೆಂಬಲಕ್ಕೆ ಬಂದಿದ್ದಾರೆ, ಸಂಸ್ಥಾನಕ್ಕೆ ಸ್ವಾತಂತ್ರ್ಯ ಬೇಕು ಎನ್ನುವದೇ ಇಂದಿನ ಪ್ರಜಾಭಿಪ್ರಾಯ. ಸಂಸ್ಥಾನ ಕಾಂಗ್ರೆಸ್ಸಿನ ಶ್ರೀಧಾನು ಪಿಳ್ಳೈಯವರು ಇಂದಿನ ಪರಿಸ್ಥಿತಿಯಲ್ಲಿ ಸಾರ್ವಜನಿಕ ಮತಗಣನೆ ಅಸಾಧ್ಯವೆಂದಿದ್ದಾರೆ. ಇದು ನಿಜ. ಏಕೆಂದರೆ ಅವರ ವಿರೋಧವಾಗಿಯೇ ನಿರ್ಣಯವಾಗುವದರಲ್ಲಿ ಸಂದೇಹವಿಲ್ಲ. ಶ್ರೀಧಾನು ಪಿಳ್ಳೈ ಮೊದಲಾದವರು ದೇಶದ್ರೋಹಿಗಳು ಅವರು ತಮ್ಮ ಕಾಯಕವನ್ನು ಮುಂದೆ ಸಾಗಿಸಿದ್ದೇ ಆದರೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದುವರು.

ಹೀಗೆ ಹೇಳಿ ದಿವಾಣರು ಕೋಳಿ ಈಯುವ ಮೊದಲೇ ತತ್ತಿಗಳನ್ನೆಣಿಸಿಕೊಂಡು ತನ್ನ ಹೆಬ್ಬಾಣಕ್ಕೆ ಅಡ್ಡಬರುವವರನ್ನೆಲ್ಲ ತೊಡೆದು ಹಾಕುವ ಪೌರುಷದ ಮಾತುಗಳನ್ನಾಡಿದ್ದಾರೆ.

(9 ನೆಯ ಪುಟಕ್ಕೆ ಮುಂದುವರಿದಿದೆ.)

ಸಾಮ್ಯವಾದಿಯೆಂದರೆ ಯಾರು?

(ಮೋ. ಕ. ಗಾಂಧಿ)

ಸಾಮ್ಯವಾದವೆಂಬುದು ಸುಂದರ ಶಬ್ದ. ನನಗೆ ತಿಳಿದಮಟ್ಟಿಗೆ ಸಾಮ್ಯವಾದದಲ್ಲಿ ಸಮಾಜದ ಸದಸ್ಯರಿಲ್ಲರೂ ಸಮಾನರು. ಮೇಲು, ಕೀಳೆಂಬುವರಿಲ್ಲ. ಒಂದು ದೇಹದ ಮೇಲ್ಭಾಗದಲ್ಲಿದ್ದಾಕ್ಷಣ ಅದು ಮೇಲಲ್ಲ. ಅಂಗಾಲು ನೆಲವನ್ನು ಮುಟ್ಟುವದೆಂದು ಅದು ಕೀಳೂ ಅಲ್ಲ. ದೇಹದ ಅಂಗೋಪಾಂಗಗಳು ಸಮಾನವಾಗಿರುವಂತೆಯೆ ಸಮಾಜದಲ್ಲಿಯ ಸದಸ್ಯರಿಲ್ಲರೂ ಸಮಾನರು. ಇದೀಗ ಸಾಮ್ಯವಾದ.

ಅದರಲ್ಲಿ ರಾಜನೂ ರೈತನೂ ಬಡವನೂ ಭಲ್ಲಿದನೂ ಒಡೆಯನೂ ಆಳೂ ಎಲ್ಲರೂ ಒಂದೇ ಮಟ್ಟದವರು, ಧಾರ್ಮಿಕ ಪರಿಭಾಷೆಯಲ್ಲಿ ಹೇಳಬೇಕಾದರೆ ಸಾಮ್ಯವಾದದಲ್ಲಿ ದ್ವೈತವಿಲ್ಲ. ಎಲ್ಲವೂ ಅದ್ವೈತ, ಐಕ್ಯ ಆದರೆ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸಮಾಜದಲ್ಲಿ ದ್ವೈತವೂ ಭೇದವೂ ಕಾಣುತ್ತವೆ. ಐಕ್ಯವೆಂಬುದು ಇಲ್ಲವೇ ಇಲ್ಲ. ಇವನೊಬ್ಬ ಉಚ್ಚ, ಅವನೊಬ್ಬ ನೀಚ, ಈತ ಹಿಂದೂ, ಆತ ಮುಸ್ಲಿಂ, ಇನ್ನೊಬ್ಬ ಕ್ರೈಸ್ತ, ಮತ್ತೊಬ್ಬ ಪಾರ್ಸಿ, ಮಗದೊಬ್ಬ ಸೀಖ, ಮಾರೊಬ್ಬ ಯಹೂದ್ಯ, ಇವರೊಳಗೇ ಮತ್ತೆ ಒಳಪಂಗಡಗಳು ಬೇರೆ. ನನ್ನ ಕಲ್ಪನೆಯ ಐಕ್ಯವೆಂದರೆ, ಬಹುರೂಪದಲ್ಲಿ ಸಾಮರಸ್ಯ, ಏಕರೂಪತೆ ಉಳ್ಳದ್ದು.

ಈ ಅವಸ್ಥೆಯನ್ನು ಮುಟ್ಟಬೇಕಾದರೆ, ದಾರ್ಶನಿಕನ ವಿರಕ್ತ ದೃಷ್ಟಿಯನ್ನಿಟ್ಟುಕೊಂಡು ಎಲ್ಲರೂ ಸಾಮ್ಯವಾದಕ್ಕೆ ಒಲಿಯುವವರೆಗೆ ನಾವು ಮಾಡಬೇಕಾದುದೇನೂ ಇಲ್ಲವೆಂದೂ ತಿಪ್ಪಗೆ ಕೂತರೆ ಸಾಗದು. ನಮ್ಮ ಜೀವನವನ್ನು ಪರಿವರ್ತಿಸಿದೆಯೇ, ಬೇಕಾದಷ್ಟು ಭಾಷಣಗಳನ್ನು ಕೊಟ್ಟು, ಪಕ್ಷಗಳನ್ನು ಕಟ್ಟಿ ಬೇಟೆ ಹತ್ತಿರಬಂದೊಡನೆ ಹದ್ದಿನಂತೆ ಅದನ್ನು ಹಿಡಿದುಕೊಳ್ಳಬಹುದು. ಇದು ಸಾಮ್ಯವಾದವಲ್ಲ. ಅದೊಂದು ಹಿಡಿಯಬೇಕಾದ ಬೇಟೆಯೊಂದು ನಾವು ತಿಳಿದಷ್ಟು ಕಾಲ ಅದು ನಮ್ಮಿಂದ ದೂರವಾಗುತ್ತ ಹೋಗುವದು.

ಸಾಮ್ಯವಾದಕ್ಕೆ ಒಲಿಯುವ ಮೊದಲನೆ ಅನುಯಾಯಿಯೊಡನೆ ಅದು ಮೊದಲಾಗುತ್ತದೆ. ಅಂಥ ನಿಜ ಅನುಯಾಯಿಯೊಬ್ಬನಿದ್ದರೆ ಮುಂದೆ ಸೊನ್ನೆಗಳನ್ನು ಸೇರಿಸುತ್ತ ಹೋಗಬಹುದು. ಆ ಒಂದಕ್ಕೆ ಸೇರಿದ ಪ್ರತಿ ಸೊನ್ನೆಯೂ ಸಾಮ್ಯವಾದಿಗಳ ಸಂಖ್ಯೆಯನ್ನು ಹತ್ತುಮಡಿ ಬೆಳೆಸುತ್ತ ಹೋಗುವದು. ಆದರೆ, ಮೊದಲನೆಯವನೇ ಸೊನ್ನೆಯಾದರೆ, ಅರ್ಥಾತ್ ಯಾರೂ ಪ್ರಾರಂಭವನ್ನೇ ಮಾಡದಿದ್ದರೆ, ಮುಂದೆ ಎಷ್ಟೇ ಸೊನ್ನೆಗಳು ಸೇರಿದರೂ ಅದರ ಬೆಲೆ ಸೊನ್ನೆಯೇ ಆದೀತಲ್ಲದೆ ಬೇರೆಯಲ್ಲ. ಅಂಥ ಸೊನ್ನೆಗಳನ್ನು ಬರೆಯಲು ಉಪಯೋಗಿಸಿದ ಕಾಗದವೂ ವೆಚ್ಚವೂಡಿದ ಸಮಯವೂ ದೊಡ್ಡ ಅಪವ್ಯಯವೇ ಸರಿ.

ಈ ಸಾಮ್ಯವಾದ ಸ್ಫಟಿಕದಂತೆ ಪರಿಶುದ್ಧವಾದುದು. ಆದುದರಿಂದ ಅದನ್ನು ಸಾಧಿಸಲು ಸ್ಫಟಿಕದಂಥ ಸಾಧನೆಗಳೇ ಬೇಕು. ಅಶುದ್ಧ ಸಾಧನಗಳಿಂದ ಸಾಧ್ಯಗಳೂ ಅಶುದ್ಧವಾಗುತ್ತವೆ ಆದುದರಿಂದ ರಾಜನನ್ನೂ ರೈತನನ್ನೂ ಸಮಾನರಾಗಿ ಮಾಡುವ ಕೆಲಸ ರಾಜನ ತಲೆಬುರುಡೆಯನ್ನು ಕಡಿದೊಗೆಯುವದರಿಂದ ಕೈಗೂಡುವದಿಲ್ಲ. ಒಡೆಯ ಆಳುಗಳನ್ನು ಸಮಾನರಾಗಿ ಮಾಡುವದಕ್ಕೂ ಈ ಕಡಿಯುವ ನೀತಿ ಉಪಯೋಗಕ್ಕೆ ಬಾರದು. ಅಸತ್ಯದ ಮೂಲಕ ಸತ್ಯವನ್ನು ಯಾರೂ ಮುಟ್ಟಲಾರರು. ಸತ್ಯಸಂಧತೆಯೊಂದೇ ಸತ್ಯವನ್ನು ಸಾಧಿಸುವ ಉಪಾಯ. ಅಹಿಂಸೆಯೂ ಸತ್ಯವೂ ಅವಳಿ ಜವಳಿಯಲ್ಲವೆ? ಇದಕ್ಕೆ "ಇಲ್ಲ" ಎಂಬುದೇ ಖಂಡಿತ ಉತ್ತರ. ಅಹಿಂಸೆಯಲ್ಲಿಯೇ ಸತ್ಯ ಅಡಕವಾಗಿದೆ, ಸತ್ಯದಲ್ಲಿಯೇ ಅಹಿಂಸೆಯುಂಟು! ಅದರಿಂದಲೇ ಅವು ಒಂದೇ ನಾಣ್ಯದ ಎರಡು ಮುಖಗಳೆಂದು ಹೇಳಲಾಗಿದೆ. ಒಂದರಿಂದ ಇನ್ನೊಂದನ್ನು ಬೇರ್ಪಡಿಸುವದು ಸಾಧ್ಯವಿಲ್ಲ. ಎರಡೂ ಬದಿಯ ಲಿಖಿತಗಳನ್ನೋದಿರಿ. ಅವುಗಳಲ್ಲಿ ಅಕ್ಷರಭೇದವಿದ್ದೀತೇ ಹೊರತು ಅರ್ಥಭೇದವಿರದು. ಈ ಪುನೀ ತಾವಸ್ಥೆಯನ್ನು ನಿರ್ದೋಷ ಪಾರಿಶುದ್ಧ್ಯವಿಲ್ಲದೆ ಮುಟ್ಟಲಳವಲ್ಲ. ಮನಸ್ಸಿನಲ್ಲಾಗಲಿ ಕಾಯದಲ್ಲಾಗಲಿ ಕಲ್ಮಷಕ್ಕೆ ಎಡೆಕೊಟ್ಟರೆ ಅಸತ್ಯ ಹಿಂಸೆಗಳು ನಿಮ್ಮಲ್ಲಿ ಮನೆಮಾಡಿದಂತೆಯೆ.

ಆದುದರಿಂದ ಸತ್ಯಸಂಧರೂ ಶುದ್ಧಾಂತಃಕರಣಿಗಳೂ ಆದ ಸಾಮ್ಯವಾದಿಗಳು ಮಾತ್ರ ಹಿಂದುಸ್ಥಾನದಲ್ಲೂ ಜಗತ್ತಿನಲ್ಲೂ ಸಾಮ್ಯವಾದಿ ಸಮಾಜವನ್ನು ಸ್ಥಾಪಿಸಬಲ್ಲರು. ನನಗೆ ತಿಳಿದಂತೆ ಶುದ್ಧಸಾಮ್ಯವಾದಿಯಾದ ದೇಶ ಜಗತ್ತಿನಲ್ಲೆ ಎಲ್ಲಿಯೂ ಇದ್ದಂತಿಲ್ಲ. ಮೇಲೆ ವಿವರಿಸಿದ ಸಾಧನಗಳಿಲ್ಲದೆ ಅಂಥ ಸಮಾಜ ಆಸ್ತಿತ್ವದಲ್ಲಿ ಬರುವದು ಅಸಾಧ್ಯ.

ಕೆಲವು ಯುಕ್ತವಾದ ಸೂಚನೆಗಳು

ಒಮ್ಮೊಮ್ಮೆ ಸ್ವಾತಂತ್ರ್ಯವನ್ನು ಗಳಿಸುವುದಕ್ಕಿಂತ ಉಳಿಸಿಕೊಳ್ಳುವದು ಕಷ್ಟ. ಕಾಂಗ್ರೆಸ್ಸು ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟಿದೆ. ದೇಶಕ್ಕಾಗಿ ಗೆದ್ದುಕೊಟ್ಟ ಈ ಅಮೂಲ್ಯ ಸ್ವಾತಂತ್ರ್ಯವನ್ನು ಕಾಯ್ದಿಡಲು ಕಾಂಗ್ರೆಸ್ಸು ಶಕ್ತವಾಗುವುದೋ ಇಲ್ಲವೋ ಎಂಬುದು ಇನ್ನು ಮೂರು ವರ್ಷಗಳಲ್ಲಿ ತಿಳಿಯಬಹುದಾಗಿದೆ: ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ಸು ತನ್ನತಂತ್ರವನ್ನು ಬದಲಿಸಬೇಕು ಇಲ್ಲಿಯವರೆಗೆ ಹೇಳಿಕೆ ಕೊಡುವುದು, ಭಾಷಣ ಮಾಡುವುದು, ಗದ್ದಲವೆಬ್ಬಿಸುವದು ಎಲ್ಲವೂ ಅಗತ್ಯವಾಗಿದ್ದವು ಹೊಸ ಪರಿಸ್ಥಿತಿಯಲ್ಲಿ ಮೌನವಾಗಿ ಕುಳಿತು ಯೋಜನೆಗಳನ್ನು ರಚಿಸಬೇಕಾಗಿದೆ, ಶಿಸ್ತನ್ನು ಇಟ್ಟುಕೊಳ್ಳಬೇಕಾಗಿದೆ ಮತ್ತು ವಾಕ್ಸಂಯಮವನ್ನು ಪಾಲಿಸಬೇಕಾಗಿದೆ. ಮೊದಲಿನಂತೆಯೇ ಕಾರ್ಯಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ಸಿಗರು ಬಹಳ ಮಾತಾಡುತ್ತಾರೆಂದು ಸಾಮಾನ್ಯರ ಅಭಿಪ್ರಾಯ. ಗತಿಸಿಹೋದ ಲಾರ್ಡ್ ವಿಲ್ಲಿಂಗ್ಡನ್ನರು ಹೇಳುತ್ತಿದ್ದರು.

"ಸಮರ್ಥ ರಾಜತಂತ್ರಜ್ಞನು ತನ್ನ ಬಾಯಿಯನ್ನು ತೆರೆದಿಟ್ಟುಕೊಂಡಿರಬೇಕು" ಎಂದು. ನಮ್ಮ ರಾಜಕಾರಣಿಗಳು ಅದರಲ್ಲೂ ವಿಶೇಷವಾಗಿ ಸರಕಾರೀ ಕೆಲಸದಲ್ಲಿ ನಿರತರಾದವರು ತಮ್ಮ ಬಾಯಿ ಮತ್ತು ಭಿಕ್ಷಾಪಾತ್ರೆಗಳೆರಡನ್ನೂ ಮುಚ್ಚಿಕೊಂಡಿರಬೇಕು. ಹಿಂದೆ ಬರಿಯ ಹೊಣೆಯಿಲ್ಲದ ಹರಟೆ ಹೊಡೆಯುವದರಿಂದ ಯಾವ ಯೋಜನೆಯೂ ಸಾಧಿಸದು; ಕಾಂಗ್ರೆಸ್ಸೇತರ ತಜ್ಞರೊಡನೆ ಸೇರುವುದಿಲ್ಲ, ಅವರ ಅಲೋಚನೆಯನ್ನು ತೆಗೆದುಕೊಳ್ಳುವುದಿಲ್ಲ. ಈಗಲಾದರೂ ಸ್ವಗೃಹವನ್ನು ಸರಿಪಡಿಸಲು ತಡವಾಗಿಲ್ಲ, ಹಾಗೆ ಮಾಡಿ ಆದದ್ದಾಗಲೆಂದು ಎಲ್ಲವನ್ನೂ ಎದುರಿಸಿ ನಿಲ್ಲಬೇಕು ಕಾಂಗ್ರೆಸ್ಸೇತರ ತಜ್ಞರ ಸಾಮರ್ಥ್ಯವನ್ನೂ ಒಳಗೊಳ್ಳಬೇಕು.

ಅಧಿಕಾರ ಬದಲಾವಣೆಯು ಕಾಂಗ್ರೆಸ್ಸಿನ ಮುಖ್ಯ ಗುರಿಯಾಗಿತ್ತು. ಅಗಸ್ಟ ೧೫ ರೊಳಗೆ ಆ ಧ್ಯೇಯವು ಸಾಧಿಸುತ್ತದೆ. ಆದುದರಿಂದ ಕಾಂಗ್ರೆಸ್ಸು ತಾನು ಗೆದ್ದುದನ್ನು ತಹಬಂದಿಗೆ ತರಬೇಕಾಗಿದೆ, ದೇಶದಲ್ಲಿ ಅತಿತ್ವರಿತ ಗತಿಯಿಂದ ಆಗುತ್ತಿರುವ ಆರ್ಥಿಕ ಅಧಃಪತನವನ್ನು ತಡೆಯಬೇಕಾಗಿದೆ. ಮತ್ತು ತನ್ನ ರಕ್ಷಣಾಬಲವನ್ನು ಕಟ್ಟಬೇಕಾಗಿದೆ. ಘಟನಾರಚನೆಯ ಎದೆಯೊಡೆವ ವೇಗವನ್ನು ಇಳಿಸಬೇಕಾಗಿದೆ ಭಾರತದ ರಕ್ಷಣೆಯ ಬಗ್ಗೆ, ಆರ್ಥಿಕ ಯೋಜನೆಗಳಿಗಾಗಿ, ಕೈಗಾರಿಕೆಯ ಯೋಜನೆಗಳ ತಯಾರಿಕೆಗೆಂದು ಮತ್ತು ಸರಕಾರದ ಕಾರ್ಯಾಲಯದ ರಚನೆಗೋಸ್ಕರ ಬೇರೆ ಬೇರೆ ತಜ್ಞಸಮಿತಿಗಳನ್ನು ಏರ್ಪಡಿಸಬೇಕಾಗಿದೆ. ಉತ್ಪನ್ನವನ್ನು ಹೆಚ್ಚಿಸಲು ಶಕ್ತಿಮೀರಿ ಪ್ರಯತ್ನಿಸಬೇಕು. "ಔದ್ಯೋಗೀಕರಣ ಮಾಡು, ಇಲ್ಲವೆ ಮಡಿ" ಎಂಬ ಕೂಗಿನ ಬದಲು "ಉತ್ಪಾದನೆಮಾಡು ಇಲ್ಲವೆ ಮಡಿ" ಎಂಬ ಕೂಗು ಇಂದು ಅವಶ್ಯ. ಈಗಿನ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಎಲ್ಲ ವಿಧದ ಉತ್ಪಾದನೆಯೂ ಇಳಿದು ಹೋಗಿದೆ. ಆ ಮೇಲೆ ಈ ದೇಶದ ಸಂಬಳದ ರೀತಿಯನ್ನು ಕೂಡಲೆ ಸರಿಪಡಿಸಬೇಕು. ಅದೊಂದೇ ಔದ್ಯೋಗಿಕ ಶಾಂತಿಯನ್ನೂ ಉತ್ಪಾದನದ ವೇಗವನ್ನು ಹೆಚ್ಚಿಸಬಲ್ಲದು. ವಾಣಿಜ್ಯತ್ತು ಹಣಗಾಸಿನ ಖಾತೆಗಳು ಭಾರತಕ್ಕೆ ಹೊಸ ಆಯಾತ ಧೋರಣವನ್ನು ಯೋಜಿಸಿವೆ. ಅಧೋರಣವು ಅತಿಪ್ರಸರಣಕ್ಕೂ ಅದರಿಂದುಂಟಾಗುವ ಪರಿಣಾಮಗಳಿಗೂ ದೇಶವನ್ನು ಗುರಿಮಾಡುವುದು. ಆರ್ಥಿಕ ಯೋಜನೆಯು ಈ ದೇಶದ ಆಯಾತ ನಿರ್ಯಾತಗಳ ಧೋರಣವನ್ನು ಎಚ್ಚರಿಕೆಯಿಂದ ಸಿದ್ಧಪಡಿಸಬೇಕು.

ಔದ್ಯೋಗೀಕರಣದ ಬಗ್ಗೆ ಬಹಳ ಮಾತುಕೇಳಿ ಬರುತ್ತದೆ. ವಾಚಾಳಿಗಳು ತಮ್ಮನ್ನೂ ದೇಶವನ್ನೂ ಮೋಸಗೊಳಿಸುತ್ತಿದ್ದಾರೆ. ಮೊದಲನೆಯದಾಗಿ ಔದ್ಯೋಗೀಕರಣವನ್ನು ಸಾಧ್ಯವಾಗಿ ಮಾಡಲವಶ್ಯವಾದ ದೊಡ್ಡ ದೊಡ್ಡ ಸಾಮಗ್ರಿಗಳು ಯುರೋಪು ಅಮೇರಿಕೆಗಳಲ್ಲಿ ದೊರೆಯದಾಗಿವೆ. ಎರಡನೆಯದಾಗಿ ಈ ದೇಶದಲ್ಲಿ ಸಿಮೆಂಟು, ಇಟ್ಟಿಗೆ, ಕಬ್ಬಿಣ, ಉಕ್ಕು ಮತ್ತು ಕಟ್ಟಿಗೆಗಳು ಬೇಕಾದಷ್ಟಿಲ್ಲ. ದೊಡ್ಡ ದೊಡ್ಡ ಯಂತ್ರ ಸಾಮಗ್ರಿಗಳು ದೊರೆತರೂ ಬೇಕಾದಷ್ಟು ಕಟ್ಟಡದ ಸಾಮಾನುಗಳು ಇಲ್ಲವಾಗಿ ಕಾರಖಾನೆಗಳನ್ನು ಕಟ್ಟಲು ಅಸಾಧ್ಯವಾಗಿದೆ; ಯಂತ್ರನಿರ್ಮಿತಿಗವಶ್ಯವಾದ ಮೌಲಿಕ ಸಾಮಗ್ರಿಗಳೂ ಉಪಕರಣಗಳೂ ಇಲ್ಲ. ಕಡೆಯದಾಗಿ ರೈಲಿನ ವ್ಯವಸ್ಥೆಯಾಗಿ ವಸ್ತುಗಳ ಸಾರಿಗೆ ಕೂಡ ಕ್ರಮವಾಗಿ ಇಳಿದುಹೋಗಿದೆ. ಎಲ್ಲವೂ ಸ್ಪಷ್ಟವಾದಂತಿದೆ.

ಭಾರತ ಸರಕಾರದ ಕಾರ್ಯಭವನವು ಗೊಂದಲ ತುಂಬಿದ್ದಾಗಿ ಯಾವ ಕೆಲಸವನ್ನೂ ಬೇಗ ಮುಗಿಸಲು ಅನುಗೊಡುತ್ತಿಲ್ಲ. ತಡವಿಲ್ಲದೆ ಅದರ ಪುನರ್ರಚನೆಯನ್ನು ಮಾಡಲೇಬೇಕು. ಅನಗತ್ಯವಾದ ಕೆಲಸಗಾರರನ್ನು ತೆಗೆದುಹಾಕುವ ಧೈರ್ಯವನ್ನು ಕಾಂಗ್ರೆಸ್ಸು ತೋರಿಸಬೇಕು.

"ಬಹುದೊಡ್ಡ ವಿಶ್ವಾಸ ಘಾತವನ್ನು ಮಾಡಿ ಅತ್ಯಂತ ಅರಾಜಕ ಗೊಂದಲವನ್ನುಂಟು ಮಾಡಲು ಅವರು ವ್ಯವಸ್ಥೆ ಮಾಡುತ್ತಿದ್ದಾರೆ ಲಂಚ, ಮೋಸ' ವಶೀಲಿ, ಅಧಿಕಾರ ದುರುಪಯೋಗ ಇವು ಬ್ರಾಹ್ಮಣರ ಅರಸೊತ್ತಿಗೆಯ ಪರಿವಾರಗಳಾಗುವವು" ಎಂಬ ಚರ್ಚಿಲ್ಲರ ದುರ್ಭವಿಷ್ಯವನ್ನು ರಾಷ್ಟ್ರವು ಸುಳ್ಳುಮಾಡಬೇಕಾಗಿದೆ (ಅಜ್ಞಾತ)

(ಬರಹಗಾರರು ದೇಶದ ರಾಜತಂತ್ರದ ಅಭ್ಯಾಸಿಗಳು. ನಾನು ಕಾಂಗ್ರೆಸ್ಸಿನ ಕೆಲಸದ ಮಾಹಿತಿಯುಳ್ಳವನಲ್ಲ. ಆದುದರಿಂದ ಮೇಲಿನ ಸೂಚನೆಗಳ ಮೇಲೆ ನಾನು ಅಭಿಪ್ರಾಯ ಕೊಡಲಾರೆ; ಅವುಗಳ ಬೆಲೆಯನ್ನರಿತು ಸ್ವೀಕರಿಸಬಹುದು. ಮೊ. ಕ. ಗಾಂಧಿ

ಪಂಚಾಯ್ತಿ ಅಧ್ಯಕ್ಷರ ಚುನಾವಣೆ ಅಮೇರಿಕಾ ಪದ್ಧತಿಯಂತೆ

ಮದ್ರಾಸ್ ಸ್ಥಾಪಕ ಸಂಸ್ಥೆಗಳ ಮಂತ್ರಿಗಳು ಕಳೆದ ತಿಂಗಳು ವೃತ್ತಪತ್ರಿಕೋದ್ಯೋಗಿಗಳ ಸಭೆಯಲ್ಲಿ ಮಾತಾಡುತ್ತಾ ಅಮೇರಿಕಾ ಪದ್ಧತಿಯ ಮೇಲೆ ಪಂಚಾಯ್ತಿ ಅಧ್ಯಕ್ಷನನ್ನು ಹಳ್ಳಿಯ ಜನರಿಂದಲೇ ಆರಿಸಲ್ಪಡುವನೆಂದು ಹೇಳಿದುದು ಪ್ರಶಂಸಾರ್ಹವಾಗಿದೆ. ಕೆಲವಳ್ಳಿಗಳಲ್ಲಿ ತಮ್ಮ ಪ್ರತಿಭೆ ಜೋರುಜುಲ್ಮೆಗಳಿಂದ ಬೆದರಿಸುವ ಸ್ವಭಾವದ ಜನರಿಗೆ ಇನ್ನುಮೇಲೆ ಸ್ಥಳವಿಲ್ಲದಂತಾಗಿ ಯೋಗ್ಯರಾದವರು ಆರಿಸಲ್ಪಡುವ ಸಂಭವವಿದೆ. ಇವಲ್ಲದೆ ಅಧ್ಯಕ್ಷರಾದವರು ಒಬ್ಬ ಸದಸ್ಯನನ್ನು ನಾಮಕರಣ ಮಾಡಿ ತೆಗೆದುಕೊಳ್ಳುವ ಹಕ್ಕು 1935 ಆಕ್ಟ್‌ನಂತೆ ಇರುವುದು ಒಳ್ಳೆಯದೆಂದು ನಾನು ಸದರಿ ಮಂತ್ರಿಗಳಿಗೆ ಸೂಚಿಸುತ್ತೇನೆ. ಆರಿಸಿ ಬರಲು ಸಾಧ್ಯವಾಗದ ಯೋಗ್ಯರೂ, ಬುದ್ಧಿವಂತರೂ ಪಂಚಾಯ್ತಿ ಆಡಳಿತದಲ್ಲಿ ಅಧ್ಯಕ್ಷರಿಗೆ ಸಹಾಯ ಮಾಡಲು ಬರುತ್ತದೆ

ಎನ್. ಸಣ್ಣನಗೌಡ—ನಿಟ್ಟೂರು.

[ಶ್ರೀ ಸಣ್ಣನಗೌಡರ ಅಭಿಪ್ರಾಯಗಳನ್ನು ನಾವು ಸಮರ್ಥಿಸಲಾರೆವು. ಬೆದರಿಸುವ, ಪ್ರತಿಭೆಯುಳ್ಳ ವ್ಯಕ್ತಿಗಳೇ ಎಂಥಾ ಪ್ರಜಾರಾಜ್ಯಭಾರ (Democracy) ದಲ್ಲೂ ಮುಂದುವರಿದು ಗೆಲಿಯುವರು. ಸಾಕ್ಷರತಾ ಪ್ರಚಾರವಿಲ್ಲದೆ ಕುರಿಗಳಂತಿರುವ ನಮ್ಮ ಭಾಗಗಳನ್ನು ವಿದ್ಯೆಯಲ್ಲಿ ಉನ್ನತ ಸ್ಥಾನವನ್ನೇರಿದ ಪರರಾಷ್ಟ್ರಗಳಿಗೆ ಹೋಲಿಸಬಾರದು. ಊರಿನ ಸಾಹುಕಾರನು ಎಷ್ಟೇ ಧಡ್ಡನಿರಲಿ ಅವನನ್ನು ಸೋಲಿಸುವುದು ಕಷ್ಟ ಇನ್ನು ನಾಮಕರಣದ ವಿಷಯ-ಅದನ್ನು ಸರ್ಕಾರದವರೊಪ್ಪಿದರೆ ಅಧ್ಯಕ್ಷನು ವಿದ್ಯಾವಂತರನ್ನಾರಿಸುವನೆಂಬ ಭರವಸೆ ಏನು? ತನಗೆ ಬೇಕಾದ, ಸಮಯ ಬಿದ್ದಾಗ ಕೈಯೆತ್ತುವ ತನ್ನ ಬಾಲ ಬಡಿಯುವವರನ್ನಾರಿಸುತ್ತಾನೆ—ಸಾಕ್ಷರತಾ ಮತ್ತು ರಾಜಕೀಯ ಜ್ಞಾನದ ಪ್ರಚಾರವೇ ಇದಕ್ಕೆ ಮದ್ದು ಸಂಪಾದಕ ನವಭಾರತ]

ದೆಹಲಿಯಲ್ಲಿ ಘಟನಾ ಸಮಿತಿ ಸಭೆಯು 15—7—47 ರಿಂದ ಪ್ರಾರಂಭವಾಯಿತು. ಸಂಸ್ಥಾನ ಮತ್ತು ಲೀಗ್ ಸದಸ್ಯರು ಈಗ ಭಾಗವಹಿಸಿರುವರು.

— ತುಂಟತನಕ್ಕೆ ಕುಂಟನೆವ —

(5 ನೆಯ ಪುಟದಿಂದ ಮುಂದುವರಿದಿದೆ.)

ಸ್ವತಂತ್ರವಾದ ತಿರುವಾಂಕೂರು ಹಿಂದುಸ್ತಾನ ಪಾಕಿಸ್ತಾನಗಳೆರಡರೊಡನೆಯೂ ಸಂರಕ್ಷಣೆ, ಸಾರಿಗೆ ಮತ್ತು ವಿದೇಶ ವ್ಯವಹಾರಗಳ ವಿಚಾರದಲ್ಲಿ ಮನಃ ಪೂರ್ವಕವಾದ ಸಹಕಾರ, ಸದ್ಭಾವನೆಗಳಿಂದ ಒಡಂಬಡಿಕೆ ಮಾಡಿಕೊಳ್ಳುವದು ಎಂದು ಸರ್. ಸಿ. ಪಿ. ಯವರು ಹೇಳುತ್ತಾರೆ. ಯಾವುದೊಂದು ಘಟನಾ ಸಮಿತಿಯಲ್ಲಿ ಸೇರಿಕೊಂಡು ಕಾರ್ಯಮಾಡುವುದಕ್ಕೂ ಈ ಕಾರ್ಯಾಚರಣೆಗೂ ಹೆಚ್ಚಿನ ಭೇದವಿದೆಯೆಂದೆನ್ನಲು ಬಾರದಾಗಿದೆ ತಿರುವಾಂಕೂರು ಅಥವಾ ಇನ್ನಿತರ ಯಾವುದೇ ಸಂಸ್ಥಾನವು ೩ ಕೋಟಿ ಪ್ರಜೆಗಳುಳ್ಳ ಒಕ್ಕೂಟ ಹಿಂದುಸ್ತಾನದ ಕೂಡ ಕೂಡಿಕೊಳ್ಳುವದು ಹಿತಕರವೋ ಅಥವಾ ಕೇವಲ ಸುಮಾರು ೭ ಕೋಟಿ ಪ್ರಜೆಗಳುಳ್ಳ ಸಾವಿರಾರು ಮೈಲು ಅಂತರಗಳಲ್ಲಿ ವಿಭಕ್ತವಾಗಿ ಇರುವ ಪಾಕಿಸ್ತಾನದ ಕೂಡ ಕೂಡಿಕೊಳ್ಳುವದು ಹಿತಕರವೋ ಎಂಬದನ್ನು ವಿಚಾರ ಮಾಡುವದೂ ಮಹತ್ವದ ವಿಚಾರವಾಗಿದೆ.

ಏಕೆಂದರೆ ಭಾರತದಲ್ಲಿ ಎರಡು ವಸಾಹತು ಸರಕಾರಗಳು ಆಸ್ತಿತ್ವದಲ್ಲಿ ಬರುವವಾಗಿದ್ದು ಯಾವ ಸಂಸ್ಥಾನವೂ ಇವುಗಳಿಂದ ಪ್ರತ್ಯೇಕವಾಗಿ ನಿಂತು ಇರಲಾರದು ಬಹಳಷ್ಟು ಸಂಸ್ಥಾನಗಳು ಹಿಂದುಸ್ತಾನ ಒಕ್ಕೂಟದ ಕ್ಷೇತ್ರವ್ಯಾಪ್ತಿಯಲ್ಲಿಯೇ ಇರುವವಾಗಿವೆ. ಏಕಾಂಗಿಗಳಾಗಿ ಬಾಳುವ ಆಶೆಯನ್ನು ಸಂಸ್ಥಾನಗಳು ಸರ್ವಥಾ ಹಿಡಿಯುವಂತಿಲ್ಲ. ಸಂಸ್ಥಾನಗಳು ಸ್ವಾತಂತ್ರ್ಯವನ್ನು ಸಾರಿದಲ್ಲಿ ಅವುಗಳನ್ನು ವಿಮಿತ್ರತ್ವದಿಂದ ಕಾಣಲಾವೆವು. ಎಂದು ಕಾಂಗ್ರೆಸ್ಸು ಹೇಳಿದೆ ಮುಸ್ಲಿಂ ಲೀಗಿನ ಪರವಾಗಿ ಬ್ಯಾ. ಜಿನ್ನಾರವರು ಸ್ವತಂತ್ರವಾಗುವ ಸಂಸ್ಥಾನಗಳೊಡನೆಯೂ ತಾವು ಸಹಕರಿಸುವೆವು ಅವುಗಳ ಸ್ವಾತಂತ್ರ್ಯವನ್ನು ಮನ್ನಿಸುವೆವು. ಎಂದು ಹೇಳಿದ್ದರೂ ಸಂಸ್ಥಾನಗಳಿಗೆ ಅದರಿಂದ ಹೆಚ್ಚು ಪ್ರಯೋಜನವೇನೂ ಆಗುವಂತಿಲ್ಲ. ಏಕೆಂದರೆ ಸ್ವತಃ ದುರ್ಬಲವಿರುವ ಪಾಕಿಸ್ತಾನವು ತನ್ನ ಹಿತಸಾಧನೆಗಾಗಿಯೇ ಈ ಮಾತನ್ನಾಡಿದೆಯಲ್ಲದೆ ಸಂಸ್ಥಾನಗಳ ಹಿತದದೃಷ್ಟಿಯಿಂದಲ್ಲ. ಹಿಂದುಸ್ತಾನದ ಹಾಗೂ ಪ್ರಜೆಗಳ ವಿರೋಧವೆರಡನ್ನೂ ಸಂಸ್ಥಾನಗಳು ತಮ್ಮ ಬಲದಿಂದ ಇಲ್ಲವೆ ಪಾಕಿಸ್ತಾನದ ಸಹಾಯದಿಂದ ಎದುರಿಸಲೆತ್ನಿಸುವದು ದುಸ್ಸಾಹಸವೇ ಆಗಿದೆ. ದೇಶದ ಪ್ರಜಾಭಿಪ್ರಾಯವನ್ನೆದುರಿಸಿ ಯಾವ ರಾಜಶಾಹಿಯೂ ಸಾರ್ವಭೌಮತ್ವವೂ ಬದುಕಿಲ್ಲವೆಂಬುದನ್ನು ಇತಿಹಾಸವು ಸಾರುತ್ತಿದೆ.

ಹೀಗಿದ್ದೂ ತುಂಟತನ ಮಾಡಲೆತ್ನಿಸುವ ತಿರುವಾಂಕೂರು ಕುಂಟು ನೆವವನ್ನು ಮುಂದೆಮಾಡುತ್ತಿರುವದು ಶುಭಚಿಹ್ನವಲ್ಲ. "ಸಂಸ್ಥಾನದಲ್ಲಿ ಮತಗಣನೆ ನಡೆಯಲಿ. ಅಹ್ವಾನವನ್ನು ಸ್ವೀಕರಿಸಲು ಕಾಂಗ್ರೆಸ್ಸು ಸಿದ್ಧವಿದೆ." ಎಂದು ಶ್ರೀ. ಶಂಕರರಾವ ದೇವ ಅವರು ಹೇಳಿದ್ದಾರೆ.

ಇಂಥ ಸಮಯದಲ್ಲಿ ತಿರುವಾಂಕೂರು, ಹೈದ್ರಾಬಾದ ಮೊದಲಾದ ಸ್ವತಂತ್ರ್ಯ ಸಾರಲಿಚ್ಛಿಸುವ ಸಂಸ್ಥಾನಗಳಲ್ಲಿ ಪ್ರಜಾಭಿಪ್ರಾಯವನ್ನು ಸಂಗ್ರಹಿಸುವದವಶ್ಯವಾಗಿದೆ.

ಸಂಸ್ಥಾನಗಳ ಭವಿತವ್ಯದ ನಿರ್ಧಾರದಲ್ಲಿ ಬ್ರಿಟಿಶ ಸರಕಾರದ ಹೊಣೆಯು ತುಂಬಾ ಇದೆ. ಪಂಜಾಬ ಬಂಗಾಲ, ಗಡಿನಾಡುಗಳಲ್ಲಿ ಮತಗಣನೆಯ ತತ್ವಕ್ಕೆ ಪ್ರಾಧಾನ್ಯವನ್ನಿತ್ತು ಗಡಿನಾಡಿನಲ್ಲಿ ಮತಗಣನೆ ಬೇಡವೆನ್ನುತ್ತಿದ್ದರೂ ಅದನ್ನು ಕಡ್ಡಾಯವನ್ನಾಗಿ ಹೇರಿರುವ ಬ್ರಿಟಿಶ ಸರಕಾರವು ಸಂಸ್ಥಾನಗಳಿಗೆ ನಿರಂಕುಶ ವ್ಯೂಹವನ್ನು ತೆರವು ಮಾಡಿಕೊಡುವದು ಯೋಗ್ಯವಲ್ಲ. ಇದುವರೆಗೆ ಬ್ರಿಟಿಶ ಸರಕಾರಕ್ಕೂ ಬ್ರಿಟಿಶ ಭಾರತ ಸರಕಾರಕ್ಕೂ ಸಂಸ್ಥಾನಗಳ ಮೇಲೆ ಅಧಿಕಾರವಿತ್ತು. ಈಗ ಬ್ರಿಟಿಶ ಸರಕಾರದ ಅಧಿಕಾರವು ಹೋದರೂ ಬ್ರಿಟಿಶರ ಬದಲು ಬರುವ ಭಾರತ ಸರಕಾರಕ್ಕೆ ಸಂಸ್ಥಾನಗಳ ಪ್ರಜಾಹಿತವನ್ನು ಕಾಪಾಡಲು ಯೋಗ್ಯ ಅಧಿಕಾರವಿರಬೇಕಾದುದು ಅಗತ್ಯವಾಗಿದೆ.

ಆದುದರಿಂದ ಸಂಸ್ಥಾನಿಕರು ತಮ್ಮ ಸಂಸ್ಥಾನಗಳ ಭವಿತವ್ಯದ ಬಗ್ಗೆ ಪ್ರಜಾಭಿಪ್ರಾಯವನ್ನು ಸಂಗ್ರ

ಹಿಸಿ ಅವರ ತೀರ್ಮಾನಕ್ಕನುಸರಿಸಿ ಸಡಯು ವಂತೆ ಒತ್ತಾಯ ಮಾಡಬೇಕಾದುದು, ಇನ್ನೂ ಸಂಸ್ಥಾನಿಕರ ಮೇಲೆ ಅಧಿಕಾರವಿರುವ ಬ್ರಿಟಿಶ ಸರಕಾರದ ಕರ್ತವ್ಯವಾಗಿದೆ. ಹಾಗೆ ಮಾಡದೆ ಹೋದಲ್ಲಿ ಬ್ರಿಟಿಶರು ಮುಂದೆ ಸಂಸ್ಥಾನಿಕರ ಮೂಲಕವಾಗಿ ಭಾರತದಲ್ಲಿ ಸಂಭವಿಸಬಹುದಾದ ದುರ್ಘಟನೆಗಳಿಗೆ ಹೊಣೆಗಾರರಾಗಿಯೇ ಇರಬೇಕಾಗುವದು.

ಅದಕ್ಕಾಗಿ ಸಂಸ್ಥಾನಗಳಲ್ಲಿ ಬೇಗನೆ ನಿಷ್ಪಕ್ಷಪಾತದ ಮತಗಣನೆಗೆ ಅವಕಾಶವನ್ನುಂಟುಮಾಡಿಕೊಡುವದು ಎಲ್ಲರ ದೃಷ್ಟಿಯಿಂದ ಹಿತಕರವಾದುದಾಗಿದೆ. ಅಂದರೆ ಸರ. ಸಿ. ಪಿ. ಯವರ ಹೇಳಿಕೆಯಂತೆ ಪ್ರಜೆಗಳಿಗೆ ಸಂಸ್ಥಾನಗಳು ಸ್ವತಂತ್ರವಾಗುವದು ಬೇಕೋ ಬೇಡವೋ ಎಂಬುದು ತಾನಾಗಿಯೇ ವಿದಿತವಾಗುವದು. (ಜೈಹಿಂದ್)

ರಷ್ಯವು ಬಿಗುವಿನಿಂದೇಕಿದೆ

(3 ನೆಯ ಪುಟದಿಂದ ಮುಂದುವರಿದಿದೆ)

ಧಾನ್ಯದ ಉತ್ಪಾದನೆಯು ಬಹಳ ಕಡಮೆಯಾಗಿದೆ. ರಶಿಯದಲ್ಲಿಂದ ಆಹಾರದ ಅಭಾವವಿದೆ. ಸೀದಾ ಪದ್ಧತಿಯು ಹೋಗುವದೆಂದು ಸ್ಟಾಲಿನ್ನರು ಹೇಳಿದ್ದರೂ ಇನ್ನೂ ಸೀದಾ ಪದ್ಧತಿ ಹೋಗಿಲ್ಲ. ಆದರೆ ಅಲ್ಲಿ ಬರಗಾಲದ ಭೀತಿ ಮಾತ್ರ ಇಲ್ಲ.

ರಶಿಯದ ಜನಜೀವನದ ಮಟ್ಟವು ಇತರ ಪಾಶಿಮಾತ್ಯ ರಾಷ್ಟ್ರಗಳ ಜೀವನ ಮಟ್ಟಕ್ಕಿಂತಲೂ ಬಹಳ ಕೆಳತರಗತಿಯಲ್ಲಿದೆ.

ಒಟ್ಟಿನಲ್ಲಿ ಹೇಳುವದಾದರೆ ಯುದ್ಧ ಪೂರ್ವ ರಶಿಯಕ್ಕಿಂತಲೂ ಇಂದಿನ ಯುದ್ಧಾನಂತರ ರಶಿಯವು ಆರ್ಥಿಕ ದೃಷ್ಟಿಯಿಂದ ಬಲು ಬಲಹೀನವಾಗಿದೆಯೆನ್ನಲಡ್ಡಿಯಿಲ್ಲ. ಯಂತ್ರೋಪಕರಣಗಳು, ಇತರ ಜೀವನಾವಶ್ಯಕ ಸಾಮಗ್ರಿಗಳು ಅದಕ್ಕೆ ಬಹಳಷ್ಟು ಬೇಕಾಗಿವೆ. ಹೊರಗಿನಿಂದ ಅವು ಅದಕ್ಕೆ ಎಷ್ಟು ಬೇಗ ಬೇಗ ಸಿಗುವವೋ ಅಷ್ಟು ಬೇಗ ರಶಿಯವು ತನ್ನ ಗತಸಾಮರ್ಥ್ಯವನ್ನು ಪಡೆಯಬಹುದಾಗಿದೆ.

ಆದರೆ ಇದರಿಂದ ರಷಿಯದ ಪರಿಸ್ಥಿತಿಯಲ್ಲಿ ಬಿಕ್ಕಟ್ಟು ತೋರಿ ಬರುವ ಸಂಭವ ಕಂಡುಬರುವದಿಲ್ಲ. ಸರಕಾರದ ಕೈಯಿರಬಹುದಾದಂಥ ಕ್ರಾಂತಿಯು ಕತ್ತುಬಂಡಾಯದ ಲಕ್ಷಣಗಳಾವೂ ಇಲ್ಲ. ರಶಿಯನ್ನರಲ್ಲಿ ತಮ್ಮ ದೇಶದ ಹಾಗೂ ತಮ್ಮ ಧ್ಯೇಯದ ಬಗ್ಗೆ ಅಪಾರ ವಿಶ್ವಾಸವು ಇನ್ನೂ ಇದೆ.

ಆದುದರಿಂದ ಮಿತ್ರರಿಂದ ಅವರು ಕೊಡಲೊಪ್ಪುವಷ್ಟನ್ನೇ ತೆಗೆದುಕೊಳ್ಳಬೇಕೆನ್ನುವ ಪರಿಸ್ಥಿತಿಯೇನೂ ರಶಿಯಕ್ಕಿಲ್ಲವೆನ್ನಬಹುದು ಬಿಗಿ ಹಿಡಿಯುವದರಿಂದ ಘಟನೆಗಳು ಅವರಿಗೆ ಹಿತಕರವಾಗಿ, ಅನುಕೂಲವಾಗಿ ಪರಿಣಮಿಸಲೂಬಹುದು.

ಈ ವಿಚಾರಕ್ಕವಕಾಶವೂ ಇದೆ. ಅಮೇರಿಕೆಯಿಂದು ಉತ್ಪತ್ತಿಯಲ್ಲಿ ಶ್ರೇಷ್ಠವಾಗಿದರೂ ಜಗತ್ತಿನಲ್ಲಿಯ ಬಡಾಢ್ಯ ರಾಷ್ಟ್ರದ ತನ್ನ ಸಾತ್ಮನವನ್ನು ಅದಿಷ್ಟರ ಮಟ್ಟಿಗೆ ಯಶಸ್ವಿಯಾಗಿ ಸೆರವೇರಿಸಬಹುದು ಎಂಬದು ಸಂದೇಹದ ಮಾತಾಗಿದೆ.

ಗ್ರೀಸ ತುರ್ಕಸ್ತಾನಗಳಿಗೆ ಸಹಾಯ ನೀಡುವ ಟ್ರೂಮನ್ನರ ಯೋಜನೆಯು ಅವರೆಣಿಸಿದಷ್ಟು ಬೇಗ ಕಾರ್ಯರೂಪದಲ್ಲಿ ಬರುವ ಲಕ್ಷಣವಿಲ್ಲ. ಮಧ್ಯಪೂರ್ವದಲ್ಲಿ ಅಮೇರಿಕೆಯು ಧೋರಣವೇನಿರಬೇಕು ಎಂಬದಿನ್ನೂ ಅನಿಶ್ಚಿತ ರೂಪದಲ್ಲಿಯೇ ಇದೆ. ವಿದೇಶದಲ್ಲಿ ಅಮೇರಿಕೆಯು ಹೊಣೆ ಹೊತ್ತಿರುವ ವೆಚ್ಚದ ಅಂಕಗಳು ಅಮೇರಿಕೆಯ ಅರ್ಥಶಾಸ್ತ್ರಜ್ಞರಲ್ಲಿ ದಿಗಿಲನ್ನುಂಟು ಮಾಡಿದೆ. ಜರ್ಮನಿ ಮತ್ತು ಜಪಾನಗಳಲ್ಲಿಯ ವೆಚ್ಚವನ್ನು ಕಡಿಮೆ ಮಾಡಬೇಕು. ಎಂಬ ಅಭಿಪ್ರಾಯ ಬಲವಾಗತೊಡಗಿದೆ.

ಅಮೇರಿಕೆಯಲ್ಲಿ ಇನ್ನು ೧೦-೧೫ ವರ್ಷಗಳಲ್ಲಿ ಪ್ರಬಲವಾದ ಆರ್ಥಿಕ ಮಗ್ಗುಟ್ಟು ತಲೆದೋರಬಹುದು ಎಂದು ಅಮೇರಿಕನ್ನರಲ್ಲಿ ಭಯವಿದೆ. ಯುರೋಪದ ಅನೇಕ ರಾಷ್ಟ್ರಗಳು ಸಹ ಹಾಗಾಗಬಹುದು ಎಂದು ತಿಳಿದಿವೆ. ಆ ವಿಚಾರ ಖಂಡಿತವೆಂದು ರಶಿಯವು ನಂಬಿದೆ.

(ಜೈ ಹಿಂದ್)

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:**— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ. **ಅನಂತಪುರ:**— ಅನಂತಪುರ, ಧೂರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:— ಪತ್ತಿಕೊಂಡ.
ಕಡಪ:— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ್ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Et , Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟ್ ಬಟ್ಟಿ, ಬನಾರಸ್ ಜರಿ, ಶಿಲ್ಕು-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ನಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂಪ್ಪ. ಪರೀಕ್ಷಿಸಿ ಮನಗಾಣಿರಿ.

ಸ್ವತಂತ್ರ ಹಿಂದೂಸ್ತಾನ ಚುನಾಯಿತ ಗವರ್ನರರು

೧೫ ನೆಯ ತಾ. ಸರದಾರ ವಲ್ಲಭಭಾಯಿಪಟೇಲರು ಘಟನಾಸಮಿತಿಯಲ್ಲಿ ಪ್ರಾಂತ್ಯದ ಘಟನೆಯ ಉಪಸಮಿತಿಯನ್ನೊಪ್ಪಿಸಿದರು ಅದರ ಮುಖ್ಯಾಂಶಗಳು ಹೀಗಿವೆ. ವಯಸ್ಕರು ವೋಟುಕೊಟ್ಟು ನೇರವಾಗಿ ಅವರನ್ನು ಆರಿಸುವಂತಿರಬೇಕು. ಅವರ ಅಧಿಕಾರಾವಧಿ ೪ ವರ್ಷವಿರಬೇಕು. ೩೫ ವರ್ಷಮೀರಿದ ಹಿಂದೂಸ್ತಾನದ ಪ್ರತಿಯೊಬ್ಬ ನಾಗರೀಕನು ಗವರ್ನರರ ಚುನಾವಣೆಗೆ ನಿಲ್ಲಬಹುದು. ಅವರ ಸಂಬಳ ಭತ್ತೆ ಪ್ರಾಂತೀಕ ಶಾಸನಸಭೆ ನಿರ್ಣಯಿಸಬೇಕು. ಮಂತ್ರಿಗಳನ್ನು ಗವರ್ನರನೇ ಆರಿಸುವನು. ಮತ್ತು ಅವನ ಒಪ್ಪಿಗೆಯಿರುವವರೆಗೆ ಅವರು ಅಧಿಕಾರದಲ್ಲುಳಿಯುವರು.

ಶಾಸನ ಸಭೆಗೆ ಸದಸ್ಯರು ಲಕ್ಷದ ಜನಸಂಖ್ಯೆಗೊಬ್ಬರಂತೆ ಆರಿಸಲ್ಪಡುವರು. ಪ್ರಾಂತಗಳಲ್ಲಿ ಒಂದೇ ಶಾಸನಸಭೆ ಇರುವುದೊಳ್ಳೆಯದು ಆಯಾ ಪ್ರಾಂತದ ಸದಸ್ಯರಿಗೆ ಬೇಕಾದರೆ ಮೇಲ್ಮನೆ ರಚಿಸಿಕೊಳ್ಳಬಹುದು.

Guarranteed Pure Pyra Gingelly o

Best for Pickles, Cooking & Cooling.

DISTRIBUTORS:—

1. M/S. . BUSANJEE [illegible] M VENKOJI
General Merchants [illegible] Street Bellary.
2 M/S V M. GIRI [illegible]
(Prop:- M. S Acharya) Ca[illegible]reet, Bellary

ಶುದ್ಧ! ಗ್ಯಾರಂಟಿಯಾದ್ದು!! ಸತ್ವಕ

— ಪೈರ ಎಳ್ಳೆಣ್ಣೆ —

ಕಣ್ಣಿಗೆ ಬಹಳ ತಂಪಾದ್ದು. ಅಡಿಗೆಯ ಎಲ್ಲಾ ಪದಾರ್ಥಗಳಿಗೆ ಬಳಸಲು ಶ್ರೇಷ್ಠವಾದ ಎಣ್ಣೆಯಾದ
ಉಪ್ಪಿನಕಾಯಿಗೆ ಈ ಎಣ್ಣೆಯನ್ನು ಪಯೋಗಿಸುವದರಿಂದ ಬಹಳಕಾಲ ಕೆಡದಂತಿರಬಹುದು.

ಪಾಂಚಲಧಿಕಾರ ಉಳ್ಳವರು. 1) ಎಂ. ಹುಸೇಂಜಿರಾವ್, ಎಂ ವೆಂಕೋಜಿರಾವ್. ತೇರುಬೀದಿ, ಬಳ್ಳಾರಿ.
2) ವಿ. ಎಂ ಗಿರಿ ಆಂಡ್ ಸನ್ಸ್-ತೇರು ಬೀದಿ, ಬಳ್ಳಾರಿ. (ಎಂ. ಎಸ್. ಆಚಾರ್

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

ಈ ವಿದ್ಯಾಪೀಠವು 15—7—1947 ಕ್ಕೆ ಪ್ರಾರಂಭವಾಗಲಿದೆ ಗವರ್ನಮೆಂಟು ರಿಜಿಸ್ಟ್ರೇಷನ್ ಪಡೆಯಲು ಅರ್ಹವಾಗುವಂತೆ (Board of Indian Medicine Madras) ಮದ್ರಾಸ್ ಸರ್ಕಾರದ ನಿಯಮಗಳನ್ನನುಸರಿಸಿ-ಶಿಕ್ಷಣ ಪ್ರಣಾಲಿ, ಪರೀಕ್ಷೆಗಳ ಏರ್ಪಾಟು ಮಾಡಲಾಗಿದೆ ವಿದ್ಯಾಪೀಠದ ನುನ್ನತಿಗೂ (Recognition) ಸರ್ಕಾರದ ಸಹಾಯಕ್ಕೂ ಯತ್ನಗಳು ಸಾಗಿವೆ. ವಿದ್ಯಾಪೀಠವು ನಗರಕ್ಕೆ ದೂರವಾದ ತೋಟದ ಬಂಗ್ಲೆಯಲ್ಲಿ-ಮನೋಹರ ವಾತಾವರಣದಲ್ಲಿ ಸ್ಥಾಪಿತವಾಗುವದು. ಬಹುಕಾಲದವರೆಗೆ ಪ್ರೇಮವಿದ್ಯಾಪೀಠದಲ್ಲಿ ಶಿಕ್ಷಕರಾಗಿದ್ದವರೇ ಇಲ್ಲಿಯ ವ್ಯಾಧ್ಯಾಪಕರಾಗಿರುವರು S. S. L. C. ಯಾ ಮೆಟ್ರಿಕ್ ಮುಗಿಸಿದವರಿಗೆ ಅಧವಾ ಅದಕ್ಕಿಂತ ಹೆಚ್ಚಿನ ಶಿಕ್ಷಣ ಹೊಂದಿದವರಿಗೆ ಪ್ರವೇಶಾರ್ಹತೆಯು ದೊರೆಯುತ್ತದೆ. ವಿಶೇಷ ಮಾಹಿತಿಗಾಗಿ 0—1—6 ಸ್ಟಾಂಪ್ ಇಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕಾರ್ಯದರ್ಶಿ
ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH NO. B 17 FOR (Q.H. NO. B-5
Edited & bliPushed by T. B. KESHAVA RAO

ಕೈಹಿಂದ್ Reg. No. M. 4746

ರಣಭೇರಿ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಬಳ್ಳಾರಿ ಜೂಲೈ ೨೮ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಸ್ವಾತಂತ್ರ್ಯ ದಿನೋತ್ಸವ

ಭಾರತವು ಆಗಸ್ಟ್ 15 ಕ್ಕೆ ಸ್ವಾತಂತ್ರ್ಯ ರಾಷ್ಟ್ರವೆಂದು ಸಾರಲ್ಪಡುವದರಿಂದ, ಅಂದು ಬ್ರಿಟಿಷರ ಆಳಿಕೆಯು ಕೊನೆಗಾಣುವುದರಿಂದ, ಸರಕಾರದ ಕಟ್ಟಡಗಳ ಮೇಲೆ ಭಾರತದ ರಾಷ್ಟ್ರಧ್ವಜವನ್ನು ಹಾರಿಸಲು, ಅ ದು ಸರಕಾರದವರೂ ಕೂಡ ಸ್ವಾತಂತ್ರ್ಯದಿನಾಚರಣೆ ಮಾಡಲು ಮದ್ರಾಸ್ ಸರ್ಕಾರದವರು ತಕ್ಕ ಸೂಚನೆಗಳನ್ನು ಕೊಡಲಿದ್ದಾರೆ. ಅಖಿಲಭಾರತ ಚರಕಾಸಂಘದವರ ಮೂಲಕ ರೇಶ್ಮೆ ಬಾವುಟಗಳು ಸಿಕ್ಕಿಕೆಯಾಗಲಿವೆ.

ಬಸವಿಯರನ್ನು ಬಿಡಬಾರದು.

ಮದ್ರಾಸ್ ಪ್ರಾಂತ್ಯದಲ್ಲಿ ದೇವದಾಸಿ ಪದ್ಧತಿಯನ್ನು ವಿರೋಧಿಸಲು ಒಂದು ಕಾಯ್ದೆಯಾಗಲಿದೆ. 16 ವರ್ಷಕ್ಕೆ ಮೇಲ್ಪಟ್ಟ ಹೆಂಗಸರನ್ನು ಈ ಪದ್ಧತಿಗೆ ತಾಕಿದರೆ 6 ತಿಂಗಳ ಶಿಕ್ಷೆ 500 ರೂ. ದಂಡವಾಗುವುದು.

ಮಲಪನ ಗುಡಿ:— ಇಲ್ಲಿಯ 4 ಹರಿಜನರ ಗುಡಿಸಲುಗಳು ಏಕಾಏಕಿ 23-7-47 ಕ್ಕೆ ಭಸ್ಮೀಭೂತವಾದವು. ಅಂದಾಜು 300/- ಲುಕ್ಸಾನಾಗಿದೆ. ಯಾವನ್ನೂ ಅಧಿಕಾರಿಗಳು ತಕ್ಷಣ ತಕ್ಕ ಪರಿಹಾರವನ್ನೊದಗಿಸಲು ಬೇಡಿಕೆ.

ದ್ವಿತೀಯ ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಸಮ್ಮೇಳನ.

ಆಲೂರು ತಾ॥ ಹೊಳಲಗುಂದಿಯ ಶ್ರೀ ಶಿದ್ದನುಲ್ಲನಗೌಡರು ಶ್ರೀಮನ್ ಬಸವನಗೌಡರಧ್ಯಕ್ಷತೆಯಲ್ಲಿ ದ್ವಿತೀಯ ಸಮ್ಮೇಳನವನ್ನು ಆಗಸ್ಟ ಮೊದಲನೇ ವಾರದಲ್ಲಿ ಜರುಗಿಸಲು ಒಪ್ಪಿರುವರು. ಅಧ್ಯಕ್ಷ ಉದ್ಘಾಟಕರು ಯಾರಿರಬೇಕೆಂಬ ಸೂಚನೆಗಳನ್ನು ಸದಸ್ಯರು ನನಗೆ ತಿಳಿಸುವ ಕೃಪೆಮಾಡಬೇಕು.

ಬಿ. ರಂಗನಗೌಡ
ಜಿ. ಕಾ. ಏ. ಅಧ್ಯಕ್ಷ ಬದನೆಹಾಳು (ಬಳ್ಳಾರಿ ಜಿಲ್ಲಾ)

ಇಂಡೊನೇಶಿಯಾದಲ್ಲಿ ಯುದ್ಧ

ಡಚ್ಚರು ತಮ್ಮ ಹಿಡಿತವನ್ನು ಬಲಪಡಿಸಿಕೊಳ್ಳಲು ಇಂಡೊನೇಶಿಯಾ ಪ್ರಜಾರಾಜ್ಯ ಭಾರದ ಮೇಲೆ ದಾಳಿಯನ್ನಾರಂಭಿಸಿ ಪಟ್ಟಣಗಳ ಮೇಲೆ ಬಾಂಬಿನ ಮಳೆ ಕರೆಯುತ್ತಿರುವರು. ಡಚ್ ಸೈನ್ಯಗಳು ಮುನ್ನುಗ್ಗುತ್ತಲಿವೆ ಭಾರತ ಸರಕಾರವು ಇದನ್ನೂ ಪ್ರತಿಭಟಿಸಿ ಶೀಘ್ರದಲ್ಲಿ ಶಾಂತಿಪ್ರಯತ್ನಗಳಾಗಬೇಕೆಂದು ಬ್ರಿಟನ್, ಅಮೆರಿಕಾಗಳನ್ನು ಕೋರಿದೆ. ಭದ್ರತಾಮಂಡಲವು ಕೈಹಾಕದಿದ್ದರೆ, ಪ್ರಜಾರಾಜ್ಯವು ನಾನಾವ ಶೇಷವಾಗುವುದು.

ಚಿಂತಾರೋಗ
ಪರಿಹಾರೋಪಾಯಗಳು.

ಚಿಂತೆ ಚಿತೆಗಳಿಗೆ ಒಂದು ಸೊನ್ನೆ ಮಾತ್ರ ವ್ಯತ್ಯಾಸ, ಚಿತೆ ಹೆಣವನ್ನು ಸುಟ್ಟರೆ ಚಿಂತೆ ಸಜೀವ ಮನುಷ್ಯನನ್ನು ಸುಡುವುದೆಂದು ಹಿರಿಯರು ಹೇಳುತ್ತಾರೆ. ಕೆಲವರಿಗೆ ಚಿಂತಾಸಕ್ತರಾಗಿರುವದೇ ಒಂದು ಸ್ವಭಾವ. ಅದಕ್ಕೆ ನಿಶ್ಚಯಾತ್ಮಕ ಬುದ್ಧಿಯಿಲ್ಲದುದೇ ಕಾರಣ. ಅಂಥವನು ಮಾಡಹೋದ ಕೆಲಸಗಳೆಲ್ಲವೂ ಹಾಳೇ. ಒಂದನ್ನು ಮಾಡಹೋದರೆ ಒಂಬತ್ತಾಗುತ್ತದೆ, ಒಂದರಿಂದ ಒಂದು ತಪ್ಪೇ ಆಗುತ್ತ ಹೋಗುತ್ತದೆ. ಇದು ಅನೇಕರ ಅನುಭವದಲ್ಲಿ ಬಂದಿರತಕ್ಕದ್ದೇ ಆಗಿದೆ. ಕೆಳಗಿನ ೨೦ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಗಳನ್ನು ಕೊಟ್ಟರೆ ನಿಮಗೆ ಚಿಂತಾರೋಗವಿದೆಯೋ ಇಲ್ಲವೊ ಎಂಬುದನ್ನು ಪರೀಕ್ಷಿಸಿಕೊಳ್ಳಬಹುದು.

೧. ನಿಮಗೆ ಉಗುರುತಿನ್ನುವ ಅಭ್ಯಾಸವಿದೆಯೇ?

೨. ನೀವು ಪದೇ ಪದೇ ಖಿನ್ನರಾಗುತ್ತೀರಾ?

೩. ನಿಮ್ಮ ಕೈಕಾಲುಗಳು ಬೆವರುವುವೋ?

೪. ನಿಮಗೆ ಒಮ್ಮಿಂದೊಮ್ಮೆ ಚಿತ್ತವೃತ್ತಿ ಪರಿವರ್ತನವಾಗುವದು ಕಂಡುಬಂದಿದೆಯೋ?

೫. ಬಾಗಿಲು ಮುಚ್ಚಿದ ಕೋಣೆಯಲ್ಲಿರಲು ನಿಮಗೆ ಅಸುಖವಾಗುವದೋ?

೬. ರಾತ್ರಿ ಸ್ವಪ್ನಗಳು ಬೀಳುವವೋ?

೭. ನಿಮ್ಮ ಸಂಬಂಧಿಕರು ದುರ್ವಶ್ಯರೆನಿಸುವುದೋ?

೮. ಗುಡುಗು ಇಲ್ಲವೇ ಮಿಂಚುಗಳಿಗೆ ಹೆದರುವಿರೇನು?

೯. ನಿಮಗೆ ಬೇಗ ಆಯಾಸವಾಗುವುದೇ?

೧೦. ಕೆಲವು ಪದಾರ್ಥಗಳು ಕಾರಣವಿಲ್ಲದೆ ನಿಮಗೆ ಸೇರದಿರುವುದುಂಟೋ?

೧೧. ಎತ್ತರದ ಸ್ಥಳ ನಿಮ್ಮನ್ನಂಜಿಸುವದೋ?

೧೨. ಯಾವುದಾದರೊಂದು ನಿರ್ಧಾರಕ್ಕೆ ಬರಲು ಬಹು ಕಷ್ಟವಾಗುವದೇ?

೧೩. ಅಪರಿಚಿತರೊಡನಿದ್ದರೆ ನಿಮಗೆ ಹಿತವೆನಿಸದೆ?

೧೪. ನಿಮಗೆ ಬಹು ಬೇಗ ಅಳು ಬರುವದೇ?

೧೫. ನಿಮಗೆ ಪದೇ ಪದೇ ತಲೆನೋವು ಬರುವುದೇ?

೧೬. ಆಕಸ್ಮಿಕ ಸೂಚನೆಗಳು ನಿಮ್ಮನ್ನು ಅಡ್ಡದಾರಿಗೊಯ್ಯುವುವೆ?

೧೭. ಯಾರಾದರೂ ದೂಷಿಸಿದರೆ ನಿಮಗೆ ಬಹಳ ವ್ಯಥೆಯಾಗುವುದೇ?

೧೮. ನಿದ್ದೆ ಬೇಗ ಬರುವದಿಲ್ಲವೇನು?

೧೯. ಜನರು ನಿನ್ನ ವಿಷಯಗಳನ್ನೆಲ್ಲ ಮೊದಲೇ ತಿಳಿದಿರುವರೆಂದು ಸಂಶಯಿಸುವುದೇನು?

೨೦. ಕತ್ತಲೆಂದರೆ ನಿಮಗೆ ಹೆದರಿಕೆಯೆ?

ನಿಮ್ಮ 'ಅಹುದು' ಎಂಬ ಉತ್ತರಗಳನ್ನು ಕಲೆಹಾಕಿರಿ. ಅವು ೫ ಕ್ಕಿಂತ ಕಡಿಮೆಯಾದರೆ ನೀವು ಚಿಂತಾಸಕ್ತರಲ್ಲವೆಂದೇ ಹೇಳಬಹುದು; ೬ ರಿಂದ ೧೦ ರವರೆಗೆ ನೀವು ಸಾಮಾನ್ಯ ಚಿಂತಾಕುಲರು, ೧೧ ರಿಂದ ೧೫ ರವರೆಗೆ ನೀವು ಈಗಲೆ ಚಿಂತಾಮಗ್ನತೆಯನ್ನು ದಮನಮಾಡಲು ಪ್ರಾರಂಭಿಸಬೇಕೆಂದು ಡಾ. ಗಿಬರ್‌ಸನ್ನರ ಸಲಹೆ. 'ಅಹುದು' ಗಳು ೧೬ ಕ್ಕೂ ಮಿಕ್ಕಿದರೆ ನಿಮ್ಮ ಮನಸ್ಸನ್ನು ಸಮಾಧಾನ ಪಡಿಸಲು ಅನ್ಯರ ಸಹಾಯ ಬೇಕಾಗಬಹುದು.

ಚಿಂತಾ ಪರಿಹಾರಕ್ಕೆ ಚಿಂತಾಕುಲರು ಕೆಳಗೆ ಕೊಟ್ಟಿರುವ ದಶನಿಯಮಗಳನ್ನು ಪಾಲಿಸುವುದು ಆರೋಗ್ಯಕರ:—

೧. ಬುದ್ಧಿವಂತಿಕೆಯಿಂದ ಬಾಳುವುದು ಬೇಕಾದಷ್ಟು ವಿಶ್ರಾಂತಿ, ಸರಿಯಾದ ಆಹಾರ, ಆಟಪಾಠಾದಿ ವಿನೋದಗಳನ್ನು ತೆಗೆದುಕೊಳ್ಳಬೇಕು. ದೇಹಾರೋಗ್ಯ ಮನಸ್ಸಿನ ಆರೋಗ್ಯಕ್ಕೆ ಕಾರಣ.

೨. ಜೀವನದಲ್ಲಿ ಒಂದು ಧ್ಯೇಯವನ್ನಿಟ್ಟು ಕೊಳ್ಳತಕ್ಕದ್ದು—ಆ ಧ್ಯೇಯವು ಸಂಪೂರ್ಣ ಸ್ವಾರ್ಥಕ್ಕಾಗಿ ಇರದೆ ಸಹಜೀವಿಗಳ ಹಿತಕ್ಕಾಗಿಯೂ ಇರುವ ತತ್ವಕ್ಕೆ ಅನುಗುಣವಾಗಿರಬೇಕು.

೩. ಪರಿಸ್ಥಿತಿಯನ್ನು ಇದ್ದಹಾಗೇ ಸ್ವೀಕರಿಸ ತಕ್ಕದ್ದು-ಮನಸ್ಸಿಗೆ ಬರಲಿಲ್ಲವೆಂದು ಗೊಂದಲವೆಬ್ಬಿ ಸಕೂಡದು.

೪ ಯಾವ ಯಾವುದರ ಬೆಲೆ ಎಷ್ಟೆಂದು ನಿರ್ಣಯಿಸುವ ಬುದ್ಧಿಯನ್ನು ಬೆಳಸಿಕೊಳ್ಳಬೇಕು—ಚಿಲ್ಲರೆ ಸಂಗತಿಗಳು ಮನಸ್ಸಿನ ಮೇಲೆ ಪರಿಣಾಮ ಮಾಡದಂತೆ ನೋಡಿಕೊಳ್ಳಬೇಕು. ಯಾವುದಾದರೂ ಕೆಟ್ಟು ಹೋದರೆ ಅಬಕ್ಕಿಂತ ಹೆಚ್ಚು ಕೆಡಲಿಲ್ಲವಲ್ಲಾ, ಅಷ್ಟೇ ಒಳ್ಳೆಯದಾಯ್ತು, ಎಂದು ಸಮಾಧಾನಮಾಡಿ ಕೊಳ್ಳತಕ್ಕದ್ದು.

ನಗುವುದನ್ನು ಅಭ್ಯಸಿಸಬೇಕು—ಹಾಸ್ಯಾಸ್ಪದ ವಾದುದರತ್ತ ಗಮನ ಕೊಡುವದನ್ನು ಕಲಿಯಬೇಕು. ಇಡಿಯ ಜಗತ್ತಿನ ಭಾರವನ್ನು ಹೊರುತ್ತೇನೆಂಬ ಮನುಷ್ಯನಿಗಿಂತ ಹೆಚ್ಚಿನ ಮರುಳರಿಲ್ಲವೆಂಬುದನ್ನು ನೆನಪಿಗೆ ತಂದುಕೊಳ್ಳತಕ್ಕದ್ದು.

೬. ಮನಸ್ಸನ್ನು ಗಟ್ಟಿಮಾಡಬೇಕು—ಬೇಗನೆ ನಿರ್ಧಾರಕ್ಕೆ ಬರಬೇಕು. ಆ ನಿರ್ಣಯಗಳ ಪರಿಣಾಮವನ್ನು ಎಸ್ಟು ಪೃಷ್ಠಕ್ಕರಿಸುವುದಿನ್ನೂ ಅದಕ್ಕಾಗಿ ಪಶ್ಚಾತ್ತಾಪ ಪಡುವುದನ್ನು ಬಿಟ್ಟು ಬಿಡತಕ್ಕದ್ದು ಚಿಂತೆಯಿಂದ ಪಾರಾಗುವ ಪ್ರಸಂಗದಲ್ಲಿ ಆ ನಿರ್ಧಾರಕ್ಕಿಂತ ಕ್ಷುದ್ರ ನಿರ್ಧಾರವಾದರೂ ಲೇಸು

೭. ವರ್ತಮಾನಕಾಲದಲ್ಲಿ ಬಾಳಬೇಕು—ಎಳ ತಾಸುಗಳ ಪರಿಧಿಯಲ್ಲೇ ಆಲೋಚನೆ ತಿರುಗುತ್ತಿರ ಬೇಕು, ನಿನ್ನೆ ಕಳೆದಿತು ನಾಳೆ ಬಂದಿಲ್ಲ ಆದುದರಿಂದ ಇಂದಿಗೆ ಅಂಟಿಕೊಳ್ಳತಕ್ಕದ್ದು.

೮. ಸಡಲಿಸಬೇಕು—ಬಾಳನ್ನು. ಅನಾವಶ್ಯಕಗಳನ್ನು ಬಿಡತಕ್ಕದ್ದು. ತ್ವರೆ ಮತ್ತು ಉದ್ವಿಗ್ನತೆ ಯಾವಾಗಲೂ ಒಟ್ಟೊಟ್ಟಾಗಿ ಸಾಗುತ್ತವೆ. "ಸುಮ್ಮನೆ ಕುಳಿತುಕೊಳ್ಳಲು ಬರದುದರಿಂದಲೇ ಮನುಷ್ಯನಿಗೆ ಎಲ್ಲ ತೊಂದರೆಗಳೂ ಉಂಟಾಗುವುವು" ಎಂಬ ವ್ಯಾಸ್ಕಲ್ಲನ ಮಾತನ್ನು ಮರೆಯತಕ್ಕದ್ದಲ್ಲ. ಆದುದರಿಂದ ಬಂದದ್ದೆಲ್ಲ ಬರಲಿ. ಗೋವಿಂದನ ದಯವೆನಗಿರಲಿ ಎಂದು ಕೊಂಡು ಹೆಚ್ಚು ಮನಸ್ಸಿಗೆ ಹಚ್ಚಿಕೊಳ್ಳದೆ ಮೈಮೇಲೆ ಬಿದ್ದ ಕೆಲಸವನ್ನು ನಿಧಾನವಾಗಿ ಮಾಡಬೇಕು. ಅವಸರ ಪಡುವುದೇಕೆ ?

೯. ಹಾಸ್ಯಗಾರಿಕೆ ಇರತಕ್ಕದ್ದು—ಆಟವಾಡಲು ಅಭ್ಯಸಿಸಬೇಕು. ಬೇಜಾರಾದಾಗ ಏನಾದರೂ ಸಣ್ಣ ಪುಟ್ಟ ಕೆಲಸಗಳಲ್ಲಿ ಮಗ್ನರಾಗಿ ಅದನ್ನು ಮರೆಯಬೇಕು. ಕೈಕೊಂಡ ಕೆಲಸದಲ್ಲಿ ತೃಪ್ತಿಪಡೆಯತಕ್ಕದ್ದು; ಆದರಲ್ಲಿ ಆಸಕ್ತಿ ವಹಿಸಬೇಕು. ಕಾರ್ಯ ತಾನೇ ಆಕರ್ಷಿಸಲೆಂದು ಕಾಯ್ದು ಕುಳಿತಿರಬಾರದು;

೧೦. ಉದ್ಯೋಗ ಶೀಲತೆಯನ್ನು ಒಂದು ಅಭ್ಯಾಸವಾಗಿ ಮಾಡಿಕೊಳ್ಳಬೇಕು—ಕೊಂದರೆಗಳು ದ್ಬವಿಸಿದಾಗ ಸುಮ್ಮನೆ ಅಳೆಯುತ್ತ ಸರಿಯುತ್ತ ಕುಳಿತುಕೊಳ್ಳಬಾರದು. ಯಾವದಾದರೂ ಕಾರ್ಯವನ್ನು ಆರಂಭಿಸತಕ್ಕದ್ದು. ವಿಹಾರಕ್ಕೆ ಹೊರಡಬಹುದು ಇಲ್ಲವೆ ತೋಟದಲ್ಲಿ ಕೆಲಸಮಾಡಬಹುದು ಚಿಕ್ಕ ಚಿಕ್ಕ ಬಟ್ಟೆಗಳನ್ನು ಒಗೆಯಬಹುದು. ಮರ ಕಡಿಯಬಹುದು; ಟೋಪಿಯನ್ನು ಕೊಳ್ಳಲು ಪೇಟೆಗೆ ಹೋಗಬಹುದು. (ಕರ್ಮವೀರ)

ಶಸ್ತ್ರಾಸ್ತ್ರ ಸನ್ನಾಹ.

ಆಗಷ್ಟ 15 ರ ನಂತರ ಬೀರಾರನ್ನು ಆಕ್ರಮಿಸಿಕೊಳ್ಳಲು ಹೈದರಾಬಾದಿನ ನಿಜಾಮರು ಗಡಿನಾಡಿನಲ್ಲಿ ಸೈನ್ಯ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹಮಾಡುತ್ತಿರುವರೆಂದು ಬಿಹಾರ ಧುರೀಣರಾದ ಬ್ರಿಜಲಾಲ ಬಿಯಾನಿಯವರು ಹೇಳುತ್ತಾರೆ.

ಖೈರಪುರದ ಮೀರನ ಪದಚ್ಯುತಿ.

ಸಿಂಧದಲ್ಲಿಯ ಸಣ್ಣಸಂಸ್ಥಾನವಾದ ಖೈರಪುರದ ನವಾಬನಿಗೆ ಹುಚ್ಚುಹಿಡಿದಿರುವ ಕಾರಣ ಅವನ 14 ವರ್ಷವಯಸ್ಸಿನ ಮಗನನ್ನು ಪಟ್ಟಕ್ಕೇರಿಸಲಾಗಿದೆ.

ಉಷಃಕಾಲದ ಮುನ್ನ ಕಾರ್ಗತ್ತಲೆ

ಮತ್ತೊಬ್ಬ ಯೂರೋಪಿಯನ್ ಮಿತ್ರ ಹಿಂದು ಗಡೆ ಬಂದ. ಗಾಂಧೀಜಿ ಹಿಂದೆಹಿಂದು-ಮುಸಲ್ಮಾನ ಐಕ್ಯದ ಸಲುವಾಗಿ ದಿಲ್ಲಿಯಲ್ಲಿ ೨೧ ದಿನ ಉಪವಾಸ ಮಾಡಿದ ಕಾಲಕ್ಕೆ ಅವನು ಮೊದಲು ಹಿಂದೂಸ್ತಾನಕ್ಕೆ ಬಂದದ್ದು. "ಈ ವರೆಗೆ ಉಪವಾಸ ಫಲಕಾರಿಯಾಗಿಲ್ಲೆಂದು ತೋರುತ್ತದೆ" ಅವನುಸುರಿದ. "ಆದರೆ ಪರಿಣಾಮವೇನಾದರೂ ಆಗಲಿಕ್ಕೆ ಬೇಕು. ಪರಸ್ಪರರಲ್ಲಿ ತಿಳುವಳಿಕೆ ಮತ್ತು ಗೆಳೆತನವೆ ನಿಜವಾಗಿ ಅವಶ್ಯವಾದುದೆಂಬ ಮೂಲ ಮಾತನ್ನೇ ಇಂದು ಜನ ಮರೆತು ಬಿಟ್ಟಂತೆ ತೋರುವದು. ಪ್ರತಿಯೊಬ್ಬರು ಗಡಿಗಳ ಮೇಲೆಯೆ ತಮ್ಮ ಲಕ್ಷ್ಯವನ್ನೆಲ್ಲ ಹಾಕಿರುವರೆಂದು ಕಾಣುತ್ತದೆ. ಆದರೆ ಅದೇನೂ ಪ್ರಯೋಜನಕಾರಿಯಲ್ಲ

ಗಾಂಧೀಜಿ ಒಪ್ಪಿದರು. ಸಾಧ್ಯವಿದ್ದುದನ್ನೆಲ್ಲ ತಾವು ಮಾಡುತ್ತಿದ್ದರೂ ನಿಃಸತ್ವ ಗುಂಡಿನಂತಾಗಿದೆ ತಮ್ಮ ಪರಿಸ್ಥಿತಿಯೆಂದರು. ಇದಕ್ಕೆ ಆ ಸಂದರ್ಶಕ ಒಪ್ಪಲಿಲ್ಲ. ನಿಮ್ಮಲ್ಲಿ ಪ್ರಚಂಡ ಶಕ್ತಿಯಿದೆ. ನೀವಿನ್ನೂ ಮಧ್ಯಬಿಂದು ಆಗಿರುವಿರಿ. ಏನು ಮಾಡಬೇಕೆಂಬದನ್ನು ನಮಗೆ ಹೇಳಿರಿ" ಎಂದು ನುಡಿದನವನು.

'ಪ್ರಾರ್ಥಿಸಿರಿ' ಎಂಬ ಸರಳ ಮತ್ತು ಸೂತ್ರರೂಪೀ ಉತ್ತರವನ್ನು ಗಾಂಧೀಜಿ ಕೊಟ್ಟರು.

ಜನತೆಯ ಮನಸ್ಸಿನಲ್ಲಿ ಪ್ರತೀಕಾರದ ಭಾವನೆ ಬಲಿಯುತಿದೆ" ಎಂದು ನುಡಿದ. 'ಅದು ವಿಷಾದಕರ,

"ಈ ಭಾವನೆ ಹಾಗೆಯೇ ಉಳಿಯುವದೆಂದು ನಾನು ಭಾವಿಸುವದಿಲ್ಲ" ಗಾಂಧೀಜಿ ಉತ್ತರಿಸಿದರು. "ಅದು ಉಳಿದದ್ದಾದರೆ ಸ್ವಾತಂತ್ರ್ಯಕ್ಕೇ ಶರಣು ಹೊಡೆಯಬೇಕಾಗುವದು. ಹಿಂದುಸ್ತಾನ ಆತ್ಮಹತ್ಯೆ ಮಾಡಿಕೊಳ್ಳುವದು. "

"ಪಾಕಿಸ್ತಾನಕ್ಕೆ ಕೊಡಲ್ಪಟ್ಟ ಪ್ರದೇಶವನ್ನು ಮರಳಿ ಪಡೆಯತಕ್ಕದ್ದೆಂದು ಅನೇಕ ಹಿಂದುಗಳು ಭಾವಿಸುವರು. ಅದರಿಂದ ಮುಸಲ್ಮಾನರಿಗೆ ತಲೆಕಿರುಗುತ್ತದೆ" ಎಂದ ಆ ಸಂದರ್ಶಕ.

"ವೈಯಕ್ತಿಕವಾಗಿ ಹೇಳಬೇಕಾದರೆ ಪಾಕಿಸ್ತಾನ ಶಾಶ್ವತವಾಗಿ ಉಳಿಯುಲು ಅಸ್ತಿತ್ವಕ್ಕೆ ಬಂದಿದೆಂದು ನನಗೆನಿಸುತ್ತಿದೆ" ಗಾಂಧೀಜಿ ನುಡಿದರು.

"ಆ ತಳಹದಿಯ ಮೇಲೆಯೇ ಮಿತ್ರತ್ವ ಶಕ್ಯವಿದೆ" ಎಂದು ನುಡಿದ ಆ ಸಂದರ್ಶಕ "ಪಾಕಿಸ್ತಾನ ಸ್ಥಾಪನೆಯಾಗಿದೆ" ಗಾಂಧೀಜಿ ಎಂದರು "ಆದರೆ ಗೆಳೆತನವನ್ನು ಹೇಗೆ ಸಾಧಿಸಬೇಕೆಂಬುದು ನನಗೆ ತಿಳಿಯುದಾಗಿದೆ"

"ಪರಿಸ್ಥಿತಿ ಸುಧಾರಿಸುವ ಮೊದಲು ಅದು ಬಹಳ ಕೆಡುವದುಂಟು" ಎಂದ ಆ ಸಂದರ್ಶಕ. "ಉಷಃಕಾಲದ ಮುನ್ನವ ಕಾರ್ಗತ್ತಲೆಯಿದು"

ಹೊಸದಿಲ್ಲಿ ಸುಶೀಲಾ ನಯ್ಯರ

ಪ್ರಾಯವೇಟು ವಿದ್ಯಾರ್ಥಿಗಳು ಯೂನಿವರ್ಸಿಟಿ ಪರೀಕ್ಷೆಗಳಿಗೇಕೆ ಕೂಡಬಾರದು?

ಇಂಗ್ಲೆಂಡ, ಅಮೆರಿಕಾ ಮುಂತಾದ ಪ್ರಗತಿ ಹೊಂದಿದ ರಾಷ್ಟ್ರಗಳಲ್ಲಿ ಖಾಸಗಿ ವಿದ್ಯಾರ್ಥಿಗಳು ಯೂನಿವರ್ಸಿಟಿ ಪರೀಕ್ಷೆಗಳಿಗೆ ಕೂಡಲು ಅವಕಾಶವುಂಟು ಲಂಡನ ಯೂನಿವರ್ಸಿಟಿ ತನ್ನ ಬಿ ಎ ಎಂ.ಎ. ಬಿ.ಎಲ್. ಎಂ.ಎಲ್ ಪರೀಕ್ಷೆಗಳನ್ನು ಸಿಲೋನದಲ್ಲಿ ಕೂಡ ನಡೆಸುತ್ತಿದ. ಬಡ ವಿದ್ಯಾರ್ಥಿಗಳು ತಮ್ಮ ಉದರ ಪೋಷಣೆ ಮತ್ತು ವಿದ್ಯಾಭ್ಯಾಸದ ಖರ್ಚುಗಳಿಗಾಗಿ ಯಾವುದಾದರೂ ಒಂದು ವೃತ್ತಿಯಲ್ಲಿ ಸೇರಿ ಪ್ರಾಯವೇಟಾಗಿ ಓದುವರು. ಅಲ್ಲದೆ ಮದ್ರಾಸ್ ಪ್ರಾಂತದಲ್ಲಿ ಉತ್ತೀರ್ಣರಾದ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿಗಳಿಗೆ ಕಾಲೇಜದಲ್ಲಿ ಸ್ಥಳವಿಲ್ಲ. ಪ್ರಾಯವೇಟಾಗಿ ಕೂಡುವ ಪದ್ಧತಿಗೆ ಪ್ರೋತ್ಸಾಹ ಕೊಡುವುದರಿಂದ ಶಾಲೆ ಕಾಲೇಜುಗಳಲ್ಲಿ ಉದ್ಯೋಗದೊರೆಯದ ಯೋಗ್ಯರಾದ ವಿದ್ಯಾವಂತರಿಗೂ ಜೀವನ ಮಾರ್ಗವನ್ನು ಕಲ್ಪಿಸಿದಂತಾಗುತ್ತೆ ನಮ್ಮ ಯೂನಿವರ್ಸಿಟಿಯವರು ಇದನ್ನೇಕೆ ಗಮನಿಸಿ ತಕ್ಕ ಬದಲಾವಣೆಗಳನ್ನು ಮಾಡಬಾರದು? (ಒಬ್ಬ ವಿದ್ಯಾರ್ಥಿ).

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:—** ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:—** ಕರ್ನೂಲು:- ಪತ್ತಿಕೊಂಡ **ಕಡಪ:—** ರಾಜಂಪೇಟಿ, ಕಡಪ, **ಚಿತ್ತೂರು,—** ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ;— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ್ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Et .
Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕು-ಟಿಷ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಅಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯೂದ್ದು. ಪರೀಕ್ಷಿಸಿ ಮನಗಾಣಿರಿ.

ಬರ್ಮಾದಲ್ಲಿ ಭೀಷಣ ಕೊಲೆ.

ಬರ್ಮಾದ ಐವರು ಮಂತ್ರಿಗಳು ಉಪಾಧ್ಯಕ್ಷರಾದ ಆಂಗಸಾನರವರನ್ನೊಳಗೊಂಡು ಕಳೆದ 19 ನೆ ತಾ. ಕೊಲೆಮಾಡಲ್ಪಟ್ಟರು. ಮೊಚಿತ ಪಕ್ಷದ ಧುರೀಣರಾದ ಯೂಸಾರ ಮನೆಯನ್ನು ಪರಿಶೋಧಿಸಿ 10 ಜನರನ್ನು ಸಂರಕ್ಷಣೆಗಾಗಿ ಸೆರೆಹಿಡಿಯಲಾಗಿದೆ. ಇವರನ್ನು ಬಂಧಿಸಬೇಕಾದರೆ ಪೋಲೀಸರಿಗೂ ಅಲ್ಲಿನ ಖಾಸಗೀ ಜನರಿಗೂ ಕೈಗೆಕೈಹತ್ತಿ ಸಣ್ಣಹೋರಾಟವಾಯಿತು. ಅಲ್ಲಿ ಸ್ಪೆನ್ ಬ ದೂಕಗಳು, ಸಾದಾಬಂದೂಕಗಳು ಸ-ತ್ತು ಒಂದು ಜೀಪುಮೋಟಾರವಿದ್ದಿತು. ಇಲ್ಲಿಯವರೆವಿಗೆ 178 ಜನರನ್ನು ಬಂಧಿಸಲಾಗಿದೆ. ವಿರೋಧೀ ಪಕ್ಷಗಳ ಮುಖಂಡರನ್ನೂ ಬಂಧಿಸುವರೆಂದು ಸುದ್ದಿಹರಡಿದೆ ಘಟನಾಸಮಿತಿ ಅಧ್ಯಕ್ಷರಾದ ಥಾಕಿನ್‌ರವರನ್ನೊಳಗೊಂಡ ಹೊಸಮಂತ್ರಿ ಮಂಡಲವು ಸ್ಥಾಪಿತವಾಗಿದೆ ಈ ಅಮಾನುಷ ಕೊಲೆಯನ್ನು ಖಂಡಿಸಿ ಪಂಡಿತನೆಹರೂ, ಬ್ರಿಟಿಷ್ ಪ್ರಧಾನರೂ ಮತ್ತೆ ಇತರರೂ ದುಃಖಪೂರ್ವಕ ಸಂದೇಶ ಕಳುಹಿಸಿದ್ದಾರೆ.

ತುರ್ಕಸ್ತಾನ

ಹೊಸ ಮಹಾಯುದ್ಧದ ಕಿಡಿ.

ಗ್ರೀಸ ಮತ್ತು ತುರ್ಕಸ್ತಾನಗಳಿಗೆ ಆರ್ಥಿಕ ಸಹಾಯವನ್ನು ನೀಡಲು ಅಮೇರಿಕೆಯು ನಿಶ್ಚಯಿಸಿರುವದೂ ಆ ವಿಚಾರದಲ್ಲಿ ರಶಿಯದ ಪ್ರತಿಬಟನೆಯಿರುವದೂ ತಿಳಿದ ವಿಷಯವಾಗಿದೆ. ಅಮೇರಿಕೆಯ ಹಿಂದಿನ ಉಪಾಧ್ಯಕ್ಷರೂ ರಶಿಯದ ವಿಚಾರದಲ್ಲಿ ಸಹಾನುಭೂತಿಯುಳ್ಳವರೂ ಆದ ಮಿ. ಹೆನ್ರಿ ವಾಲೇಸರು ಕೆಲ ದಿನಗಳ ಹಿಂದೆ ರಶಿಯವು ತುರ್ಕಸ್ತಾನದ ದಕ್ಷಿಣ ಭಾಗದಲ್ಲಿ ತನ್ನ ವಿಸ್ತಾರವನ್ನು ಮಾಡಿಕೊಳ್ಳಲು ಬಯಸಿದಲ್ಲಿ ಬ್ರಿಟನ್ ಮತ್ತು ಅಮೇರಿಕೆಗಳು ಅದರೊಡನೆ ಯುದ್ಧ ಮೂಡುವವು ಎಂದು ಹೇಳಿದರು. ತುರ್ಕಸ್ತಾನವು ಇಂದು ಬಹು ಮಹತ್ವದ ಸ್ಥಾನವಾಗಿದ್ದು ಆ ವಿಚಾರದಲ್ಲಿ ಬಹು ದಕ್ಷತೆಯಿಂದ ಕೆಲಸ ಮಾಡಬೇಕಾಗುವದು ಎಂದೂ ಅವರು ಹೇಳಿದ್ದಾರೆ.

ತುರ್ಕಸ್ತಾನದ ವಿಚಾರವು ಮೂರನೆಯ ಮಹಾಯುದ್ಧಕ್ಕೆಲ್ಲಿ ಅಸ್ತಿಭಾರವನ್ನು ಹಾಕಿಕೊಡುವದೋ ಎಂದು ಅನೇಕರು ಭಯ—ಸಂದೇಹಗಳನ್ನುಳ್ಳವರಾಗಿದ್ದಾರೆ. ಅಮೇರಿಕೆಯು ಸಹಾಯ ನೀಡಲು ಏಕೆ ಇಷ್ಟ ಪಡುತ್ತಿದೆ, ರಶಿಯವು ಅದನ್ನೇಕೆ ಪ್ರತಿಭಟಿಸುತ್ತಿದೆ ಎಂಬ ವಿಚಾರವನ್ನು ಅರಿತು ಸತ್ಯಾಂಶವನ್ನು ತಿಳಿಯಬೇಕಾದರೆ ತುರ್ಕಸ್ತಾನದ ಇಂದಿನ ಸ್ಥಿತಿಗಳನ್ನರಿಯಬೇಕಾದುದು ಅವಶ್ಯವಾಗಿದೆ.

ಎರಡನೆಯ ಮಹಾಯುದ್ಧವು ಪ್ರಾರಂಭವಾಗುವದಕ್ಕೆ ಮುಂಚೆಯು ಕೂಡ ರಶಿಯ ಮತ್ತು ಬ್ರಿಟನ್ನಗಳಲ್ಲಿ ತುರ್ಕಸ್ತಾನದ ಬಗ್ಗೆ ತಿಕ್ಕಾಟವಿದ್ದೇಯಿತ್ತು ಯುದ್ಧಾನಂತರದ ಇಂದಿನ ದಿನದಲ್ಲಿ ಅಮೇರಿಕೆಯು ಯುರೋಪದ ಒಳಜಗಳದಲ್ಲಿ ಕೈ ಹಾಕಿರುವದನ್ನು ನಾವು ಕಾಣುತ್ತೇವೆ. ಗ್ರೀಸ ತುರ್ಕಸ್ತಾನಗಳಿಗೆ ಕೊಡ ಮೂಡಿರುವ ಸಹಾಯವು ರಶಿಯದ ಬಲಕುಂದಿಸುವ ಉದ್ದೇಶ ಪೂರ್ಣವಾಗಿದೆಯೆನ್ನುವದರಲ್ಲಿ ವಾದಕ್ಕವಕಾಶವಿಲ್ಲ. ಹೀಗಾಗಿ ಕೇವಲ ಯುರೋಪಕ್ಕೆ ಸಂಬಂಧಿಸಿದ್ದ ಈ ವಿಚಾರವಿಂದು ಅಂತರಾಷ್ಟ್ರೀಯ ಸಮಸ್ಯೆಯಾಗಿ ಕುಳಿತಿದೆ.

ತನ್ನ ಬಲದಿಂದ ವಿಸ್ತಾರ ಹೊಂದಿದ್ದ ತುರ್ಕಸ್ತಾನವು ಇಂದು ಅಕುಂಚಿತವಾಗಿ, ನಿಜವಾಗಿಯೂ ಇರುವ ಅಥವಾ ಕಲ್ಪಿತ ಶಕ್ತಿಯೊಂದರಿಂದ ತನ್ನನ್ನು ಳಿಸಲು ಇನ್ನೊಂದು ಶಕ್ತಿಯನ್ನು ಮೊರೆ ಹೋಗುತ್ತಿದೆ. ಲಂಡನ್ನಿನಲ್ಲಾಗಲಿ, ವಾಶಿಂಗ್ಟನ್ನಿನಲ್ಲಾಗಲಿ, ಅಂಕಾರಾದಲ್ಲಾಗಲಿ ಯಾರೂ ತುರ್ಕಸ್ತಾನದಲ್ಲಿ ಪ್ರಜಾ ಪ್ರಭುತ್ವವಿಲ್ಲ ಸರಕಾರೀ ನೌಕರಿಗಳಲ್ಲಿ ಬಹಳಷ್ಟು ಸ್ಥಳಗಳಲ್ಲಿರುವ. ದೇಶದ ಬಹಳಷ್ಟು ಭೂಮಿ ಉದ್ಯೋಗಗಳ ಒಡೆತನವಿರುವ ಸುಮಾರು ೨೦೦೦ ಕುಟುಂಬಗಳ ಜನರ ಕೈಲಿ ನಿಜವಾದ ಆಡಳಿತಾಧಿಕಾರವಿದೆ.

ಹಾಗಾದರೆ ತುರ್ಕಸ್ತಾನಕ್ಕೆ ಪರಿಹಾರ ಸಹಾಯದ ವಿಚಾರವನ್ನು ಯೋಚಿಸಲಾಗುತ್ತಿದೆಯೇ ಎಂದರೆ ಅದೂ ಇಲ್ಲ. ಯುರೋಪದ ಆ ಭಾಗದಲ್ಲಿ ತುರ್ಕಸ್ತಾನದಷ್ಟು ಉತ್ತಮವಾದ ಆರ್ಥಿಕ ಸ್ಥಿತಿಯುಳ್ಳ ದೇಶವಿನ್ನೊಂದಿಲ್ಲ ಯುದ್ಧ ಕಾಲದಲ್ಲಿ ಎರಡೂ ಪಕ್ಷಗಳೊಡನೆ ಸರಸವಾಡುತ್ತ, ಎರಡು ಪಕ್ಷದವರಿಂದ ಸೌಲಭ್ಯಗಳನ್ನು ಪಡೆದು ತುರ್ಕಸ್ತಾನವು ತನ್ನ ಆರ್ಥಿಕಸ್ಥಿತಿಯನ್ನು ಬಲಪಡಿಸಿಕೊಂಡಿದೆ. ಯುದ್ಧದ ಕೊನೆಯ ಸಮಯದಲ್ಲಿ ಜಯವು ಇಂಥವರದೇಎಂದು ನಿಶ್ಚಿತವಾದಾಗ ಅದು ಜಯಶಾಲಿಗಳ ಪಕ್ಷವನ್ನು ಸೇರಿಕೊಂಡಿತು, ಆಗ್ನೇಯ ಯುರೋಪದಲ್ಲಿ ಕಳೆದ ವರ್ಷ ಬಂದ ಬರದಲ್ಲಿ ಝಳಿ ತಾಗದ ದೇಶವೆಂದರೆ ತುರ್ಕಸ್ತಾನವು ಮಾತ್ರ.

ಅಲ್ಲಿಯ ವ್ಯಾಪಾರೋದ್ಯೋಗವು ಚನ್ನಾಗಿಯೇ ಇದೇ ಎನ್ನಬಹುದು. ಬ್ರಿಟನ್ ಮತ್ತು ಅಮೇರಿಕೆಯೊಡನೆ ಇರುವ ಅದರ ವ್ಯಾಪಾರವು ಬಹು ಶೀಘ್ರದಲ್ಲಿ ಯುದ್ಧಪೂರ್ವದ ಪ್ರಮಾಣವನ್ನು ಮುಟ್ಟಬಹುದಾಗಿದೆ. ಹಣದ ಕೊರತೆಯೂ ಅದಕ್ಕಿದೆಯೆನ್ನಲಾಗುವಂತಿಲ್ಲ. ಈವರ್ಷದ ಮುಂಗಡ ಪತ್ರಿಕೆಯಲ್ಲಿ ೪೦ ದಶಲಕ್ಷ ಡಾಲರುಗಳ ವೆಚ್ಚದ ಅಂಕೆಯಿದೆ. ಇದರಲ್ಲಿ ½ ದಷ್ಟು ಸೈನ್ಯದ ವೆಚ್ಚಕ್ಕಾಗಿ ಮೀಸಲಾಗಿದೆ. ಅಮೇರಿಕೆಯು ಕೊಡಬಹುದಾದ ಸಾಲವು ಸೈನ್ಯವೆಚ್ಚವನ್ನು ಪೂರೈಸಬಹುದಾಗಿದೆ.

ಕಪ್ಪು ಸಮುದ್ರ ಹಾಗೂ ಮೆಡಿಟರೇನಿಯನ್‌ದ ನಡುವಿರುವ ಡಾರ್ಡನೆಲಿಸ್‌ವು ಎಲ್ಲಿ ತನ್ನ ಕೈಬಿಡುವದೊ ಎಂಬುದೇ ತುರ್ಕಸ್ತಾನಕ್ಕಿರುವ ಅಂಜಿಕೆ. ಝಾರಶಾಹಿಯ ಕಾಲದಿಂದಲೂ ಆಯಕಟ್ಟಿನ ಪ್ರದೇಶಗಳ ಮೇಲಿನ ತುರ್ಕಸ್ತಾನದ ಪ್ರಭುತ್ವವನ್ನು ರಶಿಯವು ಅಸಹನೆಯಿಂದ ಕಾಣುತ್ತ ಬಂದಿದೆ. ರಶಿಯಕ್ಕೆ ಈ ಸ್ಥಳಗಳಲ್ಲಿ ಪ್ರಾಬಲ್ಯ ದೊರೆಯದಿರುವದು ಇದುವರೆಗೆ ಬ್ರಿಟನ್ನಿಗೆ, ಈಗ ಬ್ರಿಟನ್ ಅಮೇರಿಕೆಗಳಿಗೆ ಇಷ್ಟವಾಗಿದೆ. ಈ ವಿಚಾರಕ್ಕಾಗಿ ರಶಿಯದೊಡನೆ ಯುದ್ಧ ಹೂಡಲು ಕೂಡ ಅವು ಸಿದ್ಧವಿವೆ.

ತುರ್ಕಸ್ತಾನಕ್ಕೆ ಕೊಡುವ ಹಣವನ್ನು, ಅದರ ಸೈನ್ಯವನ್ನು ಆಧುನಿಕ ರೀತಿಯಲ್ಲಿ ಸಜ್ಜು ಗೊಳಿಸುವ ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು ಎಂಬ ವಿಚಾರದಲ್ಲಿ ತುರ್ಕಸ್ತಾನದ ಮುಖಂಡರು, ಅಮೇರಿಕೆಯ ಅಧಿಕಾರಿಗಳು ಇಬ್ಬರಲ್ಲಿಯೂ ಒನ್ನುತವಿದೆ. ಇದರಿಂದ ಅಂಥ ಪ್ರಸಂಗವೇ ಬಂದಲ್ಲಿ ಬಹಳ ಉಪಯೋಗವಾಗುವದು ಎಂದವರ ಅಭಿಪ್ರಾಯವಿದೆ.

ರಶಿಯವು ತನ್ನ ಮೇಲೆ ದಾಳಿ ಮಾಡಿಯೇ ತೀರುವದು ಎಂದು ತುರ್ಕಸ್ತಾನಕ್ಕೆ ಅಂಜಿಕೆಯಿದೆ. ಅಲ್ಲಿಯ ಡೆಮಾಕ್ರೆಟಿಕ್ ಪಕ್ಷದ ಧುರೀಣರೊಬ್ಬರು ಮೂರು ದಿನಗಳ ಹಿಂದೆ "ರಶಿಯದ ದಾಳಿಯ ಸಂಭವವು ಯಾವಾಗಲೂ ಇದೆ, ಈಗ ಸದ್ಯಕ್ಕೆ ರಶಿಯದೊಡನೆ ಯಾವ ವಿಚಾರದಲ್ಲೂ ಪ್ರತ್ಯಕ್ಷ ವಿರೋಧವಿಲ್ಲ. ಡಾರ್ಡನೆಲಿಸದ ವಿಚಾರದಲ್ಲಿ ಮಾತ್ರ ಕಥೆಗಳನ್ನಾಡಲು ಕೂಡ ನಾವು ಸಿದ್ಧರಿಲ್ಲವೆಂಬುದನ್ನು ರಶಿಯಕ್ಕೆ ಹೇಳಿಬಿಟ್ಟಿದ್ದೇನೆ" ಎಂದಿದ್ದಾರೆ.

"ಬ್ರಿಟನ್ ಮತ್ತು ಅಮೇರಿಕೆಗಳು ತುರ್ಕಸ್ತಾನದ ಸ್ನೇಹಿತರು. ಏಕೆಂದರೆ ಮೂವರಿಗೂ ರಶಿಯದ ವಿಸ್ತಾರವನ್ನು ತಡೆಯಬೇಕಾದುದು ಅವಶ್ಯವಾಗಿದೆ. ಆದುದರಿಂದ ರಶಿಯದ ಬಾಯಿ ಮಾತಿನ ಅಂಜಿಕೆಯು ಕ್ರಿಯಾರೂಪಗೊಳ್ಳದಂತೆ ನಾವು ಮೂವರು ಸಹಕರಿಸಬೇಕಾದುದು ಅಗತ್ಯವಾಗಿದೆ" ಎಂದೂ ಅವರು ಹೇಳಿದ್ದಾರೆ.

ಇನ್ನೊಬ್ಬರು ತುರ್ಕಸ್ತಾನವು ಡಾರ್ಡನೆಲಿಸದ ವಿಚಾರದಲ್ಲಿ ರಶಿಯದೊಡನೆ ಯಾವ ವಿಧವಾದ ಒಡಂಬಡಿಕೆಗೂ ಸಿದ್ಧವಿಲ್ಲದಿರುವದರಿಂದ ತುರ್ಕಸ್ತಾನದ ಮಿತ್ರರು ಅಂದರೆ ಅಮೇರಿಕೆ ಮತ್ತು ಬ್ರಿಟನ್ನು ತಮ್ಮ ಸಹಾಯದ ವಿಷಯದಲ್ಲಿ ತುರ್ಕಸ್ತಾನಕ್ಕೆ ನಂಬಿಗೆಯನ್ನುಂಟುಮಾಡಿ ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ಅಮೇರಿಕೆಯು ಹಣ ಸಹಾಯ ನೀಡುವದರಿಂದಲೇ ಈ ನಂಬಿಗೆ ಹುಟ್ಟುವದು ಎಂಬದು ಸ್ಪಷ್ಟವಾದ ವಿಷಯವಾಗಿದೆ.

ಹೀಗಾಗಿ ಇಂದು ತುರ್ಕಸ್ತಾನವು ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿ ವೈಮನಸ್ಸು ಬೆಳೆಯಲು ಕಾರಣವಾಗಿ ಕುಳಿತಿದೆ. ರಶಿಯವು ಯುರೋಪದಲ್ಲಿ ತನ್ನ ವಿಸ್ತಾರವನ್ನು ಮಾಡಿಕೊಂಡು ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿ ಪ್ರಾಬಲ್ಯವನ್ನು ಸಂಪಾದಿಸಿದಲ್ಲಿ ತಮಗೆ ಹಿತವಿಲ್ಲವೆಂದು ಬ್ರಿಟನ್, ಅಮೇರಿಕೆಗಳು ತಿಳಿದಿರುವದರಿಂದಲೇ ಅವು ಸಂತ್ರಸ್ತರಿಗೆ ಪರಿಹಾರ ನೀಡುವ ನೆವದಲ್ಲಿ ತುರ್ಕಸ್ತಾನಕ್ಕೆ ಸಹಾಯ ಮಾಡುವ ಕಾತುರತೆಯನ್ನೂ ಔದಾರ್ಯವನ್ನೂ ತೋರುತ್ತಿವೆ. ಹೀಗೆ ಸಹಾಯ ಮಾಡಿ ತನ್ನ ಆಸ್ತಿತ್ವಕ್ಕೆ ಪೆಟ್ಟು ಹಾಕಲು ಬ್ರಿಟನ್, ಅಮೇರಿಕೆಗಳು ಹೊಂಚು ಹಾಕುತ್ತಿವೆಯೆಂದು ರಶಿಯವು ಈ ವಿಚಾರವನ್ನು ಬಲವಾಗಿ ವಿರೋಧಿಸುತ್ತಿದೆ.

ಅಂತೂ ಮೂರನೆಯ ಮಹಾಯುದ್ಧದ ಕಿಡಿ ಹೊತ್ತಿಕೊಂಡಲ್ಲಿ ತುರ್ಕಸ್ತಾನದ ಪ್ರಶ್ನೆಯೇ ಅದಕ್ಕೆ ಕಾರಣವಾಗಬಹುದೆಂಬ ಸಂಶಯಕ್ಕೆ ಬಲವಾದ ಆಧಾರಗಳಿವೆ. (ಜೈ ಹಿಂದ್)

ಸೈನ್ಯಗಳೇಕೆ?

ಶಿಕ್ಷಣ ಪ್ರೇಮಿಯೂ ಯುದ್ಧವನ್ನು ಮನಸಾ ತೆಗಳುವವನೂ ಆದ ಇಂಗ್ಲಿಶ್‌ಗೆಳೆಯನೊಬ್ಬ ಮೊನ್ನೆ ದಿನ ನನಗೆ ಹೇಳಿದ "ದೇಶವಿಭಜನೆಗಾಗಿ ನನಗೆ ಅತೀವ ದುಃಖ. ಆದರೆ ಅದು ಅನಿವಾರ್ಯವಾಗಿತ್ತೆಂದು ನನಗೆನಿಸುತ್ತದೆ. ಆದರೂ ಯಾವದೊಂದು ದೇಶಕ್ಕೆ ಸೈನ್ಯಗಳ ಅವಶ್ಯಕತೆಯೇಕೆನಿಸುವುದೂ ನನಗೆ ತಿಳಿಯದಾಗಿದೆ? ಮಾನವೀಯ ಹಕ್ಕುಬಾಧ್ಯತೆ ಮತ್ತು ಜಾಗತಿಕ ಶಾಂತಿಯ ಬಗ್ಗೆ ನಾವು ಎಷ್ಟೆಷ್ಟೋ ಜಂಭದಮಾತು ಆಡುತ್ತೇವೆ. ಆದರೆ ದೇಶದಲ್ಲಿ ಭೂಜಲವಾಯು ಯಾವದೇ ಬಗೆಯ ಸೈನ್ಯವಿರುವವರೆಗೆ ಶಾಂತಿ ಅದೆಂತು ಶಕ್ಯವಿದೆ? ಶಾಂತಿ ಸುವ್ಯವಸ್ಥೆಯನ್ನಿಡುವುದಕ್ಕೆ ಸಾಕಷ್ಟು ಪೋಲೀಸ ಪಡೆಯಷ್ಟೇ ಏಕೆ ಸಾಲದು? ಮತ್ತು ಎಲ್ಲ ಸೈನ್ಯಪಡೆಗಳನ್ನು ವಿಸರ್ಜಿಸುವದಿಲ್ಲೇಕೆ? ವ್ಯಾರಂಭ ಕಾಲದಲ್ಲಿ ಅಂತರ್ರಾಷ್ಟ್ರೀಯ ಪೋಲೀಸ ಪಡೆ ಅವಶ್ಯವೆನಿಸಬಹುದು. ನಿಮ್ಮ ಧುರೀಣರ ನೇತೃತ್ವದಲ್ಲಿ ಹಿಂದುಸ್ತಾನ ಇಡೀ ಜಗತ್ತಿಗೇ ಈ ಸಂಬಧದಲ್ಲಿ ಮಾರ್ಗದರ್ಶನ ಮಾಡಿಕೊಡಬಲ್ಲದೆಂದು ನಾನು ಆಶಿಸಿದ್ದೆ. ಆದರೆ ಜಾತೀಯ ಹೊಡೆದಾಟಗಳು ಸದ್ಯದ ಮಟ್ಟಿಗೆ ಮಾತ್ರ ಅವುಗಳ ತಾಂಡವವೆಂದು ಆಶಿಸುವೆ. ಹಿಂದುಸ್ತಾನದ ಈ ಧ್ಯೇಯವನ್ನು ಹಿಮ್ಮೆಟ್ಟಿ ಬಿಟ್ಟವೆಂದು ನಾನು ವಿಷಾದಿಸಬೇಕಾಗಿದೆ. ಸೈನ್ಯ ಪಡೆಗಳಿಗಾಗಿಯೇ ನೀವು ಅಪರಿಮಿತ ಹಣವನ್ನು ವೆಚ್ಚಮಾಡುವದಾದರೆ ಶಿಕ್ಷಣಕ್ಕೆ ಹಣವೆಲ್ಲಿಂದ ಸಿಕ್ಕಬಲ್ಲುದು? ಹಳೆಯ ಅಳದಕ್ಕೇ ರಾಗವನ್ನೇ ಮತ್ತೆ ತೆಗೆಯಬೇಕಾಗುವುದು; ಮುಖ್ಯ ಅವಶ್ಯಕತೆಗಳಿಗೆ ಹಣವೇ ಉಳಿಯುವದಿಲ್ಲ"

ಸೈನ್ಯದ ವಿಭಜನೆಯಿಂದ ಗಾಂಧೀಜಿಗೆ ಅತ್ಯಂತ ವ್ಯಸನವಾಗಿದೆ, ದೇಶವಿಭಜನೆಯ ತರುವಾಯ ಕದಾಚಿತ ಈ ಸೈನ್ಯ ವಿಭಜನೆಯೆ ಗಾಂಧೀಜಿಯವರ ದುಃಖಕ್ಕೆ ಹೆಚ್ಚು ಕಾರಣವೆಂದು ಹೇಳಬಹುದು. ಹಿಂದೂ ಮುಸಲ್ಮಾನ ಸೈನ್ಯಗಳು ಒಬ್ಬರನ್ನೊಬ್ಬರು ಕೊಲ್ಲುವ ಮತ್ತು ಸಂಪೂರ್ಣವಾಗಿ ನಾಶಗೊಳಿಸುವ ಇಚ್ಛೆಯಿಂದ ಪರಸ್ಪರರನ್ನೆದುರಿಸುವ ಈ ಭಯಾನಕ ಚಿತ್ರವನ್ನು ಗಾಂಧೀಜಿ ತಮ್ಮ ಪ್ರಾರ್ಥನಾ ಸಭೆಯಲ್ಲಿ ರೇಪಿಸಿ ತೋರಿಸಿದರು. ಈಗ ಒಂದೇಸಮನೆ ನಡೆದ ಹತ್ಯಾಕಾಂಡವು ಕೊಲೆ, ಸುಲಿಗೆ, ಕೊಳ್ಳಿ ಮತ್ತು ಅಪಹರಣ ಮೊದಲಾದವುಗಳಿಂದ ಮಾನವನ ಮನಸ್ಸನ್ನು ಪರಾವೃತ್ತಗೊಳಿಸಲು ಸಾಕಾಗಲಿಲ್ಲೋ ಎನ್ನುವಂತೆ ಹಿಂದು ಮುಸಲ್ಮಾನ ಸೈನ್ಯ ಪರಸ್ಪರರನ್ನೆದುರಿಸುವ ಸಂಭವವನ್ನು ಗಾಂಧೀಜಿ ಹೇಳಿದರು. ಈ ಇಂಗ್ಲಿಶ್ ಗೆಳೆಯನ ಭೀತಿ ನ್ಯಾಯವಾಗಿದೆ ಹಿಂದುಸ್ತಾನದಂಥ ಬಡರಾಷ್ಟ್ರಕ್ಕೆ ಬಲಿಷ್ಠ ಸೈನ್ಯಪಡೆಯನ್ನಿಡಬೇಕಾದ ಪ್ರಸಂಗ ಬಂದುದಾದರೆ ರಾಷ್ಟ್ರರಚನೆಯ ಕಾರ್ಯಕ್ಕೆ ಸಾಕಷ್ಟು ಹಣವುಳಿಯಲಾರದು ಮತ್ತು ಮೊದಲಿಗಿಂತ ಹಿಂದುಗಡೆಯ ಸ್ಥಿತಿ ಮತ್ತಷ್ಟು ಕಟ್ಟಾಗುವದು.

ಯುರೋಪಿನ ಅತ್ಯಾಚಾರವನ್ನೆದುರಿಸಲು ಅತ್ಯಾಚಾರದ ಹೊರತು ಬೇರೆ ಯಾವ ಮಾರ್ಗವಿನೆಂದು ಗಾಂಧೀಜಿಯನ್ನು ಕಾಣಲು ಬಂದ ಇಬ್ಬರು ಇಂಡೋನೇಶಿಯನ್ ಗೆಳೆಯರು ಕೇಳಿದರು. ಯುರೋಪಿಗೆ ಯಾವಾಗಲೂ ಬಲದಲ್ಲಿಯೇ ವಿಶ್ವಾಸ. ಯಾವುದೊಂದು ದೇಶವು ಬಲಪ್ರಯೋಗದ ಹೊರತು ಬೇರೆ ಮಾರ್ಗದಿಂದ ಅದೆಂತು ಎರಡನೆ ದೇಶವನ್ನು ಎದುರಿಸುವದೆಂಬದು ಇಂಡೋನೇಶಿಯನ್ ಗೆಳೆಯರಿಗೆ ಹೊಳೆಯಲಿಲ್ಲ.

ಈ ಬಗೆಯ ಪ್ರಶ್ನೆಗೆ ಅಹಿಂಸೆಯ ಬಗ್ಗೆ ಅತೀವ ಅಜ್ಞಾನವೆ ಕಾರಣವೆಂದು ಗಾಂಧೀಜಿ ಸ್ವಲ್ಪ ಒಚ್ಚಿನಿಂದ ಉತ್ತರಿಸಿದರು. "ನಾನೊಂದು ಪತ್ರಿ

ಪ್ರಶ್ನೆಯನ್ನು ಹಾಕಬಯಸುವೆ" ಎಂದೆಂದರವರು. "ಬ್ರಿಟನ್' ಅಮೇರಿಕೆ ಮತ್ತು ರಶಿಯದ ಏಕೀಕೃತ ಶಸ್ತ್ರಾಸ್ತ್ರ ಬಲವು ನಿಮ್ಮನ್ನು ದಾಸ್ಯದಲ್ಲಿಡಲು ಬಯಸಿದೆಂದು ಭಾವಿಸಿದರೆ, ಅದನ್ನೆದುರಿಸಲು ಎಷ್ಟು ಹತ್ಯಾಕಾಂಡವನ್ನು ನಡೆಸಬೇಕಾಗುವುದು ?"

ಹಿಂಸೆಯಿಂದ ನೀವು ಅದನ್ನೆದುರಿಸಲಾರಿರೆಂದು ನನಗೆನಿಸುವದು. ಒಂದು ವೇಳೆ ಇಡೀ ಏಶಿಯದ ಬೆಂಬಲ ನಿನಗೆ ದೊರೆತದ್ದಾದರೆ ಹಿಂಸೆಯಿಂದ ನೀವು ಅವರನ್ನೆದುರಿಸಬಹುದು. ಆದರೆ ಆಗಕೂಡ ಯುರೋಪಿನ ಯುದ್ಧಾಸ್ತ್ರಗಳು ಹೆಚ್ಚು ಪರಿಣಾಮಕಾರಿಯಾಗಿದ್ದರೆ ನೀವು ಅದರಲ್ಲಿ ಪರಾಜಯ ಹೊಂದದಿರಲಾರಿರಿ. ಆದರೆ ನೀವು ಅಹಿಂಸೆಯಿಂದಲೆ ಅವರನ್ನೆದುರಿಸಬಲ್ಲಿರಿ. ನೀವೆಲ್ಲ ನಾಶಹೊಂದಬಹುದು. ಆದರೆ ಯಾರೂ ನಿಮ್ಮನ್ನು ಗೆಲಿಯಲಾರರು ಗಾಂಧೀಜಿ ಮುಂದುವರಿಯುತ್ತ, 'ಹಿಂದುಸ್ತಾನದ ಸ್ವಾತಂತ್ರ್ಯ ಸಂಗ್ರಾಮ ಕೇವಲ ಅಶಕ್ತರ ಶಸ್ತ್ರವಾದ ನಿಷ್ಕ್ರಿಯ ಪ್ರತೀಕಾರವಾಗಿ ಶಸ್ತ್ರಾಸ್ತ್ರ ಪ್ರತೀಕಾರದ ಪೂರ್ವಪೀಠಿಕೆ ಇದೆಂದು ಇತ್ತೀಚೆ ಒಂದಲ್ಲ ಹಲವು ಸಲ ತಾವು ಪ್ರತಿಪಾದಿಸುತ್ತ ಬಂದಿರುವುದಾಗಿ ಹೇಳಿದರು. ಕಾಂಗ್ರೆಸ್ಸು ನಿಜವಾಗಿ ಅಹಿಂಸೆಯನ್ನು ಆಶ್ರಯಿಸಿದ್ದರೆ ಸದ್ಯದ ಜಾತೀಯ ಜಗಳಗಳು ಏಳುತಿರಲೇ ಇಲ್ಲ. ಶರೀರಬಲಕ್ಕಿಂತ ಮಾನಸಿಕ ಬಲ ಯಾವಾಗಲೂ ಹೆಚ್ಚು ಶ್ರೇಷ್ಠವಾಗಿದೆ. ಅಹಿಂಸಾತ್ಮಕ ಇಂಡೋನೇಶಿಯ ಇಡೀ ಪೂರ್ವರಾಷ್ಟ್ರಗಳಿಗೇ ಮಾರ್ಗದರ್ಶನ ಮಾಡಬಲ್ಲದು. ಹಿಂದುಸ್ತಾನ ಯಾವ ಸ್ಥಾನವನ್ನು ಸಂಪಾದಿಸಬೇಕೆಂದು ಗಾಂಧೀಜಿ ಬಯಸಿದ್ದರೋ ಅದನ್ನೇ ಇಂಡೋನೇಶಿಯ ಪಡೆಯಬಲ್ಲದು. ಅದರಿಂದ ಹಿಂದುಸ್ತಾನದಲ್ಲಿ ರಕ್ತದ ಕಾಲುವೆ ಹರಿಯುತಿದೆ; ಇದನ್ನು ಅಹಿಂಸೆಯಿಂದ ಎಂತು ಎದುರಿಸಬೇಕೆಂಬುದನ್ನು ಹಿಂದೀಯರು ಕಲಿತಿರುವುದಿಲ್ಲ; ಇದೇ ಇವರಿಗೆ ಮುಳುವು 'ನಾವು ಈ ಶಕ್ತಿಯನ್ನು ಸಂಪಾದಿಸಿದ್ದರೆ, ಈ ಅನೇಕ ವರ್ಷಗಳಿಂದ ಹಿಂದುಸ್ತಾನದ ಬಗ್ಗೆ ನಾನು ಮನಸ್ಸಿನಲ್ಲಿ ಕಟ್ಟಿಕೊಂಡಿದ್ದ ಉಚ್ಚ ಆಶಾಕಾಂಕ್ಷೆಗಳು ಈಡೇರಲಾರವು" ಎಂದು ಗಾಂಧೀಜಿ ಮಾತು ಮುಗಿಸಿದರು.

ಮಲ್ಲಸಜ್ಜನ ವ್ಯಾಯಾಮ ಶಾಲೆ, ಬಳ್ಳಾರಿ.

'ಆಗಷ್ಟ್ ಹುತಾತ್ಮರ' ದಿನಾಚರಣೆಯನ್ನು ಬರುವ ತಿಂಗಳ ಆಗಷ್ಟು 9 ನೇ ದಿನಾಂಕದಲ್ಲಿ ನೆರವೇರಿಸಲು ನಿಶ್ಚಯಿಸಿರುತ್ತಾರೆ.

ದಿವಂಗತ ಮಾನ್ಯ ಶ್ರೀ ಮಹದೇವಪ್ಪಮೈಲಾರ್ ಇವರ ಧರ್ಮಪತ್ನಿ ಶ್ರೀಮತಿ ಸಿದ್ಧಮತಿ ಮೈಲಾರ್ ಇವರು ಭಾಗವಹಿಸಲು ವಪ್ಪಿದ್ದಾರೆ. ಶ್ರೀಮಾನ್ ಗೊಲ್ಲಪೂಡಿ ಸೀತಾರಾಮಶಾಸ್ತ್ರಿ, ಸಂಚಾಲಕ, ವಿನಯಾಶ್ರಮ ಗುಂಟೂರು ಇವರು ಅಧ್ಯಕ್ಷರಾಗಲು ಒಪ್ಪಿದ್ದಾರೆ.

ಪಾಕಿಸ್ತಾನ ಮಂತ್ರಿಗಳು ಪಾಕಿಸ್ತಾನ ಸರಕಾರದಲ್ಲಿ ೭ ಮುಸಲ್ಮಾನ ಮಂತ್ರಿಗಳೂ ೩ ಹಿಂದೂ ಮಂತ್ರಿಗಳೂ ಇರುವರೆಂದು ಗೊತ್ತಾಗಿದೆ.

ಶ್ರೀ ಜಗಜೀವನರಾಂ

ಕೇಂದ್ರ ಸರಕಾರದ ಕೂಲಿಕಾರ್ಮಂತ್ರಿಗಳಾದ ಶ್ರೀ ಜಗಜೀವನರಾಂರಿಗೆ ಬಲಗಾಲಿನಲ್ಲಿ ತೀವ್ರ ಗಾಯವಾಗಿದೆ. ಅವರ ಹಣೆಗೆ ಬಲವಾದ ಪೆಟ್ಟುಬಿದ್ದಿದೆ. ಇದಲ್ಲದೆ ದೇಹದ ಇತರ ಭಾಗಗಳಲ್ಲಿ ಸಣ್ಣ ಪುಟ್ಟ ಗಾಯಗಳಾಗಿವೆ. ಆದರೂ ಅವರ ಪ್ರಕೃತಿಯು ಸಮಾಧಾನಕರವಿದೆ.

ಕರ್ನಾಟಕ ಏಕೀಕರಣ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಮೈಸೂರಲ್ಲಿ ಕೂಡಿದ ಸಭೆಯಲ್ಲಿ ಕರ್ನಾಟಕ ಪ್ರಾಂತವನ್ನು ಶೀಘ್ರವಾಗಿ ನಿರ್ಮಿಸಲು ಒಂದು ಠರಾವನ್ನು ಮಾಡಿತು. 8 ಸಾವಿರ ವೆಚ್ಚದಿಂದ ಒಂದು ಭವನ ನಿರ್ಮಿಸಲು ನಿಶ್ಚಯವಾಯಿತು.

Informel Rural Rationing.

Please permit me to ventilate through your esteemed columns the untold grievances of villagers who come under the orbit of the above scheme. The quantities of grain allotted to these places is very meagre and to make matters still worse, supply of grain is not made for months togethher, with the result, there is acute suffering in villages. Further procurement was done in the first instance on a voluntary basis and afterwards intensive procurement was resorted to and even the very small quantities of grain left with the Ryots has been taken away. The methods of procurement also are highly defective. Millets (korra) is purchased at Rs. 15/- for a bag of 102½ seers and the very same grain is supplied to the Depots from the Head-quarters at Rs 20/- or 21/- per bag of 100 seers. The difference of Rs. 6/- per bag as also the deficit of 2½ seers per bag is not accounted for. The limited upply of grain to the Depots has worsened the lot of labourers and the other public in as much as they do not get their weekly quotas at all regularly even through they have got money on hand. Thus the purpose for which rural rationing was introduced has failed miserably and the situation in villages is assuming an alarming shape. I wish therefore to draw the kind attention of the authorities concerned to the glaring defects of the above scheme and suggest that Rural rationing should be scraped out atonce. Restrictions imposed over the movement of food grains within the district should be removed in order to let in the freezing stock into weekly markets in the district enabling the poor labourers to buy their requirements, without any practical difficulties. In view of the import of sugar, kerosine and cloth from foreign countries and the improved position of kerosine decontrol of these three commodities may be immediately ordered

I may suggest that if the order is issued on (15-8-47) the day of formation if Government the public will feel that the dawn of free India has brought them the facility of obtaining their wants to their satisfaction in the open market without asy restrictions.

N. MARIBASAVANAGOUD.
Kurugode.

ಹರಿಜನರ ಹಕ್ಕುಬಾಧ್ಯತೆಗಳು.

ಪಂಚಕಲಶದ ಮೆರವಣಿಗೆ.

ಹಿಂದೂ ಸಮಾಜದಲ್ಲಿ ಮಾದಿಗ, ಚಲವಾದಿ, ಹೊಲೆಯವಗೈರೆ ಅನೇಕ ಬಣಗಳನ್ನು ಕೀಳುಜಾತಿಯವರೆಂದೂ, ಅಸ್ಪೃಶ್ಯರೆಂದೂ, ಅವರನ್ನು ದೂರಮಾಡಿ ಬಹಳ ಕೆಟ್ಟ ರೀತಿಯಿಂದ ನಡೆಸಿಕೊಳ್ಳುತ್ತಿರುವುದು ಬಹಳ ಕಾಲದಿಂದ ಬಂದುದಾಗಿದೆ. ಇರಲಿಕ್ಕೆ ಸರಿಯಾದ ಸ್ಥಳವಿಲ್ಲ ಜೀವನದ ಮಾರ್ಗಕ್ಕಾಗಿ, ಭೂಮಿಯೂ ಇಲ್ಲ, ಉದ್ಯೋಗಗಳೂ ಇಲ್ಲ. ಕುಡಿಯಲು ನೀರಿಲ್ಲ. ವಿದ್ಯಾಭ್ಯಾಸ, ಔಷಧ ಸೌಕರ್ಯ ಮತ್ತು ಹಿಂದೂ ಸಮಾಜದಲ್ಲಿ ಇತರ ಕುಲದವರಿಗಿರುವ ಯಾವವಿಧವಾದ ಸೌಲಭ್ಯಗಳೂ ಇಲ್ಲದೆ ಘೋರ ದಾರಿದ್ರ್ಯದಲ್ಲಿ ಪರಿತಪಿಸುತ್ತಿರುವುದು ಹರಿಜನರ ಬಾಳಾಗಿದೆ. ಇಷ್ಟರ ಮೇಲೆ ತಿಳುವಳಿಕೆಯಿಲ್ಲದವರಿಂದ ಹರಿಜನರ ಮೇಲೆ ಬಹಳ ಜುಲುಮೆಗಳಾದುದೂ, ಆಗುತ್ತಿರುವುದೂ ಎಲ್ಲರಿಗೂ ಗೊತ್ತು.

ಹಿಂದುಸ್ತಾನದ ರಾಜಕೀಯ ವಾತಾವರಣದಲ್ಲಿ ಮಹಾತ್ಮ ಗಾಂಧಿಯವರ ಪ್ರವೇಶವಾದನಂತರ ಹರಿಜನರ ಕಡೆ ಎಲ್ಲರ ದೃಷ್ಟಿಯೂ ಬಿದ್ದಿತು. ಹರಿಜನರನ್ನು ಎಲ್ಲಾವಿಧಗಳಿಂದಲೂ ಮುಂದೆ ತರಬೇಕೆಂಬ ಪ್ರಯತ್ನಗಳಾದವು. ಮಹಾತ್ಮರ ಆಶೀರ್ವಾದದಿಂದ ಅಸ್ತಿತ್ವದಲ್ಲಿ ಬಂದ ಕಾಂಗ್ರೆಸ್ ಮಂತ್ರಿವರ್ಗಗಳು ಹರಿಜನರ ಉನ್ನತಿಗಾಗಿ ಶ್ರಮಿಸಹತ್ತಿ ಅವರ ಉದ್ಧಾರಕ್ಕಾಗಿ ಹೆಚ್ಚುದ್ರವ್ಯ ಖರ್ಚುಮಾಡಹತ್ತಿದರು. ಈಗ ಹರಿಜನರಿಗಾಗಿ ದೇವಸ್ಥಾನ, ಭಾವಿ, ಕೆರೆ, ಛತ್ರ ಸರ್ಕಾರದ ಕಾರ್ಯಾಲಯಗಳಲ್ಲಿ ಇತರರಿಗೆ ಹಕ್ಕಿರುವಂತೆ, ಹರಿಜನರಿಗೂ ಪ್ರವೇಶಿಸಿ ಉಪಯೋಗಿಸುವ, ಲಾಭಹೊಂದುವ ಸಮಾನ ಹಕ್ಕನ್ನು ಕೊಡಿಸಿದರು. ಹೋಟೆಲು, ದೇವಸ್ಥಾನಗಳ ಪ್ರವೇಶವಷ್ಟೇ ಅಲ್ಲದೆ, ಮೇಳದವರು, ಕ್ಷೌರದವರು, ಮತ್ತು ಇತರ ಎಲ್ಲಾ ವೃತ್ತಿಯವರು, ಹರಿಜನರನ್ನು ಬಹಿಷ್ಕರಿಸದಿರುವಂತೆ ಕಾಯ್ದೆಮಾಡಿ ಬಹಿಷ್ಕರಿಸುವವರನ್ನು ಶಿಕ್ಷಾರ್ಹ ಮಾಡಿದರು. ಹರಿಜನರು ಮಹಾತ್ಮ ಗಾಂಧಿಯವರಿಗೂ, ಕಾಂಗ್ರೆಸ್ ಮಂತ್ರಿವರ್ಗದವರಿಗೂ ಚಿರಕೃತಜ್ಞರಿರುತ್ತಾರೆ. ಪ್ರಪಂಚದ ಯಾವ ಭಾಗಗಳಲ್ಲೂ ಇಲ್ಲದ ಈ ಅನೀತಿಯ ಆಚಾರವು ಹೋಗುತ್ತಿರುವುದೆಂದು ಎಲ್ಲರೂ ಸಂತೋಷ ಪಡಬೇಕಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ
ಪಂಚಕಲಶದ ಮೆರವಣಿಗೆಗಳು.

ಕುಡಿತಿನಿ:— **ಕೆಲವುದಾಹರಣೆಗಳು ಮಾತ್ರ**

ಬಳ್ಳಾರಿ ಜಿಲ್ಲೆಯ ಬಹುಸಂಖ್ಯಾಕ ಊರುಗಳಲ್ಲಿ ಹರಿಜನರು ರಸ್ತೆಯಲ್ಲಿ ಮೆರವಣಿಗೆಯಿಂದ ಹೋಗಲಿಡ್ಡಿ ಇರುವುದಿಲ್ಲ. ಆದರೆ ಕುಡುತಿನಿಯಲ್ಲಿ ಹರಿಜನರು ಪ್ರಯತ್ನ ಪಟ್ಟಾಗಲೆಲ್ಲಾ ಕಲ ಅಜ್ಞಾನಿಗಳು ಅಡ್ಡಿಮಾಡುತ್ತಿದ್ದರು ಇದರಿಂದ ಜಿಲ್ಲಾ ಹರಿಜನ ಸೇವಕಸಂಘದವರ ಸಹಾಯದಿಂದ ಕುಡುತಿನಿಯ ಹರಿಜನರು ಕೋರ್ಟಿಗೆಹೋಗಿ ತಮ್ಮಹಕ್ಕನ್ನು ಸ್ಥಿರಪಡಿಸಿಕೊಂಡರು. ನ್ಯಾಯಾಧೀಶರು ತಮ್ಮ ಜಡ್ಜಮೆಂಟಿನಲ್ಲಿ ಇತರ ಹಿಂದೂಗಳಿಗೆ ಯಾವ ವಿಧವಾದ ಹಕ್ಕಿರುವುದೋ ಹಾಗೆಯೇ ಹರಿಜನರಿಗೂ ಇರುವುದೆಂದು ಹೇಳಿದರು. **ಕುಡಿತಿನಿಯಲ್ಲಿ ಶಾಲಿವಾಹನ ಶಕೆ ೧೮೬೪ನೆಯ ಚಿತ್ರಭಾನು ಸಂವತ್ಸರ ಅಧಿಕ ಜೇಷ್ಠ**

ಬಹುಳ ೧೨ ಭಾನುವಾರ (31-5-1942) ಪ್ರಾತ: ಕಾಲ ೮ ೩೦ ರಿಂದ ೧೦ ರವರೆಗೆ ಹರಿಜನರ ಪಂಚ ಕಲಶದ ಮೆರವಣಿಗೆಯು ವೈಭವದಿಂದ ನಡೆಯಿತು. ಹರಿಜನರನ್ನು ವಿರೋಧಿಸಿದ ಮುಖಂಡರು ಮೆರವಣಿಗೆಯಲ್ಲಿ ಭಾಗವಹಿಸಿದರು.

ಹಾಲಹರ್ವಿ:— 22-6-1947 ನೆಯ ತಾ. ಅಲೂರು ತಾಲೂಕು ಹಾಲಹರ್ವಿಯಲ್ಲಿ ಜಿಲ್ಲಾಮ್ಯಾಜಿಸ್ಟ್ರೇಟರ ಅಧ್ಯಕ್ಷತೆಯಲ್ಲಿ ಪಂಚಕಲಶದ ಮೆರವಣಿಗೆಯು ವೈಭವದಿಂದ ನಡೆಯಿತು. ಯಾರೋ ತುಂಟರು ಕಲ್ಲು ಒಗೆದರು. 6 ಜನರನ್ನು ಬಂಧಿಸಿದರು.

ಗುತ್ತಿಗನೂರು:— 23-6-1947 ನೆಯ ತಾ. ಬಳ್ಳಾರಿ ತಾಲೂಕು ಗುತ್ತಿಗನೂರಲ್ಲಿ ಪಂಚಕಲಶದ ಮೆರವಣಿಗೆಯು ಜೂನಿಯರ ಸರ್ಟಿಫಾಯ್ಡ್ ಶಾಲೆಯ ಬ್ಯಾಂಡಿನೊಡನೆ ಬಹಳ ವಿಜೃಂಭಣೆಯಿಂದ ನಡೆಯಿತು. ಫೋಟೂ ತೆಗೆಯಲಾಯಿತು.

ಹಾಗಲೂರು: ಹೊಸಹಳ್ಳಿ:— ಸಿರುಗುಪ್ಪೆ ತಾಲೂಕು ಹಾಗಲೂರು ಹೊಸಹಳ್ಳಿಯಲ್ಲಿ 1-7-1947 ನೆಯ ಮಂಗಳವಾರ ಮದುವೆಯ ವಧೂವರರಿಂದ ಕೂಡಿದ ಪಂಚಕಲಶದ ಮೆರವಣಗೆಯು ವೈಭವದಿಂದ ನಡೆಯಿತು.

ಹಾಲಹರ್ವಿ ಗುತ್ತಿಗನೂರವರು ಜಿಲ್ಲಾ ಮ್ಯಾಜಿಸ್ಟ್ರೇಟರ ಎದುರಿಗೆ ಕೇಸಟ್ಟು ವಾದಿಸಿದರು. ಆದರೆ ಅದು ಸಾರ್ಥಕವಾಗಲಿಲ್ಲ. ಜಿಲ್ಲೆಯ ಯಾವ ಪಟ್ಟಣಗಳಲ್ಲೂ ಇದಕ್ಕೆ ಅಡ್ಡಿ ಇಲ್ಲ ಈಗಿನಂಥ ಸ್ವರಾಜ್ಯ, ಸ್ವಾತಂತ್ರ್ಯದ ಕಾಲದಲ್ಲಿ ಭಾರತ ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಹರಿಜನರ ಎಲ್ಲಾ ತರದ ಏಳಿಗೆಗಾಗಿ ಸಹಾಯ ಸಹಕಾರಗಳನ್ನೊದಗಿಸಲು ಬೇಡಿಕೆ.

ಟಿ. ಬಿ. ಕೇಶವರಾವು, (ಪ್ರಧಾನ ಕಾರ್ಯದರ್ಶಿ)
ಜಿಲ್ಲಾ ಹರಿಜನಸೇವಕ ಸಂಘ, ಬಳ್ಳಾರಿ.



Guarranteed Pure Pyra Gingelly oil
Best for Pickles, Cooking & Cooling.
DISTRIBUTORS:—
1. M/S. . HUSANJEE RAO. M VENKOJI RAO
General Merchants, Car Street Bellary.
2 M/S. V. M. GIRI & SONS,
(Pro:- M, S Acharya) Car Street, Bellary
ಶುದ್ಧ ! ಗ್ಯಾರಂಟಿಯಾದ್ದು !! ಸತ್ಕಾರ !!!
— ಪೈರ ಎಳ್ಳೆಣ್ಣೆ —

NAVA BHARAT, BELLARY. Reg. No. M. 4746

To

Printed at Krishna Press Bellary QH No. B 17 FOR (Q.H. NO. B-5.)
Edited & bliPushed by T. B. KESHAVA RAO

ಜೈಹಿಂದ್ Reg. No. M 4746

ನವಚಾರಕ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಪುಟ ೬ ಬೆಲೆ ಒಂದಕ್ಕೆ ೩೦

ಬಳ್ಳಾರಿ ಆಗಷ್ಟು ೪ ಸೋಮವಾರ ೧೯೪೭

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

ನವಭಾರತ

ಸ್ವಾತಂತ್ರ್ಯ — ಸಂಚಿಕೆ

ನವಭಾರತವು ಬರುವವಾರ ೧೧-೮-೪೭ಕ್ಕೆ ಹೊರಡದೆ ೧೫—೮—೪೭ ರ ಸ್ವಾತಂತ್ರ್ಯದ ದಿನ ಹೆಚ್ಚು ಪುಟಗಳಿಂದ ಹೊರಡುವುದು. ಹಳೆಯ ಚಂದಾದಾರರಿಗೂ, ಹೊಸದಾಗಿ ಆಗಲಿರುವವರಿಗೂ ಉಚಿತ.

ಬಿಡಿಪ್ರತಿ 0—4—0

ವ್ಯವಸ್ಥಾಪಕ

ತಿರುವಾಂಕೂರು ಮಣಿಯಿತು

ತಿರುವಾಂಕೂರು ಸಂಸ್ಥಾನವು ಹಿಂದೀ ಒಕ್ಕೂಟದಲ್ಲಿ ಸೇರುವುದನ್ನು ಹಿಂದುಸ್ತಾನ ಸರಕಾರಕ್ಕೆ ಅಧಿಕೃತವಾಗಿ ತಿಳಿಸಿದೆಯೆಂದು ಒಂದು ವಾರ್ತಾ ಸಂಸ್ಥೆಯು ತಿಳಿಸುತ್ತದೆ. ಲಂಡನ್ ಮೊದಲಾದ ಪರರಾಷ್ಟ್ರ ರಾಜಧಾನಿಯಲ್ಲಿ ವ್ಯಾಪಾರ ಕಮೀಶರನ್ನಿಡಲು ಪಾಕಿಸ್ತಾನದಲ್ಲಿ ಪ್ರತಿನಿಧಿಗಳನ್ನಿಡಲು ತನಗೆ ಸ್ವತಂತ್ರ ಬೇಕೆಂದು ಸಾರಿದೆ. ಸಂಸ್ಥಾನೀ ಕಾಂಗ್ರೆಸಿಗರ ಬಿಡುಗಡೆಯು ಸಾಗಿದೆ.

ಪ್ರಾಂತೀಯ ಸರಕಾರಗಳ ಗವರ್ನರರು.

ಬೀಹಾರ — ಶ್ರೀ ಜಯರಾಮದಾಸ್ ದವಲತರಾಂ

ಮಧ್ಯಪ್ರಾಂತಗಳು " ಕೆ. ಯಂ. ಮುನ್ಷಿ.

ಒರಿಸ್ಸ — " ಬಿಧನ ಚಂದ್ರರಾಯ್

ಪೂರ್ವಪಂಜಾಬ — " ಸರ್ ಚಂದುಲಾಲ್ ತ್ರಿವೇದಿ

(ಈಗಿನ ಒರಿಸ್ಸಾಗವರ್ನರರು)

ಭಾರತದ ಕೇಂದ್ರ ಸರಕಾರದಲ್ಲಿ ಈಗಿರುವವರಲ್ಲದೆ ರಫಿ ಅಹ್ಮದ್ ಕಿಡ್ವಾಯಿ, ರಾಜಕುಮಾರಿ ಅಮೃತ ಕುವರಿ, ವಿ. ಐ. ಮುನಿಸ್ವಾಮಿಪಿಳ್ಳೈ ಎಸ್. ವಿ. ಗಾಡ್ಗಿಲ್ ಮತ್ತು ಡಾಕ್ಟರ್ ಶಾಮಪ್ರಸಾದ ಮುಖರ್ಜಿ ಇರುವರೆಂದು ಗೊತ್ತಾಗಿದೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಆಗಷ್ಟ್ 15 ರ ದಿನ ಸ್ವಾತಂತ್ರೋತ್ಸವವನ್ನು ವೈಭವವಾಗಿ ಧ್ವಜವಂದನೆ, ಪ್ರಭಾತಫೇರಿ, ಮೆರವಣಿಗೆ ದೀಪೋತ್ಸವಗಳಿಂದ ನಿರವೇರಿಸಲು ಸೂಚನೆಗಳನ್ನಿತ್ತಿದೆ.

ಬಳ್ಳಾರಿ ಜಿಲ್ಲಾ ಆಹಾರ ಮತ್ತು ಬಟ್ಟೆ ಸಮಿತಿ.

13 ನೆಯ ತಾ. ಜಿಲ್ಲಾಕಲೆಕ್ಟರವರ ಅಧ್ಯಕ್ಷತೆಯಲ್ಲಿ ಆಹಾರ, ಬಟ್ಟೆ ಮತ್ತು ಮದ್ಯನಿಷೇಧದ ಮಾಸಿಕಸಭೆಗಳು ಒಂದರನಂತರೊಂದು ಪಾಂಕ್ತವಾಗಿ ನಡೆದವು ಆಹಾರಸಮಿತಿಯು ನಡೆಯುವ ಮುನ್ನ ನಗರದ ಸುಮಾರು 200 ಬಡಕುಟುಂಬೀಕರಿಗೆ ಸೇರಿದ ಸ್ತ್ರೀಪುರುಷರು ಶ್ರೀ ಸತ್ಯವಂತರಾವ ಮತ್ತು ರಮೇಶ ಇವರ ನೇತೃತ್ವದಲ್ಲಿ ಕಲೆಕ್ಟರರ ಕಛೇರಿಗೆ ಬಂದು ತಮಗೆ ಕೊಡುವ ಆಹಾರವು ಸಾಲುವುದಿಲ್ಲೆಂದೂ, ತಮಗೂ ಅಕ್ಕಿಯನ್ನು ಪೂರೈಸಬೇಕೆಂದೂ ಬೇಡಿದರು. ಈ ಬಡಜನರ ಪರವಾಗಿ ಶ್ರೀ ರಮೇಶ ಮತ್ತು ಸತ್ಯವಂತರಾಯರು ಕಾಳಿನ ಸಂಗ್ರಹವು ಅಯಶಶ್ಸಿಯಾದುದಕ್ಕೆ ಕಾಳಿನ ಬೆಲೆಯನ್ನು ಸರಕಾರದವರು ಕಡಮೆ ಇಟ್ಟಿರುವುದೇ ಕಾರಣವೆಂದು ಹೇಳಿ ಹೆಚ್ಚಿನ ಬೆಲೆಗೆ ಕೊಂಡು ಕಡಿಮೆ ಬೆಲೆಗೆ ಮಾರಿ ಸರ್ಕಾರದವರೂ ನಷ್ಟವನ್ನುತಂಬಬೇಕೆಂದರು ಕಲೆಕ್ಟರವರು ಸದ್ಯದ ಆಹಾರ ಪರಿಸ್ಥಿತಿಯ ಬಗ್ಗೆ ಹೇಳಿಕೆಯನ್ನು ಕೊಟ್ಟು ಒಂದು ಲಕ್ಷಜೀಲಗಳ ಸಂಗ್ರಹವಾಗಿ 65 ಸಾವಿರ ಜೀಲ ಖರ್ಚಾಗಿದೆಯೆಂದರು. ಶಕ್ತವಿದ್ದವರಿಗೆ ಸಹಾಯ ಮಾಡುವುದಾಗಿ ಆಶ್ವಾಸನವಿತ್ತ ನಂತರ ಜನ ಜಂಗುಳಿಯು ಚದರಿತು. ಆಹಾರಧಾನ್ಯಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹವೀಯಬೇಕೆಂದಾಯಿತು. ಉಳ್ಳಿಗಡ್ಡೆಯನ್ನು ವ್ಯಾಪಕವಾಗಿ ಹೊರಗೆ ನಿರ್ಯಾತ ಮಾಡಲು ಅಪ್ಪಣೆ ಕೊಡಬೇಕೆಂದು ತೀರ್ಮಾನವಾಯಿತು.

ಮದ್ರಾಸ್ ಸರ್ಕಾರದವರು ಬಟ್ಟೆಗಳ ಹಂಚುವಿಕೆಯ ವಿಷಯದಲ್ಲಿ ಕಲೆಕ್ಟರವರ ಸೂಚನೆಗಳನ್ನು ಮಾನ್ಯಮಾಡಿದ ಮೇಲೆ ಲೈಸೆನ್ಸ್ ಪದ್ಧತಿಯನ್ನು ವಿವರಿಸುತ್ತಾ ಟೆಕ್ಸ್‌ಟೈಲ್ ಅಸಿಸೆಂಟ್ ಕಮೀಶನರವರಾದ ಶ್ರೀ ಕೆ. ಸುಬ್ಬರಾಯರು ಸಾಧ್ಯವಾದ ಮಟ್ಟಿಗೂ ಹಳ್ಳಿಗರಿಗೂ, ಬಡವರಿಗೂ, ಸಹಾಯಮಾಡುವುದೇ ಈ ಯೋಜನೆಯ ಧ್ಯೇಯವೆಂದರು ಸುಳ್ಳು ಮಗ್ಗಗಳವರನ್ನು ತೆಗೆದು ನ್ಯಾಯವಾಗಿಟ್ಟುಕೊಂಡವರಿಗೆ ಸಹಾಯಮಾಡುವುದಾಗಿ ಹೇಳಿದರು. ಹರಿಜನರಿಗೂ, ಲಂಬಾಣಿಗಳಿಗೂ, ಲೈಸೆನ್ಸ್ ಕೊಟ್ಟನಂತರ, ನೂಲಿನ ಹಂಚುವಿಕೆಗೆ ಲೈಸೆನ್ಸ್ ಕೊಡುವ ಅಧಿಕಾರವನ್ನು ಕಲೆಕ್ಟರವರಿಗೆ ಅರ್ಪಿಸಲಾಯಿತು. ಮದ್ಯನಿಷೇಧ ಸಭೆಯಲ್ಲಿ ಸಾಮಾನ್ಯ ವಿಷಯಗಳು ಚರ್ಚಿತವಾದವು.

ಹೊಳಲಗುಂದಿ

೨೭ ನೆಯ ದಿನಾಂಕ ಶ್ರೀ ಬಸನಗೌಡರಧ್ಯಕ್ಷತೆಯಲ್ಲಿ ಸಮಾವೇಶವಾದ ಸಭೆಯಲ್ಲಿ ಜಿಲ್ಲಾ ಕರ್ನಾಟಕ ಏಕೀಕರಣ ಸಮ್ಮೇಳನ ಜರುಗಿಸಬೇಕಾದ ಆವಶ್ಯಕತೆಯನ್ನು ಕುರಿತು ಶ್ರೀ ರಂಗನಗೌಡ, ಭೀಮಸೇನರಾಯರು ವಿವರಿಸಿದನಂತರ ಸ್ವಾಗತ ಸಮಿತಿಯು ರಚಿತವಾಯಿತು. ಅಧ್ಯಕ್ಷರು ಶ್ರೀ ಬಸವನಗೌಡ್ರು ಉಪಾಧ್ಯಕ್ಷರು ಶ್ರೀ ತ್ರಿಯಂಬಕಶಾಸ್ತ್ರಿ ಹನುಮಂತರಾಯರು, ಮು ವೆಂಕಯ್ಯನವರು. ಕಾರ್ಯದರ್ಶಿಗಳು ಶ್ರೀ ವೀರನಗೌಡ್ರು ಶ್ರೀನಿವಾಸರಾಯರು.

—: ಅರುಣೋದಯ :—

ಅರುಣ ಮೂಡಣಂಚಿನಲ್ಲಿ
ಕಿರಣ ಬೀಸಿ ಬರುವನಲ್ಲಿ
ಸುತ್ತು ಮುತ್ತು ಪಸರಿಸಿರುವ
ಕತ್ತಲೆಯನು ಓಡಿಸಿರುವ!

ಕೆಂಪನೆರಚಿ ಬಂದನಾಗ
ಗುಂಪು ಹಕ್ಕಿ ಬಂದುವಾಗ
ಅದರ ಒಬಿಗೆ ನೊರೆಯೆ ಕಷ್ಟ
ಅದನು ಸವಿಯ ಬಹಳ ಇಷ್ಟ!

ಕನಕ ಕಿರಣ ಬಂದುವಾಗ
ಮನೆಯ ಕಿಟಕಿಯಿಂದ ಬೇಗ
ಹೆಂಗಸರಿಗೆ ಕೆಲಸ ಹೇಳಿ
ಗಂಡಸರಿಗೆ ಪುಡಿಯ ಹೇಳಿ ;

ದೂರ ಬೆಟ್ಟದಾಚೆಯಿಂದ
ಸಾರಿಣಿಕೆ ಮೇಲೆ ಬಂದ
ರವಿಯ ಸೊಬಗು ಅಂತು ಇತ್ತು
ಕವಿಯ ಮನವು ಮಿಡಿಯುತಿತ್ತು!

(ಅನಂತರಾಯ—ಕಂಪ್ಲಿ)

ಟ್ರೈಯಸಿಂಗ್ ಇಲ್ಲದ ಉಪಾಧ್ಯಾಯರು, ಗ್ರಾಂಟು ಕೊಡುವ ಅವಧಿ ೧೯೫೦ ರವರಿಗೆ ಬೆಳೆಯಿತು.

ಮದ್ರಾಸ್ ಆಧಿಪತ್ಯದ ಪ್ರಾಥಮಿಕ ವಾಂಶಾಲೆಗಳಲ್ಲಿ ಉಪಾಧ್ಯಾಯರ ಕೊರತೆಯಿಂದ ಟ್ರೈಯಸಿಂಗ್ ಇಲ್ಲದ ಉಪಾಧ್ಯಾಯರಿಗೆ ಗ್ರಾಂಟುಕೊಡುವ ಪದ್ಧತಿಯನ್ನು 1950 ನೆಯ ಜನವರಿ 1 ರವರೆಗೆ ಮುಂದುವರಿಸಲು ವಿದ್ಯಾಖಾತೆಯ ಡೈರೆಕ್ಟರ್‌ರವರ ಸಿಫಾರ್ಸನಂತೆ ಸರ್ಕಾರದವರು ಅಂಗೀಕರಿಸಿರುತ್ತಾರೆ. ಟ್ರೈಯಸಿಂಗ್ ಶಾಲೆಗಳಲ್ಲಿ ಸ್ಥಳವೂ ಇಲ್ಲ. ಅನ್‌ಟ್ರೇನ್ಡ್ ಆಗಿರುವ ಬಹು ಸಂಖ್ಯಾಕ ಉಪಾಧ್ಯಾಯರು ಶಿಕ್ಷಣ ಹೊಂದಿ ಯೋಗ್ಯತೆಯನ್ನು ಪಡೆಯಲು ಕನಿಷ್ಪಕ್ಕೆ ಎರಡು ವರ್ಷಗಳಾದರೂ ಬೇಕಾಗಬಹುದು.

ತಾರಾನಾಥ ಆಯುರ್ವೇದ ವಿದ್ಯಾಪೀಠ

ಧನ್ವಂತರೀ ಪೂಜೆ—ಪ್ರಾರಂಭೋತ್ಸವ.

31-7-47 ನೆಯ ಗುರುವಾರ ತಾರಾನಾಥ ಆಯುರ್ವೇದ ವಿದ್ಯಾಪೀಠದ ಧನ್ವಂತರೀ ಪೂಜೆಯಾಗಿ 1-8-47 ರಿಂದ ಶಿಕ್ಷಣವರ್ಗಗಳು ಪ್ರಾರಂಭವಾಗಿವೆ. ಪ್ರಾರಂಭೋತ್ಸವವು 9-8-47 ನಡೆಯಬೇಕೆಂದು ನಿಶ್ಚಯಿಸಿರುವರು. 40 ಕ್ಕಿಂತಲೂ ಹೆಚ್ಚಿನ ಉಮೇದುವಾರರು ಅರ್ಜಿಗಳನ್ನು ಕಳುಹಿಸಿರುವರು.

ದಂಡಿನ ಹಿರಾಳು

ಶ್ರೀ ಭೀಮಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಂಘವು ಸ್ಥಾಪಿತವಾಗಿದೆ.

ನವಭಾರತಕ್ಕೆ ಚಂದಾದಾರರಾಗಿರಿ

ಪರದೇಶಿ ಮಾಲು:— ಸೆಪ್ಟಂಬರ್ 30 ರ ನಂತರ ಪರದೇಶಗಳಿಂದ ಬರುವ ಮಾಲಿನ ಮೇಲೆ ನಿರ್ಬಂಧಗಳೇರ್ಪಡುವದರಿಂದ ಪರದೇಶಿ ಮಾಲುಗಳ ವ್ಯಾಪಾರದಲ್ಲಿ ತೊಡಗಿರುವವರು, ಬಿಡುವಿಲ್ಲದೆ ಕೆಲಸದಲ್ಲಿ ತೊಡಗಿರುವರು. ಬೊಂಬಾಯಿ ಬಂದರದಲ್ಲಿ ಹಡಗು ನಿಲ್ಲಲು ಸ್ಥಳವಿಲ್ಲದಂತಾಗಿದೆ. ಹವಾಮಾನವು ಸರಿಯಾಗಿಲ್ಲವಾದ ಕಾರಣ ಸರಕುಗಳನ್ನಿಳಿಸುವ ಕಾರ್ಯದಲ್ಲಿ ತಡವಾಗುತ್ತಲಿದೆ. ಅಮೆರಿಕಾದಿಂದ ಬಂದ 30 ಹಡಗುಗಳು ಇನ್ನೂ ಬಂದರಿಗೆ ದೂರದಲ್ಲಿಯೆ ನಿಂತಿವೆ.

ಪಾಲಿಸ್ತಾನದಲ್ಲಿ ಯಹೂದಿ ಕ್ರಾಂತಿಕಾರರು ಕಳೆದವಾರ ೧೦ ಬ್ರಿಟಿಷ್ ಸೈನಿಕರ ಮೇಲೆ ಪ್ರಾಣಾಂತಿಕ ದಾಳಿಮಾಡಿರುವರು.

ಅಮೃತಸರದ ಸೆಕನ್ಸ್ ಕೋರ್ಟಿನ ಕಾಂಪೌಂಡದೊಳಗೆ ಬಾಂಬು ಒಗೆದದ್ದರ ಪರಿಣಾಮವಾಗಿ ಭಯಂಕರ ಸ್ಫೋಟದಿಂದ ೪೪ ಜನರು ಗಾಯಗೊಂಡರು. ಒಂದು ದಂಗೆಯ ವಿಚಾರಣೆಯಲ್ಲಿ ತೀರ್ಪು ಹೇಳಲ್ಪಡುವುದಿದ್ದು ಬಹಳ ಜನರು ಅಲ್ಲಿ ಸೇರಿದ್ದರು.

I M S. ಡಾಕ್ಟರುಗಳು ನಮಗೆ ಬೇಡ

ಮದ್ರಾಸ್ ಪ್ರಾಂತದಲ್ಲಿ ಇಂಡಿಯನ್ ಮೆಡಿಕಲ್ ಸರ್ವಿಸ್ ಯೋಗ್ಯತೆ ಹೊಂದಿ 1000/-ಗಿಂತಲೂ ಹೆಚ್ಚಿನ ಮಾಸಿಕ ವೇತನದ ಡಾಕ್ಟರರ ಆವಶ್ಯಕತೆಯು ತಮಗಿಲ್ಲವೆಂದು ಮದ್ರಾಸ್ ಸರ್ಕಾರದವರು ಭಾರತ ಸರ್ಕಾರಕ್ಕೆ ತಿಳಿಸಿರುತ್ತಾರೆ. ಮದ್ರಾಸ್ ಪ್ರಾಂತದಲ್ಲಿ ಇಂಥ ಉದ್ಯೋಗಸ್ಥರು 21 ಜನರಿದ್ದು ಹೆಚ್ಚಿಗೆ ಕಷ್ಟಪಟ್ಟು ಒಳ್ಳೇನಿಪುಣತೆಯಿಂದ ಕೆಲಸಮಾಡುವವರನ್ನು ಮುಂದೆ ತರಬೇಕೆಂದು ಸರ್ಕಾರದ ಉದ್ದೇಶವಿದೆ.

ಬ್ರಿಟನ್ನಿನ ಆರ್ಥಿಕ ಗಂಡಾಂತರ
ಸಾಲ ಪಡೆಯಬೇಕು ಇಲ್ಲವೆ ದಿವಾಳಿಯಾಗಬೇಕು.
ಅಮೆರಿಕೆಯ ಸಮಸ್ಯೆ

ಬ್ರಿಟನ್ನಿನಲ್ಲಿ ಆರ್ಥಿಕ ಪರಿಸ್ಥಿತಿಯು ತುಂಬಾ ಹದಗೆಡುತ್ತಿದ್ದು ಜಗತ್ತಿನ ಮೇಲೆಲ್ಲ ಅದರ ದುಷ್ಪರಿಣಾಮವಾಗುವಂಥ ಪರಿಸ್ಥಿತಿಯು ೧೯೪೬ ರಲ್ಲಿ ಉಂಟಾಗಬಹುದಾಗಿದೆ.

ಅಂಥ ಸಂದರ್ಭದಲ್ಲಿ ಹೆಚ್ಚಿನ ಸಹಾಯವನ್ನು ನೀಡುವ ಅಥವಾ ಬ್ರಿಟನ್ನನ್ನು ಅದರ ಪಾಡಿಗೆ ಬಿಟ್ಟು ಕೊಟ್ಟು ರಶಿಯವನ್ನು ನಿಯಂತ್ರಿಸಿ ಜಗತ್ತಿನಲ್ಲಿ ಪ್ರಭುತ್ವ, ಸಮತೆಯನ್ನು ಕಾಯ್ದುಕೊಳ್ಳುವ ಪ್ರಯತ್ನವನ್ನು ಏಕಾಂಗಿಯಾಗಿ ಮಾಡುವ ಪ್ರಮೇಯವು ಅಮೇರಿಕೆಗೆ ಉಂಟಾಗುವದಾಗಿದೆ

೧೯೪೬ ರ ಜುಲೈ ತಿಂಗಳಲ್ಲಿ ಬ್ರಿಟನ್ನಿಗೆ ಅಮೇರಿಕೆಯಿತ್ತ ೩೭೫೦೦೦೦೦೦ ಡಾಲರುಗಳ ಸಾಲವು ೩½ ವರ್ಷಗಳ ವರೆಗೆ ಸಾಲಬಹುದು ಎಂದು ಯೋಚಿಸಲಾಗಿತ್ತು. ಆದರೆ ಈಗ ಆ ಲೆಕ್ಕ ತಪ್ಪಿ ಹೋಗಿದೆ. ಪ್ರಥಮ ವರ್ಷಾಂತ್ಯದೊಳಗಾಗಿ ಈ ಹಣದಲ್ಲಿ ಅರ್ಧ ದಷ್ಟು ಖರ್ಚಾಗುವದಾಗಿದ್ದು ಎರಡನೆಯ ವರ್ಷದ ಕೊನೆಯೊಳಗಾಗಿ ಪೂರ್ಣವಾಗಿ ವೆಚ್ಚವಾಗುವಂತೆ ಕಾಣುತ್ತಿದೆ.

ಅಮೇರಿಕೆಯಲ್ಲಿ ೧೯೪೬ ರ ಜುಲೈ ತಿಂಗಳಿಂದ ಇತ್ತೀಚೆಗೆ ಸಾಮಾನುಗಳ ಬೆಲೆ ಬಹಳಷ್ಟು ಏರಿರುವದರಿಂದ ಬ್ರಿಟನ್ನಿಗೆ ಕೊಟ್ಟ ಸಾಲದ ನಿಜ ಬೆಲೆಯು ತುಂಬಾ ಕಡಿಮೆಯಾಗಿದೆ ಬ್ರಿಟನ್ನಿನಲ್ಲಿ ಕಳೆದ ಚಳಿಗಾಲವು ಭೀಕರವಾಗಿ ಅನೇಕ ಉದ್ಯೋಗಗಳು ಬಹಳಷ್ಟು ಕಾಲ ನಿಷ್ಕ್ರಿಯವಾದುದರಿಂದಲೂ ಬಹಳ ಪರಿಣಾಮವಾಗಿದೆ ಶಾಂತಿ ಸಂಧಾನದ ಮಾತುಗಳು ಅಯಶಸ್ವಿಯಾಗುತ್ತ ಕಾಲ ಹರಣವಾಗುತ್ತಿರುವದರಿಂದ ಮೆಡಿಟರೇನಿಯನ್‌ದಲ್ಲಿ ಜರ್ಮನಿಯಲ್ಲಿ ಸಂರಕ್ಷಕ ದಲಗಳಿಗಾಗಿ ಬ್ರಿಟನ್ನಿಗೆ ತುಂಬಾ ವೆಚ್ಚ ಮಾಡಬೇಕಾದ ಪ್ರಸಂಗ ಒಂದಿದೆ. ಆಕ್ರಮಿತ ಜರ್ಮನಿಯ ತನ್ನ ಭಾಗದ ಜನರಿಗೆ ಆಹಾರ ಪೂರೈಕೆಯ ಭಾರವೂ ನೈನೇಲೆ ಬಿದ್ದಿದೆ.

ಬ್ರಿಟನ್ನು ಪೂರ್ವದಲ್ಲಿ ಯುರೋಪದ ತನ್ನನೆರೆ ಹೊರೆಯವರಲ್ಲಿ ಆಹಾರಾದಿಗಳ ಬಗ್ಗೆ ವ್ಯಾಪಾರ ನಡೆಸುತ್ತಿತ್ತು ಯೂರೋಪದ ಪುನರ್ರಚನೆಯ ಕಾರ್ಯವು ಬಹುಸ ವಕಾಶವಾಗಿ ನಡೆದಿರುವದರಿಂದ ಬ್ರಿಟನ್ನು ಕೂಡ ಈ ವ್ಯಾವಾರವನ್ನೆಲ್ಲ ದೂರದ ದೇಶಗಳಲ್ಲಿ ಮಾಡಬೇಕಾಗಿ ಬಂದಿರುವದರಿಂದ ವೆಚ್ಚದ ಪ್ರಮಾಣವು ಬೆಳೆದಿದೆ.

ಬ್ರಿಟನ್ನು ಅನೇಕ ದೇಶಗಳಿಗೆ ಸ್ಟರ್ಲಿಂಗಸಾಲ ಮುಟ್ಟಿಸಬೇಕಾಗಿದ್ದು ಆ ದೇಶಗಳೆಲ್ಲವು ಪೌಂಡುಗಳ ಬದಲು ಡಾಲರುಗಳನ್ನು ಕೇಳಿದರೆ ಬ್ರಿಟನಿಗೆ ಇನ್ನಿಷ್ಟು ಸೆಚುಂಟಾಗುವದು. ಈ ಸ್ಟರ್ಲಿಂಗ ಸಾಲವನ್ನು ಕಡಿಮೆ ಮಾಡಿಕೊಳ್ಳಲು ಬ್ರಿಟನ್ನು ಯತ್ನಿಸುತ್ತಿದೆ.

ಮುಂದಿನ ವರ್ಷವೇ ಬ್ರಿಟನ್ನು ಇನ್ನೂ ಹೆಚ್ಚಿನ ಸಾಲಕ್ಕಾಗಿ ಅಮೇರಿಕೆಯನ್ನು ಕೇಳಬಹುದು. ರಾಜಕೀಯ ಕಾರಣಗಳಿಗಾಗಿ ಈಗ ಆ ಮಾತನ್ನು ಆಡುತ್ತಿರದಿದ್ದರೂ ಈ ಸಂಭವವು ವಿಶೇಷವಾಗಿದೆ ಉಭಯ ರಾಷ್ಟ್ರಗಳ ಸರಕಾರಗಳಿಗೂ ಆ ವಿಷಯವು ಅಪ್ರಿಯವಾಗಿದೆ.

ಈ ಸಾಲವನ್ನು ಕೇಳುವ ಮೊದಲು ಧನೋತ್ಪಾದನೆಯ ಇತರ ಮಾರ್ಗಗಳೆಲ್ಲವನ್ನೂ ಬ್ರಿಟನ್ನು ಶೋಧಿಸಬಹುದು. ಯಾಕಂದರೆ ಈ ಸಾಲವು ಸಿಗುವದು ಸಂದೇಹಾಸ್ಪದವಾಗಿದೆ.

ಬ್ರಿಟನ್ನು ಈ ಸಾಲಕ್ಕಾಗಿ 'ವರ್ಲ್ಡ್ ಬ್ಯಾಂಕ'ನ್ನು ಕೇಳಬಹುದು. ಆದರೆ ಈ ಬ್ಯಾಂಕಿನಿಂದ ಪಡೆದ ಸಾಲವು ಕೇವಲ ಪುನರ್ರಚನೆ ಮತ್ತು ಪ್ರಗತಿಗಾಗಿ ಉಪಯೋಗಿಸಲ್ಪಡಬೇಕು, ಎಂದಿದೆಯಾದ್ದರಿಂದ ಸಾಮಾನ್ಯವಾಗಿ ಎಲ್ಲ ಕಾರ್ಯಗಳಿಗುಪಯುಕ್ತವಾಗುವಂತೆ ಸಾಲವನ್ನು ಈ ಬ್ಯಾಂಕಿನಿಂದ ಪಡೆಯಲು

TRUE COPY

GOVERNMENT OF MADRAS
LEGAL DEPARTMENT

MADRAS ACT No. V OF 1947

[*Received the assent of the Governor-General on the 11th May 1947, first published in the "Fort St. George Gazette" on the 13th May 1947.*]

An Act to authorize entry into Hindu temples in the Province of Madras and the offer or worship therein by certain classes of Hindus who by custom or usage are excluded from such entry and worship

WHEREAS it is the policy of the Provincial Government to remove the disabilities imposed by custom or usage on certain classes of Hindus against entry into Hindu temples in the Province which are open to the general Hindu public;

And whereas the Provincial Government are satisfied, from the rapidity with which, under pressure of Hindu public opinion, a number of temples have been thrown open to those classes of Hindus in recent months, under the provisions of the Madras Temple Entry Authorization and Indemnity Act, 1939, that the time has now arrived for throwing open to such classes of Hindus all temples in the Province which are open to the general Hindu public;

Madras Act XVII of 1939

And whereas the Provincial Government consider that the provisions of the said Act are inadequate for the early and complete implementation of the policy of the Provincial Government aforesaid.

It is hereby enacted as follows:—

Short title extent and commencement

1. (1) This Act may be callsd the Madras Temple Entry Authorization Act, 1947.

(2) It extends to the whole of the Province of Madras.

(3) This section shall come into force at once; and the remaining provisions of this Act shall come into force on such date as the Provincial Government may, by notification in the Fort St. George Gazette, appoint

ಬ್ರಿಟನ್ನಿನ ಆರ್ಥಿಕ ಗಂಡಾಂತರ
ಸಾಲ ಪಡೆಯಬೇಕು ಇಲ್ಲವೆ ದಿವಾಳಿಯಾಗಬೇಕು.
ಅಮೆರಿಕೆಯ ಸಮಸ್ಯೆ

ಬ್ರಿಟನ್ನಿನಲ್ಲಿ ಆರ್ಥಿಕ ಪರಿಸ್ಥಿತಿಯು ತುಂಬಾ ಹದಗೆಡುತ್ತಿದ್ದು ಜಗತ್ತಿನ ಮೇಲೆಲ್ಲ ಅದರ ದುಷ್ಪರಿಣಾಮವಾಗುವಂಥ ಪರಿಸ್ಥಿತಿಯು ೧೯೪೫ ರಲ್ಲಿ ಉಂಟಾಗಬಹುದಾಗಿದೆ.

ಅಂಥ ಸಂದರ್ಭದಲ್ಲಿ ಹೆಚ್ಚಿನ ಸಹಾಯವನ್ನು ನೀಡುವ ಅಥವಾ ಬ್ರಿಟನ್ನನ್ನು ಅದರ ಪಾಡಿಗೆ ಬಿಟ್ಟು ಕೊಟ್ಟು ರಶಿಯವನ್ನು ನಿಯಂತ್ರಿಸಿ ಜಗತ್ತಿನಲ್ಲಿ ಪ್ರಭುತ್ವ, ಸಮತೆಯನ್ನು ಕಾಯ್ದುಕೊಳ್ಳುವ ಪ್ರಯತ್ನವನ್ನು ಏಕಾಂಗಿಯಾಗಿ ಮಾಡುವ ಪ್ರಮೇಯವು ಅಮೇರಿಕೆಗೆ ಉಂಟಾಗುವದಾಗಿದೆ.

೧೯೪೬ ರ ಜುಲೈ ತಿಂಗಳಲ್ಲಿ ಬ್ರಿಟನ್ನಿಗೆ ಅಮೇರಿಕೆಯಿತ್ತ ೩೭೫೦೦೦೦೦೦೦ ಡಾಲರುಗಳ ಸಾಲವು $3\frac{1}{2}$ ವರ್ಷಗಳ ವರೆಗೆ ಸಾಲಬಹುದು ಎಂದು ಯೋಚಿಸಲಾಗಿತ್ತು. ಆದರೆ ಈಗ ಆ ಲೆಕ್ಕ ತಪ್ಪಿ ಹೋಗಿದೆ. ಪ್ರಥಮ ವರ್ಷಾಂತ್ಯದೊಳಗಾಗಿ ಈ ಹಣದಲ್ಲಿ ಅರ್ಧ ದಷ್ಟು ಖರ್ಚಾಗುವದಾಗಿದ್ದು ಎರಡನೆಯ ವರ್ಷದ ಕೊನೆಯೊಳಗಾಗಿ ಪೂರ್ಣವಾಗಿ ವೆಚ್ಚವಾಗುವಂತೆ ಕಾಣುತ್ತಿದೆ.

ಅಮೇರಿಕೆಯಲ್ಲಿ ೧೯೪೬ ರ ಜುಲೈ ತಿಂಗಳಿಂದ ಇತ್ತೀಚೆಗೆ ಸಾಮಾನುಗಳ ಬೆಲೆ ಬಹಳಷ್ಟು ಏರಿರುವದರಿಂದ ಬ್ರಿಟನ್ನಿಗೆ ಕೊಟ್ಟ ಸಾಲದ ನಿಜ ಬೆಲೆಯು ತುಂಬಾ ಕಡಿಮೆಯಾಗಿದೆ ಬ್ರಿಟನ್ನಿನಲ್ಲಿ ಕಳೆದ ಚಳಿಗಾಲವು ಭೀಕರವಾಗಿ ಅನೇಕ ಉದ್ಯೋಗಗಳು ಬಹು ಕಾಲ ನಿಷ್ಕ್ರಿಯವಾದುದರಿಂದಲೂ ಬಹಳ ಪರಿಣಾಮವಾಗಿದೆ. ಶಾಂತಿ ಸಂಧಾನದ ಮಾತುಗಳು ಅಯಶಸ್ವಿಯಾಗುತ್ತ ಕಾಲ ಹರಣವಾಗುತ್ತಿರುವದರಿಂದ ಮೆಡಿಟರೇನಿಯನ್ ದಲ್ಲಿ ಜರ್ಮನಿಯಲ್ಲಿ ಸಂರಕ್ಷಕ ದಲಗಳಿಗಾಗಿ ಬ್ರಿಟನ್ನಿಗೆ ತುಂಬಾ ವೆಚ್ಚ ಮಾಬೇಕಾದ ಪ್ರಸಂಗ ಬಂದಿದೆ. ಆಕ್ರಮಿತ ಜರ್ಮನಿಯ ತಮ್ಮ ಭಾಗದ ಜನರಿಗೆ ಆಹಾರ ಪೂರೈಕೆಯ ಭಾರವೂ ತಮ್ಮ ಮೇಲೆ ಬಿದ್ದಿದೆ.

ಬ್ರಿಟನ್ನು ಪೂರ್ವದಲ್ಲಿ ಯುರೋಪದ ತನ್ನನೆ ಹೊರೆಯವರಲ್ಲಿ ಆಹಾರಾದಿಗಳ ಬಗ್ಗೆ ವ್ಯಾಪಾರ ನಡೆಸುತ್ತಿತ್ತು. ಯೂರೋಪದ ಪುನರ್ರಚನೆಯ ಕಾರ್ಯವು ಬಹುಸಾವಕಾಶವಾಗಿ ನಡೆದಿರುವದರಿಂದ ಬ್ರಿಟನ್ನು ಕೂಡ ಈ ವ್ಯಾಪಾರವನ್ನೆಲ್ಲ ದೂರದ ದೇಶಗಳಲ್ಲಿ ಮಾಡಬೇಕಾಗಿ ಬಂದಿರುವದರಿಂದ ವೆಚ್ಚದ ಪ್ರಮಾಣವು ಬೆಳೆದಿದೆ.

ಬ್ರಿಟನ್ನು ಅನೇಕ ದೇಶಗಳಿಗೆ ಸ್ಟರ್ಲಿಂಗಸಾಮುಟ್ಟಿಸಬೇಕಾಗಿದ್ದು ಆ ದೇಶಗಳೆಲ್ಲವು ಪೌಂಡುಗಳ ಬದಲು ಡಾಲರುಗಳನ್ನು ಕೇಳಿದರೆ ಬ್ರಿಟನ್ನಿಗೆ ಇನ್ನಿಷ್ಟು ಪೇಚುಂಟಾಗುವದು. ಈ ಸ್ಟರ್ಲಿಂಗ ಸಾಲವನ್ನು ಕಡಿಮೆ ಮಾಡಿಕೊಳ್ಳಲು ಬ್ರಿಟನ್ನು ಯತ್ನಿಸುತ್ತಿದೆ.

ಮುಂದಿನ ವರ್ಷವೇ ಬ್ರಿಟನ್ನು ಇನ್ನೂ ಹೆಚ್ಚಿನ ಸಾಲಕ್ಕಾಗಿ ಅಮೇರಿಕೆಯನ್ನು ಕೇಳಬಹುದು. ರಾಜಕೀಯ ಕಾರಣಗಳಿಗಾಗಿ ಈಗ ಆ ಮಾತನ್ನು ಆಡದಿದ್ದರೂ ಈ ಸಂಭವವು ವಿಶೇಷವಾಗಿದೆ ಉಭಯ ರಾಷ್ಟ್ರಗಳ ಸರಕಾರಗಳಿಗೂ ಆ ವಿಷಯವು ಅಪ್ರಿಯವಾಗಿದೆ.

ಈ ಸಾಲವನ್ನು ಕೇಳುವ ಮೊದಲು ಧನೊತ್ಪಾದನೆಯ ಇತರ ಮಾರ್ಗಗಳೆಲ್ಲವನ್ನೂ ಬ್ರಿಟನ್ನು ಶೋಧಿಸಬಹುದು. ಯಾಕೆಂದರೆ ಈ ಸಾಲವು ಸಿಗುವದು ಸಂದೇಹಾಸ್ಪದವಾಗಿದೆ.

ಬ್ರಿಟನ್ನು ಈ ಸಾಲಕ್ಕಾಗಿ 'ವರ್ಲ್ಡ್ ಬ್ಯಾಂಕ್'ನ್ನು ಕೇಳಬಹುದು. ಆದರೆ ಈ ಬ್ಯಾಂಕಿನಿಂದ ಪಡೆಯ ಸಾಲವು ಕೇವಲ ಪುನರ್ರಚನೆ ಮತ್ತು ಪ್ರಗತಿಗಾ ಉಪಯೋಗಿಸಲ್ಪಡಬೇಕು, ಎಂದಿದೆಯಾದ್ದರಿಂ ಸಾಮಾನ್ಯವಾಗಿ ಎಲ್ಲ ಕಾರ್ಯಗಳಿಗೂ ಉಪಯುಕ್ತವಾಗುವಂತೆ ಸಾಲವನ್ನು ಈ ಬ್ಯಾಂಕಿನಿಂದ ಪಡೆಯಲಿ

TRUE COPY

GOVERNMENT OF MADRAS
LEGAL DEPARTMENT

MADRAS ACT No. V OF 1947

[*Received the assent of the Governor-General on the 11th May 1947, first published in the "Fort St. George Gazette" on the 13th May 1947.*]

An Act to authorize entry into Hindu temples in the Province of Madras and the offer or worship therein by certain classes of Hindus who by custom or usage are excluded from such entry and worship

WHEREAS it is the policy of the Provincial Government to remove the disabilities imposed by custom or usage on certain classes of Hindus against entry into Hindu temples in the Province which are open to the general Hindu public;

And whereas the Provincial Government are satisfied, from the rapidity with which, under pressure of Hindu public opinion, a number of temples have been thrown open to those classes of Hindus in recent months, under the provisions of the Madras Temple Entry Authorization and Indemnity Act, 1939, that the time has now arrived for throwing open to such classes of Hindus all temples in the Province which are open to the general Hindu public;

Madras Act XII of 1939.

And whereas the Provincial Government consider that the provisions of the said Act are inadequate for the early and complete implementation of the policy of the Provincial Government aforesaid:

It is hereby enacted as follows:—

Short title, extent and commencement.

1. (1) This Act may be callsd the Madras Temple Entry Authorization Act, 1947.

(2) It extends to the whole of the Province of Madras.

(3) This section shall come into force at once; and the remaining provisions of this Act shall come into force on such date as the Provincial Government may, by notification in the Fort St. George Gazette, appoint.

Definitions.

2. In this Act, unless there is anything repugnant in the subject or context—

(1) 'excluded class' means any caste or class of the Hindu community which, by reason of any established custom or usage, is excluded from entering the temple concerned or offering worship therein ;

(2) 'temple' means a place, by whatever name known, which is dedicated to, or for the benefit of, or used as of right by, the Hindu community in general, as a place of public religious worship, and includes subsidiary shrines and mantapams attached to such place ;

(3) 'worship' means such religious service as the bulk of the worshippers may offer, or participate in, in accordance with such rules and regulations as may be made under this Act.

Right of excluded classes to enter and offer worship in temples.

3. (1) Notwithstanding any law, custom or usage to the contrary persons belonging to the excluded classes shall be entitled to enter any Hindu temple and offer worship therein in the same manner and to the same extent as Hindus in general, and no member of any excluded class shall, by reason only of such entry or worship, whether before or after the commencement of this Act, be deemed to have committed any actionable wrong or offence or be sued or prosecuted therefor.

(2) Without prejudice to the generality of the foregoing provision it is hereby declared that the right conferred by sub-section (1) shall include the following rights if, and to the extent to which, they are enjoyed by Hindus in general, not belonging to the excluded classes :—

(*a*) the right to bathe in, or use the waters of, any sacred tank, well, spring or water-course appurtenant to the temple, whether situated within or outside the precincts thereof ;

(*b*) the right of passage over any sacred place, including a hill or hillock or a road, street or pathway, which is requisite for obtaining access to the temple.

Power of trustees to make regulations for the maintenance of order and decorum and the due performance of rites and ceremonies in temples.

4. The trustee or other authority in chargo of a temple shall have power, subject to the control of the Provincial Government and to any rules which may be made by them, to make regulations for

the maintenance of order and decorum in the temple and the due observance of the religious rites and ceremonies performed in the temple, but such regulations shall not discriminate in any way against the members of the excluded classes

Sanction for institution of suits, etc.

5 (1) No suit for damages, injunction or declaration or for any other relief, no prosecution for any offence, and no application or other proceeding under the Madras Hindu religious Endowments Act, 1926, or any other law, shall be instituted in respect of any entry into or worship in any temple, whether before or after the commencement of this Act, on the sole ground that such entry or worship is against the custom or usage which excludes certain classes of Hindus from such entry or worship

Madras Act II of 1927

(2) No suit, prosecution, application or proceeding of the nature aforesaid, instituted before the commencement of this Act, shall be continued thereafter, without the sanction of the Provincial Government

Power to decide disputes

6. If any question arises as to whether a place is or is not a temple as defined in this Act, the question shall be referred to the Provincial Government and their decision shall be final subject, however, to any decree passed by a competent civil court in a suit filed before it within six months of the date of the decision of the Provincial Government.

7. Whoever—

(i) prevents a person belonging to any excluded class from exercising any right conferred by this Act, or

(ii) molests or obstructs any such person in the exercise of any such right

shall be punishable, in the case of a first offence, with fine which may extend to one hundred rupees, and in the case of a second or subsequent offence, with imprisonment which may extend to six months, or with fine which may extend to five huudred rupees, or with both.

Rules

8 (1) The Provincial Government may make rules for the purpose of carrying into effect the provisions of this Act in respect of temples generally or of any temple or class of temples

(2) All rules made under this section shall be published in the Fort St George Gazette, and on such publication, shall have effect as if enacted in this Act.

Power to remove difficulties

9. If any difficulty arises in giving effect to the provisions of this Act, the Provincial Government, as occasion requires, may, by order, do anything which appears to them necessary for the purpose of removing the difficulty.

Madras Act XX of 1938

Madras Act XXII of 1939

Repeals

10. The Malabar Temple Entry Act, 1938, and the Madras Temple Entry Authorization and Indemnity Act 1939, are hereby repealed.

Madras Act II of 1927

Amendment of section 40 Madras Act II of 1927

11. In section 40 of the Madras Hindu Religious Endowments Act, 1926, for the words and figures "Subject to the provisions of the Malbar Temple Entry Act, 1938, and the Madras Temple Entry Authorization and Indemnity Act, 1939" the words and figures "Subject to the provisions of the Madras Temple Entry Authorization Act, 1947," shall be substituted.

ಸಾಧ್ಯವಾಗದು. ಫ್ರಾನ್ಸ್‌ದಂತೆ ಬ್ರಿಟನ್ನಿಗೆ ಪುನರ್ರಚನೆಯ ಪ್ರಮಾಣ ಪತ್ರವಿಲ್ಲ

ಅಂತರಾಷ್ಟ್ರೀಯ ನಿಧಿಯಿಂದ ಹೆಚ್ಚಿನ ಬಡ್ಡಿಯಿಂದ ತುಸು ಸಾಲ ದೊರೆಯಬಹುದಾದರೂ ಅದು ೨ ತಿಂಗಳಿನ ವೆಚ್ಚಕ್ಕೆ ಮಾತ್ರ ಸಾಲಬಹುದಾಗಿದೆ.

ಬ್ರಿಟನ್ನು ಯಾವ ವಿಧದಲ್ಲಿಯೂ ತನ್ನವೆಚ್ಚವನ್ನು ಕಡಿಮೆ ಮಾಡಲಾರದ ಪರಿಸ್ಥಿತಿಯಲ್ಲಿದೆ. ಆಹಾರ, ಕಚ್ಚಾ ಸಾಮಗ್ರಿಗಳ ಸಲುವಾಗಿ ಅದು ಉತ್ಪಾದನೆಗಿಂತಲೂ ಅಧಿಕವಾಗಿ ವೆಚ್ಚ ಮಾಡಬೇಕಾದ ಪ್ರಸಂಗವಿದೆ. ವಿದೇಶಗಳಿಗೆ ತಾನು ಕೊಡಬೇಕಾದ್ದನ್ನು ಅದು ಉಳಿಸಿಕೊಂಡಲ್ಲಿ ಅದರ ಭಾರವು ಬಹಳಷ್ಟು ಕಡಿಮೆಯಾಗುವದಾದರೂ ಹಾಗೆ ಮಾಡುವದರಿಂದ ಪ್ರಬಲ ಸಮಸ್ಯೆಗಳುದ್ಭವಿಸಬಹುದಾಗಿದೆ.

ಬರುವ ವರ್ಷಾಂತ್ಯದೊಳಗಾಗಿ ಬ್ರಿಟನ್ನು ಈ ಮಹಾ ಸಮಸ್ಯೆಯನ್ನೆದುರಿಸಲೇಬೇಕಾಗಿದೆ ಜಗತ್ತಿನ ವ್ಯವಹಾರದಿಂದ ತನ್ನ ಅಂಗವನ್ನು ಹಿಂತೆಗೆದುಕೊಂಡು ವೆಚ್ಚದ ಭಾರವನ್ನು ಕಡಿಮೆ ಮಾಡಿಕೊಳ್ಳುವದು ಇಲ್ಲವೆ ಅಮೇರಿಕೆಯಿಂದ ಇನ್ನೂ ಹೆಚ್ಚು ಸಾಲ ಪಡೆಯುವದು ಇವೆರಡೇ ಮಾರ್ಗಗಳು ಅದರ ಮುಂದಿವೆ. !(ಜಯ ಹಿಂದ)

ಜಗತ್ತಿನಲ್ಲಿ ಆಹಾರದ ಕೊರತೆ

ಯುದ್ಧ ಕಾಲದಲ್ಲಿ ಹಾಗೂ ಯುದ್ಧ ಮುಗಿದೊಡನೆಯೂ ಇದ್ದ ಆಹಾರಾಭಾವವು ಯುದ್ಧ ಮುಗಿದು ಇಂದಿಗೆ ಎರಡು ವರ್ಷಗಳಾಗಿ ಹೋದರೂ ಇದ್ದೇ ಇದೆ. ಜಗತ್ತಿನ ಬಹುಭಾಗಗಳಲ್ಲಿ ಆಹಾರದ ಕೊರತೆಯು ವಿಶೇಷವಾಗಿ ಬಾಧಿಸುತ್ತಿದೆ. ಈ ಪರಿಸ್ಥಿತಿಯು ಬೇಗನೆ ಸುಧಾರಿಸುವಂತೆ ಕಂಡು ಬರುವದಿಲ್ಲ.

ಯುದ್ಧ ಮುಗಿದರೂ ಪರಿಸ್ಥಿತಿಯೇಕೆ ಸುಧಾರಿಸುತ್ತಿಲ್ಲ ? ಇದಕ್ಕೆ ಅನೇಕ ಕಾರಣಗಳಿವೆ. ಜನ ಸಂಖ್ಯೆಯೆಲ್ಲಿಯು ತ್ತಿರುವ ಪ್ರಮಾಣದಲ್ಲಿ ವ್ಯವಸಾಯಕಾಗಿ ಉಪಯೋಗಿಸಲ್ಪಡುವ ಭೂಮಿಯ ಪ್ರಮಾಣವು ಬೆಳೆಯದಿರುವದು ಪ್ರಮುಖ ಕಾರಣವಾಗಿರುವಂತೆ ಮನುಷ್ಯನ ತಪ್ಪು ತಡೆಗಳಿಗೆ ಪ್ರತಿಕೂಲವಾದ ಹವಾಮಾನವೂ ಕೆಲವಂಶದಿಂದ ಕಾರಣವಾಗಿದೆ. ಆಹಾರದ ಹುಟ್ಟುವಳಿಗಾಗಿ ಬೇಕಾಗುವ ಸಾಮಗ್ರಿಗಳ ಕೊರತೆಯೂ ವಿಶೇಷವಾಗಿದೆ.

ಯುರೋಪದಲ್ಲಿ ಯಂತ್ರ ಸಾಮಗ್ರಿಗಳ ಹಾಗೂ ಇಂಧನಗಳ ಕೊರತೆ ವಿಶೇಷವಾಗಿದೆ. ಯುದ್ಧ ಪೂರ್ವದಲ್ಲಿ ರಷಿಯದ ಕೃಷಿ ವ್ಯವಸಾಯವು ಪ್ರಾಮುಖ್ಯವಾಗಿ ಯಂತ್ರಗಳಿಂದಲೆ ನಡೆಯುತ್ತಿತ್ತು. ಜರ್ಮನಿಯಲ್ಲಿ ಯುದ್ಧ ಸಾಯಕ್ಕಾಗಿ ಉಪಯೋಗಿಸುವ ಟ್ರಾಕ್ಟರ್‌ಗಳು ಹೆಚ್ಚಾಗಿ ನಾಶಮಾಡಲ್ಪಟ್ಟವು. ಕಲ್ಲಿದ್ದಲು ಹಾಗೂ ಕಬ್ಬಿಣದ ಅಭಾವಗಳಿಂದ ಸಾಕಷ್ಟು ಯಂತ್ರಗಳಿನ್ನೂ ತಯಾರಾಗುತ್ತಿಲ್ಲ. ಆಹಾರವನ್ನು ಬೆಳೆಯುತ್ತಿದ್ದು ಅದರ ಪ್ರಮಾಣವು ಬಹಳಷ್ಟು ಕುಗ್ಗಿದೆ.

ಜನರ ಸ್ಥಳಾಂತರದಿಂದ ಬಹಳಷ್ಟು ಪ್ರದೇಶಗಳು ಇನ್ನೂವರಿಗೆ ಉಪಯೋಗಿಸಲ್ಪಟ್ಟಿಲ್ಲ. ಬರ್ಮಾ, ಸಯಾಮು, ಇಂಡೋಚೀನ ಮೊದಲಾದ ಅಕ್ಕಿಬೆಳೆಯುವ ಪ್ರಮುಖ ಪ್ರದೇಶಗಳಲ್ಲಿರುವ ಅನಿಶ್ಚಿತ ವಾತಾವರಣದಿಂದ ಅಲ್ಲಿಯ ಜನರು ಆಹಾರ ಬೆಳೆವಣಿಗೆಯನ್ನು ಸಾಕಷ್ಟು ಶೃಷ್ಟಿಯಿಂದ ಮಾಡಲು ಸಾಧ್ಯವಿಲ್ಲದಂತಾಗಿದೆ ಬೆಳೆವ ಧಾನ್ಯದ ಪ್ರತಿಫಲವಾಗಿ ಜೀವನದ ಇತರ ಅವಶ್ಯಕವಸ್ತುಗಳು ಸಿಗುವದು ದುರ್ಲಭವಾಗಿರುವದರಿಂದ ಬೆಳೆಯುವವರಿಗೆ ಸಾಕಷ್ಟು ಉತ್ಸಾಹವಿಲ್ಲ. ಏಶಿಯದ ಬಹು ಭಾಗದಲ್ಲಿರುವ ಗಲಭೆಯ ಪರಿಸ್ಥಿತಿಯಿಂದ ಆಹಾರದ ಉತ್ಪತ್ತಿಯು ಈ ವರ್ಷ ಕಡಿಮೆಯಾಗಬಹುದಾಗಿದೆ.

ಯುರೋಪ ಮತ್ತು ಏಶಿಯ ದೇಶಗಳಲ್ಲಿ ಕಳೆದ ವರ್ಷ ಪ್ರತಿಕೂಲ ಹವಾಮಾನದಿಂದ ಬಹಳಷ್ಟು ಬೆಳೆ ಹಾನಿಗೀಡಾಯಿತು.

ಇರುವ ಆಹಾರ ಸಾಮಗ್ರಿಯ ಹಂಚುವಿಕೆಯಲ್ಲಿಯ ದೋಷದಿಂದ ಪರಿಸ್ಥಿತಿಯು ಇನ್ನಿಷ್ಟು ಕೆಡುತ್ತಿದೆ.

ಜಗತ್ತಿನಲ್ಲಿ ಆಹಾರದ ಉತ್ಪಾದನೆಯಲ್ಲಿ ಪ್ರಮುಖವಾಗಿರುವ ರಶಿಯ ಮತ್ತು ಅರ್ಜೆಂಟಿನಾಗಳು ಅಂತರರಾಷ್ಟ್ರೀಯ ಆಹಾರ ಸಮಿತಿಯ ಸದಸ್ಯರಾಗಿಲ್ಲ. ರಶಿಯದಲ್ಲಿ ಈಗ ಸದ್ಯಕ್ಕೆ ಹೆಚ್ಚಿನ ಆಹಾರ ಸಂಗ್ರಹವಿಲ್ಲದಿದ್ದರೂ ಅರ್ಜೆಂಟಿನಾದಲ್ಲಿ ವಿಪುಲವಾಗಿದೆ. ಆದರೆ ಅಲ್ಲಿಂದ ಧಾನ್ಯವು ಸಾಕಷ್ಟು ಪ್ರಮಾಣದಲ್ಲಿ ಹೊರಗೆ ಕಳಿಸಲ್ಪಡುತ್ತಿಲ್ಲ. ನಿರ್ಯಾತಕ್ಕೆ ಸಾಕಷ್ಟು ವಾಹನ ಸೌಕರ್ಯಗಳಿಲ್ಲವೆಂದು ಅರ್ಜೆಂಟಿನಿಂದ ಸರಕಾರವು ಹೇಳುತ್ತಿದೆ. ಹೆಚ್ಚಿನ ಬೆಲೆಯ ಆಶೆಯೂ ಒಂದು ಕಾರಣವಾಗಿರಬಹುದು.

ಸರಿಯಾದ ಹಂಚುವಿಕೆಯಿಲ್ಲದಿರುವದು ಒಂದು ಕಾರಣವಾದರೂ ಜಗತ್ತಿನಲ್ಲಿಯ ಕೊರತೆಗೆ ಪ್ರಮುಖವಾದ ಕಾರಣಗಳು ಇವೆರಡಾಗಿವೆ. ಸಾಕಷ್ಟು ವ್ಯವಸಾಯ ಕ್ಷೇತ್ರವಿಲ್ಲದಿರುವದು ಮೊದಲನೆಯದು. ಇರುವ ಪ್ರದೇಶದಲ್ಲಿ ಯಂತ್ರ, ಗೊಬ್ಬರ, ಬೀಜ ಮೊದಲಾದವುಗಳ ಅಭಾವದಿಂದ ಬೆಳೆಯಬಹುದಾದಷ್ಟು ಬೆಳೆಯದಿರುವದು ಎರಡನೆಯದು.

ಈ ಪರಿಸ್ಥಿತಿ ಸುಧಾರಿಸುವವರೆಗೂ ಈ ಚಿಂತೆ ಮತ್ತು ಕೊರತೆಗಳು ತಪ್ಪಲಾರವು.

ಪ್ರತ್ಯೇಕ ಮತದಾರ ಸಂಘಗಳಿಲ್ಲ.

ಇನ್ನುಮುಂದೆ ಜಾರಿಯಲ್ಲಿಬರುವ ಘಟನೆಯಲ್ಲಿ ಪ್ರತ್ಯೇಕ ಮತದಾರ ಸಂಘಗಳಿರಬಾರದೆಂದು ಘಟನಾಸಮಿತಿಯಲ್ಲಿ ನಿಶ್ಚಯವಾಗಿದೆ.

ಬರ್ಮಾ

ಬ್ರಹ್ಮದೇಶದ ಮುಖಂಡರ ಕೊಲೆಯನಂತರ ಅಲ್ಲಿನ ಪರಿಸ್ಥಿತಿಯು ಅನಿಶ್ಚಿತವಾಗಿದೆ. ಕಮ್ಯೂನಿಸ್ಟರು, ಕೂಲಿಕಾರರು, ಬ್ರಿಟಿಶ ಹಸ್ತಕರೇ ಈ ಕೊಲೆಗಳನ್ನು ಮಾಡಿಸಿರುವರೆಂದು ಹೇಳುತ್ತಾರೆ. ಕೊಲೆಗಡಕರನ್ನು ಬಂಧಿಸಲಾಗಿದೆಯೆಂದು ಹೇಳಲಾಗುತ್ತಿದೆ. ಬ್ರಿಟಿಶ ಸರ್ಕಾರದವರು ತಾತ್ಕಾಲಿಕ ಸರ್ಕಾರಕ್ಕೆ ಪೂರ್ಣ ಅಧಿಕಾರಗಳನ್ನು ಕೊಟ್ಟಿರುವೆವೆಂದು ಕಳೆದ ಗುರುವಾರ ಹೇಳಿಕೆ ಕೊಟ್ಟರು.

ಪಂಜಾಬಿನಲ್ಲಿ ಸೀಖರ ಸತ್ಯಾಗ್ರಹ

ಅಖಿಲ ಪಂಜಾಬ ಸೀಖ ಪರಿಷತ್ತಿನ ಮೇಲೆ ಪಂಜಾಬ ಸರಕಾರದವರು ಹಾಕಿದ ನಿರ್ಬಂಧಗಳನ್ನು ಕಿತ್ತೊಗೆಯಲು ಸೀಖರದವುದು ಕೈ ಕೊಳ್ಳಲಾಗಿರುವದು ಎಂದು ಶಿರೋಮಣಿ ಅಕಾಲಿದಲದ ಮುಖ್ಯ ಠಾಣಿಯವರು ಘೋಷಣೆ ಹೊರಡಿಸಿದ್ದಾರೆ. ಮೊದಲನೇ ತಂಡವು ಸತ್ಯಾಗ್ರಹಮಾಡಲು ೨೭ ಕ್ಕೆ ೧೦೦ ಜನರೊಂದಿಗೆ ಹೊರಟಿತು. ಸರಕಾರೀ ನಿರ್ಬಂಧವಿರುವವರೆಗೂ ಈ ಸತ್ಯಾಗ್ರಹವು ನಡೆಯಲಿದೆ

— ಶಿ. ಪಿ. ಯವರನ್ನು ತಿವಿದರು —

ತಿರುವಾಂಕೂರು ದಿವಾನರಾದ ಸರ್. ಶಿ. ಪಿ. ರಾಮಸ್ವಾಮಯ್ಯರವರನ್ನು ಸಂಗೀತ ಸಭೆಯಿಂದ ಹೊರಬೀಳಬೇಕಾದರೆ ಯಾರೋ ತಿವಿದರು. ಅವರಿಗೆ ಘಾಯಗಳು ಮಾತ್ರವಾದವು ಅವರು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವರು ಸರ್. ಸಿ. ಪಿ. ಯವರು ತಿರುವಾಂಕೂರು ಸಂಸ್ಥಾನವು ಸ್ವತಂತ್ರವಾಗಿರಬೇಕೆಂದು ಅನೇಕ ಹೇಳಿಕೆಗಳನ್ನು ಕೊಟ್ಟಿರುವರು.

ಹೈದರಾಬಾದು, ಇಂದೂರು, ಭೂಪಾಲ ಸಂಸ್ಥಾನಗಳು ಹಿಂದೂಸ್ಥಾನ ಒಕ್ಕೂಟದಲ್ಲಿ ಸೇರುವ ಬಗ್ಗೆ ಇನ್ನೂ ವಿಚಾರ ನಡೆಸಿರುವವೆಂದೂ ಸದ್ಯಕ್ಕೆ ಯಥಾಸ್ಥಿತಿ ಒಪ್ಪಂದಕ್ಕೆ ಸಹಿಮಾಡಲು ಸಿದ್ಧವಿರುವವೆಂದೂ ಹೇಳಲಾಗಿದೆ.

ಇಂಡೋನೇಶಿಯಾದ ಮೇಲೆ ವಿನಾಕಾರಣ ಯುದ್ಧಹೂಡಿ ಅವರ ಪಟ್ಟಣ, ಹಳ್ಳಿಗಳನ್ನು ಬಾಂಬುದಾಳಿಗೆ ಗುರಿಮಾಡಿರುವ ಹಾಲೆಂಡ ದೇಶದ ವಿಮಾನಗಳು ಭಾರತದಲ್ಲಿ ಸಂಚರಿಸದಂತೆ ತಡೆಹಿಡಿಯಲು ಭಾರತ ಸರಕಾರವು ನಿರ್ಧರಿಸಿದೆ. ಅಲ್ಲಿಯ ಹಿಂದಿನ ಪ್ರಧಾನರಾದ ಸುಲ್ತಾನ ಶಹರೀರರು ಭಾರತವನ್ನು ನೋಡಿ ಇಂಗ್ಲೆಂಡಿಗೆ ತೆರಳಿದರು.

ಖಾನ ಅಬ್ದುಲ ಗಫಾರಖಾನ, ಮೌಲಾನಾ ಅಬುಲಕಲಂ ಆಜಾದರವರು ಪಾಕಿಸ್ತಾನದ ಘಟನಾ ಸಮಿತಿಗೆ ಆರಿಸಲ್ಪಟ್ಟಿರುವರು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್. ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:**— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ. **ಅನಂತಪುರ:**— ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:— ಪತ್ತಿಕೊಂಡ. **ಕಡಪ:**— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ;— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3% **ಬಿ. ವಿ ಶೇಷಗಿರಿರಾವ್, ಕಾರ್ಯದರ್ಶಿ.**

Woolen Coatings, Silk Sarees, Benares and other latest designs Handloom and Mill made Clothes Et . Colours Guaranteed, Prices very reasonable. Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, **ಬಳ್ಳಾರಿ.**

ಉಲನ್ ಕೋಟಿಂಗ್ ಬಟ್ಟೆ, ಬನಾರಸ್ ಜರಿ, ಶಿಲ್ಕ್-ಟಿಶ್ಯು ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು **ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ,** ಬೆಲೆ ಸರಿಯೂಪ್ಪು. ಪರೀಕ್ಷಿಸಿ ಮನಗಾಣರಿ.

ಆಂಧ್ರ ಪ್ರಾಂತದ ಬೇಡಿಕೆ
ನೆಹರೂರವರ ಆಶ್ವಾಸನ

ಮದ್ರಾಸಿನ ಹಿಂದಿನ ಪ್ರಧಾನರಾದ ಶ್ರೀ ಟಿ. ಪ್ರಕಾಶಂರವರು ಮಹಾತ್ಮ ಗಾಂಧಿಯವರನ್ನು, ಜವಹರಲಾಲ ನೆಹರೂರವರನ್ನು ಕಂಡು ಆಂಧ್ರ ಪ್ರಾಂತವನ್ನು ನಿರ್ಮಿಸಿ ಪ್ರಾಂತದಲ್ಲಿ ದ್ವೇಷಾಸೂಯೆಗಳ ಅಂತಮಾಡಬೇಕೆಂದು ಕೋರಿದರು. ಆಂಧ್ರ ಪ್ರಾಂತವು ಶೀಘ್ರದಲ್ಲಿ ನಿರ್ಮಿಸಲ್ಪಡುವುದಾಗಿ ನೆಹರೂರವರು ಹೇಳಿದರಂತೆ.

ಅರಸಂಗೆ ಉಪದೇಶ

ಸಂಸ್ಥಾನಾಧೀಶರಿಗೆ ಭಾರತದ ವೈಸ್ರಾಯರಾದ ಲಾರ್ಡ ಮೌಂಟಬ್ಯಾಟನ್‌ರೂ, ಮಹಾತ್ಮ ಗಾಂಧಿಯವರೂ, ಅಗಷ್ಟ ಮೊದಲನೆಯ ವಾರದೊಳಗಾಗಿ ಭಾರತದ ಒಕ್ಕೂಟವನ್ನು ಸೇರಬೇಕೆಂದು ಉಪದೇಶಿಸಿದ್ದಾರೆ. ನವದೆಹಲಿಯಲ್ಲಿ ಸಮಾವೇಶವಾದ ಸಂಸ್ಥಾನಾಧೀಶರಿಗೆ ಸರ್ದಾರವಲ್ಲಭಭಾಯಿ ಪಟೇಲರು ಫಲಾಹಾರ ಸಮಾರಂಭವನ್ನೇರ್ಪಡಿಸಿದ್ದರು.

ಸ್ವಾತಂತ್ರ್ಯದಿನೋತ್ಸವ

ಅಧಿಕಾರಪ್ರದಾನದ 15-8-47 ರ ದಿ ನ ಬಳ್ಳಾರಿ ನಗರದಲ್ಲಿ ವೈಭವವಾಗಿ ಉತ್ಸವಗಳನ್ನು ಜರುಗಿಸಲು ನಿಶ್ಚಿತವಾಯಿತು. ಸರ್ಕಲ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಶ್ರೀಗಳಾದ ವೀರಾಸ್ವಾಮಿ, ಸುಬ್ರಹ್ಮಣ್ಯಂ, ಭೀಮರಾವ್ ಸುಬ್ಬರಾವು ವಗೈರೆ ಮಹನೀಯರು ತಮ್ಮ ಸೂಚನೆಗಳನ್ನು ಕೊಟ್ಟು ಅಧಿಕಾರಿ; ಅಧಿಕಾರೇತರ ಎಂಬ ಭೇದವಿಲ್ಲದೆ ಉತ್ಸವವನ್ನು ಆಚರಿಸಲು ತಮ್ಮ ಸೂಚನೆಗಳನ್ನು ಕೊಟ್ಟರು. ಜಿಲ್ಲಾ ಕಲೆಕ್ಟರ್‌ರವರು ಈ ಬಗ್ಗೆ 8 ನೆಯ ತಾ. ಒಂದು ಸಭೆಯನ್ನು ಕರೆದಿರುತ್ತಾರೆ

ಬಟ್ಟೆಯ ನಿಯಂತ್ರಣ ಹೋಗುವದಿಲ್ಲ:— ದೆಹಲಿಯಲ್ಲಿ ಕೂಡಿದ ಪ್ರಾಂತಗಳ ಮತ್ತು ಸಂಸ್ಥಾನ ಪ್ರತಿನಿಧಿಗಳ ಸಭೆಯಲ್ಲಿ ಉದ್ಯೋಗ ಮತ್ತು ಪೂರೈಕೆ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರು ಬಟ್ಟೆಯ ಮೇಲಿನ ನಿಯಂತ್ರಣವನ್ನು ತೆಗೆಯಲು ಸಾಧ್ಯವಿಲ್ಲೆಂದೂ, ಬಟ್ಟೆಯ ಉತ್ಪಾದನೆಯನ್ನು ಹೆಚ್ಚಿಸಿ ಹೆಚ್ಚೆಚ್ಚು ಬಟ್ಟೆಯನ್ನು ನಾಗರೀಕರಿಗೆ ಒದಗಿಸುವುದೇ ತಮ್ಮ ಧ್ಯೇಯವೆಂದು ಹೇಳಿದರು.

ಬಟ್ಟೆಯ ನಿಯಂತ್ರಣ ತೆಗೆಯಬಾರದೆಂದು ಪ್ರಾಂತ ಪ್ರತಿನಿಧಿಗಳ ಅಭಿಪ್ರಾಯವಂತೆ.

ಮಹಾತ್ಮ ಗಾಂಧಿ:— ಕಾಶ್ಮೀರದಲ್ಲಿ 3 ದಿನಗಳಿರುವುದಾಗಿ ಗೊತ್ತಾಗಿದೆ. ಅಲ್ಲಿಂದ ಬಂದಮೇಲೆ ದೆಹಲಿಯಲ್ಲಿ ೧೫ ನೆಯ ತಾ!! ಸ್ವಾತಂತ್ರ್ಯದಿನೋತ್ಸವವನ್ನು ಮುಗಿಸಿಕೊಂಡು ನವಖಾಲಿಗೆ ಹೊರಡಲಿರುವರು.

ಭಾರತ ವಿಮಾನವನ್ನು ಡಚ್ಚರು ಇಂಡೋನೇಶಿಯಾದಲ್ಲಿ ಗುಂಡುಹಾಕಿ ಕೆಡವಿದ್ದರ ಪರಿಣಾಮವಾಗಿ ಅದರಲ್ಲಿದ್ದವರೆಲ್ಲಾ ಸತ್ತರಷ್ಟೆ. ಅವರು ಭಾರತ ಸರ್ಕಾರಕ್ಕೆ ಒಂದು ಕೋಟಿ ರೂ. ವರಿಹಾರವನ್ನಾದರೂ ಕೊಡಬೇಕೆಂದು ವೈಮಾನಿಕರಾದ ಬಿ. ಪಟ್ನಾಯಕರು ಸೂಚಿಸಿರುತ್ತಾರೆ.

ಸೀಖರ ವಿರೋಧ

ತಮ್ಮ ಪುಣ್ಯಕ್ಷೇತ್ರಗಳನ್ನು ವಿಭಜಿಸಬಾರದೆಂದೂ, ಹಾಗೆ ಮಾಡಿದರೆ ತಾವು ಕೊನೆಯವರೆಗೂ ಹೋರಾಡುವುದಾಗಿ ಶೀಖ ಶಿಷ್ಟಮಂಡಳಿಯ ಗಂಗಾಸಿಂಗರು ಲಂಡನದ ಸುದ್ದಿಗಾರರ ಸಭೆಯಲ್ಲಿ ಹೇಳಿದರು

ಸುಭಾಸ ರಾಷ್ಟ್ರಗೀತೆ

ಕ್ರಯ 0-8-0 ನವಭಾರತ ಕಾರ್ಯಾಲಯ
ಬ ಳ್ಳಾ ರಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....

Printed at Krishna Press Bellary QH NO. B 17 FOR (Q.H. NO. B-5.)
Edited & Published by T B. KESHAVA RAO

ಪಾಕಿಸ್ತಾನದ ಗವರ್ನರ್ ಜನರಲ್ ಜಿನ್ನಾ

ಭಾರತ ನಿರ್ಮಾತೃ ಗಾಂಧಿ



ನಮ್ಮ ನೂತನ ರಾಷ್ಟ್ರಧ್ವಜ
(ಧ್ವಜ ಮತ್ತು ಚಕ್ರಗಳ ಬಗ್ಗೆ ೨, ೮, ೯. ೧೦ ನೆಯ ಪುಟದ ಲೇಖನ ನೋಡಿರಿ)

ಅಶೋಕ ಸ್ತೂಪದಲ್ಲಿನ ಚಕ್ರ

ಸಂವಿಧಾನ ಸಮಿತಿ ಅಧ್ಯಕ್ಷ
ಡಾ ರಾಜೇಂದ್ರ ಪ್ರಸಾದ

ಭಾರತದ ಮುಖ್ಯಮಂತ್ರಿ ಪಂಡಿತ ಜವಹರಲಾಲ ನೆಹರೂ

ಯುಕ್ತ ಪ್ರಾಂತದ ಗವರ್ನರ್
ಶ್ರೀಮತಿ ಸರೋಜಿನಿ

INDEPENDENT
Special 15-8-47
ಸ್ವಾತಂತ್ರ್ಯ ಸಂಚಿಕೆ

Nava Bharat Weekly, Bellary.
o-4-o
ನವ ಭಾರತ — ಬಳ್ಳಾರಿ.

Vol. 6
No. 31
೯ ಟ್ಟು

52

ಸ್ವಾತಂತ್ರ್ಯ ಭಾನೂದಯ
ಪಂಚರತ್ನ

ಹರಡಿಕೊಂಡಿಹ ದಾಸ್ಯತಿಮಿರವ
ಭರದಿ ಹೊಡೆದೋಡಿಸುತ, ಪ್ರಾಗ್ಗಿರಿ
ವರಮಹೋನ್ನತ ಶಿಖರವೇರಿದ ನಿಂದು
ಭಾಸ್ಕರನು ॥
ವರಮಹಾತ್ಮನು ಗಾಂಧಿಹೂಡಿದ
ಪರಮಶಾಂತಿಯುತಾಜಿ-ಫಲವಿದು
ಭರತಮಾತೆಯ ದಾಸ್ಯಶೃಂಖಲೆ ಹರಿ
ದುದೀದಿನಕೆ ॥೧॥
ಮೂರು ಬಣ್ಣಗಳಿಂದ ಕೂಡಿದ
ವೀರಭಾರತ ಧ್ವಜವದೀದಿನ
ಹಾರುತಿರುವುದಶೋಕ-ಚಕ್ರವು ನಷ್ಟುವೆ
ರಾಜಿಸಲು ॥
ಭಾರತಾಂಬೆಯ ಸುತರೆ ಬನ್ನಿರಿ
ಘೋರ ಶಪಥವ ಮಾಡಿರೀದಿನ
ಭಾರತಾಂಬೆಯ ಪೂರ್ವವೈಭವ ಸಾಧಿಸು
ವೆವೆಂದು ॥೨॥
ವಿಮಲ ವೇದಾಂತವನು ತಿಳಿಯದ
ತಿಮಿರಮಗ್ನರು ಪಾಶ್ಚಿಮಾತ್ಯರು
ತಿಮಿರದಂದದಿ ನಮ್ಮ ದೇಶದಿನೆಲಸಿದುದಕಾಗಿ॥
ಅಮನು! ನೀಗಿದೆವೆಮ್ಮದೆಲ್ಲವ!!
ಶಮದಮಾನ್ವಿತ ಗಾಂಧಿ ತಪದಿಂ
ದಮಲ ಸ್ವಾತಂತ್ರ್ಯರ್ಕ ನಿಂದುದಯಿಸಿದ
ಭಾರತದಿ ॥೩॥
ಶೋಕದೂರನಶೋಕ ಭೂಪನ
ಶ್ರೀಕರಧ್ವಜ ದಿರ್ದ ಚಕ್ರವು
ಲೋಕನಾಯಕ ಹರಿಯ ಹಸ್ತದಿ ಮರೆವ ಚಕ್ರನದು
ಏಕೆ ಸಂಶಯ ನಮ್ಮ ಧ್ವಜವಿರೆ
ಶೋಕ ದಾರಿದ್ರ್ಯಗಳ ನೂಕುತ
ಲೈಕಮತ್ಯವ ಸಾಧಿಸುವದಿದು
ಶೀಘ್ರಕಾಲದಲಿ ॥೪॥
ಜಯತು ಭಾರತ ಧ್ವಜಕೆ; ಜಯ ಜಯ
ಜಯತಶೋಕನ ಚಕ್ರರಾಜಕೆ!
ಜಯತು ಭಾರತ ದಾಸ್ಯ ಮೋಚಕ
ವೀರಸಂತತಿಗೆ ॥
ಜಯತು ಜಯಜಯ ಕರ್ಮಯೋಗಿಗೆ;
ಜಯತು ರಾಜೇಂದ್ರಾದ್ಯರಿಗೆ, ಜಯ
ಜಯತು ಭಾರತ ಹೃದಯ ಸಾಮ್ರಾಟ್ಪಂಡಿ
ತೇಂದ್ರನಿಗೆ ॥೫॥

[ಕ. ಹೇ ಸತ್ಯನಾರಾಯಣರಾವು ಅಲೂರು]

ಕೇಂದ್ರದಲ್ಲಿ
ನೆಹರೂ ಮಂತ್ರಿ ಮಂಡಲ

ಈ ಕೆಳಗಿನ 14 ಮಂತ್ರಿಗಳು ಆರಿಸಲ್ಪಡಬಹುದೆಂದು ಪ್ರಕಟವಾಗಿದೆ.

1 **ಪಂಡಿತ ಜವಹರಲಾಲ ನೆಹರೂ** ಮುಖ್ಯಮಂತ್ರಿ ಪರರಾಷ್ಟ್ರ ಖಾತೆ
2 **ಸರ್ದಾರ ಪಟೇಲ** ಹೋಂ ಪ್ರಚಾರ ಸಂಸ್ಥಾನಗಳು
3 **ಡಾಕ್ಟರ್ ರಾಜೇಂದ್ರಪ್ರಸಾದ** ಆಹಾರ ವ್ಯವಸಾಯ
4 **ಮೌಲಾನ ಆಜಾದ್** ವಿದ್ಯಾಭ್ಯಾಸ
5 **ರಾಜಕುಮಾರಿ ಅಮೃತಕೌರ್** ಆರೋಗ್ಯ
6 **ಸರ್ದಾರ ಬಲದೇವಸಿಂಗ್**–ರಕ್ಷಣೆ
7 **ಡಾ ಜಾನ್** ಮಾಷಾಯಿ –ಸಾರಿಗೆ
8 **ರಾಫಿ ಅಹ್ಮದ್** ಕಿದ್ವಾಯಿ–ನೂರ್ಗ ಸೌಕರ್ಯ
9 **ಆರ್ ಕೆ ಷಣ್ಮುಖಂ ಶೆಟ್ಟಿ**—ಹಣಕಾಸು
10 **ಶಾಮು ಪ್ರಸಾದಮುಖರ್ಜಿ**— ಮೈನ್ಸ ವರ್ಕಸ್ ಅಂಡ್ ಪವರ್
11 **ಜಗಜೀವನರಾಮ್**—ಕೂಲಿಕಾರಶಾಖೆ,
12 **ಡಾ. ಅಂಬೇಡ್ಕರ್**—ನ್ಯಾಯಶಾಖೆ
13 **ಶಿ ಹೆಚ್. ಭಾಭಾ**—ಕಾರ್ಖಾನೆ, **ಪೂರೈಕೆ**
14 **ಎನ್. ವಿ. ಗಾಡ್ಗಿಲ್**—ವ್ಯಾಪಾರ

॥ जयहिन्द ॥

ಭಾರತ ಸ್ವಾತಂತ್ರ್ಯ ವೀರ

—: ಶ್ರೀ ಸುಭಾಸ್ ಚಂದ್ರಬೋಸ :—

ಹಿಂದೂ. ಮುಸಲ್ಮಾನ್ ಸೀಖ್, ಈಸಾಯಿ ವಗೈರೆ ಜಾತಿ ಭೇದವಿಲ್ಲದೆ ಭಾರತ ಸ್ವಾತಂತ್ರ್ಯಕ್ಕೆ ಹೋರಾಡುವ "ಆಜಾದ್ ಫೌಜ್"ನ್ನು ಸೃಷ್ಟಿಸಿ, ಆದರ ನಾಯಕನಾಗಿ ಬಿಳಿಯರ ಸೈನ್ಯವನ್ನು ಸೋಲಿಸುತ್ತಾ ಸಿಂಗಪುರದಿಂದ ದೆಹಲಿಯವರೆಗೆ ಸಾಗ ಬೇಕೆಂದುದ್ದೇಶಿಸಿ ಸುಮಾರು ೨೪೦೦ ಮೈಲಿದೂರ ಇಂಫಾಲದವರೆಗೆ ಬಂದು ಭಾರತ ಸ್ವಾತಂತ್ರ್ಯ ಇತಿಹಾಸದಲ್ಲೇ ಒಂದು ಸುವರ್ಣ ಪರ್ವವನ್ನು ರಚಿಸಿದ ವೀರಶಿರೋಮಣಿ ಸುಭಾಸಚಂದ್ರರ ಅಜಾದ್ ಹಿಂದ್ ಸೈನ್ಯದ ರಣಗಾಯನ ಧ್ವಜಗೀತೆಗಳು ಹಿಂದಿಯಲ್ಲಿವೆ. ಅವುಗಳನ್ನು ಹಿಂಬದಿಯಲ್ಲಿ ಕನ್ನಡ ಲಿಪಿಯಲ್ಲಿ ಕೊಟ್ಟಿದ್ದೇವೆ.

ಸ್ವಾತಂತ್ರ್ಯೋತ್ಸವದ ದಿನ ಯಾವ ಯುವಕನೂ ಸುಭಾಸರನ್ನು ಮರೆಯಲಾರನು.

ಆಜಾದ್ ಸೈನಿಕರ ರಣಗಾನ

ಅವರು ಹಾಡಿದ್ದು (ಹಿಂದುಸ್ಥಾನಿಯಲ್ಲಿ)

ಕದಮ ಕದಮ ಬಢಾಯೆ ಜಾ
ಖುಶೀ ಕೆ ಗೀತ ಗಾಯೆ ಜಾ
ಯೆ ಜಿಂದಗೀ ಹೈ ಕೌಮಕೀ
ತೊ ಕೌಮ ಪರ ಲುಟಾಯೆ ಜಾ।

ತೂ ಶೇರೆ ಹಿಂದ ಆಗೆ ಬಢ
ಮುರನೇಸೆ ಫಿರಭೀ ತೂ ನ ಡರ
ಆಸ್ಮಾನತಕ ಉಠಾಯೆ ಸರ್
ಜೋಶೆ-ವತನ ಬಢಾಯೆ ಜಾ!

ತೇರೀ ಹಿಮ್ಮತ ಬಢತೀ ರಹೇ
ಖುದಾ ತೇರೀ ಸುನತಾ ರಹೇ
ಜೊ ಸಾಮನೇ ತೇರೆ ಚಢೇ
ತೊ ಖಾಕಮೆ ಮಿಲಾಯೆ ಜಾ।

ಚಲೋ ದಿಲ್ಲೀ ಪುಕಾರಕೇ
ಕೌಮೀ ನಿಶಾನ್ ಸಂಬಾಲಕೇ
ಲಾಲ್ ಕಿಲೇಕೆ ಗಾಢಪೇ
ಲಹರಾಯೆ ಜಾ ಲಹರಾಯೆ ಜಾ।

ಕನ್ನಡದಲ್ಲಿ ತರ್ಜುಮೆ

ಹೆಜ್ಜೆ ಹೆಜ್ಜೆ ಹೆಜ್ಜೆ ಮುಂದೆ।
ಹಾಡು ಆನಂದದಿಂದೆ।
ಪ್ರಾಣ ನಾಡ ಸೊತ್ತಿದೆಂದೆ
ನೀಡು ನಾಡಿಗಾಗಿ ಬಲಿ।

ಭಾರತ ಸಿಂಹ ಮುಂದೆ ನಡೆ!
ಸಾವಿಗಂಜಬೇಡ-ಹೊಡೆ!
ಗಗನ ಮುಟ್ಟಿ ತಲೆಯನೆತ್ತಿ।
ಕೆಚ್ಚ ನೆಚ್ಚಿ ಹಾದಿ ತುಳಿ!

ನಿನ್ನ ಶೌರ್ಯ ಏರುತಿರಲಿ
ದೇವ ಕೃಪೆಯ ಬೀರುತಿರಲಿ।
ಎದುರುಬಿದ್ದು ಬರಲು ಹಗೆ
ಮಣ್ಣುತಿನಿಸಿ ನುಗ್ಗು ಕಲ್ಲಿ!

"ಚಲೋ ದಿಲ್ಲೀ" ಎಂದು ನುಡಿ
ರಾಷ್ಟ್ರಧ್ವಜನನೆತ್ತಿ ಹಿಡಿ
ಹಾರಿಹಾರಿ ಮೆರೆಯಲದು
ಕೆಂಪು ಕೋಟೆ ನೆತ್ತಿಯಲಿ।

ನಂ—೩

ಹಮ್ ವತನಕೀ ಮುಹಬ್ಬತಮೆ ಮರಜಾಯಂಗೆ
ಜಂಗೆ ಭಾರತಮೆ ಸೀನಾ ಸಿಪರ್ ಜಾಯಂಗೆ
ಮರ್ತ್ಯಹ ಸಮಸ್ಯೋಕಿ ಥಮ್ಮಿಸೆ ಡರಜಾಯಂಗೆ
ಆಪ್ ದಿಖಿಲಾರಹೇಹೈ ಕಿಸೇ ಫುಡಕಯಾ ?
ಯೇ ವಹ ದರಿಯಾ ನಹಿ ಜೋ ಉತರ ಜಾಯಂಗೆ
ದೇಶಸೇವಾಮೆ ಜೀಸೆ ಗುಜರ ಜಾಯಂಗೆ।
ತೊ ಅಮರನಾಮ ಯುನಿಯಾಮೆ ಕರ ಜಾಯಂಗೆ
ತೀರವರ ತೀರಬರಸೆ, ಹಟೇಂಗೆ ನಹಿ,
ಜೋಶ ಖಾಕರ ಯಹ ಸೀನೆ ಉಭರ ಜಾಯಂಗೆ
ಯಹ ನ ಪೂಛೋಕಿ ಮರ್ಕರ ಕಿಧರ, ಜಾಯಂಗೆ।
ಯಾ—ಇಧರ ಜಾಯಂಗೆ—ಯಾ—ಉಧರ ಜಾಯಂಗೆ
ದೇಶ ಆಜಾದ ಕರನೇಮೆ ಏಕ ಮೋನಹಿ,
ದೇಖಲೇನಾ ಹಜಾರೋಂಕೆ ಸರ್ ಜಾಯಂಗೆ

ಆಜಾದ ಹಿಂದ್‌ಧ್ವಜ ಗೀತೆ

ಕೌಮೀ ತಿರಂಗೆರುಂಡೇ ಊಂಚೇ ರಹೋ ಜಹಾಂಮೆ
ಹೋ ತೇರೀಸರ್‌ಬುಲಂದೀ ಜ್ಯೊಂ ಚಾಂದ್ ಆಸಮಾನಮೆ।
ತೂ ಮಾನಹೈ ಹಮಾರೀ ತೂ ಸಾನಹೈ ಹಮಾರೀ।
ತೂ ಜೀತಕಾ ನಿಶಾನ್ ಹೋ ತೂ ಜಾನಹೈ ಹಮಾರೀ॥
ಹರಏಕ ಬಸರಕೇ ಲತವರ ಜಾರೀಹೈಯಹ ದುವಾಯೇ।
ಕೌಮೀ ತಿರಂಗೆರುಂಡಾ ಹಮೆ ಶೌಖಸೇ ಉಡಾಯೆ॥
ಆಕಾಶ ಓರ ಜಮೀನ್‌ಪರ್ ಹೋ ತೇರ ಬೋಲಬಾಲ।
ರುಕ್ ಜಾಯೆ ತೊ ಅಗೆ ಹಕ್ ತಾಜ ತಖ್ತವಾಲ॥
ಹರಕೌಮಕೊ ತೂ ನಗರವೇ ಅಮನಕಾ ಸಾಮಾನಹೋ
ಹೋ ಏಸೇ ಮುಅಸ್ಸರ್ ಸಾಯಾ ತೇರಾ ಜಹಾಂಹೋ॥
ಮುಷ್ತಾಕ ಬೇಸಬಾಜೇ ಖುಷ್ ಹೋಕೆ ಗಾರಹಾಹೈ।
ಶಿರಪರ ತಿರಂಗ ರುಂಡಾ ಜಲ್ವಾ ದಿಖಾರಹಾಹೈ।
ಕೌಮೀ ತಿರಂಗೆ ರುಂಡ ಊಂಚಾರಹೆ ಜಹಾಂಪೆ॥

ಬಳ್ಳಾರಿಯಲ್ಲಿ ಸ್ವಾತಂತ್ರ್ಯೋತ್ಸವ

14-8-47 ಮಧ್ಯರಾತ್ರಿ 32 ವಾರ್ಡುಗಳಲ್ಲಿ ಬಿಟ್‌ಗಳ ನಿನಾದ.

15-8-47 ಪ್ರಾತಃಕಾಲ 5-30 ಗಂಟೆಗೆ ಸರಕಾರೀ ಕಟ್ಟಡಗಳಮೇಲೆ ಧ್ವಜಾರೋಹಣ.

" ಪ್ರಭಾತಫೇರಿ 7 ರವರೆಗೆ.

" 8 ಕ್ಕೆ ಸಾಂಬಮೂರ್ತಿ ಮೈದಾನದಲ್ಲಿ ಧ್ವಜಾರೋಹಣ

" ಬಡವರಿಗೆ ಅನ್ನದಾನ (ಬ್ರೂಸ್‌ಪೇಟೆ, ಕಾಲುಬಾಜಾರುಗಳಲ್ಲಿ)

" ಸಾಯಂಕಾಲ ಆನೆಯಂಬಾರಿಯ ಮೇಲೆ ಧುರೀಣರ ಭಾವಚಿತ್ರ, ಧ್ವಜಗಳಿಂದಲಂಕೃತವಾದ ಮೆರವಣಿಗೆ.

" ರಾತ್ರಿ, ವಿನೋದ ನಾಟಕಗಳು.

[ಕಲೆಕ್ಟರ್, D. S. P. ಯವರು ಪೋಲೀಸ್ ಮತ್ತು ರಿಸರ್ವ ಪೇರೇಡ್ ನಡೆಸಿ ಎಲ್ಲರೊಂದಿಗೆ ಧ್ವಜ ವಂದನೆ ಮಾಡುವರು ದರ್ಬಾರ್ ನಡೆದು ಸ್ವಾತಂತ್ರ್ಯದಿನದ ಮಹತ್ವವು ಜಿಲ್ಲಾಧಿಕಾರಿಗಳಿಂದ ಹೇಳಿಸಲ್ಪಡುವುದು]

ಸ್ವಾತಂತ್ರ್ಯ ವೀರರಿಗೆ ಪರಿಹಾರ

ಭಾರತ ಸ್ವಾತಂತ್ರ್ಯೋದ್ಯಮಗಳಲ್ಲಿ ತ್ಯಾಗಮಾಡಿ ಜೈಲುವಾಸ ಭೋಗಿಸಿ ಅನೇಕರೀತಿ ಕಷ್ಟನಷ್ಟಗಳಿಗೆ ಗುರಿಯಾದ ರಾಜಕೀಯ ಜನರಿಗೆ ಸ್ವಾತಂತ್ರ್ಯೋತ್ಸವದ ಸಂತೋಷ ನಿಮಿತ್ಯ ಒಬ್ಬೊಬ್ಬರಿಗೆ ಐದೈದು ಎಕರೆ ಭೂಮಿಯನ್ನು ಉಚಿತಾರ್ಥವಾಗಿ ಸರಕಾರವು ಕೊಡಲಿರುವದೆಂದೂ, ಆಗಷ್ಟ್ 14 ರ ದಿನ ಈ ಸಂಬಂಧದ ವಿವರಗಳು ಹೊರಬೀಳುವದೆಂದೂ ಗೊತ್ತಾಗಿದೆ.

ಶ್ರೀ ಟೇಕೂರು ಸುಬ್ರಹ್ಮಣ್ಯಂ

ಅಧ್ಯಕ್ಷ ಜಿಲ್ಲಾ ಕಾಂಗ್ರೆಸ್ ಸಮಿತಿ.

[1929 ರಲ್ಲಿ ವಕೀಲ ವೃತ್ತಿಯನ್ನು ತ್ಯಜಿಸಿದಾಗಿನಿಂದ ಜಿಲ್ಲೆಯ ಕಾಂಗ್ರೆಸ್ ಧುರೀಣರಾಗಿ 1930, 1932, 1941, 1942-44 ರಲ್ಲಿ ಸಲ ಜೈಲು ವಾಸವನ್ನು ಭೋಗಿಸಿ ಅಪರಿಮಿತ ತ್ಯಾಗಮಾಡಿದ್ದಾರೆ. ಜಿಲ್ಲೆಯ ಸಂಬಂಧ ಅನೇಕ ಹಿತಕಾರ್ಯಗಳಲ್ಲಿ ಇವರ ಮಾರ್ಗದರ್ಶಿತ್ವವನ್ನು ಅಧಿಕಾರಿಗಳು, ಸಾರ್ವಜನಿಕರು ಅಪೇಕ್ಷಿಸುವುದು ಸ್ವಾಭಾವಿಕವಾಗಿದೆ]

ಹಳ್ಳಿಗರನ್ನು ಮರೆಯಬೇಡಿರಿ

ಭಾರತ ಸ್ವಾತಂತ್ರ್ಯ ಘೋಷಣೆಯೊಂದಿಗೆ ಹಳ್ಳಿಗರು ಸ್ವತಂತ್ರ ಜೀವನ ಮಾಡಿಕೊಳ್ಳಲು ಏರ್ಪಡಿಸಬೇಕೆಂದೂ, ಈಗಿನ ಸೀದಾ ಪದ್ಧತಿಯಿಂದ ಹಳ್ಳಿಗಸಲ್ಲಿ ಸತ್ವವೇನೂ ಉಳಿದಿಲ್ಲವೆಂದೂ ಶ್ರೀ ಕೆ. ಬಿ. ಈಶಾವುರ ಇವರು ಬರೆಯುತ್ತಾರೆ.

INDIAN
Independence should mean
independent living for every family-member

IF SO PLEASE SELECT :

Maximum benefit for low premium rates

Most Useful Schemes

Prompt and quick settlement of claims.

Cent percent Indian Company

Our life fund exceeds, 77 lakhs, our expense ratio is 6·6% a record low figure in Indian Insurance.

THE ANDHRA
INSURANCE COMPANY LIMITED
H.O. MASULIPATAM

Rayalaseema Branch : ANANTAPUR

For agency and other particulars please contact :

V. RAMA RAO, Branch Manager, Anantapur

or

C. BALAKRISHNA RAO Fort, Bellary.

ಭಾರತ ಸ್ವಾತಂತ್ರ್ಯವೆಂದರೆ
ಕುಟುಂಬದ ಪ್ರತಿವ್ಯಕ್ತಿಗೂ
ಸ್ವಾತಂತ್ರ್ಯ — ಹಾಗಾದರೆ
ಈ ವಿಮಾ ಕಂಪನಿಯನ್ನಾರಿಸಿರಿ.

★ ಕಡಮೆ ಪ್ರೀಮಿಯಂದರದಿಂದ ಅಧಿಕ ಲಾಭ

★ ಆತ್ಯಂತುಪಯುಕ್ತ ಯೋಜನೆಗಳು

★ಹಕ್ಕಿನ ಸಂಬಂಧ ಹಣದ ಶೀಘ್ರವಿಲೇವಾರಿ

★ ಪೂರ್ಣವಾಗಿ ಭಾರತದ ಕಂಪನಿ

ನಮ್ಮ ವಿಮಾನಿಧಿಯು 77 ಲಕ್ಷಗಳಿಗೆ ಮಿಕ್ಕಿದೆ. ನಮ್ಮ ಖರ್ಚು ಹಿಂದುಸ್ತಾನದ ವಿಮಾ ಜಗತ್ತಿನಲ್ಲೇ ಕಡಮೆ· (6. 6%)

ದಿ ಆಂಧ್ರ
ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್,

ಮುಖ್ಯ ಕಾರ್ಯಾಲಯ:-**ಮಸಲೀಪಟ್ಟಣ**

ರಾಯಲಶೀಮೆ ಶಾಖೆ—**ಅನಂತಪುರ**

ಏಜನ್ಸಿ ಮತ್ತು ಇತರ ವಿವರಗಳಿಗಾಗಿ ವಲ್ಲೂರಿ ರಾಮರಾವು ಬ್ರಾಂಚ್ ಮ್ಯಾನೇಜರ್ ಅನಂತಪುರ

ಅ ಥ ವಾ

ಶಿ. ಬಾಲಕೃಷ್ಣರಾವ್, ಇನ್ಸ್‌ಪೆಕ್ಟರ್ ಕೋಟೆ ಬಳ್ಳಾರಿ

ಮರಣದಂಡನೆ ಶಿಕ್ಷೆ ಇಲ್ಲ:— ಆಗಷ್ಟ 15ರ ಪೂರ್ವಕ್ಕೆ ಸ್ಥಿರವಾದ ಚಾರಿಯಲ್ಲಿ ತರಲಾಗದ ಮರಣದಂಡನೆ ಶಿಕ್ಷೆಗಳನ್ನೆಲ್ಲಾ ಮದ್ರಾಸ್ ಸರ್ಕಾರದವರು ರದ್ದುಮಾಡಲಿರುವರು. ಹತ್ತು ವರ್ಷಗಳು ಶಿಕ್ಷೆಯನ್ನನುಭವಿಸಿದವರು ಸ್ವಾತಂತ್ರ್ಯೋತ್ಸವದ ದಿನ ಬಿಡುಗಡೆಮಾಡಲ್ಪಡುವರು. ಸ್ಥಾನಬದ್ಧರೂ, ಕೈದಿಗಳೂ ಸೇರಿ ಸುಮಾರು 5000 ಜನರಿಗೆ ಬಿಡುಗಡೆಯಾಗಲಿದೆಂದು ಗೊತ್ತಾಗಿದೆ.

ಶ್ರೀ ಬಿ. ಲಂಕಪ್ಪನವರು ಹುಚಗಲಿ ತಾಲ್ಲೂ ವಿದ್ಯಾರ್ಥಿ ಕಾಂಗ್ರೆಸ್‌ಗೆ ಸುಮಾರು ೪೦ ರೂ. ಕೂಡಿಸಿ ಕೊಟ್ಟಿರುವರು.

ಮುಸಲ್ಮಾನರಿಗೆ ವಿಶೇಷ ಸವಲತ್ತುಗಳನ್ನು ಹಾಗೆಯೇ ಮುಂದೆ ಸಾಗಿಸುವ ವಿಷಯ ಸುಳ್ಳೆಂದು ಮದ್ರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ.

ಹುತಾತ್ಮರದಿನ

ಮಲ್ಲಸಜ್ಜನ ವ್ಯಾಯಾಮ ಶಾಲೆಯವರು 9-8-47 ರ ದಿನವನ್ನು ಪ್ರಾತಃಕಾಲ ಸಾಯಂಕಾಲಗಳಲ್ಲಿ ನಗರ ಸಂಕೀರ್ತನೆಯಿಂದಲೂ, ಸಾಯಂಕಾಲ ಬಹಿರಂಗ ಸಭೆಯಿಂದಲೂ ಆಚರಿಸಿದರು. ಶ್ರೀಮತಿ ಸಿದ್ಧಮತಿ ಮೈಲಾರರವರು ಇದಕ್ಕಾಗಿ ಪ್ರತ್ಯೇಕವಾಗಿ ಆಹ್ವಾನಿತರಾಗಿದ್ದರು. ದಿವಂಗತ ಮಹದೇವ ಮೈಲಾರರವರು 1942-44 ಚಳವಳಿಯಲ್ಲಿ ಸರ್ಕಾರದ ಗುಂಡಿಗೆ ಆಹುತಿಯಾಗಿ ಮಡಿದದ್ದನ್ನು ಹೇಳಿ ಅವರ ಪರಿಚಯಮಾಡಿ ಶ್ರೀ ಕೆ. ಚನ್ನಬಸಪ್ಪನವರು ಗುಣಗಾನಮಾಡಿದರು. ಶ್ರೀಮತಿ ಸಿದ್ಧಮತಿಯವರು ಹುತಾತ್ಮರನ್ನು ಮರೆಯದಂತಿರಲು ಕಾಂಗ್ರೆಸ್ ರಚನಾತ್ಮಕ ಕಾರ್ಯದಲ್ಲಿ ಮಗ್ನರಾಗಿರಬೇಕೆಂದು ಸಂಕ್ಷಿಪ್ತವಾಗಿ ಹೇಳಿದರು. ಶ್ರೀಗಳಾದ ಸತ್ಯನಾರಾಯಣ ಕಪ್ಪಗಂತುಲ ಸುಬ್ಬಣ್ಣಾವು, ಮರುಳ ಸಿದ್ದಯ್ಯನವರ ಭಾಷಣಗಳಾಗಿ ಅಧ್ಯಕ್ಷರ ಸಮಾರೋಪದನಂತರ ವಂದನಾರ್ಪಣೆಯಿಂದ ಸಭೆಯು ಮುಗಿಯಿತು.

ಮದ್ರಾಸ್ ಪ್ರಾಂತದಲ್ಲಿ

ಮುನಿಸಿಪಲ್—ಚುನಾವಣೆಗಳು

[ಸರಕಾರದ ಅಧಿಕೃತ ಪ್ರಕಟನೆ]

14 ಆಗಷ್ಟ 1947 ಇಸ್ತಿಹಾರಿನ ಪ್ರಕಟನೆ
25, 26, 27 ನಿಯ ಆಗಷ್ಟ ನಾಮ ಪತ್ರಗಳನ್ನು ಕೊಡುವ ಅವಧಿ
28 ನಾಮ ಪತ್ರಗಳ ಪರಿಶೀಲನೆ
3 ಸೆಪ್ಟಂಬರ್ ನಾಮಪತ್ರಗಳ ಪ್ರಕಟನೆ (ಅಪೀಲ್ ಇಲ್ಲವಾದರೆ)
9 ,, ,,
29 ,, ಚುನಾವಣೆ
30 ,, ಎಣಿಸುವುದು ಮತ್ತು ಆಯ್ಕೆ

ಯುಕ್ತ ಪ್ರಾಂತಕ್ಕೆ ನಿಯೋಜಿತ ಗವರ್ನರರಾದ ಶ್ರೀ ಬಿ. ಶಿ. ರಾಯರು ಬರುವವರೆಗೂ ಶ್ರೀಮತಿ ಸರೋಜಿನಿಯವರು ಗವರ್ನರರಾಗಿ ಕೆಲಸ ಮಾಡುವರು.

H. M. V. Refrigerators. Radios.
Batteries for Radio & Cars.

Service Station:— **For all Radios, Batteries & Electrical machines, Pioneers in Radio & Allied work**

Consult Us

ಹೆಚ್. ಎಂ. ವಿ. ಶೈತ್ಯಯಂತ್ರ.
ಹೆಚ್. ಎಂ. ವಿ. ಆಕಾಶವಾಣಿಗಳು.
ರೇಡಿಯೋ ಮತ್ತು ಕಾರುಗಳಿಗೆ
ಬ್ಯಾಟರಿಗಳನ್ನು ಪೂರೈಸುತ್ತೇವೆ. ಅಲ್ಲದೆ ರೇಡಿಯೋ, ವಿದ್ಯುತ್ ಯಂತ್ರಗಳ ರಿಪೇರಿಮಾಡಿ ಬ್ಯಾಟರಿಗಳನ್ನು ಶಕ್ತಿಯುತವಾಗಿ ಮಾಡಿಕೊಡುತ್ತೇವೆ

ನಮ್ಮ್ ಸಲಹೆ ಪಡೆಯಿರಿ

Radio-lectric House, Bellary.
[Established : 1938]
ರೇಡಿಯೊ ಲೆಕ್ಟ್ರಿಕ್ ಹೌಸ್, ಬಳ್ಳಾರಿ.
[ಸ್ಥಾಪಿತ 1938]

ಕನ್ನಡಬಾಲಿಕಾ ಪಾಠಶಾಲೆ

ಉರವಕೊಂಡದ ಜಗದ್ಗುರು ಗವಿಮಠದ ಸಿಂಹಾಸನಾಧೀಶ್ವರರಾದ ಶ್ರೀ ಕರಿಬಸವಸ್ವಾಮಿಗಳು ಬಳ್ಳಾರಿ ನಗರದಲ್ಲಿನ ಶಿವಲಿಂಗಸ್ವಾಮಿಮಠ ಮತ್ತು ಅದಕ್ಕೆ ಸೇರಿದ ಆಜೂಬಾಜು ಕಟ್ಟಡಗಳನ್ನು ಮದ್ರಾ ಸ್ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಪ್ರದಾನ ವಾಡಿ ಸಂಸ್ಥಾನದ ಹೆಸರಿನಿಂದ ಕನ್ನಡ ಬಾಲಿಕೆಯರ ವಾರಶಾಲೆಸಡೆಸಲು ಅಪ್ಪಣೆ ಕೊಟ್ಟಿರುವುದು ಪ್ರಶಂ ಸನೀಯವಾಗಿದೆ.

ಬೊಂಬಾಯಿ ಪ್ರಾಂತದ ಸೆಕ್ರಟರಿಯೇಟ್‌ದ ಮೇಲೆ ಸರ್ಕಾರದವರು 1800 ರೂ. ಬೆಲೆಬಾಳುವ ಧ್ವಜವೇರಿಸಲು ನಿಶ್ಚಯಿಸಿದ್ದಾರೆ.

To

Labour Schools Teachers, Bellary Dt.

I thank you for electing me unanimously As I have more important work to do I regest, I am unable to serve. Excuse. I have intimated this fact to the Collector and D.L O.

T, B. KESHAVA RAO

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರಿಗೆ

ನೀವು ನನ್ನನ್ನು ಸರ್ವಾನುಮತದಿಂದ ಪುನಃ ಆರಿಸಿದುದ ಕ್ಕೆ ನಿಮ್ಮನ್ನು ವಂದಿಸುತ್ತೇನೆ. ನನಗೆ ಅತಿ ಮುಖ್ಯ ಕಾರ್ಯಗ ಳ ಸಂಬಂಧವಿರುವ ಕಾರಣ ನನ್ನನ್ನು ಕ್ಷಮಿಸಿ ಬೇರೊಬ್ಬರನ್ನ ಆರಿಸಿಕೊಳ್ಳಿರಿ. ಲೆಕ್ಕ ಪತ್ರಗಳ ಛಾರ್ಜು ಈಗಿನ ಕಾರ್ಯದರ್ಶಿ ಗೆ ಕೊಟ್ಟು ಎಲ್ಲಾ ಸಮಾಚಾರ ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಟಿ ಬಿ. ಕೇಶವರಾವ್

PRABHAKAR HAIR OIL

Promotes luxurious hair growth.

ಪ್ರಭಾಕರ ಹೇರಾಯಿಲ್

ಕೂದಲಿನ ದಟ್ಟಿ ಮತ್ತು ಸಮೃದ್ಧ ಬೆಳೆಗೆ ಸಹಾಯಮಾಡಿ ನವತಾರುಣ್ಯವನ್ನು ಪ್ರದಾನಮಾಡುವುದು.

PRABHAKAR SANITOL

(PHENYLE)

A liquid disinfectant containing germicidal properties.

ಪ್ರಭಾಕರ ಶಾನಿಟಾಲ್.

ಕ್ರಿಮಿನಾಶಕ ಗುಣಗಳನ್ನುಳ್ಳ ನೈರ್ಮಲ್ಯ ಸಾಧನೆಗೆ ಅನುಕೂಲವಾದ ದ್ರಾವಕ

PRABHAKAR SNOW.

A Perfect Vanishing Skin Cream

for Beauty & Complexion

ಪ್ರಭಾಕರ ಸ್ನೋ

ಚರ್ಮದ ಮೃದುತ್ವ, ಸೌಂದರ್ಯಗಳಿಗೆ ಶ್ರೇಷ್ಠ ಲೇಪನವಾದೊಡನೆಯೇ ಮೃದುತ್ವವನ್ನು ಕೊಟ್ಟು ಅದೃಶ್ಯವಾಗುವುದು.

SARADA INK

(Regd.)

Superfine Ink for Fountain Pens.

ಶಾರದ ಇಂಕ್.

ಫೌಂಟನ್ ಪೆನ್‌ಗಳಿಗೆ ಅದ್ವಿತೀಯವಾದ ಮತ್ತು ಅನುಪಮವಾದ ಮಸಿ.

K. V. & Sons, BELLARY. ಕೆ. ವಿ. ಅಂಡ್ ಸನ್ಸ್ ಬಳ್ಳಾರಿ.

ಕನ್ನಡಬಾಲಿಕಾ ಪಾಠಶಾಲೆ

ಉರವಕೊಂಡದ ಜಗದ್ಗುರು ಗವಿಮಠದ ಸಿಂಹಾಸನಾಧೀಶ್ವರರಾದ ಶ್ರೀ ಕರಿಬಸವಸ್ವಾಮಿಗಳು ಬಳ್ಳಾರಿ ನಗರದಲ್ಲಿನ ಶಿವಲಿಂಗಸ್ವಾಮಿಮಠ ಮತ್ತು ಅದಕ್ಕೆ ಸೇರಿದ ಆಜೂಬಾಜು ಕಟ್ಟಡಗಳನ್ನು ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದವರಿಗೆ ಪ್ರದಾನ ಮಾಡಿ ಸಂಸ್ಥಾನದ ಹೆಸರಿನಿಂದ ಕನ್ನಡ ಬಾಲಿಕೆಯರ ಪಾಠಶಾಲೆನಡೆಸಲು ಅಪ್ಪಣೆ ಕೊಟ್ಟಿರುವುದು ಪ್ರಶಂಸನೀಯವಾಗಿದೆ

ಬೊಂಬಾಯಿ ಪ್ರಾಂತದ ಸೆಕ್ರಟರಿಯೇಟ್‌ದ ಮೇಲೆ ಸರ್ಕಾರದವರು 1800 ರೂ. ಬೆಲೆಬಾಳುವ ಧ್ವಜವೇದಿಸಲು ನಿಶ್ಚಯಿಸಿದ್ದಾರೆ.

To

Labour Schools Teachers, Bellary Dt.

I thank you for electing me unanimously As I have more important work to do I regest, I am unable to serve. Excuse. I have intimated this fact to the Collector and D.L O.

T. B KESHAVA RAO

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರಿಗೆ

ನೀವು ನನ್ನನ್ನು ಸರ್ವಾನುಮತದಿಂದ ಪುನಃ ಆರಿಸಿದುದಕ್ಕೆ ನಿಮ್ಮನ್ನು ವಂದಿಸುತ್ತೇನೆ. ನನಗೆ ಅತಿ ಮುಖ್ಯ ಕಾರ್ಯಗಳ ಸಂಬಂಧವಿರುವ ಕಾರಣ ನನ್ನನ್ನು ಕ್ಷಮಿಸಿ ಬೇರೊಬ್ಬರನ್ನು ಆರಿಸಿಕೊಳ್ಳಿರಿ. ಲೆಕ್ಕ ಪತ್ರಗಳ ಛಾರ್ಜು ಈಗಿನ ಕಾರ್ಯದರ್ಶಿಗೆ ಕೊಟ್ಟು ಎಲ್ಲಾ ಸಮಾಚಾರ ಅಧಿಕಾರಿಗಳಿಗೆ ತಿಳಿಸಿದ್ದೇನೆ.

ಟಿ ಬಿ. ಕೇಶವರಾವ್

PRABHAKAR HAIR OIL

Promotes luxurious hair growth.

ಪ್ರಭಾಕರ ಹೇರಾಯಿಲ್

ಕೂದಲಿನ ದಟ್ಟಿ ಮತ್ತು ಸಮೃದ್ಧ ಬೆಳೆಗೆ ಸಹಾಯಮಾಡಿ ನವತಾರುಣ್ಯವನ್ನು ಪ್ರದಾನಮಾಡುವುದು.

PRABHAKAR SANITOL

(PHENYLE)

A liquid disinfectant containing germicidal properties.

ಪ್ರಭಾಕರ ಶಾನಿಟಾಲ್.

ಕ್ರಿಮಿನಾಶಕ ಗುಣಗಳನ್ನುಳ್ಳ ನೈರ್ಮಲ್ಯ ಸಾಧನೆಗೆ ಅನುಕೂಲವಾದ ದ್ರಾವಕ

PRABHAKAR SNOW.

A Perfect Vanishing Skin Cream

for Beauty & Complexion

ಪ್ರಭಾಕರ ಸ್ನೋ

ಚರ್ಮದ ಮೃದುತ್ವ, ಸೌಂದರ್ಯಗಳಿಗೆ ಶ್ರೇಷ್ಠ ಲೇಪನವಾದೊಡನೆಯೇ ಮೃದುತ್ವವನ್ನು ಕೊಟ್ಟು ಅದೃಶ್ಯವಾಗುವುದು.

SARADA INK

(Regd.)

Superfine Ink for Fountain Pens.

ಶಾರದ ಇಂಕ್.

ನವುಂಟನ್ ಪೆನ್‌ಗಳಿಗೆ ಅದ್ವಿತೀಯವಾದ ಮತ್ತು ಅನುಪಮವಾದ ಮಸಿ.

K. V. & Sons, BELLARY. **ಕೆ. ವಿ. ಅಂಡ್ ಸನ್ಸ್ ಬಳ್ಳಾರಿ.**

ಗಾಂಧೀಜೀಗೆ ತಾನು ರಚಿಸಿದ ಸಂವಿಧಾನವು ಇಬ್ಭಾಗವಾಯ್ತೆಂದು ಇಂದು ಮನೋಕ್ಲಾಂತಿಯಿಲ್ಲ. ಪಾಕಿಸ್ತಾನದಲ್ಲಿ ಶೇಷ ಆಯುಷ್ಯವನ್ನು ಕಳೆಯಲು ನಿರ್ಧರಿಸಿದ್ದಾರೆ. ಅಲ್ಪಸಂಖ್ಯಾಕರನ್ನು ಬಹುಸಂಖ್ಯಾಕರ ಹಿಂಸೆಯಿಂದ ಕಾಪಾಡಲು ಏಕಾಂಗಿಯೇ ಮುಡಿಯಲು ಸಂಕಲ್ಪಿಸಿರುವರು. ಗಾಂಧೀಜೀಯ ತಪಶ್ಚರ್ಯೆ ತ್ಯಾಗ ದಿಂದಲೇ ನಾವೀ ಸ್ವಾತಂತ್ರ್ಯವನ್ನು ಸಾಧಿಸಿದ್ದೇವೆ.

ನಮ್ಮ ನೂತನ ರಾಷ್ಟ್ರಧ್ವಜ

ಹೊಸ ದಿಲ್ಲಿಯಲ್ಲಿ ಸೇರಿರುವ ಘಟನಾ ಸಮಿತಿಯು ಸ್ವತಂತ್ರ ಭಾರತದ ರಾಷ್ಟ್ರಧ್ವಜವು ಹೇಗಿರಬೇಕೆಂಬುದನ್ನು ನಿರ್ಧರಿಸಿತು. ಸ್ವತಂತ್ರ ಭಾರತದ ಹೊಸ ರಾಷ್ಟ್ರಧ್ವಜವು ಈಗಿನ ಧ್ವಜದಂತೆ ಕೇಸರಿ ಬಿಳಿ ಮತ್ತು ಹಸರು ಬಣ್ಣಗಳಿಂದ ಕೂಡಿದ್ದಿರಬೇಕೆಂದೂ ಅದರ ಮಧ್ಯದಲ್ಲಿಯು ಬಿಳಿ ವರ್ಣದಲ್ಲಿದಟ್ಟ ನೀಲಿ ವರ್ಣದ ಅಶೋಕ ಚಕ್ರವಿರಬೇಕೆಂದೂ ಈ ಧ್ವಜದ ಉದ್ದ ಮತ್ತು ಅಗಲಗಳತೆಯ ಪ್ರಮಾಣವು ೩+೨ ಇರಬೇಕೆಂದೂ ನಿರ್ಣಯವಾಯಿತು ಈ ನವ ರಚಿತ ರಾಷ್ಟ್ರಧ್ವಜಕ್ಕೆ ಮುಸಲ್ಮಾನ, ಕ್ರಿಶ್ಚನ್, ಅಂಗ್ಲೋ ಇಂಡಿಯರ್ ಪ್ರತಿನಿಧಿಗಳೂ ಮನ್ನಣೆಯಿತ್ತರು

ಹೊಸ ರಾಷ್ಟ್ರಧ್ವಜ

(ಕೆಂ. ಎಂ. ಮುನಶಿ)

ಈ ಧ್ವಜವನ್ನು ಗಾಂಧೀಜಿಯು ನಮಗೆಕೊಟ್ಟದ್ದು. ಇದು ಸತ್ಯ ಮತ್ತು ಅಹಿಂಸೆಗಳ ಸ್ಪ್ರತೀಕ; ಮತ್ತು ರಾಷ್ಟ್ರವನ್ನು ಕತ್ತಲಿಂದ ಬೆಳಕಿಗೊಯ್ದ ಆ ತಂದೆಯ ಕುರುಹು. ಕದಿರಿಲ್ಲದಿದ್ದರೂ ಚರಕವು ಧ್ವಜದ ಮೇಲೆ ನಿಂತಿದೆ.

ಅಶೋಕನ ಭಾರತದ ಸ್ವಾತಂತ್ರ್ಯ, ಗೌರವಗಳನ್ನು ಗಾಂಧೀಜಿಯು ಭಾರತವು ಪುನಃ ಪಡೆದಿದೆಯೆಂಬ ಅತ್ಯಂತ ಮಹತ್ವದ ವಿಷಯಕ್ಕೆ ಚಕ್ರವು ಸಾಕ್ಷಿಯಾಗಿದೆ. ಅಂದು ಆ ಮಹಾವಿಜೇತನಾದ ಅಶೋಕನು ಧರ್ಮದಿಂದ ರಾಜ್ಯವಾಳುತ್ತಿದ್ದರೆ ಇಂದು ನಮ್ಮ ಈ ಮಹಾವಿಜೇತನು ಧರ್ಮದಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟಿದ್ದಾನೆ. ೨೩೦೦ ವರ್ಷಗಳ ದೈನಂದಿನ ಇತಿಹಾಸ—ಪರಕೀಯರ ಗೆಲುವುಗಳು, ಹೋರಾಟಗಳು, ಅವಮಾನಗಳು, ಬೆಂಕಿಯಂತಹ ವಾತಾವರಣಗಳು ಮತ್ತು ಭಾಗ್ಯೋದಯ! ಈಗ ನಾವು ವಿಜಯಿಗಳಾಗಿ ಹೊರಬಿದ್ದಿವು. ಗಾಂಧೀಜಿಯು ಚರಕದಿಂದ ಅಶೋಕನ ಧರ್ಮಚಕ್ರಕ್ಕೆ ತಿರುಗಿದ ನನ್ನ ಮನಸ್ಸು ಶ್ರೀಕೃಷ್ಣನ ಸುದರ್ಶನ ಚಕ್ರದತ್ತ ಹರಿಯುತ್ತದೆ. ಮಾನವನ ಇತಿಹಾಸದಲ್ಲಿ ಅದ್ವಿತೀಯವಾದ ಜೀವನನೈರಂತರ್ಯವಿಲ್ಲಿದೆ. ರಾಷ್ಟ್ರಗಳ ತಾಯಿಯಾದ ಭಾರತವು ಸುಮೇರಿಯ, ಈಜಿಪ್ತ, ಗ್ರೀಸುಗಳಿಗಿಂತ ಪುರಾತನವಾದುದು. ಅವುಗಳಕಾಲ ಸಂದಿತು. ಭಾರತಮಾತೆಯಾದರೋ ಸರ್ವಥಾ ಜಯಶಾಲಿನಿಯೂ ಆಗಿ ಬಾಳುತ್ತಿದ್ದಾಳೆ; ಮತ್ತು ಧ್ವಜದಮೇಲಿನ ಚಕ್ರವು ಮಾನವ ಕುಲದ ಉದ್ಧಾರಕ್ಕಾಗಿ ನಿಧಾಯಕ ಪ್ರಯತ್ನಗಳನ್ನು ಮಾಡಬೇಕೆಂಬ ಅನಲ ಅನ್ವನಚ್ಛಿನ್ನವಾದ ಅಂತಃ ಪ್ರೇರಣೆಯ ಪ್ರತೀಕವಾಗಿದೆ.

ಶ್ರೀ ಸುಭಾಸ ಚಂದ್ರಬೋಸ
[ಕಾಂಗ್ರೆಸಿಗರ ಉಡುಪಿನಲ್ಲಿ]

ಮಹಾತ್ಮಾ ಗಾಂಧಿ-ಪೆಸ್ಟ್ರೀಬಾಯಿ [ದಕ್ಷಿಣ ಆಫ್ರಿಕಾದಲ್ಲಿ ೧೯೧೪]

B. V. BUDUR

PHOTOGRAPHERS, WATCH REPAIRERS & PHOTO GOODS DEALERS

Head Office : BELLARY. **Branch : HOSPET.**

ಬಿ. ವಿ. ಬೂದೂರ

ಫೊಟೋಗ್ರಾಫರ್ಸ್, ಫೊಟೋಕಾಮಗ್ರಿಗಳ ವ್ಯಾಪಾರಗಾರರು, ವಾಚ್ ರಿಪೇರರ್ಸ.

ಹೆಡ್ ಆಫೀಸ್ : ಬಳ್ಳಾರಿ ಬ್ರಾಂಚ್ : **ಹೊಸಪೇಟೆ.**

Electric Studio a Speciality
Excellent Workmanship
Executed Promptly
Expeditiously delivered
Enlargement of Photos Undertaken

Reasonable Charges

Hitherto Scarce

Roll Films are available now for sale.

ಇಲ್ಲಿಯವರೆಗೆ ಅಪರೂಪವಾಗಿದ್ದ ರೋಲ್ ಫಿಲಿಂಗಳು ಈಗ ನಮ್ಮಲ್ಲಿ ದೊರೆಯುತ್ತವೆ. ವಿದ್ಯುದ್ದೀಪಗಳ ಸಹಾಯದಿಂದ ಕರೆಂಟ್ ಇರುವ ಸಮಯದಲ್ಲೆಲ್ಲಾ ನಮ್ಮ ಸ್ಟುಡಿಯೋದಲ್ಲಿ ಫೋಟೋತೆಗೆಯಲಾಗುವುದು ಹೊರಗಿನ ಕಾರ್ಯವನ್ನೂ ನಾವು ತೆಗೆದುಕೊಳ್ಳುವೆವು ಫೋಟೋಗಳನ್ನು ದೊಡ್ಡ ಸೈಜಿಗೆ ಮಾರ್ಪಾಟು ಮಾಡಲಾಗುವುದು. ವಾಚ್‌ರಿಪೇರಿ ನಡೆಯುವುದು.

ಒಂದುಸಲ ಬಂದರೆ ಯಾವಾಗಲೂ ಬರುವಿರಿ.

THE CANARA INDUSTRIAL & BANKING SYNDICATE LTD.,

Established 1925

Bombay Office: HOMJI STREET, FORT, BOMBAY

Bellary Office: Bangalore Road.

EFFICIENT COLLECTION SERVICE

CAPITAL	
Authorised ...	Rs. 56,00,000
Subscribed	Rs 32,10,987
Paid-up	Rs. 21,68,103
Reserves	Rs. 9,00,000

Lakhs of cheques and bills are received by us for collection each year. While our service is geared to any volume it is also fitted to the handling of items that require special attention Your collection requirements in the Presidencies of Bombay and Madras and the States of Mysore, Hyderabad, Cochin and Travancore, can be fully met by our plann d net-work ef over sixty offices, (*Savings Bank a Speciality*)

Resources Exceed Rs. 4.25 Crores

T. A. Pai, B Com (Bom), A.I.I.B., F.R E S. (Lond) *General Manager.*

ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

[ಸ್ಥಾಪಿತ 1925]

ಬಳ್ಳಾರಿ ಶಾಖೆ: **ಬೆಂಗಳೂರು ರೋಡಿನ ಗುಡುದೂರು ಬ್ರದರ್ಸ ಮೇಲ್ಮಾಳಿಗೆ.**

ಬೊಂಬಾಯಿ: **ಹೋಂಜಿ ಸ್ಟ್ರೀಟ್, ಪೋರ್ಟ್, ಬೊಂಬಾಯಿ.**

ಸೇವಿಂಗ್ಸು ಬ್ಯಾಂಕು ಪದ್ಧತಿಯೆಂದರೆ ಪ್ರತ್ಯೇಕ ವೈಶಿಷ್ಟ್ಯ. **ಸಮರ್ಥ, ಶಕ್ತವಾದ ಸಂಗ್ರಹ ವಿಧಾನ.**

— ಮೂಲಧನ —	
ಅಧಿಕೃತ ಭಂಡವಲ	ರೂ. 56,00,000
ಚಂದಾ ಬಂದದ್ದು	ರೂ. 32,10,987
ಸಂದಾಯವಾದದ್ದು	ರೂ 21,68,103
ಕಾದಿಡಲಾದ ಹಣ	ರೂ. 9,00,000

ಬ್ಯಾಂಕಿನ ಆಸ್ತಿ 4¼ ಕೋಟಿಗೆ ಮಿಕ್ಕಿದೆ.

ಪ್ರತಿವರ್ಷವೂ ಲಕ್ಷಗಟ್ಟಿ ಚೆಕ್ಕುಗಳೂ, ಬಿಲ್‌ಗಳೂ, ನಮ್ಮಲ್ಲಿ ಹಣ ಸಂಗ್ರಹಕ್ಕಾಗಿ ಬರುತ್ತವೆ. ನಮ್ಮ ಕಾರ್ಯಕ್ಷೇತ್ರವು ಎಷ್ಟು ವಿಸ್ತೃತವಾಗಿದ್ದರೂ, ಗಮನಾರ್ಹವಾದ ಅಂಶಗಳ ಕಾರ್ಯವು ಶ್ರದ್ಧೆಯಿಂದ ನೋಡಲ್ಪಡುವುದು. ಮದ್ರಾಸ್, ಬೊಂಬಾಯಿ ಪ್ರಾಂತ, ಮೈಸೂರು, ಹೈದರಾಬಾದ್, ಕೊಚಿನ್ ಮತ್ತು ತಿರುವಾಂಕೂರು ಸಂಸ್ಥಾನಗಳಲ್ಲಿನ ನಮ್ಮ ಅರವತ್ತಕ್ಕಿಂತಲೂ ಹೆಚ್ಚಿನಶಾಖೆಗಳಿಂದ ಬ್ಯಾಂಕ್‌ಸಂಬಂಧದ ನಿಮ್ಮ ಕಾರ್ಯಗಳೆಲ್ಲಾ ಚೆನ್ನಾಗಿ ಸಾಗುತ್ತವೆ.

ಟಿ. ಎ. ಪೈ, ಬಿ. ಕಾಂ. (ಬೊಂಬಾಯಿ)

ಎ. ಐ. ಐ. ಬಿ., ಎಫ್. ಆರ್. ಇ. ಎಸ್. (ಲಂಡನ್)

ಜನರಲ್ ಮ್ಯಾನೇಜರ್.

ಕಾಂಗ್ರೆಸಿನ ಭವಿತವ್ಯ; ಸಂಸ್ಥಾನಗಳ ಪ್ರಶ್ನೆ

(ರಂಗನಾಥ ದಿವಾಕರ)

ಕಾಂಗ್ರೆಸ್ಸಿನ ಭವಿತವ್ಯ

ಪೂರ್ಣ ಸ್ವರಾಜ್ಯಕ್ಕಾಗಿ ಶಾಂತ ಹಾಗೂ ಉಚಿತ ಮಾರ್ಗಗಳಿಂದ ಹೋರಾಡುತ್ತ ಬಂದ ಕಾಂಗ್ರೆಸ್ಸು ಈಗ ತನ್ನ ಉದ್ದೇಶವನ್ನು ಸಾಧಿಸಿದೆ ಎಂದು ಹೇಳಲು ಅಡ್ಡಿ ಇಲ್ಲ. ಇನ್ನೂ ಸಾಮಂತ ಸ್ವರಾಜ್ಯ ಮಾತ್ರವೇ ಪ್ರಾಪ್ತವಾಗಿದೆ. ಪೂರ್ಣ ಸ್ವರಾಜ್ಯವೆಲ್ಲಿದೆ ಎಂದು ಹಲವರು ಕೇಳಬಹುದು. ಆದರೆ ಇಂಡಿಯಾ 'ಇಡಿ ಪೆಂಡೆನ್ಸ್ ಆಕ್ಟ್' ಎಂಬ ಮೊನ್ನೆ ಪಾರ್ಲಿಮೆಂಟಿನಲ್ಲಿ ಪಾಸಾದ ಕಾನೂನನ್ನು ಓದಿದರೆ ಅದರಲ್ಲಿ ಹಿಂದುಸ್ತಾನಕ್ಕೆ ನಿಜವಾದ ಸ್ವಾತಂತ್ರ್ಯವು ದೊರೆತಿದೆಯೊ ಇಲ್ಲವೊ ಎಂಬುದು ಗೊತ್ತಾಗುವದು. 'ಇನ್ನು ಮುಂದೆ ಪಾರ್ಲಿಮೆಂಟಿನಲ್ಲಿ ಪಾಸಾದ ಯಾವದೇ ಕಾನೂನು ಹಿಂದೂಸ್ತಾನಕ್ಕೆ ಅನ್ವಯಿಸುವದಿಲ್ಲ ಇಷ್ಟ ಪಟ್ಟರೆ ಹಿಂದುಸ್ತಾನದ ಶಾಸನ ಮಂಡಲದವರು ಆಯಾ ಕಾನೂನು ತಮಗೆ ಅನ್ವಯಿಸಬೇಕು, ಎಂದು ಕಟ್ಟಳೆ ಮಾಡಿಕೊಂಡರೆ ಮಾತ್ರ ಅದು ಹಿಂದುಸ್ತಾನಕ್ಕೆ ಅನ್ವಯಿಸುವದು' ಎಂಬ ಸ್ಪಷ್ಟವಾದ ಕಲಮು ಹೊಸ ಆಕ್ಟಿನಲ್ಲಿದೆ. ಸಾಮಂತ ಸ್ವರಾಜ್ಯದಲ್ಲಿರಬೇಕೊ ಇರಬಾರದೊ ಎಂಬುದು ಸಹ ಕೇವಲ ನಮ್ಮ ಇಚ್ಛೆಯನ್ನೇ ಅವಲಂಬಿಸಿದೆ. ಆದುದರಿಂದ ನಾವು ವಾಸ್ತವ ವಾದಿಗಳಾಗುವದು ಅವಶ್ಯ. ಆದುದರಿಂದ ಇನ್ನು ಕಾಂಗ್ರೆಸ್ಸಿನ ಭವಿತವ್ಯವೇನು ?

× × ×

ಇನ್ನೊಂದು ಮಹತ್ವದ ಮಾತಿನಲ್ಲಿ ಕಾಂಗ್ರೆಸ್ಸಿನ ಅಸಮಾಧಾನವಿದೆ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಪೂರ್ಣ ಸ್ವರಾಜ್ಯದ ಧ್ಯೇಯವನ್ನಿಟ್ಟುಕೊಂಡು ಹೋರಾಟಾಗ ಇಡೀ ಹಿಂದುಸ್ತಾನವು ಅಖಂಡವಾಗಿಯೆ ಉಳಿಯಬೇಕೆಂಬ ಭಾವನೆ ಹಾಗೂ ಉದ್ದೇಶವು ಇತ್ತು ಎಂಬುದು ಸ್ಪಷ್ಟವು.

ಸಂಪೂರ್ಣ ಅಖಂಡ ಹಿಂದುಸ್ತಾನಕ್ಕೆ ಪೂರ್ಣ ಸ್ವಾತಂತ್ರ್ಯವು ದೊರೆತಿದ್ದರೆ ಯಾವ ಆನಂದವು ನಮ್ಮಲ್ಲಿ ತುಂಬಿ ತುಳುಕುತ್ತಿತ್ತೊ ಅದು ಈಗ ಸಾಧ್ಯವಿಲ್ಲ ಎಂಬುದು ಸ್ಪಷ್ಟವು.

× × ×

ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಧ್ಯೇಯಾದಿಗಳಲ್ಲಿ ಬದಲಾವಣೆಯಂತೂ ಆಗಲಿಕ್ಕೇ ಬೇಕು.

G. N. SETTY & Son,
Fancy Jewellery Mart.
Bangalore Road BELLARY.

☞ For all happy and auspicious occasions consult us for your Silver-ware either for home use or presentation to the near & dear. We specialise in most modern and attractive things.

† *Reasonable Rates, Trial Solicited.*

ಜಿ. ಎನ್. ಶೆಟ್ಟಿ ಅಂಡ್ ಸನ್,
ಫ್ಯಾನ್ಸಿ ಜ್ಯೂಯಲರಿ ಮಾರ್ಟ್
ಬೆಂಗಳೂರು ರೋಡ್, **ಬಳ್ಳಾರಿ.**

ಎಲ್ಲಾ ಶುಭಸಮಯಗಳಲ್ಲಿ, ಉತ್ಸವಗಳಲ್ಲಿ, ಸಂತೋಷಕೂಟಗಳಲ್ಲಿ ನಿಮಗೆ ಬಳಕೆಗೆ ಬೇಕಾದ ನಿಮ್ಮ ಪ್ರಿಯರಿಗೆ, ಬಂಧುಗಳಿಗೆ ಬಹುಮಾನ ಕೊಡಬೇಕಾದ ಶುದ್ಧ ಬೆಳ್ಳಿಯ ಅದುನಿಕ ವಸ್ತುಗಳು ಸರಿಯಾದ ಬೆಲೆಗೆ ದೊರೆಯುತ್ತವೆ.

—: **ಬಂದು ಪರೀಕ್ಷಿಸಿರಿ.** :—

ಕಾಂಗ್ರೆಸ್ಸು ಇನ್ನು ಉಳಿಯಬಾರದೆಂದು ಹೇಳುವವರೂ ಇದ್ದಾರೆ! ಆ ಮಾತನ್ನು ವಿಚಾರಿಸುವದು ಆವಶ್ಯ. ಹೀಗೆ ಅವರು ಅನ್ನಲು ಕಾರಣವೇನು? ಬೇರೆ ಬೇರೆ ಜನರು ಬೇರೆ ಬೇರೆ ಕಾರಣಗಳಿಗಾಗಿ ಹೀಗೆ ಅನ್ನುತಿರುವರೆಂಬುದು ಸ್ಪಷ್ಟವು. ರಾಜಕೀಯ ಸ್ವರಾಜ್ಯವೆ ಕಾಂಗ್ರೆಸ್ಸಿನ ಇಷ್ಟಸಾಧ್ಯವಿತ್ತು, ಅದು ಪೂರೈಸಿತೆಂದ ಬಳಿಕ ಇನ್ನು ಅದರ ಅವತಾರ ಕಾರ್ಯ ಮುಗಿಯಿತು. ಇನ್ನು ಅದು ವಿಸರ್ಜನೆ ಹೊಂದುವದೆ ಯೋಗ್ಯ ಎಂದು ಹಲವರು ಹೇಳುವರು. ಆದರೆ ನಿಜವಾಗಿ ನೋಡಿದರೆ ಕೇವಲ ರಾಜಕೀಯ ಸ್ವರಾಜ್ಯ ವಷ್ಟೆ ಕಾಂಗ್ರೆಸ್ಸಿನ ಧ್ಯೇಯವಿರಲಿಲ್ಲ. ವಿಶೇಷತಃ ಕಾಂಗ್ರೆಸ್ಸಿನಲ್ಲಿ ಗಾಂಧೀಯುಗವು ಪ್ರಾರಂಭವಾದಂದಿನಿಂದ ಅಂದರೆ ೧೯೨೦ ರಿಂದ ಕಾಂಗ್ರೆಸ್ಸು ಒಂದು ವಿಶಿಷ್ಟವಾದ ಆರ್ಥಿಕ ಸಾಮಾಜಿಕ ಕ್ರಾಂತಿಯ ಸಲುವಾಗಿ ಪ್ರಯತ್ನಿಸುತಿದೆ. ಆ ಪ್ರಯತ್ನವನ್ನು ಇನ್ನು ಹೆಚ್ಚು ಆಸ್ಥೆಯಿಂದ ಕೈಕೊಳ್ಳುವದು ಕಾಂಗ್ರೆಸ್ಸಿನ ಕರ್ತವ್ಯವಾಗುವದು. ಕಾಂಗ್ರೆಸ್ಸು ಹಲವರ ಮನಸ್ಸಿಗೆ ಬರುವದಿಲ್ಲ, ಬಂದಿಲ್ಲ. ಆದುದರಿಂದ ಅವರು ಅದರ ಮುಕ್ತಾಯವಾಗಬೇಕೆಂದು ಪ್ರತಿಪಾದಿಸುವರು. ಯಾವದೇ ದೊಡ್ಡ ಸಂಸ್ಥೆಯ ಮುಕ್ತಾಯ ಮಾಡಲು ಇದು ಸಾಕಷ್ಟು ಕಾರಣ ವಾಗಲಾರದು ಕಾಂಗ್ರೆಸ್ಸಿನಲ್ಲಿ ಅನೇಕ ದೋಷಗಳು, ವಿಶೇಷತಃ ಅಧಿಕಾರದ ಬಗ್ಗೆ ಮೇಲಾಟ ಹೆಚ್ಚಾಗಿರುವದರಿಂದ ಅದನ್ನು ವಿಸರ್ಜಿಸಿ ಬಿಡಬೇಕೆಂದು ಹೇಳುವವರು ಹಲವರು. ಆದರೆ ಈ ವಾತಾದರೂ ಸಮಂಜಸವಾಗಲಾರದು. ಆಯಾ ದೋಷಗಳನ್ನು ಹೋಗಲಾಡಿಸಲು ಯತ್ನಿಸುವದು ನಮ್ಮ ಕರ್ತವ್ಯವೇ ವಿನಾ ಆಸಂಸ್ಥೆಯನ್ನೆ ನಿರ್ನಾಮಗೊಳಿಸುವದು ನಮ್ಮ ಕರ್ತವ್ಯವೆನಿಸಲಾಗದು. ಒಟ್ಟಿಗೆ ನೋಡಲಾಗಿ ಕಾಂಗ್ರೆಸ್ಸಿನ ಮುಕ್ತಾಯ ಮಾಡುವದು ಇಷ್ಟವಾಗಲಾರದು. ಈಗ ೬೨ ವರುಷ ಕೆಲಸ ಮಾಡುತ್ತ ಬಂದ ಸಂಸ್ಥೆಯನ್ನು ಮಾರ್ಪಡಿಸಿ ಮತ್ತೆ ಹೊಸ ಹೊಸ ಕೆಲಸಗಳಿಗಾಗಿ ಉಪಯೋಗಿಸುವದೇ ಜಾಣತನವು.

ಮುಖ್ಯ ಮಾರ್ಪಾಡು ಅದರ ಉದ್ದೇಶದಲ್ಲಿಯೇ ಆಗಬೇಕು. ನಿಜವಾದ ಜನತಾ ರಾಜ್ಯದಸ್ಥಾಪನೆ, ಕೂಲಿಕಾರರು, ಒಕ್ಕಲಿಗರು, ಬುದ್ಧಿಯಿಂದ ದುಡಿಯುವವರು ಒಟ್ಟಿಗೆ ದುಡಿಮೆಗಾರರು ಯಾವ ಸಮಾಜದಲ್ಲಿ ಪ್ರತ್ಯಕ್ಷ ಅಧಿಕಾರಾರೂಢರಿರುವರೊ ಅಂಥ ಸಮಾಜವನ್ನು ಸ್ಥಾಪಿಸುವದೆ ಕಾಂಗ್ರೆಸ್ಸಿನ ಧ್ಯೇಯವಾಗುವದು ಉಚಿತವು. ಈಗ ರಾಜಕೀಯ ಅಧಿಕಾರಗಳು ಜನರ ಕೈಯಲ್ಲಿ ಬಂದಿದ್ದರೂ ಅನೇಕ ಸಾಮಾಜಿಕ ಆರ್ಥಿಕ ಅಸಮಾನತೆ ಅಥವಾ ವಿಷಮತೆಗಳ ಮೂಲಕ ಇನ್ನು ಜನಸಾಮಾನ್ಯರ ಪೂರ್ಣ ಕಲ್ಯಾಣವಾಗುವಂತೆ ಸದ್ಯಕ್ಕೆ ವಿಶೇಷವೇನೂ ಮಾಡಲಿಕ್ಕೆ ಬರುವಂತಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸಿ ಒಂದು ಬಗೆಯ ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿಯನ್ನು ಜರುಗಿಸುವದೆ ಕಾಂಗ್ರೆಸ್ಸಿನ ಧ್ಯೇಯವಾಗಬೇಕು. ಅದರ ಹೊರ್ತು ಇನ್ನು ಕಾಂಗ್ರೆಸ್ಸಿಗೆ ಎರಡನೆ ಕೆಲಸವು ಉಳಿದಿಲ್ಲ.

ಕಾಂಗ್ರೆಸ್ಸಿನ ಧ್ಯೇಯವು ಬದಲಾದಂತೆ ಅದರ ಘಟನೆಯು ಬದಲಾಗುವದು ಅವಶ್ಯವಾದೀತು. ಯಾಕಂದರೆ ಇನ್ನು ಅದೊಂದೇ ಒಂದು ಪಕ್ಷದ ಸಂಘಟನವಾಗಬಲ್ಲದು. ಸದ್ಯಕ್ಕೆ ಬ್ರಿಟಿಶರ ವಿರುದ್ಧರಿರುವವರೆಲ್ಲರೂ ಅದರಲ್ಲಿ ಒಟ್ಟುಗೂಡಿದ್ದರು ಇನ್ನು ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಒಂದೇ ವಿಚಾರದವರಿದ್ದವರು ಮಾತ್ರ ಈ ಸಂಸ್ಥೆಯಲ್ಲಿ ಇರುವದು ಸಾಧ್ಯವಾಗಬಹುದು. ಉಳಿದವರು ತಮ್ಮ ತಮ್ಮ ಗುಂಪುಗಳನ್ನಾಗಲಿ ಪಕ್ಷಗಳನ್ನಾಗಲಿ ಪ್ರತ್ಯೇಕವಾಗಿ ಕಟ್ಟಿಕೊಳ್ಳಬೇಕಾದೀತು. ಇತರ ದೇಶದ ಪಾರ್ಲಿಮೆಂಟುಗಳಲ್ಲಿ ಯಾವ ರೀತಿ ಪಕ್ಷೋಪಪಕ್ಷಗಳಿರುವವೊ ಅದೇ ರೀತಿ ಇಲ್ಲಿಯೂ ಪಕ್ಷೋಪಪಕ್ಷಗಳುಂಟಾಗುವದು ಅನಿವಾರ್ಯವೆ ಇರುವದು ಆ ಬಗೆಯ ಪಕ್ಷವೊಂದನ್ನು ನಿರ್ಮಾಣ ಮಾಡಬೇಕಾಗಿದ್ದರೆ ಕಾಂಗ್ರೆಸ್ಸಿನಘಟನೆ ಏನಿರಬೇಕು ಎಂಬ ವಿಚಾರದಿಂದ ನಾವು ಮುಂದೆ ಹೆಜ್ಜೆ ಇಡಬೇಕಾಗುವದು. ಇಂಗ್ಲಂಡದಲ್ಲಿ ಕಾನ್ಸರ್ವೇಟಿವ್ ಪಾರ್ಟಿ, ಲೇಬರಪಾರ್ಟಿ, ಮುಂತಾದವು

ಗಳಿವೆ. ಅಮೇರಿಕೆಯಲ್ಲಿ ರಿಪಬ್ಲಿಕನ್ ಪಾರ್ಟಿ, ಡೆಮಾಕ್ರೆಟಿಕ್ ಪಾರ್ಟಿ ಎಂಬವು ಇವೆ ಅಮೇರೀಕ ಹಿಂದುಸ್ತಾನದ ಪಾರ್ಲಿಮೆಂಟಿನಲ್ಲಿ ಬೇರೆ ಪಕ್ಷಗಳಾಗುವವು ಕಾಂಗ್ರೆಸ್ಸು ಒಂದು ಪಕ್ಷಗಳಲ್ಲಿ ಒಂದು ಆಗಿ ಕೀರ್ತಿಯೇ ಕಾಗುವದು ಅದೇ ಎಲ್ಲಕ್ಕೂ ಮೊತ್ತ ಪಕ್ಷವಾಗಬಾರದು ಇದೇ ಲೋಕಪ್ರಿಯತೆಯು ಕೊನೆಯವರೆಗೆ ಉಳಿಯುವದೇ ಬೇಕಾದರೆ ಕಾಂಗ್ರೆಸ್ಸು ಸತತವಾಗಿ ಜನತೆಯ ಉತ್ತಮೋತ್ತಮ ಸೇವೆಯನ್ನು ಮಾಡಬೇಕಾದೀತು ಹಾಗೂ ಎಲ್ಲರಿಗೂ ಸಮಾಧಾನವಾಗುವಂತೆ ಕಾರ್ಯಕ್ರಮವನ್ನಿಟ್ಟುಕೊಂಡು ದುಡಿಯಬೇಕಾದೀತು ಕಾಂಗ್ರೆಸ್ಸಿನ ಈ ಸಮಸ್ಯೆ ಈಗ ಬಂದು ನಿಂತಿದೆ ಎದುರು.

ಜೊಸಪೇಟೆ :— ಶ್ರೀ ವಾಲ್ಮೀಕಿ ಆಶ್ರಮದಲ್ಲಿ 18—8—47 ರ ದಿನ ಜಿಲ್ಲಾ ವಾಲ್ಮೀಕಿ ನಾಯಕರ ಮಹಾಸಭೆಯ ನೇಮಿ ಮದ್ರಾಸ್ ಸರ್ಕಾರವು ಶಾಸನ ಸಭೆಯಲ್ಲಿ ತರಲಿರುವ ದೇವದಾಸಿ ನಿರ್ಮೂಲನ ಬಿಲ್ಲಿಗೆ ಇನ್ನೂ ಕೆಲ ಅಂಶಗಳನ್ನು ನೇರಿಸಿ ಬಲವಡಿಸಲು ಶಿಷ್ಟಮಂಡಲವನ್ನು ಕಳುಹಿಸುವದನ್ನು ಸಮಾಲೋಚಿಸಲಾಗುವುದು.

The Medical Emporium

CHEMISTS & DRUGGISTS

Bangalore Road, BELLARY.

Stockists of all Medicines Allopathic & Ayurvedic Surgical instruments etc.

Reasonable Rates — **Trial Solicited.**

ದಿ ಮೆಡಿಕಲ್ ಎಂಪೋರಿಯಂ.

ಔಷಧ ವ್ಯಾಪಾರಿಗಳು,

ಬೆಂಗಳೂರು ರಸ್ತೆ, ಬಳ್ಳಾರಿ.

ನಮ್ಮಲ್ಲಿ ಆಯುರ್ವೇದ ಮತ್ತು ಇಂಗ್ಲೀಷ್ ವೈದ್ಯದ ಎಲ್ಲಾ ಔಷಧಗಳು ಸರಿಯಾದ ಮತ್ತು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಹೆಸರುವಾಸಿಯಾದ ಮತ್ತು ಪ್ರಾಮಾಣಿಕವಾದ (Standard) ಔಷಧಗಳು ಶಸ್ತ್ರಚಿಕಿತ್ಸೆಗೆ ಬೇಕಾದ ಶಸ್ತ್ರಗಳೇರಿಕೊಂಡ ದೊರೆಯುತ್ತವೆ ಅಡ್ವಾನ್ಸು ಕೊಟ್ಟಲ್ಲಿ ವಿ. ಪಿ. ಮೇಲೆ ಕಳುಹಿಸಲಾಗುತ್ತೆ.

ಭಾರತದ ರಾಷ್ಟ್ರಧ್ವಜದಲ್ಲಿ ಪ್ರಾಚೀನ ಅರ್ವಾಚೀನ ಪರಂಪರೆಗಳ ಸಾಮರಸ್ಯ

ಅಶೋಕ ಚಕ್ರದ ಅರ್ಥಗರ್ಭಿತ ಸಂದೇಶ

ಸಿಂಹ ಹೃದಯಿಗಳಿಗೆ ಸಿಂಹದ ರಾಷ್ಟ್ರಮುದ್ರೆ

ಭಾರತದ ರಾಷ್ಟ್ರಧ್ವಜ ಮತ್ತು ರಾಷ್ಟ್ರಮುದ್ರೆಯ ಸ್ವರೂಪವನ್ನು ನಿರ್ಧರಿಸುವಾಗ ಘಟನಾ ಸಮಿತಿಯು ಸಾವಮ್ರಾಟ ಅಶೋಕನ ಕಾಲದ ಸಾಂಚಿಸ್ತೂಪದಿಂದ ಸ್ಫೂರ್ತಿಯನ್ನು ಪಡೆದಿದೆ. ರಾಷ್ಟ್ರಧ್ವಜದ ಕೇಸರಿ ಬಿಳಿ ಮತ್ತು ಹಸರು ಬಣ್ಣದ ಪಟ್ಟಿಗಳು ಈಗಿನ ತ್ರಿವರ್ಣ ಧ್ವಜದಲ್ಲಿ ಇದ್ದಂತೆಯೆ ಉಳಿದು ಅದರ ಮೇಲೆ ರಾಟಿಯ ಬದಲು ಸಾಂಚಿಸ್ತೂಪದ ಮೇಲೆ ಅಂದವಾಗಿ ಕೆತ್ತಲ್ಪಟ್ಟ ಚಕ್ರವು ದಟ್ಟ ನೀಲೀ ಬಣ್ಣದಲ್ಲಿ ಕಂಗೊಳಿಸುವದು. ರಾಟಿಯ ಧ್ವಜದ ಎರಡೂ ಬದಿಗೆ ಒಂದೇ ಸ್ವರೂಪದಲ್ಲಿ ಕಾಣುವದಿಲ್ಲೆಂದು ಈ ಬದಲಾವಣೆಯನ್ನು ಮಾಡಲಾಗಿದೆ.

ರಾಷ್ಟ್ರಧ್ವಜದಲ್ಲಿ ಚಕ್ರವಿರುವದರಿಂದ ಸಮಾಧಾನ ಹೊಂದಿದ ಮಹಾತ್ಮಾ ಗಾಂಧಿಯವರು ಇದಕ್ಕೆ ಮಾನ್ಯತೆಯನ್ನಿತ್ತಿದ್ದಾರೆ. ಈ ಚಕ್ರವೆಂದರೆ ರಾಟಿಯು ಚಕ್ರವಾಗಬಹುದು, ಕುಂಬಾರನ ಚಕ್ರವಾಗಬಹುದು, ಜೀವನ— ಭವಿತವ್ಯಗಳ, ಗತಿ— ಪ್ರಗತಿಗಳ ಚಕ್ರವೂ ಆಗಬಲ್ಲದು. ಕ್ರಿಸ್ತ ಪೂರ್ವ ಮೂರನೆಯ ಶತಮಾನದಲ್ಲಿದ್ದ ಅಶೋಕನು ಕಲಿಂಗದ ಘನಘೋರ ಸಂಗ್ರಾಮದ ನಂತರ ಅಹಿಂಸಾವಾದಿಯಾಗಿ ದೇವಾನಾಂಪ್ರಿಯನೆಂಬ ಹೆಸರಿನಲ್ಲಿ ಇಡೀ ಭಾರತದಲ್ಲಿ ಶಾಂತಿಸ್ಥಾಪನಾರ್ಥ ಕಟ್ಟಿಸಿದ ಸ್ತಂಭಗಳ ಮೇಲೆ ಕೆತ್ತಿಸಲು ಸ್ವಯಂ ಸ್ಫೂರ್ತಿಯಿಂದ ಈ ಚಕ್ರವನ್ನು ಕಂಡು ಹಿಡಿದನೆಂಬಲ್ಲಿ ಸಂದೇಹವಿಲ್ಲ. ಚಕ್ರವೆಂದರೆ ಧರ್ಮವೆಂದು ಬುದ್ಧಧರ್ಮದ ಸಂಕೇತ. ರಾಷ್ಟ್ರಧ್ವಜದ ಮೇಲೆ ಈ ಧರ್ಮದ ಸಂಕೇತವಿರುವದು ಭಾರತೀಯರ ಪ್ರಾಮಾಣಿಕತೆ, ಕರ್ತವ್ಯ, ಸಂಸ್ಕೃತಿಯ ಅಖಂಡ ಪ್ರವಾಹದ ದ್ಯೋತಕವಾಗಿದೆ.

GUDUTHUR BROTHERS (Regd.,)

COTTON EXPORTERS, GIN AND PRESS OWNERS, BELLARY.

Proprietors:- **G. Ekambrappa, G. Padmanabhan.**

Sole Propritors:- **THE CITY PRESS, Bellary.**

Tel:- (Bellary, Nanded, Raichur 'Cotexport') (Hubli 'Bros') (Adoni 'Guduthur Bros')

ಗುಡುದೂರು ಬ್ರದರ್ಸ್ (ರಿಜಿಸ್ಟರ್ಡ್)

ಹತ್ತಿ ಅರಳೆ ವ್ಯಾಪಾರಿಗಳು, ಜಿನ್ ಪ್ರೆಸ್ ಮಾಲೀಕರು, **ಬಳ್ಳಾರಿ.**

ಪ್ರೊಪ್ರೈಟರ್ಸ್:- **ಜಿ. ಏಕಾಂಬ್ರಪ್ಪ, ಜಿ ಪದ್ಮನಾಭನ್.**

ಸೋಲ್ ಪ್ರೊಪ್ರೈಟರ್ಸ್:- **ದಿ ಸಿಟಿಪ್ರೆಸ್, ಬಳ್ಳಾರಿ.**

ಚಕ್ರವೆಂದರೆ ಯಾಂತ್ರಿಕ ಮತ್ತೂ ಔದ್ಯೋಗಿಕ ಅಭಿವೃದ್ಧಿ ಎಂದು ಆಧುನಿಕ ಸಂಕೇತ. ಮನುಷ್ಯನು ಕಾಲ ಮತ್ತು ಅಂತರಗಳನ್ನು ಜಯಿಸಲು ಎಂಜಿನ ಮೋಟರ, ವಿಮಾನಗಳನ್ನು ಕಂಡು ಹಿಡಿದ ಸಾಹಸದ ದ್ಯೋತಕವಿದಾಗಿದೆ. ಚಕ್ರದ ಈ ಸರ್ವಸಂಕೇತಗಳನ್ನು ಗಮನಿಸಿದರೆ ರಾಷ್ಟ್ರಧ್ವಜದಲ್ಲಿ ಚಕ್ರವಿರಬೇಕು ಎಂದು ಸೂಚಿಸಿದವರ ಬುದ್ಧಿಮತ್ತೆಯನ್ನು ಕೊಂಡಾಡದಿರಲಾಗದು.

ಈ ಚಕ್ರದ ಹಲ್ಲುಗಳು ಆಕಾರದಲ್ಲಿ ಸೂರ್ಯನನ್ನು ಹೋಲುತ್ತವೆ. ಈ ಸೂರ್ಯನನ್ನು ಆಯುರಾರೋಗ್ಯ, ಬೆಳೆ ಬೆಳಕು ಮತ್ತು ಸರ್ವಸದ್ವಸ್ತುಗಳ ಪ್ರದಾತನೆಂದು ಶತಮಾನಗಳಿಂದಲೂ ಆರಾಧಿಸಲಾಗುತ್ತಿದೆ. ಪ್ರಾಣಿ ಜೀವನ ಹಾಗೆಯೇ ಸಸ್ಯ ಜೀವನಗಳಿಗೆ ಸೂರ್ಯ ಕಿರಣಗಳ ಅನಿವಾರ್ಯತೆಯೆಷ್ಟಿದೆಂಬುದನ್ನು ಆಧುನಿಕ ವಿಜ್ಞಾನವೂ ಜಗತ್ತಿಗೆ ಸಾರಿಹೇಳಿದೆ.

ಚಕ್ರ ಪರಿವೇಷ್ಟಿತ ಸೂರ್ಯನೆಂದರೆ ಅಜೇಯನೆಂದೇ ಹೇಳಬೇಕು

ಇದಕ್ಕಿಂತ ಸ್ಫೂರ್ತಿದಾಯಕವಾದ ಚಿಹ್ನವು ಯಾವ ರಾಷ್ಟ್ರದ ಧ್ವಜದಲ್ಲಿಯೂ ಇಲ್ಲೆಂದು ಹೇಳಬಹುದು. ಭಾರತೀಯರು ಈ ಧ್ವಜದ ಮಹತ್ವವನ್ನರಿತು ಅದರ ಗೌರವಕ್ಕೆ ತಕ್ಕಂತೆ ಬಾಳಬೇಕು. ಈ ರಾಷ್ಟ್ರಧ್ವಜದಲ್ಲಿಯ ಮೂರು ಬಣ್ಣಗಳ ಚಕ್ರದ' ಸೂರ್ಯನ ಸಂಕೇತಗಳನ್ನು ಮನಗಂಡು ಭಾರತೀಯರು ತಮ್ಮ ರಾಷ್ಟ್ರವು ಈ ಎಲ್ಲ ಸಂಕೇತಗಳಿಗೆ ಅನ್ವರ್ಥಕವಾಗಿ ಮೆರೆಯುವಂತೆ ಪ್ರಯತ್ನಿಸಬೇಕು. ನಮ್ಮ ಕೃತಿಗಳಿಂದಲೆ ನಾವು ನಮ್ಮ ರಾಷ್ಟ್ರಧ್ವಜವನ್ನು ಇಡೀ ಜಗತ್ತು ಗೌರವಿಸುವಂತೆ ಮಾಡಬೇಕು.

ರಾಷ್ಟ್ರ ಮುದ್ರೆ

ನಮ್ಮ ರಾಷ್ಟ್ರಧ್ವಜದಂತೆಯೇ ರಾಷ್ಟ್ರಮುದ್ರೆಯೂ ತುಂಬಾ ಸುಂದರವಾಗಿದೆ ಸಾಮ್ರಾಟ ಅಶೋಕನ ಅದೇ ಸಾಂಚಿಸ್ತೂಪದಿಂದಲೇ ಸ್ಫೂರ್ತಿ ಪಡೆದು ಮೈತಾಳಿದೆ. ಉಳಿ ಅಡಿ ಎತ್ತರವಾಗಿದ್ದ ಈ ಸಾಂಚಿಸ್ತೂಪದ ತುದಿಯಲ್ಲಿ ಘಂಟಾಕಾರವಾದ ಕಮಲದ ಮೇಲಿನ ಪೀಠದ ಮೇಲೆ ನಾಲ್ಕು ಸಿಂಹಗಳು ಭುಜಕ್ಕೆ ಭುಜ ಆನಿಸಿ ನಿಂತಿವೆ. ಶಾಕ್ಯಕುಲದ ಶಾಕ್ಯ ಸಿಂಹವನ್ನೇ ಇವು ಸೂಚಿಸುತ್ತವೆಂದು ಆಂಗ್ಲನೊಬ್ಬನು ಅದರಿಂದ ಆಡಿದ್ದಾನೆ. ಈ ನಾಲ್ಕು ಸಿಂಹಗಳನ್ನು ಕೆತ್ತಿದ ಶಿಲ್ಪಿಯು ಅವುಗಳ ಸೌಂದರ್ಯವನ್ನೂ ಸಾಮರ್ಥ್ಯವನ್ನೂ ಸಮನಾಗಿಯೆ ಗಮನಿಸಿದ್ದಾನೆ

ಈ ಸಾಂಚಿಸ್ತೂಪದ ಘಂಟಾಕಾರವಾದ ಕಮಲ ಸ್ತೂಪ ಮತ್ತು ಮೂರು ಸಿಂಹಗಳು ಮಾತ್ರ ಸೇರಿ ಭಾರತದ ರಾಷ್ಟ್ರಮುದ್ರೆಯಾಗಬೇಕು ಎಂದು ಅಡ್ವಾಕ ಸಮಿತಿಯು ಸೂಚಿಸಿದೆ.

ಅಶೋಕನು ತನ್ನ ವಿಜಯ ಸೂಚಕವಾಗಿ ಈ ಸ್ತಂಭಗಳನ್ನು ಕಟ್ಟಿಸಿದನು ಅಹಿಂಸಾವಾದಿಯಾದ

VATTAM CHENNAKESAVA CHETTY & Sons.,
Iron & Hard ware Merchants, Bangalore Road, BELLARY.
ವಟ್ಟಂ ಚೆನ್ನಕೇಶವ ಶೆಟ್ಟಿ ಅಂಡ್ ಸನ್ಸ್,
ಐರನ್ ಅಂಡ್ ಹಾರ್ಡ್‌ವೇರ ಮರ್ಚೆಂಟ್ಸ್, ಬೆಂಗಳೂರು ರೋಡು, ಬಳ್ಳಾರಿ
ನಮ್ಮಲ್ಲಿ ಕಬ್ಬಿಣ ಮತ್ತು ಉಕ್ಕಿನ ಸಾಮಾನು, ಮನೆಕಟ್ಟಲು ಬೇಕಾಗುವ ಉಪಕರಣಗಳು,
ಮೊಳೆ, ಬೋಲ್ಟ ನಟ್ಸ ಮತ್ತು ತಂತಿ ವಗೈರೆ ಸರಿಯಾದ ಬೆಲೆಗೆ ದೊರೆಯುತ್ತವೆ.

ಅವನಿಗೆ ಪಾಶವೀಬಲದ ದಿಗ್ವಿಜಯದ ಹಂಬಲವಿರಲಿಲ್ಲ, ಆದರೆ ಧರ್ಮದ ವಿಜಯದ ಮಹಾಕಾಂಕ್ಷೆಯಿತ್ತು. 'ಸಂಘವು ಒಕ್ಕಟ್ಟಿನಿಂದ ಚಿರಕಾಲ ಬಾಳಲಿ' ಎಂದು ಅವನು ಈ ಸ್ತಂಭಗಳ ಮೇಲೆ ಕೊರೆಯಿಸಿದ್ದಾನೆ ಮದ್ರಾಸ ಪ್ರಾಂತವನ್ನು ಬಿಟ್ಟು ಇಡೀ ಭಾರತವನ್ನು ಅವನು ಏಕಚಕ್ರಾಧಿಪತ್ಯದಲ್ಲಿ ಸೇರಿಸಿದನು. ಅವನ ಸಾಮ್ರಾಜ್ಯವು ಪಶ್ಚಿಮಕ್ಕೆ ಇರಾಣದ ಗಡಿಯವರೆಗೆ ಹಬ್ಬಿತ್ತು. ಇಂಥ ಪ್ರಭಾವಿ ಸಾಮ್ರಾಟನು ತನ್ನ ಭಾರತವು ಈಗ ಸ್ವತಂತ್ರವಾದುದನ್ನು ಕಂಡು 'ಈ ರಾಷ್ಟ್ರವು ಒಕ್ಕಟ್ಟಿನಿಂದ ಚಿರಕಾಲಬಾಳಲಿ. ಎಂಬುದೆ ನನ್ನ ಇಚ್ಛೆಯಾಗಿದೆ'ಂದು ನಮಗೆ ಹೇಳುತ್ತಿರಬಹುದಲ್ಲವೆ?

ಕಮಲವೆಂದರೆ ಸೌಂದರ್ಯ ಅಭಿವೃದ್ಧಿಗಳ ದ್ಯೋತಕವೆಂದು ಹಿಂದೀಯರ ಭಾವನೆಯಾಗಿರುವದರಿಂದ ರಾಷ್ಟ್ರಮುದ್ರೆಯಲ್ಲಿ ಅವಕ್ಕೆ ಸ್ಥಾನ ದೊರೆತಿರುವದೇನೂ ವಿಚಿತ್ರವಲ್ಲ. ರಾಷ್ಟ್ರದ ಪುನರುಜ್ಜೀವನಕ್ಕೆ ಸರ್ವ ಸಂಪತ್ತಿಯನ್ನು ವಿನಿಯೋಗಿಸಬಾರದೆಂದು ಹೇಳುವರಾರು? ಭಾರತವು ದಾರಿದ್ರ್ಯವಂಕದಿಂದ ಸಮೃದ್ಧ ಸುಂದರ ರಾಷ್ಟ್ರವಾಗಬಾರದೆಂದು ಯಾರಾದರೂ ಹೇಳಬಲ್ಲರೇ? ಹಾಲು ಹರಿವ ಜೇನು ಸುರಿವ ದಿವ್ಯ ಭೂಮಿಗಳಿದುದೆ ಎಂದು ಪರಕೀಯರು ಭಾರತವನ್ನು ಬೆರಗುಗಣ್ಣಿನಿಂದ ಕಂಡ ದಿನಗಳು ಇಪ್ಪತ್ತನೆ ಶತಮಾನಗಳು ಪುನಃ ಬರಬೇಕು ಎಂದು ಬಯಸದವರಾರು? ಭಾರತೀಯರೀಗ ತಮ್ಮ ದೀರ್ಘ ನಿದ್ರೆಯನ್ನು ತೊರೆದು ದಾರಿದ್ರ್ಯನಿವಾರಣೆಗೆ, ಪ್ರಗತಿ ಅಭ್ಯುದಯಗಳಿಗಾಗಿ ಹೋರಾಡಲು ಈ ಕಮಲವು ಸ್ಫೂರ್ತಿಯನ್ನು ಕೊಡುತ್ತದೆ. ನಮ್ಮ ಜೀವನದ ಮುಖ್ಯ ಎತ್ತರವಾಗಬೇಕು ನಮಗೆ ಅತ್ಯುತ್ತಮ ಸಾಮರ್ಥ್ಯ ಬೇಕು. ಸರ್ವರಿಗೂ ಅತ್ಯುತ್ತಮವಾದುದು ದೊರೆಯಲಿ. ಕಮಲದ ಸಂದೇಶವಿದಲ್ಲದೆ ಇನ್ನೇನು?

ಧೈರ್ಯ ಶೌರ್ಯ ಗಾಂಭೀರ್ಯಗಳ ಮೂರ್ತಿಯೆಂದರೆ ಸಿಂಹ. ಭುಜಕ್ಕೆ ಭುಜ ಆನಿಸಿ ನಿಂತ ಈ ಮೂರು ಸಿಂಹಗಳು ಭಾರತದ ನಾಗರಿಕರಿಲ್ಲ ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯದ ಸಿಂಹ ಹೃದಯಿಗಳಾಗಲಿ ಎಂದು ಹೇಳುತ್ತವೆ. ಹೀನದುರ್ಬಲ ನಾಗರಿಕರು ಸ್ವತಂತ್ರವಾಗಿ ಬಾಳಲಾರರು. ವರಕೀಯರ ಸುದೀರ್ಘ ಪ್ರಭುತ್ವದಿಂದ ನಾವು ಹತವೀರ್ಯರಾಗಿರಬಹುದು. ಅದನ್ನೆ ಸ್ವಾತಂತ್ರ್ಯದಿನದ ಉದಯದೊಂದಿಗೆ ನಮ್ಮೆಲ್ಲರ ಹೃದಯದಲ್ಲಿ ಸ್ವತಂತ್ರ ಭಾರತದ ಸಂದೇಶ ಪ್ರತಿನಿಲಿ ಸ್ವತಂತ್ರ ಭಾರತಕ್ಕೆ ಸಿಂಹಹೃದಯಿಗಳ ಅಗತ್ಯವಿದೆಯೆಂಬುದನ್ನು ಮರೆಯದಿರೋಣ. ಅಶೋಕನ ಮತ್ತು ಕದನಂತರ ಗುಪ್ತರ ಸ್ವರ್ಣಯುಗವನ್ನು ಪುನಃ ಸ್ಥಾಪಿಸಲು ಹೆಣಗೋಣ.

ಇಂಥ ಅರ್ಥಗರ್ಭಿತ ರಾಷ್ಟ್ರಮುದ್ರೆಯು ಸದಾ ನಮಗೆ ವಿಜಯಕಾರಿಯಾಗಲಿ

S. V. SETTY & Bros. BELLARY.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್,

ಬೆಂಗಳೂರು ರೋಡ್, ಬಳ್ಳಾರಿ

ಬೆಳ್ಳಿ ಭಂಗಾರದ ಅತ್ಯಂತಾಧುನಿಕ ವಸ್ತುಗಳು ನಮ್ಮಲ್ಲಿ ಸರಿಯಾದ ಬೆಲೆಗೆ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲಿದ್ದು ಮಾಡಿದ ಕೂಲಿ ನೇಸ್ಟೇಜ್ ಕೊಟ್ಟರೆ ಹಳೆಯ ವಸ್ತುಗಳನ್ನು ಹೊಸವಕ್ಕೆ ಬದಲಿ ಮಾಡುತ್ತೇವೆ. ವಾಚುಗಳು, ಟೈಂಪೀಸ್, ಮತ್ತು ದೊಡ್ಡ ಗಡಿಯಾರಗಳು ದೊರೆಯುತ್ತವೆ. ಒಂದುಸಲ ಬಂದರೆ ನೀವು ಯಾವಾಗಲೂ ಬರುವಿರಿ

ಬಾರೊ ದೇವನೆ

ಭೂಮಿಂದ ಆಳಿಯಾಗಿ
ಆಳಿಯಿಂದ ಮೊಮ್ಮಗನಾಗಿ
ನೋಡಿನಿಂದ ಕಾಯಿ ಆಗಿ
ಬಾರೊ ದೇವನೆ!

ಕುಳಿತಲೆಲರ ಕೊಗು ಕೇಳಿ
ಸಜಗರದಿ ಜಿರುಗು ತಾಳಿ
ಘೋರಸಿಡಿದು ಸಭವನಾಳಿ
ಬಾರೊ ದೇವನೆ

ತರುಗಳೆಲ್ಲ ತಲೆಯ ತೂಗಿ
ತರಗೆಲೆಲ್ಲ ತಾಳವಿಕಗಿ
ಬಾನಿನಲ್ಲಿ ಹಾರಲಾಗ
ಬಾರೊ ದೇವನೆ!

ಬಾಂದಳದಿ ರಾಗವೆರಚಿ
ಕೆರೆಯ ಬರಲು ಮಣ್ಣು ಹಾಚಿ
ಘೋರನೆಂದು ಕತ್ತಲೆರಚಿ
ಬಾರೊ ದೇವನೆ!

ಸಿನ್ನಬರುವ ನವಿಲು ನೋಡಿ
ರಾಗದಿಂದ ಕೇಕು ಮಾಡಿ
ಕೇಕೆ ಹಾಕಿ ನಲಿಯಲೋಡಿ
ಬಾರೊ ದೇವನೆ!

ಮುತ್ತು ಹನಿಯ ಜಗಕೆ ಸುರಿಸಿ
ಇಳೆಯ ಮುಗಿಲ ಮುತ್ತನಿಡಿಸಿ
ನಭದಿ ಕೈಯ್ಯ ತಾಳಮಾಡಿ
ಬಾರೊ ದೇವನೆ!

[illegible]

ನೀನು ಬರಲು ರೈತನಲಿದು
ಹುತ್ತು ಬಿತ್ತಿ ಪೈರು ನೆಲೆದು
ಸುಗ್ಗಿ ಹಾಡ ಹಾಡಿ ಬರಲಿ
ಬಾರೊ ದೇವನೆ!

ತರುಗಳೆಲ್ಲ ಹೂತು ಕಾತು
ಕಾಯಿ ಹಣ್ಣುಗಳನು ಜೊತ್ತು
ಇಳೆಯನೇಲೆ ತೂಗಿ ಬಾಗಿ
ಹಣ್ಣ ನೀಯಲಿ!

ರವಿಯು ಬರಲು ಸುಮಗಳೆಲ್ಲ
ಮಧುವ ಸೋಸ ಕಂಪಜೆಲ್ಲಿ
ತುಂಬಿ ಬಳಗವನ್ನು ಕರೆದು
ಬಾಳ ನವಿಯಲಿ!

ಕೊಂಬಲಾಕಿ ಬಿಂಗ ಬಳಗ
ಹಾಡಿ ಹಾರಿ ನಲಿಯಲಾಗ
ತೆರೆಯು ನಲಿದು ಮಂಗಳಾಂಗಿ
ಯಾಗಿ ಬೆಳೆಯಲಿ!

ಒಡವ, ಧನಿಕನಾಗಿ ನಲಿದು
ಒಡವ ಧನಿಕ ಭೇದವಳಿದು
ಎಲ್ಲರೊಂದೆ ಭಾವ ತಳೆದು
ಜನವ ಮೆರೆಯಲಿ!

ನೀನೆ ಜಗಕೆ ಜೀವರಕ್ತಿ
ನೀನೆ ಜಗಕೆ ಬಾಳಶಕ್ತಿ
ನೀನು ನವಿಯೆ ಜಗವು ಉಕ್ಕಿ-
ತುಂಬಿ ಹರಿವಯ್ಯ
ಸಗ್ಗ ಭಾಗ್ಯದು—

[ಮು—. ಹಿ. ಮ.]

Woolen Coatings, Silk Sarees, Benares and other latest designs Handloom and Mill made Clothes Et , Colours Guaranteed, Prices very reasonable Trial Solicited.

G. GOPAL SING & SON.,
CLOTH MERCHANT
No. 15 Old Market BELLARY.
ಜಿ. ಗೋಪಾಲ ಸಿಂಗ್ ಅಂಡ್ ಸನ್,
ಜವಳಿ ವ್ಯಾಪಾರಿ, ನಂ. 15
ಹಳೇ ಮಾರ್ಕೆಟ್, ಬಳ್ಳಾರಿ.

ಉಲನ್ ಕೋಟಿಂಗ್ ಬಟ್ಟೆ, ಒನಾರಸ್ ಜರಿ, ಶಿಲ್ಕು-ಟೆಸ್ಸ್ ಸೀರೆ ಜಾಕೆಟ್ ಲೇಸ್ ಬಾರ್ಡರ್ ಮತ್ತು ಇತರ ಅನೇಕ ವಿವಿಧ ಅತ್ಯಂತ ಆಧುನಿಕ ಉಡುಪಿನ ಬೇಡಿಕೆಯನ್ನು ನಾವು ಪೂರೈಸಲಿದ್ದೇವೆ. ಕೈ ಮಗ್ಗದ ಮಿಲ್ ಬಟ್ಟೆಗಳು ವಿಧಾಯಕ ಬೆಲೆಗೆ ದೊರೆಯುತ್ತವೆ. ಬಣ್ಣ ಗ್ಯಾರಂಟಿ, ಬೆಲೆ ಸರಿಯಾದುದು. ಪರೀಕ್ಷಿಸಿ ಮನಗಾಣಿರಿ.

ಭಾ ರ ತ ದ ರಾ ಜ್ಯ ಘ ಟ ನೆ

ಅದರಲ್ಲಿಯ ಮುಖ್ಯಾಂಶಗಳು

ಘಟನಾಸಮಿತಿಯು ನೇಮಿಸಿದ ಒಕ್ಕೂಟ ರಾಜ್ಯ ಘಟನಾ ಉಪ ಸಮಿತಿಯ ವರದಿಯನ್ನು ಪಂ. ಜವಾಹರಲಾಲರು ಘಟನಾಸಮಿತಿಯ ಅಧಿವೇಶನದಲ್ಲಿ ಮಂಡಿಸಿದರು. ಭಾರತದ ಒಕ್ಕೂಟದ ರಾಜ್ಯಘಟನೆಯ ವಿಚಾರವನ್ನು ಕುರಿತು ವರದಿಯಲ್ಲಿ ಹೇಳಲಾದ ಅಂಶಗಳನ್ನು ಈ ಕೆಳಗೆ ಕೊಡಲಾಗಿದೆ:—

ಭಾಗ ೧

ರಾಜ್ಯಘಟನೆಯ ಕ್ಷೇತ್ರ ಮತ್ತು ನ್ಯಾಯಾಧಿಕಾರ

ರಚಿತವಾಗುವ ಒಕ್ಕೂಟವು ಭಾರತದ ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವೆಂದು ಕರೆಯಲ್ಪಡುವದು. ಈ ಘಟನೆಯಂತೆ ಭಾರತದ ಒಕ್ಕೂಟದಲ್ಲಿರುವ ಎಲ್ಲ ಘಟಕಗಳೂ ಸೇರ್ಪಡೆಯಾಗುವವು. ಒಕ್ಕೂಟದಲ್ಲಿ ಸೇರಲಿಚ್ಛಿಸುವ, ಅಥವಾ ಯಾವದಾದುರೊಂದುರೀತಿಯ ಒಡಬಂಡಿಕೆಯನ್ನು ವಗಾಡಿಕೊಂಡು ಸೇರಲಿಚ್ಛಿಸುವ ಸಂಸ್ಥಾನಗಳನ್ನು ಸೇರಿಸಿಕೊಳ್ಳಲು ಏರ್ಪಾಡುಮಾಡಲಾಗಿದೆ.

ಆಗಾಗ ಕಾಯಿದೆಗಳನ್ನು ಪಾಸು ಮಾಡಿ ಕೇಂದ್ರ ಪಾರ್ಲಿಮೆಂಟು ಹೊಸ ಪ್ರದೇಶಗಳನ್ನೂ ಒಕ್ಕೂಟದಲ್ಲಿ ಸೇರಿಸಿಕೊಳ್ಳಬಹುದು.

ಎಲ್ಲ ಪ್ರಾಂತಗಳ, ಶಾಸನ ಸಭೆಗಳ, ಹಾಗೂ ಸಂಸ್ಥಾನಗಳ ಶಾಸನ ಸಭೆಗಳ ಸಮ್ಮತಿಯಿಂದ ಕೇಂದ್ರ ಪಾರ್ಲಿಮೆಂಟು ಕಾಯಿದೆಯು ಮುಂತಾದ ಕೆಳಗಿನ ವಿಚಾರಗಳನ್ನು ನಿರ್ಧರಿಸಬಹುದು.

೧) ನೂತನ ಘಟಕದ ನಿರ್ಮಾಣ, ೨) ಯಾವದೇ ಘಟಕದ ಕ್ಷೇತ್ರ ನಿಸ್ತಾರ, ೩ ಯಾವದೇ ಘಟಕದ ಕ್ಷೇತ್ರವನ್ನು ಕಡಿಮೆ ಮಾಡುವದು, ೪) ಯಾವದೇ ಘಟಕದ ಗಡಿ ಬದಲಾವಣೆ.

ಗವ್ಹರ್ನರರ ಪ್ರಾಂತಗಳು

ಮುಂಬಯಿ, ಮದ್ರಾಸ, ಪಶ್ಚಿಮಬಂಗಾಲ, ಸಂಯುಕ್ತ ಪ್ರಾಂತ, ಬಿಹಾರ ಪೂರ್ವಪಂಜಾಬ, ಮಧ್ಯಪ್ರಾಂತ, ವರ್ಹಾಡ, ಅಸಾಮ ಮತ್ತು ಓಡಿಸಾ.

ಚೀಫ ಕಮಿಶನರರ ಪ್ರಾಂತಗಳು

ದಿಲ್ಲಿ, ಅಜಮೀರ—ಮೇವಾಡ, ಕೂಡಗು, ಅಂದಮಾನ ಮತ್ತು ನಿಕೋಬಾರ ನಡುಗಡ್ಡೆ, ಪಂತ ಪ್ಲೋಡ.

ಸಂಸ್ಥಾನಗಳು

ಪ್ರತ್ಯೇಕವಾದ ಒಂದೇ ಸಂಸ್ಥಾನ ಇಲ್ಲವೆ ಸಂಸ್ಥಾನಗಳ ಗುಂಪುಗಳು.

ಗವ್ಹರ್ನರರ ಮತ್ತು ಚೀಫ ಕಮಿಶನರರ ಪ್ರಾಂತಗಳು ಭಾರತದ ಒಕ್ಕೂಟದ ಅಧಿಕಾರದಲ್ಲಿರುವವು. ಸಂಸ್ಥಾನಗಳ ವಿಚಾರದಲ್ಲಿ ಪರಿಸ್ಥಿತಿಗನುಗುಣವಾಗಿ ವಿಚಾರ ಮಾಡಿ ಒಂದು ವ್ಯವಸ್ಥೆಯನ್ನು ಮಾಡಬೇಕಾಗುವದು.

ಭಾಗ ೨

ನಾಗರಿಕ ಹಕ್ಕು

ಈ ಘಟನೆಯು ಪ್ರಾರಂಭವಾಗುವ ದಿನಕ್ಕೆ ಅದರ ಗಡಿ ನಿರ್ಣಯವಲ್ಲಿ ೫ ವರ್ಷಗಳಿಗಿಂತ ಹೆಚ್ಚಿಗೆ ಕಾಲ ವಾಸವಾಗಿದ್ದವರಿಗೆ.

ಭಾರತದಲ್ಲಿ ಹುಟ್ಟಿದವನಿಗೆ ಅಥವಾ ಅವನ ತಂದೆ ತಾಯಿಗಳು ಭಾರತದಲ್ಲಿ ಹುಟ್ಟಿದ್ದರೆ

ಒಕ್ಕೂಟವು ಅಸ್ತಿತ್ವದಲ್ಲಿ ಬಂದ ನಂತರ —

ಒಕ್ಕೂಟದ ಘಟನೆಯು ಅಮಲಿನಲ್ಲಿ ಬಂದ ನಂತರ ಅದರ ಗಡಿಯಲ್ಲಿ ಹುಟ್ಟುವ ಪ್ರತಿಯೊಬ್ಬನಿಗೆ.

ಒಕ್ಕೂಟದ ಕಾಯಿದೆಗನುಸರಿಸಿ ನಾಗರಿಕರ ಹಕ್ಕುಗಳನ್ನು ದೊರಕಿಸಿಕೊಂಡವನಿಗೆ–

ಹುಟ್ಟುವ ಕಾಲದಲ್ಲಿ ಅವನ ತಂದೆ ತಾಯಿಗಳಲ್ಲಿ ಯಾರಾದರೊಬ್ಬರು ಭಾರತದ ಒಕ್ಕೂಟದ ನಾಗರಿಕರಾಗಿದ್ದಲ್ಲಿ ಅವನಿಗೆ–

ಒಕ್ಕೂಟದ ನಾಗರಿಕ ಹಕ್ಕು ಭಾಧ್ಯತೆಗಳು ದೊರೆಯುವವು

ಒಕ್ಕೂಟದ ವರಿಷ್ಠಾಧಿಕಾರ

ಒಕ್ಕೂಟದ ವರಿಷ್ಠಾಧಿಕಾರವು ಅಧ್ಯಕ್ಷ (ರಾಷ್ಟ್ರಪತಿ) ನಿಗಿರತಕ್ಕದ್ದು. ಅಧ್ಯಕ್ಷನನ್ನು ಕೆಳಗಿನ ವಿಧಾನದಿಂದ ಆರಿಸಬೇಕು.

೧) ಫೆಡರೇಶನ್ನಿನ ಪಾರ್ಲಿಮೆಂಟಿನ ಎರಡೂ ಸಭೆಗಳ ಸದಸ್ಯರು.

೨) ಎಲ್ಲ ಘಟಕಗಳ ಶಾಸನ ಸಭೆಯ ಸದಸ್ಯರು, ಅಲ್ಲಿ ಎರಡೂ ಸಭೆಗಳಿದ್ದಲ್ಲಿ ಕೆಳಗಿನ ಸಭೆಯ ಸದಸ್ಯರು ಮಾತ್ರ

ಮತದಾನ ಮಾಡಿ ಅಧ್ಯಕ್ಷರನ್ನು ಆರಿಸತಕ್ಕದ್ದು.

ಅಧ್ಯಕ್ಷನ ಅವಧಿಯು ೫ ವರ್ಷಗಳ ವರೆಗೆ ಮಾತ್ರವಿರುವದು.

ಅಧ್ಯಕ್ಷನು ಈ ಅವಧಿಯಲ್ಲಿ ರಾಜೀನಾಮೆ ಕೊಡಬಹುದು. ಇಲ್ಲವೆ ಸದಸ್ಯರಲ್ಲಿ ⅔ ಕ್ಕಿಂತ ಹೆಚ್ಚಿನ ಜನರು ತಮ್ಮ ಮತದಾನದಿಂದ ಅವನನ್ನು ತೆಗೆದು ಹಾಕಬಹುದು.

ಒಮ್ಮೆ ಅಧ್ಯಕ್ಷನಾದವನು ಎರಡನೆಯ ಸಲದ ಅಧ್ಯಕ್ಷಪದದ ಆಯ್ಕೆಗೆ ಕೇವಲ ಒಂದು ಸಲಮಾತ್ರ ನಿಲ್ಲಬಹುದು

ಒಕ್ಕೂಟದ ಪ್ರತಿಯೊಬ್ಬ ನಾಗರಿಕನೂ ೩೫ ವರ್ಷ ವಯಸ್ಸಾಗಿದ್ದಲ್ಲಿ, ಪ್ರಜಾ ಮಂಡಲದ ಸಭೆಗೆ ಆರಿಸಿ ಬರುವ ಹಕ್ಕನ್ನು ಪಡೆದವನಾಗಿದ್ದಲ್ಲಿ ಅಧ್ಯಕ್ಷ ಚುನಾವಣೆಗೆ ನಿಲ್ಲಬಹುದು.

ಅಧ್ಯಕ್ಷನಾಗುವವನು ಒಕ್ಕೂಟ ಪಾರ್ಲಿಮೆಂಟಿನ ಎರಡೂ ಸಭೆಗಳಲ್ಲಿ ಸದಸ್ಯನಾಗಿರಕೂಡದು. ಅಂಥ ಸದಸ್ಯನಾವನಾದರೂ ಅಧ್ಯಕ್ಷನಾಗಿ ಆರಿಸಲ್ಪಟ್ಟಲ್ಲಿ ಅವನ ಸದಸ್ಯತ್ವವು ಇಲ್ಲದಂತಾಗುವದು.

ಅಧ್ಯಕ್ಷನು ಇನ್ನಾವ ಅಧಿಕಾರ ಸ್ಥಾನವನ್ನು ವಹಿಸಕೂಡದು.

ಪಾರ್ಲಿಮೆಂಟಿನ ಎರಡೂ ಸಭೆಗಳು ಸಂಯುಕ್ತವಾಗಿ ಸೇರಿ ಉಪಾಧ್ಯಕ್ಷನನ್ನು ಗುಪ್ತಮತದಾನದಿಂದ ಆರಿಸಬೇಕು.

ಅಧ್ಯಕ್ಷನ ಅಧಿಕಾರ

೧) ಒಕ್ಕೂಟದ ಸಂರಕ್ಷಣೆಯ ಸರ್ವಾಧಿಕಾರ.

೨) ಕ್ರಿಮಿನಲ್ ಅಪರಾಧಕ್ಕಾಗಿ ಶಿಕ್ಷಿಸಲ್ಪಟ್ಟವರಿಗೆ ಮಾಫಿ ಮಾಡುವ ಅಧಿಕಾರ ಈ ಅಧಿಕಾರವು ಇತರ ಅಧಿಕಾರಿಗಳಿಗೆ ಕಾಯದೆಯನ್ವಯ ದೊರೆಯುವದು.

ಕೇಂದ್ರ ಸರಕಾರವ ಕಾರ್ಯನಿರ್ವಾಹಕ ಚಟುವಟಿಕೆಗಳನ್ನು ಅಧ್ಯಕ್ಷನ ಸಹಾಯಕ್ಕಾಗಿ ಮತ್ತು ಸಲಹೆಗಾಗಿ ಒಂದು ಮಂತ್ರಿಮಂಡಲವಿರುವದು.

ಕೇಂದ್ರ ಕಾರ್ಯಕಾರಿ ಮಂಡಳದಲ್ಲಿ ಏಳುಭಾಗಗಳಿವೆ. (೧) ರಾಜ್ಯ ಘಟನೆಯ ನಿಯುಕ್ತ ಅಧ್ಯಕ್ಷ (೨) ಮೇಲ್ಮನೆ ಮತ್ತು ಪ್ರಜಾಸಭೆಗಳುಳ್ಳ ಕೇಂದ್ರ ಪಾರ್ಲಿಮೆಂಟು. (೩) ಅಧ್ಯಕ್ಷನ ಅಧಿಕಾರಗಳು (೪) ಕೇಂದ್ರ ನ್ಯಾಯಾಲಯ (೫) ಸಂಯುಕ್ತ ರಾಜ್ಯಘಟನೆಯ ಲೆಕ್ಕತಪಾಸಿಗ (೬) ನೌಕರಿಗಳು (೭) ಆಯೋಗಗಳು.

ಸಂಯುಕ್ತ ರಾಜ್ಯಘಟನೆಯ ಎಲ್ಲ ವೈಧಿಕ ಅಧಿಕಾರಗಳು ಕೇಂದ್ರ ಪಾರ್ಲಿಮೆಂಟಿಗಿರುವವು. ಅಧ್ಯಕ್ಷ ಮತ್ತು ರಾಷ್ಟ್ರೀಯ ಸಭೆಗಳು ಕೂಡಿ ಪಾರ್ಲಿಮೆಂಟಾಗುವದು. ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಪ್ರಜಾ ಸಭೆಗಳು ರಾಷ್ಟ್ರೀಯ ಸಭೆಯಲ್ಲಿರುವವು.

ಅಧ್ಯಕ್ಷರು ವಿದ್ಯಾಲಯಗಳ ಹಾಗೂ ವೈಜ್ಞಾನಿಕ ಸಂಸ್ಥೆಗಳ ಸಲಹೆಯ ಮೇರೆಗೆ ನೇಮಿಸುವ ೧೦ ಕ್ಕೆ ಮೀರದಷ್ಟು ಸದಸ್ಯರು ಕೌನ್ಸಿಲ್ ಆಫ್ ಸ್ಟೇಟದಲ್ಲಿರುವರು. ಮೊದಲನೆಯ ೫೦ ಲಕ್ಷಕ್ಕೊಬ್ಬನಂತೆ, ಆ ನಂತರ ೨೦ ಲಕ್ಷಕ್ಕೊಬ್ಬನಂತೆ ಪ್ರತಿನಿಧಿ

ಗಳ ಸಂಖ್ಯೆ ಇರುವದು. ಈ ಸಂಖ್ಯೆ ಯಾವಕಾಲಕ್ಕೂ ೨೦ ಕ್ಕೆ ಮಿಕ್ಕಬಾರದು.

ಪ್ರಜಾ ಸಭೆಯಲ್ಲಿ ಸಂಯುಕ್ತ ರಾಜ್ಯಘಟನೆಯಲ್ಲಿರುವ ಪ್ರದೇಶದ ಪ್ರತಿನಿಧಿಗಳಿರುವರು. ಇವರನ್ನು ಪ್ರತಿ ೧೦ ಲಕ್ಷ ಜನಸಂಖ್ಯೆಗೆ ಒಬ್ಬನಿನೆ ಕಡಿಮೆಯಿಲ್ಲದಂತೆ ಪ್ರತಿ ೭೫ ಲಕ್ಷ ಜನಸಂಖ್ಯೆಗೆ ಒಬ್ಬನಿಗೂ ಹೆಚ್ಚಾಗದಂತೆ ಆರಿಸಲಾಗುವದು.

ಕೌನ್ಸಿಲ್ ಆಫ್ ಸ್ಟೇಟವು ಶಾಶ್ವತವಾದದ್ದಿದ್ದು ಅದನ್ನು ವಿಸರ್ಜಿಸಲಾಗುವದಿಲ್ಲ. ಆದರೆ ಸುಮಾರು 1/3 ದಷ್ಟು ಪ್ರತಿನಿಧಿಗಳು ಎರಡು ವರ್ಷಕ್ಕೊಮ್ಮೆ ತಮ್ಮ ಸ್ಥಳಗಳನ್ನು ತೆರವು ಮಾಡುವರು.

ಪ್ರಜಾ ಸಭೆಯು ನಾಲ್ಕು ವರ್ಷಗಳವರೆಗೆ ಅಸ್ತಿತ್ವದಲ್ಲಿರುವದು. ಅದಕ್ಕೂ ಮೊದಲು ಅದು ವಿಸರ್ಜಿಸಲ್ಪಡಲೂ ಬಹುದು. ಅಧ್ಯಕ್ಷರು ಅವಸರದ ಸಮಯದಲ್ಲಿ ಅದಕ್ಕೆ ೧ ವರ್ಷದವರೆಗೆ ಜೀವದಾನ ಮಾಡಬಹುದು.

ಈಗಿನ ಜನಸಂಖ್ಯೆಯ ಲೆಕ್ಕಕ್ಕನುಸರಿಸಿ ಮೇಲ್ಮನೆಯಲ್ಲಿ ೨೦೦ ಮತ್ತು ಪ್ರಜಾಸಭೆಯಲ್ಲಿ ೩೦೦ ರಿಂದ ೪೦೦ ಜನ ಸದಸ್ಯರಿರಬಹುದಾಗಿವೆ.

ಹಣಕಾಸಿನ ಗೊತ್ತುವಳಿಗಳ ವಿಚಾರವನ್ನು ಬಿಟ್ಟು ಈ ಎರಡೂ ಮನೆಗಳಿಗೆ ಸಮಾನ ಅಧಿಕಾರವಿದೆ. ಯಾವುದೊಂದು ವಿಚಾರದಲ್ಲಿ ಬಿಕ್ಕಟ್ಟು ಪ್ರಾಪ್ತವಾದರೆ ಎರಡೂ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ಬಿಡಿಸಬೇಕು.

ಪಾರ್ಲಿಮೆಂಟು ಕೂಡದಿರುವಾಗ ಅಧ್ಯಕ್ಷರು ಅರ್ಡಿನನ್ಸ್ ಹೊರಡಿಸಬಹುದು. ಆದರೆ ಅದನ್ನು ಕೇಂದ್ರ ಪಾರ್ಲಿಮೆಂಟಿನ ಮುಂದಿಡಬೇಕಾಗುವದು. ಪಾರ್ಲಿಮೆಂಟ ಪ್ರಾರಂಭವಾದ ನಂತರ ಅರ್ಡಿನನ್ಸ್ ಅಸ್ತಿತ್ವದಲ್ಲಿರಲಾರದು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಬಳ್ಳಾರಿ, ಆದವಾನಿ, **ಅನಂತಪುರ:**— ಅನಂತಪುರ, ದಮ್ಮೂರವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲು, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:** — ಕರ್ನೂಲು:— ಪತ್ತಿಕೊಂಡ. **ಕಡಪ:**— ರಾಜಂಪೇಟೆ, ರಾಜಂಪೇಟೆ, **ಚಿತ್ತೂರು,**— ಚಿತ್ತೂರು, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡಿದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.

ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.

ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3% ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ

☞ **All Banking Business Transacted.**

ಭಾರತ ಸ್ವಾತಂತ್ರ್ಯ ಸಮರಕ್ಕೆ

—: ಬಳ್ಳಾರಿ ಜಿಲ್ಲೆಯ ಕಾಣಿಕೆ :—

[೧೯೪೦ - ೪೧ ವ್ಯಕ್ತಿ ಸತ್ಯಾಗ್ರಹ, ೧೯೪೨—೪೪ ಆಗಸ್ಟ ಆಂದೋಳನ.]

—: 1921 ರಿಂದ 1932 ರ ವರೆಗೆ ಸಂಕ್ಷಿಪ್ತ ವಿವರ :—

ಮಹಾತ್ಮ ಗಾಂಧಿಯವರು 1921 ರಲ್ಲಿ ಸತ್ಯಾಗ್ರಹಾಂದೋಳನವನ್ನು ಆರಂಭಿಸಿದ ಮೇಲೆ ದತ್ತ ಮಂಡಲದಲ್ಲಿ ಬಳ್ಳಾರಿ ಜಿಲ್ಲೆಯು ಎಚ್ಚೆತ್ತು ತನ್ನ ಶಕ್ತ್ಯಾನುಸಾರ ಸೇವೆಯನ್ನು ಸಲ್ಲಿಸಿದೆ.

ತಿಲಕ ಸ್ವರಾಜ್ಯ ನಿಧಿಗೆ ಬಳ್ಳಾರಿಯವರು ಸಾಕಷ್ಟು ಧನ ಸಂಗ್ರಹ ಮಾಡಿಕೊಟ್ಟರು. 1920-21 ರಲ್ಲಿ ಬಾದನಹಟ್ಟಿ ವೆಂಕೋಬರಾವು, ನೇತ್ರಹಳ್ಳಿ ಸಂಜೀವರಾವು ವಗೈರೆ ಮಿತ್ರರು—ಜಿಲ್ಲೆಯ ಕೆಲ ಭಾಗಗಳಲ್ಲಿ ಸಂಚರಿಸಿ ರಾಜಕೀಯ ಜ್ಞಾನದ ಪ್ರಸಾರಮಾಡಿದರು. ಶ್ರೀ ಟೇಕೂರು ನಾರಾಯಣಶಾಸ್ತ್ರಿ ಲ್ಯಾಂಗ್ಲಿ ಭೀಮಸೇನರಾವು (ಶ್ರೀ ಟೇಕೂರು ಸುಬ್ರಹ್ಮಣ್ಯಂರವರ ಅಣ್ಣಂದಿರು) ಮತ್ತು ಕಲ್ಲೂರು ಸುಬ್ಬರಾಯರು ರಾಜದ್ರೋಹಕ್ಕಾಗಿ ಶಿಕ್ಷೆಗೆ ಒಳಗಾಗಿ ಬಳ್ಳಾರಿ ಶೆಂಟ್ರಲ ಜೇಲದಲ್ಲಿ ಯಾವ ಸುಧಾರಣೆಯೂ ಇಲ್ಲದ ಕಾಲದಲ್ಲಿ ವಿಶೇಷ ಕಷ್ಟಗಳನ್ನನುಭೋಗಿಸಿದರು 1930 ರಲ್ಲಿ ಜಿಲ್ಲೆಯಲ್ಲಿ ಪ್ರಭಾತ ಫೇರಿಗಳಿಂದ ವಿಶೇಷ ಜಾಗೃತಿಯಾಗಿ ಬಳ್ಳಾರಿ ಕೊಟ್ಟೂರು ಹರಪನಹಳ್ಳಿ ವಗೈರೆ ಸ್ಥಳಗಳಲ್ಲಿ ಸುಮಾರು 108 ಜನರು ಶಿಕ್ಷೆಗೊಳಗಾದರು. 1932 ಆಂದೋಳನದಲ್ಲಿಯೂ ಕೂಡ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಸಾಕಷ್ಟು

VATTAM NARAYANAPAH CHETTY & Sons.,

Iron, Hardware & Cement Merchants, Bangalore Road, BELLARY.

Stockists: The Cement Marketing Co. of India Ltd. (for Bellary & Anantpur)

Best steel crow bars and jumpers of all sizes & lengths,
Mangalore Tiles and other building materials.

THE ASBESTOS CEMENT LIMITED.

A. C. Pipes & fittings available in large quantity.

Trail Solicited.

ವಟ್ಟಂ ನಾರಾಯಣಪ್ಪ ಚೆಟ್ಟಿ ಅಂಡ್ ಸನ್ಸ್,

ಐರನ್ ಹಾರ್ಡ್‌ವೇರ್ ಮತ್ತು ಶಿಮೆಂಟ್ ವ್ಯಾಪಾರಿಗಳು. ಬೆಂಗಳೂರು ರೋಡ್, ಬಳ್ಳಾರಿ.

ಶಿಮೆಂಟ್ ಮಾರ್ಕೆಟಿಂಗ್ ಕಂಪನಿಯ ಶಿಮೆಂಟ್ ಬಳ್ಳಾರಿ ಮತ್ತು ಅನಂತಪುರಗಳಿಗೆ ಹಂಚಿಲಧಿಕಾರ ಹೊಂದಿದವರು.

ಅಸ್ಬೆಸ್ಟಾಸ್ ಶಿಮೆಂಟ್ ಲಿಮಿಟೆಡ್‌ದ ನಾಳಿಗಳು ಮತ್ತು ಇದಕ್ಕೆ ಸಂಬಂಧಿಸಿದ ಚಿಲ್ಲರ ಸಾಮಗ್ರಿ,
ಉಕ್ಕಿನ ಆರಿ, ಉಕ್ಕಿನ ಜಂಪರ್, ಎಲ್ಲಾಸೈಜಿನ ಮಂಗಳೂರು ಹೆಂಚು, ಕಟ್ಟಡದ ಸಾಮಗ್ರಿ,
ನಟ್, ಬೋಲ್ಟ ವಗೈರೆ ಸರಿಯಾದ ಬೆಲೆಗೆ ದೊರೆಯುತ್ತವೆ.

ಜನರು ರಾಜಕೀಯ ಚಟುವಟಿಕೆಗಳಲ್ಲಿ ಭಾಗ ವಹಿಸಿ ಶಿಕ್ಷೆಗೊಳಗಾದರು. ಈಚಲ ಗಿಡಗಳ ನಾಶ, ಅನಧಿಕೃತ ಸಾಹಿತ್ಯದ ಹಂಚುವಿಕೆ. ರಾಜದ್ರೋಹ ಭಾಷಣ ವಗೈರೆ ಕೃತ್ಯಗಳಿಗಾಗಿ ಸರಕಾರವು ಕ್ರಮವನ್ನು ತೆಗೆದುಕೊಂಡಿತು 1930—32 ರ ಸತ್ಯಾಗ್ರಹವು ಪ್ರಾಂತೀಯ ಕಾಂಗ್ರೆಸ್ ಸಮಿತಿಯವರಿಂದ ಪ್ರಕಟವಾಗಿದೆ.

1940—41 ವ್ಯಕ್ತಿ ಸತ್ಯಾಗ್ರಹ

ಮಹಾತ್ಮ ಗಾಂಧಿಯವರ ಆದೇಶದ ಮೇರೆಗೆ ಬಳ್ಳಾರಿ ಜಿಲ್ಲೆಯಲ್ಲಿ ಪುರುಷೋತ್ತಮರಿಂದ ಅಧಿಕಾರ ಹೊಂದಿದವರು ನಿಯುಕ್ತ ಘೋಷಣೆಯನ್ನು ಸಾರ್ವಜನಿಕ ಸ್ಥಳದಲ್ಲಿ ಹೇಳಿ ಶಿಕ್ಷೆಗೆ ಒಳಗಾದರು. ಅಧಿಕಾರ ಹೊಂದಿದ ಕೆಲವರು ಸತ್ಯಾಗ್ರಹ ಮಾತಲಿಲ್ಲ ಸತ್ಯಾಗ್ರಹ ಮಾಡಿದವರಲ್ಲನೇಕರು ಬಳ್ಳಾರಿ ಜಿಲ್ಲೆಯಲ್ಲಿ ಬಂಧಿಸಲ್ಪಡದೆ ಬೊಂಬಾಯಿ ಪ್ರಾಂತವಲ್ಲಿ ಬಂಧಿಸಲ್ಪಟ್ಟರು ಪೋಲೀಸರು ಅನಿಷ್ಟ ವದ್ದತಿಗಳನ್ನು ಬಲಂಬಿಸಿ ಅಡ್ವೊಕೇಟರಾದ ನಾಗಭೂಷಣಂಗವರನ್ನು, ಆಲೂರಿನ ವೆಂಕಟೇಶರಾಯರನ್ನು, ಕೊಟ್ಟೂರಿನ ದೇವೇಂದ್ರಪ್ಪನವರನ್ನು (ಗದಗಿನ) ಟಾವುನ ನ್ಯೂಸನ್ಸ ಅಕ್ಟುಕೆಳಗೆ 8 ದಿನ ಸಬ್ ಜೈಲಿನಲ್ಲಿ ಕ್ರಿಮಿನಲ್ ಕೈದಿಗಳೊಡನೆ ಇಟ್ಟು ಕಟ್ಟುವರ್ತನೆಗೆ ಗುರಿಮಾಡಿದರು'

NIGHT QUEEN HAIR OIL.

ನೈಟ್ ಕ್ವೀನ್ ಹೇರ್ ಆಯಿಲ್.

ಕೂದಲಿನ ಸೌಂದರ್ಯ, ಮೃದುತ್ವ, ಕಾವಾಡಿ ಕೂದಲು ಬೆಳವಣಿಗೆಗೆ ಆಹಾರದಂತಿದೆ. ಕೇಶತೈಲಗಳಿಗೆಲ್ಲಾ ರಾಣಿಯಂತಿದೆ. ಒಂದು ಸಲ ಉಪಯೋಗಿಸಿದಲ್ಲಿ ಯಾವಾಗಲೂ ಬಿಡುವುದಿಲ್ಲ

CASHMERE ARUK.

ಕಾಶ್ಮೀರು ಆರುಕ್ (ಮನೆಯ ವೈದ್ಯ)

ಎಲ್ಲರ ಮನೆಯಲ್ಲೂ ಇರಬೇಕಾದ ಆವಶ್ಯಕ ಔಷಧ

ಅಂಗಾಂಗಗಳ ನೋವುಗಳಿಗೆಲ್ಲಾ ರಾಮಬಾಣ ಕಫೆರೂಲಿ, ಕೆಮ್ಮು ನೆಗಡಿ, ಉಬ್ಬಸ, ಅಜೀರ್ಣ, ಶೀತಭೇದಿ, ಕ್ರಿಮಿಕೀಟಗಳ ಕಡಿತಕ್ಕೆ ಶೀಘ್ರ ಗುಣಕಾರಿ. ಹೊರಗೂ ಹಚ್ಚಬಹುದು ಮತ್ತು ಒಳಗೂ ತೆಗೆದುಕೊಳ್ಳಬಹುದು. ಅನುಪಾನ ಔಷಧದ ಜೊತೆಯಲ್ಲಿ ಇರುವುದು

ಎಲ್ಲಾ ಷಾಪುಗಳಲ್ಲೂ ದೊರೆಯುತ್ತದೆ.

H. S. & SONS, BELLARY.

ಹೆಚ್. ಎಸ್ ಅಂಡ್ ಸನ್ಸ್, ಬಳ್ಳಾರಿ.

ದಿಲ್ಲಿ ಯಾತ್ರೆ:— ಬಂಧಿಸಲ್ಪಡದವರು ಭಾರತ ರಾಜಧಾನಿಯಾದ ದೆಹಲಿಯವರೆಗೂ ಹೋಗ ಬೇಕೆಂಬುದಾಗಿ ಮಹಾತ್ಮ ಗಾಂಧಿಯವರು ವಿಧಿಸಿದ ಪ್ರಕಾರ ಕೈ ಬಳ್ಳಾರಿ ಜಿಲ್ಲೆಯಲ್ಲೆಲ್ಲಾ ಬ್ರಿಟಿಶರ ಯುದ್ಧ ನೀತಿಯನ್ನು ಖಂಡಿಸುವ ಪ್ರಚಾರ ಕೈಗೊಂಡು ಮುಗಿಸಿದ ನಂತರ ಜಿಲ್ಲೆಯ ಹೊರಗೆ ಪ್ರಯಾಣಮಾಡಿ ದೆಲ್ಲಿಯ ಕಡೆ ಸಾಗಿದರು. ಕೆಲವರಿಗೆ ಕರ್ನೂಲು ಜಿಲ್ಲೆಯಲ್ಲಿ ಅಧಿಕ ಸಂಖ್ಯಾಕ ಸತ್ಯಾಗ್ರಹಿಗಳಿಗೆ ಧಾರ್ವಾಡ ಜಿಲ್ಲೆಯಲ್ಲಿ ಶಿಕ್ಷೆಯಾಯಿತು ಚರಿತ್ರಾರ್ಹವಾದ ಘಟನೆಯೊಂದನ್ನು ಇಲ್ಲಿ ಉಲ್ಲೇಖಿಸದಿರಲಾರೆವು—ಡಾಕ್ಟರ್ ಕೃಷ್ಣಮೂರ್ತಿ, ಎಂ. ಭೀಮರಾವ್, ಎಂ. ಶಿ. ಸೋಮಪ್ಪ, ಎಂ ಶಿ. ಸಿದ್ದಯ್ಯ, ರಾಘವೇಂದ್ರರಾವ್, ಪೆದ್ದ ಕಡುಬೂರ್ ವೆಂಕಟರೆಡ್ಡಿ ಮತ್ತು ವೆಂಗಣ್ಣ ಇವರು ಪ್ರತಿನಿತ್ಯವೂ ಹತ್ತು ಮೈಲಿಗಳಂತೆ ಸುಮಾರು 850 ಮೈಲು ಪ್ರಯಾಣ ಮಾಡಿ ಮಧ್ಯ ಪ್ರಾಂತದ ನಾಗಪುರದವರೆಗೂ ಹೋಗಿ ಅಲ್ಲಿ ಬಂಧಿತರಾಗಿ, ಬಳ್ಳಾರಿಗೆ ಶಿ. ಸಿ. ಪೋಲೀಸರಿಂದ ಕರೆತರಲ್ಪಟ್ಟರು. ದಾರಿಯಲ್ಲಿ ಹಳ್ಳಿಗರು ಕೊಡುತಿದ್ದ ಆತಿಥ್ಯವನ್ನು ಮಾತ್ರ ಸ್ವೀಕರಿಸಿ, ಗುಡ್ಡ, ಕಾಡು, ಘೋರಾರಣ್ಯಗಳನ್ನು ದಾಟಿ—ಕರ್ನೂಲು, ಗುಂಟೂರು, ಪಶ್ಚಿಮ ಗೋದಾವರಿ—ಪೂರ್ವ ಗೋದಾವರಿ ಮತ್ತು ಚಾಂದ ಜಿಲ್ಲೆಗಳ ಮುಖಾಂತರ—ಮುಖ್ಯ ಪ್ರಾಂತದ ವಾರ್ಧಾವನ್ನು ಸೇರಿದರು **ಸೇವಾಗ್ರಾಮದಲ್ಲಿ ಮಹಾತ್ಮ ಗಾಂಧಿಯವರು ಇವರನ್ನು ಪ್ರೇಮದಿಂದ ಬರಮಾಡಿಕೊಂಡು ಎಲ್ಲಾ ಸಮಾಚಾರ 11-5-1941 ರ ದಿನ ಕೇಳಿ ತಿಳಿದುಕೊಂಡರು.** ಅಲ್ಲಿಂದ ನಾಗಪುರಕ್ಕೆ ತೆರಳಿ ಸೆಂಟ್ರಲ್ ಜೈಲಿನಲ್ಲಿ ಬಂಧಿತರಾಗಿ ಮರಳಿಬೇಕಾಯಿತು. ತಂಗಿದ ಪ್ರತಿಯೊಂದೂರಲ್ಲಿಯೂ ದೇಶಪರಿಸ್ಥಿತಿ, ಸತ್ಯಾಗ್ರಹ ವಿಧಾನ-ಉದ್ದೇಶಗಳನ್ನು ಕುರಿತು ಭಾಷಣಗಳಾಗುತ್ತಿದ್ದವು

★ ವೃದ್ಧಾಪ್ಯದಲ್ಲಿ ಸಹಾಯ ಬೇಕೆಂದರೆ,

ನಿಮಗೆ ★ ಮಕ್ಕಳ ಪೋಷಣೆ, ವಿದ್ಯಾಭ್ಯಾಸ, ಮದುವೆಗಳಿಗಾಗಿ ಸಕಾಲಕ್ಕೆ ಬೇಕೆಂದರೆ,

★ ಆಕಸ್ಮಿಕ ಪತಿಯ ಮರಣದಿಂದ ವಿಧವೆಯಾಗುವ ಸ್ತ್ರೀಯರ ಉದರಂಭರಣವಾಗಬೇಕಾದರೆ

— ಇಂದೇ ಜೀವವಿಮೆ ಮಾಡಿಸಿರಿ —

ಸುಲಭದರದ ಪ್ರೀಮಿಯಂ, ಪಾಲಿಸಿದಾರರಿಗೆ ವಿಶೇಷ ಸೌಕರ್ಯ, ಪಾಲಿಸಿಯು ಪಕ್ವಕ್ಕೆ ಬಂದಾಗ ಯಾ ಹಕ್ಕು ಉದ್ಭವಿಸಿದಾಗ ಪಾಲಿಸಿಯ ಹಕ್ಕುದಾರರಿಗೆ ಶೀಘ್ರ ಹಣಸಲ್ಲಿಸುವ ಪದ್ಧತಿ, ಕನ್ನಡನಾಡಿನ ವಿಮಾಪ್ರಪಂಚದಲ್ಲಿ ಕ್ರಾಂತಿಮಾಡಲಿರುವ ಈ ಕೆಳ ಕಂಪನಿಯಲ್ಲೇ ಜೀವವಿಮೆ ಮಾಡಿರಿ.

The United Karnataka Insurance Co., Ltd.

ದಿ ಯುನೈಟೆಡ್ ಕರ್ನಾಟಕ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್,

(H. O. DHARWAR—ಪ್ರಧಾನ ಕಾರ್ಯಾಲಯ-ಧಾರ್ವಾಡ)

ನಾವು ನಿಮಗೆ ಎಲ್ಲಾ ತರಹದ ಸಲಹೆ, ಸೂಚನೆಗಳನ್ನು ನೀವಿಸುವ ಬಳಿ ಕೊಟ್ಟು, ನಿಮಗೆ ಎಲ್ಲಾತರದ ಸೌಕರ್ಯ ಕೊಟ್ಟು ಜೀವವಿಮೆ ಇಳಿಸುವೆವು. ನಮ್ಮನ್ನು ವಿಚಾರಿಸಿದರೆ ಸಾಕು.

Principal Agents:— **International Commercial Corporation Ltd.**

H. O. Udupi Branches: Bailur, Bellary.

ಮುಖ್ಯ ಏಜೆಂಟರು: **ಇಂಟರ್ ನ್ಯಾಷನಲ್ ಕಮರ್ಷಿಯಲ್ ಕಾರ್ಪೊರೇಶನ್ ಲಿಮಿಟೆಡ್.**

ಮುಖ್ಯಕಚೇರಿ: ಉಡುಪಿ. ಶಾಖೆಗಳು: ಬೈಲೂರು, ಬಳ್ಳಾರಿ.

ಬಳ್ಳಾರಿ ಜಿಲ್ಲೆಯಲ್ಲಿ ಬಂಧಿತರಾಗಿ ಶಿಕ್ಷೆ ಹೊಂದಿದವರು ೧೯೪೦-೪೧

ನಂ.	ಹೆಸರು	ಸ್ಥಳ	ಶಿಕ್ಷೆ ಮತ್ತು	ದಂಡ
೧	ಪತ್ತಿಕೊಂಡ ಗುರುನಾಥಪ್ಪ	... ಹೊಸಪೇಟೆ	... ೬ ತಿಂಗಳು	... ೧೦೦೦
೨	ನೆಲ್ಲುದ್ರಿ ಮುಕ್ಕಣ್ಣ	... ಹರಪನಹಳ್ಳಿ	... ೬ ,,	... ೧೦೦೦
೩	ಸತ್ರಸಾಲ ವೀರಭದ್ರಪ್ಪ	... ಬಳ್ಳಾರಿ	... ೧ ದಿನ	... ೧೦೦೦
೪	ಬೆಲ್ಲದ ಚನ್ನಪ್ಪ	... ಹೊಸಪೇಟೆ	... ೬ ತಿಂಗಳು	... ೪೦೦
೫	ಇಜಾರಿ ವಸುಪಾಲಪ್ಪ	... ಹರಪನಹಳ್ಳಿ	... ೬ ತಿಂಗಳು	... ೪೦೦
೬	ಡಾಕ್ಟರ ಆರ್. ನಾಗನಗೌಡ	... ಹೊಸಪೇಟೆ	... ೧ ವರ್ಷ	... ೬೦೦
೭	ಅಲಬೂರು ಶಿದ್ದಪ್ಪ	... ಕೊಟ್ಟೂರು	... ೩ ತಿಂಗಳು	... ೫೦೦
೮	ಬಿ. ಅನಂತಾಚಾರ್ಯ	... ಹೊಸಪೇಟೆ	... ೬ ತಿಂಗಳು	... ೫೦೦
೯	ಎಸ್. ಕೆ. ರಾಮಾಚಾರ್ಯ	... ಬಳ್ಳಾರಿ	... ೬ ,,	... ೫೦೦
೧೦	ಡಿ, ಗೋವಿಂದದಾಸ್	... ಆಲೂರು	... ೬ ,,	... ೪೦೦
೧೧	ಹೆಚ್. ಸೀತಾರಾಮರೆಡ್ಡಿ	... ಬಳ್ಳಾರಿ	... ೬ ,,	... ೩೦೦
೧೨	ಟಿ. ಸುಬ್ರಹ್ಮಣ್ಯಂ	.. ,,	... ೬ ,,	... ೩೦೦
೧೩	ರೇಪಪ್ಪ	... ಹರಾಳು ಕೂಡ್ಲಿಗಿ	... ೬ ,,	... ೩೦೦
೧೪	ರಾಮಿರೆಡ್ಡಿ	... ರ್ಯಾಕಟ್ಲ	... ೬ ,,	... ೩೦೦
೧೫	ಎ. ಕೊಂಡಾರೆಡ್ಡಿ	.. ಕಣೇಕಲ್ಲು	... ೬ ,,	... ೩೦೦
೧೬	ಓಬಳಾಚಾರಿ	... ರಾಯದುರ್ಗ	... ೬ ,,	... ೩೦೦
೧೭	ಕಟ್ಟಾರಾಮಪ್ಪ	... ರ್ಯಾಕಟ್ಲ	... ೪ ,,	... ೫೦
೧೮	ಪಿ ಓಬನ್ನ	... ,,	... ೪ ,,	... ೫೦
೧೯	ಬಾಲಾರಾಮಸಿಂಗ್	... ಆದವಾನಿ	... ೬ ,,	... ೩೦೦
೨೦	ಪಾಪನ್ನ ಚೌಧರಿ	... ರಾಯದುರ್ಗ	... ೪ ,,	... ೩೦೦

ಸೂಚನೆ :— ಈ ದಂಡದ ಮೊತ್ತವನ್ನು ಕಾಂಗ್ರೆಸ್ ಸರಕಾರವು 1946 ರಲ್ಲಿ ಹಿಂದಕ್ಕೆ ಕೊಡಿಸಿತು

ಕರ್ನೂಲಲ್ಲಿಶಿಕ್ಷೆ ಬಳ್ಳಾರಿ

ಶ್ರೀ ಎ. ವೀರಾಸ್ವಾಮಿಯವರಿಗೆ ಕೆಳ ಕೋರ್ಟಿನಲ್ಲಿ 6 ತಿಂಗಳು ಶಿಕ್ಷೆ 1000 ದಂಡವಾಗಿ ಮೇ
ಲ್ಕೋರ್ಟಿನಲ್ಲಿ ಶಿಕ್ಷೆಯು ರದ್ದಾಯಿತು. ಬಂಧಿತರಾಗದ ಶ್ರೀ ಆರ್. ವಿರುಪಾಕ್ಷರಾವ್, ಚಿದಾನಂದಶಾಸ್ತ್ರಿ
ನೇಮ್ಮಲ್ಲು ಸೀತಾರಾಮರೆಡ್ಡಿ' ಹರಿಕಥೆ ರಾಮಶಾಸ್ತ್ರಿ ಮೊಲಗವೇಲಿ ವೀರಭದ್ರಯ್ಯ ಎಂ. ಹನುಮಂತಪ್ಪ
ವೀರಾರೆಡ್ಡಿ, ಆರ್ ವೆಂಕಟರಮಣಪ್ಪ, ಆರ್ ಹನುಮಂತರಾವ್, ವಗೈರೆ ಮಿತ್ರರು ಜಿಲ್ಲೆಯ ಹಳ್ಳಿ ಭಾಗ
ದಲ್ಲಿ ಸಂಚರಿಸಿ ಪ್ರಚಾರ ನಡೆಸಿದರು.

LAKSHMI IRON MART,

Iron and Hard ware Merchants, Car St BELLARY.

All Iron & Steel Materials, Paints and Varnishes

AT REASONABLE RATES. *TRIAL SOLICITED.*

ಲಕ್ಷ್ಮಿ ಐರನ್ ಮಾರ್ಟ್,

ಐರನ್ ಅಂಡ್ ಹಾರ್ಡವೇರ ಮರ್ಚೆಂಟ್ಸು, ತೇರುಬೀದಿ, ಬಳ್ಳಾರಿ.

ಕಬ್ಬಿಣ ಮತ್ತು ಉಕ್ಕಿನ ಸರಕುಗಳು, ಬಣ್ಣ ಮತ್ತು ವಾರ್ನಿಷ್ ವಗೈರೆ ಸರಿಯಾದ ಬೆಲೆ. ಪರೀಕ್ಷಿಸಿ.

ಜಿಲ್ಲೆಯ ಹೊರಗೆ ಶಿಕ್ಷೆಗೆ ಗುರಿಯಾದ ಬಳ್ಳಾರಿ ಸತ್ಯಾಗ್ರಹಿಗಳು ೧೯೪೦-೪೧

[ಶಿಕ್ಷೆ ಮತ್ತು ಸ್ಥಾನ ಬದ್ಧತೆಯ ಅವಧಿ 2 ತಿಂಗಳಿಂದ 1 ವರ್ಷದವರೆಗೆ]

ನಂ.	ಹೆಸರು	ಸ್ಥಳ	ಶಿಕ್ಷೆಯಾದ ಸ್ಥಳ	ಯಾವ ಜೈಲು
೧	ಎಸ್ ಕೆ. ಬಾಬುನಾಯಿಡು	ಕೌಲುಬಜಾರ ಬಳ್ಳಾರಿ	ಧಾರ್ವಾಡ	Belgaum (Bombay) Central Prison. ಹಿಂದಲಿಜೈಲು ಬೆಳಗಾಂ
೨	ಬಾದನಹಟ್ಟಿ ವೆಂಕೋಬರಾಯ	ಬಳ್ಳಾರಿ	,,	
೩	ಟಿ ಬಿ. ಕೇಶವರಾವ್	,,	,,	
೪	ಕೆ. ರಾಮಚಂದ್ರಗುಪ್ತ	ಕುರುಗೋಡು	,,	
೫	ಎ. ವೀರಸ್ವಾಮಿ	ಬಳ್ಳಾರಿ	,,	
೬	ಎಸ್. ಕೆ. ರಾಮಾಚಾರ್	,,	,,	
೭	ಕಲ್ಗಣಿ ಶಿವರುದ್ರಪ್ಪ	,,	,,	
೮	ಡಿ. ಯಚ್. ವೆಂಕೋಬರಾವ್	,,	,,	
೯	ದಳವಾಯಿ ಅಂಬಣ್ಣ	ಅನಂತಶಯನಗುಡಿ	,,	
೧೦	ಗೆಣ್ಣೆಹಾಳು ಭೀಮಪ್ಪ	ರಾಮಸಾಗರ	,,	
೧೧	ಶಿವದೇಶಾಯಿ	ಹೊಸಗೇಟಿ	,,	
೧೨	ಮರಿಸ್ವಾಮಿ ಹಿರೇಮಠ	ನಲ್ಲಭಾಪುರ	,,	
೧೩	ಸಣ್ಣ ವೀರಯ್ಯ	ಕೋಗಳಿ	,,	
೧೪	ಸಣ್ಣಯ್ಯ	,,	,,	
೧೫	ಬಿ. ಯಂ. ಅಜ್ಜಯ್ಯ	ಬಿಣಕಲ್ಲು	,,	
೧೬	ಎಸ್. ಗೋವಿಂದರಾವು	ಕೊಟ್ಟೂರು	,,	
೧೭	ಎಸ್ ರಾಮಶೆಟ್ಟಿ	,,	,,	
೧೮	ಕೆ. ಕೊಟ್ರಬಸಪ್ಪ	,,	,,	
೧೯	ಹರಾಳು ಶಿದ್ದಪ್ಪ	ಹರಾಳು (ಹರಪನಹಳ್ಳಿ	,,	
೨೦	ಬಿ ತಿಮ್ಮಪ್ಪ	ಕೊಟ್ಟೂರು	,,	
೨೧	ಡಿ ಬಸವನಗೌಡ	ಹರಾಳು	,,	
೨೨	ಅಡವಿಗೌಡ	ಕೊಟ್ಟೂರು	,,	
೨೩	ಬಿ. ಸಿದ್ದಲಿಂಗಪ್ಪ	,,	,,	
೨೪	ಎಂ. ಮರುಳನಗೌಡ	,,	,,	
೨೫	ಜಿ. ಶರಣಪ್ಪ	,,	,,	
೨೬	ಟಿ. ಯಸ್. ಗುರುಲಿಂಗಪ್ಪ	,,	,,	
೨೭	ಬಿ. ಮುದುಕಪ್ಪ	,,	,,	
೨೮	ಹೆಚ್. ಎ. ಬಸಪ್ಪ	,,	,,	
೨೯	ಚಲವಾದಿ ಹನುಮಪ್ಪ	,,	,,	
೩೦	ದೇವೇಂದ್ರಪ್ಪ	,,	೧೫ ದಿನ ಗದಗಜೈಲ	

ಸುಪ್ರಸಿದ್ಧ ಆಗಷ್ಟ ಆಂದೋಳನ (೧೯೪೨-೪೫)

— ಬಳ್ಳಾರಿ ಜಿಲ್ಲೆಯ ಭಾಗ —

ಪರರಾಷ್ಟ್ರೀಯ ಪ್ರಭುತ್ವದ ವಿರುದ್ಧವಾಗಿ ನಡೆದ 1857 ರ ಬಂಡಾಯದ ನಂತರ 1942 ರ ಆಗಷ್ಟ 8 ರ ಮಧ್ಯರಾತ್ರಿಯಿಂದ 1945 ರ ಮಧ್ಯದವರೆವಿಗೂ ನಡೆದ ಆಂದೋಳನವು ಭಾರತ ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವಾಗಿದೆ. ಬ್ರಿಟಿಶ ಆಳರಸರು ತಮ್ಮ ಮತ್ತು ಭಾರತದ ಸೈನ್ಯ ಪೋಲೀಸರೊಂದಿಗೆ ಶಸ್ತ್ರಸುಸಜ್ಜಿತರಾಗಿ ನಿಶ್ಶಸ್ತ್ರರಾದ ಪ್ರಜೆಗಳ ಮೇಲೆ ಭೂಮ್ಯಾಕಾಶಗಳಿಂದ ದಾಳಿಮಾಡಿದರು. ದೇಶನಾಯಕರಾದ ಗಾಂಧಿ, ನೆಹರೂ, ಪಟೇಲ ಆಜಾದರನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ತೀರ್ಮಾನವಾದ ಕೆಲ ಗಂಟೆಗಳಲ್ಲೇ ಬಂಧಿಸಿದ ನಂತರ ಭಾರತದ ನಗರಗಳೇನು, ಹಳ್ಳಿ ಪ್ರದೇಶಗಳೇನು, ಎಲ್ಲಾ ಕಡೆಗಳಲ್ಲೂ ಪ್ರಚಂಡದಬ್ಬಾಳಿಕೆ ಅತ್ಯಾಚಾರಗಳು ನಡೆದವು. ಆಧುನಿಕ ಶಸ್ತ್ರಗಳ ದೃಷ್ಟಿಯಿಂದ ಅಸಮಾನರಲ್ಲಿಯ ಈ ಸಂಘರ್ಷಣೆಯಿಂದ ಭಾರತೀಯರ ಶಕ್ತಿ-ಉತ್ಸಾಹಗಳು ಕುಗ್ಗಲಿಲ್ಲ. ಆಕಸ್ಮಿಕ ದಾಳಿಯಿಂದ ಪ್ರಜೆಗಳು ನಿರ್ವೀರ್ಯರಾಗಿ ಭಯಭೀತರಾಗಲಿಲ್ಲ.

ಬೀಹಾರದಲ್ಲಿ ವಿಮಾನಗಳಿಂದ ಗುಂಡುಗಳ ಮಳೆಗರೆದು ಜನರನ್ನು ಕೊಂದರೂ ಬೀಹಾರದ ಕೆಲ ಜಿಲ್ಲೆಗಳಲ್ಲಿ ಒಂದೆರಡು ತಿಂಗಳು ಬ್ರಿಟಿಷರ ರಾಜ್ಯಭಾರವೇ ಇದ್ದಿಲ್ಲವೆನ್ನಬಹುದು. ಬೀಹಾರದ ನಂತರ ಕರ್ನಾಟಕದ ಇತಿಹಾಸವೂ ಕೂಡ ಅಷ್ಟೆ ಸುಪ್ರಶಿದ್ಧವಾದುದು. ಕರ್ನಾಟಕದ ಸ್ತ್ರೀ ಪುರುಷರು ಅಪರಮಿತ ತ್ಯಾಗಗಳನ್ನು ಮಾಡಿ, ಅನುಪಮ ಧೈರ್ಯದಿಂದ ಸರಕಾರದ ದಬ್ಬಾಳಿಕೆಯನ್ನೆದುರಿಸಿ, ವೀರೋಚಿತ ಕಾರ್ಯಗಳಿಂದ ಭಾರತ ಸ್ವಾತಂತ್ರ್ಯೋದ್ಯಮಕ್ಕೆ ಕಳೆಯನ್ನು ಕೊಟ್ಟರು. ಈ ಉದ್ಯಮದಲ್ಲಿ ಬಲಿದಾನಗೈದು ಪ್ರಾಣಾರ್ಪಣ ಮಾಡಿದ ಶ್ರೀ ಮಹದೇವ ವೈಲಾರ ಮತ್ತು ಸಂಗಡಿಗರನ್ನು ಸ್ಮರಣೆಮಾಡದಿರಲಾರೆವು.

ಪ್ರಜೆಗಳ ಹೋರಾಟವು ಅಹಿಂಸಾತ್ಮಕವಿದ್ದರೆ ಆಳರಸರು ಶಸ್ತ್ರಾಸ್ತ್ರಗಳಿಂದ ಲಾಠಿಗಳಿಂದ ಗ್ಯಾಸ್‌ನಿಂದ ಜನರನ್ನು ಹತ್ತಿಕ್ಕಲು ಯತ್ನಿಸಿದರಲ್ಲದೆ ಅನೇಕ ಊರುಗಳಲ್ಲಿ ಸ್ತ್ರೀಯರ ಮಾನಭಂಗವನ್ನೂ ನಡೆಸಿದರು. (ಶಿ. ಪಿ. ಚೀಮೂರಿನ ಅತ್ಯಾಚಾರವು ಎಂದಿಗೂ ಮರೆಯತಕ್ಕದ್ದಲ್ಲ. ಸರಕಾರದವರು ಸಾವಿರಾರು ಜನರನ್ನು ಗುಂಡಿನಿಂದ ಸುಟ್ಟರು. ಕಾಂಗ್ರೆಸ್ ಕಾರ್ಯಾಲಯಗಳನ್ನು ನೆಲ ಸಮಮಾಡಿದರು. ರಾಷ್ಟ್ರಧ್ವಜವನ್ನು ಅವಮಾನಗೊಳಿಸಿದರು. ಲಕ್ಷಾಂತರ ಸ್ತ್ರೀ ಪುರುಷರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟರು. ಶಿಕ್ಷೆಗುರಿಮಾಡಿ ಕೆಟ್ಟ ಆಹಾರ ಕೊಟ್ಟರು. ಜೈಲಿನಲ್ಲಿ ಅನೇಕರು ಸತ್ತರು. ಅಜೀವಪರ್ಯಂತ ಕೆಲಸಕ್ಕೆ ಬಾರದವರಾದರು.

ಬಳ್ಳಾರಿ ಜಿಲ್ಲೆಯಲ್ಲಿ ಪ್ರಚಾರ

—: ಕೆಲ ಘಟನೆಗಳು :—

ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಪ್ರಮುಖ ಕಾಂಗ್ರೆಸಿಗರನೆಲ್ಲಾ ಸ್ಥಾನಬದ್ಧತೆಯಲ್ಲಿಟ್ಟರು. ಆಗಷ್ಟ ತಿಂಗಳಾನವಾದ ಕೂಡಲೇ ಜಿಲ್ಲೆಯ ಮುಖಂಡರಾದ ಶ್ರೀ ಟೇಕೂರು ಸುಬ್ರಹ್ಮಣಂರವರು ಜಿಲ್ಲೆಯಲ್ಲೆಲ್ಲಾ ಸಂಚರಿಸಿ ಜನರಿಗೆ ನಿಜಾಂಶಗಳನ್ನು ತಿಳಿಯಹೇಳಿ, ಸರಕಾರದ ಅನ್ಯಾಯ ದಬ್ಬಾಳಿಕೆಯನ್ನು ಖಂಡಿಸಿದರು ಹೊಸಪೇಟೆಯಿಂದ ಶ್ರೀ ಅಸುಂಡಿ ತಿರುಮಲರಾಯ ನೇತೃತ್ವದಲ್ಲಿ ಗಣಪತಿ, ಜಂಬಣ್ಣ, ಶಿವದೇಶಾಯಿಯವರು ಪಶ್ಚಿಮ ತಾಲೂಕಗಳ ಸಂಚಾರ ಕೈಗೊಂಡು ಅನೇಕ ಹಳ್ಳಿಗಳನ್ನು ಸಂದರ್ಶಿಸಿ ಜನ

ತೆಗೆ ಸರ್ಕಾರದ ಅನ್ಯಾಯಗಳನ್ನು ವ್ಯಕ್ತಪಡಿಸಿದರು. ಬಳ್ಳಾರಿ ಹೊಸಪೇಟೆಗಳಲ್ಲಿ ಪ್ರಭಾತ ಫೇರಿಯು ಒಂದು ತಿಂಗಳವರೆಗೂ ಯಶಸ್ವಿಯಾಗಿ ನಡೆಯಿತು. ಆಲೂರಿನಲ್ಲಿ ಶೇಂದಿ ಕಂಟ್ರಾಕ್ಟ್‌ಗಳ (Toddy Sales) ಲಿಕೆಟಿಂಗಾಯಿತು. ಆದವಾನಿಯಲ್ಲಿ ಸರ್ಕಾರದ ನಿಯಮಗಳನ್ನುಲ್ಲಂಘಿಸಿ ಮೆರವಣಿಗೆಗಳನ್ನು ತೆಗೆಯಲಾಯಿತು. ಬಸಿಗೇರಿ ಕರಣಂ ರಾಮರಾಯರು ಕೆಲಸಕ್ಕೆ ರಣು ಹೊಡೆದು ರಿಕಾರ್ಡುಗಳ ಕಟ್ಟನ್ನು ಆದವಾನಿ ತಾಲುಕಾಫೀಸಿಗೆ ಹೇರಿಸಿ ಕಳುಹಿಸಿದರು. ಕಲ್ಲುದೇವನ ಕ್ಷಂಟೆಯ ಶ್ರೀ ಸಿವಾರೆಡ್ಡಿಯವರ ನೇತೃತ್ವದಲ್ಲಿ— ಸುಮಾರು 15—16 ಜನ ಗ್ರಾಮಾಧಿಕಾರಿಗಳೂ, ತಲಾರಿಗಳೂ ನೌಕರಿ ಬೇಡವೆಂದಾಗಿ ಹೇಳಿದರು.

ಪೋಲೀಸ್ ಅತ್ಯಾಚಾರ :—

ಸರ್ಕಾರವ ದಬ್ಬಾಳಿಕೆಯನ್ನು ಖಂಡಿಸಲು 16 ವರ್ಷ ವಯಸ್ಸಿನೊಳಗಣ ಚಿಕ್ಕಬಾಲಕರ ತಂಡಗಳು ಆದವಾನಿಯಲ್ಲಿ ಮೆರವಣಿಗೆ ಹೊರಡಿಸುವ ವಾಡಿಕೆ ಇತ್ತು. ಅಲ್ಲಿ 1942 ರ ಆಖ್ಯೈರಿನಲ್ಲಿ ಕೆಲ ಪೋಲೀಸ್ ಉದ್ಯೋಗಸ್ಥರು ಬಾಲಕರನ್ನು ಹೊಡೆದು ಕ್ರೂರವಾಗಿ ಹಿಂಸಿಸಿದರೆಂದು ಗೊತ್ತಾಗಿದೆ.

ಆಲಿಪುರದ ಲಾಠಿ ಛಾರ್ಜು :- ಶ್ರೀ ವಿನಾಯಕ ಚತುರ್ಥಿಯದಿನ (14 ನೆಯ ಸೆಪ್ಟೆಂಬರ್ 1942) ಬಳ್ಳಾರಿ ನಗರದ ಆಲಿಪುರದ ಜೈಲಿನಲ್ಲಿ ಭೀಷಣವಾದ ಲಾಠಿ ಛಾರ್ಜು ಸುಪರೆಂಟ 'ಹೌ' ಎಂಬುವರ ಆಜ್ಞೆಯಿಂದ ನಡೆಯಿತು. ಹೊರಗಿನಿಂದ ಬಂದ ರಿಸರ್ವ ಪೋಲೀಸರೂ, ಒಳಗಿನ ಸಿಪಾಯರೂ- ತಮ್ಮ ಕೈಗಳು ಸೋಲುವವರೆಗೆ ಮನದಣಿಯ ಹೊಡೆದರು. 300 ರಾಜಕೀಯ ಕೈದಿಗಳು ಪೆಟ್ಟುತಿಂದರು, ಅನೇಕರಿಗೆ ಕೈ ಕಾಲುಗಳು ಮುರಿದವು.

LIFE
FIRE
MARINE
MOTOR

New India Assurance Co., Ltd.

PLEASE CONSULT

S. Krishnamurthy Rao, B. Sc.

Principal Agent, BELLARY.

WORKMEN'S COMPENSATION ETC.

★ ಬೆಂಕಿಯ ಅನಾಹುತಕ್ಕೆ
★ ಸಮುದ್ರ ಸಂಚಾರದ ಅಪಾಯಕ್ಕೆ
★ ಮೋಟಾರ್ ಕಾರುಗಳ ಸಂರಕ್ಷಣೆಗೆ
★ ಕೂಲಿಕಾರರ ಪರಿಹಾರ ದ್ರವ್ಯಕ್ಕೆ
★ ಮರಣಾನಂತರ ಕುಟುಂಬ ಸಂರಕ್ಷಣೆಗೆ.

[ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ ಲಿಮಿಟೆಡ್] ದಲ್ಲಿ

– ವಿಮೆ ಮಾಡಿರಿ –

ಅತ್ಯಂತ ವಿಸ್ತೃತ ವಿಮಾಕ್ಷೇತ್ರ

ಇಂದೇ ನಮ್ಮ ಸಲಹೆ ಪಡೆಯಿರಿ.

ಎಸ್ ಕೃಷ್ಣಮೂರ್ತಿರಾವು ಬಿ. ಎಸ್. ಸಿ.,
ಮುಖ್ಯ ಏಜೆಂಟರು, **ಬಳ್ಳಾರಿ.**

ಗೃಹಪರಿಶೋಧನೆ, ಬಂಧನ:- ಅನಧಿಕೃತ ರಾಜಕೀಯ ಸಾಹಿತ್ಯಕ್ಕಾಗಿ ಬಳ್ಳಾರಿ ಜಿಲ್ಲೆಯ ಅನೇಕ ಭಾಗಗಳಲ್ಲಿ ಕಾಂಗ್ರೆಸಿಗರ ಮನೆಗಳನ್ನು ಪರಿಶೋಧಿಸಿದರು. ಬಳ್ಳಾರಿಯಲ್ಲಿ ಡಿ. ಹೆಚ್. ವೆಂಕೋಬರಾವು, ವೇಣುಗೋಪಾಲಾಚಾರಿ. ವಗೈರೆಯವರ ಮನೆಗಳನ್ನೂ, ಕೊಟ್ಟೂರಿನಲ್ಲಿ 'ಬಿಂದು'ವಿನ ಮನೆಯನ್ನೂ, ಹೊಸಪೇಟೆಯಲ್ಲಿ ವರ್ಧಮಾನ, ಕುಸನೂರು K. Y. M. A. ಇವರ ಮನೆಗಳನ್ನೂ, ನಾರಾಯಣದೇವರ ಕೆರೆಯಲ್ಲಿ ಬಾರಿಕರ ಮಾನಪ್ಪ, ಆರ್ಶಿಲಕ್ಷ್ಮಿ ನಾರಾಯಣಾಚಾರ್ಯ, ಜೆ ದೊಡ್ಡ ಗೋವಿಂದಪ್ಪ, ಎಸ್. ಸುಬ್ರಹ್ಮಣ್ಯ ಶೆಟ್ಟಿ ಇವರ ಮನೆಗಳನ್ನೂ ಬೆಣ್ಣೆಹಳ್ಳಿಯಲ್ಲಿ ಶ್ರೀ ಚಿಗಟೇರಿ ಚನ್ನನಗೌಡ, ಬಸಲಿಂಗಪ್ಪನವರ ಮನೆಗಳನ್ನು ಪರಿಶೋಧಿಸಿ ಇವರಿಬ್ಬರನ್ನೂ, ಪುಟ್ಟಪ್ಪ ತಳವಾರ ಗೋಣಿ ಎಂಬ ಮತ್ತಿಬ್ಬರನ್ನೂ ಹರಪನಹಳ್ಳಿ ಜೇಲಲ್ಲಿ ಒಂದು ತಿಂಗಳವರೆಗೆ ಬಂಧಿಸಿಟ್ಟಿದ್ದರು.

1942 ನೆ ಸೆಪ್ಟೆಂಬರ್ ತಿಂಗಳಲ್ಲಿ ಹೊಸಪೇಟೆ ಮುನಿಸಿಪಲ್ ಹೈಸ್ಕೂಲ್ ರಿಕಾರ್ಡ್ಸ್‌ರೂಂ ಮತ್ತು ಲೈಬ್ರರಿಗೆ ಬೆಂಕಿ ಹತ್ತಿ ನಷ್ಟವಾದ ಕಾರಣ ಇಪ್ಪತ್ತು ಜನರನ್ನು ಬಂಧಿಸಿ ಈ ಕೆಳಗಣ 7 ಜನರನ್ನು ಸಬ್ ಜೈಲಲ್ಲಿಟ್ಟು ಕೆಟ್ಟರೀತಿಯಿಂದ ನಡೆಸಿಕೊಂಡು ಇವರ ಮೇಲೆ ಪ್ರಥಮವರ್ಗದ ಮ್ಯಾಜಸ್ಟೇಟರ ಕೋರ್ಟಿನಲ್ಲಿ ಕೇಸಿಡಲಾಯಿತು.

1. ಬಿ. ವರ್ಧಮಾನ 2. ಎಸ್. ವೀರಣ್ಣ
3. ಎ. ಕೊಟ್ರಪ್ಪ 4. ಈ. ನಾರಾಯಣಪ್ಪ
5. ಕೊಪ್ಪಳದ ಕೃಷ್ಣರಾವ್ 6 ಆರ್. ಅಪ್ಪಣ್ಣ
7. ಬಡಿಗೇರ ವೆಂಕೋಬಣ್ಣ

1942 ನೆ ಡಿಶಂಬರ್ ಕೊನೆಯವಾರದಲ್ಲಿ ಬಳ್ಳಾರಿ ಸೆಷನ್ಸ್ ಕೋರ್ಟಿನಲ್ಲಿ ಬಿಡುಗಡೆಯಾಯಿತು.

ರಾಜಕೀಯ ಕೈದಿಗಳಿಗೂ, ಸ್ಥಾನಬದ್ಧ ಕುಟುಂಬೀಕರಿಗೂ ಮತ್ತು ಇತರ ರಾಜಕೀಯ ಚಟುವಟಿಕೆಗಳಿಗೂ ಶ್ರೀ ವೇಣುಗೋಪಾಲಾಚಾರಿ, ಲಿಂಗಾರೆಡ್ಡಿ, ಚಿದಾನಂದಶಾಸ್ತ್ರಿ ವಗೈರೆ ಮಿತ್ರರು ಹಣ ಸಂಗ್ರಹಿಸಿ ಸಹಾಯಮಾಡಿದರು. ಕೈದಿಗಳ ಕುಟುಂಬೀಕರು ಬಂದಾಗ ಅವರಿಗೆ ಸಂಭಾವಣೆಗೇರ್ಪಡಿಸಿ ತಕ್ಕ ಸೌಕರ್ಯಗಳನ್ನೊದಗಿಸಿದರು.

ಬಳ್ಳಾರಿ ಜಿಲ್ಲೆಯ ಸ್ಥಾನ ಬದ್ಧರು 64

[ಆಗಷ್ಟ್ 9 ನೆಯ ತಾ ಶ್ರೀ ಶೇತಾರಾಮರೆಡ್ಡಿಯವರನ್ನು ಬಂಧಿಸಿದರು. ಉಳಿದವರೆಲ್ಲಾ 1942 ನೆ ನವಂಬರ್‌ದೊಳಗಾಗಿ ಬಂಧಿಸಲ್ಪಟ್ಟರು. 1 ರಿಂದ 6 ರವರೆಗಿನ ಸ್ಥಾನಬದ್ಧರ ಹೊರತಾಗಿ 58 ಜನರು '43 ರ ಡಿಶಂಬರದಲ್ಲಿ ಬಿಡುಗಡೆಯಾದರು. ಆರು ಜನರು 1944 ನೆಯ ಜೂನ್‌ದಿಂದ ಡಿಶಂಬರ್‌ದೊಳಗಾಗಿ ಬಿಡುಗಡೆಯಾದರು. ಸ್ಥಾನಬದ್ಧರು 1943 ನೆಯ ಅಕ್ಟೋಬರ್ 1 ರವರಿಗೆ ವೆಲ್ಲೂರು ಜೇಲಲ್ಲಿಯೂ, ಅಲ್ಲಿಂದ ತಂಜಾವೂರು ಜೇಲಲ್ಲಿಯೂ ಇಡಲ್ಪಟ್ಟರು.]

1	ಹಾಲರ್ವಿ ಶೇತಾರಾಮರೆಡ್ಡಿ	ಬಳ್ಳಾರಿ
2	ಟಿ. ಸುಬ್ರಹ್ಮಣ್ಯಂ	,,
3	ಟಿ. ಬಿ. ಕೇಶವರಾವು	,,
4	ಎಂ. ಬಿಂದುಮಾಧವ	,,
5	ಬಿ. ಅನಂತಾಚಾರ್ಯ	ಹೊಸಪೇಟೆ
6	ಟಿ. ಎಸ್. ಗುರುಲಿಂಗಪ್ಪ	ಕೊಟ್ಟೂರು
7	ಡಿ. ರಾಮಮೂರ್ತಿ	ಬಳ್ಳಾರಿ
8	ಡಿ. ಹೆಚ್. ವೆಂಕೋಬರಾವು	,,
9	ಡಾಕ್ಟರ್ ವೆಂಕಟರಮಣ	,,
10	ಬಿ. ಭೀಮಸೇನಾಚಾರಿ	,,
11	ಜಿ ಶರಣಪ್ಪ	ಕೊಟ್ಟೂರು
12	ಅ. ನಂಜಪ್ಪ	,,
13	ಎಸ್. ಗೋವಿಂದರಾವ್	,,
14	ಎಂ. ನಾರಾಯಣರಾವು	,,
15	ಬಿ. ತಿಮ್ಮಪ್ಪ	,,
16	ಟಿ. ವೆರುಶುರಾಮಪ್ಪ	,,
17	ಅಸುಂಡಿ ತಿಮ್ಮಣ್ಣ	ಹೊಸಪೇಟೆ
18	ಕಟ್ಟೆ ಶ್ರೀನಿವಾಸಾಚಾರಿ	,,
19	ಎಸ್. ಗಣಪತಿ	,,

20	ಹಿಂಡಿ ಶಿದ್ದಪ್ಪ	ಹೊಸಪೇಟೆ
21	ಕೆ. ಎಸ್. ಜಂಬಣ್ಣ	,,
22	ಎಸ್. ವಿ. ದೇಶಾಯಿ	,,
23	ಎಸ್. ಪ್ರಹ್ಲಾದರಾವು	,,
24	ವೈ. ಡಿ. ಕೃಷ್ಣಮೂರ್ತಿ	,,
25	ದಳವಾಯಿ ಭೀಮಪ್ಪ	ಅ. ಗುದಿ.
26	ವಜ್ರಹನುಮಂತಪ್ಪ	,,
27	ದಳವಾಯಿ ಅಂಬಣ್ಣ	,,
28	ಆರ್. ವೀರಣ್ಣ	ವೆಂಕಟಾಪುರ
29	ಜಿ. ಭೀಮಪ್ಪ	ರಾಮಸಾಗರ
30	ಹೆಚ್. ಎಂ. ಬಸಯ್ಯ	ಹಾರಕಭಾವಿ
31	ಟಿ. ಸಿದ್ದನಗೌಡ	ಉಜ್ಜಿನಿ
32	ಎ. ಕರಿವೀರಪ್ಪ	,,
33	ಎಂ ರುದ್ರಪ್ಪ	,,
34	ಎಂ. ಮರುಳನಗೌಡ	,,
35	ಕೆ. ಗೂಳಪ್ಪ	,,
36	ಎಸ್. ಬಶೆಟ್ಟಪ್ಪ	,,
37	ಟಿ. ಆರ್. ವೀರಪ್ಪ	ತೂಲಹಳ್ಳಿ
38	ಹೆಚ್. ಬಸಪ್ಪ	,,
39	ಜಿ. ಮರುಳಪ್ಪ	,,
40	ಟಿ. ಎಂ. ಚನ್ನಬಸಯ್ಯ	,,
41	ಎಂ. ಬೊಮ್ಮಲಿಂಗಯ್ಯ	,,
42	ಕೆ. ವೆಂಕಾರೆಡ್ಡಿ	ಅರಪನಾಳು
43	ಎಂ. ಪಿ ರೇವಣಸಿದ್ದನಗೌಡ	ಮೂದಹಳ್ಳಿ
44	ಎಲ್. ಸಾಕ್ಯಾನಾಯ್ಕ	ಚಿಕ್ಕಜೋಗಳ್ಳಿತಾಂಡ
45	ಎಂ. ಮುನಿಯಾನಾಯ್ಕ	,,
46	ಪಿ. ಎಲ್. ಭೋಜಾನಾಯ್ಕ	,,
47	ಇಜಾರಿ ಶಿರಪಪ್ಪ.	ಹರಪನಹಳ್ಳಿ
48	ಎಸ್. ಬಿ. ಮುಕ್ಕಣ್ಣ	,,
49	ಬಣಕಾರ ಹೊನ್ನಪ್ಪ	,,
50	ಮುದಗಲ್ಲು ನಾಗಪ್ಪಶೆಟ್ಟಿ	,,
51	ಕೆ. ಶೇತೂರಾಮಾಚಾರು	,,
52	ಹೆಚ್. ಎಂ. ಚಂದ್ರಯ್ಯ	,,
53	ಎಂ. ಶಿದ್ದಲಿಂಗಯ್ಯ	,,
54	ಕೆ. ವೀರಭದ್ರಪ್ಪ	,,
55	ಕೆ. ರುದ್ರಪ್ಪ	,,
56	ಹೊನ್ನಾಳಿ ಎಂ. ಹೆಚ್. ರಂಗಪ್ಪ	,,
57	ಹೊನ್ನಾಳಿ ಶಿ. ಈಶ್ವರಪ್ಪ	,,
58	ಎ. ವೆಂಕಟರೆಡ್ಡಿ	ಪೆದ್ದಕಡಬೂರು
59	ಎಸ್. ರಾಮರೆಡ್ಡಿ	ರ್ಯಾಕಟ್ಲ
60	ಕೆ. ಶಿವಾರೆಡ್ಡಿ	ಕಲ್ಲುದೇವನಕುಂಟೆ
61	ಪಿ. ನಾರಾಯಣರೆಡ್ಡಿ	,,
62	ಲಕ್ಷ್ಮಿರೆಡ್ಡಿ	,,
63	ಲ್ಯಾಂಗ್ಲಿ ಭೀಮಸೇನರಾವು	ಆದವಾನಿ
64	ಡಾಕ್ಟರ್ ಲಕ್ಷ್ಮಣ್	,,

ಬಂಧನ ಮತ್ತು ಶಿಕ್ಷೆ.

ಬಳ್ಳಾರಿ ನಗರದಲ್ಲಿ

ಸತ್ಯಾಗ್ರಹಿಗಳು ತಂಡತಂಡಗಳಲ್ಲಿ ಗಾಂಧಿ ಪಟ ಮತ್ತು ಧ್ವಜದೊಂದಿಗೆ ಮೆರವಣಿಗೆಯಲ್ಲಿ ಹೊರಟು ಸರಕಾರದ ಶಾಸನಗಳನ್ನುಲ್ಲಂಘಿಸಿ ಶಿಕ್ಷೆಗೆ ಗುರಿಯಾದರು. ಮೊದಲನೆಯ ಮೂರು ತಂಡಗಳ 24 ಜನರಿಗೆ 3 ತಿಂಗಳು ಕಠಿಣ ಶಿಕ್ಷೆ, 50 ರೂ. ದಂಡವಾಯಿತು.

ಅಂಬಾ ಭವನ (ರಿಜಿಸ್ಟರ್ಡ್)

ಬೆಂಗಳೂರು ರೋಡು, **ಬಳ್ಳಾರಿ.**

ರುಚಿಕರ! ಶುಚಿಕರ!! ಹಿತಕರ! ಆನಂದಕರ!!

ಬಗೆ ಬಗೆಯ ಸಿಹಿ ಭಕ್ಷ್ಯಕಾರಗಳು
ಬಿಸಿಲಿಂದ ಬಂದವರಿಗೆ ತಂಪಾದ ಪಾನೀಯಗಳು
ಹಸಿದು ಬಂದವರಿಗೆ ಬಿಸಿಬಿಸಿ ತಿಂಡಿಗಳು
ನಮ್ಮ ಕಾಫಿ, ಟೀ, ಪಾನೀಯಗಳ ವೈಶಿಷ್ಟ್ಯ ಬೇರೆ

ಟಿಫನ್ ಬೇಕಾದರೆ ಎಲ್ಲಿಗೆ ಹೋಗಲಿ?
ಇನ್ನೆಲ್ಲಿಗೆ ಹೋಗುವೆ? ಅಂಬಾ ಭವನಕ್ಕೆ ನಡೆ.

ಪ್ರಥಮ: 13 ಜನ–ದಾವೋದರಸಿಂಗ್, ಹೇಮರಾಜ್, ಪೊಂವಾಪತಿ, ಲಕ್ಷ್ಮಿನಾರಾಯಣ, ಮಲ್ಲೇಶಪ್ಪ, ಬಿ. ಕೃಷ್ಣಮೂರ್ತಿ, ಕೆ. ವೆಂಕಟರಾಮಯ್ಯ, ಕೆ. ಸುಂದರಂ, ಕಟ್ಟಾ ಅಚ್ಯುತನಾರಾಯಣ, ಜಿ. ಡಿ. ಕೃಷ್ಣಮೂರ್ತಿ, ಜಿ. ಸುಬ್ಬರಾಯುಡು, ಟಿ ಬಿ. ಆಂಜನೇಯಲು ಮತ್ತು ಜಿ. ಎ. ಸತ್ಯನಾರಾಯಣ.

ದ್ವಿತೀಯ: 7 ಜನ–ಬಳೆವೀರಭದ್ರಪ್ಪ, ಕೋರಿ ವೀರಭದ್ರಪ್ಪ, ಗೌತ್ರರುದ್ರಪ್ಪ, ಕೆ. ಕೊಟ್ರಪ್ಪ, ರೊಟ್ಟಿ ಸಚ್ಚಿದಾನಂದಯ್ಯ, ಬಿ. ಎಂ. ಮಂಗಳುಸಿದ್ದಯ್ಯ ಮತ್ತು ಎಂ ಲಿಂಗಪ್ಪ.

ತೃತೀಯ: 4 ಜನ–ಕೆ. ಮಲ್ಲಯ್ಯ. ಆರ್. ಕೊಮೂರಯ್ಯ, ಶಿ. ಜಂಬುನಾಥ ಮತ್ತು ಬಿ. ಉದ್ದಾನಪ್ಪ.

ಚತುರ್ಥ: ಈ ತಂಡದ 5 ಜನರಿಗೆ 6 ತಿಂಗಳ ಕಠಿಣಶಿಕ್ಷೆಯಾಯಿತು–ಬಿ. ಕೆ. ನರಸಿಂಹ ಶಾಸ್ತ್ರಿ, ಬಿ. ಗೋಪಾಲರಾವ್, ಕೆ. ಸೂರ್ಯನಾರಾಯಣ, ಡಿ. ಶಿದ್ದಪ್ಪ ಮತ್ತು ಶಂಕರಶರ್ಮ.

ಪಂಚಮ: ಈ ತಂಡದ 8 ಜನರಿಗೆ ತಲಾ 100/- ಗಳ ಜುಲ್ಮಾನೆಮಾತ್ರ ಆಯಿತು–ಎಸ್. ನಾರಾಯಣ, ವೆಂಕಟಸುಬ್ಬಯ್ಯ, ಕೆ. ರಾಮಾಚಾರ್ಯ, ಪುಲ್ಲಯ್ಯ, ರುಕ್ಮಾಜಿ, ಪಿ ಪ್ರಹ್ಲಾದಾಚಾರ್, ಆರ್. ಶಂಕರ್ ಮತ್ತು ಐ ಬಸವರಾಜ್. **[ದಂಡವನ್ನು ತುಂಬಲಿಲ್ಲ]**

ಷಷ್ಠ: 3 ಜನ–ಎಸ್. ಕೆ. ರಾಮಾಚಾರ್, ಚಿನ್ನಪ್ಪ (ಬಳ್ಳಾರಿ) ರಾಯದುರ್ಗದಲ್ಲಿ ಬಂಧಿತರಾಗಿ ಸಿರುಗುಪ್ಪೆಯಲ್ಲಿ 6 ತಿಂಗಳು ಕಠಿಣಶಿಕ್ಷೆಗೊಳಗಾದರು. ಎಸ್. ಕೃಷ್ಣಮೂರ್ತಿಯನ್ನು 21 ದಿನ ಬಂಧಿಸಿ ಬಿಡುಗಡೆ ಮಾಡಿದರು.

ಸ್ವಾತಂತ್ರ್ಯದಿನ ಶಿಕ್ಷೆ: 26–1–1943 ರ ದಿನ ಚಿದಾನಂದಶಾಸ್ತ್ರಿ, ಆರ್. ಹನುಮಂತರಾಯರು ಧ್ವಜಾರೋಹಣಮಾಡಿ 9 ತಿಂಗಳ ಕಠಿಣಶಿಕ್ಷೆಗೊಳಗಾದರು. ಶ್ರೀಮತಿ ಆರ್ ವೆಂಕಮ್ಮನವರಿಗೆ (70 ವರ್ಷ) 6 ತಿಂಗಳ ಕಠಿಣಶಿಕ್ಷೆಯಾಯಿತು. 26–1–44 ರದಿನ ಶ್ರೀ ಕಲ್ಲವ್ವಾಚ್ಯಾರಿಗೆ 6 ತಿಂಗಳ ಶಿಕ್ಷೆಯಾಯಿತು.

ಕುರುಗೋಡಿನಲ್ಲಿ: ಶ್ರೀ ರಾಮಚಂದ್ರಗುಪ್ತ 18 ತಿಂಗಳ ಕಠಿಣಶಿಕ್ಷೆ, (ಸಾಹಿತ್ಯ) ಚಂದ್ರಶೇಖರಾಚಾರಿ, ದಾಸರ ದೊಡ್ಡಬಸಪ್ಪ ಮತ್ತು ಎಸ್. ದೊಡ್ಡನಗೌಡರಿಗೆ 6 ತಿಂಗಳ ಶಿಕ್ಷೆ

ಆಲೂರು ತಾಲೂಕು

16 ಜನರ ಬಂಧನ, 14 ಜನರಿಗೆ 3 ತಿಂಗಳ ಕಠಿಣಶಿಕ್ಷೆ 100 – ದಂಡ (ಅಪರಾಧ/ಪಿಕೆಟಿಂಗ್) ವೆಂಕಟೇಶ್ವರರಾವ್–ಹತ್ತಿಬೆಳಗಲ್ಲು, ವೀರಭದ್ರಯ್ಯ–ಮೊಲಗವೇಲಿ; ವೆಂಕಟಲಕ್ಷ್ಮಿರೆಡ್ಡಿ, ರಾಮಕೃಷ್ಣರೆಡ್ಡಿ, ಬಿ ಸಿದ್ಧರಾಮಪ್ಪ–ನಗರಡೋಣಿ; ಪಾಪಣ್ಣ ಚೌಧರಿ, ಬಾಲಪ್ಪ, ಬಸವನಗೌಡ–ರಾಯದುರ್ಗ; ನೇಮಕಲ್ಲು ಗ್ರಾಮದ ಸೀತಾರಾಮರೆಡ್ಡಿ, ಸಂಜೀವರೆಡ್ಡಿ, ವಡ್ಡೆರಾಮಣ್ಣ, ಅಕ್ಬರ್ ಸಾಹೇಬ್, ನರಸಿಂಹರೆಡ್ಡಿ, ಅಯ್ಯಪ್ಪರೆಡ್ಡಿ. ಆಲೂರುಗ್ರಾಮದ ಇಬ್ಬರನ್ನು (ಮೈನರ್ ಹುಡುಗರು) ಬಿಡುಗಡೆಮಾಡಲಾಯಿತು. ಆಲೂರುತಾಲೂಕು ಆಫೀಸಿನಮುಂದೆ 8–9–42 ರ ದಿನ ಟಾಡಿಸೇಲ್ಸ್ ನಡೆಯಬೇಕಾದರೆ ಇವರ ಬಂಧನವಾಯಿತು. ಅಧಿಕಾರಿಗಳಿಗೆ ರಾಜೀನಾಮೆಕೊಡಿರಿ ಎಂದು ದಸ್ಕತ್ತುಮಾಡಿ ಕೇಳಿದ ಶ್ರೀ ವೆಂಕಟೇಶರಾಯರಿಗೆ ಮತ್ತೆ 3 ತಿಂಗಳು ಮತ್ತು 100 ರೂ. ದಂಡ ವಿಧಿಸಲಾಯಿತು.

ಹೊಸಪೇಟೆ ತಾಲೂಕು

(1) ವರ್ಧಮಾನ 1 ತಿಂಗಳು ಕಠಿಣಶಿಕ್ಷೆ (ಅನಧಿಕೃತ ಸಾಹಿತ್ಯಕ್ಕಾಗಿ) (2) ಪಿ. ಎಸ್. ಕುಸನೂರು 3½ ತಿಂಗಳು ವಿಚಾರಣೆ ನಂತರ 3 ತಿಂಗಳ ಶಿಕ್ಷೆ (3) ಲಿಂಗಪ್ಪ ವ್ಯಾಟಿ 3 ತಿಂಗಳು 50 ರೂ. ದಂಡ (4) ಡಾಕ್ಟರ್ ಮಂಜುನಾಥ, ಕಂಪ್ಲಿ (ಸಾಹಿತ್ಯ ಹೊರತಪ್ಪಿಕ್ಕೆ) 18 ತಿಂಗಳು ಕಠಿಣಶಿಕ್ಷೆ. (5) ಮರಿಸ್ವಾಮಯ್ಯ, ನಾಗ್ಪುರ್ 18 ತಿಂಗಳ ಕಠಿಣಶಿಕ್ಷೆ. (6) ವಿ ನಾರಾಯಣರಾವು ನಾಗ್ಪುರ್ 18 ತಿಂಗಳ ಕಠಿಣಶಿಕ್ಷೆ

ನವಭಾರತಕ್ಕೆ ಚಂದಾದಾರರಾಗಿರಿ

ಆದವಾನಿ ತಾಲೂಕು

ಪ್ರಥಮದಳ:—

ಆದವಾನಿಯಲ್ಲಿ 3-9-42 ರ ದಿನ ಸಭೆ ನಡೆಯಬೇಕಾದರೆ ಪೋಲೀಸರು ಬಂದು 144 ನೆಯ ಕಲಂ ಪ್ರಯೋಗಿಸಿ ಲಾಟಿಛಾರ್ಜುಮಾಡಿ ಈ ಕೆಳಗಣ 6 ಜನರನ್ನು ಬಂಧಿಸಿದರು. ಇವರಿಗೆಲ್ಲಾ 6 ತಿಂಗಳ ಕಠಿಣಶಿಕ್ಷೆ 200 - ದಂಡವಾಯಿತು.

1 ಬಾಲರಾಮಸಿಂಗ್
2 ಹಾಲ್ವಿ ಸತ್ಯನಾರಾಯಣ (ಬಿ ಕ್ಲಾಸ್)
3 ಸೋಮಯಾಜುಲು
4 ಟಿ. ಜಿ. ತಿಮ್ಮಯ್ಯ (ಬಿ ಕ್ಲಾಸ್)
5 ಜಿ. ರಂಗಪ್ಪ
6 ಬುರ್ಲಿಶೇಷಣ್ಣ

ಬಾಲರಾಮಸಿಂಗ್ ಮತ್ತು ಸತ್ಯನಾರಾಯಣ ಇವರಿಗೆ ಭಾಷಣಕೊಟ್ಟದ್ದಕ್ಕಾಗಿ 6 ತಿಂಗಳ ಹೆಚ್ಚಿನಶಿಕ್ಷೆಯಾಯಿತು.

ದ್ವಿತೀಯ:- ಇಬ್ಬರು ಸ್ತ್ರೀಯರು (1) ಬಳೇಕಲ್ಲು ರಾಮಕ್ಕ (2) ನಂಬಿಯಂಕಮ್ಮ 6 ತಿಂಗಳ ಶಿಕ್ಷೆ. ರಾಮುರಾವ್, ಚಂದ್ರಪ್ಪ, ಹೊಟೆಲು ಸಿದ್ದಪ್ಪ, ಪೆರುಪಾಕ್ಷಯ್ಯ, ಕವುತಾಳಂ ಬಸಯ್ಯ, ಕೆ. ಅಂಜನೇಯಲು ಇವರಿಗೆಲ್ಲಾ 6 ತಿಂಗಳ ಶಿಕ್ಷೆಯಾಯಿತು.

ತೃತೀಯದಳ: 21 ಹುಡುಗರು-8-10-'42 ಜಯಂತಿದಿನ ಪೆರವಣಿಗೆ ಹೊರಡಿಸಿ ಬಂಧಿತರಾಗಿ 3 ತಿಂಗಳು ಕಠಿಣ ಶಿಕ್ಷೆಗೆ ಗುರಿಯಾದರು. ಬಾಲಕರು ಬಹಳ ಚಿಕ್ಕವರಾಗಿ ಎಲ್ಲರೂ 16 ವರ್ಷಗಳೊಳಗೆ ಇದ್ದಕಾರಣ ಯಾರೋ ಜಿಲ್ಲಾ ಕೋರ್ಟಿನಲ್ಲಿ ಅಪೀಲು ಮಾಡಿದ್ದರಿಂದ ಜಿಲ್ಲಾ ಜಡ್ಜರವರು ಎಲ್ಲರನ್ನೂ ಎಚ್ಚರಿಕೆಕೊಟ್ಟು ಮುಕ್ತಮಾಡಿದರು.

(1) ಹೆಚ್. ಕೇಶವರೆಡ್ಡಿ (2) ಹೆಚ್. ವಿಜಯಸಿಂಹ (3) ನೈ. ರಂಗರಾವು (4) ಕೆ. ಗೋವಿಂದಶೆಟ್ಟಿ (5) ಹುಸೇನಪ್ಪ (6) ನರಸಿಂಹಮೂರ್ತಿ (7) ಚಲಪತಿ (8) ಕೆ. ಕೃಷ್ಣ (9) ಎ. ವೀರಣ್ಣ (10) ಗೋರ್ತಲ್ ಅಂಜನಿ (11) ಶಾಮ್ಜಿ ವಿಜಯರಾವ್ (12) ಡಿ. ಗೋವಿಂದರಾವ್ (13) ಡಿ. ರಾಘು (14) ನೀಲಕಂಠರಾವು (15) ಗೋವಿಂದಪ್ಪ (16) ರಣಜಿತ್ ಸಿಂಗ್ (17) ಭೀಮು (18) ನಾರಾಯಣ (19) ವೆಂಕೋಬಿ (20) ಸುಂದರಾಚಾರಿ (21) ಕೊಮಾರಸ್ವಾಮಿ.

ನಾಲ್ಕನೆಯದಳ: 6 ಹುಡುಗರು-(1) ಎಂ. ಶ್ರೀನಿವಾಸಾಚಾರ್ (2) ಜಾವಾಜಿ ಪೊಂಪಣ್ಣ (3) ಕೆ. ಗೋವಾಲಶೆಟ್ಟಿ (4) ಉಕ್ಕಲ್ಲಿರಾವು (5) ರಘುಬೀರಸಿಂಹ (6) ಬಿ. ವೀರಣ್ಣ.

Bharat Electric Coffee Works
Bangalore Road. BELLARY.

For quality coffee, pure and fresh to suit every taste and purpose. Our coffee is electrically roasted and ground under expert supervision.

A Trial will Convince You.

ಭಾರತ ಎಲೆಕ್ಟ್ರಿಕ್ ಕಾಫಿ ವರ್ಕ್ಸ್,
ಬೆಂಗಳೂರು ರೋಡು, ಬಳ್ಳಾರಿ.

ವಿದ್ಯುಚ್ಛಕ್ತಿಯ ಸಹಾಯದಿಂದ ಹುರಿದು ಪುಡಿಮಾಡುವ ಪ್ರಶಸ್ತವಾದ ಕಾಫೀಪುಡಿಯು ಸುವಾಸನೆಯಾಗಿಯೂ, ರುಚಿಕರವಾಗಿಯೂ ಇರುವುದು. ಕಾಫಿ ಬೀಜವನ್ನು ಪುಡಿಮಾಡಿ ಕೊಡುತ್ತೇವೆ.

ಐದನೆಯದಳ: 4 ಹುಡುಗರು–(1) ಉಳ್ಳಿಗಡ್ಡಿ ವೀರಣ್ಣ (2) ವೈ ವೀರಣ್ಣ (3) ಹನುಮಂತ (4) ಕೋಸಿಗಯ್ಯ, ಇವರಿಗೆಲ್ಲಾ 6 ತಿಂಗಳ ಶಿಕ್ಷೆಯಾಯಿತು.

ರಾಯದುರ್ಗ ತಾಲೂಕು ಪೋಲೀಸ್ ಸ್ಟೇಷನ್‌ನಲ್ಲಿ ಕಳವಾದ ಬಂದೂಕು ಮದ್ದು ಬಿಕಾರ್ಡಿಗಳ ಸಂಬಂಧದಲ್ಲಿ ಎಂ ತಿಪ್ಪಯ್ಯ, ವೀರಣ್ಣ, ನಂದಾಮಣಿ ಇವರಿಗೆ ಎರಡು ವರ್ಷ ಶಿಕ್ಷೆಯಾಯಿತು.

ಹಡಗಲಿ ತಾಲೂಕು: ಮೂಗಳ:– ಈ ಕೆಳಗಿನ 4 ಜನರು ಹೆಂಡದಂಗಡಿ ವಿಕೆಟ್ ಮಾಡಿ ಹೆಂಡದ ಚೀಲವನ್ನು ಕೊಡದು 18 ತಿಂಗಳ ಕಠಿಣ ಶಿಕ್ಷೆಗೆ 9–10–'42 ಕ್ಕೆ ಗುರಿಯಾದರು.
(1) ಬಿ. ಲಂಕೆಪ್ಪ (2) ಬಿ. ಏಕಾಂಬ್ರಪ್ಪ (3) ನೆಗಳೂರು ಧರ್ಮಣ್ಣ (4) ಇಮಾಂಸಾಹೇಬ್.

ಕೊಡ್ಲಿಗಿ ತಾಲೂಕು:– ಇಲ್ಲಿ ಅಕ್ಟೋಬರ್ 1942 ರಲ್ಲಿ ಬಿ ಎಂ. ಅಜ್ಜಯ್ಯ, ಎಂ. ಬಿಂದುಮಾಧವ, ಎಸ್. ಟಿ. ತಿಪ್ಪೆಸ್ವಾಮಿ, ಹರಾಳು ಚನ್ನನಗೌಡ ಇವರನ್ನು ಬಂಧಿಸಿ ಇವರಮೇಲೆ ಕೇಸಿಟ್ಟಿದ್ದರು. ರುಜುವಾತಾಗಲಿಲ್ಲ 'ಬಿಂದು' ಸ್ಥಾನಬದ್ಧನಾಗಿ ತೆರಳಿದನು. ಉಳಿದವರ ಬಿಡುಗಡೆಯಾಯಿತು.

ಪ್ರೌಢ ಬಾಲಿಕಾಶಾಲೆಯಲ್ಲಿ ಕನ್ನಡ ಶಿಕ್ಷಣ.

ಪ್ರೌಢ ಬಾಲಿಕಾ ಶಾಲೆಯಲ್ಲಿ 1 ನೆಯ ಫಾರಂದಿಂದ ಕನ್ನಡ ಶಿಕ್ಷಣವು ಏರ್ಪಾಟಾಗಿದೆ. ಬಳ್ಳಾರಿ ಕನ್ನಡಿಗರು ತಮ್ಮ ಮಕ್ಕಳನ್ನು ಕನ್ನಡ ವರ್ಗಕ್ಕೆ ಸೇರಿಸಿ ಕನ್ನಡಕ್ಕೆ ಪ್ರೋತ್ಸಾಹವೀಯಬೇಕು. ವೀರಶೈವ ಕೈಯ್ಯರ್ ಎಲಿಮೆಂಟರಿ ಶಾಲೆಯ ಬಾಲೆಯರನ್ನು ಪ್ರೌಢ ಶಾಲೆಗೆ ಸೇರಿಸುವುದಾದರೆ ಖರ್ಚುಕೊಡಲು ಸಿದ್ಧರಿರುವದಾಗಿ ಜಿಲ್ಲಾ ಕರ್ನಾಟಕ ಸಂಘದಕಾರ್ಯದರ್ಶಿ ಶ್ರೀ ಕೆ. ಚನ್ನಬಸಪ್ಪನವರು ಹೇಳುತ್ತಾರೆ.

ಮಲಪನಗುಡಿ.

3 ನೆಯ ತಾ. ಸಾಯಂಕಾಲದನಂತರ ಜಿಲ್ಲಾ ಕಲೆಕ್ಟರ್ ಶ್ರೀ ಅನಂತರಾಮನ್‌ರೊಂದಿಗೆ ಆಂಗ್ಲೇಯರೂ, ಅಮೆರಿಕನರೂ, ಶ್ರೀಮತಿ ಸಾರ, ಸ್ಯಾಫನರ್, ಮೇರಿಸ್ಪಿನ್ನರ್, ಪಾರಿ ಜೋನ್ಸ, ಆರ್ ಗೆಲೆಟಿ ಇವರು ಆಗಮಿಸಿ ನಮ್ಮ ಹಳ್ಳಿಯ ಸಂಗೀತ, ನೃತ್ಯ, ಲಾವಣಿ, ಡೊಳ್ಳುವಾದ್ಯ ಶಾಲಾಬಾಲಕರ ಹಾಸ್ಯ ಪ್ರದರ್ಶನ ಲಂಬಾಣಿ ಜನರ ಕೋಲಾಟ ಕರಡಿಯಾಟ ಮಗ್ಗೆರೆ ಈಕ್ಷಿಸಿ ಸಭೆಯಲ್ಲಿ ಸಂತೋಷವನ್ನು ವ್ಯಕ್ತಪಡಿಸಿ ಕಾಮಲಾಪುರಕ್ಕೆ ತೆರಳಿದರು.

Oriental Government Security Life Assurance Co., Ltd.

Notice having been given of the loss of Policy Numbered 810602 on the life of Mr. K. C Ramiah of Bellary, a duplicate policy will be issued unless objection is lodged with us within one month from this date.

BOMBAY 13—8—47 — **L. S. Vaidyanathan,** *Manager.*

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.

ಬಳ್ಳಾರಿಯ ಶ್ರೀ ಕೆ. ಶಿ. ರಾಮಯ್ಯನವರ ಜೀವವಿಮೆಗೆ ಸಂಬಂಧಿಸಿದ ನಂಬರ್ 810602 ಪಾಲಿಸಿಯು ಕಳೆದುಹೋಗಿದೆಯೆಂದು ತಿಳಿದು ಬಂದಿದೆ. ಈ ತಾರೀಖಿನಿಂದ ಒಂದು ತಿಂಗಳೊಳಗಾಗಿ ಯಾರಿಂದಲಾದರೂ ಯಾವ ಆಕ್ಷೇಪಣೆಯೂ ನಮಗೆ ಬರದಿದ್ದರೆ, ಪ್ರತಿರೂಪ ಪಾಲಿಸಿಯು (Duplicate Policy) ಕೊಡಲಾಗುವುದು.

ಬೊಂಬಾಯಿ, 13-8-'47. — **ಎಲ್. ಎಸ್. ವೈದ್ಯನಾಥನ್** ಮ್ಯಾನೇಜರ್.

ವಾಸುವಾಂಬಾಭವನ

ಕಾಫಿಕ್ಲಬ್ ಮತ್ತು ಊಟದ ಹೋಟೆಲ್,

ಬೆಂಗಳೂರು ರೋಡ್ ಬಳ್ಳಾರಿ.

★ ಸುಂದರ ವಸತಿಸ್ಥಾನ
★ ಗಾಳಿ ಬೆಳಕುಗಳ ಸ್ವಚ್ಛರೂಂಗಳು
★ ತಣ್ಣೀರು, ಬಿಸಿನೀರಿನ ಸ್ನಾನ
★ ವ್ಯಾಪಾರ, ಉದ್ಯಮಗಳಿಗೆ ಮಧ್ಯಸ್ಥಳ
★ ರುಚಿ, ಆರೋಗ್ಯಕರ ಭೋಜನ, ಮತ್ತು ಫಲಹಾರ
★ ವಿನಯಶೀಲ ನೌಕರವರ್ಗ

ಪರ್ಮಿಟ್ ಕೊಟ್ಟಲ್ಲಿ ಸಂತೋಷ ಕೂಟಗಳಿಗೂ ಅಲ್ಪೋಪಹಾರಗಳಿಗೂ ಬೇಕಾದಂಥ ಪಕ್ವಾನ್ನ ಫಲಾಹಾರಗಳನ್ನು ಸರಿಯಾದ ದರಗಳಿಂದ ಒದಗಿಸುತ್ತೇವೆ.

ಬಳ್ಳಾರಿಗೆ ಬಂದರೆ ಇಲ್ಲಿಯೇ ವಸತಿಮಾಡಲು ಮರೆಯಬೇಡಿರಿ.

While at Bellary, Forget not to stay at

The Best Boarding & Lodging House

VASUVAMBA BHAVAN, BANGALORE ROAD. BELLARY.

ಶಿರುಗುಪ್ಪೆ

೯ನೆಯ ದಿನಾಂಕ ಅಗಷ್ಟ ಕ್ರಾಂತಿವೀರ ಮೈಲಾರ ಮಹದೇವಪ್ಪ ಇವರ ಸ್ಮಾರಕದಿನವು ಪ್ರಭಾತಫೇರಿ, ಧ್ವಜವಂದನೆಗಳಿಂದಾರಂಭವಾಗಿ ಸಾರ್ವಜನಿಕ ಸಭೆಯಲ್ಲಿ ಶ್ರೀ ಬಲಕುಂದಿ ಓಬಳ ಶಾಸ್ತ್ರಿಗಳ ಅಧ್ಯಕ್ಷ ಭಾಷಣವಾಯಿತು. ವೈದ್ಯ ಹಿರೇಮಠರು ಧ್ವಜಾರೋಹಣ ಮಾಡಿದರು. ಉತ್ಸವದ ಸರ್ವಭಾರವನ್ನು ಶ್ರೀ ರಾಮಭಟ್ಟ, ಶ್ರೀನಿವಾಸರಾವ್ ನರಸಿಂಗರಾವ್ ಪಗ್ಗೇರಿ ಮಿತ್ರರು ವಹಿಸಿದ್ದರು.

ಹೆಬ್ಬಾಳ (ಗುಡಿಗೇರಿ ತಾಲೂಕು)

ಅಧಿಕೃತ ರೇಶನ್ ಅರಿವೆ ಅಂಗಡಿಯವರು ಕಳ್ಳ ಪೇಟೆಯಿಂದ ಸಾರುತ್ತಾರೆಂಬ ಆಪಾದನೆ ಬಂದಕಾರಣ ಸದರಿ ಗ್ರಾಮಕ್ಕೆ ಫೌಜದಾರರು ಬಂದು ಬೌವಕ ಸಿಮಾಡಿ ಮಾಲಕರ ಮೇಲೆ ಕೇಸು ಇಟ್ಟಿರುವರೆಂದು ತಿಳಿದುಬಂದಿದೆ. ತರುಣಸಂಘಕ್ಕೆ ಲೈಸನಸ್ ಕೊಟ್ಟರೆ ಒಳ್ಳೆಯದು.

[**ಕಾಂಗ್ರೆಸಿಗರಿಗೆ ಸೂಚನೆ:**— ಬಳ್ಳಾರಿ ಜಿಲ್ಲೆಯ ಸತ್ಯಾಗ್ರಹ ವಾರ್ತೆಗಳಲ್ಲಿ ತಿದ್ದುಪಡಿ, ಸೇರ್ಪಡೆಗ ಳೇನಾದರೂ ಇದ್ದಲ್ಲಿ ತಿಳಿಸಲು ಕೋರಿಕೆ.]

ಬಳ್ಳಾರಿ ಜಿಲ್ಲಾ ಲೇಬರ್ ಶಾಲೋಪಾಧ್ಯಾಯರ ಸಂಘ

10-8-47 ನೆಯ ದಿನಾಂಕದ ಸಾಧಾರಣ ಸಭೆಗೆ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ 47 ಜನ ಉಪಾಧ್ಯಾಯರು ಬಂದಿದ್ದರು. ಲೆಕ್ಕಾಧಿಕಾರಿ ವಿಷಯಕ್ಕೆ ಅನಧಿಕಾರಿ (Non official President) ಅಧ್ಯಕ್ಷರೇ ಇರಬೇಕೆಂದೂ, ಅವರ ಮೂಲಕ ಲೆಕ್ಕಾಧಿಕಾರಿಗೆ ಪ್ರಯತ್ನಿಸಬೇಕೆಂದೂ, 8 ಜನರ ವಿರೋಧದ ಬಹುಮತದಿಂದ ನಿರ್ಣಯವಾಯಿತು. ಚುನಾವಣೆಯು ಬಹಳ ತುರುಸಿನದಿದ್ದಿತು.

ಶ್ರೀ ಟಿ. ಬಿ. ಕೇಶವರಾಯರು 1947-48 ಕ್ಕೆ ಅನಧಿಕಾರೀ ಅಧ್ಯಕ್ಷರಿರಬೇಕೆಂದು ಸರ್ವಾನುಮತದಿಂದ ನಿರ್ಣಯವಾಯಿತು. ಸೆಕ್ರಟರಿ ಮತ್ತು ಟ್ರೆಜರರ್ ಸ್ಥಳಕ್ಕೆ ಚುನಾವಣೆಯಲ್ಲಿ ಸ್ಪರ್ಧೆಯಾಗಿ ಶ್ರೀ ದೇವದಾನಂ (ಸಂಗನಕಲ್ಲು) ಇವರು ಆರಿಸಲ್ಪಟ್ಟರು. ಈ ಕೆಳಗಿನ 12 ಜನರು ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು.

1) ಗುರುಶಾಂತಯ್ಯ
2) ಹುಸೇನ್ ಸಾಹೆಬ್
3) H. ರಾಮಪ್ಪ
4) ಡಿ. ಕೃಷ್ಣಪ್ಪ
5) H. ದಾಸಪ್ಪ
6) ಜಿ. ಮಲೆಪ್ಪ
7) H. ಮರಿಯಮ್ಮ
8) B. ವೀರಾನಾಯ್ಕ
9) ಸುಬ್ಬರಾಯಿಡು
10) C. ಸೇಕನ್ನ
11) .ನಾಗಪ್ಪ
12) ಯೇಸುದಾಸ್

ಜಿಲ್ಲಾಲೇಬರ್ ಆಫೀಸರ್ ಶ್ರೀ ಕೃಷ್ಣಮೂರ್ತಿಯವರು ಉಪಾಧ್ಯಾಯರ ಬೇಡಿಕೆಗಳ ವಿಷಯಕ್ಕೆ ಸಮರ್ಪಕ ಉತ್ತರಗಳನ್ನು ಕೊಟ್ಟರು. ಇವರೂ ಮತ್ತು ಶ್ರೀ ಕೇಶವರಾಯರೂ ಸ್ವಾತಂತ್ರ್ಯದಿನವನ್ನು ವೈಭವದಿಂದ ನೆರವೇರಿಸಲು ಉಪಾಧ್ಯಾಯರಿಗೆ ಮನವಿ ಮಾಡಿದರು.

ಶ್ರೀ

SWEET SWEET SWEET ON SWEET SWEET SWEET

Independence Day.

or any

GALA DAY

We supply you your needs.
Your children will have a best variety of sweets.
Our concern is cent percent Indian
Help the economic devolopment
of

RAYALASEEMA

R C W

Sole Agents:-
The General Distributors,
Bangalore Road, Bellary.

Rayalaseema Confectionery Works Bellary

ಸಿಹಿ ! ಸಿಹಿ !! ಸಿಹಿ !!!

ಸ್ವಾತಂತ್ರ್ಯದ ದಿನ

ಅಥವಾ

ಮಿಠಾಯಿ **ಶುಭ ದಿನ** ಮಿಠಾಯಿ

ಸಕ್ಕರೆಯೂ ಇಲ್ಲ, ಬೆಲ್ಲವೂ ಇಲ್ಲ

ಆದರೆ

ನಾವು R C. W. ಸೆಪ್ಪರ್‌ಮೆಂಟನ್ನು ನಿಮಗೆ ನಿಮ್ಮ ಮಕ್ಕಳಿಗಾಗಿ ಹಂಚಲು ಒದಗಿಸುತ್ತೇವೆ.

ಹಿಂದುಳಿದ

ಈ ಜಿಲ್ಲೆಗಳ ಆರ್ಥಿಕಾಭಿವೃದ್ಧಿಗೆ

ಸಹಾಯಮಾಡಿರಿ.

R·C·W.

ಸೋಲ್ ಏಜಿಂಟರು:—
ದಿ ಜನರಲ್ ಡಿಸ್ಟ್ರಿಬ್ಯೂಟರ್ಸ್,
ಬೆಂಗಳೂರು ರೋಡು. ಬಳ್ಳಾರಿ.

The General Assurance Society Limited.

Head Office : AJMER.

ದಿ ಜನರಲ್ ಅಶೂರೆನ್ಸ್ ಸೊಸೈಟಿ ಲಿಮಿಟೆಡ್

ಹೆಡ್ ಆಫೀಸ್—ಅಜ್ಮೀರ್

Some outstanding facts which speak for themselves.

INSURE WITH

Generous Policy Conditions
Easy Revival Terms
New schemes for modern needs
Every rupee remains in India
Ready & Prompt Service
Assets exceed 1 crore 93 lakhs
Low premium rates

Patronise this popular progressive and Purely Swadeshi Life Office.

For Insurance & Agency Particulars Please Write to :—

K. M. RAMACHAR,
Branch Manager,
Car St. Bellary.

ಉದಾರವಾದ ವಿಮಾನಿಯಮಗಳು. ವಿಮೆಯನ್ನು ಸುಲಭವಾಗಿಜಾರಿಯಲ್ಲಿಡುವ ಆಧುನಿಕ ಬೇಡಿಕೆಗಳಿಗೆ ನವೀನ ಯೋಜನೆಗಳು ಶೀಘ್ರ ಮತ್ತು ಯೋಗ್ಯ ಸೇವೆ.

ಕಡಮೆಯ ಕಂತಿನ (ಪ್ರೀಮಿಯಂ) ದರಗಳು
ನಿಮ್ಮ ಪ್ರತಿ ರೂಪಾಯಿಯೂ ಭಾರತದಲ್ಲೇ!
ನಮ್ಮ ಆಸ್ತಿಯು 1 ಕೋಟಿ 93 ಲಕ್ಷಕ್ಕೆ ಮಿಕ್ಕಿದೆ.

ಜನಪ್ರಿಯ, ಪ್ರಗತಿಪರ ಮತ್ತು ಶುದ್ಧ ಸ್ವದೇಶಿಯಾದ ಈ ವಿಮಾಕಂಪನಿಯಲ್ಲೇ ನಿಮ್ಮ ವಿಮೆಯನ್ನಿಳಿಸಿರಿ.

ಜೀವ ವಿಮೆ ಮತ್ತು ಏಜನ್ಸಿ ವಿವರಗಳಿಗಾಗಿ ಈ ಕೆಳಗಿನವರಿಗೆ ಬರೆಯಿರಿ.

ಕೆ. ಯಂ. ರಾಮಾಚಾರ್
ಬ್ರಾಂಚ್ ಮ್ಯಾನೇಜರ್ ತೇರು ಬೀದಿ ಬಳ್ಳಾರಿ

PRABHAT TALKIES
FROM
15-8-47 Independence day

देखो जी

DEKHOJEE

ಪ್ರಭಾತ ಚಲಚಿತ್ರ ಮಂದಿರ
15—8—47
ಸ್ವಾತಂತ್ರ್ಯ ದಿನ

First Offering of the
PUNJAB FILM CORPORATION
Produced and Processed at Shree Ranjit Studios, Bombay
ON THE SCREEN
(Mumtaz Shanti, Anjum, A. Shah, Khateon—Gulnar etc.)
Love, Romance, Disappointment and Union.

ಪಂಜಾಬ್ ಫಿಲಂಕಾರ್ಪೊರೇಶ್ನದವರ ಪ್ರಥಮ ಚಿತ್ರ
ರಣಜಿತ್ ಫಿಲಂರವರ ದೇಖೋಜೀ ಹಿಂದಿ ಚಲನ ಚಿತ್ರ
ಮುಮ್ತಾಜ್ ಶಾಂತಿ, ಅಂಜುಮ್, ಎಂ. ಶಾಹ್ ಖಾತೂನ್ ಗುಲ್ನಾರ್ ಮೊದಲಾದವರು ಪಾತ್ರವಹಿಸಿರುವರು
ಪ್ರೇಮ! ಪ್ರಣಯ!! ನಿರಾಶೆ!!! ಐಕ್ಯ!!!!

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI..... .. ..
.....
.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO

ಜೈಹಿಂದ್ Reg. No. M. 4746

ಸ್ವರಾಜ್ಯ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಟ್ಟು ೬ ಸಂಚಿಕೆ ೩೨ ಬಳ್ಳಾರಿ ಆಗಷ್ಟು ೨೫ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾತಕ ಟಿ. ಬಿ. ಕೇಶವರಾವ್.



ಭಾರತ ಮಾತೆಯ ಮಕ್ಕಳ ಬಾವುಟ.

ನೋಡ್ರೈ, ನೋಡ್ರೈ! ಭಾರತಮಕ್ಕಳು
ರಾಷ್ಟ್ರದ ಧ್ವಜವನು ಹಿಡಿದಿಹರು
ಚಲುವಿನ್ನಬಾಲರು, ಮುದ್ದಿನಬಾಲರು
ರಾಷ್ಟ್ರದ ಗೀತೆಯ ಹಾಡುವರು.

ಚಲುವಿನ ಬಾವುಟ ಮೇಲಕೆ ಎತ್ತುತ
ಹರುಷದಿ ಎಲ್ಲರು ಹೊರಟಿಹರು
ರಾಷ್ಟ್ರದ ಗೀತೆಯ ಹಾಡುತ ಎಲ್ಲರು
ಒಮ್ಮನದಿಂದಲಿ ಹೊರಟಿಹರು.

ಭೋರೆನೆ ಬೀಸುವ ಉದಯದ ಗಾಳಿಲಿ
ಬಾವುಟ ಪಟ ಪಟ ಹಾರುವುದು
ಭಾರತ ಜನರಿಗೆ ಇಂದಿನ ದಿನದಲಿ
ಸುಖವನು ನೀಡಲು ನಿಂತಿಹದು.

ಭಾರತ ಪುತ್ರರ ಎಲ್ಲರ ಹಸ್ತದಿ
ನಲಿಯುತ ಬಾವುಟ ಹಾರುವುದು
ನಿಮ್ಮವ ನಿಮ್ಮವ ಎನ್ನುತ ಬಾವುಟ
ಎಲ್ಲರ ಬಳಿಯಲಿ ಸುಳಿತಿಹದು.

ಜೀವವು ಕೊಟ್ಟಿಹ ಭಾರತ ಮಾತೆಯ
ಪುತ್ರರು ಎಲ್ಲರು ಎನ್ನುವರು
ತ್ರಿವರ್ಣ ಬಟ್ಟೆಯು ಭಾರತ ಮಾತೆಯ
ಮುದ್ದಿನ ಬಾವುಟ ಎನ್ನುವುದು.

ಭಾರತ ಮಾತೆಯು ಬಂಧನ ಮುಕ್ತಿಯು
ಇಂದಿಗೆ ಮುಗಿಯಿತು ಎನ್ನುವಳು
ಬಡವರ ಬಗ್ಗರ ಎಲ್ಲರ ಅಹಿಂಸ
ತತ್ವದಿ ನೋಡಿರಿ ಎನ್ನುವಳು.

ತಾ. ನ. ಮೂರ್ತಿ, ಹರಪನಹಳ್ಳಿ

ರಾಷ್ಟ್ರಧ್ವಜದ ಅಪಮಾನ

ಹೈದರಾಬಾದಿನ ಎಲ್ಲೆಡೆಗಳಲ್ಲಿ ಭಾರತ ರಾಷ್ಟ್ರಧ್ವಜವನ್ನು ಹಾರಿಸಿ ಮೆರವಣಿಗೆ ಹೊರಡಿಸಿದ ಕಾರಣ ಬಂಧನಗಳಾಗಿವೆ. ಅಲ್ಲಲ್ಲಿ ಧ್ವಜದ ಅವಮಾನ ಮಾಡಿದ ಸುದ್ದಿ ಬಂದಿದೆ. ಅದರೆ ಧ್ವಜದ ಅಪಮಾನ ಮಾಡಿಲ್ಲವೆಂದು ನಿಜಾಮ ಸರ್ಕಾರದವರು ನೆಹರೂರವರಿಗೆ ಪತ್ರ ಬರೆದಿದ್ದಾರೆ.

[ಜಿಲ್ಲೆಯ 'ಎಲ್ಲಾ ಥಾಗದ ಹಳ್ಳಿ ಹಳ್ಳಿಗಳಲ್ಲಿ ಯೂಕೊಡ ಸ್ವಾತಂತ್ರ್ಯದಿನಾಚರಣೆಯ ವರದಿಗಳು! ಬಂದಿವೆ. ಸ್ಥಳ ಸಂಕೋಚದಿಂದ ಪ್ರಕಟಿಸಲು ಕಷ್ಟವಾದ ಕಾರಣ ವಿಷಾದಿಸುತ್ತೇವೆ]

ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಮಹೋತ್ಸವ.

ಕುರುಗೋಡು:— 15 ನೆಯ ತಾ. ಪ್ರಾತಃಕಾಲ 5-30 ರೊಳಗಾಗಿ ಸರಕಾರಿ ಶಾಲಾ ಕಟ್ಟಡಗಳಲ್ಲಿ ಭಾರತ ರಾಷ್ಟ್ರಧ್ವಜವು ಕಂಗೊಳಿಸಿತು 8-30 ಕ್ಕೆ ಶಾಲಾ ಮಕ್ಕಳಿಗೆ ಮಿಠಾಯಿ ಹಂಚಲಾಯಿತು. ಶಾಲೆಯು ಅಲಂಕೃತವಾಗಿತ್ತು. ಪ್ರಭಾತಫೇರಿಯನಂತರ ನೇತ್ರಾನಂದಕರವಾಗಿ ಅಲಂಕೃತವಾದ ಪಲ್ಲಕ್ಕಿಯಲ್ಲಿ ದೇಶಾನಾಯಕರಾದ ಗಾಂಧಿ, ನೆಹರೂ ಚಿತ್ರ ಪಟದೊಂದಿಗೆ ಮೆರವಣಿಗೆಯು ಊರಬೀದಿಗಳಲ್ಲಿ ಸಾಗಿತು. ಪೋಲೀಸಿನವರಿಲ್ಲಾ ಸಿಬ್ಬಂದಿಯ ಸಮೇತ ಮೆರವಣಿಗೆಯಲ್ಲಿ ಭಾಗವಹಿಸಿದರು ಇದಾದ ನಂತರ ಶ್ರೀ ದೊಡ್ಡಬಸವೇಶ್ವರ ದೇವಸ್ಥಾನದ ಕಟ್ಟೆಯಮೇಲೆ ಸ್ವಾತಂತ್ರ್ಯದಿನದ ಮಹತ್ವವನ್ನು ಕುರಿತು ಶ್ರೀಗಳಾದ ಮರಿಬಸವನಗೌಡ, ರಾಮಚಂದ್ರಗುಪ್ತ, ಕಲ್ಲಪ್ಪಾಚಾರಿ ಮತ್ತು ವೀರಯ್ಯನವರ ಭಾಷಣಗಳಾದವು.

ಕೆಂಪ್ಲಿ:— ಪ್ರಾತಃಕಾಲ ಹೈಸ್ಕೂಲ್ ಬಾಲಕರ ಸಾಯಂಕಾಲ ಪೌರಜನರ ಮೆರವಣಿಗೆಯು ರಾಷ್ಟ್ರ ಧ್ವಜಸಮೇತವಾಗಿ ಜಯಜಯಕಾರಗಳಿಂದ ನಡೆಯಿತು. ಷಾಮಿಯಾಚಂದ ಹೈಸ್ಕೂಲಿನಲ್ಲಿ ಷಾ ಮೋತಿಲಾಲರು ಧ್ವಜಾರೋಹಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಿಂದ ಪ್ರಧಾನಮಂತ್ರಿಗಳ ಸಂದೇಶ, ಕಾಂಗ್ರೆಸ್ ತ್ಯಾಗವೀರರ ಚರಿತ್ರೆ ಹೇಳಲ್ಪಟ್ಟನಂತರ ಷಾ ಮೋತಿಲಾಲರು ಬಾಲಬಾಲಕಿಯರಿಗೆ ಬಡಜನರಿಗೆ ಸಂತೃಪ್ತಿಯಾಗುವಂತೆ ಮಿಠಾಯಿ ತಿನ್ನಿಸಿದರು. ಮುಸ್ಲಿಂ ಲೀಗ್ ಕಾರ್ಯಾಲಯದಲ್ಲಿ ಅವರ ಗುರುಗಳಿಂದ ಭಾರತ ರಾಷ್ಟ್ರಧ್ವಜಾರೋಹಣವಾಯಿತು ಸಾಯಂಕಾಲದ ಮೆರವಣಿಗೆಯಲ್ಲಿ ಹರಿಜನರು ಭಜನೆಯೊಂದಿಗೆ ಬಂದರು. ಹರಿಜನರಿಗೆ ಅಂದು ಸ್ವಾತಂತ್ರ್ಯವು ದೊರೆತು ದೇವಸ್ಥಾನ, ಹೋಟೆಲ್‌ಗಳಲ್ಲಿ ಅವರಿಗೆ ಪ್ರವೇಶದೊರೆಯಿತು ಪಂಚಾಯ್ತಿ ಬೋರ್ಡು ಕಾರ್ಯಾಲಯದ ಬಾವುಟವು ಶ್ರೀ ವೆಂಕೋಬರಾಯರಿಂದ ಮಧ್ಯರಾತ್ರಿಯಲ್ಲಿ ಆರೋಹಿತವಾಯಿತು ಸಾರ್ವಜನಿಕ ಸಭೆಯಲ್ಲಿ ಸ್ವಾತಂತ್ರ್ಯಮಹತ್ವವು ಹೇಳಲಾಯಿತು ಬಡವರಿಗೆ ಅನ್ನದಾನವು ನಡೆಯಿತು.

ಕೊಟ್ಟೂರು:— ಇಲ್ಲಿ ಸ್ವಾತಂತ್ರ್ಯದಿನೋತ್ಸವವು 9 ನೆಯ ತಾ. ನಿಂದ 15 ರವರಿವಿಗೆ ಪ್ರಭಾತಫೇರಿ ನಡೆದು 14 ನೆಯ ಮಧ್ಯರಾತ್ರಿ ಧ್ವಜವಂದನೆ ದೀಪೋತ್ಸವಗಳಾದವು. ಅಧಿಕಾರ ಸ್ವೀಕಾರವಾದೊಡನೆಯೇ ಘಂಟಾನಾದ ಮದ್ದು ಬಿಟ್ಟಗಳ ಭರಾಟವಾಯಿತು ಊರಿನ ಗೃಹಗಳ ಮೇಲೆಲ್ಲಾ ಭಾರತ ರಾಷ್ಟ್ರಧ್ವಜಗಳು ಹಾರಾಡುತ್ತಿದ್ದವು. ಬೀದಿಗಳು ತಳಿರು ತೋರಣಗಳಿಂದಲಂಕೃತವಾಗಿದ್ದವು. 15 ನೆ ತಾ. ವಿದ್ಯಾರ್ಥಿ ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳವರು ವಿವಿಧ ಕಾರ್ಯಕ್ರಮಗಳನ್ನಿಟ್ಟಿದ್ದರು. ಸಾಯಂಕಾಲದ ಮೆರವಣಿಗೆಯಲ್ಲಿ ಮುಖಂಡರ ಭಾವಚಿತ್ರ ಮತ್ತು ಧ್ವಜಾಲಂಕೃತ ರಥವು 62 ಜೋಡಿ ಎತ್ತುಗಳಿಂದ ಎಳೆಯಲ್ಪಟ್ಟಿತು ಕ್ಷೀರಶೈವ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿ ಕಾಂಗ್ರೆಸ್‌ನವರ ಅವಿಶ್ರಾಂತ ಶ್ರಮದಿಂದ ಅನ್ನಸಂತರ್ಪಣೆಯೂ ವಸ್ತ್ರದಾನವೂ ನಡೆಯಿತು.

ಉಜ್ಜಿನಿ:— ಇಲ್ಲಿ 14-15 ನೆಯ ತಾ. ಸ್ವಾತಂತ್ರ್ಯದಿನಾಚರಣೆಯು ವೈಭವದಿಂದ ನಡೆಯಿತು. ಪ್ರಭಾತಫೇರಿ ಧ್ವಜವಂದನೆಗಳ ನಂತರ ಸುಮಾರು ಎರಡು ಸಾವಿರ ನಾಗರಿಕರೈತ ಹಿಂದೂ ಮುಸಲ್ಮಾನರ ಸಭೆಯಲ್ಲಿ ಸ್ವಾತಂತ್ರ್ಯದ ಮಹತ್ವವನ್ನು ಕುರಿತು ಭಾಷಣಗಳಾದವು,

ಹೊಸಪೇಟೆ:— ಸ್ವಾತಂತ್ರೋತ್ಸವವು ಅಧಿಕಾರೀ ಪೌರಜನರ ಸಮಷ್ಟಿ ಸಹಕಾರದಿಂದ ವೈಭವವಾಗಿ ನಡೆಯಿತು. ಸೂರ್ಯೋದಯದ ಮುಂಚೆ ಸರಕಾರೀ ಕಟ್ಟಡಗಳು ಧ್ವಜಾಲಂಕೃತವಾದವು. ಸಾಯಂಕಾಲದ ಮೆರವಣಿಗೆಯು ತಾಲೂಕಾಫೀಸಿನಿಂದ 63 ಜೊತೆ ಎತ್ತುಗಳು, ಎರಡಾನೆ, ಇಪ್ಪತ್ತುಲಾರಿಗಳಿಂದ ಹೊರಟಿತು. ಮೆರವಣಿಗೆಯನಂತರ ಶ್ರೀ ಬಿ. ಅನಂತಾಚಾರ್ಯರ ಅಧ್ಯಕ್ಷತೆಯಲ್ಲಿ ತಟ್ಟಿಕೃಷ್ಣರಾವು ಮತ್ತಿತರರ ಭಾಷಣಗಳಾದವು. ಇತರ ಸಂಸ್ಥೆಗಳವರೂ ಸ್ವಾತಂತ್ರೋತ್ಸವವನ್ನು ನೆರವೇರಿಸಿದರು.

ನೆಲಗಡಲೆ ವ್ಯವಸಾಯ

(ಪೂರ್ವ ಆಫ್ರಿಕೆಯಲ್ಲಿ)

(ಲೇ— ಶ್ರೀ ಎಂ. ಗೋವಿಂದರೆಡ್ಡಿ)

ಪ್ರಪಂಚದ ಎಣ್ಣೆ ಮತ್ತು ಎಣ್ಣೆ ಬೀಜಗಳ ಶಲಕು ಹತ್ತಿಪ್ಪತ್ತು ವರ್ಷಗಳಲ್ಲೇ ಮುಗಿಯುವು ದೆಂದೂ ಅನಂತರ ಅವುಗಳ ಅಭಾವವು ಜಗತ್ತಿಗೇ ಬಹಳ ಘೋರವಾಗಿ ಪರಿಣಮಿಸುವುದೆಂದೂ ಲೆಕ್ಕ ಹಾಕಿ ಬ್ರಿಟಿಶ್ ಸರಕಾರದ ಶ್ವೇತ ಪತ್ರವೊಂದು ಆಫ್ರಿಕೆಯಲ್ಲಿ ನೆಲಗಡಲೆ ವ್ಯವಸಾಯಕ್ಕೆ ಪ್ರತ್ಯೇಕ ಯೋಜನೆಯೊಂದನ್ನು ಕೈಕೊಳ್ಳುವಂತೆ ಶಿಫಾರಸು ಮಾಡಿದೆ. ಈ ಯೋಜನೆಯ ಪ್ರಕಾರ ವರ್ಷಂಪ್ರತಿ ೬ ಲಕ್ಷ ಟನ್ನಿನಿಂದ ೮ ಲಕ್ಷ ಟನ್ನುಗಳಿಗೇರುವಷ್ಟು ಬೆಳೆ ನಿರೀಕ್ಷಿಸಲಾಗಿದೆ. ತಾಂಗನೀಕದಲ್ಲಿ ಒಂದೊಂದು ೩೦ ಸಾವಿರ ಎಕರೆಯನ್ನೊಳಗೊಂಡ ೮೦ ಪ್ರಾಂತಗಳಲ್ಲೂ ಉತ್ತರ ರೊಡೇಶಿಯದಲ್ಲಿ ಪ್ರತಿಯೊಂದು ೩೦ ಸಾವಿರ ಎಕರೆ ಇರುವ ೧೭ ಪ್ರಾಂತಗಳಲ್ಲೂ, ಇದೇವಿಸ್ತೀರ್ಣದ ಹತ್ತು ಪ್ರದೇಶಗಳನ್ನು ಕೆನಿಯಾದಲ್ಲೂ, ಒಟ್ಟಿನಲ್ಲಿ ೩೨೧೦,೦೦೦ ಎಕರೆ ಭೂಮಿಯನ್ನು ನೆಲಗಡಲೆ ಬೆಳೆಗಾಗಿ ಕಾದಿಡಲಾಗಿದೆ. ಈ ಬೆಳೆ ಒಂದರಿಂದಲೇ ಆಫ್ರಿಕೆಯ ರೈತನ ಜೀವನ ಮಟ್ಟವನ್ನು ಏರಿಸುವುದೂ ಜಮೀನಿಗೆ ಖಾಯಂ ಆದ ಬೆಲೆಯನ್ನು ರೂಢಿಸುವುದೂ ಆಫ್ರಿಕೆಯ ಆರ್ಥಿಕ ತಳಹದಿಯನ್ನು ಭದ್ರಪಡಿಸುವುದೂ ಮತ್ತು ಎಣ್ಣೆ ಮತ್ತು ಎಣ್ಣೆಯ ಬೀಜಗಳಲ್ಲಿ ಸ್ವಯಂಪರಿಪೂರ್ಣತೆಯನ್ನು ಹೊಂದುವುದೂ ಅಲ್ಲದೆ ಪ್ರಪಂಚದಲ್ಲೇ ಈ ಸರಕಿನ ವ್ಯಾಪಾರವನ್ನು ಹಿಡಿತದಲ್ಲಿಟ್ಟು ಕೊಳ್ಳುವುದೂ ಸಾಧ್ಯವಾಗುವುದೆಂದು ನಿರೀಕ್ಷಿಸಲಾಗಿದೆ. ಅಲ್ಲದೆ ಆಹಾರಾಭಾವವು ಹೆಚ್ಚಾಗಿರುವ ಕಾಲದಲ್ಲಿ ಆಹಾರದ ಕೊರತೆಯನ್ನು ಬಹುಮಟ್ಟಿಗೆ ಈ ಪ್ರಯತ್ನವು ನೀಗಬಹುದೆಂದು ನಂಬಲಾಗಿದೆ. ಈ ಯೋಜನೆಯು ಯಶಸ್ವಿಯಾಗಿ ಜರಗುವಂತಾಗಲು ದೊಡ್ಡ ಪ್ರಮಾಣದ ಜಲಾಶಯಗಳನ್ನು ನಿರ್ಮಿಸುವುದೂ ರಸ್ತೆ ಮೊದಲಾದ ಕಾಮಗಾರಿಗಳನ್ನು ಮಾಡಿಸುವುದೂ ಅಗತ್ಯವೆಂದು ಕಂಡುಬಂದು ಮುಂಜೂರು ಮಾಡಲಾಗಿದೆ.

ಆ ಯೋಜನೆಯು ಯಶಸ್ವಿಯಾಗಬೇಕಾದರೆ ಹಿಂದು ಕೂಲಿಕಾರರು ಅವಶ್ಯವಾಗದಂತೆ ನೋಡಿಕೊಳ್ಳಲು ಎಚ್ಚರದಿಂದ ಅಂದಾಜು ಮಾಡಲಾಗಿದೆ. ಏಕೆಂದರೆ ಆಫ್ರಿಕೆಯಲ್ಲಿ ಬಿಳಿಯ ಜನರು ಕೂಲಿಮಾಡುವಂತಿಲ್ಲ ಭಾರತದವರಿಗೂ ಆಫ್ರಿಕೆಯ ಮೂಲನಿವಾಸಿಗಳಿಗೂ ಕೂಲಿಗೆ ಅವಕಾಶ ಕೊಟ್ಟರೆ ಅವರ ಮೇಲೆಯೇ ಆಧರಿಸಬೇಕಾಗಿ ಬಂದು ಒಂದಲ್ಲ ಒಂದು ದಿನ ಬಿಳಿಯ ಜನತೆಯನ್ನು ನುಂಗಿಹಾಕುವ ಹಾನಿ ಒದಗುವುದೆಂದು ಯಂತ್ರಶಕ್ತಿಗೆ ವ್ಯಾಶಸ್ತ್ರ ಕೊಡಲಾಗಿದೆ.

ಈ ಕ್ಷೇತ್ರಗಳಲ್ಲೆಲ್ಲ ಬಹಳ ಎಂದರೆ ೨೫೦೦೦ ಜನರಾದರೆ ಸಾಕು. ಆಫ್ರಿಕಾ ದೇಶದವರೇ ಆಗಿರುವ ೩೨,೧೦೦ ಜನರನ್ನು ೩೦೦ ಗುಂಪುಗಳಾಗಿ ವಿಂಗಡಿಸಲು ಅವಕಾಶ ಮಾಡಿಕೊಡಲಾಗಿದೆ. ೯೦೦ ರಿಂದ ೧೦೦೦ "ಬುಲ್‌ಡೋಜರು"ಗಳೇ ಬೇಕಾಗಿವೆ. (ನೆಲ ಸಮ ಮಾಡುವ ಯಂತ್ರ) ೪, ೭೫೦೦೦ ಪೌಂಡು ಯಂತ್ರವೇ ಬೇಕು. ಆರು ವರ್ಷಗಳಲ್ಲಿ ೨೪೦೦೦೦೦೦ ಪೌಂಡುಗಳು ವೆಚ್ಚವಾಗುವುದೆಂದು ಅಪ್ಪನ್ನು ಒದಗಿಸಲಾಗಿದೆ. ತಾಂಗನೀಕ ಒಂದರಲ್ಲೆ; ಪ್ರತ್ಯೇಕ ರೈಲು ವಸತಿಗೃಹಗಳು, ಜಲಾಶಯ, ಕೋಠಿಗಳು ಮೊದಲಾದವುಗಳಿಗಾಗಿ ೨೫೦೦೦೦ ಪೌಂಡುಗಳು ಖರ್ಚಾಗಲಿವೆ. ಇಷ್ಟು ಮುಂದಾಲೋಚನೆಯಿಂದ ವ್ಯವಸ್ಥೆಮಾಡುವ ಆಫ್ರಿಕಾ ಸರಕಾರವು ನಮಗೆ ಜ್ಞಾನೋದಯವುಂಟುಮಾಡಬಲ್ಲದು ಮುಂದೆ ಎಂದೋ ಬರಬಹುದಾದ ಕ್ಷಾಮ ನಿವಾರಣಕ್ಕೆ ಅವರು ಇಂದೇ ಯೋಜನೆಯನ್ನು ಮಾಡಿ ಆರಂಭಿಸಿರುವರು. ಒಳ ಆರ್ಥಿಕ ಜೀವನಮಟ್ಟವನ್ನು ವಿಸ್ತರಿಸುವುದು, ಪ್ರಪಂಚದ ವ್ಯಾಪಾರದಲ್ಲಿ ಭದ್ರಸ್ಥಾನಗಳಿಸಿಕೊಳ್ಳುವುದು ಇವೆಲ್ಲ ಈ ಒಂದೇ ಯೋಜನೆಯಲ್ಲಿ ಅಡಕವಾಗುವಂತೆ ಮಾಡಲಾಗಿದೆ. ನಮ್ಮ ಸರಕಾರಗಳು ಎಂದು ಈ ರೀತಿ ಕೆಲಸ ಮಾಡುವಂತಾಗುವವು?

ಶ್ರೀ ಅರವಿಂದರ ದಿವ್ಯಸಂದೇಶ.

ಹಿಂದುಸ್ತಾನವು ಸ್ವಾತಂತ್ರ್ಯ ಪಡೆದ ದಿನದ ಪ್ರಾಮುಖ್ಯವನ್ನು ಕುರಿತು ಶ್ರೀ ಅರವಿಂದರು ಈ ಕೆಳಗಿನಂತೆ ಸಾರಿದ್ದಾರೆ.

ಆಗಷ್ಟ ಹದಿನೈದು ಸ್ವತಂತ್ರ ಭಾರತದ ಜನ್ಮ ದಿನ. ಅದು ಭಾರತದಲ್ಲಿ ಒಂದು ಪ್ರಾಚೀನ ಯುಗ ಮುಗಿದು ಹೊಸ ಯುಗ ಪ್ರಾರಂಭವಾದುದನ್ನು ನಿರ್ದೇಶಿಸುತ್ತದೆ. ಅದರೆ ಅದು ನಮಗಷ್ಟೇ ಮುಖ್ಯವಾದುದಲ್ಲ, ಏಶಿಯ ಹಾಗೂ ಇಡಿಯ ಜಗತ್ತಿಗೇ ಒಂದು ಮುಖ್ಯವಾದ ಸಂಗತಿ, ಅರ್ಥಪೂರ್ಣವಾದ ಘಟನೆ; ಏಕೆಂದರೆ, ಅದು ಮಾನವಕುಲದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಭವಿಷ್ಯವನ್ನು ನಿರ್ಣಯಿಸುವುದರಲ್ಲಿ ಹೆಚ್ಚಿನ ಭಾಗವನ್ನು ಹಿಸಲಿರುವ ಕಾರ್ಯದಕ್ಷವಾದ ಒಂದು ಹೊಸ ಪ್ರಭುತ್ವವು ರಾಷ್ಟ್ರಸಂಘವನ್ನು ಪ್ರವೇಶಿಸುವುದನ್ನು ಸೂಚಿಸುತ್ತದೆ. ನನ್ನ ಜೀವನ ಧ್ಯೇಯಗಳನ್ನು ನಂಬಿದ ಜನ ನನ್ನ ಹುಟ್ಟುಹಬ್ಬ ಆಚರಿಸುತ್ತಿದ್ದ ಈ ದಿನ ಇಷ್ಟು ಮಹತ್ವವನ್ನು ಪಡೆಯಿತೆಂಬುದು ವ್ಯಕ್ತಿಶಃ ನನಗೆ ಸ್ವಾಭಾವಿಕವಾಗಿ ಸಂತೃಪ್ತಿದಾಯಕವೆನಿಸಿದೆ ಅನುಭಾನಿಯಾದ ನಾನು ಈ ಒಂದಿಕೆಯು ಕೇವಲ ಆಕಸ್ಮಿಕ ಘಟನೆಯೆಂದಾಗಲಿ, ಸಂಯೋಗವೆಂದಾಗಲಿ ತಿಳಿಯದೆ ನನ್ನ ಜೀವನದೊಡನೆ ಪ್ರಾರಂಭಿಸಿದ ನನ್ನ ಕೆಲಸದಲ್ಲಿ ನನಗೆ ಮಾರ್ಗದರ್ಶಿಯಾಪ ದೈವೀಶಕ್ತಿಯ ಮತ್ತು ಮುದ್ರೆಯೊಂದು ಭಾವಿಸುತ್ತೇನೆ ನನ್ನ ಜೀವಿತಕಾಲದಲ್ಲಿಯೆ ಸಫಲ ಹೊಂದಬಹುದು ನಾನು ಆಶಿಸಿದ ಜಾಗತಿಕ ಚಳವಳಿಗಳು ಮೊದಲು ಅಲಭ್ಯವಾದ ಸ್ವಪ್ನವೆನಿಸಿದ್ದರೂ ಇಂದು ಸಾಫಲ್ಯವನ್ನು ಸಮೀಪಿಸುತ್ತಿರುವುದನ್ನು ಇಲ್ಲವೆ ಪ್ರಗತಿಯು ಹೆಚ್ಚಿಹಿಡಿದು ಧ್ಯೇಯಸಿದ್ಧಿಯ ಮಾರ್ಗದಲ್ಲಿ ಹೋಗುತ್ತಿರುವುದನ್ನು ನಾನು ನೋಡಬಲ್ಲೆ.

ಇಂತಹ ಮಹತ್ವದ ಸಂಧಿಯಲ್ಲಿ ನಾನು ಸಂದೇಶ ಕೊಡಬೇಕೆಂದು ಅಪೇಕ್ಷಿಸಲಾಗಿದೆ; ಆದರೆ ಬಹುಶಃ ನಾನು ಅಂತಹ ಸಂದೇಶವನ್ನು ಕೊಡುಃಸ್ಥಿತಿಯಲ್ಲಿಲ್ಲವೆನ್ನಬೇಕಾಗಿದೆ. ನನ್ನ ಬಾಲ್ಯ ಮತ್ತು ತಾರುಣ್ಯಗಳಲ್ಲಿ ಕಂಡ (ಮತ್ತು ಸಾಫಲ್ಯಹೊಂದುವ ದರ ಪ್ರಾರಂಭ ದಿಶೆಯನ್ನು ಇಂದು ನಾನು ಕಾಣುತ್ತಿರುವ) ಧ್ಯೇಯಗಳ ವೈಯಕ್ತಿಕ ಘೋಷಣೆಯನ್ನು ಮಾತ್ರ ಮಾಡಬಲ್ಲೆ; ಏಕೆಂದರೆ, ಅವುಗಳಲ್ಲಿ ಭಾರತವು ನೇತೃತ್ವ ವಹಿಸಲೇ ಬೇಕು, ಅದೇ ನನ್ನ ತಿಳಿವಳಿಕೆಯ ಪ್ರಕಾರ ಭಾರತದ ಭಾವೀ ಕಾರ್ಯದ ಒಂದು ಭಾಗ; ಅದರಿಂದಲೇ ಅವು ಭಾರತದ ಸ್ವಾತಂತ್ರ್ಯಕ್ಕೆ ಸಂಬಂಧಿಸಿರುವುವು "ಹಿಂದುಸ್ತಾನವು ಉದಯಿಸುತ್ತಿದೆ—ಆದರೆ ಅದು ಅದರ ಪ್ರಾಪಂಚಿಕ ಹಿತಗಳಾದ ಪ್ರಭಾವ ವಿಸ್ತರಣ, ಮಹತ್ವಪ್ರಾಪ್ತಿ, ಪ್ರಭುತ್ವ ಮತ್ತು ಸಮೃದ್ಧಿಗಳನ್ನು ಸಾಧಿಸಲು ಮಾತ್ರವಲ್ಲ (ಅದು ಇವನ್ನೂ ದುರ್ಲಕ್ಷಿಸಬಾರದು); ಮತ್ತು ಇತರರಂತೆ ಅನ್ಯರ ಮೇಲೆ ಅಧಿಕಾರ ನಡೆಸುವದಕ್ಕಂತೂ ಎಂದೂ ಅಲ್ಲ—ಆದರೆ ಮಾನವ ಜನಾಂಗದ ಸಹಾಯಕಾರಿ ಹಾಗೂ ಸೇವೆಸಿ ದೇವರಿಗಾಗಿ ಮತ್ತು ಜಗತ್ತಿಗಾಗಿ ಬಾಳಲೆಂದು" ಎಂದು ನಾನು ಯಾವಾಗಲೂ ಹೇಳುತ್ತಿದ್ದೆ.

ಸ್ವಾಭಾವಿಕ ಅನುಕ್ರಮದಿಂದ ಆ ಧ್ಯೇಯ ಮತ್ತು ಗುರಿಗಳು ಇಂತಿವೆ. ಹಿಂದುಸ್ತಾನದ ಸ್ವಾತಂತ್ರ್ಯ ಮತ್ತು ಐಕ್ಯವನ್ನು ಸಾಧಿಸುವ ಒಂದು ಕ್ರಾಂತಿ; ಏಶಿಯದ ಬಿಡುಗಡೆ ಮತ್ತು ಪುನರುತ್ಥಾನ; ಮತ್ತು ಮಾನವ ನಾಗರಿಕತೆಯು ಪ್ರಗತಿಯಲ್ಲಿ ಹಿಂದೆ ವಹಿಸಿದ ಮಹತ್ವದ ಪಾತ್ರವನ್ನು ಇಂದೂ ವಹಿಸುವ ಸ್ಥಿತಿಗೆ ಬರುವುದು; ಹೊಸ ಹೆಚ್ಚಿನ, ಕಾಂತಿಮಯವಾದ ಉದಾತ್ತ ಜೀವನವನ್ನು ಮನುಷ್ಯಕುಲವು ಸಾಧಿಸು

ಬಳ್ಳಾರಿ ನಗರದಲ್ಲಿ:— ಬಳ್ಳಾರಿನಗರದ ಇತಿಹಾಸದಲ್ಲೇ ಅಪರೂಪವಾದ ಉತ್ಸಾಹವು ಸ್ವಾತಂತ್ರ್ಯ ದಿನದ ಪ್ರದರ್ಶಿತವಾಯಿತು. ಮನೆಗಳು, ಅಂಗಡಿಗಳು, ಕಛೇರಿಗಳು, ಸ್ವಚ್ಛವಾಡಲ್ಪಟ್ಟು ರಂಗವಲ್ಲಿ ಮಾವಿನತೋರಣ ಬಣ್ಣದ ಕಾಗದಗಳಿಂದ ಶೃಂಗರಿಸಲ್ಪಟ್ಟು 14 ನೆಯ ಮಧ್ಯರಾತ್ರಿ ಅಧಿಕಾರ ಸ್ವೀಕಾರವಾದೊಡನೆಯೇ ದೀಪಾರಾಧನೆಯಾಯಿತು. ಮುಪ್ಪುಗುಂಡುಗಳ ಭರಾಟವಾಯಿತು. ಮಲ್ಲಸಜ್ಜನವ್ಯಾಯಾಮಶಾಲೆಯಲ್ಲಿ 14 ನೆಯ ಸಾಯಂಕಾಲ 6 ರಿಂದ 15 ನೆಯ ಪ್ರಾ. 6 ರವರಿಗೆ ಎಡೆಬಿಡದೆ ಘಂಟಾನಾದವು ಸಾಗಿತು. ಪ್ರಾತಃಕಾಲ 5-30 ರ ಹೊತ್ತಿಗೆ ಎಲ್ಲಾ ಕಚೇರಿಗಳಮೇಲೆ ಆಯಾ ಶಾಖೆಯ ಮುಖ್ಯರು ರಾಷ್ಟ್ರೀಯ ಬಾವುಟವನ್ನೇರಿಸಿದರು. ಪ್ರಚಂಡ ಪ್ರಭಾತಫೇರಿಯು ಆನೆಯಮೇಲಿನ ರಾಷ್ಟ್ರ ಧ್ವಜದಿಂದ ನಗರ ಸಂಕೀರ್ತನೆಗೈದನಂತರ ಸಾಂಬಮೂರ್ತಿಮೈದಾನದಲ್ಲಿ ಶ್ರೀ ಸುಬ್ರಹ್ಮಣ್ಯಂರವರಿಂದ ಧ್ವಜಾರೋಹಣವಾಯಿತು. ಪ್ರಾ. 9 ರಿಂದ 12 ರವರಿಗೆ ಕೌಲುಬಜಾರದಲ್ಲಿ ಅನ್ನದಾನವು ನಡೆಯಿತು. ತಾಲೂಕುಕಚೇರಿಯ ಕಾಂಪೌಂಡದಲ್ಲಿ ಬಡವರಿಗೆ ಭೋಜನ ವಸ್ತ್ರದಾನವು ನಡೆಯಿತು. 5000 ಜನರಿಗೆ ಭೋಜನ, ಸುಮಾರು 2000 ಜನರಿಗೆ ವಸ್ತ್ರ, ಸೀರೆಗಳ ದಾನವಾಯಿತು. ಕಲೆಕ್ಟರ್ ಕಚೇರಿಯಲ್ಲಿ ನಡೆದ ದರ್ಬಾರದಲ್ಲಿ ಕಲೆಕ್ಟರವರು ಮುಖ್ಯಮಂತ್ರಿಗಳ ಸಂದೇಶವನ್ನೋದಿ ಸ್ವಾತಂತ್ರ್ಯದಿನದ ಮಹತ್ವವನ್ನು ರುಹಿದರು. ಅಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂ, ನರಸಿಂಹಶಾಸ್ತ್ರಿ, ಬೀಮರಾಯರು ಭಾಷಣಕೊಟ್ಟರು. ಸಾಯಂಕಾಲ ಮಳೆಯು ಸುರಿಯುತ್ತಿದ್ದರೂ ವಾದ್ಯವಿಶೇಷಗಳಿಂದ ಬೇರೆಬೇರೆಭಾಗಗಳಿಂದ ಮೆರವಣಿಗೆಗಳು ಸಾಂಬಮೂರ್ತಿಮೈದಾನಕ್ಕೆ ಬಂದು ತಲಪಿದವು ಅನೇಕಗರಡೀಮನೆಗಳವರು ತಮ್ಮ ತಮ್ಮ ತಂಡಗಳೊಡನೆ ಮೆರವಣಿಗೆಯಲ್ಲಿ ಭಾಗವಹಿಸಿದರು. ಹರಿಜನ ಕೇರಿಗಳಲ್ಲಿ ರಾತ್ರಿಯೆಲ್ಲಾ ಭಜನೆಯಾಗಿ ಧ್ವಜಾರೋಹಣವಾಗಿ ಅವರೂ ಮೆರವಣಿಗೆಯಲ್ಲಿ ಭಾಗವಹಿಸಿದರು. ಸಾರ್ವಜನಿಕಸಭೆಯಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಶ್ರೀ ಮರುಳಸಿದ್ದಯ್ಯ, ವೀರಾಸ್ವಾಮಿ, ವೆಂಕೋಬರಾವು, ಕೃಷ್ಣರಾವು, ಗೌಡಪ್ಪ ಇವರು ಭಾಷಣಕೊಟ್ಟರು ಕಲೆಕ್ಟರ್ ಅನಂತರಾಮ್ಮರವರು ಮಾತಾಡುತ್ತಾ ಈಗ ಭೇದವು ಮಾಯವಾಗಿರುವದರಿಂದ ಪ್ರಜೆಗಳು ಅಧಿಕಾರಿಗಳಿಗೆ ಹೆಚ್ಚಿನ ಸಹಕಾರ ಕೊಡಬೇಕೆಂದರು. ಎಲ್ಲಾ ದೇವಸ್ಥಾನಗಳಲ್ಲಿ ಅಭಿಷೇಕ, ಪೂಜೆಯೂ, ಮಸೀದಿಗಳಲ್ಲಿ ಪ್ರಾರ್ಥನೆ ನಡೆಯಿತು. ಶಾಲೆಗಳಲ್ಲಿ ಮಿಠಾಯಿ ಹಂಚಲಾಯಿತು.

ಕೊಡ್ಲಿಗಿ:— ಸಾಯಂಕಾಲ ಸೂತ್ರಯಜ್ಞವಾರಂಭವಾಗಿ ಮಧ್ಯರಾತ್ರಿಯಲ್ಲಿ ಧ್ವಜಾರೋಪಣವಾಯಿತು. ಮಂಗಳ ನಿನಾದಗಳು ಮೊಳಗುತ್ತಿರಲು ಪ್ರತಿಜ್ಞೆಯನ್ನು ಸ್ವೀಕರಿಸಲಾಗಿ ಹೈಸ್ಕೂಲು ಮೈದಾನದಲ್ಲಿ ವ್ಯಾಯಾಮ ಮಂದಿರದ ಅಡಿಗಲ್ಲು ಹಾಕಲಾಯಿತು. ಮಧ್ಯರಾತ್ರಿಯ ದೀವಟಿಗೆ ಮೆರವಣಿಗೆಯು ಮದ್ದುಗುಂಡುಗಳ ಭರಾಟದ ಜಯ ಜಯಕಾರದಿಂದ ಮೈದಾನಕ್ಕೆ ಬಂದು ಹುತಾತ್ಮರಿಗೆ ಶಾಂತಿ ಕೋರಿ ಜನಗಣ ಮನದಿಂದ ಮುಗಿಯಿತು. ಪ್ರಾ 5-30 ಗೆ ಸರಕಾರಿ ಕಟ್ಟಡಗಳ ಮೇಲೆ ಧ್ವಜಾರೋಹಣವಾಯಿತು. ಪ್ರಾತಃಕಾಲ ಹೈಸ್ಕೂಲ ಮೇಲೆ ಧ್ವಜಾರೋಹಣವಾಯಿತು. ಮಧ್ಯಾನ್ಹ 11 ರಿಂದ 2 ರವರಿಗೆ ಭೋಜನ, ವಸ್ತ್ರದಾನ, ಹರಿಜನ ದೇವಾಲಯ ಪ್ರವೇಶ ನಡೆಯಿತು. ಸಾಯಂಕಾಲ 62 ಜೋಡಿ ಎತ್ತುಗಳ ಮಹಾತ್ಮರ ಭಾವಚಿತ್ರದ ಮೆರವಣಿಗೆ ನಡೆದು ಬಹಿರಂಗ ಸಭೆಯಲ್ಲಿ ಹುತಾತ್ಮರ ಆತ್ಮ ಶಾಂತಿಕೋರಿದನಂತರ ಮಧ್ಯದಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳು ಹಂಚಲ್ಪಟ್ಟವು ಸ್ವಾತಂತ್ರ್ಯವನ್ನು ಕುರಿತ ಭಾಷಣಗಳಾದವು ಊರಿನ ಅಲಂಕೃತ ಬೀದಿಗಳಲ್ಲಿನ ದೀಪೋತ್ಸವವು ನೇತ್ರಾನಂದಕರವಾಗಿದ್ದಿತು. ಎಲ್ಲರೂ ಸಹಕರಿಸಿದರು.

ಮಾಗಳ (ಹಡಗಲಿ)

14 ನೆಯ ಮಧ್ಯರಾತ್ರಿಯನಂತರ ದೀವಟಿಗೆಗಳ ಮೆರವಣಿಗೆಯೊಂದಿಗೆ ಎಲ್ಲದೇವಾಲಯಗಳಲ್ಲಿ

ಹರಿಜನರ ಪ್ರವೇಶವಾಯಿತು. ಪ್ರಾತಃಕಾಲ ಧ್ವಜ ವಂದನೆಯನಂತರ ಧ್ವಜಾರೋಹಣವನ್ನು ಶ್ರೀ ಗು. ಭೋಜರಾಜಪ್ಪನವರು ನೆರವೇರಿಸಿದರು ಲಂಕೆಪ್ಪ ರಾಮಪ್ಪನವರು ಧ್ವಜದ ಮಾಹತ್ಮವನ್ನು ಈ ರಿತು ದೂತಾಡಿದರು. ೆ ಸಲು ಗುಂಡು ಹಾರಿಸಲಾಯಿತು ಓರೇಹಡಗಲಿ ಪೋಲೀಸರು ಬ್ಯಾಂಡಿನೊಂದಿಗೆ ಧ್ವಜ ವಂದನೆ ಮಾಡಿದರು. ಶಾಲೆಗಳ ಬಾಲ ಬಾಲಕಿಯರಿಗೆ ಆಟಪಾಟಗಳ ನಂತರ ಮಿಠಾಯಿ ಹಂಚಲಾಯಿತು. ಬಡಜನರಿಗೆ ರಂಗಾಪುರ ಛತ್ರದಲ್ಲಿ ಭೋಜನವಾಯಿತು. 4 ಜೊತೆ ಎತ್ತುಗಳ ಅಲಂಕೃತರಥದಲ್ಲಿ ಗಾಂಧಿ ಭಾವಚಿತ್ರದ ಮೆರವಣಿಗೆಯು ಮುಖ್ಯ ಬೀದಿಗಳಲ್ಲಿ ಹಾದು ಹೋಯಿತು. ರಾತ್ರೆ ಶ್ರೀ ಇ ಟಿ ಗಿ ಲಿಂಗಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಡಿದ ಹುತಾತ್ಮರ ಆತ್ಮ ಶಾಂತಿಕೋರಿ ಶ್ರೀ ಲಂಕೆಪ್ಪ ರಾಮಪ್ಪನವರು ಭಾಷಣಮಾಡಿದರು ಸ್ವಾತಂತ್ರ್ಯ ಉತ್ಸವದ ನಿಮಿತ್ತ ತಾಲ್ಲಾ ಜಾಸ್ ಗುತ್ತಲ್ ಇವರ ಸಾಪ್ಟ್ಬಾಲ್ ಆಯಿತು

ತಂಬ್ರಹಳ್ಳಿ—ಚಾಟಿಗೊಂಡನಹಳ್ಳಿ

ಈ ಎರಡು ಹಳ್ಳಿಗಳು ಪವಿತ್ರಸ್ಥಳಿರುವಕಾರಣ ಪಾರಮಾರ್ಥಿಕ ಉತ್ಸವಗಳು ಪರಮಸಾಗಿ ನಡೆದವು. 11 ರಿಂದ ಪ್ರಭಾತ ಫೇರಿಯು ನಡೆಯಿತು. 14 ನೆಯ ಪುಣ್ಯರಾತ್ರಿ ದೀಪೋತ್ಸವ, ಪ್ರಾತಃಕಾಲ ಪ್ರಭಾತಫೇರಿ ತದನಂತರ ಧ್ವಜಾರೋಹಣ ಪಂಚಮಿ ಶಾಲಾ ಹುಡುಗರಿಗೆ ಮಿಠಾಯಿ ಹಂಚುವಿಕೆಯಾಯಿತು. ಸಾಯಂಕಾಲ ಅಲಂಕೃತ ಮತ್ತು ರಾಷ್ಟ್ರದ ಮುಂದಾಳುಗಳ ಮೆರವಣಿಗೆಯು ವಾದ್ಯವಿಶೇಷಗಳಿಂದ ಎರಡೂ ಗ್ರಾಮಗಳಲ್ಲಿ ಮೆರೆಸಲಾಯಿತು. ಸಾಯಂಕಾಲದ ಸಭೆಯಲ್ಲಿ ಹುತಾತ್ಮರಿಗೆ ಶಾಂತಿ ಕೋರಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಅಭಿನಂದಿಸಲಾಯಿತು ಕಾಂಗ್ರೆಸ್‌ಗುರಿ ಸ್ವಾತಂತ್ರ್ಯಗಳ ಅರ್ಥವನ್ನು ಹೇಳಲಾಯಿತು. ತಂಬ್ರಹಳ್ಳಿ ಶ್ರೀ ಕಿಸ್ಟಾಳು ಗುರುಸಿದ್ಧಪ್ಪನವರು, 300 ಬಡವರಿಗೆ ಉಣ್ಣೆ ಸಂತರ್ಪಣೆಮಾಡಿಸಿ ಬಡಕುಟುಂಬದವರಿಗೆ ಬಟ್ಟೆಕೊಟ್ಟರು. ಚಾಟಿನಳ್ಳಿಯಲ್ಲಿ 200 ಜನರಿಗೆ ಭೋಜನಕೊಟ್ಟರು. ಗ್ರಾಮಪಂಚಾಯತಿ, ಪೋಲೀಸ್ ಠಾಣೆ ಮತ್ತು ಇತರ ಗೃಹಗಳಮೇಲೆ ರಾಷ್ಟ್ರಧ್ವಜ ಹಾರಿಸಲಾಯಿತು. ಸ್ವಾತಂತ್ರ್ಯದಿನದನಂತರ 3-4 ದಿನಗಳಾದರೂ ಇನ್ನು ಸಂತೋಷೋತ್ಸವಗಳು ನಡೆದಿವೆ.

ಕೆಲ್ಲುಕಂಭ (ಬಳ್ಳಾರಿ ಜಿಲ್ಲೆ)

14 ನೆಯ ಪುಣ್ಯರಾತ್ರಿಯಿಂದಲೂ ಊರಿನ ರೈತರು ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸಿ ವಿಶೇಷ ಉತ್ಸಾಹವನ್ನು ಪ್ರದರ್ಶಿಸಿದರು. ಧ್ವಜಾರೋಹಣ ಉತ್ಸವವು ಸಂಭ್ರಮದಿಂದ ನಡೆಯಿತು. ಗ್ರಾಮದೇವತೆಗಳ ಪೂಜೆಯನಂತರ ಗಾಂಧಿ ಭಾವಚಿತ್ರದ ಮೆರವಣಿಗೆಯು ಊರ ಬೀದಿಗಳಲ್ಲಿ ಜಯಜಯಕಾರದೊಡನೆ ಶಾಲಾಮಕ್ಕಳಿಂದಲೂ ಊರಿನ ರೈತ ಪ್ರಜೆಗಳಿಂದಲೂ ನಡೆಯಿತು ಸಾರ್ವಜನಿಕ ಸಭೆಯಲ್ಲಿ ರೈತರಾಜ್ಯವು ಸ್ಥಾಪಿಸಲ್ಪಡಬೇಕೆಂದು ತುಂಗಭದ್ರಾ ಪ್ರಾಜೆಕ್ಟ ಅಧಿಕಾರಿಗಳು ಉಪನ್ಯಾಸಕೊಟ್ಟರು. ಈ ಉತ್ಸವದ ನಿಮಿತ್ತ ರೆಡ್ಡಿ ಮಲ್ಲನಗೌಡರು, ಕರಣಂ ರಾಘವೇಂದ್ರರಾಯರು ಶಾಲೆಯಲ್ಲಿ ಉಪಾಹಾರಕೂಟವನ್ನು ಏರ್ಪಡಿಸಿದ್ದರು.

ಹಿರಿಯೂರು.

ಇಲ್ಲಿ ಸ್ವಾತಂತ್ರ್ಯದಿನೋತ್ಸವವು 15 ನೆಯ ತಾ. ಎಲ್ಲಾಸರ್ಕಾರಿ ಮತ್ತು ಖಾಸಗಿ ಕಟ್ಟಡಗಳ ಮೇಲೆ ಧ್ವಜಾರೋಹಣದಿಂದಾರಂಭವಾಗಿ ದೊಡ್ಡ ಮೆರವಣಿಗೆಯಾಯಿತು. 17 ನೆಯ ತಾ. ಕಲೆಕ್ಟರ್ ಶ್ರೀ ಅನಂತರಾವುಸ್ಸರವರು, ನಿಧಿರೂ ಪಾರ್ಕ್ ಮತ್ತು ರೇಡಿಯೋ ಸ್ವಾತಂತ್ರ್ಯೋತ್ಸವ ನೆರವೇರಿಸುತ್ತಾ ಹೀಂದೂ—ಮುಸ್ಲಿಂ ಸೌಹಾರ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ಜನತೆಯು ಬದುಕಬೇಕೆಂದರೆ ಪರಸ್ಪರ ಪಡಕಾರವಗಹ್ಯಬೇಕೆಂದರು. ಶ್ರೀ ಟಿ. ಸುಬ್ರಹ್ಮಣ್ಯಂ ಮತ್ತು ಕಲ್ಲುರಾಯರು ಮಾತಾಡಿದ ನಂತರ ಗಾಂಧಿ ನೆಹರು ಭಾವಚಿತ್ರಗಳನ್ನೊಳಗೊಂಡ ದೊಡ್ಡ ಮೆರವಣಿಗೆ ಕೆಗೆಯಾಯಿತು.

ವುದು; ಆ ಉದಾತ್ತ ಜೀವನದ ಸಂಪೂರ್ಣಸಿದ್ಧಿಗಾಗಿ ಬಾಹ್ಯದಲ್ಲಿ ಭಿನ್ನ ಭಿನ್ನವಾಗಿರುವ ಜನಾಂಗಗಳು ಅಂತರ್ರಾಷ್ಟ್ರೀಯ ಒಕ್ಕೂಟದೊಳಗೆ ಬಂದು ಎಲ್ಲವನ್ನೂ ಮೀರಿದ ಸಂಪೂರ್ಣ ಒಂದಿಕೆಯಲ್ಲಿ ಸೆಳೆಯಲ್ಪಡುವುದು;

ತನ್ನ ಆಧ್ಯಾತ್ಮಿಕ ಜ್ಞಾನವನ್ನು ಮತ್ತು ಇಡಿಯ ಮಾನವಕುಲದ ಜೀವನವನ್ನು ಅಧ್ಯಾತ್ಮಿಕವನ್ನಾಗಿ ಮಾಡುವ ತನ್ನ ಸಾಧನವನ್ನು ಭಾರತವು ಜಗತ್ತಿಗೆ ಕೊಡುವುದು; ಕೊನೆಯದಾಗಿ ಜನರು ವೈಯಕ್ತಿಕ ಸಂಪೂರ್ಣತೆ ಮತ್ತು ಸಂಪೂರ್ಣ ಸುಸಂಬದ್ಧ ಸಮಾಜಗಳನ್ನು ಕುರಿತು ಕನಸುಕಾಣಲು, ವಿಚಾರಿಸಲು ಪ್ರಾರಂಭಿಸಿದಂದಿನಿಂದ ಮಾನವಕುಲವನ್ನು ಗಲಿಬಿಲಿಗೊಳಿಸಿದ ಅನೇಕ ಜೀವನ ಸಮಸ್ಯೆಗಳ ಉತ್ತರವನ್ನು ಕೊಡಬಲ್ಲ ಎತ್ತರಕ್ಕೆ ಮಾನವನ ಎಚ್ಚೆತ್ತ ಮನಸ್ಸಿನ ಎಚ್ಚರವನ್ನು ಒಯ್ಯುವ ವಿವರ್ತದ ಹೊಸ ಹೆಜ್ಜೆಯೊಂದನ್ನು ಇಡುವುದು.

ಹಿಂದುಸ್ತಾನವು ಸ್ವತಂತ್ರವಾದದ್ದು ನಿಜ, ಆದರೆ ಅದು ಐಕ್ಯವನ್ನು ಸಾಧಿಸಲಿಲ್ಲ—ಆದುದರಿಂದ ಅದು ಸಾಧಿಸಿದ್ದು ಬರಿಯ ಹರುಕು ಮುರುಕು ಸ್ವಾತಂತ್ರ್ಯವೆನ್ನಬೇಕಾಗಿದೆ. ಬ್ರಿಟಿಶರ ಆಳಿಕೆಗಿಂತ ಹಿಂದೆ ಇದ್ದ ಭಿನ್ನಸಂಸ್ಥಾನಗಳ ಗೊಂದಲದಲ್ಲಿ ಮತ್ತೆ ಭಾರತವು ಬೀಳುವುದೇನೋ ಎಂದು ಒಮ್ಮೆ ತೋಪು ತ್ತಿತ್ತು. ಸುದೈವದಿಂದ ಇಂತಹ ವಿನಾಶಕಾರಕ ಪರಿಸ್ಥಿತಿಯನ್ನು ದೂರವಿರಿಸುವ ಸಂಭವ ಹೆಚ್ಚಾಗಿ ಕಂಡು ಬರುತ್ತಿದೆ. ಘಟನಾಸಮಿತಿಯು ಬುದ್ಧಿವಂತಿಕೆಯಿಂದ ಪರಿಣಾಮಕಾರಿಯಾಗಿ ಅನುಸರಿಸಿದ ಧೋರಣವು ನಿಮ್ನವರ್ಗದ ಸಮಸ್ಯೆಗಳನ್ನು ಒಡಕು ತೊಡಕು, ಭಿನ್ನಾಭಿಪ್ರಾಯಗಳಿಗನವಕಾಶವೀಯದಂತೆ ಉತ್ತರಿಸುವುದನ್ನು ಸಾಧ್ಯಮಾಡಿಕೊಟ್ಟಿದೆ ಆದರೆ ಹಳೆಯ ಹಿಂದು ಮತ್ತು ಮುಸಲ್ಮಾನರೆಂಬ ಜಾತೀಯ ವಿಭಜನೆಯು ದೇಶದ ಚಿರಸ್ಥಾಯಿಯಾದ ರಾಜಕೀಯ ವಿಭಜನೆಯೆನಿಸಿ ರೂಢಮೂಲವಾಗಿ ನಿಲ್ಲುವಂತೆ ತೋರುತ್ತದೆ. ಕಾಂಗ್ರೆಸ್ಸು ಮತ್ತು ರಾಷ್ಟ್ರವು ಈ ಇತ್ಯರ್ಥವನ್ನು ತಾತ್ಕಾಲಿಕ ಶಾಂತಿಸಾಧನವೆಂದು ಗಣಿಸುವದಲ್ಲದೆ ಎಂದಿಗೂ ಬದಲಿಸಲಾರದ, ಹಾಗೇ ಇರತಕ್ಕ ಇತ್ಯರ್ಥವೆಂದು ಗ್ರಹಿಸುವುದಿಲ್ಲವೆಂದು ಸಂಬಲಾಗಿದೆ. ಏಕೆಂದರೆ, ಅದು ಕಡೆತನಕ ಉಳಿದರೆ ಭಾರತವು ಬಹಳ ದುರ್ಬಲವಾಗುವುದು, ಮುಕ್ಕಾಗಿ ಹೋದರೂ ಹೋಗಬಹುದು; ಆಗ ಅಂತಃಕಲಹವು ಯಾವಾಗಲೂ ಸಂಭಾವ್ಯವೆನಿಸುವುದು. ಅದರಿಂದ ಹೊಸ ದಾಳಿಯಾಗಿ ಪರಕೀಯರು ಭಾರತವನ್ನು ಗೆದ್ದುಕೊಂಡು ಹೋಗಲೂ ಬಹುದು. ದೇಶದ ವಿಭಜನೆ ಮೊದಲು ಇಲ್ಲವಾಗಬೇಕು—ಅದಕ್ಕಾಗಿ ಪರಿಸ್ಥಿತಿಯು ಬಿಗುವು ಕಡಿಮೆಯಾಗುವುದು, ಶಾಂತಿ ಸುಸಂಬದ್ಧತೆಗಳ ಅವಶ್ಯಕತೆಯನ್ನು ತಿಳಿದುಕೊಂಬ ಬುದ್ಧಿ ಹುಟ್ಟುವುದು, ಯಾವಾಗಲೂ ಉಭಯ ಸಾಮಾನ್ಯವಾದ, ಇಕ್ಕಡೆಯವರೂ ಒಟ್ಟಾಗಿ ತೆಗೆದುಕೊಳ್ಳಬೇಕಾಗಿ ಬರುವ ಕಾರ್ಯಕ್ರಮಗಳ ಅಗತ್ಯ, ಅಥವಾ ಅದೇ ಉದ್ದೇಶಸಾಧನೆಗಾಗಿ ಒಂದು ಒಕ್ಕೂಟದ ಕಾಯದೆ ಈ ಯಾವುದೇ ಒಂದು ಸಾಧನದಿಂದ ಸಂಯುಕ್ತ ಹಿಂದುಸ್ತಾನವನ್ನು ಸಾಧಿಸಬೇಕು. ಹೀಗೆ ಐಕ್ಯವು ಯಾವುದಾದೊಂದು ರೂಪದಿಂದ ಸಂಭವಿಸಬಹುದು—ಇಂಥದೇ ರೂಪದಲ್ಲಿ ಎಂಬುದಕ್ಕೆ ಕಾರ್ಯಸಾಧನೆಯ ದೃಷ್ಟಿಯಿಂದ ಪ್ರಾಮುಖ್ಯವಿರಬಹುದಲ್ಲದೆ ಮೂಲಭೂತವಾದ ಗಣ್ಯತೆಯಿಲ್ಲ. ಆದರೆ ಯಾವ ಮಾರ್ಗದಿಂದೇ ಆಗಲಿ, ವಿಭಜನೆಯು ಹೋಗಲೇ ಬೇಕು ಮತ್ತು ಹೋಗುವುದು. ಏಕೆಂದರೆ ಹಿಂದುಸ್ತಾನವು ವಿಭಕ್ತವಾಗಿಯೇ ಇರುವುದಾದರೆ ಅದರ ಭವಿಷ್ಯವು ನುಚ್ಚುನೂರಾದೀತು ಮತ್ತು ಸಂಪೂರ್ಣವಾಗಿ ಹಾಳಾಗಿ ಹೋದರೂ ಹೋಗಬಹುದು.

ವಿಶಯವು ಎದ್ದಿದೆ ಮತ್ತು ಅದರ ಬಹುದೊಡ್ಡ ಭಾಗವು ಬಿಡುಗಡೆ ಹೊಂದಿದೆ ಅಥವಾ ಈಗ ಹೊಂದುವುದರಲ್ಲಿದೆ; ದಾಸ್ಯದಲ್ಲಿರುವ ಅದರ ಇತರ ಭಾಗಗಳು ನಾನಾ ಮುಖವಾದ ಹೋರಾಟಗಳಿಂದ ಬಿಡುಗಡೆಯತ್ತ ಸಾಗುತ್ತಿವೆ. ಸ್ವಲ್ಪ ಮಾತ್ರ ಮಾಡಬೇಕಾದುದುಳಿದಿದೆ—ಅದನ್ನು ಇಂದು ಅಥವಾ ನಾಳೆ

ಮಾಡಲಾಗುವುದು. ಅದರಲ್ಲಿ ಭಾರತವು ತನ್ನ ಪಾತ್ರವನ್ನು ವಹಿಸಬೇಕಾಗಿದೆ ಮತ್ತು ಅದು ಏನೇನನ್ನು ಸಾಧಿಸೀತು ಎಂಬುದನ್ನು ಸೂಚಿಸುವ ದಕ್ಷತೆ ಮತ್ತು ಸಾಮರ್ಥ್ಯದಿಂದ ಆಗಲೇ ಅದು ಆ ತನ್ನ ಪಾತ್ರವನ್ನು ವಹಿಸಲಾರಂಭಿಸಿಬಿಟ್ಟಿದೆ.

ಅಸಂಪೂರ್ಣವಾದ ಪ್ರಾರಂಭೋತ್ಸಾಹ ದಶೆಯಲ್ಲಿಯಾದರೂ ಮಾನವಕುಲದ ಸಂಘಟನೆ ಸಾಗುತ್ತಿದೆ. ಸುವ್ಯವಸ್ಥಿತವಾಗಿದ್ದರೂ ಅದ್ಭುತವಾದ ಎಡರುಗಳೊಡನೆ ಹೋರಾಡುತ್ತಿದೆ. ಅದರೆ ಅದರ ಉನ್ನತಿ ಅಲ್ಲಿ ಇದ್ದೇ ಇದೆ; ಮತ್ತು ಇತಿಹಾಸದ ಅನುಭವವನ್ನು ಮಾರ್ಗದರ್ಶಕವಾಗಿ ತೆಗೆದುಕೊಳ್ಳಬಹುದಾದರೆ, ಅದು ಗೆಲ್ಲುವ ವರೆಗೆ ಹೆಚ್ಚುತ್ತ ಹೋಗುವದು ಅನಿವಾರ್ಯ, ಇಲ್ಲಿಯೂ ಭಾರತವು ಪ್ರಮುಖ ಪಾತ್ರವಹಿಸಿದೆ ಮತ್ತು ಸಾಂಪ್ರತ ವಿಷಯಗಳಿಂದ ಹಾಗೂ ಸದ್ಯದ ಫಲಗಳಿಂದ ಕುಬ್ಜವಾಗಿ ನಿಲ್ಲದೆ ಭವಿಷ್ಯದೊಳಹೊಕ್ಕು ನೋಡಿ ಅದನ್ನು ಸಮೀಪವರ್ತಿಯನ್ನಾಗಿ ಮಾಡಹೊರಟರೆ ರಾಷ್ಟ್ರಸಂಘದಲ್ಲಿ ಅದರ ಇರವು ಅಂಜಿ ಅಂಜಿ ಮಂದಗತಿಯಿಂದ ಸಾಗುವ ಕಾರ್ಯದಿಂದ ಶೀಘ್ರವಾಗಿ ನಡೆಯಲು ಕಾರಣವಾದೀತು. ಸದ್ಯದ ಪ್ರಯತ್ನವನ್ನು ಯಾವುದಾದರೊಂದು ದುರ್ಘಟನೆಯು ಅಡ್ಡ ಬಂದು ತೊಂದರೆಯೊತ್ತಿ ನಾಶ ಮಾಡಿದರೂ ಮಾಡಬಹುದು; ಅವರೆ ಆಗಲೂ ಅಂತ್ಯದ ಫಲಿತಾಂಶವು ನಿಶ್ಚಯವೇ ಆಗಿದೆ. ಏಕೆಂದರೆ ಯಾವ ಪಕ್ಷದಲ್ಲೇ ಆಗಲಿ, ಪ್ರಕೃತಿಯ ಗತಿಯಲ್ಲಿ ಐಕ್ಯಸಂಘಟನೆಯೊಂದು ಅವಶ್ಯಕತೆಯೆ ಸರಿ; ಅನಿವಾರ್ಯವಾದ ಪ್ರಚಲನ ಮತ್ತು ಅದರ ಕಾರ್ಯಸಾಧನೆ ಇವನ್ನು ಯಾವ ತೊಂದರೆಯೂ ಇಲ್ಲವೆ ಮೊದಲೇಹೇಳಿಡಬಹುದು. ರಾಷ್ಟ್ರಗಳಿಗೆ ಅದರ ಅವಶ್ಯಕತೆಯಿರುವುದೂ ಸ್ಪಷ್ಟವಿದೆ; ಏಕೆಂದರೆ ಅದಿಲ್ಲದಿದ್ದರೆ ಸಣ್ಣರಾಷ್ಟ್ರಗಳ ಸ್ವಾತಂತ್ರ್ಯವು ಇನ್ನು ಮುಂದೆ ಸುರಕ್ಷಿತವಾಗಿರಲಾರದು ಮತ್ತು ದೊಡ್ಡ ಸಮರ್ಥ ರಾಷ್ಟ್ರಗಳು ಕೂಡ ವಸ್ತುತಃ ಭದ್ರವಾಗಿರಲಾರವು. ವಿಭಕ್ತವಾಗಿಯೇ ಉಳಿದರೆ ಹಿಂದುಸ್ತಾನವು ತನ್ನ ಸುರಕ್ಷಿತತೆಯ ಬಗ್ಗೆ ಭರವಸೆಯಿಡಲಾರದು. ಆದುದರಿಂದ ಎಲ್ಲರ ಹಿತಕ್ಕಾಗಿ ಅದು ಸಂಯುಕ್ತವಾಗಬೇಕು. ಮಾನವನ ಕಾರ್ಯಕ್ಷಮತೆ ಮತ್ತು ಹುಚ್ಚು ಸ್ವಾರ್ಥಗಳು ಮಾತ್ರ ಅದನ್ನು ತಡೆಹಿಡಿಯಬಲ್ಲವು. ತದ್ವಿರುದ್ಧವಾಗಿ, ದೇವತೆಗಳು ಕೂಡ ಸುಮ್ಮನೆ ಹೆಣಗುತ್ತಾರೆ ಎಂದು ಹೇಳಲಾಗಿದೆ; ಆದರೆ ಅದು ದೈವೇಚ್ಛೆ ಹಾಗೂ ಪ್ರಕೃತಿಯ ಅವಶ್ಯಕತೆಗಳೆದುರಲ್ಲಿ ಹಾಗೆಯೇ ನಿಲ್ಲಲಾರದು. ಆಗ ರಾಷ್ಟ್ರೀಯತೆಯು ಸಫಲವಾದಂತಾದೀತು; ಅಂತರ್ರಾಷ್ಟ್ರೀಯ ಭಾವ ಮತ್ತು ನೋಟ ಬೆಳೆದು ಬರಬೇಕು, ಅಂತರ್ರಾಷ್ಟ್ರೀಯ ಪದ್ಧತಿಗಳೂ ಸಂಸ್ಥೆಗಳೂ ಹುಟ್ಟಿ ಬರಬೇಕು ಪರಿವರ್ತನಮಾರ್ಗದಲ್ಲಿ ದ್ವಿಮುಖ ಅಥವಾ ಬಹುಮುಖವಾದ ನಾಗರಿಕತ್ವ ಬೆಳೆದು ಬರಬಹುದು; ಮತ್ತು ರಾಷ್ಟ್ರೀಯತಾ ಭಾವವು ತನ್ನ ರಜೋತ್ಸಾಹವನ್ನು ಕಳೆದುಕೊಂಡು ತನ್ನ ಭಾವನೆಗಳಿಗೆ ಮೇಲಿನ ಸಂಗತಿಗಳು ಸಂಪೂರ್ಣವಾಗಿ ಹೊಂದಿಕೊಳ್ಳುವುದನ್ನು ಕಂಡೀತು ಒಂದು ಹೊಸ ಐಕ್ಯಭಾವವು ಮಾನವ ಕುಲದಲ್ಲಿ ನೆಲೆನಿಲ್ಲುವುದು.

ಜಗತ್ತಿಗೆ ಭಾರತದ ಅಧ್ಯಾತ್ಮಿಕ ಕೊಡುಗೆಯು ಆಗಲೇ ಪ್ರಾರಂಭವಾಗಿದೆ. ಹಿಂದುಸ್ತಾನನ ಅಧ್ಯಾತ್ಮಿಕತೆಯು ಯುರೋಪು ಅಮೆರಿಕೆಗಳನ್ನು ಯಾವಾಗಲೂ ಹೆಚ್ಚುತ್ತಿರುವ ಪ್ರಮಾಣದಲ್ಲಿ ಪ್ರವೇಶಿಸುತ್ತಿದೆ, ಆ ಪ್ರಚಲನವು ವೃದ್ಧಿ ಹೊಂದುತ್ತದೆ; ಕಾಲನೊಡ್ಡುವ ಮಹಾನರ್ಥಗಳ ನಡುವೆ ಜೀವಿತಾಲಂಬನದಾತೆಯಿಂದ ಹೆಚ್ಚು ಹೆಚ್ಚು ರಾಷ್ಟ್ರಗಳು ಭಾರತದತ್ತ ನೋಡ ತೊಡಗಿವೆ; ಮತ್ತೆ ಅವರ ಉಪದೇಶಗಳತ್ತ ಹೆಚ್ಚು ಹೆಚ್ಚು ಗಮನವೀಯುತ್ತಿರುವುದಲ್ಲದೆ, ಮಾನಸಿಕ ಮತ್ತು ಅಧ್ಯಾತ್ಮಿಕ ಅನುಷ್ಠಾನದತ್ತಲೂ ಬಹಳ ಲಕ್ಷ್ಯಗೊಡಲಾಗುತ್ತಿದೆ.

ಉಳಿದದ್ದು ಇನ್ನೂ ಒಂದು ವೈಯಕ್ತಿಕ ಆಶೆ ಭಾರತ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಮುನ್ನೋಟದ ಮನಸ್ಸಿನವರನ್ನು ಹಿಡಿದ ಒಂದು ಭಾವ, ಒಂದು

ಧ್ಯೇಯ. ಉಳಿದೆಲ್ಲ ಪ್ರಯತ್ನ ಕ್ಷೇತ್ರಗಳಲ್ಲಿಗಿಂತ ಈ ಮಾರ್ಗದಲ್ಲಿ ಎಡರುಗಳು ಹೆಚ್ಚು, ಆದರೆ ಗೆಲ್ಲಲೆಂದೇ ಎಡರುಗಳನ್ನು ಹುಟ್ಟಿಸಿದ್ದು ಮತ್ತು ಪುರುಷೋತ್ತಮನ ಇಚ್ಛೆಯಿದ್ದರೆ ಅವುಗಳನ್ನು ಗೆಲ್ಲಲು ಸಾಧ್ಯವಾಗುವುದು. ಇಲ್ಲಿಯೂ ಈ ವಿವರ್ತವು ಸಂಭವಿಸಬೇಕಾಗಿದ್ದರೆ ಮತ್ತು ಅದು ಆತ್ಮದ ಹಾಗೂ ಅಂತರಾತ್ಮದ ಬೆಳವಣಿಗೆಯಿಂದ, ಪ್ರಬೋಧದಿಂದ ಸಂಭವಿಸಬೇಕಾಗಿರುವುದರಿಂದ—ಭಾರತದಿಂದ ಪ್ರಾರಂಭೋತ್ಸಾಹವು ಸಿಗಬಹುದು; ಮತ್ತು ಆ ಕಾರ್ಯಕ್ಕೆ ಅವಕಾಶವು ವಿಶ್ವವ್ಯಾಪಿಯಾದರೂ ಕೇಂದ್ರ ಚಟುವಟಿಕೆ ಭಾರತದ್ದೇ ಆಗಬಹುದು.

ಭಾರತದ ಬಿಡುಗಡೆಯ ಈ ದಿನದಲ್ಲಿ ನಾನು ಕೊಡುವ ಅಭಿಪ್ರಾಯವು ಇಂಥದೆ; ಈ ಸಂಗತಿಯು ನೆರವೇರುತ್ತದೋ ಇಲ್ಲವೋ, ನೆರವೇರಿದರೆ ಹೇಗೆ ಮತ್ತು ಎಷ್ಟರವರೆಗೆ ಎಂಬುದು ಈ ನವ ಸ್ವತಂತ್ರ ಭಾರತವನ್ನು ಅವಲಂಬಿಸಿದೆ. (ಕರ್ಮವೀರ)

ಅನಂತಶಯನಗುಡಿ:- - 14 ನೆಯ ಮಧ್ಯರಾತ್ರಿ 31 ತೋಪುಗಳನ್ನು ಹಾರಿಸಿ, 101 ದೀವಾರಾಧನೆಯ ನಂತರ ಶ್ರೀ ದಳವಾಯಿ ಅಂಬಣ್ಣನವರಿಂದ ಧ್ವಜಾರೋಹಣವಾಯಿತು. ಪ್ರಾತಃಕಾಲ ಗು. ಬಾಲಪ್ಪನವರು ಧ್ವಜರೋಹಣಮಾಡಿದರು. ಸಕ್ಕರೆಯು ಹಂಚಲಾಯಿತು. 63 ಜೊತೆ ಎತ್ತುಗಳ ಮೆರವಣಿಗೆಯಾಗಿ ಸಾಯಂಕಾಲದ ಅನ್ನಸಂತರ್ಪಣೆಯಿಂದ ಕಾರ್ಯವು ಮುಗಿಯಿತು.

ಮುಲಪನಗುಡಿ:— ಮಧ್ಯರಾತ್ರಿ ಕೋಟಿಯ ಹೂಡೇದಮೇಲೆ ಶ್ರೀ ವಾದಾಚಾರ್ಯರಿಂದ ಧ್ವಜಾರೋಹಣವಾಯಿತು 500 ಜನರ ಸಮೂಹವು ಧ್ವಜವಂದನೆಗೈದು ಹುತಾತ್ಮರ ಆತ್ಮಶಾಂತಿಗಾಗಿ 2 ನಿಮಿಷಗಳ ಮೌನವನ್ನಾಚರಿಸಿತು. ಹರಿಕೀರ್ತನೆ, ಭಜನೆ ನೈಕ್ಯ ಮಕ್ಕಳಿಗೆ ಮಿಠಾಯಿ ಹಂಚೋಣದರಿಂದ ಮುಕ್ತವಾಯಿತು.

ಪಾಪಿನಾಯಕನಹಳ್ಳಿ:— ಪ್ರಾತಃಕಾಲ ಶಾಲಾ ಮಕ್ಕಳಿಂದೊಡಗೂಡಿದ ಮೆರವಣಿಗೆಯು ಪ್ರಭಾತ ಫೇರಿ, ಧ್ವಜವಂದನೆಗಳಿಂದಾರಂಭವಾಗಿ ದೇವಸ್ಥಾನಗಳಲ್ಲಿ ಪೂಜೆಯೂ, ಶಾಂತಿಕಾರ್ಯಕ್ರಮಗಳೂ ನಡೆದವು, ಗ್ರಾಮಚಾವಡಿ ಶಾಲೆಗಳು ಧ್ವಜಾಲಂಕೃತವಾಗಿದ್ದವು. ನೂರಾಮೂಜನರಿಗೆ ಭೋಜನ ನಡೆಯಿತು.

ನಾರಾಯಣದೇವರಕೆರೆ:— 14 ಮಧ್ಯರಾತ್ರಿಯಿಂದ ಕಾರ್ಯಕ್ರಮಗಳಾರಂಭವಾದವು. ಸ್ಥಳೀಯ ಕಾಂಗ್ರೆಸ್ ಸಮಿತಿ, ಮತ್ತು ಇತರ ಸಂಸ್ಥೆಗಳು ಧ್ವಜವಂದನೆ ನಗರ ಸಂಕೀರ್ತನೆ ನೆರವೇರಿಸಿದರು, ಯಲ್ಲಾ ಕಟ್ಟಡಗಳ ಮೇಲೆ ಧ್ವಜಾರೋಹಣವಾಯಿತು. ಸಾಯಂಕಾಲ ನೇತಾಜಿ ರಸ್ತೆಯಲ್ಲಿ ಮುಖಂಡರ ಭಾವಚಿತ್ರಗಳಿಂದೊಡಗೂಡಿದ ಅಲಂಕೃತರಥದಲ್ಲಿ ಮೆರವಣಿಗೆಯು ಹೊರಟಿತು. ಸಾರ್ವಜನಿಕ ಸಭೆಯಲ್ಲಿ ಶ್ರೀ ವೆಂಕೋಬಶೆಟ್ಟಿ ಮುಂತಾದವರ ಭಾಷಣಗಳಾದವು, ಶ್ರೀ ಮರಿಸ್ವಾಮಯ್ಯನವರು ಅಧ್ಯಕ್ಷರಿದ್ದರು ಕಾವ್ಯ, ಗಾಯನ, ಆಟಪಾಟ, ಮನರಂಜನೆ ಕಾರ್ಯಗಳಲ್ಲಿ ಸ್ಪರ್ಧಿಸಿ ಗೆದ್ದವರಿಗೆ ಬಹುಮಾನಗಳು ಹಂಚಲಾದವು. ರಾಜಕೀಯ ಕಾರಾಗೃಹವಾಸಹೊಂದಿದವರಿಗೆ ಪದಕಗಳು ಹಂಚಲ್ಪಟ್ಟವು. ರಾತ್ರಿಯಲ್ಲಿ ದೀಪಾರಾಧನೆ ಮತ್ತು ಸುಡುವಿಕೆ ನಡೆಯಿತು ಅಖಂಡ ಹಿಂದೂಸ್ತಾನವಾಗಲೆಂಬ ಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಯಿತು.

ಎಮ್ಮಿಗನೂರು:(ಬಳ್ಳಾರಿ) 14 ನೆಯ ಮಧ್ಯರಾತ್ರಿ ಅಧಿಕಾರ ಸ್ವೀಕಾರವಾದ ಮೇಲೆ ಧ್ವಜಾರೋಹಣವಾಗಿ ಪ್ರಾತಃಕಾಲ ಮಹಾತ್ಮರ ಭಾವಚಿತ್ರದ ಉತ್ಸವವು ವೈಭವದಿಂದ ನಡೆಯಿತು. ಸಾಯಂಕಾಲ ಶ್ರೀ ವೀರಯ್ಯನವರಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಸಂಬಂಧ ಭಾಷಣಗಳಾದವು. ಈ ಗ್ರಾಮದ ಉದಾರಿಗಳಾದ ಶ್ರೀ ಬಟ್ಟರಿಬಸಪ್ಪ ಕೌತಾಳದ ದೊಡ್ಡಬಸಪ್ಪ ಚೇರ್ಮ ತಾರನಾಥರೆಡ್ಡಿ ಇವರು ಬಡಬಾಲಕರಿಗೆ ವಸ್ತ್ರದಾನ ಮಾಡಿ ಶಾಲೋಪಕರಣಗಳನ್ನು ಕೊಟ್ಟರು.

ಕೊಳಗೆಲ್ಲು:— ಲಕ್ಷ್ಮಿನರಸಿಂಹ ದೇವಾಲಯದಲ್ಲಿ ಅಭಿಷೇಕ ಪೂಜಾದಿಗಳು ನೆರವೇರಿದನಂತರ, ಮಧ್ಯ ರಾತ್ರಿಯಲ್ಲಿ ಧ್ವಜಾರೋಹಣವಾಯಿತು. ಪ್ರಾತಃಕಾಲ 5 ರ ವರಿಗೆ ಭಜನ ಸಂಗೀತವಾಗಿ ಪ್ರಭಾತ ಫೇರಿ ಯು ಆಯಿತು. ಸಾಯಂಕಾಲ ಲಕ್ಷ್ಮಿನರಸಿಂಹ ದೇವರ ರಥದಲ್ಲಿ ಗಾಂಧಿ ನೆಹರೂ ಭಾವಚಿತ್ರದ ಮೆರ ವಣಿಗೆಯು 31 ಎತ್ತುಗಳಿಂದ ಹೂಡಲ್ಪಟ್ಟ ವಾದ್ಯ ವೈಭವದಿಂದ ಊರಬೀದಿಗಳಲ್ಲಿ ಜಯ ಜಯ ಕಾರ ದಿಂದ ಸಾಗಿತು. ಸಾಯಂಕಾಲ ಶ್ರೀ ಕಾಂಜ್ರ ಪಂಪ ಣ್ಣನವರ ಅಧ್ಯಕ್ಷತೆಯಲ್ಲಿ ತಿಪ್ಪಣ್ಣನವರು ರಾಮಲಿಂ ಗಯ್ಯನವರು ಸ್ವಾತಂತ್ರ್ಯಮಹೋತ್ಸವದ ಮಹತ್ವವ ನ್ನರುಹಿದರು. ಶಾಲಾಬಾಲಕರಿಗೆ ಮಿಠಾಯಿ ಹಂಚ ಲಾಯಿತು ಗುಂಡುಗಳನ್ನು 31 ಸಲ ಹಾರಿಸಲಾ ಯಿತು. [ವೈ. ಗುಂಡಪ್ಪ-ಸೆಕ್ರಟರಿ]

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— **ಬಳ್ಳಾರಿ ಜಿಲ್ಲಾ:—** ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂ ಬಳ್ಳಾರಿ, ಆದವಾನಿ, **ಅನಂತಪುರ:—** ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:—** ಕರ್ನೂಲು:- ಪತ್ತಿಕೊಂಡ. **ಕಡಪ:—** ರಾಜಂಪೇಟೆ, ಕಡಪ, **ಚಿತ್ತೂರು,—** ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3%

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5 -0—0
6 ತಿಂಗಳಿಗೆ	3-0-0	Six months	3 -0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... .. ..
....
....

Printed at Krishna Press Bellary QH NO. B 17 FOR (Q.H. NO. B-5.)
Edited & Published by T B. KESHAVA RAO

ಜೈಹಿಂದ್ Reg. No. M. 4748

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —
ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಪುಟ್ಟ ೬
ಸಂಚಿಕೆ ೩೩

ಬಳ್ಳಾರಿ ಸೆಪ್ಟಂಬರು ೧ ಸೋಮವಾರ ೧೯೪೬

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

ಮದ್ರಾಸ್ ಆಹಾರಪರಿಸ್ಥಿತಿ.

ಮದ್ರಾಸ್ ಪ್ರಾಂತ್ಯದಲ್ಲಿ ಇನ್ನು 3 ತಿಂಗಳು ಆಹಾರ ಪರಿಸ್ಥಿತಿಯು ಕಠಿಣವಾಗಿದ್ದು ಕೇಂದ್ರದಿಂದ ಸಾಕಷ್ಟು ಸಹಾಯವು ದೊರೆಯಲಿಕ್ಕಿಲ್ಲೆಂದು ಪ್ರಕಟವಾಗಿದೆ. ಹೆಚ್ಚಿಗೆ ಧಾನ್ಯವಿದ್ದವರಿಂದ ಕಾಳಿನ ಸಂಗ್ರಹವೊಂದೇ ಇದಕ್ಕೆ ಉಪಾಯವೆಂದು ಆಹಾರ ಮಂತ್ರಿಗಳು ಸಂಚಾರ ಕೈಗೊಂಡಿದ್ದಾರೆ. ಉಳಿದ ಮಂತ್ರಿಗಳೂ ತಮ್ಮ ತಮ್ಮ ಭಾಗಗಳಲ್ಲಿ ಸಂಚರಿಸಲಿರುವರು. ಬಳ್ಳಾರಿಗೆ ಶ್ರೀ ಶೇತಾರಾಮರೆಡ್ಡಿಯವರು ಇನ್ನುಕೆಲದಿನಗಳಲ್ಲಿ ಬರಲಿದ್ದಾರೆ. ಪ್ರಾಂತದಲ್ಲಿ ಕಾಳಿನ ಸಂಗ್ರಹದ ಖರ್ಚು ಈ ವರ್ಷ 17 ಕೋಟಿಗಳಷ್ಟಾಗಿದೆಯೆಂದು ಡಾಕ್ಟರ್ ರಾಜನ್‌ರು ಹೇಳಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಬೊಂಬಾಯಿಯಲ್ಲಿ ಸೆಪ್ಟಂಬರ್ 27-28 ನೆಯ ತಾ. ಸಮಾವೇಶವಾಗಲಿದೆ, ಕಾಂಗ್ರೆಸ್ ಕಾರ್ಯಕಾರೀಸಮಿತಿಯು 25-26 ರಲ್ಲಿ ಕೂಡುವುದು.

ಪೂರ್ವಪಶ್ಚಿಮಭಾಗದ ಬಂಗಾಳ ಪಂಜಾಬಗಳಲ್ಲಿ ಸಂಯುಕ್ತ ಮಂತ್ರಿಮಂಡಲಗಳು ಸ್ಥಾಪಿಸಲ್ಪಡುವುದಾದರೆ ಸಿಂಧದಲ್ಲಿಯೂ ಅದು ಸಾಧ್ಯವಾಗಬಹುದೆಂದು ಪ್ರಧಾನರಾದ ಖುರೈಶೀರವರು ಹೇಳಿದರು.

ಅಲ್ಪ ಸಂಖ್ಯಾಕರಿಗೆ ಎಲ್ಲಾ ವಿಧವಾದ ಸವಲತ್ತುಗಳು ಕೊಡಲಾಗುವವೆಂದೂ ಆದರೆ ಸಂಯುಕ್ತ ಮತದಾನ ಪದ್ಧತಿಯು ಜಾರಿಯಲ್ಲಿರುವದೆಂದೂ ಸರ್ದಾರ ವಲ್ಲಭಭಾಯಿ ಪಟೇಲರು ಹೇಳಿದರು.

ಲಾಹೋರು ನಗರಕ್ಕೆ ಬರುತ್ತಿದ್ದ ರೈಲ್ವೆಗಾಡಿಯಲ್ಲಿನ ಮುಸಲ್ಮಾನೇತರರ ಪೈಕಿ 5-6 ಜನರನ್ನು ಕೊಂದಕಾರಣ ಅಮೃತಸರದ ಕಡೆಯಿಂದ ಬರುತ್ತಿದ್ದ ಮುಸಲ್ಮಾನ ನಿರಾಶ್ರಿತರನ್ನು ತಡೆಹಿಡಿದಿರುವರು.

ಶಾಲೆಗಳಲ್ಲಿ ವಿದ್ಯಾಸಂಬಂಧೀ ಚಲಚಿತ್ರಗಳನ್ನು ಪ್ರದರ್ಶಿಸಲು ಮದ್ರಾಸ್ ಸರ್ಕಾರದವರು ಏರ್ಪಡಿಸಿರುವರು.

ಕಾಳಿನ ಸಂಗ್ರಹಕ್ಕೆ ಸಹಾಯಮಾಡಲು ಬಂಗಾಳದ ಗವರ್ನರರಾದ ಶ್ರೀ ಶ. ರಾಜಗೋಪಾಲಾಚಾರ್ಯರು ತಮಿಳುನಾಡಿನ ಜನರಿಗೆ ಅಗೀಲು ಮಾಡಿರುತ್ತಾರೆ.

ಬಳ್ಳಾರಿ.

ನಗರಸಭೆಯ ಚುನಾವಣೆಗಾಗಿ 32 ಸ್ಥಳಗಳಿಗೆ 60 ಅರ್ಜಿಗಳು ಬಂದಿವೆ. ಸುಮಾರು 15 ರಿಂದ 20 ರವರೆಗೆ ಪೋಟಿ ಇರಲಾರದೆಂದು ನಂಬಲಾಗಿದೆ. ಪರಿಶೀಲನೆ ಮತ್ತು ಅರ್ಜಿಗಳನ್ನು ಹಿಂದೆಗೆದುಕೊಂಡನಂತರ ಉಮೇದುವಾರರ ಪಟ್ಟಿಯನ್ನು ಪ್ರಕಟಿಸಬಹುದು.



10th year of Publication.
Monday, 1st Sept. 1947

ಜಾತಿಯುಗಲಭೆ ಪಂಜಾಬದ ದುಸ್ಥಿತಿ.

ಮಹಾತ್ಮಗಾಂಧಿಯವರ-ಶಾಂತಿಕಾರ್ಯ

ಮಹಾತ್ಮ ಗಾಂಧಿಯವರು ಕಲ್ಕತ್ತೆಗೆ ಹೋದೊಡನೆಯೇ ಬಂಗಾಳದ ಹಿಂದಿನ ಪ್ರಧಾನ ಮಂತ್ರಿಗಳಾಗಿದ್ದ ಸುಹ್ರವರ್ದಿಯವರೊಡನೆ ನಗರದ ಪೀಡಿತ ಮುಸಲ್ಮಾನ ಪ್ರದೇಶದಲ್ಲಿ ನೆಲೆಸಿ ನಗರದಲ್ಲಿ ಒಂದು ವಾರದೊಳಗಾಗಿ ಅಧ್ಭುತ ಕ್ರಾಂತಿಯನ್ನುಂಟುಮಾಡಿ ಹಿಂದೂ ಮುಸಲ್ಮಾನರಲ್ಲಿ ಮೈತ್ರಿಯನ್ನು ಬೆಳೆಸಿದರು ಈಗ ಹಿಂದೂಗಳ ಮನೆಗೆ ಮುಸಲ್ಮಾನರೂ, ಮುಸಲ್ಮಾನರ ಮನೆಗೆ ಹಿಂದೂಗಳೂ ಬಂದು ಹೋಗುತ್ತಿರುವರು. ಹೃತ್ಪೂರ್ವಕವಾದ ಸೌಹಾರ್ದವು ಬೆಳೆಯುತ್ತಾ ನಡೆದಿದೆ. ಗಾಂಧೀಜಿಯವರ ಪ್ರಾರ್ಥನಾಸಭೆಗಳಿಗೆ ಹಿಂದೂ ಮುಸಲ್ಮಾನರೂ ಕೂಡಿಯೇ ಬರುತಿರುವರು. ಹೀಗಾಗಿ ನಗರದಲ್ಲಿ ಸಂಪೂರ್ಣ ಶಾಂತಿಯು ಸ್ಥಾಪಿತವಾಗಿ ಕಳೆದ ವರ್ಷದ ದ್ವೇಷ ರಕ್ತಪಿಪಾಸೆಯು ಮಾಯವಾಗಿದೆ. ಇದೊಂದು ಚಿತ್ರ

ಇತ್ತ ಪೂರ್ವಪಂಜಾಬದಲ್ಲಿ ಗಲಭೆಗಳಾರಂಭವಾದ್ದೇತಡ. ಪಶ್ಚಿಮ ಪಂಜಾಬದಲ್ಲೂ ಅದರ ಪುನರುತ್ಥಾನವಾಯಿತು. ಅಸ್ತಿಗಳನ್ನು ಸುಡುವುದು, ಸ್ತ್ರೀಯರ ಮೇಲೆ ಅತ್ಯಾಚಾರ, ಮಕ್ಕಳನ್ನು ಕ್ರೂರವಾಗಿಕೊಲ್ಲುವುದು, ಎಲ್ಲೆಲ್ಲೂ ಸೇಡುತೀರಿಸಿಕೊಳ್ಳುವ ಪ್ರತೀಕಾರ ಬುದ್ಧಿಯಿಂದ ಅವರ್ಣನೀಯವಾದ, ನುತ್ತು ಅಸಹ್ಯವಾದ ಕೃತ್ಯಗಳು ನಡೆದವು, ನಡೆಯುತ್ತಲಿವೆ ಪಾಕಿಸ್ತಾನ ಸರಕಾರದವರು ಮುಸಲ್ಮಾನರಿಗೆ ಆಶಸ್ತ್ರಗಳನ್ನು ಹಂಚುತ್ತಿರುವರೆಂಬುವ ಪ್ರಕಟವಾ ಸುದ್ದಿಯಲ್ಲಿ ಎಷ್ಟು ಸತ್ಯಾಂಶವಿದೆಯೋ ಹೇಳಬಾವಂತಿಲ್ಲ. ಪೂರ್ವಪಂಜಾಬದಲ್ಲಿ ದಂಗೆಯಡಗಿದ್ದರೂ ಪಶ್ಚಿಮ ಭಾಗದಲ್ಲಿ ಅದ. ವಿಕೋಪಕ್ಕೆ ಹೋಗುತ್ತಿರುವದೆಂದು ನೋಡಿದರೆ ದಂಗೆಯಡಗಿಸಲು ಪಾಕಿಸ್ತಾನಸರಕಾರವು ಅಸಮರ್ಥವಿದೆಯೆನ್ನಬೇಕು. ಪಂಡಿತ ಜವಹರಲಾಲರು ದಂಗೆಯ ಪ್ರದೇಶಗಳಲ್ಲಿ ಸ್ವತಃ ಸಂಚರಿಸಿ ಸೈನ್ಯ ಪೋಲೀಸರ ಸಹಾಯದಿಂದ ಹದಗೆಟ್ಟ ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟರು.

ಒಂದು ಜಾತಿಯವರು ಮತ್ತೊಂದು ಜಾತಿಯವರನ್ನು ಧರ್ಮದ ಕಾರಣ ದ್ವೇಷಿಸುತ್ತಾ ಅವರನ್ನು ಹಾನಿಗೀಡು ಮಾಡುವುದು ಮನುಷ್ಯತ್ವಕ್ಕೆ ಯೋಗ್ಯವಾದುದಲ್ಲ. ಧರ್ಮದ ಹೆಸರಿನಿಂದ ಜಾತೀಯದ್ವೇಷ ಪ್ರಚಾರಮಾಡುವವರನ್ನು ಸರಕಾರವು ಕಠಿಣರೀತಿಯಿಂದ ಶಿಕ್ಷಿಸಬೇಕು. ದೇಶದಲ್ಲಿರುವ ಜನಾಂಗಕ್ಕೆಲ್ಲಾ ಇದರಿಂದ ಹಾನಿಯು ತಪ್ಪುವುದು.

ನಾವು ಬೇರೆ ಜನಾಂಗದವರೆಂಬ ಭಾವನೆಯನ್ನು ಹಬ್ಬಿಸಿದವರೇ—ಜಾತೀಯ ಜಗಳಗಳಿಗೆ ಕಾರಣರು. ಅಲ್ಪ ಸಂಖ್ಯಾಕರೆಂದು ಅವರ ಸಂಖ್ಯೆಯದಾವೂ ಪಕ್ಕೆ ವಿುರಿ ಅವರಿಗೆ ಅನುಕೂಲ ಸೌಕರ್ಯಗಳನ್ನು ಕಲ್ಪಿಸಿದುದು, ಅವರ ಬೇಡಿಕೆಗಳಿಗೆಲ್ಲಾ ಸೊಪ್ಪು ಹಾಕುತ್ತಾಹೋದುದು ಈಗಿನ ಪರಿಸ್ಥಿತಿಗೆ ಕಾರಣವಾಯಿತು. ಆಳರಸರು ಭೇದವೃತ್ತಿಯಿಂದ ದೇಶವನ್ನು ಇಬ್ಭಾಗವಾಗಲು ಸಹಾಯವಾಡಿದುದು ಬೆಂಕಿಯಲ್ಲಿ ಎಣ್ಣೆಯನ್ನು ಹೊಯ್ದಂತಾಯಿತು.

ಇನ್ನುಮೇಲೆ ಜನತಾ ಸರಕಾರವೇ ಆಗಲಿ ಯಾವ ಬಣಕ್ಕೂ ಹೆಚ್ಚಿನ ಸೌಕರ್ಯಗಳನ್ನು ಕೊಡದೆ ಸರ್ವ ಸಮತ್ವ ದೃಷ್ಟಿಯಿಂದ ನಡೆಸಿಕೊಂಡರೆ ಸಮಾಜ ಜೀವನದಲ್ಲಿ ಯಾವ ಗೊಂದಲವೂ ಏಳಲಾರದು, ಈಗ ಸ್ವಾತಂತ್ರ್ಯವು ಲಭಿಸಿ ಪರಕೀಯರ ಅಡಳಿತವೂ, ಕೈವಾಡವೂ ಮಾಯವಾಗಿರುವ ಕಾರಣ ಸಮಸ್ತ ರಾಜ್ಯಭಾರವು ಅಗತ್ಯವಿದ್ದು ಸುಲಭದಿಂದ ಜಾರಿಯಲ್ಲಿ ತರಬಹುದಾಗಿದೆ.

Free India—Task ahead.

(T. V. Krishna Rao, B A)

The long-awaited freedom has at long last dawned on India, though unfortunately dismembered in the act. Ambrosia was got only after the evolution of the dreadful poison which God Siva swallowed Mahatmaji's self-imposed task of swallowing the communal passions in calcutta is reminiscent of that.

Let us turn our thoughts at this momentous time, to the task ahead. True, the Congress fought and got for us all the cherished Swaraj. Not only the India of today but the posterity of our nation would be eternally grateful to the heroic self-less struggle put up by the stalwarts like, Nehrus, Sardars not to mention the lakhs of the other nameless workers who either perished or suffered much in this fight for national freedom. Our nation is judged by the world by the standrads of these great sons, not the title-hunters, job-seekers or jo-hukums, who constituted the lowest vermin of the dark age in our national history.

One of the disquieting signs of the times is firstly, the birth of a new political caste in our country in the name of the Congress. Certain opportunists joined the Congress, calculating on their temporary vicissitudes as an easy passport to speedier jobs. It is easy to pick these from even the top-ranks now. Careerists and opportunists, masquerading as the erstwhile sufferers are monpolising the positions of vantage in the scheme of things now. Their main aim is self-glorification and aggrandisement, at the first chance. Let the man in the street be saved from such pseudo-patriots. Taboo them

The new political caste with the shibboleth: 'jobs to only those who went to jails,' should not be blindly followed What the country needs now is talent-proper man to fill the place, but not misfits. The political sufferers are entitled to bonus in free India-gift of land, pensions etc. But not vital jobs which postulate a set of qualifications and inherent brain-power. As long as the criteria of talents are not given the highest priority for the adminstrators of the country,

so long the progress of the nation cannot be as natural as it ought to be. The presence of third rate men or misfits would pull down inevitably the national standards of the country's affairs Fortunately we have the coincidence of both previous sacrifice and first rate talent in some distinguished personages like Nehru, Patel, Rajaji etc. But these are rare and a few instances alone. There can be no relief but much vexation in the appointment of an erstwhile pedagogue or demagogue to a responsible job of adminstration involving much forethought ability to grasp the intricacies and insight to equity. The affairs of adminstration in such cases are bound to spell disaster to the people at large. Check up the registers and remove such class of incompetent nin-compoops from the lists.

The Brahminical bossyism during the Puranic ages preceding the advent of Buddna with all its attendent and tyrannical ritualism and elaborate sacrifices of animals in the name of Yajnas, gave birth to Buddhism based on humanitarian ideals. The domineering despostism of the kings yielded place to its very anti-thesis, democracy. Let the tyranny of the new Political caste which now threatens to engulf us similarly lead us to a new path of sweetness and light, where in ablity, merit and talent predominate free from weightages to the various interests.

No other religion in the world postulates any distinction amongst its followers as Hinduism does. Christianity and Islam lay stress on the fraternity and equality of its followers. The efforts of seers and savants in subjugated India did not nourish the plant of reform as fully as it ought to be The time has now come to rare this plant of reform to its full stature and make it yield the best fruit, in free India. Let us do our humble bit towards this healthy growth, and hasten the day when the Hindu is Hindu alone without an extra-badge of a caste. In daily secular life these distinctions faded away long ago thanks to the cosmopolitanism In temples they are vanishing The extension of reform to the realm of social contacts is only the logical corollary. Intermarriages and mutul love they

generate would wipe out all barriers. Legal ban on atleast the pretensions, prohibitions and excommunications imposed by the snobs. in the caste-categories should be the first step to the encouragement of the intermarriages. Religion must be relegated to its proper place. the intensely personal affair of the individual. Society and commonweal should have nothing to do with these personal affairs of men, by giving either overt or covert recognition to these distinctions and thus perpetuating them.

The literacy of our nation should be the first and foremost subject. Let the state plan out a comprehensive scheme to raise the standard of literacy to cent-percent, even bef fe it can think of the social reforms such as prohibition Democracy among illiterates is a mockery of the system itself.

The re-alignment of the provincial boundaries, more conducive to the growth of the natural genius of the people than to the convenience of the exploiting foreign power would, it is hoped, receive immediate attention. Village comunicatons and marketing methods are bound to receive a high place of priority in free India. Corruption and black marketing would die a natural death in the new set-up.

—: ತೂಲಹಳ್ಳಿ :—

18 ನೆಯ ತಾ|| ಕಾಂಗ್ರೆಸ್ ಕಾರ್ಯಕರ್ತರ ಸಭೆಸೇರಿ ಶ್ರೀ ಟಿ. ಸಿದ್ದಬಸವನಗೌಡರು ಅಧ್ಯಕ್ಷರಾಗಿಯೂ, ಗುರುಶಿದ್ವಯ್ಯ, ಯಸ್. ಲಿಂಗಪ್ಪನವರು ಕಾರ್ಯದರ್ಶಿಗಳಾಗಿಯೂ ಶ್ರೀ ನಾಗೇಂದ್ರಶೆಟ್ಟಿಯವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಕಾರ್ಯಕಾರೀ ಸಮಿತಿಯಲ್ಲಿ 9 ಜನರಿದ್ದಾರೆ.

14 ನೆಯ ಮಧ್ಯರಾತ್ರಿಯಿಂದ ಧ್ವಜವಂದನಾ ವಿಧಿ, ಹುತಾತ್ಮರ ಆತ್ಮಶಾಂತಿ ನಗರಸಂಕೀರ್ತನೆಯಿಂದ ಪ್ರಾರಂಭವಾಯಿತು. 5 ವರ್ಷದ ಬಾಲಕನು ಧ್ವಜಾರೋಹಣಮಾಡಿದನು. ಧ್ವಜದ ಮಹತ್ವಗಳನ್ನುಕುರಿತು ಭಾಷಣಗಳಾದವು. ದೇಶನಾಯಕರ ಮೆರವಣಿಗೆಯು ಅಲಂಕೃತರಥದಲ್ಲಿ 30 ಜೊತೆ ಎತ್ತುಗಳಿಂದ ಎಳೆಯಲ್ಪಟ್ಟಿತು. ಸಾಯಂಕಾಲ 7 ಗಂಟೆಗೆ ಶ್ರೀ ವೈಶ್ಯ ವೆಂಕಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಆಗಸ್ಟ್ ಆಂದೋಲನದ ನಮ್ಮೂರ ತರುಣರನ್ನು ಅಭಿನಂದಿಸಲಾಯಿತು. ಶ್ರೀಗಳಾದ ಬಸವನಗೌಡ್ರು, ಲಿಂಗಪ್ಪನವರು, ಬಸಪ್ಪನವರು, ಸಿದ್ದಯ್ಯ ಬೊಮ್ಮ ಲಿಂಗಯ್ಯನವರ ಭಾಷಣವಾಯಿತು. ಶ್ರೀ ಸಿದ್ದಬಸವನಗೌಡರು ವಂದನಾರ್ಪಣೆ ಮಾಡಿದ ನಂತರ ವಂದೇ ಮಾತರಂಗೀತೆಯಿಂದ ಸಭೆಯಂತ್ಯವಾಯಿತು.

ಬಳ್ಳಾರಿ ಜಿಲ್ಲಾ ದ್ವಿತೀಯ ಏಕೀಕರಣ ಪರಿಷತ್ತಿನ ಉದ್ಘಾಟನೆಯನ್ನು ಶ್ರೀ ದೊಡ್ಡಮೇಟಿ ಅಂದಾನಪ್ಪನವರು ನೆರವೇರಿಸುವರೆಂದು ಸ್ವಾಗತ ಸಮಿತಿಯವರು ತಿಳಿಸುತ್ತಾರೆ.

ಆಹಾರದ ಕಷ್ಟ ಮತ್ತು ಮಣ್ಣಿನ ಫಲವತ್ತ

ಸೆಗಣಿಯನ್ನು ಸುಡುವದು ಮಹಾಪರಾಧ

ಮೇಲೆ ಹೇಳಿದಂತೆ ಸೆಗಣಿ ಅಥವಾ ಕೊಟ್ಟಿಗೆಯ ಗೊಬ್ಬರವು ಮಣ್ಣಿನ ಗುಣಾಭಿವೃದ್ಧಿಗೂ ಫಸಲಿನ ಪ್ರಮಾಣವನ್ನು ಒಂದೇ ಸಮನಾಗಿ ಇಟ್ಟಿರುವದಕ್ಕೂ ಅತ್ಯುತ್ತಮವಾದುದು. ಸರಿಯಾಗಿ ಬಳಸಿದರೆ ವಿಶೇಷ ಖರ್ಚಿಲ್ಲದೆ ಬಡಹಿಂದೀ ಒಕ್ಕಲಿಗರಿಗೆ ಸಮ ಪ್ರಮಾಣದ ಬೆಳೆಯನ್ನು ಅದು ಒದಗಿಸಿ ಕೊಡಬಲ್ಲದು. ಸೆಗಣಿಯ ಗೊಬ್ಬರವು ಅತ್ಯಂತ ಬೆಲೆ ಬಾಳುವ ಗೊಬ್ಬರವಾಗಿದ್ದು ತನ್ನ ಹಣವನ್ನೇ ತಾನು ಸುಡುತ್ತಿರುವೆನೆಂಬ ಅರಿವಿಲ್ಲದೆ ಹಿಂದೀ ರೈತನು ಅದನ್ನು ಸುಡಲು ಉಪಯೋಗಿಸುವುದನ್ನು ಕಂಡರೆ ಕಸಿಕರವೆನಿಸುತ್ತದೆ. ಆದರೆ ಅವನು ಉರುವಲಿಗೆ ಏನನ್ನು ಉಪಯೋಗಿಸಬೇಕೆಂಬ ಪ್ರಶ್ನೆಯೇಳುತ್ತದೆ ದುರದೃಷ್ಟದಿಂದ ಸೆಗಣಿಯೊಂದೇ ಅವನಿಗೆ ಅಗ್ಗವಾಗಿ ಸಿಗುವ ಉರುವಲು. ಹಿಂದೆ ಸರಕಾರವು ಈ ಮುಖ್ಯ ಸಮಸ್ಯೆಯನ್ನೇ ಸಂಪೂರ್ಣವಾಗಿ ಅಲಕ್ಷ್ಯಮಾಡಿತ್ತು. ಮತ್ತು ಈಗಲೂ ಆ ಬಗ್ಗೆ ಅದರ ಪತ್ತಿರ ಯಾವ ಯೋಜನೆಯೂ ಇದ್ದಂತಿಲ್ಲ. ಒಕ್ಕಲುತನದ ಸುಧಾರಣೆಗಾಗಿ ಸಾವಿರಾರು ಯೋಜನೆಗಳನ್ನು ಕೈಕೊಳ್ಳುವೆನೆಂಬ ರಾಷ್ಟ್ರೀಯ ಸರಕಾರದ ಅಳಿಕೆಯಲ್ಲಿ ಸೆಗಣಿಯನ್ನು ಗೊಬ್ಬರಕ್ಕಾಗಿ ಉಳಿಯುವಂತೆ ಮಾಡಿ ರೈತನ ಬಳಕೆಗೆ ಬೇರೆ ಯಾವುದಾದರೂ ಉರುವಲು ಸಿಗುವಂತೆ ಸಗಿ ಹಿಂದೀ ರೈತನ ಸ್ಥಿತಿಗತಿಯನ್ನು ಉತ್ತಮ ಗೊಳಿಸಲು ಬೇಕಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮರಗಳನ್ನು ನೆಡುವುದನ್ನು ಪ್ರೋತ್ಸಾಹಿಸಬೇಕು, ಇಲ್ಲವೆ ಸಾಧ್ಯವಾದಲ್ಲಿ ಕಲ್ಲಿದ್ದಲು ಸಿಗುವಂತೆ ಮಾಡಬೇಕು.

'ಹೇಸಿಗೆ'ಯನ್ನು ಗದ್ದಿಗಳಲ್ಲಿ ಬಳಸಬಹುದೆಂದು ಸಲಹೆ ಮಾಡಲಾಗಿದೆ; ಅದರಿಂದ ಕೆಲಮಟ್ಟಿಗೆ ಪ್ರಯೋಜನ ಸಿಗಬಹುದು. ಆದರೆ ಜಗತ್ತಿನ ಎಲ್ಲ ವಿಭಾಗದ ರೈತನಿಗೂ ಅದನ್ನು ತಯಾರಿಸುವುದು ಸುಲಭದ ಕೆಲಸವಾಗದು; ಆದುದರಿಂದ ಅದರ ತಯಾರಿಕೆಯಲ್ಲಿ ರೈತರು ಅಷ್ಟು ಉತ್ಸುಕರಾಗಿಲ್ಲ. ಹಸಿ ಒಣ ಎಲೆಗಳು, ಕಾಗದ, ಹುಲ್ಲು ಮುಂತಾದವನ್ನು ಗದ್ದಿಗಳಲ್ಲಿ ಹರಡಿ ಸಾರಜನಕವನ್ನು ನೆಲೆನಿಲ್ಲಿಸುವ ನಮ್ಮ ಪ್ರಯೋಗಗಳಿಂದ ನಮಗೆ ಇಂತಹ ಸಸ್ಯಾವಶೇಷಗಳನ್ನು 'ಹೇಸಿಗೆ' ಹಾಕುವದರ ಮೊದಲು ಬಳಸುವುದು ಯೋಗ್ಯವೆಂದು ಕಂಡುಬಂದಿದೆ. ಮಳೆಗಾಲದ ಮುನ್ನ ಈ ಸಸ್ಯಾವಶೇಷಗಳನ್ನು ಸೇರಿಸಿ ಉತ್ತರೆ ಮೂರು ತಿಂಗಳಲ್ಲಿ ತಕ್ಕಮಟ್ಟಿಗೆ ಅವು ಕೊಳೆತು ಅವುಗಳ ಕಾರ್ಬನ್ನು ಮಣ್ಣಿನ ಮೇಲೆ ಆವಿಷ್ಕೃತವಾಗಿ ಸಾರಜನಕವನ್ನು ತಡೆಹಿಡಿಯಲಗತ್ಯವಾದ ಸತ್ವವನ್ನು ಹೊರಗೆಡಹುತ್ತದೆ. ಮಣ್ಣಿಗೆ ಸೇರಿಸಿದಾಗ ಈ ಸಸ್ಯಪದಾರ್ಥಗಳು ನೇರವಾಗಿ ತಮ್ಮಲ್ಲಿದ್ದ ಪೊಟಾಶ್ ಹಾಗೂ ಸಾರಜನಕವನ್ನು ಪುರವಣೆಮಾಡುವುದಲ್ಲದೆ ಮಣ್ಣಿನ ಮೇಲೆ. ಕೆಲ ಪ್ರಮಾಣದಲ್ಲಿ ಸಾರಜನಕವನ್ನು ನಿಲ್ಲಿಸಿ ಅದನ್ನು ಹೆಚ್ಚು ಫಲವತ್ತಾಗಿ ಮಾಡಬಲ್ಲವು. ಆ ಪದಾರ್ಥಗಳು ಬಹಳ ಹೆಚ್ಚಾಗಿಲ್ಲದಿದ್ದರೆ ಹಾಕಿದ ಮೂರುತಿಂಗಳುಗಳಲ್ಲಿ ಅವು ತಕ್ಕ ಮಟ್ಟಿಗೆ ಕೊಳೆತು ಮಣ್ಣಿನ ಕಾರ್ಬನ್ ಸಾರಜನಕ ಪ್ರಮಾಣವು ಯೋಗ್ಯಮಟ್ಟಕ್ಕೆ ಬರುತ್ತದೆ ಸಸ್ಯಜಪಿಷ್ಟ, ಹೊಲಸು ಮತ್ತು ಸಾರಜನಕಗಳ ಅಂಶ ಹೆಚ್ಚಾಗುತ್ತದೆ. ಉತ್ತ ಮೇಲೆ ಬಂದ ಮಣ್ಣು ತೇವವನ್ನು ಉಳಿಸಿಕೊಳ್ಳುವ ಶಕ್ತಿ ಮತ್ತು ಸಾರಜನಕ ಸಂಗ್ರಹಣ ಬಲ ಇವು ಸುಧಾರಿಸುತ್ತವೆ. ಕೊಳೆಸುವುದರಲ್ಲಿ ಪದಾರ್ಥಗಳಲ್ಲಿಯ ಸಾರಜನಕವನ್ನು ಉಳಿಸುವುದು ಮತ್ತು ಆ ಕೊಳೆತ 'ಹೇಸಿಗೆ'ಯ ಕಾರ್ಬನಿನ ಜೊತೆಗೆ ಅದನ್ನು ಮಣ್ಣಿಗೆ ಸೇರಿಸುವದು ಇದೇ

ಮುಖ್ಯಗುರಿ. ನಮ್ಮ ಗೊಬ್ಬರ ಹಾಕುವ ಪದ್ಧತಿಯಲ್ಲಿ ಸಸ್ಯ ಪದಾರ್ಥಗಳು ಮಣ್ಣಿಗೆ ನೇರವಾಗಿ ಬಿದ್ದು ಮೂಲಪದಾರ್ಥಗಳಲ್ಲಿಯ ಸಾರಜನಕವು ಮಣ್ಣಿಗೆ ಸೇರುವಂತೆ ಮಾಡುವುದಲ್ಲದೆ ವಾತಾವರಣದ ಸಾರಜನಕದ ನಿಲುಗಡೆಯಿಂದ ಕೆಲ ಪ್ರಮಾಣದಲ್ಲಿ ಮಣ್ಣಿನಲ್ಲಿ ಸಾರಜನಕ ವೃದ್ಧಿಯುಂಟಾಗುತ್ತದೆ. ಆದುದರಿಂದ ಕೊಳೆಸದೆ ಹಾಗೇ ಸಸ್ಯಾವಶೇಷಗಳನ್ನು ಗದ್ದೆಗೆ ಹಾಕುವುದು ಉತ್ತಮವೆಂದಾಯಿತು; ಏಕೆಂದರೆ ಉಷ್ಣವಲಯದಲ್ಲಿ ಹೆಚ್ಚಿನ ಉಷ್ಣ ಮತ್ತು ಬಿಸಿಲು ಬೇಕಾದಷ್ಟು ದೊರೆತು ಮತ್ತಷ್ಟು ಸಹಕಾರಿಯಾಗುವದು.

ಮಣ್ಣಿನ ಗುಣಗಳನ್ನು ಸುಧಾರಿಸಲು ಸಸ್ಯಜ ಹಾಗೂ ಪ್ರಾಣಿಜ ಪದಾರ್ಥಗಳನ್ನು ಬಿಟ್ಟರೆ ಬೇರೆಯ ನವಯವಿಜನ್ಯ ಪದಾರ್ಥಗಳು ಅಷ್ಟೇನೂ ಪ್ರಯೋಜನಕಾರಿಗಳೆನಿಸವು; ಅವಶ್ಯ ಬಿದ್ದಾಗ ಕೇವಲ ಸ್ವಲ್ಪ ಬೆಳೆಯನ್ನು ತೆಗೆಯಲು ಅವು ಸಹಕಾರಿಗಳಾಗಬಹುದೆಂದು ಹೇಳಬಹುದು. ಗಾಳಿಯಲ್ಲಿಯ ಸಾರಜನಕದಿಂದ ಸಾರಜನಕದ್ರಾವಕ ಮತ್ತು ಮಿಶ್ರ ಅಮೋನಿಯುಗಳನ್ನು ಉತ್ಪಾದಿಸಲೆಂದು ನಿಲ್ಲಿಸಲಾದ ವಾತಾವರಣದ ಸಾರಜನಕದ ಪ್ರಮಾಣದ ಮೇಲೆ ಒಂದು ದೇಶದ ನಾಗರಿಕತೆಯ ಮಟ್ಟವನ್ನು ನಿರ್ಣಯಿಸಬಹುದೆಂದರೆ ಅತಿಶಯೋಕ್ತಿಯಾಗಲಾರದು. ಗೊಬ್ಬರದ ತಯಾರಿಕೆಗೆ ಭಾರತವು ಕೆಲವು ಯಂತ್ರಗಳನ್ನು ತರಿಸಲಿದೆಯೆಂಬುದೊಂದು ಸಂತೋಷದ ಸಂಗತಿ. ಆದರೆ ನಮ್ಮ ನೆರೆಹೊರೆಯ ಚೀನ ಜಪಾನಗಳಂತಹ ದೇಶಗಳೊಡನೆ ಈ ಉದ್ಯಮದಲ್ಲಿ ಸ್ಪರ್ಧಿಸಲು ಶಕ್ತರಾದಲ್ಲದೆ ಇಂಗಾಗೆ ಗೊಬ್ಬರದ ತಯಾರಿಕೆಗೆ ಪೊರಟಿದೆ. ಕೆಲಕಾಲದ ಹಿಂದೆ ಬೆಲ್ಲದ ಸಕ್ಕರೆಯನ್ನು ತಯಾರಿಸಹೋಗಿ ನಷ್ಟ ಹೊಂದಿದಂತೆ ನಷ್ಟ ಹೊಂದಬೇಕಾದೀತೆಂಬುದನ್ನು ಸರಕಾರವು ಮರೆಯುವಾಗದು. ಬಿಹಾರದಲ್ಲಿ ಕಾರಖಾನೆಯನ್ನು ಸ್ಥಾಪಿಸಿ ೨೦೦ ಮೈಲುದೂರದ ರಜಪುಟಾಣದಿಂದ ಕಚ್ಚಾ ಪದಾರ್ಥಗಳನ್ನು ತರಿಸುವುದು ಆರ್ಥಿಕ ದೃಷ್ಟಿಯಿಂದ ಲಾಭಕರವೆನಿಸದು.

ಹಿಂದುಸ್ತಾನದಲ್ಲಿ ತಯಾರಿಸಬಹುದಾದ ಗೊಬ್ಬರಗಳೆಂದರೆ ಮೂತ್ರಜ ಗೊಬ್ಬರ, ಅಮೋನಿಯಂ ನೈಟ್ರೇಟ್, ಅಮೋನಿಯಂ ಸಲ್ಫೇಟ್ ಮೊದಲಾದವು.

ಗದ್ದೆಗಳ ಕಾಯಕಲ್ಪಕ್ರಮ

ಬಂಜರುಭೂಮಿಯ ಮುಖ್ಯ ದೋಷಗಳು ಊಷರತೆ. ನಾವು ಕೆಟ್ಟ ಊಷರ ಪ್ರದೇಶಗಳ ಅನೇಕ ಉದಾಹರಣೆಗಳನ್ನು ನೋಡಿದ್ದೇವೆ. ಅವುಗಳಲ್ಲಿ ಊಷರತೆ (ಲವಣ ಮಿಶ್ರಣ) ಜಡತೆ ಇಲ್ಲವೆ ನೈಟ್ರೇಟ್ ನಿರ್ಮಾಪಕಗಳ ಅಂಶ ಕಂಡುಬಂದಿಲ್ಲ.

೨ ಸಾಮಾನ್ಯವರ್ಗದ ಮಣ್ಣಿಗಿಂತ ಬಂಜೆಭೂಮಿಯಮಣ್ಣಿನಲ್ಲಿ ಚೂರ್ಣಜಾಂಶ (ಸುಣ್ಣದ ಸತ್ವವುಳ್ಳ ಪದಾರ್ಥಗಳು) ಕಡಿಮೆಯಿರುತ್ತದೆ.

೩ ಸಾರಜನಕದ ಪ್ರಮಾಣ ಸ್ವಲ್ಪ. ಪರೀಕ್ಷೆ ಮಾಡಿದ ಮಣ್ಣಿನ ಮಾದರಿಗಳಲ್ಲಿ ನೂರಕ್ಕೆ ೦. ೦೦೮ ರಿಂದ ೦ ೦೨ ರಷ್ಟು ಸಾರಜನಕಾಂಶವಿತ್ತು. ಉಷ್ಣಮಯವಾದ ಸಾಮಾನ್ಯ ಮಣ್ಣಿನಲ್ಲಿ ಹೆಚ್ಚುಕಡಿಮೆ ೦. ೦ ೫೩ ರಷ್ಟಿರುತ್ತದೆ.

೪ ಮಣ್ಣು (ನೀರಂಥವಾಗಿದ್ದು) ನೀರನ್ನು ಬೇಗ ಹೀರಿಕೊಳ್ಳಲಾರದು.

೫ ನೀರಿನಲ್ಲಿ ಸೇರಿಸಿ ಕದಡಿದಾಗ ಮಣ್ಣಿನ ಕಣಗಳು ಬೇಗ ತಳದಲ್ಲಿ ಹೋಗಿ ನಿಲ್ಲುವುದಿಲ್ಲ.

೬ ಅದರಲ್ಲಿ ಜೀವಾಣುಕ್ರಿಯೆ ನಡೆವುದಿಲ್ಲ.

ಕೇವಲ ಸಂಯುಕ್ತಪ್ರಾಂತ ಒಂದರಲ್ಲೇ ೪೦ ಲಕ್ಷ ಎಕರೆಗಳಷ್ಟು ಬಂಜೆಭೂಮಿಯಿದೆಯೆಂದು ಲೆಕ್ಕಮಾಡಲಾಗಿದೆ. ಪಂಜಾಬ (ಲಿಯಾಲಪುರ ಮಾಂಟಿಗೊಮರಿ ಮತ್ತು ಇತರ ಸ್ಥಳಗಳಲ್ಲಿ) ಬಿಹಾರ, ಮೈಸೂರು, ಸಿಂಧ, ಮುಂಬಯಿಗಳಲ್ಲಿ ಅಂತಹ ಅನುತ್ಪಾದಕ ಭೂಮಿಯನ್ನು ಪುನಃ ಸತ್ವಪೂರ್ಣವಾಗಿ ಮಾಡುವುದು (ಕಾಯಕಲ್ಪ) ಹಿಂದುಸ್ತಾನಕ್ಕೆ ಬಹು ಮುಖ್ಯವಾದ ಸಮಸ್ಯೆಯಾಗಿದೆ ಬೆಳೆಗೆ ಬಾಧಕವಾದ ಭೂಗತ ಲವಣಗಳೆಂದರೆ ಕಾರ್ಬೋನೇಟ್, ಬೈಕಾರ್ಬೋನೇಟ್ ಸಲ್ಫೇಟ್ ಮತ್ತು ಕ್ಲೋರೈಡ್ ಇವೇ

ಬಂಜೆ ಭೂಮಿಯ ಅನುತ್ಪಾದಕತೆಗೆ ಮುಖ್ಯವಾಗಿ ಸೋಡಾಪುಡಿ ಮಣ್ಣಿನಲ್ಲಿ ಅಂತರ್ಗತವಾಗಿರುವದೇ ಕಾರಣ. ಅಂತಹ ಭೂಮಿ ಬಹಳ ಗಟ್ಟಿಯಾದ (ಭಾರವಾದ) ಮಣ್ಣಿನದು; ಅದಕ್ಕೆ ಹಾಳುನೆಲವೆನ್ನುತ್ತಾರೆ. ಸಿಂಧ ಮತ್ತು ದೇಶದ ಇತರ ಭಾಗಗಳಲ್ಲಿ ಸಾಮಾನ್ಯ ಸ್ಥಿತಿಯಲ್ಲಿರುವ ಮಣ್ಣು ಕಾಲುವೆಯ ನೀರಿಂದ ಉಪ್ಪು ಮಣ್ಣಾಗಿ ಪರಿಣಮಿಸುತ್ತದೆ. ಅದಲ್ಲದೆ ಬಂಗಾಲ, ಓಡಿಸ್ಸ ಗುಜರಾತ ಮುಂಬಯಿ ಮತ್ತು ಮದ್ರಾಸ ಪ್ರಾಂತಗಳಲ್ಲಿ ಸಮುದ್ರದ ನೀರಿನಿಂದ ಹಾಳಾದ ಭೂಪ್ರದೇಶ ಬಹಳವಾಗಿದೆ. ಮೇಲೆ ಹೇಳಿದ ವಿವಿಧ ಕಾರಣಗಳಿಂದ ಊಷರ ಭೂಮಿಯು ಹಿಂದುಸ್ತಾನದಲ್ಲಿ ಹೆಚ್ಚುತ್ತಿದೆ.

ಬೀಳ್ಕೆಲದ ಸುಧಾರಣೆಯ ವಿಷಯದಲ್ಲಿ ಸಂಯುಕ್ತಪ್ರಾಂತದ ವಿವಿಧ ಭಾಗಗಳಲ್ಲಿ ಪ್ರಯೋಗ ನಡೆಸಿದ ದಿವಂಗತರಾದ ಡಾ. ಜೆ. ಡಬ್ಲ್ಯು. ಲೆದರರ ಸಿದ್ಧಾಂತಗಳು ಇಂತಿವೆ.

೧. ಊಷರ ಭೂಮಿಯಲ್ಲಿ ಸತ್ಪಾರೋಪ ಮಾಡುವುದರಲ್ಲಿ ಜಯಪ್ರದವೆನಿಸಿದ ಒಂದೇ ಒಂದು ಪ್ರಯೋಗವೆಂದರೆ ಜಿಪ್ಸಂ ಪ್ರಯೋಗ ಅದರ ಖರ್ಚು ಎಕರೆಗೆ ೭೦೦ ರಿಂದ ೮೦೦ ರೂಪಾಯಿಗಳಷ್ಟಾಯಿತು; ಆದುದರಿಂದ ಅದು ಕೈವಿಾರಿದ್ದೇಸರಿ. ಅದರ ಬೆಲೆಯನ್ನು ಅರ್ಧಕ್ಕೆ ಇಳಿಸಿದರೂ ಅಷ್ಟು ಪರಿಮಾಣದ ನೆಲಕ್ಕೆ ಜಿಪ್ಸಂ ಹಾಕುವದು ಅತಿ ವೆಚ್ಚದ್ದಾಗಿಯೇ ಉಳಿಯುತ್ತದೆ.

೨. ಆಳವಾಗಿ ಉಳುವುದು ಮತ್ತು ಹೆಚ್ಚಾಗಿ ಗೊಬ್ಬರ ಹಾಕುವುದು ಇವುಗಳಿಂದ ನಮ್ಮ ಕಣ್ಣಿಗೆ ಏನೂ ಬದಲಾವಣೆಯಾದಂತೆ ತೋರಲಿಲ್ಲ. ಮೇಲ್ಮೈಯ ೧ ಅಡಿ ನೆಲ ನೋಡುವುದಕ್ಕೆ ಹದಕ್ಕೆ ಬಂತೆಂದು ತೋರಿದರೂ ಅದರ ಕೆಳಗಿನ ಮಣ್ಣು ಮೊದಲಿನಷ್ಟೇ ಕೆಟ್ಟದ್ದಾಗಿ ಉಳಿಯಿತು.

೩. ಉಪ್ಪನ್ನು ಕೆದರಿ ತೆಗೆಯುವುದು ಅಪ್ರಯೋಜಕವೇ ಸರಿ. ಇತ್ತೀಚೆಗೆ ಡಾ ದಿಲೀಪಸಿಂಗ್ ಮತ್ತು ಶ್ರೀ ಎಸ್. ಡಿ. ನಿಝಾವಾನರು ಲಿಯಾಲಪುರ, ಲಾಲಕಾಕು, ಮಾಂಟೆಗೊಮರಿ ಮತ್ತು ಬೋರ ಪ್ರದೇಶಗಳಲ್ಲಿ ಜಿಪ್ಸಂ ಮತ್ತು ಉಪ್ಪನ್ನು ಸೇರಿಸಿಹಾಕಿ ಊಷರ ಕ್ಷೇತ್ರದ ಊಷರತೆಯನ್ನು ಕಡಿಮೆ ಮಾಡುವುದರಲ್ಲಿ ಕೆಲಮಟ್ಟಿಗೆ ಯಶಸ್ವಿಗಳಾಗಿದ್ದಾರೆ. ೪ ವರ್ಷಗಳಲ್ಲಿ ಈ ಚಿಕಿತ್ಸೆಯಿಂದ ಮಣ್ಣಿನ ಜಲಗ್ರಹಣಶಕ್ತಿ ವೃದ್ಧಿಯಾಗುತ್ತದೆಂದು ಅವರ ಹೇಳಿಕೆ. ಜಿಪ್ಸಂ ಇಲ್ಲವೆ ಗಂಧಕದಪುಡಿ ಹಾಕಿದರೂ ಅಷ್ಟೇಕಾಲಬೇಕಾಗುತ್ತದೆ

ಈ ಕಾರ್ಯಕ್ಕೆ ಸೆಗಣಿಯು ಗೊಬ್ಬರವನ್ನು ಉಪಯೋಗಿಸಬಹುದು. ಎಕರೆಗೆ ೧ ರಿಂದ ೧೦ ಟನ್ನುಗಳಂತೆ ಸೆಗಣಿಯ ಗೊಬ್ಬರಹಾಕಿ ಅಲಹಾಬಾದ ಮತ್ತು ಮೈಸೂರುಗಳಲ್ಲಿ ಬಂಜೆ ಭೂಮಿಯನ್ನು ಹದಕ್ಕೆ ತರಲಾಗಿದೆ. ಸಸ್ಯವಸ್ತುಗಳೇ ಬೆಳೆಯದ ಆ ಕ್ಷೇತ್ರಗಳಲ್ಲಿ ಒಳ್ಳೆಯ ಬತ್ತದ ಫಸಲನ್ನೆ ತೆಗೆಯಲಾಗಿದೆ. ಅಲಹಾಬಾದಿನ ಹತ್ತಿರ ಸೊರೆಯಾಗಿನಲ್ಲಿ ನಾವು ಎಕರೆಗೆ ೨ ರಿಂದ ೫ ಟನ್ನುಗಳವರೆಗೆ ಸೆಗಣಿ ಗೊಬ್ಬರ ಹಾಕಿ ನೋಡಿದ್ದೇವೆ. ಆ ಬಂಜೆ ಗದ್ದೆಯಲ್ಲಿ ಚೆನ್ನಾಗಿ ಅಕ್ಕಿಬೆಳೆಯಾಗಿದೆ. ಹಿಂದೆ ಬೆಳೆಬರದ ಗದ್ದೆಗಳಲ್ಲಿ ಮೈಸೂರು ಸರಕಾರವು ಎಕರೆಗೆ ೧ ಟನ್ನಿನಂತೆ ಸೆಗಣಿ ಗೊಬ್ಬರಹಾಕಿ ೧೨೦೦ ರಿಂದ ೧೪೦೦ ರತ್ತಲು ಅಕ್ಕಿಯ ಬೆಳೆಯನ್ನು ತೆಗೆದಿದೆ.

ಅಲಹಾಬಾದ, ಬೆಂಗಳೂರು, ಜಾವಾ, ಹವೈ ಮೊದಲಾದ ಸಕ್ಕರೆ ಉತ್ಪಾದನೆಯ ಕೇಂದ್ರಗಳಲ್ಲಿ ನಡೆದ ಸಂಶೋಧನದಿಂದ ಕಾರ್ಬಾನಿಕ್ ದ್ರಾವಕ ಮತ್ತು ಅಸೆಟಿಕ್, ಪ್ರೊಪಿಯೋನಿಕ್, ಬ್ಯುಟರಿಕ್, ಲ್ಯಾಕ್ಟಿಲ್ ಮುಂತಾದ ಅವಯವಿಜ ದ್ರಾವಕ (ಆಮ್ಲ) ಗಳ ಜೊತೆಗೆ ಸೆಗಣಿ ಗೊಬ್ಬರ ಹಾಕಿದರೆ ಅದು ವರ್ಷ ವರ್ಷಕ್ಕೆ ಕೊಳೆತು ಅದರಲ್ಲಿದ್ದ ಶರ್ಕರ ಪಿಷ್ಟ ಪದಾರ್ಥಗಳ ಆವಿಷ್ಕಾರಣವನ್ನು ಮಾಡುತ್ತದೆಂದು ಕಂಡು ಬಂದಿದೆ. ಅದರ ಪರಿಣಾಮವಾಗಿ ಸೆಗಣಿಯಲ್ಲಿರುವ ದ್ರಾವಕ ವದಾರ್ಥ ಮತ್ತು ಕೊಳೆತುದರಿಂದ ಹಾಗೂ ವಾಕ್ಸಿಕ ಆವಿಷ್ಕಾರಣದಿಂದ ಹುಟ್ಟಿದ ದ್ರಾವಕ ಪದಾರ್ಥ ಎರಡೂಸೇರಿ ಬಂಜೆ ಭೂಮಿಯು

ಲ್ಲಿಯ ಲವಣಾಂಶವನ್ನು ಹೊಡೆದು ಹಾಕಬಲ್ಲವು. ಅಷ್ಟಲ್ಲದೆ, ಶರ್ಕರಪಿಷ್ಟಪದಾರ್ಥಗಳು ಕೊಳೆಯುವುದರಿಂದ ಉಂಟಾದ ಕಾರ್ಬಾನಿಕ್ ದ್ರಾವಕವು ಸೋಡಾ ಸತ್ವವನ್ನು ಸೋಡಿಯಂ ಬೈಕಾರ್ಬೋನೇಟಾಗಿ ಪರಿವರ್ತಿಸುತ್ತದೆ. ಮತ್ತು ಸೆಗಣಿ ಗೊಬ್ಬರ ಹಾಕಿದ ಮಣ್ಣಿಂದ ಕಾರ್ಬಾನಿಕ್ ದ್ರಾವಕವು ಹಾರಿ ಹೋಗುವಾಗ ಮಣ್ಣು ಸರಂಧ್ರವೂ ಉತ್ಕೃಷ್ಟವೂ ಆಗುತ್ತದೆ. ಅಲಹಾಬಾದಿನಲ್ಲಿಯ ಸಂಶೋಧನದಿಂದ ಸೆಗಣಿ ಗೊಬ್ಬರಹಾಕಿದ ಮಣ್ಣಿನಲ್ಲಿರುವ ತೇವಕ್ಕಿಂತ ಹಾಕಿದ ಮಣ್ಣಿನಲ್ಲಿ ಹೆಚ್ಚು ತೇವವಿರುವದೆಂದೇ ತಿಳಿದುಬಂದಿದೆ. ಸೆಗಣಿಯ ಜೊತೆಗೆ ಹಾಕಿದ ಸುಣ್ಣವು ಅದರಿಂದ ಉತ್ಪನ್ನವಾದ ಅವಯವಜ ದ್ರಾವಕಗಳಿಂದ ವೀರ್ಯವಾಗಿ ಪರಿಣಮಿಸಿ ಸೋಡಿಯಂ ಸುಣ್ಣನ್ನು ಕ್ಯಾಲ್ಸಿಯಂ ಮಣ್ಣನ್ನಾಗಿ ಪರಿವರ್ತಿಸಲು ಸಹಾಯಕವಾಗುತ್ತದೆ. ಅಷ್ಟಲ್ಲದೆ ಸೆಗಣಿಯಲ್ಲಿಯ ಅಲ್ಪ ಪ್ರಮಾಣದ ಗಂಧಕ ದ್ರಾವಕನು ಕ್ಯಾಲ್ಸಿಯಂ ಕಾರ್ಬೋನೇಟ್ ಇದ್ದ ಮಣ್ಣನ್ನು ಕ್ಯಾಲ್ಸಿಯಂ ಸಲ್ಫೇಟಾಗಿ ಪರಿವರ್ತಿಸುತ್ತದೆ. ಅದು ಲವಣಮಿಶ್ರ ಮಣ್ಣಿನಮೇಲೆ ಪ್ರತಿಕ್ರಿಯೆ ಮಾಡಿ ಅದನ್ನು ಸತ್ವ ಪೂರ್ಣವನ್ನಾಗಿ ಮಾಡಿ ಹದಕ್ಕೆ ತರುತ್ತದೆ.

ಸಕ್ಕರೆ ಕಾರಖಾನೆಗಳಲ್ಲಿಯ ಶರ್ಕರ ಪಿಷ್ಟ ಪದಾರ್ಥ ಹಾಗೂ ಕ್ಯಾಲ್ಸಿಯಂ ಕಾಂಪೌಂಡ್ಸ್ [ಚೂರ್ಣಜಗಳು] ಇವುಗಳನ್ನೊಳಗೊಂಡ ಕೆಸರು-ಮಣ್ಣು ಸಹ ಊಷರ ಭೂಮಿಯನ್ನು ಹದಕ್ಕೆ ತರುವುದರಲ್ಲಿ ಬಹಳ ಪ್ರಯೋಜನಕಾರಿಯಾಗುತ್ತದೆ. ಎಕರೆಯೊಂದಕ್ಕೆ ೧-೨ ಟನ್ ಹಿಂಡಿಯನ್ನು ಹಾಕುವುದರಿಂದ ಊಷರ ಕ್ಷೇತ್ರಗಳಲ್ಲಿ ಅಕ್ಕಿಯ ಬೆಳೆಗನುಕೂಲವಾಗುವಂತಹ ಹದಕ್ಕೆ ಮಣ್ಣನ್ನು ತರಲಾಗಿದೆ.

[ಈ ಪ್ರಬಂಧದಲ್ಲಿ ಕೊಡಲಾಗಿರುವ ಸಲಹೆಗಳು ಗಮನಾರ್ಹವಾಗಿವೆ ಮತ್ತು ಆಚರಣಾರ್ಹವಾಗಿವೆ. ಸರಿಯಾಗಿ ಹದಮಾಡಿ ನಮ್ಮ ನೆಲದ ಮಣ್ಣನ್ನು ಬಳಸಿಕೊಂಡರೆ ಆಹಾರದ ಕೊರತೆಯ ಹೆದರಿಕೆಯನ್ನೆಲ್ಲ ದೂರಮಾಡುವುದೆಂಬುದರಲ್ಲಿ ನನಗೆ ಸಂದೇಹವಿಲ್ಲ. —ಮೋ. ಕ. ಗಾಂಧಿ]

ಮಂತ್ರಾಲಯ ಯಾತ್ರಿಗಳಿಗೆ ಸೌಕರ್ಯ

ಬಳ್ಳಾರಿ ಜಿಲ್ಲೆಯ ಶೀದಾ ಕ್ಷೇತ್ರಗಳಾದ ಬಳ್ಳಾರಿ, ಆದವಾನಿ ಹೊಸಪೇಟೆಗಳಿಂದ ಮಂತ್ರಾಲಯದ ಯಾತ್ರೆಗೆ ಹೋಗಬಯಸುವವರು 29-8-47 ರಿಂದ 7-9-47 ರವರೆವಿಗೆ ಅರುಸೇರು ದೇಷನ ಯಾವದೇ ಧಾನ್ಯವನ್ನಾದರೂ ತೆಗೆದುಕೊಂಡು ಹೋಗಬಹುದು.

ಕೆ. ಎನ್. ಅನಂತರಾಮನ್, ಕಲೆಕ್ಟರ್.

ಶಾಂತಿ ಹೋಮ

ಬಳ್ಳಾರಿಯ ಶ್ರೀ ವಿಠಲಶೇಷಪ್ಪಶ್ರೇಷ್ಟಿಯವರು 11-8-47 ರಿಂದ 20 ದಿನಗಳವರೆವಿಗೆ ಲಕ್ಷ ಬಿಲ್ವ ಮಹಾ ರುದ್ರಾಭಿಷೇಕ, ಅತಿರುದ್ರತಿಲಹೋಮ ರುದ್ರ ಸ್ವಾಹಾಕಾರ, ನವಗ್ರಹಾದಿ ಅನೇಕ ಜಪಾದಿಗಳನ್ನು ವೇದಪಾರಾಯಣ ಪಂಡಿತ ಬ್ರಾಹ್ಮಣರಿಂದ ನಡೆಸಿ ಬ್ರಾಹ್ಮಣ ಭೋಜನ ಭೂರಿಸಂತರ್ಪಣೆ ಜರುಗಿಸಿದರು.

ದೊಡ್ಡ ಹರಿವಾಣ (ಆದವಾನಿ)

14 ನೆಯ ಮಧ್ಯರಾತ್ರಿ ಪ್ರಭಾತಫೇರಿಯು ಹೊರಡಿಸಲ್ಪಟ್ಟು ಪ್ರಾತಃಕಾಲ ಗ್ರಾಮಜಾವದಿ ಮತ್ತು ಏಕೀಕರಣ ಸಂಘದ ಕಟ್ಟಡಗಳಮೇಲೆ ತ್ರಿವರ್ಣ ಧ್ವಜಾರೋಹಣವು ವಯೋವೃದ್ಧ ಶ್ರೀಮಾನ್ ಶೇಷಾಚಾರ್ಯರಿಂದ ನಡೆಯಿತು. ಸಾಯಂಕಾಲ ಗಾಂಧಿ ನೆಹರೂ, ಬೋಸ್ ವಗೈರೆ ನಾಯಕರಿಂದೊಡಗೂಡಿದ ಧ್ವಜಾಲಂಕೃತ ರಥವು ಮಂಗಳವಾದ್ಯಗಳು ಭೋರ್ಗರೆಯುತ್ತಿರಬೇಕಾದರೆ ಎರಡು ಸಾವಿರ ಜನಸಮೂಹ ದೊಡನೆ ಬೀದಿಗಳಲ್ಲಿ ಸಾಗಿತು. ಶಾಲಾ ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಲಾಯಿತು. ಶ್ರೀ ಕೊಟಿಗಿಹನುಮಂತಪ್ಪನವರೂ ಈ ಕಾರ್ಯದಲ್ಲಿ ಸಹಾಯುಗೈದರು. ಸಾರ್ವಜನಿಕ ಸಭೆಯಲ್ಲಿ ಹೆ. ಮಾ. ಶ್ರೀಹೆಚ್ ಎಸ್. ವೆಂಕೋಬರಾಯರು ಸ್ವಾತಂತ್ರ್ಯವಿಷಯದಲ್ಲಿ ವಿಪುಲವಾದ ಭಾಷಣವಿತ್ತರು. ವಿದ್ಯಾರ್ಥಿಮಂಡಲದ ಅಧ್ಯಕ್ಷ ವೇದವ್ಯಾಸರಾಯರು ಉತ್ಸಾಹದಿಂದ ಕಾರ್ಯಮಗ್ನರಾಗಿದ್ದರು. ಪಂಚಾಯ್ತಿ ಬೋರ್ಡು 100 ಕೊಡುತ್ತೇವೆಂದು ವಾಗ್ದಾನಮಾಡಿ ಕೊಡಲಿಲ್ಲ

ಬಳ್ಳಾರಿ ಜಿಲ್ಲೆಯಲ್ಲಿ ಸ್ವಾತಂತ್ರ್ಯೋತ್ಸವ.

ಹಾಲ್ವಿ (ಅದವಾನಿ)

ಲೇಬರ್ ಶಾಲೆಯ ಮಕ್ಕಳು ಜಯಘೋಷದಿಂದ ಮೆರವಣಿಗೆ ನಡೆಸಿದ ನಂತರ ಶಾಲೆಯು ಮೇಲೆ ರಾಷ್ಟ್ರಧ್ವಜಾರೋಹಣವಾಗಿ ಮಕ್ಕಳಿಗೆಲ್ಲಾ ಶ್ರೀ ರಾಮಲಿಂಗಪ್ಪನವರು ಲಡ್ಡನ್ನು ಹಂಚಿದರು ಸಾಯಂಕಾಲ ಶಾಲೆಯ ಆವರಣದಲ್ಲಿ ಸ್ವಾತಂತ್ರೋತ್ಸವ ಮತ್ತು ಧ್ವಜದ ಮಹತ್ವವನ್ನು ಕುರಿತು ಶ್ರೀ ನರಸಪ್ಪ ಮತ್ತು ಓಒಪ್ಪನವರು ಭಾಷಣಕೊಟ್ಟರು. ಪೆಪ್ಪರ್ ಮೆಂಟ್ ಹಂಚಲಾಗಿ, ಅಧ್ಯಕ್ಷರ ಭಾಷಣೆ ವಂದನಾರ್ಪಣೆಯಿಂದ ಸಭೆಯು ಮುಗಿಯಿತು.

ಹ್ಯಾರಡ (ಹಡಗಲಿ)

ಗ್ರಾಮಸ್ಥರು, ವಿದ್ಯಾರ್ಥಿಗಳು 14 ನೆಯ ಮಧ್ಯರಾತ್ರಿಯಿಂದ ದೇವಸ್ಥಾನ ಮಸೀದಿಗಳಲ್ಲಿ ಪೂಜಾವಾಶಾದಿಗಳು ನಡೆದನಂತರ 15 ನೆತಾ. ಪ್ರಾ ಪ್ರಭಾತಫೇರಿ ಜರುಗಿಸಿ ಜಾವಡಿ ಶಾಲೆಗಳ ಮೇಲೆ ಧ್ವಜಾರೋಹಣ ಮಾಡಿದರು. ಕೊರ್ಲಳ್ಳಿ ಭಗವಪ್ಪನವರು ಮಕ್ಕಳಿಗೆ ತಿಂಡಿಕೊಟ್ಟರು. ಮಧ್ಯಾನ್ಹಾಪರ 151 ಎತ್ತುಗಳಿಂದ ಅಲಂಕೃತ ರಥದಲ್ಲಿ ಭಾರತ ಮಾತೆ ದೇಶನಾಯಕರ ಮೆರವಣಿಗೆ ನಡೆಯಿತು. ಶ್ರೀ ಭಾವಿಲಿಂಗಪ್ಪನವರು ಬಡಜನರಿಗೆ ಊಟಕೊಟ್ಟರು. ಸಾಯಂಕಾಲ ಕೋಲಾಟ ಕೀರ್ತನೆ ನಡೆಯಿತು.

ದೊಡ್ಡನಹಳ್ಳಿ ತಾಂಡ

ಶ್ರೀಗಳಾದ ಗುರುತಿಂತಯ್ಯ ದ್ಯಾ. ಮಹದೇವಪ್ಪ ಶಿ. ಯಂ ಲೀಗಪ್ಪನವರ ಅಧಿಪತ್ಯದ ಸಮಿತಿಯಲ್ಲಿ ಸ್ವಾತಂತ್ರೋತ್ಸವವು ವಿಜೃಂಭಣೆಯಿಂದ ನಡೆಯಿತು. 14 ನೆಯ ಮಧ್ಯರಾತ್ರಿ ದೀಪೋತ್ಸವವಾಗಿ 4 ರಿಂದ 5½ವರಿಗೆ ಶಾಲೆಯ ಮಕ್ಕಳೊಂದಿಗೆ ಪುರ ಜನರು ಮೇಳ ವಾದ್ಯಗಳೊಡನೆ ನಗರ ಸಂಕೀರ್ತನೆ ಮಾಡಿ ಧ್ವಜಾರೋಹಣ ನಡೆಯಿತು. ಮಾರನೆಯದಿನ ದ ಬಹಿರಂಗ ಸಭೆಯಲ್ಲಿ ಸ್ವಾತಂತ್ರ್ಯದವಿಷಯ ಹೇಳಿಮೂರು ಭಾಷಣ ಕೊಟ್ಟರು. ಸಾಯಂಕಾಲ ಮೆರವಣಿಗೆ ಮಕ್ಕಳಿಗೆ ಪೇಪರ ಮೆಂಟ್ ಹಂಚೋಣದರಿಂದ ಸಭೆಯು ಮುಗಿಯಿತು

ತೆಲಿಗಿ (ಹರಪನಹಳ್ಳಿ)

ಪ್ರಾತಃಕಾಲ ಪ್ರಭಾತಫೇರಿ ಧ್ವಜಾರೋಹಣ 101 ಎತ್ತುಗಳೊಂದಿಗೆ ಮೆರವಣಿಗೆ, ಬ್ಯಾಂಡ ಮಾಸ್ಟರ್ ಹೊನ್ನಪ್ಪ ತಿಪ್ಪಣ್ಣ ಇವರ ಬ್ಯಾಂಡ್ ಪ್ರದರ್ಶನದನಂತರ ಸಾಯಂಕಾಲ ಬಹಿರಂಗಸಭೆಯಲ್ಲಿ ಹೆಚ್. ಯಂ. ವೀರಭದ್ರಯ್ಯನವರು ಬಸವನಜ್ಜಪ್ಪನವರು ಮುರುಗೇಂದ್ರಯ್ಯನವರು (D G. V.) ಇವರ ಭಾಷಣಗಳು ನಡೆದು ಸಾಯಂಕಾಲ ದೊಡ್ಡಮೆರವಣಿಗೆ ಹೊರಡಿಸಲಾಯಿತು. ಪಂಚಾಕ್ಷರಗವಾಯಿಗಳ ಪಟ್ಟಶಿಷ್ಯರಾದ ಕಲ್ಲಪ್ಪಯ್ಯ ಸ್ವಾಮಿಗಳ ಸಂಗೀತ ಕಛೇರಿಯೂ ನಡೆಯಿತು. ಹರಿಜನರ ಕೋಲಾಟ ಲಾವಣಿ ನಡೆದು ಬಾಲಕ ಬಾಲಕಿಯರಿಗೆ ಮಿಠಾಯಿ ಹಂಚಲಾಯಿತು ಈ ಕಾರ್ಯಕ್ರಮವು ಶ್ರೀ ಎ ಬಿ. ಆರ್. ಕೊಟ್ರಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು.

ಮಾಕನಡುಕು (ಕೊಣ್ಣಿಗಿ)

15 ನೆಯ ದಿನಾಂಕ ಶುಕ್ರವಾರ ಪ್ರಾತಃಕಾಲ ಪ್ರಭಾತಫೇರಿಯ ನಂತರ ೧೧ ವರ್ಷದ ಬಾಲಕನು ಧ್ವಜಾರೋಹಣ ನೆರವೇರಿಸಿದನು. ಸಾಯಂಕಾಲ ಗಾಂಧಿ ಭಾವ ಚಿತ್ರದ ಮೆರವಣಿಗೆಯಾಗಿ ಮಕ್ಕಳಿಗೆ ಮಿಠಾಯಿ ಹಂಚಲಾಯಿತು.

ಅ. ಕ. ವಿಕೀಕರಣ ಪರಿಷತ್ತು-ಹೊಳಲಗುಂದಿ

ಶ್ರೀ ಬಿ. ಅನಂತಾಚಾರ್ಯರು ದ್ವಿತೀಯ ಅ. ಕ ವಿ. ಪರಿಷತ್ತಿಗೆ ಅಧ್ಯಕ್ಷರಾಗಲು ಒಪ್ಪಿರುವರೆಂದು ಶಿವದೇಶಾಯಿಯವರು ಬರೆಯುತ್ತಾರೆ. ಕಾರ್ಯಕರ್ತರ ಸಭೆಗೆ ಶ್ರೀ ಬೊಕ್ಕೇಗೌಡರನ್ನು ಆಹ್ವಾನಿಸಲಾಗಿದೆ.

Letters to the Editor.

TO

The Assistant Inspecting Textile Commissioner,

BELLARY.

Sir,

We are grateful to you for your sympathy to the lot of the villagers and Harijans who after long and dreary waiting since December 1946 (when they applied for licences as retailers) got their licences during August and September 47 We are sure that during your rounds in the District, you must have come across villages which hove not seen the face of mill cloth for the past 3 years or more Owing to the continued solicitude of the Govt. to the town dwellers in the matter of providing for them all amenities, we are bound to be neglected not withstanding the sincere desire of individual officers to help us. We earnestly hope that the advent of freedom will usher in the new era and the out-look will change for the better

Now that you have granted us the licences in conformity with the recent G. O, may we ask why there is this inordinate delay in allotment and distribution ?

We have suffered long enough. We request you through the columns of Nava Bharat to help us soon.

Yours etc.,

Village Retailers & Harijans of 47 Villages.

ಹೈದರಾಬಾದಿನಲ್ಲಿ ಮೊಗಲಾಯಿ

ಹೈದರಾಬಾದಿನಲ್ಲಿ ಕಾಂಗ್ರೆಸ್‌ನ ಶಾಂತಿಯುತ ಸತ್ಯಾಗ್ರಹಪ್ರಾರಂಭವಾದ ಮೇಲೆ ಅನೇಕ ಕಡೆಗಳಲ್ಲಿ ದೌರ್ಜನ್ಯವು. ನಡೆದಿದೆ ಮುಸಲ್ಮಾನ ಪುಂಡರು ಶಸ್ತ್ರಧಾರಿಗಳಾಗಿ ಹಿಂದುಗಳ ಮೇಲೆ ದಾಳಿಮಾಡುತ್ತಿರುವರೆಂಬುದು ಹೈದರಾಬಾದ್ ಕಡೆಯಿಂದ ನಿರಾಶ್ರಿತರಾಗಿ ಬೆಜವಾಡಾ ಭಾಗಕ್ಕೆ ಬಂದವರಿಂದ ತಿಳಿದುಬಂದಿದೆ. ಭಾರತ ರಾಷ್ಟ್ರಧ್ವಜವನ್ನು ಎಲ್ಲೂ ಹಾರಗೊಡುವುದಿಲ್ಲ ಅದನ್ನು ಹಾರಿಸಿದವರಿಗೆ ಶಿಕ್ಷೆಯಾಗುತ್ತಲಿದೆ. ಶಕಂದರಾಬಾದು, ಹೈದರಾಬಾದುಗಳಲ್ಲಿ ಜನರ ವಿರೋಧಕ್ಕೆ ಜಾತೀಯ ಸ್ವರೂಪವನ್ನು ಕೊಡಲಾಯಿತು. ಪೋಲೀಸರಲ್ಲಿ ಪಕ್ಷಪಾತ ವೃತ್ತಿಯು ಕಂಡುಬರುತ್ತಲಿದೆ.

ಇಷ್ಟಾದರೂ ಹೈದರಾಬಾದಿನ ಪ್ರಜೆಗಳು ಎದೆಗುಂದದೆ ಸರಕಾರಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿ ಪ್ರತಿಭಟಿಸುತ್ತಿರುವರು. ಓರಂಗಲ್ಲಿನಬಳಿ ಯಿರುವ ಹುಜೂರಾಬಾದಿನಲ್ಲಿ ಕಾಂಗ್ರೆಸ್ ಸತ್ಯಾಗ್ರಹಿಗಳು ಸೆರೆಹಿಡಿಯಲ್ಪಟ್ಟಾಗ ನಡೆದ ಗಲಭೆಯಲ್ಲಿ ಪೋಲೀಸರು ಪೆಟ್ಟುತಿಂದು ಇನ್ಸ್‌ಪೆಕ್ಟರನು ಪ್ರಾಣಕಳೆದುಕೊಂಡನು. ಅಲ್ಲಿಗೆ ಪೋಲೀಸ್ ಮತ್ತು ಮಿಲಿಟರಿ ಹೋಗಿದೆ. ಈಗ ಅಲ್ಲಿಂದ ಸುದ್ದಿಯೇ ಇಲ್ಲ. ಪ್ರಜೆಗಳಿಗೆ ಯಾವ ಅಧಿಕಾರವನ್ನೂ ಕೊಡದೆ ಇನ್ನೆಷ್ಟುದಿನಗಳು ಹತ್ತಿಕ್ಕುವರೋ ಗೊತ್ತಿಲ್ಲವಾಗಿದೆ.

ಮದ್ಯನಿಷೇಧ ಶಾಸನವು ಎಲ್ಲಾ ಕಡೆಗಳಲ್ಲಿ ಉಲ್ಲಂಘಿಸಲ್ಪಡುತ್ತಿದ್ದು ಅಧಿಕಾರಿಗಳು ಕಣ್ಮುಚ್ಚಿಕೊಂಡಿರುವರೆಂದು ನಮಗೆ ಅನೇಕಲೇಖನಗಳು ಬರುತ್ತಲಿವೆ, ಇದರ ಸಾರವನ್ನು ಬರುವವಾರ ಪ್ರಕಟಿಸುತ್ತೇವೆ.

ನವಭಾರತಕ್ಕೆ ಚಂದಾದಾರರಾಗಿರಿ

ಹಬ್ಬ್ಲಿ.

15 ನೆಯ ಪ್ರಾ. ಸ್ವಾತಂತ್ರೋತ್ಸವದ ನಿಮಿತ್ತ ರಾಷ್ಟ್ರಧ್ವಜಾರೋಹಣವೂ, ದೇಶಭಕ್ತರ ಚಿತ್ರಪಟಗಳ ಮೆರವಣಿಗೆಯೂ, ದೇವಸ್ಥಾನಗಳಲ್ಲಿ ಪೂಜಾ ಪಾಠವೂ ನಡೆಯಿತು. ಶ್ರೀ ಜೆ. ಹೆಚ್. ಆಚಾರ್ಯರಧ್ಯಕ್ಷತೆಯಲ್ಲಿ ಸಮಾವೇಶವಾದ ಸಾರ್ವಜನಿಕ ಸಭೆಯಲ್ಲಿ ಶ್ರೀ ಶಂಕರಗೌಡರು, ಉಪಾಧ್ಯಾಯರು ಸಿದ್ದಮಲ್ಲಯ್ಯನವರು, ತಿಮ್ಮಪ್ಪನವರು ಸ್ವಾತಂತ್ರ್ಯ ಮಹತ್ವವನ್ನು ಹೇಳಿ ಮೇಲುಕೀಳು ಭಾವನೆಯು ನಾಶವಾಗಬೇಕೆಂದರು. ಅಧ್ಯಕ್ಷರು ಸಮಾರೋಪ ಭಾಷಣಮಾಡಿ ಅಹಿಂಸಾಮಯ ಆಂದೋಲನದಿಂದ ಸ್ವರಾಜ್ಯಪ್ರಾಪ್ತವಾದುದನ್ನು ವಿವರಿಸಿ, ಸ್ವರಚಿತ ಪದ್ಯಗಳನ್ನೊದಿ ಮುಗಿಸಿದರು.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:**— ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:- ಪತ್ತಿಕೊಂಡ. **ಕಡಪ:**— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡ

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3% **ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ**

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5 -0—0
6 ತಿಂಗಳಿಗೆ 3-0-0	Six months 3 0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH No. B 17 FOR (Q.H. No. B-5.)
Edited & Published by T B. KESHAVA RAO

ಜೈಹಿಂದ್ Reg. No. M. 4746

ಪತಾಕೆ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ಸಂ ೧೦ ಬಳ್ಳಾರಿ ಸೆಪ್ಟಂಬರು ೮ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ
ಚಿಕೆ ೩೪ ಟಿ. ಬಿ. ಕೇಶವರಾವ್.

ಗಾಂಧೀಜೀಯವರು

೧—೯—೪೭ ಸೋಮವಾರ ರಾತ್ರಿ ೮-೧೫ ರಿಂದ ಕಲ್ಕತ್ತೆಯಲ್ಲಿ ಹಿಂದೂ—ಮುಸಲ್ಮಾನ ಸೌಹಾರ್ದಕ್ಕಾಗಿ ಉಪವಾಸವನ್ನಾರಂಭಿಸಿರುವರು. ಅವರು ನೀರನ್ನು ಮಾತ್ರ ಸೇವಿಸುತ್ತಲಿರುವರು. ಸದ್ಯಕ್ಕೆ ಉಲ್ಲಸಿತರಿದ್ದಾರೆ.

ಆಹಾರ ಧಾನ್ಯ ಸಂಗ್ರಹ

ನವಭಾರತ ಸಂಪಾದಕರಿಗೆ

ಬಳ್ಳಾರಿ ಜಿಲ್ಲೆಯ ಧಾನ್ಯ ಸಂಗ್ರಹಾಧಿಕಾರಿಗಳಾದ ಡಿಸ್ಟ್ರಿಕ್ಟ್ ಸಪ್ಲೈ ಆಫೀಸರ್ ಮತ್ತು ಇವರ ಶಿಬ್ಬಂದಿ ತಾಲೂಕು ಸಪ್ಲೈ ಆಫೀಸರ್, ಫಿರ್ಕಾ ಸಪ್ಲೈ ಆಫೀಸರ್ ಮಗೈರೆ ದೇವತೆಗಳು ರೈತರ ಕಣಜ ಮನೆಗಳಲ್ಲಿ ಧಾನ್ಯ ವಿದ್ದಾಗ ಸಂಗ್ರಹವನ್ನು ಬಿಟ್ಟು ಕೊನೆ ಕೊನೆಗೆ ಸಂಗ್ರಹ ಕಾರ್ಯಕ್ಕೆ ಪ್ರಾರಂಭಿಸಿದರು. ಬೆಳೆಯಿದ್ದ ಕಡೆಗಳಲ್ಲೂ, ಬೆಳೆಯಾಗದ ಕಡೆಗಳಲ್ಲೂ ಒಂದೇ ಮಂತ್ರವನ್ನುಪಯೋಗಿಸಿ ದೊಡ್ಡ ದೊಡ್ಡ ರೈತರನ್ನು ಬಿಟ್ಟು ಸಣ್ಣ ರೈತರಿಂದ ಎಳೆಯಲು ಪ್ರಾರಂಭಿಸಿದರು. ಪರಿಸ್ಥಿತಿಯು ಬಿಕ್ಕಟ್ಟಿಗೆ ಬಂದಾಗ ದೊಡ್ಡ ರೈತರು ತಮ್ಮ ಹೆಚ್ಚಿನ ಧಾನ್ಯವನ್ನು ಬ್ಲಾಕಿನಲ್ಲಿ ಮಾರಿಕೊಂಡ ನಂತರ ಮತ್ತೆ ಎಲ್ಲರನ್ನೂ ಸವರಿಸಿಕೊಳ್ಳಹತ್ತಿದರು. ಈ ಕೆಳಗೆ ಕಂಡ ದೋಷಗಳು ಧಾನ್ಯ ಸಂಗ್ರಹಾಧಿಕಾರಿಗಳಿಂದ ನಡೆದಿವೆ.

(1) ಆಯಾ ಊರಿನಲ್ಲಿ ಸಂಗ್ರಹವಾದ ಕಾಳನ್ನು ಆಯಾ ಊರುಗಳಿಗೆ ಸಾಕಾಗುವಷ್ಟು ಉಳಿಸಲಿಲ್ಲ. ಗ್ರಾಮಾದಿಗಳಿಂದ ಹೊರಗೊಯ್ದು, ಬಡವರಿಗೆ ಬೇಕಾದಾಗ ಸರಿಯಾಗಿ ವ್ಯೂಹಿಕೆ ಮಾಡಲಿಲ್ಲ

(2) ಸರಕಾರದವರು ಕೊಡುವ ಧಾನ್ಯದ ಬೆಲೆ ಈಗಿನ ಪರಿಸ್ಥಿತಿಯಲ್ಲಿ ಸಾಕಷ್ಟು ರೈತನಿಗೆ ಉಪಯುಕ್ತವಿಲ್ಲ. ಈ ಕಾರಣ ಹೆಚ್ಚು ಬೆಳೆಯಬೇಕೆಂಬ ಸರಕಾರದ ಯೋಜನೆಯು ಅಭಿವೃದ್ಧಿಯಾಗದೆ, ಕಂಪ್ಲಿ ಹೊಸಪೇಟೆ ಭಾಗಗಳಲ್ಲಿ ಎಲ್ಲರೂ ಕಬ್ಬನ್ನೇ ಅಧಿಕವಾಗಿ ಹಾಕಿರುವರು.

(3) ಊರಲ್ಲಿ ಬೆಳೆದ ಒಳ್ಳೆಪದಾರ್ಥ (ನೆಲ್ಲ) ಹೊರಗೆ ತೆಗೆದುಕೊಂಡು ಹೋಗಿ ಕೆಟ್ಟ ಮಾಲನ್ನು ಸಪ್ಲೈ ಮಾಡಿದರಿ ಯಾವ ರೈತನಿಗೆ ಹೊಟ್ಟೆ ಉರಿಯಲಿಕ್ಕಿಲ್ಲ.

ಸಂಗ್ರಹ ವಾಗುವ ಧಾನ್ಯಗಳಿಗೆ ಒಳ್ಳೆಯ ಬೆಲೆ ಕೊಟ್ಟು ಊರಿಗೆ ಸಾಕಾಗುವಷ್ಟು (ಕೂಲಿಕಾರರಿಗೂ ಸಹ) ಅಲ್ಲಿಯೇ ಬಿಟ್ಟು ಊರಲ್ಲಿ ಧಾನ್ಯವಿಲ್ಲದಾಗ ಇನ್‌ಫರ್ಮಲ್ ರೇಷನಿಂಗು ಪ್ರದೇಶಗಳಿಗೆ ನಾವು ಜವಾಬ್ದಾರರಲ್ಲವೆಂದು ಹಾರಿಕೊಳ್ಳದಂತೆ ಸರಕಾರದವರು ಸಪ್ಲೈ ಮಾಡುವ ಜವಾಬ್ದಾರಿ ವಹಿಸಿದರೆ ಮಾತ್ರ ಧಾನ್ಯ ಸಂಗ್ರಹ ಕಾರ್ಯ ಸಾರ್ಥಕವಾದೀತು. ಮಂತ್ರಿಗಳ ಸಂಚಾರವು ಸಾಫಲ್ಯವಾದೀತು. ಹೆಚ್ಚಿನ ಬೆಳೆ ಬೆಳೆಯಬೇಕೆಂಬ ಸರ್ಕಾರದ ಯೋಜನೆಗೂ, ಪ್ರೋತ್ಸಾಹ ದೊರೆತೀತು. ಒಬ್ಬ ರೈತ

ಕಾಂಗ್ರೆಸ್ ತ್ಯಾಗಿಗಳಿಗೆ ಭೂದಾನ

ಕಾಂಗ್ರೆಸಿನ ಸ್ವಾತಂತ್ರ್ಯೋದ್ಯಮದಲ್ಲಿ ಜೈಲಿನ ವಾಸವನ್ನು ಭೋಗಿಸಿ ಬಂದವರಿಗೆ ಐದೈದು ಎಕರೆ ಭೂಮಿ ಕೊಡಬೇಕೆಂದು ಮದ್ರಾಸ್ ಸರ್ಕಾರದವರು ನಿರ್ಧರಿಸಿದ್ದು ಅದರ ವಿವರಗಳನ್ನು ಪ್ರಕಟಿಸಿರುವರು. ಈ ದಾನಕ್ಕೆ ಯೋಗ್ಯರಿದ್ದು ಬೇರೆ ಭೂ ಆಸ್ತಿಗಳಿಲ್ಲದೆ ಸರಕಾರದ ಸಹಾಯವನ್ನು ಪಡೆಯಲಿಚ್ಛಿಸುವ ರಾಜಕೀಯ ಜನರು (Ex- Politicals) ಆಯಾ ಪ್ರದೇಶಗಳಲ್ಲಿನ ಜಿಲ್ಲಾ ಕಲೆಕ್ಟರವರಿಗೆ ವಿವರಗಳನ್ನು ತಿಳಿಸುತ್ತಾ ಅರ್ಜಿ ಇಟ್ಟು ಕೊಳ್ಳಬೇಕು.

ಗಾಂಧಿ ಉಪವಾಸ

ಶ್ರೀ ಜಯಪ್ರಕಾಶರ ಹೇಳಿಕೆ :-ಮಾನವರಿಗೆ ಶೋಭಿಸುವ ದಯೆ-ಶಾಂತಿಗುಣಗಳನ್ನು ಜಾಗೃತಗೊಳಿಸಲು ಗಾಂಧೀಜಿಯವರ ಉಪವಾಸವು ಪ್ರಚೋದಿಸುತ್ತಿದೆ. ಮಹಾತ್ಮರು ನಮ್ಮ ನಾಡಿನಿಂದ ಪರಕೀಯರನ್ನು ಹೊಡೆದೋಡಿಸುವ ಹೋರಾಟದಲ್ಲಿ ನಮ್ಮ ಮಾರ್ಗದರ್ಶಿಗಳಾಗಿದ್ದರು. ಇಂದು ನಮ್ಮ ಅಂತಃಕರಣ ವಿವೇಕವನ್ನು ಹತ್ತಿಕ್ಕಿ ನನ್ನು ಮನಸ್ಸಿನ ಮೇಲೆ ಪ್ರಭುತ್ವ ನಡೆಸಲು ಬಂದ ಪಶುವೃತ್ತಿಯನ್ನು ಹೊಡೆದೋಡಿಸಿ ನಾವು ಮಾನವರಂತೆ ವರ್ತಿಸಲು ಅವರು ಮಾರ್ಗದರ್ಶನ ಮಾಡುತ್ತಿರುವರು. ಇನ್ನು ನಾವು ಪಶುಗಳಾಗುವದನ್ನು ಬಿಟ್ಟು ಮನುಷ್ಯರಾಗುವಾ.

THE NAVA BHARAT
ನವ ಭಾರತ
ಸಂಪಾದಕ-ಟಿ.ಬಿ. ಕೇತವದಾಪ್ಟೆ

10th year of Publication.
Monday, 8th Sept. 1947

ಪ ತ್ಯಾ ಕಾ ಂ ಡ

ಗಾಂಧೀಜೀ—ಉಪವಾಸ

ಬೀಹಾರಿನಿಂದ ನವಖಾಲಿಗೆ ಹೋರಟ ಮಹಾತ್ಮರು ಕೆಲ್ಕತ್ತೆಯಲ್ಲಿ ನಿಂತು ಹಿಂದೂ ಮುಸಲ್ಮಾನರಲ್ಲಿ ಸೌಹಾರ್ದವನ್ನು ಸ್ಥಾಪಿಸುವುದರಲ್ಲಿ ಯಶಶ್ವಿಗಳಾಗಿದ್ದರು. ಆದರೆ ಪಶ್ಚಿಮ ಪಂಜಾಬದಲ್ಲಿ ಅಲ್ಪ ಸಂಖ್ಯಾಕರಾದ ಹಿಂದೂ ಸಿಖ್ಖರ ಮೇಲೆ ಭಯಂಕರ ಅತ್ಯಾಚಾರ ಕೊಲೆ ಸುಲಿಗೆ ನಡೆದಿರುವ ಸುದ್ದಿಕೇಳಿ ಸೇಡು ತೀರಿಸಿಕೊಳ್ಳುವ ಬುದ್ಧಿಯಿಂದ ಕಲ್ಕತ್ತೆಯ ಬಹು ಸಂಖ್ಯಾಕರು ಮತ್ತೆ ಕೊಲೆ ಸುಲಿಗೆಗಳಾರಂಭಿಸಿದರು ಇದರಿಂದ ಮಹಾತ್ಮರು ಅತ್ಯಂತ ಖೇದಗೊಂಡು ಉಪವಾಸಕ್ಕಾರಂಭಿಸಿದ್ದಾರೆ. ಪಂಜಾಬಿನ ಬೇಗೆಯನ್ನು ಶಾಂತಗೊಳಿಸಲು ತಕ್ಷಣವೇ ಬರಬೇಕೆಂದು ನನಗೆ ತಂತಿಗಳು ಬರುತ್ತಲಿವೆ ನಾನು ಯಾವ ಮುಖದಿಂದ ಪಂಜಾಬಿಗೆ ಹೋಗಲಿ? ಕಲ್ಕತ್ತೆಯಲ್ಲಿ ಈ ಹುಚ್ಚುತನವು ಅಂತವಾಗುವವರೆಗೂ ನನ್ನ ಉಪವಾಸವು ನಿಲ್ಲಲಾರದು, ಸೇಡು ತೀರಿಸಿಕೊಳ್ಳುವ ಈ ಹುಚ್ಚಿಗೆ ನಿರಪರಾಧಿಗಳು ಗುರಿಯಾಗುತ್ತಿರುವರು. ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಜೀವ ಹೋದರೂ ಚಿಂತೆಯಿಲ್ಲ. ಉಲ್ಲಾಸದಿಂದ ಸಾಯುವೆನು. ಎಂದು ಹೇಳಿದ್ದಾರೆ.

ಕೆಲ ಹಿಂದೂ ಯುವಕರು ಮುಸಲ್ಮಾನರಿಂದ ಪೆಟ್ಟುತಿಂದವನೊಬ್ಬನನ್ನು ಗಾಂಧೀಜಿ ಬಳಿತಂದು ವಿಶೇಷ ಗಲಭೆ ಮಾಡಿ ಅವರನ್ನು ಅಪಾಯಕ್ಕೀಡು ಮಾಡಲು ಯತ್ನಿಸಿದರು. ಗಾಂಧೀಜಿ ಸದನದ ಜಳಿ ಕಲ್ಲು ಇಟ್ಟಿಗೆಗಳ ತೂರಾಟವಾಯಿತು. ಇದರಿಂದಲೂ ಅವರು ವಿಷಾದಗೊಂಡಿರುವರು.

ಶಸ್ತ್ರಾಸ್ತ್ರಗಳ ಹಿಂಸೆಯ ಮಾರ್ಗದಿಂದ ಪ್ರಪಂಚದಲ್ಲಿ ಶಾಂತಿಯು ಲಭಿಸಲಾರದು. ಅಹಿಂಸೆ ಸತ್ಯಾಗ್ರಹಾಸ್ತ್ರಗಳೇ ಸಾಧು ಮತ್ತು ಸತ್ಯದ ಮಾರ್ಗಗಳೆಂದು ಇಡೀ ಜಗತ್ತಿಗೆ ಕಾರ್ಯತಃ ಪ್ರದರ್ಶಿಸಿ ಕೊಟ್ಟವರು ಗಾಂಧೀಜಿಯವರು. ಬುದ್ಧಾವತಾರದ ೨೫೦೦ ವರ್ಷಾನಂತರ ಮತ್ತೆ ಗಾಂಧೀಜಿಯವರು ಹಿಂದೂ ಸ್ಥಾನಕ್ಕಷ್ಟೇ ಅಲ್ಲ. ಜಗತ್ತಿಗೇ ತಮ್ಮ ತತ್ವಗಳನ್ನು ಬೀರಿದ್ದಾರೆ. ನಾವು ಅವರ ಪ್ರಾಣವನ್ನು ಉಳಿಸಲೇ ಬೇಕು ರಾಕ್ಷಸೀ ಕೃತ್ಯಗಳನ್ನು ಗೈಯುತ್ತಿರುವವರಿಗೆ ಸರ್ಕಾರವು ದಂಡಿಸಬೇಕು. ಸೇಡುತೀರಿಸಿಕೊಳ್ಳುವ ಕಾರ್ಯವನ್ನು ಸರ್ಕಾರಕ್ಕೆ ಬಿಡಿರಿ ಎಂದು ಪಂಡಿತ ಜವಹರಲಾಲರೂ ಹೇಳಿದ್ದಾರೆ. ಪ್ರಜೆಗಳೂ ಸೇಡುತೀರಿಸುವ ಅಸಹ್ಯಕಾರ್ಯದಿಂದ ದೂರವಿರಲೆಂದೂ ಗಾಂಧೀಜೀಯವರು ಬಹುಕಾಲ ನಮ್ಮ ಮಾರ್ಗದರ್ಶಿಗಳಾಗಿರಲೆಂದೂ ಭಗವಂತನಲ್ಲಿ ಪ್ರಾರ್ಥಿಸೋಣ

ದ್ವಿತೀಯ ಕರ್ನಾಟಕ ಏಕೀಕರಣ ಪರಿಷತ್ತು

ಪದ್ಯದ ಪರಿಸ್ಥಿತಿಯಲ್ಲಿ ಈ ಸಭೆಯ ಆವಶ್ಯಕತೆಯನ್ನು ಎಷ್ಟು ವರ್ಣಿಸಿ ಹೇಳಿದರೂ ಸಾಲದಾಗಿದೆ. ಕಬ್ಬಿಣವು ಕೆಂಪಿರುವಾಗಲೇ ರೂಪುಗೊಂಡು ಕೆಲಸಕ್ಕೆ ಬರುವುದು. ಭಾರತ ಘಟನೆಯು ಕಾರ್ಯರೂಪಕ್ಕೆ ಬರುವ ಮೊದಲೇ ಕರ್ನಾಟಕದ ಭವಿಷ್ಯವು ನಿಶ್ಚಿತವಾಗಬೇಕು. ಈಗ ಕನ್ನಡಿಗರು ನಿರ್ಲಕ್ಷ್ಯ ಬುದ್ಧಿಯಿಂದಿದ್ದರೆ ಮುಂದೆ ಬಹಳ ಪಶ್ಚಾತ್ತಾಪ ಪಡಬೇಕಾದೀತು. ಜಿಲ್ಲೆಯನ್ನು ಹೋಳುಮಾಡಲು ಯತ್ನಗಳು ಕೇಲ್ಕರ ಅವಾರ್ಡ ಕಾಲದಿಂದ ನಡೆದಿವೆ. ಇದನ್ನು ತಪ್ಪಿಸುವುದು ಎಲ್ಲರ ಕರ್ತವ್ಯ. ಈ ಕಾರ್ಯದಲ್ಲಿ ನಾವು ಸಮಸ್ತರ ಸಹಕಾರ ಪಡೆಯಬೇಕು.

ಮಹಾತ್ಮರ ಪ್ರಕಟನೆ

ಕಲಕತ್ತಾಗಿ ಮಹಾತ್ಮಾ ಗಾಂಧಿಯವರು ಇಂದು ಒಂಮ ದೀರ್ಘವಾದ ಪ್ರಕಟನೆ ಹೊರಡಿಸಿದ್ದಾರೆ. ಅದರ ಆಶಯವು ಇಂತಿದೆ.

ನಿನ್ನೆ ರಾತ್ರಿ 10 ಘಂಟೆಗೆ ಕೆಲವು ಯುವಕರು ಆವಾರದಲ್ಲಿ ಬಂದು ಗೊಂದಲ ಹಾಕಿದರು. ಮತ್ತು ಬಾಗಿಲಗಳನ್ನು ಬಡೆಯಹತ್ತಿದರು. ನಾನು ಎದ್ದು ಹೊಸ್ತಿಲದಲ್ಲಿ ಹೋಗಿ ನಿಂತು ಅವರಿಗೆ ಕೈಮುಗಿದು ಶಾಂತರಾಗಲು ಬಿನ್ನವಿಸಿಕೊಂಡೆ ಆದರೂ ಅವರು ಕೇಳಲಿಲ್ಲ. ಕಿಡಿಕಿಗಳನ್ನು ಒಡೆಯುವದನ್ನು ಹಾಗೆಯೆ ನಡೆಸಿದರು. ಅಲ್ಲಿದ್ದ ಪೋಲೀಸ ಅಧಿಕಾರಿಗಳೂ ಅವರಿಗೆ ಶಾಂತರಾಗಲು ಕೈಮುಗಿದರು. ನನ್ನ ಮೇಲೆ ಲಾಠಿ ಒಗೆಯ ಆಯಿತು. ಆದರೆ ಅದು ನನಗೆ ಬಡೆಯಲಿಲ್ಲ. ಇದರಂತೆ ನನ್ನ ಮೇಲೆ ತೂರಿದ ಇಟ್ಟಿಂಗಿಯೂ ಸಮೀಪದಲ್ಲಿದ್ದ ಮುಸಲ್ಮಾನ ಮಿತ್ರನಿಗೆ ಬಡೆಯಿತು. ನನ್ನ ಬಳಿಯಲ್ಲಿದ್ದ ಇಬ್ಬರು ಹುಡುಗಿಯರು ನನ್ನನ್ನು ಮುಂದಕ್ಕೆ ಬಿಡಲಿಲ್ಲ. ಇಸ್ಪರಲ್ಲಿ ಪೋಲೀಸ ಸುಪರಿಂಟೆಂಡಂಟರು ಬಂದು ನನಗೆ ಒಳಗೆ ಹೋಗಲು ಬಿನ್ನವಿಸಿದರು. ಸ್ವಲ್ಪ ಹೊತ್ತಿನ ಮೇಲೆ ಜನರು ಚದುರಿದರು. ಆವಾರದ ದ್ವಾರದ ಹೊರಗೆ ಏನಾಯಿತೆಂಬುದು ನನಗೆ ಗೊತ್ತಿಲ್ಲ. ಪೋಲೀಸರು ಮಾತ್ರ ಜನರನ್ನು ಚದುರಿಸಲು ಅಶ್ರುವಾಯು ಉಪಯೋಗಿಸಿದರು. ಈ ದುರ್ಘಟನೆ ಮೂಲಕ ನಾನು ನವಖಾಲಿ ಪ್ರವಾಸ ಮುಂದರಿಸಬೇಕಾಯಿತು.

ಇದನ್ನು ನಾನು ಬರೆಯುತ್ತಿದ್ದಾಗ ನಗರದಲ್ಲಿ ನಡೆದ ದುರ್ಘಟನೆಗಳ ವಿವರ ನನಗೆ ತಿಳಿದು ಬಂತು. ನಿನ್ನೆನ ವರೆಗೆ ಸುರಕ್ಷಿತ ಇದ್ದ ಸ್ಥಳಗಳು ಒಮ್ಮಿಂದೊಮ್ಮೆ ಇಂದು ಸುರಕ್ಷಿತವಾಗಿ ಪರಿಣಮಿಸಿದ್ದು ಅನೇಕ ಮರಣಗಳೂ ಸಂಭವಿಸಿವೆ. ಪಂಜಾಬಕ್ಕೆ ಬರಬೇಕೆಂದು ನನಗೆ ಕರೆ ಬಂದಿತು. ಕಲಕತ್ತೆಯಲ್ಲಿ ಪುನಃ ಗಲಭೆ ಪ್ರಾರಂಭವಾದಾಗ ನಾನು ಯಾವ ಮೋರೆಯಿಂದ ಅಲ್ಲಿಗೆ ಹೋಗುವದು? ಶಬ್ದಗಳಿಂದ ಶಕ್ಯವಾಗದ್ದನ್ನು ಉಪವಾಸ ಸಾಧಿಸಬಹುದು. ಆದ್ದರಿಂದ ನಾನು ರಾತ್ರಿ ೮-೧೫ ರಿಂದ ಉಪವಾಸ ಕೈಕೊಂಡಿರುವೆನು.

ಈ ಉಪವಾಸದಲ್ಲಿ ನಾನು ನೀರು ಮತ್ತು ಸೋಡಾ, ಉಪ್ಪು, ಇಷ್ಟೇ ತಕ್ಕೊಳ್ಳುವೆನು. ಕಲಕತ್ತೆಯ ಜನರಿಗೆ ನಾನು ಬೇಗನೆ ಪಂಜಾಬಕ್ಕೆ ಹೋಗಬೇಕೆಂಬ ಇಚ್ಛೆಯಿದ್ದರೆ ನನ್ನ ಉಪವಾಸ ತೀವ್ರ ಮುಗಿಯುವಂತೆ ಅವರು ಮಾಡಬೇಕು.

ಕಲ್ಕತ್ತೆಯ ಜಾತೀಯ ಗಲಭೆಯಲ್ಲಿ 62 ಜನರು ಸತ್ತಿದ್ದು 412 ಜನರಿಗೆ ಗಾಯಗಳಾಗಿವೆಯೆಂದು ಗೊತ್ತಾಗಿದೆ.

ಪಂಜಾಬದಲ್ಲಿ ಯಾದವೀ ಯುದ್ಧ ಘೋರ ಪರಿಸ್ಥಿತಿ.

ಭಾರತ ಪ್ರಧಾನರಾದ ಪಂಡಿತ ಜವಹರಲಾಲರಿಂದ ಪಂಜಾಬದ ಪರಿಸ್ಥಿತಿಯನ್ನರಿಯಲು ಹೋಗಿದ್ದ ವಿವಿಧ ಪತ್ರಿಕೆಗಳ ಸುದ್ದಿಗಾರರು ಒಂದು ಸಂಯುಕ್ತ ಪ್ರಕಟನೆಯಲ್ಲಿ ಹೀಗೆ ಹೇಳಿದ್ದಾರೆ. "ಪಂಚನದಿಗಳ ಸುಂದರನಾಡು ಇಂದು ಯಾದವೀಯುದ್ಧದಿಂದ ಸ್ಮಶಾನಭೂಮಿಯಂತೆ ಕಾಣಹತ್ತಿದೆ. ಇದ್ದುದನ್ನು ಇದ್ದಂತೆ ಮರೆಮಾಡದೆ ಹೇಳುವ ಮಾತಿದು. ಒಂದು ದೃಷ್ಟಿಯಿಂದ ಇದು ಯಾದವೀ ಯುದ್ಧಕ್ಕಿಂತಲೂ ಭಯಂಕರವಾಗಿದೆ. ಸಂರಕ್ಷಣೆಯ ಬಗ್ಗೆ ವ್ಯವಸ್ಥೆಯಿಲ್ಲದ ಅಸಹಾಯರಾದ ಅಲ್ಪಸಂಖ್ಯಾಕರ ಮೇಲೆ ಕ್ರೂರವಾದ ಪಾಶವೀ ದಾಳಿಗಳು ಸೇಡುತ್ತೀರಿಸಿಕೊಳ್ಳುವ ಭಾವನೆಯಿಂದ ನಡೆದಿವೆ. ಸರಕಾರವು ಅಧಿಕಾರ

ಸೂತ್ರಗಳನ್ನು ವಹಿಸುವ ಮೊದಲೇ ಪುಂಡರು ಅತ್ಯಾಚಾರಗಳನ್ನಾರಂಭಿಸಿದ ಕಾರಣ ಸರಕಾರವು ಕುಸಿದು ಬಿತ್ತು. ಕೇಂದ್ರಸರಕಾರದಿಂದ ಪೂರ್ವಪಂಜಾಬಕ್ಕೆ ಸಹಾಯ ದೊರೆತು ಪರಿಸ್ಥಿತಿಯು ಹಿಡಿತದಲ್ಲಿ ಬಂದಿತಾದರೂ ಪಶ್ಚಿಮ ಪಂಜಾಬದ ಸೈನಿಕ ಪೋಲೀಸರಲ್ಲಿನ ಜಾತೀಯ ಭಾವನೆಯಿಂದ ಅಲ್ಲಿ ನೈತಿಕ ಅಧೋಪತನವು ಪೂರ್ಣವಾಯಿತು. ಪಶ್ಚಿಮ ಪಂಜಾಬದ ಹಳ್ಳಿಗಳಲ್ಲಿ ಭೀಕರ ಪರಿಸ್ಥಿತಿ ಇದೆ. ಸುಂದರವಾದ ಲಾಹೋರ ನಗರವು ಹಾಳು ಹಂಪೆಯಾಗಿ ಪೇಟೆಯಲ್ಲಿನ ಅಂಗಡಿಗಳೆಲ್ಲ ಹಾಳಾಗಿ ಬೀದಿಯಲ್ಲಿ ಸೈನಿಕರ ಸಂಚಾರದ ಹೊರತು ಏನೂ ಇಲ್ಲ ಬೆಂಗಾವಲಿಲ್ಲದೆ ಖಾಸಗಿ ಮೋಟಾರು ಕೂಡ ನಡೆಯುವಂತಿಲ್ಲ. ಸಾರಿಗೆ ತಂತಿ ಎಲ್ಲಾ ಕಟ್ಟಾಗಿರುವ ಕಾರಣ ನಿಜವಾದ ಸುದ್ದಿಯು ಹೊರಗೆ ಬರುವಂತೆಯೇ ಇಲ್ಲ ಸಾವಿರಾರು ಹಿಂದೂ ಸೀಖರು ಒಳಪ್ರದೇಶಗಳಿಂದ ಲಾಹೋರಿಗೆ ಬರುತ್ತಲಿರುವರು. ಕೊಲೆ ಸುಲಿಗೆಯ ಹೃದಯದ್ರಾವಕ ಕತೆಗಳನ್ನು ಹೇಳುತ್ತಲಿರುವರು. ಜನರ ಸಂರಕ್ಷಣೆಗಾಗಿದ್ದ ಪೋಲೀಸ್ ಮತ್ತು ಸೈನಿಕರೇ ಈ ಹೀನ ಕೃತ್ಯಗಳಲ್ಲಿ ಕೊಡಗಿರುವರು. ಪಶ್ಚಿಮ ಪಂಜಾಬದ ಗಡಿನಾಡ ಸೈನಿಕರ ಬೆಂಗಾವಲಿನಲ್ಲಿ ಬರುತ್ತಿದ್ದ ನಿರಾಶ್ರಿತರನ್ನು ದಾರಿಯಲ್ಲಿ ತಡೆದು ಸಶಸ್ತ್ರ ದಾಳಿಗಾರರು ಕೊಲೆ ಸುಲಿಗೆಗಾರಂಭಿಸಿದ್ದಾರೆ. ಶಿಕಾರಿಪುರ ಒಂದೆ ಊರಲ್ಲಿ ಎರಡುದಿನಗಳೊಳಗಾಗಿ ಸಾವಿರಾರು ಜನರನ್ನು ತುಂಡರಿಸಿದ್ದಾರೆ. ಈ ಎಲ್ಲ ಜನರನ್ನು ಸೈನೀಕರು ಪೋಲೀಸರೇ ಗುಂಡಿಕ್ಕಿ ಕೊಂದಿದ್ದಾರೆ. ಇದೇ ಹತ್ಯಾಕಾಂಡವು ಜಂಗ ಮತ್ತು ಚೀನೀಕೋಟದಲ್ಲಿ ಪೋಲೀಸ್ ಮತ್ತು ಸೈನೀಕರಿಂದ ನಡೆದಿದೆ. ಹಿಂದೂ ಸೀಖ ನಿರಾಶ್ರಿತರನ್ನು ಸ್ಥಳಾಂತರ ಗೊಳಿಸುವದೇ ಅಸಾಧ್ಯವಾಗಿದೆ. ಪಶ್ಚಿಮ ಪಂಜಾಬದಲ್ಲಿ ರಾಜ್ಯದ ಆಡಳಿತವೇ ಇಲ್ಲದಂತಾಗಿ ಅರಾಜಕತೆ ನೆಲೆಸಿದೆ. ಪೂರ್ವ ಪಂಜಾಬದಲ್ಲಿ ಅರಾಜಕತೆಯನ್ನು ನಿರ್ಮೂಲ ಮಾಡಲು ಗುಂಡಿಕ್ಕಿ ಕೊಲ್ಲುತ್ತಾರೆ. ಪಶ್ಚಿಮ ಪಂಜಾಬದಲ್ಲಿ ಈ ಲಕ್ಷಣಗಳೇ ಇಲ್ಲ.

ಗ್ರಾಮೋದ್ಧಾರಮಾರ್ಗ

ಗ್ರಾಮದ ಪ್ರತಿಯೊಬ್ಬ ವ್ಯಕ್ತಿ ಓದು ಬರಹಬಲ್ಲವನಾಗಿದ್ದು, ತನ್ನ ಆದಾಯ ವ್ಯಯಗಳನ್ನಿಡಲು ಶಕ್ತನಾಗಿರಬೇಕು. ಅಕ್ಷರ ಮತ್ತು ವಿದ್ಯಾಪ್ರಚಾರವನ್ನು ಕಾಲೇಜುವಿದ್ಯಾರ್ಥಿಗಳಾದರೂ ಕೊನೆಗೆ 3 ತಿಂಗಳು ಸಾಗಿಸಬೇಕು. ಸಾಮಾನ್ಯವಾಗಿ ರೈತರನೇಕರಿಗೆ ಹೊಲದ ವಿಸ್ತೀರ್ಣ, ತರಂ, ಕ್ವಿಟ್ರೆಂಟ್, ಲ್ಯಾಂಡ್‌ಸೆಸ್ ತಿಳಿದಿರುವುದಿಲ್ಲ. ಈಗಿನ ಸರ್ಕಾರದವರು ಪ್ರತಿಯೊಬ್ಬ ರೈತನಿಗೂ ಬ್ಲೂಶೀಟ್ ಒದಗಿಸಿಕೊಡಬೇಕು. ಹೊಲ ಕೊಳ್ಳಬೇಕಾದರೆ ಕೊಳ್ಳುವವನಿಗೆ ಮಾರುವವನಿಗೆ ಎಷ್ಟೋ ಕಷ್ಟ, ನಷ್ಟಗಳೊದಗುತ್ತವೆ. ಮೇರೆ ಕಲ್ಲುಗಳಿಗಾಗಿಯೇ ಗುದ್ದಾಟವು ನಡೆಯುತ್ತಿರುತ್ತದೆ. ಕಾಲಿನ ಸಂಗ್ರಹ, ಬಟ್ಟೆಯ ಹಂಚುವಿಕೆ ಮತ್ತು ಇತರ ಅನೇಕ ಮುಖ್ಯ ವಿಷಯಗಳು ಸ್ಥಾನಿಕ ಭಾಷೆಗಳಲ್ಲಿ ಸರ್ಕಾರದಿಂದ ದೊರೆಯುವುದಿಲ್ಲ, ಇವು ದೊರೆಯುವಂತಾಗಬೇಕು. ಗೊಬ್ಬರ, ಬೀಜ, ಒಕ್ಕಲುತನದ ಸಾಮಗ್ರಿಗಳು ಹಳ್ಳಿಗಳಲ್ಲಿಯೇ ದೊರೆತರೆ ಒಳ್ಳೆಯದು. ಡಿಳ್ಳಿಗೆ ಹೋದರೂ, ಡೊಳ್ಳಿಗೊಂದೇ ಪೆಟ್ಟು ಎಂಬಂತೆ ಸರಕಾರದ ಸಾಲ ತೆಗೆದುಕೊಳ್ಳಬೇಕಾದರೆ, ¼ ಭಾಗ ದಸ್ಪು ಖರ್ಚಾಗುತ್ತದೆ. ರೈತನಿಗೆ ಮುಂಜೂರಿ ಹಣವು M. O. ದ್ವಾರಾ ಬರುವಂತೆ ವಿಚಾರಿಸಬೇಕು. ರೈತನಬೇಡಿಕೆ ಸರ್ಕಾರದಿಂದ ದೊರೆವ ಸೀದಾಧಾನ್ಯ ಅಧಿಕೃತ ದೊರೆಯಬಹುದಾದ ವಸ್ತುವಿವರ ಪಟ್ಟಿಯನ್ನು ಹಳ್ಳಿಗರಿಗೆ ಒದಗಿಸಬೇಕು. ಪ್ರಾಥಮಿಕಶಾಲೆ ಆಸ್ಪತ್ರೆ ಪ್ರತಿಪೂರಿಗೂ ಬೇಕು. ಯೋಗ್ಯ ಉಪಾಧ್ಯಾಯರು, ಯೋಗ್ಯಸಂಬಳಗಳು ಆವಶ್ಯಕ. ತನಿಖೆಯು ಚೆನ್ನಾಗಿ ನಿರ್ದಾಕ್ಷಿಣ್ಯವಾಗಿದ್ದರೆ ಶಾಲೆಗಳೂ ಚೆನ್ನಾಗಿರುತ್ತವೆ, ಇದರ ಸುವ್ಯವಸ್ಥೆಯಾಗಬೇಕು. 50 ರು. ವಳಗಿನ ಪತ್ರಗಳ ಬಾಕೀವಸೂಲಿಯ ತಿವಿಲಕ್ಕಮವು ಪಂಚಾಯ್ತಿ ಕೋರ್ಟುಗಳಲ್ಲಿ ಎಳ್ಳಷ್ಟು ಶಿಸ್ತಿಕರವಿಲ್ಲ. ವಿಲೇಜ್ ಕಮಿಟಿಗಳು ನಿರ್ಮಾಮವಾಗಬೇಕು. ಇಂಥಾ ಅನಾವಸ್ಥೆಯಲ್ಲಿ ಒಕ್ಕಟ್ಟು ಬಿಕ್ಕಟ್ಟಾಗಿದೆ. (ಹಳ್ಳಿರೈತ)

ಸ್ವಾತಂತ್ರ್ಯಕ್ಕೆರುವ ವಿರೋಧ ಶಕ್ತಿಗಳು

ಲೇ: 'ಓರ್ವ ಭಾರತ ನಿವಾಸಿ' [ಕರ್ಮವೀರ]

ಸ್ವಾತಂತ್ರ್ಯೋತ್ಸವದ ಶುಭ್ರ ಪ್ರಸಂಗ! ಬಹು ದಿನ ಕಷ್ಟ ನಷ್ಟಗಳನ್ನು ಸಹಿಸಿ ದೊರಕಿಸಿದ ಸ್ವಾತಂತ್ರ್ಯ! ಎಷ್ಟು ಆನಂದಕರ!! ಎಷ್ಟೋ ಉನ್ಮಾದಕರ!!!

ಸ್ವಾತಂತ್ರ್ಯದ ಅರ್ಥವು ವಿಶಾಲವಾಗಿದ್ದರೂ, ವ್ಯಕ್ತಿ ಸ್ವಾತಂತ್ರ್ಯದ ಅರ್ಥವನ್ನು ಮಾತ್ರ ಮರ್ಯಾದಿತವಾಗಿ ಇಟ್ಟುಕೊಂಡು ನಾವೆಲ್ಲರೂ ಆಚರಿಸಬೇಕಾಗಿರುವದು. ಆಹಾರ-ವಿಹಾರ, ಆಚಾರ—ವಿಚಾರಗಳೆಲ್ಲದರಲ್ಲಿಯೂ ಸ್ವಾತಂತ್ರ್ಯವು ಸಿಕ್ಕಿದೆಯೆಂದು ಮನಬಂದಂತೆ ನಡೆದರೆ ಜನಮತದಲ್ಲಿ ಅಪಹಾಸ್ಯಕ್ಕೆ ಈಡಾಗಬೇಕಾಗುವದಲ್ಲದೆ ಕಾಯಿದೆಯ ದೃಷ್ಟಿಯಿಂದ ಅಪಾದಿತರೂ ಆಗಬೇಕಾಗುವುದು. ಮಹಾತ್ಮಾ ಗಾಂಧೀಜಿಯವರು "ನಾನು ಯಾವಾಗಲೂ ಸ್ವತಂತ್ರನಿದ್ದೇನೆ" ಎಂದು ಹೇಳಿದಂತೆ ಪ್ರತಿಯೊಬ್ಬನೂ ಹಾಗೆ ತಿಳಿಯುವದು ಅವಶ್ಯ. ಆದರೆ ಮಹಾತ್ಮರ ಆಚರಣೆಯಂತೆಯೇ ತನ್ನದೂ ಆಚರಣೆಯು ಇರುವದೇನೆಂದು ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಡವೇ? ಜೀವನ್ಮುಕ್ತಾವಸ್ಥೆಯಲ್ಲಿ ಯಾರ ಭಯವೂ ಇಲ್ಲ. ಮುಕ್ತನಾಗದೆ ಮುಕ್ತರಂತೆ ನಟನೆ ಮಾಡುವವನನ್ನು ಮನುಷ್ಯ ಕೋಟಿಯಿಂದ ಬೇರ್ಪಡಿಸುವದು ಅವಶ್ಯವಾಗುವದು.

ಕಳೆದ ನೂರು ನೂರಾಐವತ್ತು ವರ್ಷಗಳಿಂದ ಭಾರತದಲ್ಲಿ ಭವ್ಯವಾಗಿ ಭದ್ರವಾಗಿ ನಿಂತ ಬ್ರಿಟಿಶ ಸಾಮ್ರಾಜ್ಯದ ಕಟ್ಟಡವನ್ನು ಉರುಳಿಸಿ ಸ್ವತಂತ್ರ ಭಾರತದ ತಳಗಲ್ಲು ನೊಸ್ಟೆ ೧೪ ನೇ ತಾರೀಖಿನ ಮಧ್ಯರಾತ್ರಿಯಲ್ಲಿ ಮೂರ್ತಿಮಂತ ಸ್ವಾತಂತ್ರ್ಯ ಮೂರ್ತಿಯಾದ ಪಂಡಿತ ಜವಹರಲಾಲರ ಹಸ್ತದಿಂದ ದಿಲ್ಲಿಯಲ್ಲಿ ಇಡಲ್ಪಟ್ಟಿತಷ್ಟೇ. ದೊರೆತ ಸ್ವಾತಂತ್ರ್ಯದ ವಿಷಯಕ್ಕೆ ಆನಂದವನ್ನು ವ್ಯಕ್ತಮಾಡುವದರ ಸಂಗಡ ಭಾರತವು ಭೂಮಂಡಲದಲ್ಲಿ ಆದರ್ಶ ರಾಷ್ಟ್ರವಾಗಿ ಚಿರಕಾಲ ಬಾಳಬೇಕೆಂದು ಅಕಾಂಕ್ಷೆ ಇಟ್ಟುಕೊಂಡು, ಸ್ವಾತಂತ್ರ್ಯ ತಳಹದಿಯ ಮೇಲೆ ಪ್ರಜಾಸ್ವಭುತ್ವದ ಭವ್ಯ ಕಟ್ಟಡ ಕಟ್ಟಲು ಬೇಕಾದ ಸಲಕರಣೆಗಳನ್ನು ದೃಷ್ಟಿಸಿ ನೋಡಿ, ಅದರಲ್ಲಿ ಇದ್ದ ಜಾತಿಯತೆ, ಅಧಿಕಾರಲೋಲುಪತೆ, ಲಂಚಗುಳಿತನ, ಕಳ್ಳಸೇಟಿ ಇವೇ ಮೊದಲಾದ ಜ್ವಾಲಾಗ್ರಾಹಿ ಪದಾರ್ಥಗಳು ಬ್ರಿಟಿಶರ ಕೈವಾಡದಿಂದ ಆ ಸಲಕರಣೆಗಳಲ್ಲಿ ಮಿಶ್ರಿತವಾದುದನ್ನು ಮನಗಂಡು, ಮೊದಲಿಗೆ ಇಂಥ ಘಾತಕ ಪದಾರ್ಥಗಳನ್ನು ತೆಗೆದೊಗೆಯಬೇಕೆಂದು ನಿಶ್ಚಯಿಸಿದ ಸಂಗತಿಯು ಅವರ ಸಂದೇಶದಲ್ಲಿ ಅಡಕವಾಗಿದೆ. ಆದರೆ ಈ "ನವಯುಗ" ಪ್ರಾರಂಭದ ಸುಮುಹೂರ್ತದಲ್ಲಿ ಅತಂತ್ರ ಸ್ವಾತಂತ್ರ್ಯಪ್ರೇಮಿ ಮಾತ್ರ ತಾನೂ ಸ್ವತಂತ್ರ ಭಾರತದ ತಳಗಲ್ಲನ್ನಿಡುವ ಸಾಹಸಮಾಡಿ ಅದು "ಧರ್ಮವೇ ರಾಷ್ಟ್ರಿಯತ್ವವೇ" ಎಂದು ಹುಡುಕುತ್ತ ಹುಡುಕುತ್ತ ಕಡೆಗೆ ಜಾತೀಯತೆಯನ್ನೆತ್ತಿ ಕೈಯಲ್ಲಿಹಿಡಿದುದು ಈ ಮಂಗಲಮಯ ಸುಪ್ರಸಂಗದಲ್ಲಿ ಅಗ್ರಪೂಜೆ ಪಡೆದ ಪಂಡಿತ ಜವಹರಲಾಲರಿಗೆ ಅಪಶಕುನ ಮಾಡಬೇಕೆಂದೋ! ಈ ಪ್ರಸಂಗದಲ್ಲಿ ಪಾಂಡವರ ರಾಜಸೂಯ ಯಾಗದ ಕಾಲಕ್ಕೆ ನಡೆದ ಶ್ರೀಕೃಷ್ಣನ ಅಗ್ರಪೂಜೆಯ ನೆನಪಾಗುವದು. ಅನುಭವಿಕರ ಗಾದೆಯ ಮಾತಿನ ಸತ್ಯತೆಯ ಪ್ರತೀತಿಯೂ ಬಾರದಿರದು.

ಕಾಂಗ್ರೆಸ್ ಸಂಸ್ಥೆಯಿಂದರೆ ಪಕ್ಷಾತೀತ ಜಾತ್ಯಾತೀತವೆಂದು ಮಹಾತ್ಮಾಜಿ ಮೊದಲಾದ ಧುರೀಣರು ಸಾರಿ ಸಾರಿ ಹೇಳುತ್ತಿರುವರು. ಇನ್ನೂ ನಮಗೆ ಬುದ್ಧಿಬಾರದೇ ಇದ್ದದ್ದು ನಮ್ಮ ದುರ್ದೈವ. "ಇಂದಿನ ರಾಜಕಾರಣ ಪಕ್ಷ ಸಂಗಡ ಪ್ರಧಾನವಾಗಿ ಬೆಳೆದು

ಬಿಟ್ಟಿದೆ'' ಎಂದು ಹೇಳುವದು ಅವಶ್ಯವೇ ಇಲ್ಲ. ರಾಜಕಾರಣದಲ್ಲಿ ಪಕ್ಷಗಳಿರತಕ್ಕದ್ದೇ. ಆದರೆ ತಲೆತಿರುಕರ ಪಂಗಡಗಳು ಮಾತ್ರ ಇರುವದು, ಅನವಶ್ಯವಿಷ್ಟೇ ಅಲ್ಲದೆ ರಾಷ್ಟ್ರಘಾತಕ. ಪ್ರಜಾಪ್ರಭುತ್ವದಲ್ಲಿ ಪಕ್ಷಗಳಿರಲೇಬೇಕು. ಆ ಎಲ್ಲ ಪಕ್ಷಗಳಿಗೂ ಪ್ರಾತಿನಿಧ್ಯವಿರಲೇಬೇಕು. ಅವರವರ ಮತಾಭಿಪ್ರಾಯಗಳ ಪ್ರಚಾರಕ್ಕೂ ಶಾಸನ ಮಂಡಲಗಳಲ್ಲಿಯ ಮಂಡನೆಗೂ ಅವಕಾಶವಿರಲೇಬೇಕು. ಇಂಥ ರಾಜ್ಯದಾಡಳಿತೆಗೆ ಪ್ರಜಾಪ್ರಭುತ್ವವೆನ್ನುವರು. ಈ ವಿಷಯದಲ್ಲಿ ಶತಾನುಶತಕ ಪ್ರಜಾಪ್ರಭುತ್ವದ ಅಗ್ರಗಣ್ಯರಾಜ್ಯದ ಲಾರ್ಡ ಚಾನ್ಸಲರ ಲಾರ್ಡ ರೋಬಿಟ್ ಇವರ ಅಭಿಪ್ರಾಯವು ಮನನೀಯವಾಗಿದೆ. :+

"Democratic Government means Government not according to the will of the majority but, a practical adjustment of opposing ideas and interests in a spirit of tolerance and compromise. The majority have no right to impose their mode of thinking and living upon the minority for that is not Democratic Government"

"ಪ್ರಜಾಸತ್ತಾತ್ಮಕ ರಾಜ್ಯವೆಂದರೆ ಎಲ್ಲ ಪಕ್ಷ ಪಂಗಡಗಳ ಸ್ನೇಹ ಸೌಹಾರ್ದ ಸಹಿಷ್ಣುತೆಯ ಮೇಲೆ ಅವಲಂಬಿಸಿದ ರಾಜ್ಯಪದ್ಧತಿಯು. ಪ್ರಜಾಸತ್ತಾತ್ಮಕ ರಾಜ್ಯದ ಅಂಗಾಂಗಗಳಲ್ಲಿ ತಮ್ಮ ತಮ್ಮ ಸಂರಕ್ಷಣೆಯ ವಿಷಯದ ಭ್ರಮವು ದೂರವಾದರೇನೇ ಆ ರಾಜ್ಯವು ಸುಗಮ ಮತ್ತು ಪ್ರಗತಿಪರವಾದೀತು. ಇಲ್ಲದಿದ್ದರೆ ಪರಸ್ಪರ ಭಯ ಅವಿಶ್ವಾಶಗಳೇ ಅದರ ಪ್ರಗತಿಮಾರ್ಗದಲ್ಲಿಯ ದೊಡ್ಡ ಬಂಡೆಗಲ್ಲುಗಳಾಗುವವು."

ನಮ್ಮ ಮುಂದಿನ ಏಳ್ಗೆಯು ನಮ್ಮ ಧೋರಣೆಯ ಮೇಲೆಯೂ ಹಾಗು ನಾವು ಅನುಸರಿಸುವ ವಿಧಾನಗಳ ಮೇಲೆಯೂ ಅವಲಂಬಿಸಿದೆ. ಬ್ರಿಟಿಶ ಸಾಮ್ರಾಜ್ಯವಾದದ ಕೂಡ ನಡೆಸಿದ ಹೋರಾಟದಲ್ಲಿ ಆಡಳಿತದ ವಿಷಯಕ ದೋಷಗಳನ್ನೆಣಿಸುತ್ತ ಪ್ರತೀಕಾರ ಧೋರಣೆಯನ್ನೆ ಸಾಧಿಸುತ್ತ ಬಂದ ನಾವೆಲ್ಲರೂ ಈಗ ರಾಜ್ಯದಾಡಳಿತದ ಪ್ರತ್ಯಕ್ಷ ಹೊಣೆ ಹೊರಬೇಕಾದ್ದರಿಂದ ವಿಧಾಯಕ ಮತ್ತು ಪೂರಕ ವಿಮರ್ಶೆಗಳೇ ಈಗ ಅವಶ್ಯವಾಗಿರುವವೆಂಬ ಅಭಿಪ್ರಾಯವನ್ನು ಅಸೆಂಬ್ಲಿಯ ಅಧ್ಯಕ್ಷರೇ ಮೊದಲಾದ ಮಹನೀಯರು ಬಹು ಸೌಜನ್ಯಯುಕ್ತ ವಾಣಿಯಿಂದ ಸ್ವಾತಂತ್ರ್ಯದ ಶುಭದಿನದ ಸಂದೇಶವೆಂದು ಕಳಿಸಿರುವರು ಆದರೆ ನಮ್ಮಲ್ಲಿಯ ಕೆಲವು ಸ್ವಾತಂತ್ರ್ಯ ಪ್ರೇಮಿಗಳು ದಡ್ಡ ಜನರನ್ನೂ ರಾಜಕೀಯ ಪರಿಜ್ಞಾನ ವಿವೇಚನಗಳನ್ನು ಅರಿಯದವರನ್ನೂ ಇತರರು ಕುಣಿಸಿದಂತೆ ಕುಣಿಯುವರನ್ನೂ ಕೂಡಿಹಾಕಿಕೊಂಡು ನಾಡು ಕಟ್ಟುವ ಕಾರ್ಯದ ಹೊಣೆಯನ್ನು ಹೊತ್ತ 'ನಾಯಕರ' ಕಾರ್ಯವನ್ನು ಅಶ್ರದ್ಧೆಯಿಂದ ನೋಡುತ್ತ ಈಗಿನಿಂದಲೇ ಜಾತೀಯತೆಯ ನೆಪದಿಂದ ಬಂಡಾಯಕ್ಕೆ ಪ್ರೋತ್ಸಾಹನ ಕೊಡುವದು ನಿಜವಾಗಿಯೂ ಶೋಚನೀಯವು.

ಬ್ರಿಟಿಶರು ೬೦೦ ಮೈಲುಗಳ ಮೇಲಿಂದ ಇಲ್ಲಿಗೆ ಬಂದು ಬೇರೂರಲಿಕ್ಕೆ ನಮ್ಮಲ್ಲಿಯ ಅಸಹಿಷ್ಣುತ ಜಾತಿಮತ್ಸರಗಳೇ ಕಾರಣವೆಂಬುದನ್ನು ಬೇರೆ ಒತ್ತಿ ಹೇಳಬೇಕಾಗಿಲ್ಲ. ಅವರು ನಮ್ಮ ನಮ್ಮೊಳಗಿನ ಮತ್ಸರದ ಲಾಭ ತೆಗೆದುಕೊಂಡೇ ಒಂದೊಂದು ಜಾತಿ ಪಂಗಡದವರನ್ನು ಎರಿಸಿ ಕೂಡಿಸಿ ಅಧಿಕಾರ ಮೊದಲಾದ ಆಮಿಷಗಳನ್ನು ತೋರಿಸಿ ಅವರನ್ನು ಬಗಲಗೂಸುಗಳನ್ನಾಗಿ ಮಾಡಿಕೊಂಡದ್ದರಿಂದಲೇ ಎಲ್ಲೆಲ್ಲಿಯೂ ಹತ್ಯಾಕಾಂಡಕ್ಕೆ ಸಹಸ್ರಾರು ನಿರಪರಾಧಿಗಳ ಬಲಿಯಾಗುವಂತಾಯಿತು. ದೇಶದಲ್ಲಿ ಕೋಲಾಹಲ ನಡೆದದ್ದು ನೋಡಿ ದೇಶದಾದ್ಯಂತ ಯಾದವೀ ಕಲಹದಲ್ಲಿ ಅದು ಪರಿಣಮಿಸಬಾರದೆಂಬ ದೂರದೃಷ್ಟಿಯ ಮುಖಂಡರಿಗೆ ಹೊಳೆದದ್ದರಿಂದಲೇ ಅಖಂಡ ಹಿಂದುಸ್ಥಾನವನ್ನು ಸೀಳಿ ಇಬ್ಭಾಗ ಮಾಡಿಕೊಡಬೇಕೆಂಬ ಮುಸಲ್ಮಾನ ಬಂಧುಗಳ ಬೇಡಿಕೆಯಾದ ಪಾಕಿಸ್ತಾನಕ್ಕೆ ಅವರು ಸಮ್ಮತಿ ಕೊಡಬೇಕಾಯಿತು.

ಬ್ರಿಟಿಶ ಜಾಣಿಕ್ಯ ನೀತಿಯಿಂದ ಪ್ರಜರ ಮನಸ್ಸಿನಲ್ಲಿ ಬಿತ್ತಿದ ಜಾತೀಯ ಬೀಜವು ಈ ಸ್ವಾತಂತ್ರ್ಯೋತ್ಸಾಹದ ಉನ್ಮಾದದಲ್ಲಿ ಮೊಳೆತು ಸಶಿಯಾಗಿ ಹೆಮ್ಮರವಾಗದಿರಲೆಂದು ನಾವು ಜಾಗರೂಕತೆ ವಹಿಸಬೇಕಾಗಿದೆ.

"ವಂದೇ ಮಾತರಮ್" ರಾಷ್ಟ್ರಗೀತೆಯೊಡನೆ ಭಕ್ತಿಯಿಂದ ಭಾರತಾಂಬೆಯ ಪೂಜೆಗೆಂದು ಹಾತೊರೆಯುತ್ತಿದ್ದ ಭಾರತೀಯರಲ್ಲನೇಕರು ಅವಳು ಸ್ವತಂತ್ರಳಾದಾಗ ತಮ್ಮ ಪ್ರತಿಗಾಮೀ ಧೋರಣದ ಕಾರ್ಯಕ್ರಮಗಳಿಂದ ಅವಳ ಏಳ್ಗೆಗೆ ಅಡ್ಡಬರುತ್ತಿರುವುದು ಶೋಚನೀಯವಾಗಿದೆ. ಹೊಸ ಹೊತ್ತ ನಾಯಕರಿಗೆ ನಾವು ನಮ್ಮ ಮನಸ್ಸಿನ ಆಶೆ ಆಕಾಂಕ್ಷೆ ಭಯ ಬೇಡಿಕೆಗಳನ್ನು ವಿನಮ್ರ ಭಾವದಿಂದ ತೀಸಿ ಅವರ ಮೇಲೆ ಪೂರ್ಣ ಶ್ರದ್ಧೆ ವಿಶ್ವಾಸಗಳನ್ನಿಟ್ಟು ಅವರ ಕಾರ್ಯದಲ್ಲಿ ಅನುಕೂಲರಾಗಿ ವರ್ತಿಸುವ ಕಾಲವಿದು.

ಸತತ ಅರ್ಧ ಶತಮಾನದ ಹೋರಾಟದಿಂದ ಬಲಾಢ್ಯರಾದ ಬ್ರಿಟಿಶರನ್ನು ಭಾರತದೇಶದಿಂದ ಓಡಿಸಿದ ಕಾಂಗ್ರೆಸ ಸಂಸ್ಥೆಯ ನಾಯಕರು, ಅರ್ಧ ನಾಯಕರು ಸದಸ್ಯರು ಸಹ್ಯ ಹೋರಾಟದ ವಿಪತ್ಕಾಲ ಧೈರ್ಯದ ಗುಣವಿಶಿಷ್ಟವಿದ್ದಂತೆ ಈ ಅಭ್ಯುದಯ ಕಾಲದಲ್ಲಿ ಕ್ಷಮಾ ಸಹಿಷ್ಣುತೆ ವಿಶಿಷ್ಟರಾಗಿರುವದು ಅವಶ್ಯ ಮತ್ತು ಶ್ರೇಯಸ್ಕರ. ವಿಪತ್ಕಾಲದಲ್ಲಿ ಧೈರ್ಯವು, ಅಭ್ಯುದಯದಲ್ಲಿ ಕ್ಷಮಾಗುಣ ಇರುವಿಕೆ, ಸಜ್ಜನರ ಲಕ್ಷಣ. ಬ್ರಿಟಿಕರ ವಿರುದ್ಧ ನಡೆದ ಹೋರಾಟದಲ್ಲಿ ಕಾಂಗ್ರೆಸ್ಸಿಗೆ ಅದರ ಸದಸ್ಯರಷ್ಟೇ ಸಹಾಯಕರಾಗಿದ್ದರೆಂದಲ್ಲ. ಸದಸ್ಯರಲ್ಲದವರನೇಕರ ಸಹಾಯವು ಅದಕ್ಕಿತ್ತು. ತನುವಿನಿಂದ ಕೆಲವರು, ಧನದಿಂದ ಕೆಲವರು ಹೀಗೆ ತನು-ಮನ-ಧನಗಳಿಂದ ಸಹಾಯ ಸಲ್ಲಿಸಿದವರನೇಕರಿರುವರು. ಸತ್ಯಾಗ್ರಹ ಸಮರದಲ್ಲಿ ಪ್ರತ್ಯಕ್ಷಭಾಗಿಗಳಾದವರು ಹೊರಗುಳಿದು ಅನೇಕ ರೀತಿಯಿಂದ ಸಹಾಯ ಮಾಡಿರಲಿಲ್ಲವೇ? ಬ್ರಿಟಿಶ ಯೂನಿಯನ್ ಜಾಕ್ ಧ್ವಜವನ್ನು ಬ್ರಿಟಿಶ ಅಧಿಕಾರಿಗಳೇ ತಮ್ಮ ಕೈಯಿಂದ ಕೆಳಗಿಳಿಸಿ ಅದರ ಸ್ಥಳದಲ್ಲಿ ಅಶೋಕ ಚಕ್ರಕ್ಕಿಂತ ಮೂಬಣ್ಣದ ರಾಷ್ಟ್ರೀಯ ಧ್ವಜವನ್ನು ಏರಿಸಿ ಬೊಗ್ಗಿ ವಂದಿಸುವಂತಹ ಪ್ರಸಂಗವನ್ನು ತಂದ ಶ್ರೇಯಸ್ಸು ಹೆಚ್ಚು ಕಡಿಮೆ ಸಕಲ ಭಾರತೀಯರಿಗೆ ಸಲ್ಲುವದು.

ಇನ್ನು ಕೊನೆಯದಾಗಿ ಇದೇ ವಿಷಯದಲ್ಲಿ ಮುಂಬಯಿ ಸಂರಕ್ಷಣ ಮತ್ತು ಕಂದಾಯ ಮಂತ್ರಿಗಳಾದ ಶ್ರೀ ಮುರಾರಜಿಯವರು ಮುಂಬೈ ಕ್ರಾನಿಕಲ್ ಪತ್ರಕ್ಕೆ ಕೊಟ್ಟ ಸಂದೇಶದಲ್ಲಿ ಪ್ರಜಾಸತ್ತಾತ್ಮಕ ರಾಜ್ಯದಲ್ಲಿಯ ದ್ರೋಹಿಗಳಾರೆಂಬುದನ್ನು ವಿಶದಪಡಿಸಿದ್ದಾರೆ. :—

"The enemies of people's freedom and prosperity have been active amongst us, mostly through mis-use of criticism and expression, and they have been engaged in sowing the seed of distrust and hatred of class against class.'

"ದೇಶದ ಸ್ವಾತಂತ್ರ್ಯ ಮತ್ತು ಅಭ್ಯುದಯದ ವೈರಿಗಳು ನಮ್ಮಲ್ಲಿ ಜಾಗೃತರಾಗಿದ್ದಾರೆ. ವಿಮರ್ಶೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತ ಮಾಡುವ ಅಧಿಕಾರಿಗಳ ದುರುಪಯೋಗವಾಡುವುದೇ ಅವರ ಮಾರ್ಗವಾಗಿದೆ. ವರ್ಗವರ್ಗಗಳ ನಡುವೆ ಅಪನಂಬಿಕೆ ಮತ್ತು ವೈರಗಳ ಬೀಜಗಳನ್ನು ಬಿತ್ತುವುದರಲ್ಲಿ ಅವರು ಮಗ್ನರಾಗಿದ್ದಾರೆ.

ಜಿಲ್ಲಾ ಏಕೀಕರಣ ಸಮ್ಮೇಳನ.

ಬಳ್ಳಾರಿ ಜಿಲ್ಲಾ ದ್ವಿತೀಯ ಕರ್ನಾಟಕ ಏಕೀಕರಣ ಸಮ್ಮೇಳನವು ಆಲೂರು ತಾಲೂಕು ಹೂಳಲಗುಂದಿಯಲ್ಲಿ 11-7-47 ನೆಯ ದಿನಾಂಕ ಶ್ರೀ ಜೂ. ಅನಂತಾಚಾರ್ಯ ಎಂ ಎಲ್. ಎ (ಮದ್ರಾಸು) ಇವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಲಿದೆ. ಶ್ರೀ ಅಂದಾನಪ್ಪ ದೊಡ್ಡ ಮೇಟಿ ಎಂ. ಎಲ್. ಎ (ಮುಂಬಯಿ) ಇವರು ಉದ್ಘಾಟನಾ ಸಮಾರಂಭವನ್ನು ನೆರವೇರಿಸಲಿರುವರು. ಸರ್ವರೂ ದಯಮಾಡಿಸಿ ಸಹಕರಿಸಲು ಸಂಘದ ಅಧ್ಯಕ್ಷ ಶ್ರೀ ರಂಗನಗೌಡರು ಕೋರುತ್ತಾರೆ.

ಬಳ್ಳಾರಿ ಮುನಿಸಿಪಾಲಿಟಿ ಚುನಾವಣೆ

ಅವಿರೋಧ ಆಯ್ಕೆ

ಈ ಕೆಳಗಿನ ಮಹಾಶಯರು ಆಯಾವಾರ್ಡುಗಳಿಗೆ ಅವಿರೋಧವಾಗಿ ಆರಿಸಿ ಬಂದಿರುತ್ತಾರೆ. ಒಟ್ಟು ಮೂವತ್ತೆರಡು ಸದಸ್ಯಸ್ಥಾನಗಳಲ್ಲಿ ಒಂದರಲ್ಲಿನ ಇಬ್ಬರ ಅರ್ಜಿಗಳೂ ತಿರಸ್ಕೃತವಾಗಿರುವ ಕಾರಣ ಇನ್ನು ೯ ಸ್ಥಳಗಳಲ್ಲಿ ಚುನಾವಣೆ ನಡೆಯಬಹುದಾಗಿದೆ. ಇಪ್ಪತ್ತು ಜನರು ಅವಿರೋಧವಾಗಿ ಆರಿಸಿಬಂದುದು ಮುನಿಸಿಪಾಲಿಟಿಯ ಚರಿತ್ರೆಯಲ್ಲಿ ಪ್ರಥಮವೆನ್ನಬಹುದು.

1 ನೆಯ ವಾರ್ಡು ಶ್ರೀ ಎಸ್. ರಾಜಗೋಪಾಲಶೆಟ್ಟಿ
2 ಡಿ. ಯೂಜ್. ವೆಂಕೋಬರಾವು
ಶಾಮುಯಲ್ (ಕ್ರಿಶ್ಚಿಯನ್)
5 ಕಾಂದ್ರಶಿದ್ದಪ್ಪ
6 ಶೇಕ್ ಅಹಮ್ಮದ್ ಸಾಹೇಬ್
ಕುಪ್ಪಸ್ವಾಮಿ (ಹರಿಜನ)
7 ಅಬ್ದುಲ್ ರಜಾಕ್
9 ವಿಶ್ವನಾಥಪ್ಪ
10 ಮುಂಡ್ಲೂರು ಗಂಗಪ್ಪ
11 ಅರಳಿ ಬಸಪ್ಪ
12 ಶಿಂದ್ಗಿ ಶಿದ್ದಬಸಪ್ಪ
13 ಮರಾಠೆ ನಂತೋಜಿರಾವು
ಯಸ್. ದುರುಗಪ್ಪ (ಹರಿಜನ)
14 ಮೂಲಂಗಿ ಗೂಳಪ್ಪ
15 ಗಫರ್‌ಖಾನ್
17 ವಿ. ಯಂ. ಗಿರಿ
ಶ್ರೀಮತಿ ಜಾನಕೀಬಾಯಿ
ನರಸಿಂಹಶಾಸ್ತ್ರಿ
18 ಶ್ರೀ ಡಿ. ಯಸ್. ಹನುಮಂತರಾವು
ಪರಶುರಾಮಪ್ಪ (ಹರಿಜನ)
19 ಸುಶೀಲಾನಾಯುಡು
23 ಅಬ್ದುಲ್ ಖಾದರ್
24 ಅಬ್ದುಲ್ ಜಲೀಲ್

ಪಂಜಾಬ್ ಪರಿಸ್ಥಿತಿ

ಹಿಂದುಸ್ಥಾನ, ಪಾಕಿಸ್ತಾನ ಪ್ರಧಾನ ಮಂತ್ರಿಗಳಾದ ಮಾ|| ಜವಹರಲಾಲನೆಹರೂ, ಲಿಯಾಕತ್ ಅಲಿ ಖಾನರು ಪೂರ್ವ ಪಶ್ಚಿಮ ಪಂಜಾಬುಗಳನ್ನೆಲ್ಲವನ್ನೂ ನದಲ್ಲಿ ಸುತ್ತಿ ಗಲಭೆಗೀಡಾದ ಪ್ರದೇಶಗಳನ್ನೆಲ್ಲಾ ನೋಡಿ ಬಂದರು. ದುಃಖಿತರ ಕರುಣಕತೆಗಳನ್ನು ಕೇಳಿ ಹೃದಯಸ್ಪರ್ಶಿ ದೃಶ್ಯಗಳನ್ನು ಕಣ್ಣಾರೆ ಕಂಡರು. ಪಂಜಾಬಿನಲ್ಲಿ ಶಾಂತತೆಯಾಗುವವರೆಗೆ ತಮ್ಮ ಬಹುತರ ಎಲ್ಲ ವೇಳೆಯನ್ನು ಅಲ್ಲೇ ಕಳೆಯಲು ಜವಹರಲಾಲರು ನಿಶ್ಚಯಿಸಿದ್ದಾರೆ, ಲಾಯಲಪುರದ ೫ ಲಕ್ಷ ಹಿಂದೂ ಸೀಖರು ತಾವುಗಳೇ ಹೋಗಲು ನಿಶ್ಚಯಿಸಿರುವದಾಗಿ ನೆಹರೂರವರಿಗೆ ತಿಳಿಸಿದರು. ಲಿಯಾಕತ್‌ಲಿ ಖಾನರು ಗುಳೇ ಹೋಗಬಾರದೆಂದು ಬಿನ್ನೈಸಿದರು. ಶೇಖುಪುರದ ೧೫ ಸಾವಿರ ಹಿಂದೂ ಸೀಖರು ನಿರ್ನಾಮ ಮಾಡಲ್ಪಟ್ಟಿರುವುದೂ, ಅಲ್ಲಿನ ಆಂಗ್ಲೋ ಇಂಡಿಯನ್ ಡೆಪ್ಯುಟೀಕವಿಶನರನ್ನು (ಡಿನ್ಸೆ ಎಂಬುವ) ನಿರ್ಲಕ್ಷದಿಂದಿದುದೂ ಜವಹರಲಾಲರಿಗೆ ಆವೇಶವನ್ನು ತಂದಿತು ಶೇಖುಪುರವೇನೊ ಹೋಯಿತು. ಆದರೆ ಅವರ ಸುತ್ತಮುತ್ತಲ ನಿರಾಶ್ರಿತರ ಗತಿಏನು? ಎಂದು ಜವಹರಲಾಲರು ಉದ್ಗಾರ ತೆಗೆಯುತ್ತಾ ಆವೂರನ್ನು ಬಿಟ್ಟರು.

ಪಶ್ಚಿಮ ಪಂಜಾಬದಿಂದ ಸಾವಿರಾರು ಹಿಂದೂ ಸಿಕ್ಖರು, ದಿಕ್ಕೆಟ್ಟು ಬರುತ್ತಲಿರುವರು. ಹಿಂದೂಸ್ತಾನದಿಂದ ನೂರಾರು ಟ್ರಕ್ಕುಗಳೂ ಪಶ್ಚಿಮ ಪಂಜಾಬಕ್ಕೆ ಹೋಗಿ ನಿರಾಶ್ರಿತರನ್ನು ತರುತ್ತಲಿವೆ. ಪೂರ್ವ ಪಂಜಾಬದ ಗಡಿಯಲ್ಲಿ 150 ಮೈಲಿಗಳವರೆಗೆ ಅನೇಕ ಹಳ್ಳಿಗಳನ್ನು ಮುಸಲ್ಮಾನರು ಆಕ್ರಮಿಸಿ, ಹಿಂದೂ ಸೀಖರನ್ನು ಓಡಿಸಿರುವರೆಂದು ಪ್ರಕಟವಾಗಿದೆ. ಸರ್ದಾರ ಬಲದೇವಸಿಂಗರು ಪಾಕಿಸ್ತಾನದ ಮಂತ್ರಿ ನಿಸ್ತಾರರೊಡನೆ ಈ ಭಾಗಗಳೆಲ್ಲೆಲ್ಲಾ ಸಂಚರಿಸಿ ಬಂದಿರುತ್ತಾರೆ.

ಹೈದರಾಬಾದಿಗೆ ಕೇಂದ್ರದ ಪತ್ರ:—ನಿಜಾಮ ಸರಕಾರದ್ದಲ್ಲದ ಬೇರೆ ಯಾವ ರಾಷ್ಟ್ರಧ್ವಜವಾದರೂ ಅದು ಪರರಾಷ್ಟ್ರದ್ರೋಹವಾಗುವ ಕಾರಣ ಅದನ್ನು ಹಾರಿಸಿದಲ್ಲಿ ಶಿಕ್ಷೆಗೆ ಗುರಿಯಾಗುವರೆಂದು ನಿಜಾಮ ಸರ್ಕಾರದವರು ವಿಧಿಸಿದಾಜ್ಞೆಯ ಸ್ಪಷ್ಟೀಕರಣವನ್ನು ಕೇಂದ್ರ ಸರಕಾರದವರು ಕೇಳಿದ್ದಾರೆ. ಹಿಂದುಸ್ಥಾನ ಸರಕಾರವನ್ನು ಪರರಾಷ್ಟ್ರವೆಂದು ಗಣಿಸುವಿರಾ? ಎಂದೂ ಸ್ಪಷ್ಟವಾಗಿ ಪ್ರಶ್ನೆ ಕೇಳಿದ್ದಾರೆ.

ಹೈದರಾಬಾದ್ ಸತ್ಯಾಗ್ರಹ:— ಈ ತಿಂಗಳ ೨ ನೆಯ ತಾರೀಖು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಧ್ವಜಸತ್ಯಾಗ್ರಹವು ಯಶಶ್ವಿಯಾಗಿ ನಡೆಯಿತು.—ಧ್ವಜವಂದನೆ ಆರೋಹಣ ಮಾಡಿದ ಅನೇಕರನ್ನು ಬಂಧಿಸಲಾಗಿದೆ. ಹೈದರಾಬಾದ ನಗರದಲ್ಲಿಲ ಸಾವಿರ ವಿದ್ಯಾರ್ಥಿಗಳ ಪ್ರಚಂಡ ಮೆರವಣಿಗೆ ತೆಗೆಯಲಾಗಿತ್ತು. ಉಸ್ಮೇನಿಯಾ ವಿಶ್ವವಿದ್ಯಾಲಯ, ಆಸ್ಪತ್ರೆ, ಕ್ಲಾಕ್‌ಟವರ್ ಇವುಗಳ ಮೇಲೆ ಭಾರತ ಒಕ್ಕೂಟದ ಧ್ವಜವು ಹಾರಾಡುತ್ತಿತ್ತು.

ಮೈಸೂರು ಸತ್ಯಾಗ್ರಹ:— ೧೧ ನೆಯ ದಿನಾಂಕ ಕಾಂಗ್ರೆಸ್ ಸತ್ಯಾಗ್ರಹ ಚಳವಳಿಯ ಪ್ರಥಮ ಸರ್ವಾಧಿಕಾರಿಗಳಾದ ಶ್ರೀ ಚಂಗಲರಾಯರೆಡ್ಡಿಯವರು ಬೆಂಗಳೂರಲ್ಲಿ ಸತ್ಯಾಗ್ರಹ ಪ್ರಾರಂಭಿಸಿ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಮೈಸೂರಿನ ಎಲ್ಲಾ ಭಾಗಗಳಲ್ಲೂ ಹರತಾಳವಾಚರಿಸಲ್ಪಟ್ಟಿತು.

ಆಹಾರ ಪರಿಸ್ಥಿತಿ ಕೆಡುತ್ತಾ ನಡೆದಿದೆ:—

ದೇಶದ ಆಹಾರ ಪರಿಸ್ಥಿತಿಯು ಅಕ್ಟೋಬರ್ ತಿಂಗಳಲ್ಲಿ ಕೆಡಬಹುದೆಂದು ತರ್ಕಿಸಿದ್ದಾರೆ ಅನೇಕ ಪ್ರದೇಶಗಳಲ್ಲಿ ರೈತರಿಂದ ಕಾಳಿನ ಸಂಗ್ರಹದ ವ್ಯವಸ್ಥೆಯೇ ಸರಿಯಾಗಿಲ್ಲ. ಅಕ್ಟೋಬರ್ ಮಧ್ಯಭಾಗದಿಂದ ತನ್ನ ಸೀದಾ ಪ್ರಮಾಣವನ್ನು ಕಾಯ್ದುಕೊಂಡು ಹೋಗುವುದೇ ಕೆಲ ಭಾಗಗಳಿಗೆ ಕಠಿಣವಾಗಬಹುದು.

ಪಂಜಾಬಿನ ಪರಿಸ್ಥಿತಿಯು ಹಿಡಿತಕ್ಕೆ ಬರುತ್ತಿರುವದೆಂದು ಪ್ರಕಟನೆಗಳು ಹೊರಟಿವೆ. ಪೂರ್ವ ಪಂಜಾಬಿನಲ್ಲಿ ಶಾಂತಿಯು ತಲೆದೋರಿದ್ದರೂ ಪಶ್ಚಿಮ ಪಂಜಾಬದಲ್ಲಿ ಶಾಂತಿಯ ಲಕ್ಷಣಗಳು ಕಂಡುಬಂದಿಲ್ಲ.

ಶ್ರೀ ಸೀತಾರಾಮರೆಡ್ಡಿ

ಮದ್ರಾಸ್ ಪ್ರಾಂತದ ಕೈಗಾರಿಕೆ ಶಾಖೆಯ ಮಂತ್ರಿಗಳಾದ ಶ್ರೀ ಮಾನ್ಯ ಸೀತಾರಾಮರೆಡ್ಡಿಯವರು ರು 7-9-47 ರಾತ್ರೆ ಬಂದು 8 ನೆಯ ತಾರೀಖಿನವಾ ನಿಭಾಗದಲ್ಲಿ ಸಂಚರಿಸಿ 9 ನೆಯ ತಾರೀಖಿಗೆ ಕಂಪ್ಲಿ ಮೂರ್ಗವಾಗಿ ಹೊಸಪೇಟೆಗೆ ಹೋಗಿ ಮಧ್ಯಾನ್ಹ ರೈಲಿನಿಂದ 10ನೆಯ ತಾರೀಖಿಗೆ ಪ್ರಾತಃಕಾಲ ಮದ್ರಾಸ್ ತಲಪ್ಪುವರು

ಹೊಳಲಗುಂದಿ ಸಭೆಗೆ ಮಮತೆಯ ಕರೆ

ಬಳ್ಳಾರಿ ಜಿಲ್ಲೆಯ ದ್ವಿತೀಯ ಕರ್ನಾಟಕ ವಿಕೀಕರಣ ಪರಿಷತ್ತು ಆಲೂರು ತಾಲೂಕು ಹೊಳಲಗುಂದಿಗ್ರಾಮದಲ್ಲಿ ೧೧ ನೆಯ ದಿನಾಂಕ ಮಧ್ಯಾನ್ಹ ೧ ಗಂಟೆಗೆ ಸರಿಯಾಗಿ ಪ್ರವೇಶವಾಗಲಿದೆ ಆಲೂರಿನಿಂದ ಹೊಳಲಗುಂದಿಗೆ ಹೋಗಲು ವಾಹನ ಸೌಕರ್ಯಗಳನ್ನು ಏರ್ಪಡಿಸಲಾಗಿದೆ. ಶ್ರೀ ಸಿದ್ದಮಲ್ಲನಗೌಡರ ಉದಾರಾಶ್ರಯದಲ್ಲಿ ಊಟ ವಸತಿಗಳ ಉಚಿತ ಏರ್ಪಾಟಾಗಿದೆ ಕರ್ನಾಟಕದ ಎಲ್ಲ ಸಂಘಗಳು ವೃತ್ತಪತ್ರಿಕೆಗಳವರು ಜಿಲ್ಲೆಯ ಸಮಸ್ತ ಕನ್ನಡಿಗರು ಈ ಸಭೆಗೆ ಆಗಮಿಸಲು ಸ್ವಾಗತಾಧ್ಯಕ್ಷರಾದ ಶ್ರೀ ಬಸವನಗೌಡರು ಪ್ರ. ಕಾರ್ಯದರ್ಶಿ ಶ್ರೀ ಪಿ. ವೀರನಗೌಡರು ಸ್ವಾಗತ ಸಮಿತಿ ಪರವಾಗಿ ಕೋರುತ್ತಾರೆ.

ಇರಾನಿನ ಗಡಿಯಲ್ಲಿ ರಷ್ಯಾದ ಸೈನ್ಯದಲ ವು ಇಷ್ಟಾಪ್ಟಿರುವುದಾಗಿಯೂ ಶಾಂತಿ ಸ್ಥಾಪನೆಯ ನೆವದಿಂದ ಅವರು ಒಳನುಗ್ಗಬಹುದೆಂದೂ, ಊಹಿಸಲಾಗಿದೆ. ಗುಡ್ಡಗಾಡಿನ ಜನರಿಂದ ನೊಡಲು ತೊಂದರೆಯೇಳಬಹುದೆಂದೂ, ಎಣ್ಣೆ ಒಡಂಬಡಿಕೆಯ ಪುನ ವಿಚಾರಣೆಯಾಗಬೇಕೆಂದೂ ಹೇಳಲಾಗಿದೆ.

ಕು ಂ ಚೂ ರು

14 ನೆಯ ರಾತ್ರಿ ದೀಪೋತ್ಸವವಾಗಿ ಮಧ್ಯ ತ್ರಿಯ ನಂತರ ಪ್ರಸಿದ್ಧ ಮನೆಗಳ ಮೇಲೆ ಧ್ವಜಾರೋಹಣವಾಯಿತು. ಪ್ರಾತಃಕಾಲ ಪ್ರಭಾತ ಫೇರಿ ಹೊರಟು ಚಾವಡಿ ಬಯಲಿನಲ್ಲಿ ಧ್ವಜವಂದನೆಯಾಯಿತು. ಶಾಲಾ ಮಕ್ಕಳ ಆಟ ಪ್ರದರ್ಶನ ನಡೆದು ಸಾಯಂಕಾಲ ಸಕಲ ವಾದ್ಯ ವೈಭವಗಳಿಂದ ಮುಖಂಡರ ಭಾವ ಚಿತ್ರದ ಮೆರವಣಿಗೆಯಾಯಿತು. ಮೂರು ದಿನಗಳು ಮಕ್ಕಳಿಗೆ ಮಿಠಾಯಿ ಹಂಚಲಾಯಿತು. ಆಲ್ಲದೆ ಬಹುಮಾನಗಳ ವಿತರಣೆಯೂ ಆಯಿತು. 15 ನೆಯ ದಿನ ಶ್ರೀ ಮುರುಗೇಂದ್ರಯ್ಯನವರ ಅಧ್ಯಕ್ಷತೆಯಲ್ಲೂ 16 ನೆಯ ತಾ|| ಶ್ರೀ ರೇಂಜರ್ ರಾಮರಾಯರಧ್ಯಕ್ಷತೆಯಲ್ಲೂ ಬಹಿರಂಗ ಸಭೆಗಳು ನಡೆದು ಶ್ರೀ ಧರ್ಮಪ್ಪ ಯಸ್. ಕೃಷ್ಣಪ್ಪ ವಗೈರೆಯವರ ಭಾಷಣಗಳಾದವು ಶ್ರೀ ಎನ್. ಸಿದ್ದಪ್ಪನವರು ಹುತಾತ್ಮರ ಶಾಂತಿಕೋರಿ ಕಾಂಗ್ರೆಸಿನ ಸಮಗ್ರ ಇತಿಹಾಸವನ್ನು ತಿಳಿಯ ಹೇಳಿದರು.

25 ನೆಯ ದಿನಾಂಕ ಶ್ರೀ ಧರ್ಮಪ್ಪನವರ ಮನೆ ಬಳಿ ಕೂಡಿದ ಸಭೆಯಲ್ಲಿ ಗ್ರಾಮದ ಸಮಸ್ತ ವಿಷಯಗಳನ್ನು ಐಕ್ಯಮತದಿಂದ ಇತ್ಯರ್ಥಗೊಳಿಸಲು ಒಂದು ಪಂಚಾಯ್ತಿಯು ನಿಯಮಿಸಲ್ಪಟ್ಟು ಶ್ರೀ ಸಿ ಧರ್ಮಪ್ಪ ಯನ್. ಸಿದ್ದಪ್ಪ, ಕೃಷ್ಣಗೌಡ, ಬಾಜಿಬಾ ಬಾಜಾನ್, ಗಫರ್ ಸಾಹೇಬ್, ಇವರ ಹೆಸರು ಸ್ವೀಕೃತವಾದವು.

ಬೆನ್ನಿಕಲ್ಲು–ಬಳ್ಳಾರಿ

18 ನೆಯ ತಾ|| ಮಠದ ದೊಡ್ಡ ಬಸಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನಡೆದು ಸ್ವರಾಜ್ಯ ಮತ್ತು ಮುಖಂಡರು ಸಲ್ಲಿಸಿದ ಸೇವೆಯನ್ನು ಕುರಿತು ಭಾಷಣಗಳಾದ ನಂತರ ಭಜನೆ ತಾಳ ಮೇಳಗಳೊಡನೆ ಧ್ವಜಗಳೊಡನೆ ಮೆರವಣಿಗೆಯಾಯಿತು. ಮಕ್ಕಳಿಗೆಲ್ಲಾ ಮಿಠಾಯಿ ಪೆಪ್ಪರಮೆಂಟು ಹಂಚಲಾಯಿತು ಮಿಡ್ಡಿಹೇನುಲ್ ಕೆಂಟ್ರಾಕ್ಟರ್ ಹರಿಜನ ಗಾದಿಪ್ಪ ಮಕ್ಕಳಿಗೆ ಸಿಹಿ ಊಟ ಉಣಬಡಿಸಿದನು. ಇಂಥಾ ದೊಡ್ಡ ಉತ್ಸವ ಈ ಗ್ರಾಮದಲ್ಲಿ ಹಿಂದೆ ಯಾವಾಗಲೂ ನಡೆದಿಲ್ಲ.

ಬಂಧನ ದಬ್ಬಾಳಿಕೆ

ಮೈಸೂರು ಕಾಂಗ್ರೆಸಿನ ಮುಖ್ಯ ಧುರೀಣರನ್ನು ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಬಂಧಿಸುತ್ತಿರುವರು. ವೃತ್ತಪತ್ರಿಕೆಗಳವರು ಲೇಖನ ಪ್ರಕಟಮಾಡುವ ಪೂರ್ವ ಅಪ್ಪಣೆ ಪಡೆಯಬೇಕೆಂದು ಆಜ್ಞೆಯಾಗಿರುವ ಕಾರಣ ತಾಯಿನಾಡು, ಪ್ರಜಾವಾಣಿ ಡೈಲಿನ್ಯೂಸ್ ಪತ್ರಿಕೆಗಳು ನಿಂತಿವೆ.

ಹೈದರಾಬಾದ್ ಸಂಸ್ಥಾನದ ವಾರಂಗಲ್‌ಗೆ ೨೦ ಮೈಲಿ ದೂರವಿರುವ ಪಾರ್ಕಲ್‌ನಲ್ಲಿ ಜಾತೀಯ ಗಲಭೆಯಾಗಿ ಪೋಲೀಸರು ಗುಂಡು ಹಾರಿಸಿದ ಕಾರಣ ೮ ಜನರು ಸತ್ತರು. ಇದರ ನಂತರ ಸುತ್ತು ಮುತ್ತಲ ಹಳ್ಳಿಗಳ ೩-೪ ಸಾವಿರ ಜನರು ೨ ನೆಯ ತಾ|| ಮಧ್ಯಾಹ್ನ ಪಾರ್ಕಲ್ ನರಗದ ಮೇಲೆ ದಾಳಿ ಮಾಡಿದರು ಇವರು ಒಂದು ಜಾತಿಯ ಜನರ ಮನೆಗಳ ಮೇಲೆ ದಾಳಿಮಾಡಿದರು. ಪೋಲೀಸರು ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದರಂತೆ.

ವಿಮಾನಗಳಿಂದ ಚಪಾತಿ

ರಾವಿ ನದಿಯ ಪ್ರದೇಶದಲ್ಲಿರುವ ನಿರಾಶ್ರಿತರು ನದಿಯನ್ನು ದಾಟಲು ಅಶಕ್ತರಿರುವ ಕಾರಣ ಅವರಿಗೆ ವಿಮಾನದ ಮೂಲಕ ಡೆಲ್ಲಿ ಕಡೆಯಿಂದ ಮುಣಗಟಿ ಚಪಾತಿಯನ್ನು ಒಗೆಯಲಾಯಿತು ಹತ್ತು ಲಕ್ಷ ಜನರನ್ನು ಸ್ಥಳಾಂತರಿಸುವ ಕಾರ್ಯಕ್ಕಾಗಿ ಹಿಂದು ಸ್ತಾನ ಸರಕಾರದಿಂದ ೧೩೦೦ ನೂರು ಲಾರಿಗಳು ಸಂಗ್ರಹಿಸಲಾಗಿವೆ ಈ ನಿರಾಶ್ರಿತರಿಗೆ ಆಹಾರ ಔಷಧಗಳನ್ನೂ ಕೂಡ ಸರಕಾರವು ಒದಗಿಸಲಿರುವದು.

ಮಹಾತ್ಮ ಗಾಂಧಿಯವರು ೪ನೆಯ ದಿನಾಂಕ ರಾತ್ರಿ ತಮ್ಮ ಉಪವಾಸವನ್ನು ಅಂತಗೊಳಿಸಿದರು. ಹಿಂದೂ–ಮುಸಲ್ಮಾನರು ಶಾಂತರಾಗಿರುವೆನೆಂದು ಆಶ್ವಾಸನವಿತ್ತರು.

ಕೆ. ಸೂಗೂರು (ಸಿರುಗುಪ್ಪ)

ಈ ಊರಿನ ರೆಡ್ಡಿ ಹಿರೆಸಿದ್ದನಗೌಡರು, ಊರು ಮುಂಡ್ಲ ಶಿವಣ್ಣನವರು ಇವರ ಪ್ರೋತ್ಸಾಹದಿಂದ 15 ನೆಯ ತಾ. ಸ್ವಾತಂತ್ರೋತ್ಸವವು ವಿಜೃಂಭಣೆಯಿಂದ ನೆರವೇರಿತು. ಭಜನೆ, ವಾದ್ಯಗಳೊಡನೆ ದೇವ ಸ್ಥಾನಗಳಲ್ಲಿ ಪೂಜೆ ನಡೆದು ಶಾಲೆಯಮೇಲೆ ಬಾವುಟ ಏರಿಸಲಾಯಿತು. ಮಿಡ್ಡೇಮೀಲ್ ಕಂಟ್ರಾಕ್ಟರ್ ಕೆ. ವೀರಪ್ಪನು ಬಾಲಕರಿಗೆ ಶಿಹಿವೂಟ ಉಣಬಡಿಸಿದನು. ಸಪ್ಲೇ ಆಫೀಸರ್ ಗೋಧಿಗೆ ಪರ್ಮಿಟ್‌ಕೊಟ್ಟರೂ, ಊರ ಡಿಪೋಕೀಪರ್ ಕೊಡಲಿಲ್ಲ ಶ್ರೀ ಶಿವಣ್ಣ ಸಿದ್ದನಗೌಡರು ಈ ಉತ್ಸವದ ಶಾಂತಿಗಾಗಿ ಅನ್ನದಾನ ಮಾಡಿದರು. ಆಸಾದಿ ತಿಮ್ಮಪ್ಪನವರು 17 ನೆಯ ತಾ. ಹರಿಜನಬಾಲಕರಿಗೆ ಅನ್ನದಾನಮಾಡಿದರು. ನಂತರ ಮೇಲ್ಕಾಣಿಸಿದ ಮಹಾನೀಯರು ಮತ್ತು ಗಾದಿಲಿಂಗನಗೌಡು, ಕರಿಬಸವನಗೌಡ್ರು, ಗಾದೆಪ್ಪ, ಇವರು ಕೆಲವಿಷಯ ಬೋಧಿಸಿದರು.

The Rayalaseema Bank Limited, Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:**— ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:- ಪತ್ತಿಕೊಂಡ.
ಕಡಪ:— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು
ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3%

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5 0—0
6 ತಿಂಗಳಿಗೆ 3-0-0	Six months 3 0—0
ಆರುತಿಂಗಳ ಕಡಮೆ ಚಂದಾ ಸ್ವೀಕರಿಸುವದಿಲ್ಲ	Subscription will not be accepted for less than 6 months

To
SRI.....
.....
.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ | ಸಂಚಿಕೆ ೩೫ | ಬಳ್ಳಾರಿ ಸೆಪ್ಟಂಬರು ೧೫ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಬಳ್ಳಾರಿ ಜಿಲ್ಲಾ ದ್ವಿತೀಯ ಕರ್ನಾಟಕ ಏಕೀಕರಣ ಸಮ್ಮೇಳನ.

ಸ್ವೀಕೃತ ತೀರ್ಮಾನಗಳು.

೧) ಶ್ರೀಗಳಾದ ಮುದವೀಡು ಕೃಷ್ಣರಾಯರು ಮತ್ತು ಸಾಬಡೆಯವರ ನಿಧನಕ್ಕಾಗಿ ತನ್ನ ಹಾರ್ದಿಕ ದುಃಖವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಕೋರಿ ಕುಟುಂಬದವರಿಗೆ ಸಹಾನುಭೂತಿಯನ್ನು ಈಸಭೆಯು ವ್ಯಕ್ತಪಡಿಸುತ್ತದೆ.

೨) ಬಳ್ಳಾರಿಯ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಅನಂತಪುರ, ಚಿತ್ತೂರು, ಕರ್ನೂಲಿನ ಕನ್ನಡಭಾಗಗಳನ್ನು ತಮ್ಮ ಕ್ಷೇತ್ರದಲ್ಲಿ ಸೇರಿಸಿಕೊಂಡ ಮದ್ರಾಸ್ ಆಂಧ್ರ ರಾಜಕೀಯ ಸಮ್ಮೇಳನದ ಅಕ್ರಮಣಶೀಲ ವೃತ್ತಿಯನ್ನು ಈ ಸಭೆಯು ಖಂಡಿಸುತ್ತದೆ.

೩) ಮದ್ರಾಸ್ ನಗರದಲ್ಲಿ ಆಂಧ್ರ ತಮಿಳರಿಗೆ ಹಕ್ಕುಂಟೆಂದು ತಮ್ಮ ತಮ್ಮ ಜಿಲ್ಲಾ ಕಾಂಗ್ರೆಸ್ ಶಾಖೆಗಳನ್ನು ಸ್ಥಾಪಿಸಿಕೊಂಡು ಸದಸ್ಯರನ್ನು ಮಾಡುವ ಹಕ್ಕನ್ನು ಅವರು ಸ್ಥಿರಪಡಿಸಿಕೊಂಡಂತೆ, ಮದ್ರಾಸ್ ನಗರದಲ್ಲಿ ಲಕ್ಷಗಟ್ಟಲೆ ಕನ್ನಡಿಗರಿರುವ ಕಾರಣ ಅಲ್ಲಿ ಕನ್ನಡಿಗರ ಹಕ್ಕಿದೆಯೆಂದು ಈ ಸಭೆಯು ಘಂಟಾಘೋಷವಾಗಿ ಸಾರುವುದಲ್ಲದೆ ಅಲ್ಲಿಕ ಪ್ರಾ. ಕಾಂಗ್ರೆಸ್ ಅಶ್ರಯದಲ್ಲಿ ಜಿಲ್ಲಾ ಕಾ. ಸಮಿತಿಯನ್ನು ಸ್ಥಾಪಿಸಿ ಸದಸ್ಯರನ್ನು ನೊಂದಾಯಿಸಲು ಅಪ್ಪಣೆಕೊಡಬೇಕೆಂದು ಈ ಸಭೆಯು ಅಖಿಲ ಭಾರತ ಕಾಂಗ್ರೆಸ್ ಸಮಿತಿಯನ್ನು ಪ್ರಾರ್ಥಿಸುತ್ತದೆ.

೪) ಭಾಷಾವಾರ ಪ್ರಾಂತ ರಚನೆಯ ತತ್ವವನ್ನು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ, ಸಾರ್ವಜನಿಕ ವ್ಯಕ್ತಿ ಸಂಸ್ಥೆಗಳು ಯೋಗ್ಯವೆಂದು ಮಾನ್ಯಮಾಡಿರುವ ದರಿಂದ ಕನ್ನಡನಾಡು ವಿವಿಧ ಭಾಗಗಳಲ್ಲಿ ಹರಿದು ಹಂಚಿಹೋಗಿ ಕಷ್ಟಗಳಿರುವಕಾರಣ ಘಟನಾ ಸಮಿತಿಯು ಪೂರ್ವ ಪರಿಶೀಲನಾ ಸಮಿತಿಯನ್ನು ನಿಯಮಿಸುವುದು ಅನುಚಿತವೂ, ಅನಾವಶ್ಯಕವೂ, ಪ್ರಾಂತ ರಚನೆಯನ್ನು ಮುಂದೆಹಾಕುವ ಪರಿಣಾಮವನ್ನುಳ್ಳದೂ ಆಗಿರುವ ಕಾರಣ ಒಂದೇಸಲ ಗಡಿನಿರ್ಣಯ ಸಮಿತಿ ರಚನೆಮಾಡಲು ಘಟನಾ ಸಮಿತಿಯನ್ನು ಈ ಸಭೆಯು ಕೋರುತ್ತದೆ.

೫) ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡ ನವಕರರು, ಕನ್ನಡ ಪ್ರಕಟನೆಗಳು ಕನ್ನಡದಲ್ಲಿ ವ್ಯವಹಾರವು ನಡೆಯಬೇಕು. ಈ ದಿಶೆಯಲ್ಲಿ ಶಾಸನ ಸಭ್ಯರು ಯೋಗ್ಯ ಚರ್ಯೆ ತಗೆದುಕೊಳ್ಳಬೇಕು.

೬) ಕೆಲ ದಕ್ಷಿಣೇ ಸಂಸ್ಥಾನಾಧೀಶರು ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿ ಮಹರಾಷ್ಟ್ರ ಒಕ್ಕೂಟ ಸೇರಿ

ದುದನ್ನು, ಸಂಡೂರು ಸಂಸ್ಥಾನವು ಭಾರತ ಒಕ್ಕೂಟವನ್ನು ಸೇರಿದ್ದರೂ ಏಕ ತಂತ್ರೀಯ ರಾಜ್ಯದಾಡಳಿತವನ್ನು ನಡೆಸುವುದನ್ನು, ಈ ಸಭೆಯು ಖಂಡಿಸುತ್ತಾ ಸಂಡೂರು ಸಂಸ್ಥಾನವು ತನ್ನ ಆಡಳಿತ ಸೂತ್ರಗಳನ್ನೆಲ್ಲಾ ಪ್ರಜಾಪ್ರತಿನಿಧಿಗಳಿಗೊಪ್ಪಿಸಲು ಸೂಚಿಸುತ್ತದೆ.

೭) ಕರ್ನಾಟಕ ಪ್ರಾಂತದ ಪೂರ್ವಗಡಿಯಲ್ಲಿ ಅವಶ್ಯಕವಾದ ಪ್ರಚಾರ, ಗಡಿ ಸಂರಕ್ಷಕ ಶಾಂತಿನಳಿದ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕ್ರಿಯಾಸಮಿತಿ ಸದಸ್ಯರಾದ ಶ್ರೀ ಬಿ. ರಂಗಸಗೌಡರಿಗೆ ಈ ಸಭೆಯು ಪೂರ್ಣ ಅಧಿಕಾರವನ್ನು ಕೊಡುತ್ತದೆ. ಕರ್ನಾಟಕ ಏಕೀಕರಣ ಕ್ರಿಯಾ ಸಮಿತಿಯವರು ಅವರಿಗೆ ಎಲ್ಲಾ ವಿಧದ ನೆರವನ್ನೀಯಲು ಈ ಸಭೆಯು ಕೋರುತ್ತದೆ.

೮) ಮದ್ರಾಸಿನ ದಿನ ಪತ್ರಿಕೆಗಳಲ್ಲಿ ಮಂಗಳೂರು, ನೀಲಗಿರಿ, ಬಳ್ಳಾರಿ, ಅನಂತಪುರ, ಕೊಡಗು ಜಿಲ್ಲೆಗಳಿಗೆ ಸಂಬಂಧಿಸಿದ ಪ್ರಕಟನೆಗಳಲ್ಲಿ ಇವುಗಳನ್ನು ಕನ್ನಡ ಜಿಲ್ಲೆಗಳೆಂದು ಸಂಭೋಧಿಸಬೇಕೆಂದೂ ಅವರೊಡನೆ ಪತ್ರವ್ಯವಹಾರ ನಡೆಸಲು ಜಿ. ಕಾ. ತಿರುಮಲರಾಯರಿಗೆ ಅಧಿಕಾರ ಕೊಡಬೇಕೆಂದೂ ತೀರ್ಮಾನವಾಯಿತು.

೯) ಹೈದರಾಬಾದು, ಮೈಸೂರು ಸಂಸ್ಥಾನಗಳಲ್ಲಿ ಪ್ರಜಾಜನರ ಮೇಲೆ ನಡೆದಿರುವ ಅಖಂಡ ದಬ್ಬಾಳಿಕೆ ರಾಕ್ಷಸೀಕೃತ್ಯಗಳನ್ನು ಈ ಸಭೆಯು ಖಂಡಿಸುತ್ತಾ ಅಲ್ಲಿಯ ಪ್ರಜೆಗಳ ಸ್ವಾತಂತ್ರ್ಯೋದ್ಯಮದಲ್ಲಿ ಈ ಸಭೆಯು ಸಕ್ರಿಯ ಸಹಾನುಭೂತಿಯನ್ನು ಪ್ರದರ್ಶಿಸುತ್ತದೆ.

೧೦) ಬಳ್ಳಾರಿ ಜಿಲ್ಲೆಯ ಸುಪ್ರಸಿದ್ಧ ಶ್ರೀಮಂತರಾದ ಶ್ರೀಮಾನ್ ಎಲೆ ಮಲ್ಲೇಶಪ್ಪನವರು ಆದವಾನಿಯಲ್ಲಿ ಕನ್ನಡ ಹೈಸ್ಕೂಲನ್ನು ಸ್ಥಾಪಿಸಿ ಕನ್ನಡ ಭಾಷೆ, ಕಲಾ ಸಂಸ್ಕೃತಿಗಳಿಗೆ ಸಹಾಯಕರಾದುದಕ್ಕೆ ಅವರಿಗೆ ಈ ಸಭೆಯು ಜಿಲ್ಲೆಯ ಕನ್ನಡಿಗರ ಕೃತಜ್ಞತಾಭಿವೂರ್ವಕ ವಂದನೆಗಳನ್ನರ್ಪಿಸುತ್ತದೆ.

ಮೈಸೂರಿನ ಜವಾಬ್ದಾರಿ ಸರ್ಕಾರದ ಘೋಷಣೆ

ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜರು ಒಂದು ಪ್ರಕಟನೆ ಹೊರಡಿಸಿ ಜವಾಬ್ದಾರಿ ಸರ್ಕಾರವೇ ತಮ್ಮ ಧ್ಯೇಯವಿದೆಯೆಂದೂ, ಸರ್ವರೂ ಸಹಕರಿಸಬೇಕೆಂದೂ ಕೋರಿದ್ದಾರೆ. ಇದರಲ್ಲಿ ಹೊಸದೇನೂ ಇಲ್ಲ. ಈ ಪ್ರಕಟನೆಯು ಬಹಳ ಅತೃಪ್ತಿಕರವಿದೆಯೆಂದೂ ಕಾಂಗ್ರೆಸ್ ಸರ್ವಾಧಿಕಾರಿಗಳಾದ ಶ್ರೀ ನಿಜಲಿಂಗಪ್ಪನವರೂ ಇತರ ಧುರೀಣರೂ ಅಭಿಪ್ರಾಯಪಟ್ಟಿರುವರು.

ಪಂಜಾಬಿನಲ್ಲಿ ಮಡಿದವರು 1½ ಲಕ್ಷ

ಪಂಜಾಬಿನಲ್ಲಿ ಕನಿಷ್ಟಕ್ಕೆ ಒಂದೂವರೆ ಲಕ್ಷ ಜನರು ಕೊಲೆಯಾಗಿರುವರೆಂದೂ, ಹತ್ತುಲಕ್ಷ ಮುಸ್ಲಿಮೇತರರು ಇಲ್ಲಿಗೆ ಬಂದಿದ್ದು ಅಷ್ಟೇಜನ ಮುಸಲ್ಮಾನರು ಅಲ್ಲಿಗೆ ಹೋಗಿರುವರೆಂದೂ ಉಭಯ ಸರಕಾರಗಳವರು ಕಳಕಳಿಯಿಂದ ನಿರಾಶ್ರಿತರ ಪ್ರಶ್ನೆ ಬಿಡಿಸುತ್ತಿರುವರೆಂದೂ, ಸಾಧ್ಯವಿದ್ದ ಎಲ್ಲ ಉಪಾಯಗಳನ್ನು ಮಾಡುತ್ತಿರುವರೆಂದೂ ಪಾಕಿಸ್ತಾನದ ನೈಕಮೀಶನರವರಾದ ಶ್ರೀ ಪ್ರಕಾಶರು ಹೇಳಿದ್ದಾರೆ.

ಪಾಕಿಸ್ತಾನದ ಆಹಾರ ಪರಿಸ್ಥಿತಿಯು ಕಠಿಣವಿದ್ದು ಅದು ಹಿಂದೂಸ್ತಾನಕ್ಕೆ ಆಹಾರ ಪದಾರ್ಥಗಳನ್ನೊದಗಿಸುವ ಪರಿಸ್ಥಿತಿಯಲ್ಲಿಲ್ಲೆಂದು ಗೊತ್ತಾಗಿದೆ.

ಮದ್ರಾಸಿಗೆ ಪಂಜಾಬ ಭಾಗದಿಂದ 10,000 ನಿರಾಶ್ರಿತರು ಬರಲಿದ್ದು ಅವರಿಗೆ ಸರಿಯಾದ ಏರ್ಪಾಟುಗಳನ್ನು ಮಾಡುತ್ತಲಿರುವರು

ಶ್ರೀ ಮುದವೀಡು ಕೃಷ್ಣರಾಯರ ನಿಧನ

ಕರ್ನಾಟಕ ಏಕೀಕರಣ ಪುರಸ್ಕರ್ತರಲ್ಲಿ ಪ್ರಮುಖರಾಗಿ ಕನ್ನಡ ವೃತ್ತಪತ್ರಿಕೋದ್ಯೋಗದಲ್ಲಿ ಮೊದಲಿಗರಾಗಿ ಕನ್ನಡನಾಡಿಗೆ ಅನೇಕ ವಿಧದಿಂದ ಸೇವೆ ಸಲ್ಲಿಸಿದ ಧಾರ್ವಾಡದ ಶ್ರೀ ಮುದವೀಡು ಕೃಷ್ಣರಾಯರು ತಮ್ಮ 70 ನೆಯ ವಯಸ್ಸಿನಲ್ಲಿ ಈಚೆಗೆ ತೀರಿಕೊಂಡರು. ಇವರ ಆತ್ಮಕ್ಕೆ ಶಾಂತಿಯಿರಲಿ.



10th year of Publication.
Monday, 15th Sept. 1947

—: ಧಾನ್ಯ ಸಂಗ್ರಹ :—

ಆಂಧ್ರರ ಅಸಹಕಾರ ಪ್ರಧಾನ ಮಂತ್ರಿಗಳ ಹೇಳಿಕೆ

ಕೇಂದ್ರದಿಂದ ಧಾನ್ಯ ಸಹಕಾರ ದೊರೆಯು ವಂತಿಲ್ಲವೆಂದು ರಾಜೇಂದ್ರಬಾಬುಗಳು ಹೇಳಿದ ಕಾರ ಣ ಮದ್ರಾಸ್ ಮಂತ್ರಿವರ್ಗದವರು ಪ್ರಾಂತದಲ್ಲೆಲ್ಲಾ ಸಂಚರಿಸಿ ಧಾನ್ಯ ಸಂಗ್ರಹದ ಯತ್ನಮಾಡುತ್ತಿರುವರು ಗುಂಟೂರು–ನೆಲ್ಲೂರು–ಬೆಜವಾಡ ಮುಂತಾದ ಆಂಧ್ರ ಭಾಗಗಳಲ್ಲಿ ಸಾಕಷ್ಟು ಧಾನ್ಯ ಸಂಗ್ರಹವಿದ್ದು ಅಲ್ಲಿಯ ರೈತರು ಸರಕಾರಕ್ಕೆ ಒಪ್ಪಿಸದೆ ಅಸಹಕಾರ ಹೂಡಿರು ವರು. ಇದಕ್ಕೆ ರಾಜಕೀಯ ಕಾರಣಗಳಿರಬೇಕೆಂದು ಮದ್ರಾಸಿನ ಕೆಲ ಪತ್ರಿಕೆಗಳು ಆಂಧ್ರ ಮುಖಂಡರಾದ ಶ್ರೀ ಪ್ರಕಾಶಂ, ಮತ್ತು ರಂಗಾರವರಿಗೆ ಸ ಹಾ ಯ ಮಾಡಲು ಕೋರಿದ್ದವು. ಪ್ರಕಾಶಂರವರು ಒಂದು ಹೇಳಿಕೆ ಕೊಟ್ಟು ಹೆಚ್ಚಿಗೆ ಸಂಗ್ರಹವಿರುವ ರೈತರೆಲ್ಲಾ ಸರಕಾರಕ್ಕೆ ಕೊಟ್ಟು ಸಹಾಯ ಮಾಡಬೇಕೆಂದಿದ್ದಾರೆ ಪ್ರಧಾನ ಮಂತ್ರಿಗಳಾದ ಶ್ರೀ ಒ. ಪಿ. ರಾಮಸ್ವಾಮಿ ರೆಡ್ಡಿಯವರು ಕಾಳಿನ ಸಂಗ್ರಹವಿಟ್ಟುಕೊಂಡು ಕೊಡ ದಿದ್ದರೆ ಅಂಥವರ ಮೇಲೆ ಬಲತ್ಕಾರ ಮಾಡಬೇಕಾ ಗುವುದೆಂದಿದ್ದಾರೆ. ಆ ಬಲಾತ್ಕಾರವನ್ನು ಪ್ರಯೋಗಿಸಿ ದಲ್ಲಿ ಪರಿಸ್ಥಿತಿಯು ಕೆಡುವುದೆಂದು ಪ್ರಕಾಶಂರವರೂ, ಆಂಧ್ರ ಪ್ರಾಂತೀಯ ಕಾಂಗ್ರೆಸ್ ಅ ಧ್ಯ ಕ್ಷ ರಾ ದ ಆಚಾರ್ಯರಂಗಾರವರೂ ಸೂಚಿಸಿರುವರು.

ಒಟ್ಟಿನ ಮೇಲೆ ರಾಜಕೀಯ ಕಾರಣದ ನಿಪವ ನ್ನು ಮುಂದುಮಾಡಿ ಆಂಧ್ರ ರೈತರು ತಮ್ಮಲ್ಲಿರುವ ನೆಲ್ಲನ್ನು ಹೆಚ್ಚು ದರಗಳಿಗೆ ಮಾರಿಕೊಳ್ಳುವದರ ಮೂ ಲಕ ಇಡೀ ಪ್ರಾಂತಕ್ಕೇ ಕ್ಷಾಮದ ವಿಪತ್ತನ್ನು ತರಲಿ ದ್ದಾರೆ. ಅಲ್ಲಿ ಸಂಚರಿಸಿ ಬಂದ ಡಾಕ್ಟರ್ ರಾಜನ್ ರವರು ಆ ಭಾಗದಲ್ಲಿ ಸಾಕಷ್ಟು ಧಾನ್ಯ ಸಂಗ್ರಹವಿದೆ ಯೆಂದೂ, ಅವರು ಧಾನ್ಯವನ್ನು ಕೊಟ್ಟಲ್ಲಿ ಪ್ರಾಂತಕ್ಕೆ ಸೆಪ್ಟಂಬರ್ ಅಕ್ಟೋಬರ್ ತಿಂಗಳುಗಳಲ್ಲಿ ಕಷ್ಟವಿರುವ ದಿಲ್ಲೆಂದೂ ಹೇಳಿಕೆ ಕೊಟ್ಟಿರುವರು. ಅಧಿಕಾರೀವರ್ಗ ದಲ್ಲಿರುವ ಜವಾಬ್ದಾರೀ ಜನರು ಹೇಳಿಕೆಗಳನ್ನು ಕೊಡಬೇಕಾದರೂ ಎಚ್ಚರದಿಂದಿರುವುದಿಲ್ಲ. ಸರ್ಕಾರ ದವರು ತಾವು ಮಾಡಲಿರುವ, ಕೈಕೊಳ್ಳಲಿರುವ ಕಾರ್ಯ ಭಾಗದ ರೂಪರೇಷೆಯನ್ನು ಮೊದಲೇ ಸಾರ್ವ ಜನಿಕ ರ ಮುಂದಿಟ್ಟರೆ ಸಂಬಂಧಿಸಿದವರು ಅದಕ್ಕೆ ತಕ್ಕ ಉಪಾಯಗಳನ್ನು ಹುಡುಕುವರು. ಇದರಿಂದ ಧಾನ್ಯ ಸಂಗ್ರಹ ಕಾರ್ಯದಲ್ಲಿ ಅಡ್ಡಿ ಆತಂಕಗಳಾಗುವವಲ್ಲದೆ ಉದ್ದೇಶವೂ ನಿಷ್ಫಲವಾಗುವದು. ಹೆಚ್ಚಿಗೆ ಧಾ ನ್ಯ ವಿಟ್ಟುಕೊಂಡು ಬ್ಲಾಕ್ ಮಾರ್ಕೇಟದಲ್ಲಿ ಮಾರುವವ ರನ್ನು ಶಿಕ್ಷಿಸಬೇಕು. ಅಲ್ಲದೆ ಬಲತ್ಕಾರದಿಂದಲೂ ಧಾನ್ಯ ಸಂಗ್ರಹ ಮಾಡುವದರಲ್ಲಿ ಅಡ್ಡಿಯಿಲ್ಲ. ಪರಿ ಸ್ಥಿತಿಗನುಸಾರವಾಗಿ ಸಾಮ, ದಾನ, ಭೇದ, ದಂಡೋ ಪಾಯಗಳನ್ನನುಸರಿಸಬೇಕಾಗುತ್ತದೆ.

ಆಂಧ್ರ ರೈತರು ಇಡೀ ಪ್ರಾಂತದ ಹಿತದ ದೃಷ್ಟಿ ಯಿಂದ ತಮ್ಮಲ್ಲಿರುವ ಧಾನ್ಯ ಸಂಗ್ರಹವನ್ನು ಕೊಡ ಬೇಕೆಂದು ಪ್ರಾರ್ಥಿಸುತ್ತೇನೆ.

ಹೈದರಾಬಾದಿನ ಎಲ್ಲಾ ಕಡೆಗಳಲ್ಲಿ ಸೇಂದಿ ಗಿಡ ಗಳ ಸಂಹಾರವು ನಡೆದಿದೆ. ಡಾಕ್ಟರ್ ಮೇಲುಕೋಟೆ ಮತ್ತು ಅವರ ಕುಟುಂಬದವರು ಸತ್ಯಾಗ್ರಹ ಮಾಡಿ ಬಂಧಿತರಾದರು. ಹಳ್ಳಿಹಳ್ಳಿಗಳಿಂದ ಸತ್ಯಾಗ್ರಹವು ನಡೆದಿದೆ. ಪೋಲೀಸ್ ಮತ್ತು ಮಿಲಿಟರಿಯವರ ಅತ್ಯಾಚಾರಕ್ಕೆ ಕೊನೆ ಮೊದಲಿಲ್ಲವಾಗಿದೆ.

126

ಭಾರತದ ವ್ಯಾಪಾರದ ತುಲನ

೧೯೪೭–೪೮ ಮಾರ್ಚಿಯ ವರೆಗಿನ ೯ ತಿಂಗಳಲ್ಲಿ ಹಿಂದುಸ್ತಾನದ ಸಾಗರೋತ್ತರ ವ್ಯಾಪಾರವು (ವೈಯಕ್ತಿಕ ಸಾಮಾನುಗಳಲ್ಲಿ) ೪೯೦, ೮ ಕೋಟಿ ರೂಪಾಯಿಗಳ ಬೆಲೆಯದಾಗಿದೆ. ಅಷ್ಟೇ ಕಾಲದಲ್ಲಿ ೧೯೪೬ ರಲ್ಲಿ ೩೯೧, ೮ ಕೋಟಿ ರೂಪಾಯಿಗಳಷ್ಟು ಮಾತ್ರವಾಗಿತ್ತು. ವರ್ಷದಾದಿಯಲ್ಲಿ ಸರಕಾರವು ಆಯಾತದಲ್ಲಿ ಉದಾರ ನೀತಿ ತಳೆದುದರಿಂದ ನಿರ್ಯಾತದ ಬೆಲೆ ನೂರಕ್ಕೆ ಕೇವಲ ೧೩ ರಷ್ಟು ಏರಿ ಆಯಾತದ ಬೆಲೆಯು ನೂರಕ್ಕೆ ೩೫ ರಷ್ಟು ಏರುವಂತಾಯಿತು. ಇದರ ಫಲಿತಾಂಶವಾಗಿ ೧೯೪೭ ರ ಮಾರ್ಚಿಯವರೆಗೆ ಭಾರತದ ತುಲನದ ವ್ಯಾಪಾರವು ೯೦ ಲಕ್ಷ ರೂಪಾಯಿಗಳಷ್ಟು ಮಾತ್ರವಾಯಿತು. ಹಿಂದಿನ ವರ್ಷ ಇಷ್ಟೇ ಅವಧಿಯಲ್ಲಿ ಅದು ೩೫೪ ಕೋಟಿ ರೂಪಾಯಿಗಳಷ್ಟಾಗಿತ್ತು.

ನದಿಜ್ಯಾಗಿ (ಆದವಾನಿ)

ಇಲ್ಲಿ ಸ್ವಾತಂತ್ರೋತ್ಸವವು ವೈಭವವಾಗಿ ನೆರವೇರಿತು. ಶಾಲೆಯಲ್ಲಿ ರಾಷ್ಟ್ರಧ್ವಜಾರೋಹಣವು ಗ್ರಾಮದ ಸಮಸ್ತ ಜನರಿಂದ ಉತ್ಸಾಹ ಪೂರ್ವಕವಾಗಿ ನೆರವೇರಿತು. ಸಾಯಂಕಾಲ ಮುಖಂಡರ ಭಾವಚಿತ್ರಗಳಿಂದೊಡಗೂಡಿದ ರಥವು ವಾದ್ಯ ವಿಶೇಷಗಳೊಡನೆ ಬೀದಿಗಳಲ್ಲಿ ಹಾದುಹೋಯಿತು. ಬಳ್ಳಾರಿಯ ಪ್ಯಾಟಿ ರಾಘವೇಂದ್ರಾಚಾರಿಯವರು, ಅಧ್ಯಕ್ಷರಾದ ವೆಂಕೋಬರಾಯರು ಕಾಂಗ್ರೆಸ್ ಸ್ವಾತಂತ್ರ್ಯ ಉದ್ಯಮ, ತ್ಯಾಗಗಳನ್ನು ಹೇಳಿ ಸ್ವತಂತ್ರೋತ್ಸವದ ಮಹತ್ವವನ್ನು ತಿಳಿಸಿದರು. ಕಾಂಗ್ರೆಸ್ ಸಂಘ:- ಅಧ್ಯಕ್ಷ ಬಿ. ವೆಂಕೋಬರಾವು ಉಪಾಧ್ಯಕ್ಷ ಬಿ. ನಿ ರಂಗಯ್ಯ ಶೆಟ್ಟಿ ಸದಸ್ಯರು 1) ರಾಮುಲಿಂಗಯ್ಯ 2) ರಂಗನಾಥಸ್ವಾಮಿ 3) ಕನಕಗೌಡ 4) ವೀರಣ್ಣ 5) ಯಲ್ಲಪ್ಪ 6) ಅನಂತಯ್ಯ

— ರಾಯದುರ್ಗ —

ಈ ಊರಿನ ಬಡ ರೈತರ (ಒಡ್ಡರ) ಸಹಾಯಾರ್ಥವಾಗಿ ಜಿಲ್ಲಾ ಕಲೆಕ್ಟರವರು ೨೫೦ ಎಕರೆ ಬೀಳು ಭೂಮಿಯನ್ನು ದಯಪಾಲಿಸಿ ಅವರ ಕೃತಜ್ಞತೆಗೆ ಪಾತ್ರರಾದರು. ಇದರಿಂದ ಸರ್ಕಾರದವರ "ಹೆಚ್ಚು ಬೆಳೆಯಿರಿ" ಎಂಬ ಪ್ರಚಾರ ಕಾರ್ಯಕ್ಕೆ ಕಾರ್ಯತಃ ಸಹಾಯವಾಯಿತೆಂದು ಕಾಮ್ರೇಡ್ ನಿವಾಣಿಯವರು ಹೇಳಿ ತಮ್ಮ ಕೆಂಪು ಜಂಡಾವನ್ನು ಅಲ್ಲಿ ಹಾರಿಸಿದರು.

— ಕಾತ್ರಿಕಿ —

ಲಂಡನ್ ಮಿಷನ್ ಶಾಲೆಯ ಮಕ್ಕಳು ಆಗಷ್ಟ 15ಕ್ಕೆ ರಾಷ್ಟ್ರಧ್ವಜ, ದೇಶನಾಯಕರ ಚಿತ್ರಗಳೊಂದಿಗೆ ರಾಷ್ಟ್ರೀಯಗೀತೆಗಳನ್ನು ಹಾಡುತ್ತಾ ಮೆರವಣಿಗೆಯ ಮೂಲಕ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು. ಊರಿನಗೌಡ ಮತ್ತು ಶಾನುಭೋಗರ ಸಹಾಯದಿಂದ ಎಲ್ಲಾ ದೇವಸ್ಥಾನಗಳಲ್ಲಿ ಪೂಜೆ ನಡೆಯಿತು. ಸಾರ್ವಜನಿಕ ಸಭೆಯಲ್ಲಿ ಶ್ರೀ ಡ್ಯಾನಿಯಲ್‌ರವರು ಕಾಂಗ್ರೆಸಿನ ಸ್ವಾತಂತ್ರ ಉದ್ಯಮ, ಅನುಪಮ ತ್ಯಾಗಗಳನ್ನು ಪ್ರಶಂಶಿಸಿದರು ಶ್ರೀ ದಾನನಗೌಡರು ಶಾಲಾಮಕ್ಕಳಿಗೆ ಫಲಹಾರ ಮಾಡಿಸಿದರು

— ಕೋಗಳಿ —

ಇಲ್ಲಿಯ ಹಳ್ಳಿ ರೈತರು ಸ್ವಾತಂತ್ರ ಉತ್ಸವವನ್ನು ಪ್ರಭಾತಫೇರಿ ಧ್ವಜವಂದನೆಗಳಿಂದ ಪ್ರಾರಂಭಿಸಿದರ ಶ್ರೀ ಯಂ. ಜಂಬಣ್ಣನವರು ಶಾಲಾಬಾಲಕಿಯರಿಗೆ, ಬಡವರಿಗೆ, ಇಡೀ ಹರಿಜನ ಕೇರಿಗೆ ಭೋಜನವನ್ನಿಕ್ಕಿದರು. ತಳಿರು ತೋರಣಗಳಿಂದಲಂಕೃತವಾದ ಬೀದಿಗಳಲ್ಲಿ ಭಾರತಮಾತಾ, ಗಾಂಧಿ ವಗೈರೆ ದೇಶಾನಾಯಕರ ಭಾವಚಿತ್ರಗಳನ್ನೊಳಗೊಂಡ ಚತುಚಕ್ರರಥವು ೨೬ ಜೊತೆ ವೃಷಭಗಳಿಂದ ಸಾಯಂಕಾಲ ವಾದ್ಯ ವಿಶೇಷಗಳಿಂದೆಳೆಯಲ್ಪಟ್ಟಿತು. ಶ್ರೀ ಹೆಚ್. ಯಂ. ಚನ್ನಬಸಯ್ಯನವರ ಕೀರ್ತನೆ ಧ್ವಜಾರೋಹಣಗಳಿಂದ ಉತ್ಸವದ ಸಮಾಪ್ತಿಯಾಯಿತು. ಇಲ್ಲಿಯ ಲಂಬಾಣಿ ತಾಂಡದಲ್ಲಿಯೂ ವೈಭವದ ಉತ್ಸವವಾಯಿತು.

ಆಂಧ್ರದೇಶಕ್ಕೊಂದು ಆಕಾಶವಾಣಿ ಕೇಂದ್ರವು ಬೇಕೆಂದೂ, ಈ ಯೋಜನೆಗೆ ಪ್ರಥಮ ಪ್ರಾಶಸ್ತ್ಯವೀಯಬೇಕೆಂದೂ, ಮದ್ರಾಸ್ ಸರ್ಕಾರವು ಕೇಂದ್ರವನ್ನು ಬೇಡಿದೆ.

—: ಜಿಲ್ಲಾ ಕರ್ನಾಟಕ ಸಂಘ :—

ಶ್ರೀ ಕಾಶಿ ವಿಶ್ವನಾಥಪ್ಪನವರ ಅಧ್ಯಕ್ಷತೆಯಲ್ಲಿ ಅಗಡಿಯವರ ಛತ್ರದಲ್ಲಿ 9 ನೆಯ ತಾ॥ ಸಭೆಯು ಸವೂವೇಶವಾಗಿದ್ದಿತು. ಆದವಾನಿ ರಾಯದುರ್ಗ ಆಲೂರುಗಳಿಂದ ಪ್ರತಿನಿಧಿಗಳು ಬಂದಿದ್ದರು. ಆದವಾನಿ—ರಾಯದುರ್ಗಗಳಿಗಾಗಿ 9 ಜನ ಸದಸ್ಯರನ್ನೊಳಗೊಂಡ ಗಡಿನಿರ್ಣಯ ಸಮಿತಿಗಳು ಏರ್ಪಾಟಾಗಿ ಆದವಾನಿಗೆ ಶ್ರೀ ಮಾಚಾನಿ ನಾಗಪ್ಪನವರೂ, ರಾಯದುರ್ಗಕ್ಕೆ ಹಿರಾಳು ಶಿಟ್ಟರ ದೊಡ್ಡಪ್ಪನವರೂ ಸಂಚಾಲಕರಾಗಿರಬೇಕೆಂದು ನಿಶ್ಚಿತವಾಯಿತು. ಇವರು ಎಲ್ಲಾ ಹಳ್ಳಿಗಳನ್ನೂ ಸಂಚರಿಸಿ ಸಮಸ್ತ ಮಾಹಿತಿ ಸಂಗ್ರಹಿಸಬೇಕೆಂದಾಯಿತು. ಕರ್ನಾಟಕ ಏಕೀಕರಣ ದೃಷ್ಟಿಯಿಂದ ಸಂಚರಿಸಲಿರುವ ಶ್ರೀಗಳಾದ ಜಿನರಾಜ ಹೆಗಡೆ, ಕಾರಂತ, ಮತ್ತು ಮಾಸ್ತಿಯವರು ಅಕ್ಟೋಬರ್ 17 ರಿಂದ ಒಂದು ವಾರದವರಿಗೆ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳಲ್ಲಿ ಸಂಚಾರ ಮಾಡುವ ಕಾರ್ಯಕ್ರಮವೇರ್ಪಟ್ಟಿತು.

ಶ್ರೀ ಮುದವೀಡು ಕೃಷ್ಣರಾಯರ ನಿಧನಕ್ಕೆ ವಿಷಾದ ಸೂಚಿಸುವ, ಮದ್ರಾಸ್ ಆಂಧ್ರ ಪರಿಷತ್ತಿನ ಬಳ್ಳಾರಿ ಭಾಗವನ್ನು ಐಕ್ಯಗೊಳಿಸುವ ನಿರ್ಣಯವನ್ನು ಖಂಡಿಸುವ, ಹೈದರಾಬಾದ್ ಮೈಸೂರು ಸತ್ಯಾಗ್ರಹಕ್ಕೆ ಸಹಾನುಭೂತಿಯನ್ನು ತೋರುವ ನಿರ್ಣಯಗಳಾದವು. ಇಡೀ ಜಿಲ್ಲೆಯೆಲ್ಲಾ ಪೂರಾ ಒಂದು ಪ್ರಾಂತಕ್ಕೆ ಸೇರಬೇಕೆಂದೂ, ಕರ್ನಾಟಕ ಪ್ರಾಂತದ ಪೂರ್ವ ಗಡಿಯು ಗುಂತಕಲ್ಲು ಇರಬೇಕೆಂತಲೂ ನಿರ್ಣಯವಾಯಿತು.

ಮದ್ರಾಸಪ ಮತ್ತೆ ೮ ಜಿಲ್ಲೆಗಳಲ್ಲಿ ಮದ್ಯ ಪ್ರತಿಬಂಧ

ಅಕ್ಟೋಬರ್ ೧ ನೇ ತಾರೀಖಿನಿಂದ ತಂಜಾವೂರು ತಿರುಚನಾಪಳ್ಳಿ, ಮಧುರಾ, ನೆಲ್ಲೂರು, ಗುಂಟೂರು, ದಕ್ಷಿಣ ಕನ್ನಡ, ಮಲಬಾರು ಮತ್ತು ನೀಲಗಿರಿ ಈ ಎಂಟು ಜಿಲ್ಲೆಗಳಲ್ಲಿ ಮದ್ಯ ಪ್ರತಿಬಂಧ ಜಾರಿಯಲ್ಲಿ ತರುವ ಎಲ್ಲ ವ್ಯವಸ್ಥೆ ಮುಗಿದಿದೆ.

ಮರೆಯದ "ಆಗಷ್ಟ್"

★ ವಂಗಭಂಗ ನಿರ್ಣಯವನ್ನು ಕಡ್ಡಾಯವನ್ನಾ ಮಹಾಶಯರು ೧೯೦೫ ಆಗಷ್ಟದಲ್ಲಿ ಸಾರಿದರು.

★ ಸ್ವಾತಂತ್ರ್ಯ ಚಳವಳಿಯ ಪುರಸ್ಕರ್ತರಾದ ಲೋ. ತಿಲಕರೂ, ಕವಿವರ್ಯ ರವೀಂದ್ರರೂ, ಮಹಾತ್ಮರ ಬಲಗೈಯಂತಿದ್ದ ಮಹಾದೇವಭಾಯಿಯವರೂ ಆಗಷ್ಟ ತಿಂಗಳಲ್ಲಿಯೇ ಮರಣ ಹೊಂದಿದರು.

★ ಲಿನ್‌ಲಿಥಗೋ ಸಾಹೇಬರ ಪ್ರಸಿದ್ಧವಾದ ಆಗಸ್ಟ ಕೊಡುಗೆಯು ಆಗಸ್ಟ ತಿಂಗಳಿನಲ್ಲಿಯೇ ಸಾರಲ್ಪಟ್ಟಿತು.

★ ಕಳೆದ ವರುಷದ ಕಲಕತ್ತೆಯ ಹತ್ಯಾಕಾಂಡವು ಆಗಸ್ಟ ತಿಂಗಳಿನಲ್ಲಿಯೇ ನಡೆದು ಹೋಯಿತು.

★ 'ಚಲೇಜಾವ' ಚಳವಳಿಯು ಆಗಸ್ಟ ತಿಂಗಳಿನಲ್ಲಿಯೇ ಪ್ರಾರಂಭಿಸಲ್ಪಟ್ಟಿತು.

★ ಕಳೆದ ಆಗಷ್ಟ ತಿಂಗಳಲ್ಲಿಯೇ ಪಂಡಿತ ನೆಹರು ಅವರು, ವೈಸರಾಯರ ವಿನಂತಿಯ ಮೇರೆಗೆ ನಡುಗಾಲ ಸರಕಾರ ರಚಿಸಲು ಒಪ್ಪಿಕೊಂಡರು

★ ಅಂಥ ಆಗಷ್ಟ ತಿಂಗಳಿನಲ್ಲಿಯೇ ಹಿಂದುಸ್ತಾನವು ಈಗ ಸ್ವತಂತ್ರವಾಗಿದೆ.

ಜೇನು ಹುಳುಗಳು

ಸುಮಾರು ೧೫೦೦ ಜೇನು ಹುಳಗಳ ಪಾರ್ಸೆಲ್ಲುಗಳನ್ನು ಸೋವಿಯಟ್ ಟಪ್ಪಾಲಿನವರು ಒಳದೇಶಕ್ಕೆ ಕಳುಹಿಸಿರುವರಂತೆ.

ಅವು ರಶಿಯದ ದಕ್ಷಿಣ ಭಾಗದಿಂದ ಮಧ್ಯ ಮತ್ತು ಪಶ್ಚಿಮದ ಭಾಗಗಳಿಗಾಗಿ ಟಪ್ಪಾಲಿಗೆ ಹಾಕಿದವುಗಳಂತೆ. ಹುಳುಗಳನ್ನು ಮುದ್ರೆ ಹೊಡೆದು ಪಾರ್ಸೆಲ್ ಮಾಡಿದ್ದರೂ ಅವು ನೂರಾರು ಮೈಲುಗಳನ್ನು ದಾಟಿ ಸುರಕ್ಷಿತವಾಗಿ (ಸಜೀವವಾಗಿ) ಮುಟ್ಟತಕ್ಕ ಸ್ಥಾನವನ್ನು ಮುಟ್ಟಿದವು.

ಕೆಲವು ಪಾರ್ಸೆಲ್ಲುಗಳನ್ನು ವಿಮಾನದ ಮೂಲಕವೂ ಕಳುಹಲಾಗಿತ್ತಂತೆ.

ಗಾಂಧೀಜಿ ದೈವೀಶಕ್ತಿಯ ಪ್ರದರ್ಶನ

ಲೀಗ್ ಪತ್ರಿಕೆಯ ಪ್ರಶಂಸೆ

ಕಲಕತ್ತಾ ೬– "ಕಲಕತ್ತೆಯ ಎಲ್ಲ ನಾಗರಿಕರೂ ವಿಶೇಷತಃ ಮುಸಲ್ಮಾನರು ಮಹಾತ್ಮ ಗಾಂಧಿಯವರಿಗೆ ಕಲಕತ್ತೆಯ ಹತ್ಯಾಕಾಂಡವನ್ನು ನಿಲ್ಲಿಸಿದ್ದಕ್ಕಾಗಿ ಹೃತ್ಪೂರ್ವಕ ಅಭಿನಂದಿಸದಿರಲಾರರು." ಎಂದು ಮುಸ್ಲಿಂಲೀಗ ಪತ್ರಿಕೆಯಾದ 'ಮಾರ್ನಿಂಗ ನ್ಯೂಜ್' ಪತ್ರಿಕೆಯು ಇಂದು ಬರೆದ ಅಗ್ರಲೇಖದಲ್ಲಿ ಹೇಳಿದೆ. ಈ ಪತ್ರಿಕೆಯು ಇನ್ನು ಬರೆದಿರುವದೇನೆಂದರೆ—

"ಮಹಾತ್ಮ ಗಾಂಧಿಯವರೊಡನೆ ನಮ್ಮ ರಾಜಕೀಯ ಮತಭೇದವಿತ್ತು ಅವರ ಕೃತಿಗಳನ್ನು ನಾವು ನಿಷ್ಠುರವಾಗಿ ಟೀಕಿಸುತ್ತಿದ್ದೆವು. ಹೋದವರ್ಷ ಅವರು ನೌಖಾಲಿಗೆ ಹೋಗಿ ಅಲ್ಲಿ ಶಾಂತಿ ಸ್ಥಾಪನೆಯ ಪ್ರಯತ್ನ ನಡೆಸಿದಾಗ ನಾವು ಬಿಹಾರದ ಮುಸಲ್ಮಾನರು ಸತ್ತರೂ ಅತ್ತ ನೋಡದೆ ಹಿಂದೂ ಪಕ್ಷಪಾತಿಯಾದ ಗಾಂಧಿಜಿಯು ನೌಖಾಲಿಗೆ ಹೋಗಿದ್ದಾರೆಂದು ಉಗ್ರವಾಗಿ ಟೀಕಿಸಿ ಬರೆದಿದ್ದೆವು.

ಆದರೆ ಕಲಕತ್ತೆಯಲ್ಲಿ ಗಾಂಧಿಯವರ ದೈವೀಶಕ್ತಿಯ ಪ್ರದರ್ಶನವಾಯಿತು. ಇಲ್ಲಿ ಅವರು ತಮ್ಮ ಕೃತಿಯಿಂದ ಹಿಂದೂಗಳ ಸಂರಕ್ಷಣೆಯಲ್ಲಿ ಆಸ್ಥೆ ಇದ್ದಷ್ಟೇ ಮುಸಲ್ಮಾನರ ಸಂರಕ್ಷಣೆಯಲ್ಲಿಯೂ ತಮಗೆ ಆಸ್ಥೆ ಇದ್ದುದನ್ನು ವ್ಯಕ್ತಪಡಿಸಿದರು. ಅವರ ಅಂತಃಕರಣವು ಹಿಂದುಗಳ ಸಂಕಟ ನೋಡಿ ಮರುಗಿದಷ್ಟೇ ಅದೇಕೆ ಅದಕ್ಕೂ ಹೆಚ್ಚು ಮುಸಲ್ಮಾನರ ಸಂಕಟನೋಡಿ ತಳಮಳಗೊಳ್ಳುತ್ತದೆ ಎಂಬುದು ನಿರ್ವಾದವಾಗಿ ಸಿದ್ಧವಾಯಿತು. ಕಲಕತ್ತಾ ನಗರದಲ್ಲಿ ಮುಸಲ್ಮಾನರ ಸಂಖ್ಯೆ ನೂರಕ್ಕೆ ಇಪ್ಪತ್ತೆರಡು ಮಾತ್ರವಿದೆ. ಈ ಮಹಾತ್ಮಾಜಿಯು ಸಂರಕ್ಷಣೆಗಾಗಿ ಎಂಥ ಬಲಿದಾನ ಮಾಡಲು ಸಿದ್ಧರಾದರೆಂಬುದನ್ನು ಎಂದೂ ಮರೆಯಲಾರರು. ಗಾಂಧೀಜಿಯು ಮುಸಲ್ಮಾನರು ಸುಖರೂಪವಾಗಿ ಬದುಕಲೆಂದು ತಾನೇ ಮರಣ ಹೊಂದಲು ಸಿದ್ಧವಾದರು. ಕಲಕತ್ತಾ ಮುಸಲ್ಮಾನರು ಗಾಂಧಿಯ ದ್ರೋಹ ಬಗೆಯದಂತೆ ವರ್ತಿಸಬೇಕು'

ಮಾಯೆಯೋ ಆಕಸ್ಮಿಕ ಘಟನೆಯೋ?

[ಗಾಂಧೀಜಿ ಲೇಖ]

ಶಹೀದಸಾಹೇಬ ಸುಹ್ರವರ್ದಿಯವರೂ ನಾನು ಬೇಲಿಯಾಘಾಟದ ಒಂದು ಮುಸಲ್ಮಾನರ ಮನೆಯಲ್ಲಿ ಒಟ್ಟಿಗಿದ್ದೇವೆ. ಇಲ್ಲಿ ದಂಗೆಯಿಂದ ಮುಸಲ್ಮಾನರಿಗೆ ಬಹಳ ನಷ್ಟವಾಗಿದೆಯೆಂದು ಹೇಳಲಾಗಿದೆ. ನಾವು ಆಗಷ್ಟ್ ೧೩ ರಲ್ಲಿ ಈ ಮನೆಗೆ ಬಂದೆವು. ಮತ್ತು ೧೪ ರಲ್ಲಿ ನೋಡಿದರೆ ಇಲ್ಲಿಯ ಹಿಂದು ಮುಸಲ್ಮಾನರಲ್ಲಿ ಎಂದೂ ವೈರವಿದ್ದಿಲ್ಲವೆಂಬಂತೆ ತೋರಿತು. ಸಾವಿರಗಟ್ಟಲೆಯಾಗಿ ಅವರು ಒಬ್ಬರನ್ನೊಬ್ಬರು ಆಲಿಂಗಿಸತೊಡಗಿದರು. ಮತ್ತು ಒಂದೆಲ್ಲ ಒಂದು ಪಕ್ಷದವರಿಂದ ಅಪಾಯ ಸ್ಥಳಗಳೆಂದು ತಿಳಿಯಲ್ಪಟ್ಟಿದ್ದ ಪ್ರದೇಶಗಳಲ್ಲಿ ಅವರು ನಿರಾತಂಕವಾಗಿ ತಿರುಗಾಡಲಾರಂಭಿಸಿದರು. ನಿಜವಾಗಿಯೂ ಹಿಂದು ಮುಸಲ್ಮಾನ ಸಹೋದರರನ್ನು ದೇವಾಲಯದೊಳಗೂ ಮುಸಲ್ಮಾನನೂ ಹಿಂದು ಸಹೋದರನನ್ನು ಮಸೀದಿಯೊಳಗೂ ಕರೆದೊಯ್ದನು. ಇಬ್ಬರೂ ಏಕಕಾಲದಲ್ಲಿ 'ಜಯಹಿಂದ' ಮತ್ತು 'ಹಿಂದು ಮುಸಲ್ಮಾನರು ಒಂದಾಗಲಿ' ಎಂದು ಕೂಗು ಕೊಟ್ಟರು. ನಾನು ಮೇಲೆ ಹೇಳಿದಂತೆ ನಾವು ಒಬ್ಬ ಮುಸಲಮಾನನ ಮನೆಯೊಳಗೆ ಉಳಿದುಕೊಂಡಿದ್ದೇವೆ ಮತ್ತು ಮುಸಲ್ಮಾನ ಸೇವಕ ಸೇವಿಕೆಯರು ನಮ್ಮ ಉಪಚಾರವನ್ನು ಅತ್ಯಂತಲಕ್ಷ್ಯಪೂರ್ವಕವಾಗಿ ನೋಡಿಕೊಳ್ಳುತ್ತಿದ್ದಾರೆ ಮುಸಲ್ಮಾನ ಸ್ವಯಂಸೇವಕರು ನಮಗಾಗಿ ಅಡಿಗೆ ಮಾಡುತ್ತಾರೆ. ಖಾದಿ ಪ್ರತಿಷ್ಠಾನದಿಂದ ಬಹಳ ಜನರು ನನ್ನ ಸೇವೆ ಮಾಡಲು ಬರುತ್ತೇನೆಂದರು, ಆದರೆ ನಾನು ಅವರನ್ನು ಬೇಡವೆಂದು ತಡೆದೆನು. ಮುಸಲಮಾನ ಸಹೋದರ ಸಹೋದರಿಯರು ಎಷ್ಟರ ಮಟ್ಟಿಗೆ ನನ್ನ ಪ್ರಾಣಧರ್ಮ ನಿರ್ವಹಣಕ್ಕೆ ಅನುಕೂಲ ಮಾಡಿಕೊಡುವರೋ ಅಷ್ಟರಿಂದಲೇ ತೃಪ್ತನಾಗಬೇಕೆಂದು ನಾನು ಪ್ರತಿಜ್ಞೆ ತೆಗೆದುಕೊಂಡಿದ್ದೇನೆ. ಮತ್ತು ಇದರಿಂದ ಯಾವ ನಷ್ಟವೂ ಸಂಭವಿಸಿಲ್ಲವೆಂದು ನಾನು ಹೇಳಬಲ್ಲೆ. ಮನೆಗಳ

ಅಂಗಳಗಳಲ್ಲಿ ಅಸಂಖ್ಯಾಕ ಹಿಂದು ಮುಸಲಮಾನರು ತಮ್ಮ ಭಕ್ತಪ್ರಿಯ ಘೋಷವನ್ನು ಮಾಡುತ್ತಲಿದ್ದಾರೆ ಸಹೋದರ ಭಾವವು ಗಂಟೆ ಗಂಟೆಗೆ ಹೆಚ್ಚುತ್ತ ಹೋಗುತ್ತಿದೆಯೆಂದು ಕೇಳುತ್ತ ಬಂದಿದ್ದೇನೆ.

ಇದೊಂದು ಮಾಯೆಯೋ ಇಲ್ಲವೆ ಅಕಸ್ಮಿಕ ಘಟನೆಯೋ ಇದನ್ನು ಏನೆಂದೇ ಕರೆಯಲಿ, ಎಲ್ಲ ಕಡೆಯಿಂದಲೂ ಈ ಬಗ್ಗೆ ನನಗೆ ಕೊಡಲಾಗುತ್ತಿರುವ ಶ್ರೇಯಸ್ಸಿಗೆ ನಾನು ಅರ್ಹನಲ್ಲ. ಹಾಗಾದರೆ ಇದರ ಶ್ರೇಯಸ್ಸು ಶಹೀದ ಸಾಹೇಬರಿಗೆ ಸಲ್ಲುವುದೇ? ಅವರಿಗೂ ಈ ಶ್ರೇಯಸ್ಸು ಸಲ್ಲದೆನ್ನುತ್ತೇನೆ. ಏಕಾ ಏಕೀ ಹೀಗೆ ಎದ್ದ ಕೋಲಾಹಲವು ಒಬ್ಬಿಬ್ಬರ ಕೆಲಸದಿಂದಾದುದಲ್ಲ. ನಾವು ದೇವರ ಕೈಯ್ಯಲ್ಲಿಯ ಆಟಿಕೆಗಳು ಅವನು ತನ್ನ ರಾಗಾನುಸಾರವಾಗಿ ನಮ್ಮನ್ನು ಕುಣಿಸುವನು. ಆದುದರಿಂದ ಮನುಷ್ಯನು ಮಾಡತಕ್ಕ ಹೆಚ್ಚಿನ ಕರ್ತವ್ಯವೆಂದರೆ, ಈ ಸೃತ್ಯವನ್ನು ನಿಲ್ಲಿಸದೆ ತನ್ನ ನಿರ್ಮಾತೃವಾದ ದೇವನ ಇಚ್ಛೆಗೆ ಸಂಪೂರ್ಣ ವಿಧೇಯನಾಗಿರುವುದು. ಈ ಪ್ರಕಾರ ವಿಚಾರ ಮಾಡಿದರೆ. ಈ ಮಾಯೆಯಲ್ಲಿ ದೇವರು ನಮ್ಮಿಬ್ಬರನ್ನೂ ಸಾಧನವನ್ನಾಗಿ ಬಳಸಿಕೊಂಡಿದ್ದಾನೆಂದು ಹೇಳಬಹುದು. ಮತ್ತು ನನ್ನ ತಾರುಣ್ಯದ ಕನಸುಗಳು ನನ್ನ ಬಾಳಿನ ಸಂಜೆಯಲ್ಲಿ ಪೂರ್ತಿಹೊಂದುವನೆಂದೆ ನಾನು ತಿಳಿಯಲೇ? ಎಂದು ನಾನು ಇಂದು ಕೇಳಬೇಕಾಗಿದೆ.

ಭಗವಂತನಲ್ಲಿ ಪೂರ್ಣ ಶ್ರದ್ಧೆಯಿಟ್ಟವರಿಗೆ ಇದೊಂದು ಮಾಯೆಯೂ ಅಲ್ಲ, ಅಕಸ್ಮಿಕ ಘಟನೆಯೂ ಅಲ್ಲ. ಘಟನೆಗಳ ಸೂತ್ರವಾಲಿಕೆಯತ್ತ ಗಮನವಿತ್ತರೆ ಎರಡೂ ಜಾತಿಯ ಜನಗಳಲ್ಲಿ ಈ ಭ್ರಾತೃಭಾವ ಪ್ರಸಾರಕ್ಕೆ ಅವರಿಗೆ ತಿಳಿಯದಂತೆಯೇ ತಯಾರಿ ನಡೆದಿದೆಯೆಂಬುದು ಚೆನ್ನಾಗಿ ಗೊತ್ತಾಗದಿರದು. ಈ ಘಟನೆಯಲ್ಲಿ ನಾವು ಬಂದು ಸೇರಿದುದು ನೋಟಕನಿಗೆ ಈ ಸಂತೋಷಕರವಾದ ಸಂಗತಿಯು ಪೂರ್ತಿಯಾದಬಗ್ಗೆ ನಮಗೆ ಶ್ರೇಯಸ್ಸನ್ನು ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟಿತು.

ಅದು ಹಾಗೇ ಇರಲಿ, ಈ ಆನಂದೋನ್ಮಾದವು ನನಗೆ ಖಿಲಾಫತ್ ದಿನಗಳನ್ನು ನೆನಪಿಗೆ ತಂದುಕೊಡುವುದು. ಒಂದು ಹೊಸ ಅನುಭವವಾಗಿ ಅಂದು ಭ್ರಾತೃಭಾವ ಪ್ರಸರಣವು ಜನತೆಯಲ್ಲಿ ಉದಯಿಸಿತು. ಅದರ ಮೇಲೆ, ಆಗ ನನಗೆ ಖಿಲಾಫತ್ ಮತ್ತು ಸ್ವರಾಜ್ಯಗಳೆಂಬ ಯುಗಳ ಧ್ಯೇಯಗಳಿದ್ದವು. ಇಂದು ನನಗೆ ಅಂತಹವೇನೂ ಇಲ್ಲ. ನಾವು ಪರಸ್ಪರ ದ್ವೇಷದ ಹಾಲಾಹಲವನ್ನು ಕುಡಿದಿದ್ದೆವು; ಆದುದರಿಂದ ಭ್ರಾತೃಭಾವ ಪ್ರಸಾರವು ಮತ್ತಷ್ಟು ಅವಶ್ಯಾಯನೂನವಾಗಿ ರುಚಿಸುತ್ತಿದೆ. ಹಾಗೂ ಆ ಮಾಧುರ್ಯವು ಎಂದೂ ಕಡಮೆಯಾಗಬಾರದು.

ಇಂದಿನ ಆನಂದೋನ್ಮಾದದಲ್ಲಿ ಹಿಂದು ಮುಸಲ್ಮಾನರ ಸಂಯುಕ್ತ ಕಂಠದಿಂದ "ಹಿಂದುಸ್ಥಾನ ಪಾಕಿಸ್ತಾನಗಳು ದೀರ್ಘಾಯುಗಳಾಗಲಿ" ಎಂಬ ಕೂಗು ಕೇಳಿಬರುತ್ತಿದೆ. ಅದು ಯುಕ್ತವಾದುದೆಂದು ನನ್ನ ಮತ. ಒಸ್ಸಂದಕ್ಕೆ ಯಾವುದೇ ಕಾರಣವಿರಲಿ, ಮೂರು ಪಕ್ಷಗಳು ಪಾಕಿಸ್ತಾನವನ್ನು ಸ್ವೀಕರಿಸಿದವು. ಹಾಗಾದ ಮೇಲೆ ಇಬ್ಬರು ಒಬ್ಬರೊಬ್ಬರ ಶತ್ರುವಾಗದಿದ್ದರೆ ಇಲ್ಲಿ ಸ್ಪಷ್ಟವಾಗಿ ಅವರು ಅಗಿಲ್ಲ-ಖಂಡಿತವಾಗಿ ಉಕ್ತ ಘೋಷಣೆಯಲ್ಲಿ ಏನೂ ತಪ್ಪಿಲ್ಲ ನಿಜವಾಗಿ ಇಬ್ಬರೂ ಗೆಳೆಯರಾಗಿದ್ದರೆ ಎರಡು ರಾಜ್ಯಗಳಿಗೂ ದೀರ್ಘಾಯುವನ್ನು ಕೋರದಿದ್ದರೆ ಬಹುಶಃ ಅದೊಂದು ಅವಿಧೇಯತೆಯಾದೀತು. [ಕರ್ಮವೀರ]

ನಿಜಾಮರ ಹೊಸ ಆಸ್ತ್ರ

ಹೈದ್ರಾಬಾದ ಪ್ರಕ್ಷುಬ್ಧ ಪ್ರದೇಶದಲ್ಲಿ ತಕ್ಕ ಎಚ್ಚರಿಕೆಯನ್ನು ಕೊಟ್ಟು ಬೇಕಾದವರಿಗೆ ಗುಂಡು ಹಾಕಲು ಮ್ಯಾಜಿಸ್ಟ್ರೇಟರಿಗೂ ಹಾಗೂ ಫೌಜದಾರರು ಹಾಗೂ ಪೋಲೀಸ ಅಧಿಕಾರಿಗಳಿಗೂ ಅಧಿಕಾರ ಕೊಡುವ ವಿಶೇಷ ಸುಗ್ರೀವಾಜ್ಞೆಯನ್ನು ನಿಜಾಮ ಸರಕಾರದವರು ಇಂದು ಹೊರಡಿಸಿದ್ದಾರೆ.

— ಬಳ್ಳಾರಿ —

ಮಾನ್ಯ ಶ್ರೀ ಶೀತಾರಾಮ ರೆಡ್ಡಿಯವರು

ಮದ್ರಾಸ್ ಔದ್ಯೋಗಿಕ ಮಂತ್ರಿಗಳಾದ ಶ್ರೀ ಶೀತಾರಾಮ ರೆಡ್ಡಿಯವರು 7 ನೆಯ ತಾ. ಸಾಯಂಕಾಲ ಇಲ್ಲಿಗೆ ದಯಮಾಡಿಸಿದರು. ಅಂದು ಸಾಯಂಕಾಲದ ಸಾರ್ವಜನಿಕ ಸಭೆಯಲ್ಲಿ ತೆಲುಗಿನಲ್ಲಿಯೂ 8 ನೆಯ ತಾ. ಬೆಳಿಗ್ಗೆ ಕಲೆಕ್ಟರಾಫೀಸಿನಲ್ಲಿ ಇಂಗ್ಲೀಷಿನಲ್ಲಿಯೂ ಸದ್ಯದ ಆಹಾರ ಪರಿಸ್ಥಿತಿಯನ್ನು ನಿವೇದಿಸಿ ಕಾಳಿನ ಸಂಗ್ರಹದಲ್ಲಿ ಸರ್ವರೂ ಸಹಾಯಮಾಡಬೇಕೆ ದರು. ಅವರು ಹೇಳಿದಂಶಗಳು ಇಂತಿವೆ.

"ಕೇಂದ್ರದಲ್ಲಿ ನಾನೂ, ಮುಖ್ಯಮಂತ್ರಿಗಳೂ ಆಹಾರಶಾಖೆಯ ಮುಖ್ಯರಾದ ರಾಜೇಂದ್ರಬಾಬುಗಳನ್ನು ಕಂಡೆವು. ಅವರು ಎಲ್ಲಾ ಪ್ರಾಂತಗಳ ಕತೆಯನ್ನು ಹೇಳಿ ತಮ್ಮ ಕಾಲ ಮೇಲೆ ತಾವು ನಿಲ್ಲದಿದ್ದರೆ ಬೇರೊಂದುಪಾಯವಿಲ್ಲೆಂದರು. ಕೋಸ್ತಾ ಜಿಲ್ಲೆಗಳವರು ಧಾನ್ಯ ಸಂಗ್ರಹ ಕಾರ್ಯಕ್ಕೆ ಅಸ್ಪೊಂದು ಸಹಾಯ ಮಾಡುತ್ತಿಲ್ಲವೆಂದರು. ಸೆಪ್ಟಂಬರ್, ಅಕ್ಟೋಬರ್ ತಿಂಗಳುಗಳು ಕಷ್ಟವಿರುವ ಕಾರಣ ಎಲ್ಲರೂ ಸಹಾಯ ಮಾಡದಿದ್ದರೆ ಕಷ್ಟವನ್ನು ಭೋಗಿಸಬೇಕಾಗುತ್ತದೆ ಎಂದು ಹೇಳಿದರು."

ಶ್ರೀ ನಾಗಭೂಷಣಂರವರು (ರಾಯದುರ್ಗ)

ವೃಥಾಮಾತುಗಳಿಂದ ಪೊಳ್ಳುಭಾಷಣಗಳಿಂದ ಉಪಯೋಗವಿಲ್ಲ ಸರಕಾರವು ತಮ್ಮ ಸಹಾಯ ಸಹಾನುಭೂತಿಗಳನ್ನು ಕಾರ್ಯತಃ ಪ್ರದರ್ಶಿಸಬೇಕು ರಾಯದುರ್ಗತಾಲೂಕಿನ ಒಂದೇ ಉದಾಹರಣೆ ಕೊಡಬೇಕೆಂದರೆ ಸರ್ಕಾರದವರು ಒಂದು ಕೆರೆಯು ರಿಪೇರಿಗೆ ೧೩ ಸಾವಿರ ರೂ. ಕೊಟ್ಟರೆ ನೂರಾರು ಎಕರೆ ನೀರಾವರಿ ಪೈರು ಬೆಳೆಯಬಹುದು. ಎಷ್ಟು ದಿನಗಳಿಂದ ಅರ್ಜಿ ಇಟ್ಟುಕೊಂಡು ಶಂಖವಾದ್ಯ ಮಾಡಿದರೂ ಸರ್ಕಾರವು ಕದಲುವಂತಿಲ್ಲ. ಇದಕ್ಕೆ ಮಂತ್ರಿಗಳು ಗಮನವಿತ್ತು ರಾಯಲಸೀಮೆ ಜಿಲ್ಲೆಗಳಿಗೆ ಸಹಾಯ ಒದಗಿಸಬೇಕು.

ಶ್ರೀ ಮರಿಬಸವನಗೌಡ (ಕುರುಗೋಡು)

ಹಳ್ಳಿಗಳಲ್ಲಿ ಇನ್‌ಫರ್ಮಲ್ ರೇಶನಿಂಗ್‌ಮಾಡಿ ರೈತರನ್ನು ಕಷ್ಟಕ್ಕೀಡು ಮಾಡಿದರು. ಅಕ್ಕಿಯ ಹೊರತು ಬೇರೆ ಧಾನ್ಯಗಳ ಸಂಗ್ರಹವು ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಸಾಕಷ್ಟಿದೆ. ಈ ಕಾರಣ ಹಳ್ಳಿಯ ರೇಷನಿಂಗ್ ತೆಗೆದು ಮಿಲೆಟ್ಸ್ ಓಡಾಟಕ್ಕೆ ಪ್ರತಿಬಂಧವಿರದಂತೆ ಮಾಡಬೇಕು ಧಾನ್ಯ ಸಂಗ್ರಹಾಧಿಕಾರಿಗಳು ಕಾಳು ತೆಗೆದುಕೊಂಡು ಹೋಗಿ ಮುತ್ತೆ ಬಡವರಿಗೆ ಕಾಳು ಸರಿಯಾಗಿ ಸಪ್ಲೈಮಾಡುವುದಿಲ್ಲ.

ಶ್ರೀ ಲಿಂಗಾರೆಡ್ಡಿಯವರು ಹಳ್ಳಿಗಳ ರೇಷನಿಂಗ್ ತಮಾಷೆ (Farce) ಎಂದರು. ಶ್ರೀ ಬಂಡೆಗೌಡ, ವೆಂಕೋಬರಾವು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.

— ಕೆಂಪ್ಲಿ —

ಶ್ರೀ ಮಾನ್ಯ ಸೀತಾರಾಮರೆಡ್ಡಿಯವರು 8 ನೆಯ ತಾ. ಪ್ರಾತಃಕಾಲ ಇಲ್ಲಿಗೆ ಬಂದರು. ಶಾಮಿಯಾನದ ಬೋರ್ಡ್ ಹೈಸ್ಕೂಲಿನ ನೂತನ ಭವನದಲ್ಲಿ ಸಾರ್ವಜನಿಕಸಭೆಯನ್ನೇರ್ಪಡಿಸಲಾಗಿತ್ತು. ಮ್ಯೂನಿಸಿಪಾಲಿಟಿ ವಾರ್ಡ್‌ಸಮಿತಿ, ಹರಿಜನಸಂಘ, ಪುರಜನರು ಮಾನ್ಯ ಪತ್ರಗಳಮೂಲಕ ತಮ್ಮ ಕಷ್ಟಗಳನ್ನು ನಿವೇದಿಸಿದರು ಪುರಜನರ ಮಾನ್ಯಪತ್ರದಲ್ಲಿ ಕಾಳಿನ ಸಂಗ್ರಹ ಮತ್ತು ವಿತರಣದ ಅವ್ಯವಸ್ಥೆಯು ಚೆನ್ನಾಗಿ ವಿವರಿಸಲ್ಪಟ್ಟು ಅದರಲ್ಲಿನ ಲೋಪ ದೋಷಗಳು ಬಯಲಿಗೆಳೆಯಲ್ಪಟ್ಟಿದ್ದವು. ಶ್ರೀಗಳಾದ ಸೂರ್ಯನಾರಾಯಣರಾವು, ಭೀಮರಾವು, ಅನಂತಾಚಾರ್ಯ M L. A. ರವರು ಕಾಳಿನ ಸಂಗ್ರಹಕ್ಕೆ ಸಹಾಯ ಮಾಡಲು ಕೋರಿದರು. ಮಂತ್ರಿಗಳು ದೇಶದ ಆಹಾರ ಪರಿಸ್ಥಿತಿಯನ್ನು ನಿವೇದಿಸಿ ಜಿಲ್ಲೆಗೆ ಉಗ್ರಾಣದಂತಿದ್ದ ಕಂಪ್ಲಿಯು ಜಿಲ್ಲೆಗೆ ಸಹಾಯವಾಡದಿದ್ದರೆ ಬೇರೊಂದುಪಾಯವಿಲ್ಲೆಂದರು ಶ್ರೀ ವೀರನಗೌಡರು ಸರ್ವರನ್ನೂ ವಂದಿಸಿದರು. ಶಾಮಿಯಾನದಶಾಖಾಭವನದಲ್ಲೇ ಊಟಕ್ಕೇರ್ಪಡಿಸಲಾಗಿತ್ತು. ಊಟದ ನಂತರ ಮಂತ್ರಿಗಳು ಹೊಸಪೇಟೆಗೆ ತೆರಳಿದರು.

— ಹೊಸಪೇಟೆ —

ಶ್ರೀ ಮಾನ್ಯ ಸೀತಾರಾಮರೆಡ್ಡಿಯವರು ರಾಮಸಾಗರ, ಬುಕ್ಕಸಾಗರ, ಕಾಮಲಾಪುರ, ಮಲಪನಗುಡಿ, ಅನಂತಶಯನಗುಡಿಗಳ ಮೂಲಕ ಇಲ್ಲಿಗೆ ಬಂದರು ವಾರಿಯಲ್ಲಿ ರೈತರಿಗೆ ಕಾಳಿನ ಸಂಗ್ರಹಕ್ಕೆ ಸಹಾಯವಾಡಲು ಕೋರಿದರು. ತುಂಗಭದ್ರಾಯೋಜನೆಯ ಕಾರ್ಯವನ್ನು ಸುಮಾರು ಎರಡು ಗಂಟೆಗಳ ಕಾಲ ಪರಿಶೀಲಿಸಿದರು. ನಂತರ ಮಾನ್ಯಮಂತ್ರಿಗಳು ವಡಕ್ಕಣಾಯನ ದೇವಸ್ಥಾನ ಪ್ರವೇಶೋತ್ಸವವನ್ನು ಹರಿಜನರಿಗೆ ಮಾಡಿಸಿ ಫಲ ಮಂತ್ರಾಕ್ಷತೆಗಳನ್ನು ಸ್ವೀಕರಿಸಿದರು. ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿ ಶ್ರೀ ಕೇಶವರಾಯರು ಗಾಂಧೀಜಿ ಹರಿಜನೋದ್ಧಾರ ಉದ್ಯಮವನ್ನು ಹೇಳಿ ಸದ್ಯದ ಮಂತ್ರಿವರ್ಗದವರು ಹರಿಜನರಿಗಾಗಿ ಮಾಡಲಿರುವ ಹಿತಕಾರ್ಯಗಳನ್ನು ಪ್ರಶಂಶಿಸಿ ಮಂತ್ರಿಗಳನ್ನು ಈ ಕಾರ್ಯಕ್ಕಾಗಿ ವಂದಿಸಿದರು. ಇಷ್ಟು ದಿನ ನಾವು ನಿಮಗೆ ಅನ್ಯಾಯ ಮಾಡಿದೆವು. ಇಷ್ಟು ಮೇಲೆ ಸರ್ವಸಮತ್ವದ ರಾಜ್ಯಭಾರದಲ್ಲಿ ಮಳೆ ಬೆಳೆಗಳಾಗಿ ದೇಶವು ಸುಭಿಕ್ಷವಾಗಿರಲಿ'' ಎಂದು ಕೋರಿದರು. 9 ನೆಯ ತಾ. ಸೆಂಟ್ರಲ್ ಸ್ಕೋರ್ಸದಲ್ಲಿ ಸತ್ಕಾರವನ್ನು ಸ್ವೀಕರಿಸಿಕೊಂಡು ಆಲೂರು ಆದವಾನಿಗಳಿಗೆ ತೆರಳಿದರು.

— ಶ್ರೀಧರಘಟ್ಟ (ರಾಯದುರ್ಗ) —

ಈ ಊರಿನಲ್ಲಿಯೂ, ಶ್ರೀ ಗುರುದತ್ತಾಶ್ರಮದಲ್ಲಿಯೂ ಸ್ವಾತಂತ್ರ್ಯೋತ್ಸವವು ವೈಭವವಾಗಿ ನಡೆಯಿತು. 13, 14, 15 ನೆಯ ದಿನಾಂಕ ಶಾಂತಿಕ್ರಿಯೆ ಉಪನ್ಯಾಸ ಗಾಂಧಿಜೀವಿತ ಪ್ರಶಂಸೆ ರಾಷ್ಟ್ರಧ್ವಜಾರೋಹಣೋತ್ಸವ ವಾದ್ಯ ವಿಶೇಷಗಳಿಂದ ವೈರವಣಿಗೆ ನಡೆಯಿತು. ಬಾಲಬಾಲಕಿಯರ ಆಟಪಾಟಾದಿಗಳು ನಡೆದು ಬಹುಮಾನಗಳು ಹಂಚಲಾದವು. ಸಾಯಂಕಾಲ 38 ಜೊತೆ ವೃಷಭಗಳಿಂದ ಗಾಂಧೀಜಿ ದೇಶನಾಯಕರ ಭಾವಚಿತ್ರಗಳಿಂದೊಡಗೂಡಿದ ಅಲಂಕೃತರಥವು ಎಳೆಯಲ್ಪಟ್ಟಿತು.

ಮದ್ರಾಸ್ ಆಂಧ್ರ ರಾಜಕೀಯ ಸಮ್ಮೇಳನ

ಮದ್ರಾಸಿನಲ್ಲಿ ಸಮಾವೇಶವಾದ ಆಂಧ್ರ ರಾಜಕೀಯ ಸಮ್ಮೇಳನದಲ್ಲಿ ಆಂಧ್ರ ಪ್ರಾಂತರಚನೆ ಮಾಡಬೇಕೆಂಬ ತೀರ್ಮಾನವಾಗಿ ಅದರಲ್ಲಿ ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ, ರಾಯದುರ್ಗ ತಾಲೂಕುಗಳನ್ನು ಸಮಾವೇಶಗೊಳಿಸಲು ನಿಶ್ಚಯಿಸಿರುತ್ತಾರೆ. ದತ್ತಮಂಡಲದ ಜಿಲ್ಲೆಗಳವರಿಗೆ ಸವಲತ್ತುಗಳನ್ನು ಕೊಡಬೇಕೆಂದೂ, ಆರ್ಥಿಕವಾಗಿ ಸಹಾಯ ಮಾಡಬೇಕೆಂದೂ-ಭಾಷಣಗಳಾದವು. ಪ್ರಕಾಶಂರವರು ಮೂಲತೀರ್ಮಾನವನ್ನು ಪ್ರತಿಪಾದಿಸಿದರು. ಅಧ್ಯಕ್ಷರಾದ ಶ್ರೀ ದುಗ್ಗಿರಾಲ ಬಲರಾಮಕೃಷ್ಣಯ್ಯನವರು ಬೃಹದಾಂಧ್ರ ಪ್ರಾಂತರಚನೆಯ ಯೋಜನೆಯನ್ನು ತಿಳಿಸಿ ಮೈಸೂರು ಹೈದರಾಬಾದದಿಂದ ಆಂಧ್ರ ಭಾಗಗಳನ್ನು ಪ್ರತ್ಯೇಕಗೊಳಿಸಬೇಕೆಂದು ಸ್ಪಷ್ಟಗೊಳಿಸಿದರು.

ದತ್ತಮಂಡಲದ ಜಿಲ್ಲೆಗಳ ಕೆಲ ಕಾಂಗ್ರೆಸ್ ಕಾರ್ಯಕರ್ತರೂ ಇತರರೂ ಆಂಧ್ರ ಪ್ರಾಂತದ ವಿರುದ್ಧ ಪ್ರದರ್ಶನಗಳನ್ನು ಮಾಡಿದರು.

ದಿಲ್ಲಿಯಲ್ಲಿ ಭಯಂಕರ ಗಲಭೆ

ದಿಲ್ಲಿಯಲ್ಲಿ ಭಯಂಕರ ಜಾತೀಯ ಗಲಭೆ ಯಾರಂಭವಾಗಿ ಅನೇಕರು ಸತ್ತಿದ್ದು ಕೆಲ ಮನೆಗಳು ಸುಡಲ್ಪಟ್ಟಿದ್ದು ಕೆಲವುಗಳ ಲೂಟಿಯಾಗಿದೆ. ಸರ್ದಾರ ವಲ್ಲಭಭಾಯಿ ಪಟೇಲ ಮತ್ತು ಪ್ರಧಾನ ಮಂತ್ರಿಗಳಾದ ಜವಹರಲಾಲ ನೆಹರೂರವರು ಪ್ರಕಟನೆಗಳನ್ನು ಹೊರಡಿಸಿ ಆಕಾಶವಾಣಿ ಭಾಷಣಮಾಡಿ ಶಾಂತಿಸ್ಥಾಪಿಸಿ ದಿಲ್ಲಿಯ ಕೀರ್ತಿಯನ್ನುಳಿಸಲು ಬೇಡಿದ್ದಾರೆ. ಗಲಭೆಗೆ ಕಾರಣರಾಗಿ ಅಕೃತ್ಯಗಳನ್ನು ಮಾಡುವವರಿಗೆ ಗುಂಡಿಕ್ಕಿ ಕೊಲ್ಲಲು ಆಜ್ಞೆಯಾಗಿದೆ.

ಬೆಂಗಳೂರಲ್ಲಿ ಅನೇಕಸಲ ಗೋಳಿಬಾರ ನಡೆಯಿತು. 8 ನೆಯ ತಾ॥ ಮೂವರು ಮಡಿದು 21 ಜನರು ಗಾಯಗೊಂಡರು. ಒಂದು ಗುಂಡು ಒಬ್ಬ ಬಾಲಕನ ಎದೆಯಲ್ಲಿ ಹಾಯ್ದುಹೋಯಿತು.

ಬಳ್ಳಾರಿ ಜಿಲ್ಲಾ ದ್ವಿತೀಯ ಕರ್ನಾಟಕ ಏಕೀಕರಣ ಪರಿಷತ್ತು.

ಇಂದು ಹೊಳಲಗುಂದಿಯಲ್ಲಿ ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಪರಿಷತ್ತು ಅಲಂಕೃತವಾದ ದೊಡ್ಡಕ್ಷರಗಳ ಏಕೀಕರಣ ಪ್ರೋತ್ಸಾಹಪರ ಪಟಗಳನ್ನುಳ್ಳ ಗೌಡರ ನಾಟ್ಯಭವನದಲ್ಲಿ ವೈಭವದಿಂದ ನೆರವೇರಿತು. ನಿಯೋಜಿತ ಅಧ್ಯಕ್ಷ ಉದ್ಘಾಟಕ ಮತ್ತು ಸ್ವಾಗತಾಧ್ಯಕ್ಷರ ಮೆರವಣಿಗೆಯಾದನಂತರ ಕನ್ನಡ ಧ್ವಜವನ್ನು ಶ್ರೀಮತಿ ಸುಮಂಗಲಮ್ಮನವರೂ, ರಾಷ್ಟ್ರ ಧ್ವಜವನ್ನು ಶ್ರೀ ಅನಂತಾಚಾರ್ಯರೂ ಹಾರಿಸಿದರು. ಪ್ರಾರ್ಥನಾ ಸ್ವಾಗತ ಗೀತೆಗಳ ನಂತರ ಉದ್ಘಾಟಕರಾದ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಹೀಗೆ ಹೇಳಿದರು.

ಇದು ಅಯಕಟ್ಟಿನ ಸಮಯ. ದೇಶವು ವಿಭಜಿಸಲ್ಪಟ್ಟಿದ್ದರೂ ರಕ್ತ ಪ್ರವಾಹವಾಗುತ್ತಲಿದೆ. ಪಾಕಿಸ್ತಾನ ಹಿಂದೂಸ್ತಾನಗಳು ಒಂದಾಗಬಹುದು. ಬ್ರಿಟಿಷ್ ದಾಸ್ಯವನ್ನು ಕಿತ್ತೊಗೆದನಂತರ ಇನ್ನೊಂದು ದಾಸ್ಯ ಶಂಖಲೆಗೆ ಒಳಗಾಗಬೇಕಾದ ಕಾಲ ಬಂದಿದೆ ಸೈಮನ್ ಕಮಿಷನ ಕಾಲಕ್ಕೆ ನಾವು ಅವರೊಡನೆ ಸಹಕರಿಸಿದ್ದರೆ ನಮಗೆ ಪ್ರಾಂತವು ಲಭಿಸುತ್ತಿತ್ತೆಂದು ಅನೇಕರಭಿಪ್ರಾಯಪಡುತ್ತಾರೆ. ಆದರೆ ಈಗ ಅವಾದ ಸರಣಿಯು ಬೇಡ. ಕಾಂಗ್ರೆಸ್‌ಗಾಗಿ ದೇಶಗೌರವಕ್ಕಾಗಿ ತ್ಯಾಗಮಾಡಿ ನಮ್ಮನ್ನು ಕಾಂಗ್ರೆಸ್ ಕೈ ಬಿಡಲಿಕ್ಕಿಲ್ಲ. ಹಾಗೆ ಮಾಡಿದರೆ ಕಾಂಗ್ರೆಸ್ ವಿರುದ್ಧ ಬಂಡಾಯವೇ ಏಳಬಹುದು. ನಮ್ಮ ಆಶೆ ಆಕಾಂಕ್ಷೆಗಳನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಸಂಶಯಾತ್ಮರೂ, ಟೀಕಾತ್ಮರೂ ನಮ್ಮಲ್ಲಿ ಅನೇಕರಿದ್ದಾರೆ. ಆದರೆ ಎದೆಗುಂದುವುದೇ ಬೇಡ. ನಮ್ಮ ಪರೀಕ್ಷೆಯು ಕೆಲ ತಿಂಗಳಲ್ಲಿ ಆಗಲಿದೆ ಫಜಲ್ ಆಲಿ ಸಮಿತಿಗೆ ಆರಿಸಿ ಹೋದ ಮದ್ರಾಸ್ ಸದಸ್ಯರು ಏನುಮಾಡುತ್ತಿರುವರೆಂಬುದು ನಿಮಗೇ ಗೊತ್ತು. ಆಂಧ್ರ ಪ್ರಾಂತ ರಚಿಸಿ ಕರ್ನಾಟಕವಾಗದಿದ್ದರೆ ಕಾಂಗ್ರೆಸ್ ನಮ್ಮ ಕೈ ಬಿಟ್ಟಂತೆಂದು ನಾವು ಸ್ವತಂತ್ರ ಸಾರಬೇಕಾಗುತ್ತದೆ. ನಾವು ಪಕ್ಷಾತೀತ, ಜಾತ್ಯಾತೀತರಾಗಿ ದುಡಿಯುವುದನ್ನು ಕಲಿತರೆ ನಮ್ಮ ಯಶಸ್ಸು ಖಂಡಿತ. ಗಡಿ ನಿರ್ಣಯಕ್ಕಾಗಿ ನಾವು ರೂ. ೫೦,೦೦೦/- ಖರ್ಚುಮಾಡಲಿದ್ದೇವೆ. ನಾನು ಕ್ರಿಯಾಸಮಿತಿಯ ಕಾರ್ಯದರ್ಶಿಯಾಗಿ ಗುರುತರ ಜವಾಬ್ದಾರಿ ವಹಿಸಿದ್ದೇನೆ. ಭಾರತ ಧುರೀಣರು ಪೂರ್ವಪರಿಶೀಲನಾ ಸಮಿತಿಯನ್ನು ನಿಯಮಿಸದೆ, ಪ್ರಾಂತ ರಚನೆಗೆ ಕೈಹಾಕದಿದ್ದರೆ ದ್ರಾವಿಡ ಸ್ತಾನದ ಚಳುವಳಿಯ ಪುರಸ್ಕರ್ತರಿಗೆ ಪ್ರೋತ್ಸಾಹ ಕೊಟ್ಟಂತಾಗುವದೆಂದು ಈಮೂಲಕ ಎಚ್ಚರಿಸುತ್ತೇನೆ ನೀವೆಲ್ಲರೂ ಐಕ್ಯದಿಂದ ಕೆಲಸಮಾಡಿರಿ ಎಂದು ಹೇಳಿ ಭಾಷಣವನ್ನು ಮುಗಿಸಿದರು.

ಎಲ್ಲಾ ತಾಲೂಕುಗಳಿಂದ ಬಂದ ಪ್ರತಿನಿಧಿಗಳು ತಮ್ಮ ಅನುಮತಿಯನ್ನು ಸೂಚಿಸಿದನಂತರ ಅಧ್ಯಕ್ಷರಾದ ಶ್ರೀ ಅನಂತಾಚಾರ್ಯರು ಅಧ್ಯಕ್ಷಪೀಠವನ್ನಲಂಕರಿಸಿದರು. ಕ. ಪ್ರಾಂ. ಕಾ. ಸಮಿತಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪ, ಹಿಂಧಸಂಸ್ಥಾನ ರಾಜಕುವರ ಪಂತ ಸಾಹೇಬ, ಟಿ. ಸುಬ್ರಹ್ಮಣ್ಯಂ, ಬಸವಲಿಂಗ ಸ್ವಾಮಿ, ವಿದ್ಯಾರಣ್ಯಸ್ವಾಮಿ (ಶಂಕರಾನಂದ) ಕರ್ನಾಟಕಬಂಧು ಇವರು ಸಂದೇಶಗಳನ್ನು ಕಳುಹಿಸಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ ಗೌಡ ಬಸವನಗೌಡರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು— "ಸ್ವತಂತ್ರ ಭಾರತದಲ್ಲಿ ಅಖಂಡ ಕರ್ನಾಟಕವು ಬೆಳಗಲೆಂಬ ಹಿರಿಯಾಶೆಯಿಂದ ಚರಿತ್ರ ಪ್ರಸಿದ್ಧವಾದ ಅನೇಕ ಪ್ರಾಚೀನ ಕುರುಹುಗಳನ್ನು ಒಳಗೊಂಡ ಈ ಹೊಳಗುಂದಿ ಗ್ರಾಮಕ್ಕೆ ನಿಮ್ಮನ್ನು ಸ್ವಾಗತಿಸುತ್ತೇನೆ.

ಕಳೆಕೊಂಡ ಪಿರಿಹೆಮ್ಮೆಯನ್ನು ನಿಮ್ಮ ಮುಂದಿಡುವುದು ನನ್ನ ಉದ್ದೇಶವಲ್ಲ. ಪರಪ್ರಾಂತೀಯ ಕರಗಸಕ್ಕೆ ಛಿದ್ರವಾದ ನಾಡುದೇವಿಯಂಗಗಳನ್ನು ಕೂಡಿಸುವ ಸಂಜೀವಿನಿ ಮಾತ್ರೆಯನ್ನು ನಾವೆಲ್ಲ ತಯಾರಿಸಬೇಕಾಗಿದೆ.

ದೇಶದ ಮುಂದಾಳುಗಳು ವಿಚಾರಣಾ ಸಮಿತಿಯನ್ನು ನಿಯಮಿಸದೆ ಪ್ರಾಂತ ನಿರ್ಮಾಣಕ್ಕವಕಾಶ

ಕೊಡಲು ಬೇಡುತ್ತೇನೆ. ಚಿಂತಾಮಣಿ ಕೇಳ್ಕರರ ಅವಾರ್ಡಿನಿಂದ ನಾವು ವಜ್ರಾಘಾತರಾಗಿ ಇದ್ದಾಗ ಶ್ರೀ ಕರಿಬಸವಸ್ವಾಮಿಗಳು ಪೂರ್ವಕರ್ನಾಟಕ ಮಹಾಸಭೆ ಕರೆದು ಗಡಿನಾಡ ಕೋಟೆಯನ್ನು ಎತ್ತಿ ತೋರಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಿರುವರು ಕಾಂಗ್ರೆಸ್ಸು-ಹಳ್ಳಿಹಾಳಾದವೇನು? ದಿಲ್ಲಿ ಪಟ್ಟಣವಾದರೇನು?'' ಎಂಬ ಮನೋಭಾವನೆಯಿಂದ ಇದಕ್ಕಂಟಿಕೊಂಡಿರುವುದು ನನಗೆ ಅನ್ಯಾಯವಾಗಿದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಕನ್ನಡ ನಾಡುದೇವಿಯ ಕಳಚಿ ಹೋದ ಅಂಗಗಳನ್ನು ಒಂದುಗೂಡಿಸಿ ಸಾಮಾಜಿಕ ಆರ್ಥಿಕ ಔದ್ಯೋಗಿಕ ಕ್ಷೇತ್ರದಲ್ಲಿ ಉನ್ನತಿ ಹೊಂದುವಂತೆ ಮಾಡಬೇಕೆಂಬುದೇ ನಮ್ಮ ಹೆಬ್ಬಯಕೆ.

ಬಳ್ಳಾರಿ ಜಿಲ್ಲೆಯಲ್ಲಿ ಯಾವ ಸಂಪತ್ತಿಗೂ ಕೊರತೆಯಿಲ್ಲ. ನಮ್ಮನಾಡಿನಲ್ಲಿ ೨೦೦ ಮೈಲು ತುಂಗಭದ್ರಾ ಹರಿಯುತ್ತಿದ್ದರೂ, ನಮಗುಪಯೋಗವಿಲ್ಲದಂತಾದು ನಮ್ಮ ದುರ್ದೈವ. ಶ್ರೀ ಅನಂತಾಚಾರ್ಯರಿಗೂ ದೊಡ್ಡ ಮೇಟಿಯವರಿಗೂ ನನ್ನ ಹೃತ್ಪೂರ್ವಕ ವಂದನೆ ಇಂಥಾ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅವರ ಸಹಾಯ ಸಹಕಾರ ಅತ್ಯಂತಾವಶ್ಯಕ ರೇಷನ್ನಿನ ಕಷ್ಟದಿನಗಳಲ್ಲಿ ನೀವು ಯಾವುದನ್ನೂ ಲೆಕ್ಕಿಸದೆ ದಯಮಾಡಿಸಿದುದು ನಮ್ಮ ಸುದೈವವೆನ್ನಬೇಕು ಎಂದು ಹೇಳಿ ಮುಗಿಸಿದರು.

ಅಧ್ಯಕ್ಷರಾದ ಶ್ರೀ ಅನಂತಾಚಾರ್ಯರು – ನನಗೆ ಹೂಹಾರ ಮೆರವಣಿಗೆ ಮಾಡಿದ್ದುದು ವಿವಾಹದಿನಗಳನ್ನು ಜ್ಞಾಪಕಕ್ಕೆ ತರುತ್ತಲಿದೆ. ನೀವು ನನಗೆ ಜವಾದ್ದಾರಿ ಕೆಲಸದ ಕಂಕಣಕಟ್ಟಿರುವಿರೆಂದು ಭಾವಿಸುತ್ತೇನೆ ಶ್ರೀ ಅಂದಾನಪ್ಪನವರು ನನ್ನ ಕೆಲಸ ಸುಲಭವಾಗಿಸಿರುತ್ತಾರೆ.

ನಮ್ಮ ಭಿದ್ರವಾದ ಭಾಗಗಳ ಐಕ್ಯಮಾಡುವ ಸಮಸ್ಯೆಯ ಜೊತೆಗೆ ಮದ್ರಾಸಿನಲ್ಲಿಯೂ ಸಹ ನನ್ನ ಹಕ್ಕನ್ನು ಸಾಧಿಸಬೇಕು. ಬಿ. ಯನ್. ರಾಯರು ಮದ್ರಾಸನ್ನು ಎಂದು ಭಾಗವಾತ್ರ ಮಾಡಿ ತಮ್ಮ ಸಿಫಾರ್ಸು ಕಳುಹಿಸಿದರು. ಅವರ ಕಣ್ಣಿಗೆ ಆಂಧ್ರತಮಿಳರು ಮಾತ್ರ ಬಿದ್ದರು. ಕನ್ನಡಿಗರನ್ನು ನಿರ್ನಾಮಮಾಡುವ ಅನೇಕ ಪ್ರಯತ್ನಗಳಲ್ಲಿ ಇದೊಂದು. ರಾಯಲಸೀಮೂ ಚಳುವಳಿಯಿಂದ ನನಗೆ ಬಹಳ ಹಾನಿಇದೆ. ಅವರದು ದುರುದ್ದೇಶ. ಆಂಧ್ರರಾಜಕೀಯ ಸಮ್ಮೇಳನದಲ್ಲಿನ ಧುರೀಣರ ಮಾತು ಕತೆಗಳಿಂದ ಅವರು ನಮ್ಮ ನೊಡ್ಡವುಖಂಡರಿಂದ ತಮ್ಮ ಪ್ರಾಂತರಚನೆಗಾಗಿ ಆಶ್ವಾಸನ ಪಡೆದಂತಿದೆ. ಇದು ಸುಳ್ಳಿರಬೇಕು. ಪ್ರಾಂತರಚನೆಯಲ್ಲಿ ಆಸಕ್ತರಿರುವ ಎಲ್ಲಾ ಮುಖಂಡರು ಅಧಿಕಾರ ವಾಣಿಯಿಂದ ಹೇಳಿಕೆ ಹೊರಡಿಸುವುದೊಳ್ಳೆಯದು.

ಬಳ್ಳಾರಿ ಭಾಗವನ್ನು ಪ್ರತ್ಯೇಕಿಸುವ ಯತ್ನಗಳನ್ನು ಖಂಡಿಸದಿರಲಾರೆ. ಶ್ರೀ ಬ. ರಂಗನಗೌಡರ ನೇತೃತ್ವದಲ್ಲಿ ಕೆಲಸಮಾಡುವ ತರುಣ ತಂಡವೊಂದು ಬೇಕು. ನನ್ನ ಕೈಲಾದ ಸಹಾಯ ನಾನು ಮಾಡುತ್ತೇನೆ. ಈಗಿನ ನಮ್ಮ ಮುಖಂಡರಲ್ಲಿ ಅವಿಶ್ವಾಸ ಸೂಚಿಸುವ ಅಂಶಗಳನ್ನು ಯಾರೂ ಎತ್ತಬಾರದು. ನನಗೆ ಈ ಅವಕಾಶ ಕೊಟ್ಟದ್ದಕ್ಕಾಗಿ ನಿಮಗೆಲ್ಲಾ ಅಭಿನಂದನೆಗಳು ಎಂದು ಹೇಳಿ ಮುಗಿಸಿದರು.

ಶ್ರೀಮತಿ ಸುಮಂಗಲಮ್ಮನವರು ಕನ್ನಡ ನಾಡ ರಚನೆಯು ಕಾರ್ಯರೂಪಕ್ಕೆ ಬರಲು ಸರ್ವರೂ ದುಡಿಯಲು ಹೇಳಿದರು ಫಲಾಹಾರದನಂತರ ವಿಷಯ ನಿಯಾಮಕ ಸಮಿತಿಯಲ್ಲಿ ತೀರ್ಮಾನಗಳ ಕರಡು ಏರ್ಪಾಟಾಯಿತು. ಬಹಿರಂಗಾಧಿವೇಶನದಲ್ಲಿ ಶ್ರೀ ಬ. ರಂಗನಗೌಡ ಬಿ. ಯಂ. ಮರುಳಿ, ರೇವಣಸಿದ್ದಪ್ಪ ಜಿ. ರಾಚನ್ನ, ಕರಿಬಸವ ಶಾಸ್ತ್ರಿ ಡಿ. ಯುಜ್. ವೆಂಕೋಬರಾವು ತಿಪ್ಪಾರೆಡ್ಡಿ ವಗೈರೆ ಮುಖಂಡರು ಭಾಗವತೆಗೆದುಕೊಂಡ ನಂತರ, ಅವರ ಭಾಷಣಗಳಾಗಿ ತೀರ್ಮಾನಗಳು ಸರ್ವಾನುಮತದಿಂದ ಸ್ವೀಕೃತವಾದವು. ಶ್ರೀ ಬಸವನಗೌಡ, ಸಿದ್ದಮಲ್ಲನಗೌಡರು ಉಪಚಾರ ಮತ್ತು ಇತರ ವ್ಯವಸ್ಥೆಗಳನ್ನು ಚನ್ನಾಗಿಟ್ಟಿದ್ದರು. ವಂದನಾರ್ಪಣೆ, ವಂದೇ ಮಾತರಂ ಗೀತೆಯಿಂದ ಸಭೆಯು ರಾತ್ರಿ ಅಂತವಾಯಿತು.

ಹೂವಿನಹಡಗಲಿ.

ವಿದ್ಯಾರ್ಥಿಕಾಂಗ್ರೆಸ್ ಸಭೆಯು ಶ್ರೀ ಸೊಪ್ಪಿನ ಗುರುಲಿಂಗಪ್ಪನವರಧ್ಯಕ್ಷತೆಯಲ್ಲಿ ಸಮಾವೇಶವಾಗಿ ದಿವಂಗತ ಮುದವೀಡು ಕೃಷ್ಣರಾಯರ ಬಗ್ಗೆ ದುಃಖ ಸೂಚಕ ತೀರ್ಮಾನಮಾಡಿ ಮೈಸೂರು ಸತ್ಯಾಗ್ರಹ ಸಮಯದಲ್ಲಿ ಗುಂಡಿನೇಟಿಗೆ ತುತ್ತಾಗಿ ಮರಣಹೊಂದಿದ ವಿದ್ಯಾರ್ಥಿ ಮತ್ತು ಇತರ ಹುತಾತ್ಮರಿಗೆ ಶ್ರದ್ಧಾಂಜಲಿ ಸಮರ್ಪಿಸಲಾಯಿತು. ವಿದ್ಯಾರ್ಥಿ ಕಾಂಗ್ರೆಸ್ ಉದ್ಘಾಟನಾ ಸಮಾರಂಭದ ಖರ್ಚುಗಳಿಗೆ ತಾಲೂಕಿನ ಉದಾರಿಗಳು ಸಹಾಯಮಾಡಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ಮೈಸೂರು ರೈಲ್ವೆಯನ್ನು ಸ್ವಾಧೀನ ಪಡಿಸಿಕೊಳ್ಳಬೇಕೆಂದೂ ಅಲ್ಲಿರುವ ವ್ಯವಸ್ಥೆಯನ್ನು ತಪ್ಪಿಸಬೇಕೆಂದೂ ಸರ್ದಾರ ವಲ್ಲಭಭಾಯಿಯವರನ್ನು ಕೇಳಲಾಗಿದೆ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:**— ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:- ಪತ್ತಿಕೊಂಡ. **ಕಡಪ:**— ರಾಜಂಪೇಟೆ, ಕಡಪ, **ಚಿತ್ತೂರು.**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡ

ಫಿಕ್ಸ್‌ಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಸ್ಪಾವಿಡೆಂಟ್ ಫಂಡ ಡಿಪಾಜಿಟ್:-3%

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ

NAVA BHARAT. BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI.....
.....
.....

Printed at Krishna Press Bellary QH No. B 17 FOR (Q.H. NO. B-5.)
Edited & Published by T. B KESHAVA RAO

ಜೈಹಿಂದ್ Reg. No. M. 4746

ಪಥಿಕ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೩೬ ಬಳ್ಳಾರಿ ಸೆಪ್ಟಂಬರು ೨೨ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಬ ಳ್ಳಾ ರಿ ಸ ಮಾ ಚಾ ರ

ರಾಯಲ ಸೀಮೆ ಮಹಾಸಭೆ:- ಸ್ಥಾಯೀ ಸಮಿತಿಯು ಸಭೆಯು 14 ನೆಯ ತಾ. ಶ್ರೀ ಪೃಥ್ವಿಂ ಯುಶಾಸ್ತ್ರಿಗಳಧ್ಯಕ್ಷತೆಯಲ್ಲಿ ಸಮಾವೇಶವಾಗಿ ಭಾ ಷಾನಾರ ಪ್ರಾಂತ ವಿಭಜನೆಯು ಈಗಿನ ಘೋರಪರಿ ಸ್ಥಿತಿಯಲ್ಲಿ ದೇಶಕ ಘಾತುಕವಾಗಿರುವದಲ್ಲದೆ, ಮಹಾ ಸಭೆಯು ತನ್ನ ಹಿಂದಿನ ಸಭೆಗಳಲ್ಲಿ ಸೂಚಿಸಿದ ಆರ್ಥಿ ಕಯೋಜನೆಗಳ ಗುರಿ ಪೂರ್ಣವಾಗದಿರುವ ಕಾರಣ ವಿಭಜನೆಯನ್ನು ಮುಂದುವರಿಸಲು ಕೋರಲಾಯಿತು. ಬಳ್ಳಾರಿ ಮಹಿಳೆಯರ ಸಭೆಯಲ್ಲೂ ಕೂಡ ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಾಂತವನ್ನು ವಿಭಜಿಸಬಾರದೆಂದರು

ಮಲ್ಲಸಜ್ಜನ ವ್ಯಾಯಾಮಶಾಲೆಯ:- 14 ನೆಯ ವಾರ್ಷಿಕೋತ್ಸವವು ಶ್ರೀ ಎ. ವಿ. ಗದಗರವರ ಅಧ್ಯಕ್ಷತೆಯಲ್ಲಿ, ಶ್ರೀ ಬಿಂದೂರ ನೇತೃತ್ವದಲ್ಲಿ ಬಾಲ ಕರ ಸಹಜೋತ್ಸಾಹದಿಂದ ನೆರವೇರಿತು. ಹೊಸಪೇಟೆ ಯಿಂದ ಆರ್. ವಿ. ದೇಶಾಯಿ ಮತ್ತು ಕೂಡ್ಲಿಗಿ ಯಿಂದ ಇತರ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಪ್ರಾತಃಕಾಲ ಧ್ವಜವಂದನೆ ಮೆರವಣಿಗೆ ಸೈನಿಕ ಕೂ ಚುಗಳನಂತರ ಸಾಯಂಕಾಲ ವರದಿಯೋದಲ್ಪಟ್ಟಿತು. ಶ್ರೀ ವಿ. ಯಂ. ಗಿರಿಯವರು ಭಾಷಣಮಾಡಿದರು. ಭವಿಷ್ಯ ನಾಗರೀಕರು ದೈಹ್ಯಪುಷ್ಟರಾಗಿ ಯೋಗ್ಯನುನು ಷ್ಯರಾಗಲು ಶಿಕ್ಷಣಕೊಡುವ ಈ ಸಂಸ್ಥೆಗೆ ಎಲ್ಲರೂ ಸಹಾಯಮಾಡುವುದಗತ್ಯವೆಂದರು.

ತಾರಾನಾಥ ಆಯುರ್ವೇದ ವಿದ್ಯಾಪೀಠ

ಬಳ್ಳಾರಿಯ ಸಂಗನಕಲ್ಲಿನಲ್ಲಿ ತಾ ರಾ ನಾ ಥ ಆಯುರ್ವೇದ ವಿದ್ಯಾಪೀಠದ ಪ್ರಾರಂಭೋತ್ಸವವು ಕಲೆಕ್ಟರ್ ಶ್ರೀ ಅನಂತರಾಮನ್‌ರವರಿಂದ 18 ನೆಯ ದಿನಾಂಕ ಸಾಯಂಕಾಲ ನೆರವೇರಿತು ಡಾಕ್ಟರ್ ವೆಂಕ ಟರಮಣರವರು ವರದಿಯನ್ನೋದಿ ಶ್ರೀ ತಾರಾನಾಥರ ಮಹಿಮೆಯನ್ನು, ಆಯುರ್ವೇದದ ಪ್ರಾಮುಖ್ಯತೆ ಯನ್ನು ಹೇಳಿ ಈಗಿರುವ ಸುಮಾರು 50 ವಿದ್ಯಾರ್ಥಿ ಗಳು ಕನ್ನಡ ನಾಡಿನ ಸೇವೆ ಸಲ್ಲಿಸುವರೆಂದು ಹಾರೈಸಿ ದಾತರನ್ನು ವಂದಿಸಿದರು. ಬಿಜಾಪುರದ ಶ್ರೀ ಆದ್ಯ ಅನಂತಾಚಾರ್ಯರು ಶಹರಕ್ಕೆ ದೂರವಿರುವ ಈ ಗುರುಕುಲದ ಮಾದರಿಯು ಕರ್ನಾಟಕದಲ್ಲೆಲ್ಲಿಯೂ ಇಲ್ಲವೆಂದು ಹೇಳಿ ವಿದ್ಯಾರ್ಥಿಗಳಿಗೆ ಸದುಪದೇಶವನ್ನು ಕೊಟ್ಟರು ಜಿಲ್ಲಾ ಮೆಡಿಕಲ್ ಆಫೀಸರ್‌ರವರು ಆಯು ರ್ವೇದದ ಮೇಲೆ ತಮಗಿರುವ ಗೌರವವನ್ನು ವ್ಯಕ್ತಪಡಿ ಸಿದರು. ಅಧ್ಯಕ್ಷರೂ, ಪ್ರೊ ನಾಗಾಯಣರಾಯರೂ, ಪೌರ್ವಾತ್ಯ ಪಾಶ್ಚಿಮಾತ್ಯ ಶಿಕ್ಷಣದ ಸಮನ್ವಯ ಮೇಳವಾಗಬೇಕೆಂದರು ವಿದ್ಯಾರ್ಥಿಗಳ ತಮಾಷೆ ಆಟ ಗಳು ಮತ್ತು ಚಹಾಪಾನದಿಂದ ಸಮಾವೇಶವು ಅಂತ ವಾಯಿತು.

ಒ ಡ ಕು-ಮ ತ ಭೇ ದ

ಇವು ಅನಿವಾರ್ಯ

ಒಮ್ಮತವಾದ ಒಂದು ವಿಷಯದ ಬಗ್ಗೆ ನಿಶ್ಚಯಕ್ಕೆ ಬಂದುದು ಜಗತ್ತಿನಲ್ಲಿಯ ಯಾವದೇ ವಿಷಯದಲ್ಲಿಯೂ ಕಂಡುಬಾರದ ಮಾತು. ಜಗತ್ತಿನಲ್ಲಿ ವೈವಿಧ್ಯವು ಇರತಕ್ಕದ್ದೇ. ವೈವಿಧ್ಯವಿಲ್ಲದೆ ಜಗತ್ತು ನಡೆಯಲಾರದು. ಈ ಒಡಕು, ಈ ಮತಭೇದ ದೇಶ, ಕಾಲ, ಪರಿಸ್ಥಿತಿಗೂ ಅತೀತವಾಗಿ ಇರತಕ್ಕವೇ. ಇಂತಹ ರಾಷ್ಟ್ರದಲ್ಲಿ ಇಂತಹ ವಿಷಯದ ಬಗ್ಗೆ ಸಂಪೂರ್ಣ ರಾಷ್ಟ್ರದ್ದೇ ಏಕಮತವಾಗಿದೆ ಎಂದು ಯಾರಾದರೂ ಹೇಳಬಲ್ಲದೇ? ಇಲ್ಲ. ಅಂತಹ ಧೈರ್ಯ ಯಾರಿಗೂ ಬರಲಾರದು. ಅನಾದಿಕಾಲದಿಂದಲೂ ಜಗತ್ತಿನಲ್ಲಿ ಈ ಒಡಕು ಮತಭೇದಗಳು ನಡೆದುಬಂದಿವೆ. ಅಂತೆಯೇ ಅನಂತ ಕಾಲದವರೆಗೂ ಹೀಗೆಯೇ ನಡೆಯುತಕ್ಕವೇ. ಹಾಗಾದರೆ ಈ ಒಡಕು ಮತಭೇದಗಳಿಂದ ಪಾರಾಗಿ ರಾಷ್ಟ್ರಗಳು ಮುನ್ನಡೆಯುವದೆಂತು?

ವ್ಯಕ್ತಿ ವ್ಯಕ್ತಿಗಳಲ್ಲಿ, ಪಕ್ಷ ಪಂಗಡಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ರಾಷ್ಟ್ರಕ್ಕೆ ಸಂಬಂಧಿಸಿದ ಯಾವದೇ ಪ್ರಶ್ನೆಯ ವಿಷಯವಾಗಿ ತೀವ್ರ ಭಿನ್ನಾಭಿಪ್ರಾಯ ಉಂಟಾದಾಗ್ಗೆ ಅಡಳಿತದಲ್ಲಿ ಸ್ಥಿತ್ಯಂತರವಾಗುವದುಂಟು. ಸಾಮಾನ್ಯ ಮತಭೇದವಿದ್ದರೆ ಒಡೆದು ಕಾಣುವಷ್ಟು ಸ್ಥಿತ್ಯಂತರವಾಗದೆ ಬಹುಮತ ಪಕ್ಷಕ್ಕೇ ವಿರುದ್ಧ ಪಕ್ಷವು ಆ ಆ ಪ್ರದೇಶಗಳಷ್ಟಕ್ಕೆ ಮಾತ್ರ ಕೂಡಿಕೊಂಡು ಹೋಗುವದೂ ಉಂಟು. ಪ್ರಜಾಪ್ರಭುತ್ವದ ಈ ಯುಗದಲ್ಲಿ ಇವೆಲ್ಲ ವಿಷಯಗಳು ಹೀಗೆಯೇ ನಡೆಯತಕ್ಕವೇ ಆದರೂ ಈ ಒಡಕು ಮತಭೇದಗಳ ಬಗ್ಗೆ ಪಕ್ಷಪಂಗಡಗಳು ತೀರ ಹಟಮಾರಿತನಕ್ಕೆ ಬಲಿಯಾಗಿ ತಮ್ಮ ಪಕ್ಷಪಂಗಡಗಳ ಇತಿಶ್ರೀಗೋ, ಅಥವಾ ರಾಷ್ಟ್ರದ ಹಾನಿಗೋ ಕಾರಣವಾದುದೂ ಉಂಟು

ಆದರೆ ಪ್ರಜಾಪ್ರಭುತ್ವದ ಸರಿಯಾದ ತಿರುಳನ್ನರಿತ ಕೆಲಕೆಲವು ಮುಂದಾಳುಗಳೂ, ರಾಜಕಾರಣಜ್ಞರೂ ಈ ಒಡಕು ಮತಭೇದಗಳನ್ನು ಉದಾರ ದೃಷ್ಟಿಯಿಂದ ಪರಿಶೀಲಿಸಿ, ತಕ್ಕ ಸಮಾಧಾನಗಳನ್ನು ಒದಗಿಸಿ ಅದರಿಂದ ರಾಷ್ಟ್ರಕ್ಕೆ ಕಲ್ಯಾಣ ಮಾಡಿದ ಉದಾಹರಣೆಗಳಿವೆ. 'ಭಾರತದ ತುಂಬೆಲ್ಲ ಒಡಕು, ಮತಭೇದ, ಜಾತಿಗಳು, ಕುಲಗಳು ಮುಂತಾದ ನೂರೆಂಟು ಜಟಿಲ ಪ್ರಶ್ನೆಗಳು ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಅಡ್ಡಿ ಮಾಡುತ್ತಿವೆ' ಎಂದು ಬ್ರಿಟಿಷರು ಮೇಲಿಂದ ಮೇಲೆ ಘೋಷಿಸುತ್ತಿದ್ದುದು ಎಲ್ಲ ಭಾರತೀಯರಿಗೂ ಗೊತ್ತಿದ್ದ ವಿಷಯ. ಈ ಒಡಕು ಮತಭೇದಗಳಿದ್ದ ದೇಶಗಳೆಲ್ಲ ದಾಸ್ಯದಲ್ಲಿಯೇ ಇರಬೇಕೆಂದು ಅವರ ಅಭಿಪ್ರಾಯವೊ? ಹಾಗಾದರೆ ಬ್ರಿಟನದಲ್ಲಿ ಇಂದು ಯಾವದೇ ಒಡಕು ಭಿನ್ನಾಭಿಪ್ರಾಯಗಳು ಇಲ್ಲೇ ಇಲ್ಲವೊ? ಇಲ್ಲವೆಂದು ಬ್ರಿಟಿಷರು ಧೈರ್ಯದಿಂದ ಹೇಳಬಲ್ಲರೊ? ಯಾರಿಗೂ ಸಾಧ್ಯವಿರದ ಮಾತು. ಬ್ರಿಟನದಲ್ಲಿಯೂ ಇದು ಟೋರಿ, ಕೂಲಿಕಾರ, ಉದಾರ ಮತವಾದಿ ಎಂಬ ಪಕ್ಷಗಳಲ್ಲಿ ತೀವ್ರ ಮತಭೇದವೂ, ವಿವಿಧ ತರುಸಿನ ತಿಕ್ಕಾಟವೂ ಇದೆ.

ಭಾರತ ಸ್ವಾತಂತ್ರ್ಯದ ಪ್ರಶ್ನೆಯ ಬಗ್ಗೆಯಂತೂ ಈ ಮತಭೇದ ಶಿಖರವನ್ನೇ ಮುಟ್ಟಿದೆ, ಒಡಕು ಪಾತಾಳಕ್ಕೇ ಇಳಿದಿದೆ. ಅನಾಯಾಸ ಸಿಕ್ಕ ಹಿಂದುವ ಅಕಳನ್ನು ತಿರುಗಿ ಬಿಡಲು ಹೇಗೆ ಮನಸ್ಸಾದೀತು? ಇದು ಮಾನವ ಸ್ವಭಾವ ಸಹಜವಾದ ಮಾತಾಗಿದ್ದರೂ, ನ್ಯಾಯಾನ್ಯಾಯ, ಮಾನಾಪಮಾನಗಳ ಅರಿವಿದ್ದ ಯಾವ ಮಾನವನೂ ಪರಸ್ವಾಪಹಾರವನ್ನು ಸಮರ್ಥಿಸಲಾರನು. ಅನ್ಯಾಯದ ಕೃತಿಯಿಂದಾಗುವ ಅಪಮಾನದ ಹೆದರಿಕೆಗಾದರೂ ಇದನ್ನು ಬಿಡಬೇಕಾಗಿ ಬರುವುದು. ತಿಳುವಳಿಕೆ ಇದ್ದ ಮಾನವನ ಮಾತು ಇರಲಿ, ಬ್ರಿಟನದಲ್ಲಿ ಕೂಲಿಕಾರ ಪಕ್ಷ ಅಧಿಕಾರಾರೂಢವಾಯಿತೆಂದೇ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎಂದು ನಮ್ಮಲ್ಲಿ ಕೆಲವರ ಅಭಿಪ್ರಾಯವಾಗಿದ್ದರೂ, ನಿಜಸಂಗತಿಯೆಂದರೆ ಬ್ರಿಟಿಷರು ಭಾರತವನ್ನು 'ಹೇಗೆ' ಸಂಪಾದಿಸಿದ್ದರೋ 'ಹಾಗೇ' ಬಿಟ್ಟುಕೊಡಬೇಕಾಯಿತು.

(11 ನೆಯ ಪುಟ ನೋಡಿರಿ)



10th year of Publication
Monday, 22nd Sept. 1947

ಮೈಸೂರು ಸತ್ಯಾಗ್ರಹ.

ಹೊಣೆಗಾರ ರಾಜ್ಯಪದ್ಧತಿಯನ್ನು ಶ್ರೀಮನ್ಮಹಾರಾಜರ ಆಶ್ರಯದಲ್ಲಿ ಸ್ಥಾಪಿಸಬೇಕೆಂದು ಹೂಡಿದ ಸತ್ಯಾಗ್ರಹಕ್ಕೆ ಮೈಸೂರು ದೇಶದ ಮೂಲೆ ಮೂಲೆ ಹಳ್ಳಿಗಳಿಂದ ಬೆಂಬಲವು ದೊರೆಯುತ್ತಿದ್ದು ಈ ಇಪ್ಪತ್ತು ದಿನಗಳಲ್ಲಿ ಸೂಮಾರು ಮೂರು ಸಾವಿರ ಜನರು ಬಂಧಿತರಾಗಿರುವರೆಂದೂ (ಇದರಲ್ಲಿ ಅನೇಕ ಸ್ತ್ರೀಯರಿರುವರು) 30 ಜನರು ಗುಂಡಿನ ಹೊಡೆತಕ್ಕೆ ಗುರಿಯಾಗಿ ಪೆಟ್ಟಿರುವರೆಂದೂ ವರದಿಗಳಾಗಿವೆ. ಪೋಲೀಸರು ಮತ್ತು ಮಿಲಿಟರಿಯವರು ಹಿಂದೂಸ್ಥಾನದ ಇತರ ಪ್ರದೇಶಗಳಲ್ಲಿ ಹಿಂದೆ ನಡೆದ ಸ್ವಾತಂತ್ರ್ಯೋದ್ಯಮಗಳಲ್ಲಿ ಬ್ರಿಟಿಶ ಆಳರಸರು ಪ್ರಯೋಗಿಸಿದ ಅಸ್ತ್ರಗಳನ್ನೆ ಅನುಸರಿಸುತ್ತಿರುವರು ಲಾಠಿಛಾರ್ಜ್, ಗ್ಯಾಸ್ ನಿಂದ ಗುಂಪುಗಳನ್ನು ಚದರಿಸುವುದು, ಬಿಕ್ಕವರನ್ನೂ ಬಂಧಿಸಿ ದೂರ ಪ್ರದೇಶಗಳಲ್ಲಿ ಬಿಸುವುದು, ಸತ್ಯಾಗ್ರಹಿಗಳ ಕುಟುಂಬದವರಿಗೆ ರೇಷನ್ ತಪ್ಪಿಸುವುದು ಮಗ್ಗೈರಿ ಅಕ್ರಮ ಮತ್ತು ನಿಂದನೀಯ ಪದ್ಧತಿಗಳ ಅನುಕರಣೆ ಮಾಡುವುದರಲ್ಲಿ ದಬ್ಬಾಳಿಕೆಯ ಕಾಲದಲ್ಲಿ ನೈಸ್ರಾಯರ ಕೈಕಳಗೆ ಮೆಂಬರಾಗಿದ್ದು ದಿವಾನ್ ರಾಮಸ್ವಾಮಿಯವರು ತಮ್ಮ ಚತುರತೆಯನ್ನು ತೋರಿಸಿದ್ದಾರೆ. ಸಂಸ್ಥಾನಗಳ ನೆರವಿಗೆ ಬರಲು ಬ್ರಿಟಿಶ ಸೈನ್ಯಗಳಾಗಲಿ, ರೆಸಿಡೆಂಟರಾಗಲಿ ಈಗ ಇಲ್ಲೆಂಬುದು ಮೈಸೂರು ದಿವಾನರಿಗೂ, ಹೈದರಾಬಾದ ನಿಜಾಮರಿಗೂ ತಿಳಿಯದೆಯಿಲ್ಲ. ಬ್ರಿಟಿಶ ಅಸ್ತ್ರ, ಸೈನ್ಯಗಳ ನೆರವಿನಿಂದ ಬ್ರಿಟಿಶರ ಕೈಗೊಂಬೆಗಳಂತಿದ್ದ ಈ 562 ಸಂಸ್ಥಾನಾಧೀಶರು ತಮ್ಮ ಸ್ವೇಚ್ಛಾ ಮತ್ತು ನಿರಂಕುಶಾಧಿಕಾರವನ್ನು ಸಾಗಿಸಿ, ಪ್ರಜೆಗಳ ಆಕ್ರೋತ್ತರಗಳನ್ನೆಲ್ಲಾ ಬಗ್ಗು ಬಡಿದರು.

ಈ 20 ನೆಯ ಶತಮಾನದಲ್ಲಿ ಸಂಸ್ಥಾನಾಧೀಶರಿಗೆ ಸ್ಥಾನವೇ ಇಲ್ಲ. ಇವರು ತಮ್ಮ ಖರ್ಚಿನ ಸಲುವಾಗಿ ಮಾತ್ರ ಪ್ರಜೆಗಳ ಹಣವನ್ನು ಬಳಸಿಕೊಂಡು ಪ್ರಜೆಗಳ ಮೇಲೆ ಆಡಳಿತ ಮಾಡುವದನ್ನು ಪ್ರಜಾ ಪ್ರತಿನಿಧಿಗಳಿಗೇ ಬಿಟ್ಟುಕೊಡಬೇಕು. ಹಿಂದೂಸ್ತಾನದಲ್ಲಿನ ಆರ್ಥಿಕ ಪರಿಸ್ಥಿತಿಗಳು ಸಮತಾವಾದ ಪ್ರಭುತ್ವದ ಘೋಷಣೆ ಮಾಡುತ್ತಲಿವೆ. ಸಂಯುಕ್ತ ಪ್ರಾಂತ ಮದ್ರಾಸ್ ಪ್ರಾಂತಗಳಲ್ಲಿ ಜಮೀಂದಾರೀ ಪದ್ಧತಿಯಂತವಾಯಿತು. ಪ್ರಜೆಗಳು ಜಾಗೃತರಾಗಿದ್ದಾರೆ. ಅವರು ಕೊಡುವ ಪ್ರತಿಯೊಂದು ಪೈ ಯಾವರೀತಿಯಲ್ಲಿ ಖರ್ಚಾಗಬೇಕೆಂಬ ಬಗ್ಗೆ ಅವರು ಅಧಿಕಾರವನ್ನಪೇಕ್ಷಿಸುವುದು ನ್ಯಾಯವೂ ಸಹಜವೂ ಆಗಿದೆ. ಪರಕೀಯ ರಾಜ್ಯದಾಡಳಿತೆಯಲ್ಲಿ ಗುಲಾಮಗಿರಿಯಲ್ಲಿ ಅವರ ಮುದ್ದುಗೂಸಾಗಿ ಅವರ ದಬ್ಬಾಳಿಕೆಯನ್ನು ಸಮರ್ಥಿಸುತ್ತ ಪರದೇಶಗಳಿಗೆಲ್ಲಾ ಭಾರತ ಪ್ರತಿನಿಧಿಯೆಂದು ಹೋಗಿ ಬ್ರಿಟಿಶರು ಶ್ರೇಷ್ಠರೆಂದು ಸಾರಿ, ಅವರ ಕೃಪೆಯಿಂದ ಲಕ್ಷಾಂತರ ರೂ. ಸಂಪಾದಿಸಿದ ದಿವಾನ ರಾಮಸ್ವಾಮಿ ಮೊದಲಿಯಾರರು ಸಾರ್ವಜನಿಕ ಜೀವನದಿಂದಲೇ ನಿವೃತ್ತರಾಗಬೇಕು ಮೈಸೂರು ಮಹಾರಾಜರಿಗೆ ದುಷ್ಟ ಸಲಹೆಗಳನ್ನು ಅವರನ್ನು ತಪ್ಪುದಾರಿಗೆಳೆಯುತ್ತಿರುವವರನ್ನು ಗಡೀಪಾರುಮಾಡಬೇಕು. ಶ್ರೀರಾಮಸ್ವಾಮಿ ಮತ್ತು ತಂಬೂಶೆಟ್ಟಿಯವರು ಇಂಥವರಿದ್ದಾರೆಂದು ಮೈಸೂರಿನವರನೇಕರು ಶಂಕಿಸುತ್ತಿರುವರು.

ಮೈಸೂರು ಮಹಾರಾಜರು ಒಂದು ಅಂಶವನ್ನು ಚನ್ನಾಗಿ ಗ್ರಹಿಸಬೇಕು ಪ್ರಜೆಗಳ ಆಂದೋಳನವನ್ನು ಅನಪೇಕ್ಷಣೀಯ ಮಾರ್ಗಗಳಿಂದ ಹತ್ತಿಕ್ಕುವ

ಕಾಲವೇ ಬಹಳ ಹಿಂದಾಯಿತು. ಒಂದಲ್ಲೊಂದುದಿನ ಪ್ರಜೆಗಳ ಬೇಡಿಕೆಯನ್ನು ಅವರು ಮನ್ನಿಸಲೇಬೇಕು ಜನರಲ್ಲಿ ದ್ವೇಷಭಾವವು ಚನ್ನಾಗಿ ಹಬ್ಬಿದನಂತರ ಗಾಯವು ಮಾಯಲು ಬಹಳಕಾಲ ಬೇಕಾಗಬಹುದು. ಅವರು ಈಗಲೇ ವಿವೇಕಿಗಳಾಗಿ ಪ್ರಜಾಪ್ರತಿನಿಧಿಗಳೊಡನೆ ಸಲಹೆಪಡೆದು ಹೊಣೆಗಾರ ರಾಜ್ಯಪದ್ಧತಿಯನ್ನು ಜಾರಿಯಲ್ಲಿ ತರಲು ಚರ್ಯೆಗಳನ್ನು ತೆಗೆದುಕೊಳ್ಳಬೇಕು. ಇಲ್ಲವಾದರೆ ಆಲಸ್ಯಂ ಅಮೃತಂ ವಿಷಂ ತಡಮಾಡುವದರಿಂದ ಅಮೃತವೂ ವಿಷವಾಗುವುದು.

ದಿವಂಗತ
ಮುದವೀಡು ಕೃಷ್ಣರಾಯರು

ತಾ. ೭—೯—೧೯೪೭ ರಲ್ಲಿ ಮರಣ.

೧

ಕರ್ಮವೀರರವೀರ, ತಾ ದು
ಷ್ಕರ್ಮಮೂಲ ಕುಠಾರ, ಕನ್ನಡ
ಧರ್ಮಕಲ್ಪದ್ರುಮ ಸಮೀರ,
ವಿದಗ್ಧಕಲ್ಹಾರ—
ನಮ್ಮ ನಾಡಿನ ಬಿಡುಗಡೆಯ ಕಂ
ಡೊಮ್ಮೆ 'ಮುದವೀಡಾ'ಗಿ, ಕನ್ನಡ
ದಮ್ಮನಳುಮೊಗಕಂಡೊಡನೆ
ನೋಡೊರಗಿದನೆ ಬುವಿಗೆ?

೨

ಲೋಕಮೂರೊಂದಾಗಿ ಭಾಷೆನೆ
ಶೋಕಹತ ಹಿಂದೀಯರಾಂಗ್ಲಾ
ನೀಕವನ್ನಿದಿರಿಸುವವೊಲು
ಹುರುಪಿತ್ತ ಸೇನಾನಿ—
ಲೋಕಮಾನ್ಯ'ರ ಮಾನ್ಯತತ್ವವಿ
ವೇಕಕಾಹಳನಾಗಿ ಮೆರೆದನಿ
ವೇಕಿಗಳ ಬೆಚ್ಚಿಸಿದ ರಣಪಂ
ಡಿತನು ಗತಿಸಿದನೆ?

೩

ದಾಸಪಂಥದ ಭಕ್ತಿಬೀಕೆ? ಮು
ಹಾಸಮುದ್ರದ ಭಾವಬೀಕೆ? ಸ
ದಾಸದಿಚ್ಛೆಯ ಸತ್ವಸಾರೋ
ದ್ಧಾರ ಬಲಬೀಕೆ?
ಹಾಸಭರ ಮುಖಮುದ್ರೆ ಬೇಕೆ? ಕ
ವೀಶ ಸಹಜಸ್ಫೂರ್ತಿ ಬೇಕೆ? ಆ
ದೇಸೆಸಲಿ ಸದ್ಗುಣಕರಂಡಕ
ಕೃಷ್ಣರಾಯನಲಿ!

೪

ಕನ್ನಡದ ಕಲಿಯಿದಿರಿಸಲು ಬರು
ವನ್ನರಿಗೆ ಹೆಬ್ಬುಲಿ, ಬರಲು ಬೇ
ಳ್ವನ್ನರಿಗೆ ಕೋಯೆಂಬ ಬಲಿ—
ಬಲಭೀಮ ಶಕ್ತಿಯಲಿ
ಕನ್ನಡಕ್ಕೆರಡೆಸಗಲಿಚ್ಛಿಸು
ವನ್ನರನು ಸದೆಬಡಿದ ವೀರವ
ರೇಣ್ಯ ಮಡಿದನೆ? ನಂಬಿ ನಂಬಿ
ನಿಜೆಂಭ ವಾರ್ತೆಗಡ!

೫

ಮಾನದಾ ಪಾಲ್ಗಡಲೊಳಿರ್ದ
ದ್ರೋಣನಂತಿ ಕುಳ್ಳಿರ್ದ ಮುತ್ಸ
ದ್ರಾಣನೇಕನು ಕೃಷ್ಣರಾಯನು
ಕನ್ನಡವ ಜನನ—
ಕಾಣಲ್ಕೆ ಛಲಪಂಕಮಲ್ಲ, ಕೃ
ಪಾಣಪಾಣಿಗಳಗ್ರಗಣ್ಯ— ಧು
ರೀಣನೆನ್ನಿ ಕನ್ನಡನ ಗುಡಿ
ಯೇರಿಪುವ ದಿನನ!

— ಬ. ಹೆ. ಶ್ರೀಧರ

— ಕಳ್ಳಮಾಲು ಸಿಕ್ಕಿತು —

ಹೊಸಪೇಟೆ ತಾಲೂಕು ರಾಮಸಾಗರದಿಂದ, ಬಳ್ಳಾರಿ ತಾಲೂಕು ಹಂದೀಹಾಳಿಗೆ ಹೋಗುತ್ತಿದ್ದ 5 ಗಾಡಿಗಳಲ್ಲಿನ 41 ಚೀಲ ನೆಲ್ಲನ್ನು ಪೋಲೀಸರು 10 ನೆಯ ತಾ. ಪ್ರಾತಃಕಾಲ ಹಿಡಿದಿರುವರೆಂದು (Anti-Smuggling Branch) ಗೊತ್ತಾಗಿದೆ. ರಾಮಸಾಗರದ ಶ್ರೀ ಅಕ್ಕಿ ಬಸಪ್ಪನೆಂಬುವರು, ಹಂದೀಹಾಳಿನ ಮರೇಗೌಡ ಶಿವರಾಮರೆಡ್ಡಿ ವಗೈರೆಯವರಿಗೆ ಮಾರಿದ್ದು ವಿಚಾರಣೆಯಿಂದ ತಿಳಿದು ಬಂದಿರುವದೆಂದು ಪೋಲೀಸರು ತಿಳಿಸಿರುವರು.

ನವಭಾರತಕ್ಕೆ ಚಂದಾದಾರರಾಗಿರಿ

ಪಾಕಿಸ್ತಾನದ ಲಾಭ ಹಾನಿ ಪತ್ರ

ಲೇ:-ದ. ಲ. ಕೆರೂರ

ಪಾಕಿಸ್ತಾನವು ಸರ್ವ ವಿಧದಿಂದ ಅವ್ಯವಹಾರ್ಯ ವೆಂದು ಬ್ರಿಟಿಶ ಮಂತ್ರಿತ್ರಯವು ಸಾರಿ ಹೇಳಿದ್ದರೂ ಭಾರತವು ಅಖಂಡವಾಗಿಯೆ ಉಳಿಯತಕ್ಕದ್ದು ಪಾಕಿಸ್ತಾನವನ್ನೆಂದಿಗೂ ಕೊಡಲಾರೆವೆಂದು ಸರದಾರ ಪಟೇ ಲರಂಥ ಮುಖಂಡರು ಗರ್ಜಿಸಿದ್ದರೂ ಬ್ಯಾ. ಜಿನ್ನಾರು ತಮ್ಮ ದುರಾಗ್ರಹದಿಂದ ಪಾಕಿಸ್ತಾನವನ್ನು ಪಡೆದು ಕೊಂಡೇ ಬಿಟ್ಟರು. ಬ್ಯಾ. ಜಿನ್ನಾರ ಕನಸಿನ ಪಾಕಿಸ್ತಾನಕ್ಕಿಂತ ಈಗ ಅವರಿಗೆ ದೊರೆತ ಪಾಕಿಸ್ತಾನವು ವಿಸ್ತಾರದಲ್ಲಿ ಚಿಕ್ಕದಾಗಿರಬಹುದು. ಆರ್ಥಿಕ ದೃಷ್ಟಿ ಯಿಂದ ದರಿದ್ರವಾಗಿರಬಹುದು. ಆದರೆ ಅವರು ಮಾತ್ರ ತಮ್ಮ ಧ್ಯೇಯಸಾಧನೆಯಲ್ಲಿ ಕೃತಕೃತ್ಯರಾಗಿರುವರೆಂದೇ ಹೇಳಬೇಕು. ಇಷ್ಟೇ ಅಲ್ಲ, ಅವರು ಪಾಕಿಸ್ತಾನದ ಗವರ್ನರ ಜನರಲ ಮತ್ತು ಪಾಕಿಸ್ತಾನ ಘಟನಾ ಸಮಿತಿಯ ಅಧ್ಯಕ್ಷಪದವನ್ನು ಅಲಂಕರಿಸಿ ಅ ರಾಷ್ಟ್ರದ ಶಹಾಸ ಶಹಾರು ಆ ಗಿದ್ದಾರೆ. ಬ್ಯಾ. ಜಿನ್ನಾರ ಹೊಂಗನಸು ನನಸಾಯಿತು.

ಪಾಕಿಸ್ತಾನದ ಕಲ್ಪನೆಯು ಮೂಲವಾದರೂ ಬ್ರಿಟಿಶರ ಭೇದನೀತಿಯಲ್ಲಿದೆ. ಇಪ್ಪತ್ತನೆ ಶತಮಾನದ ಪ್ರಾರಂಭದಿಂದಲೂ ಬ್ರಿಟಿಶರು ಮುಸ್ಲಿಂರನ್ನು ಎತ್ತಿ ಕಟ್ಟುವ ಧೋರಣೆ ವಹಿಸಿದರು. ಪಾಕಿಸ್ತಾನವೆಂದರೆ ಮುಸ್ಲಿಂರಿಗಾಗಿ ಪ್ರತ್ಯೇಕ ರಾಷ್ಟ್ರವೆಂದು ಈಗ ಹೇಳ ಬೇಕಾದ ಕಾರಣ ವುಳಿದಿಲ್ಲ ೧೯೩೦ ರಲ್ಲಿ ಕೆಂಬ್ರಿಜ ದಲ್ಲಿ ಕಲಿಯುತ್ತಿದ್ದ ಚೌಧರಿ ರಹಿಮತ ಅಲಿಯು ಪಾಕಿಸ್ತಾನದ ಕಲ್ಪನೆಗೆ ಒಂದು ಸ್ವಲ್ಪ ರೂಪ ಕೊಟ್ಟು ಅದರಲ್ಲಿ ಪಂಜಾಬ, ಗಡಿನಾಡು, ಕಾಶ್ಮೀರ, ಸಿಂಧ, ಬಲುಚಿಸ್ತಾನಗಳು ಸೇಬೇರೇಕೆಂದು ಹೇಳಿದನು. ಅದೇ ವರ್ಷ ಭಾರತದಲ್ಲಿ ಸೇರಿದ್ದ ಲೀಗಿನ ವಾರ್ಷಿಕ ಅಧಿವೇಶನದಲ್ಲಿ ಸರ್ ಮಹಮದ ಇಕ್ಬಾಲರು ಭಾರತ ದಲ್ಲಿ ಮುಸ್ಲಿಂರದೊಂದು ಕೇಂದ್ರ ಸರಕಾರವನ್ನು ಸ್ಥಾಪಿಸಿ ಪಂಜಾಬ, ಸಿಂಧ, ಗಡಿನಾಡುಗಳ ಅಧಿಪತ್ಯ ವನ್ನು ಅದಕ್ಕೆ ಒಪ್ಪಿಸಬೇಕೆಂದು ಹೇಳಿದರು. ಲಾರ್ಡ ಕರ್ಝನರು ಬಂಗಾಲದ ವಿಭಜನೆ ಸಾಧಿಸಿ ಹಿಂದೂ ಮುಸ್ಲಿಂರಲ್ಲಿ ಚಿರದ್ವೇಷವನ್ನು ಬಿತ್ತಲು ಪ್ರಯತ್ನಿಸಿ ನಿಷ್ಫಲರಾದರು.

ಮುಸ್ಲಿಂ ಲೀಗಿನ ಹುಟ್ಟು.

ಮುಸ್ಲಿಂರು ತಮ್ಮ ಲೀಗನ್ನು ಸ್ಥಾಪಿಸಿಕೊಂಡಿದ್ದರೂ ಈ ಮುಸ್ಲಿಂ ಬಾಂಧವರನ್ನು ಹೊರಗೆ ಹೋಗ ಗೊಡಬಾರದೆಂದು ಮೌಲಾನಾ ಅಬುಲ್ ಕಲಾಮ್ ಆಜಾದ, ಡಾ. ಅನ್ಸಾರಿಯವರಂಥ ಉಜ್ವಲ ಕಾಂಗ್ರೆಸ್ಸಿಗರು ಲೀಗಿನ ಅಧ್ಯಕ್ಷರಾಗಿದುಡಿದರು. ಆದರೆ ಸಿರಿವಂತ ಜಮೀನ ದಾರರ ಸಂಸ್ಥೆಯಾದ ಲೀಗು ಜನರ ಹಿತವನ್ನು ಲೆಕ್ಕಿಸದೆ ಸ್ವಾರ್ಥಸಾಧನೆಯಲ್ಲಿಯೆ ನಿರತವಾದ್ದರಿಂದ ಕಾಂಗ್ರೆಸಿಗೂ ಅದಕ್ಕೂ ಕೂಡಿಬರಲಿಲ್ಲ. ಸ್ವಪ್ರತಿಷ್ಠೆ ಕಾಂಕ್ಷಿಯಾದ ಬ್ಯಾ. ಜಿನ್ನಾರು ಈ ಸಮಯವನ್ನು ಸಾಧಿಸಿ ಕಾಂಗ್ರೆಸ್ಸಿನಿಂದ ಹೊರಬಿದ್ದು ಲೀಗನ್ನು ಸೇರಿದರು.

ಲೀಗಿನವರು ತಮ್ಮ ಬಲಾಬಲಗಳನ್ನು ಪರೀಕ್ಷಿಸಲು ೧೯೩೭ ರ ಚುನಾವಣೆಯಲ್ಲಿ ಭಾಗವಹಿಸಿದರು. ಅದರಲ್ಲಿ ಅವರಿಗೆ ಪುನಃ ತಲೆಯೆತ್ತಲು ಬರದಂಥ ಸೋಲು ಬಂದೊದಗಿತು. ಭಾರತದ ಹನ್ನೊಂದರಲ್ಲಿ ಏಳು ಪ್ರಾಂತಗಳಲ್ಲಿ ಕಾಂಗ್ರೆಸ ಮಂತ್ರಿಮಂಡಳಗಳು ಸ್ಥಾಪಿತವಾದವು. ಇದನ್ನು ಕಂಡು ಕಂಗೆಟ್ಟ ಲೀಗಿನವರು ಅಳಿದು ಹೋದ ತಮ್ಮ ಪ್ರತಿಷ್ಠೆಯನ್ನು ಪುನಃ ಸಂಪಾದಿಸಲು ದ್ವಿರಾಷ್ಟ್ರತತ್ವದ ಪ್ರಚಾರವನ್ನು ಪ್ರಾರಂಭಿಸಿದರು. ಎರಡು ಮೂರು ವರ್ಷಗಳವರೆಗೆ ಹೀಗೆ ಅಖಂಡ ಪ್ರಚಾರ ನಡೆಸಿ ೧೯೪೦ ರಲ್ಲಿ

ಲಾಹೋರದಲ್ಲಿ ಸೇರಿದ್ದ ಮುಸ್ಲಿಂ ಲೀಗ ಅಧಿವೇಶನದಲ್ಲಿ ಪಾಕಿಸ್ತಾನದ ಬಗ್ಗೆ ಒಂದು ಗೊತ್ತುವಳಿಯನ್ನು ಅಂಗೀಕರಿಸಿದರು. ಪಾಕಿಸ್ತಾನದ ಬಗ್ಗೆ ಅನಂತರ ನಡೆದ ಎಲ್ಲ ಆಂದೋಲನಗಳಿಗೆ ಲಾಹೋರದ ಈ ಗೊತ್ತುವಳಿಯೆ ಆಧಾರವಾಗಿದೆ. ಶಿಕಂದರ, ಡಾ. ಲತೀಫ, ಡಾ. ಅಂಬೇಡಕರ, ಡಾ. ಪಂಜಾಬಿ ಮುಂತಾದವರು ಪಾಕಿಸ್ತಾನದ ಯೋಜನೆಗಳನ್ನು ರಚಿಸಿದ್ದರೂ ಲಾಹೋರದ ಗೊತ್ತುವಳಿಯೆ ಪಾಕಿಸ್ತಾನದ ಬೇಡಿಕೆಯ ತಳಹದಿಯಾಗಿದೆ, ಆದ್ದರಿಂದ ಇದರ ಮುಖ್ಯಾಂಶಗಳನ್ನು ಅರಿತುಕೊಳ್ಳುವುದವಶ್ಯ.

ಲಾಹೋರ ಗೊತ್ತುವಳಿ

"ಭಾರತದ ಪೂರ್ವ ಮತ್ತು ಪಶ್ಚಿಮಗಳಲ್ಲಿ ಒಂದಕ್ಕೊಂದು ಹೊಂದಿಕೊಂಡಿರುವ ಮುಸ್ಲಿಂ ಬಹುಸಂಖ್ಯಾಕ ಪ್ರಾಂತಗಳನ್ನು ಅವಶ್ಯಕ ಬದಲಾವಣೆಗಳೊಂದಿಗೆ ಬೇರ್ಪಡಿಸಿ ಅವುಗಳನ್ನು ಸ್ವತಂತ್ರ ಸಾರ್ವಭೌಮ ಘಟಕಗಳೆಂದು ಸಾರಬೇಕು. ಇದನ್ನೊಪ್ಪದ ರಾಜ್ಯಘಟನೆ ಮುಸ್ಲಿಂರಿಗೆ ಒಪ್ಪಿತವಿಲ್ಲ ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವಿಷಯಗಳಲ್ಲಿ ಹಿಂದುಸ್ತಾನದಲ್ಲಿ ಮುಸ್ಲಿಂರಿಗೆ ದೊರೆಯುವ ಹಿತಸಂರಕ್ಷಣೆಗಳನ್ನೂ ಹಕ್ಕುಭಾಧ್ಯತೆಗಳನ್ನೂ ಪಾಕಿಸ್ತಾನದಲ್ಲಿಯ ಹಿಂದುಗಳಿಗೆ ಕೊಡಲಾಗುವದು"

ಅಖಂತ ಭಾರತದಲ್ಲಿ ತಾವು ಮುಸ್ಲಿಂರು ಅಲ್ಪ ಸಂಖ್ಯಾಕರಾಗಿರುವದರಿಂದ ಅಲ್ಲಿಯ ಆಡಳಿತೆಯಲ್ಲಿ ಸದಾ ಹಿಂದುಗಳದೇ ಮೇಲುಗೈ ಆಗಿ ತಮ್ಮ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಹಿತಸಂಬಂಧಗಳು ಹಾಳಾಗಿ ಹೋಗುವವು ಆದ್ದರಿಂದ ತಾವು ಸುಖವಾಗಿ ಬಾಳಬೇಕಾದರೆ ತಮಗೊಂದು ಸ್ವತ್ಯೇಕ ರಾಷ್ಟ್ರಬೇಕು ಎಂದು ಮುಸ್ಲಿಂ ಲೀಗಿನ ಅಧ್ಯಕ್ಷರಾದ ಬ್ಯಾ. ಜಿನ್ನಾರು ಹಟತೊಟ್ಟು ಅದನ್ನು ಸಾಧಿಸಿದರು.

ಪಾಕಿಸ್ತಾನದ ಸ್ವರೂಪ

ಪಾಕಿಸ್ತಾನದಲ್ಲಿ ಯಾವ ಯಾವ ಪ್ರದೇಶಗಳು ಸೇರಬೇಕು ಎಂಬ ಬಗ್ಗೆ ಈ ಮೊದಲು ಅನೇಕರು ರಚಿಸಿದ ಯೋಜನೆಗಳನ್ನು ಈಗ ವಿವೇಚಿಸಬೇಕಾಗಿಲ್ಲ. ಪಾಕಿಸ್ತಾನವೀಗ ಸ್ಥಾಪಿತವಾಗಿದ್ದು ಅದರಲ್ಲಿ ಗಡಿನಾಡುಪ್ರಾಂತ, ಸಿಂಧ, ಪಶ್ಚಿಮ ಪಂಜಾಬ, ಪೂರ್ವ ಬಂಗಾಲಗಳು ಸೇರಿದ್ದಾಗಿದೆ. ಪಂಜಾಬ ಬಂಗಾಲ ಪ್ರಾಂತಗಳು ಇಡಿಯಾಗಿ ಪಾಕಿಸ್ತಾನಕ್ಕೆ ಸೇರಬೇಕೆಂದು ಮುಸ್ಲಿಂ ಲೀಗಿನವರು ಎಷ್ಟೆಷ್ಟೊ ಅತ್ಯಾಚಾರಗಳನ್ನು ನಡೆಸಿದರು. ಆದರೆ ಆ ಪ್ರಾಂತಗಳಲ್ಲಿಯ ಹಿಂದುಗಳು ತಮ್ಮ ಬಹುಸಂಖ್ಯೆಯಿದ್ದ ಪ್ರದೇಶವನ್ನು ಬಿಡಿಸಿಕೊಂಡು ಪ್ರತ್ಯೇಕ ಪ್ರಾಂತಗಳನ್ನು ಕಟ್ಟಿಕೊಂಡರು. ಕಾಶ್ಮೀರ ಸಂಸ್ಥಾನವೂ ಬ್ಯಾ. ಜಿನ್ನಾರ ಕಟಾಕ್ಷಕ್ಕೆ ಪಾತ್ರವಾಗಿದೆ. ಆದರೆ ಅಲ್ಲಿಯ ಮಹಾರಾಜರು ಯಾವ ಒಕ್ಕೂಟವನ್ನು ಸೇರಬೇಕೆಂಬ ಬಗ್ಗೆ ಇನ್ನೂ ಯಾವ ನಿರ್ಧಾರ ಮಾಡಿಲ್ಲ.

ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿ

ಬ್ಯಾ. ಜಿನ್ನಾರ ಈ ಕಲ್ಪನೆಯಲ್ಲಿಯ ಪಾಕಿಸ್ತಾನದಲ್ಲಿ ಪಂಜಾಬ, ಸಿಂಧ, ಗಡಿನಾಡು ಮತ್ತು ಬಂಗಾಲ ಈ ಪ್ರಾಂತಗಳೂ ಕಾಶ್ಮೀರ, ಹೈದರಾಬಾದ ಸಂಸ್ಥಾನಗಳೂ ಅಲ್ಲದೆ ಪಂಜಾಬದಲ್ಲಿಯ ಮುಸ್ಲಿಂ ಬಹುಸಂಖ್ಯಾಕ ಸಂಸ್ಥಾನಗಳೂ ಪೂರ್ವ ಪಶ್ಚಿಮ ಪಾಕಿಸ್ತಾನಗಳನ್ನು ಜೋಡಿಸುವ ಕೂಟಪಟ್ಟಿಯೂ ಸೇರಿದ್ದವು. ಆದರೆ ಈಗ ಹೊಸದಾಗಿ ರಚಿತವಾಗಿರುವ ಪಾಕಿಸ್ತಾನವು ಇದಕ್ಕಿಂತ ಚಿಕ್ಕದಿದೆಂದು ಸ್ಪಷ್ಟವಾಗಿ ಕಾಣುತ್ತದೆ. ಈ ಪಾಕಿಸ್ತಾನದಲ್ಲಿ ಗಡಿನಾಡ ಕೊರತೆಯ ಪ್ರಾಂತವಾಗಿದ್ದು ಉಳಿದ ಪ್ರಾಂತಗಳ ಉಳಿಕೆಯ ಪ್ರಾಂತಗಳೆಂದು ಕಂಡು ಬಂದರೂ ಕೇಂದ್ರ ಸರಕಾರ ಉತ್ಪನ್ನವು ಬಹಳ ಕಡಿಮೆಯಾಗಿರುವದರಿಂದ ಪಾಕಿಸ್ತಾನದ ಆರ್ಥಿಕ ಪರಿಸ್ಥಿತಿ ಭದ್ರವಾಗಿಲ್ಲೆಂಬುದನ್ನು ಸಪ್ರು ಸಮಿತಿಯ ಸದಸ್ಯರಾಗಿದ್ದ ಸರ್ ಹೋಮಿ ಮೋದಿ ಮತ್ತು ಡಾ. ಜಾನ ಮಥಾ

ಯರು ೧೯೪೫ ರಲ್ಲಿ ಸಿದ್ಧಮಾಡಿ ತೋರಿಸಿದ್ದಾರೆ. ಅವರು ಕೊಟ್ಟ ಅಂಕಿ ಸಂಖ್ಯೆಗಳ ಪ್ರಕಾರ ಪಾಕಿಸ್ತಾನದ ಪ್ರಾಂತಗಳ ಆಯವ್ಯಯಗಳಿಂತಿವೆ. ಈ ಅಂಕಿಗಳನ್ನೆಲ್ಲ ಏಸ್ಪಲಕ್ಷ ರೂ. ಗಳೆಂದು ಓದಬೇಕು.

ಪ್ರಾಂತ	ಆಯ	ವ್ಯಯ	ಶಿಲ್ಕು
ಗಡಿನಾಡು	೧೮೩	೧೮೭	೪
ಪಂಜಾಬ	೭೨೧	೭೦೮	೧೩
ಸಿಂಧ	೪೩೯	೪೦೫	೨೪
ಬಂಗಾಲ	೯೭೪	೯೩೨	೪೨
ಅಂತೂ ಇಡೀ ಪಾಕಿಸ್ತಾನ.	೨೩೦೭	೨೨೩೨	೭೫

ಈ ಪ್ರಾಂತಗಳು ತಮ್ಮ ಆಡಳಿತೆಯನ್ನು ಎಂತೊ ಏನೋ ಸಾಗಿಸಿಕೊಂಡುಹೋಗಬಲ್ಲವು. ಇವು ತಮ್ಮ ಆದಾಯದೊಳಗಿಂದ ಜನಹಿತ ಕಾರ್ಯವನ್ನು ಸಾಧಿಸಲಾರವು ದೇಶದ ಪ್ರಗತಿಗೆ ಜನರ ಉತ್ಕರ್ಷ ಅವಶ್ಯ ಜನಪದದ ಅಭಿವೃದ್ಧಿಗೆ ವಾಪಾರೋದ್ಯೋಗಗಳು ಹೆಚ್ಚಬೇಕಾದುದು ಅನಿವಾರ್ಯ. ದೇಶದಲ್ಲಿ ಉದ್ಯೋಗಗಳು ಭರದಿಂದ ಹೆಚ್ಚಬೇಕಾದರೆ ಸರಕಾರದ ಪ್ರೋತ್ಸಾಹ ಇದ್ದೇತೀರಬೇಕು. ಆದ್ದರಿಂದ ಪಾಕಿಸ್ತಾನದಲ್ಲಿಯ ಜನರ ನೆಮ್ಮದಿ ಹೆಚ್ಚಬೇಕಾದರೆ ಅಲ್ಲಿಯ ಸರಕಾರದ ಸಹಾಯದಿಂದ ಔದ್ಯೋಗಿಕಾಭಿವೃದ್ಧಿ ಭರದಿಂದ ನಡೆಯಬೇಕು. ಪ್ರಾಂತಗಳಿಂದೂ ಈ ಕಾರ್ಯದಲ್ಲಿ ಸಹಾಯ ನೀಡಲು ಅಸಮರ್ಥನಾಗಿವೆ. ಅಂದಮೇಲೆ ಕೇಂದ್ರಪಾಕಿಸ್ತಾನ ಸರಕಾರವು ಸಹಾಯ ಮಾಡಬೇಕು ಎಂಬ ಅಪೇಕ್ಷೆ ಇದ್ದಂತಾಯಿತು. ಆದರೆ ಇದು ಕೂಡ ಸಾಧ್ಯವಿಲ್ಲ. ಯಾಕಂದರೆ ಕೇಂದ್ರ ಸರಕಾರದ ಒಟ್ಟು ಉತ್ಪನ್ನವು ೧೬೫೨॥ ಲಕ್ಷ ರೂ. ಗಳಷ್ಟಿದ್ದು ವೆಚ್ಚವು ೯೩೩॥ ಲಕ್ಷ ರೂ. ಗಳಷ್ಟಿರುವದರಿಂದ ಪ್ರತಿವರ್ಷ ಸುಮಾರು ೮೧೯ ಲಕ್ಷ ರೂ. ಗಳು ಉಳಿತಾಯವಾಗುವವು. ವರ್ಷಕ್ಕೆ ೮ ಕೋಟಿ ರೂ. ಗಳ ಉಳಿತಾಯವಾದ ಮೇಲೆ ಪೆದರಬೇಕಾದ ಕಾರಣವಿಲ್ಲೆಂದು ಯಾರಾದರೂ ಅಜ್ಞರು ನುಡಿಯಬಹುದು. ಇಡೀ ರಾಷ್ಟ್ರದ ಜನರ ನೆಮ್ಮದಿಗಾಗಿ, ಅವರ ಶಿಕ್ಷಣ ಪ್ರಗತಿಗಳಿಗಾಗಿ ಈ ಹಣವು ಒಂದು ತಿಂಗಳಿಗೆ ಕೂಡ ಸಾಲುವದಿಲ್ಲ. ಅಲ್ಲದೆ ಈ ಹಣವು ಕೂಡ ಕೇಂದ್ರ ಸರಕಾರಕ್ಕೆ ಉಳಿಯದೆ ಅದಿನ್ನೂ ಸಾಲ ಮಾಡಬೇಕಾಗುವ ಪರಿಸ್ಥಿತಿಯಿದೆಂಬುದನ್ನು ಮುಂದೆ ಕಂಡುಕೊಳ್ಳಬಹುದು.

ತಲೆಧಾರದ ಸಂರಕ್ಷಣೆ ವೆಚ್ಚ.

ಆಟಂಬಾಂಬಿನ ಇಂದಿನ ಯುಗದಲ್ಲಿ ಸ್ವಾತಂತ್ರ್ಯವು ಪ್ರತ್ಯೇಕವಾಗಿರದೆ ಪರಸ್ಪರಾವಲಂಬಿಯಾಗಿದೆ ಯಾರ ಹಂಗಿನಲ್ಲಿಯೂ ನಾವಿರೆವು ಎಂದು ಹೇಳಲು ರಶಿಯಾದಂಥ ಬಲಾಢ್ಯ ರಾಷ್ಟ್ರಕ್ಕೂ ಸಾಧ್ಯವಿಲ್ಲೆಂಬಲಿಕ ಬಡಪಾಕಿಸ್ತಾನದ ಪಾಡೇನು? ಅಖಂಡ ಭಾರತದ ಗಡಿಪ್ರದೇಶಗಳನ್ನು ರಕ್ಷಿಸುವುದಕ್ಕಾಗಿ ಬ್ರಿಟಿಷರು ಪ್ರತಿವರ್ಷ ೨೫ ಕೋಟಿ ರೂ. ಗಳನ್ನು ವೆಚ್ಚಮಾಡುತ್ತಿದ್ದರು. ಇದರಲ್ಲಿ ಅರ್ಧಹಣವು ವಾಯುವ್ಯಗಡಿನಾಡನ್ನು ರಕ್ಷಿಸಲು ವೆಚ್ಚವಾಗುತ್ತಿತ್ತು. ಈಗ ಪಾಕಿಸ್ತಾನದಲ್ಲಿ ಸೇರಿದ ಚಿತಗಾಂಗ ಪ್ರದೇಶದಲ್ಲಿ ವೈರಿಗಳ ಆಕ್ರಮಣದ ಭಯವಿದೆಂದು ಮೊನ್ನಿನ ಜಾಗತಿಕ ಯುದ್ಧದಲ್ಲಿ ಕಂಡುಬಂದಿದೆ. ಆದ್ದರಿಂದ ಈ ಎರಡೂ ಗಡಿನಾಡುಗಳನ್ನು ರಕ್ಷಿಸಬೇಕಾದರೆ ಪಾಕಿಸ್ತಾನ ಸರಕಾರಕ್ಕೆ ಪ್ರತಿವರ್ಷ ೩೦ ಕೋಟಿ ರೂ. ಗಳು ಬೇಕಾಗುವವು, ಇದಲ್ಲದೆ ಸಮೀಪದ ದೊಡ್ಡರಾಷ್ಟ್ರವಾದ ಹಿಂದುಸ್ತಾನದ ಹೆದರಿಕೆಯನ್ನು ಕಳೆದುಕೊಳ್ಳಲು ಗಡಿಪ್ರದೇಶದಲ್ಲಿ ಅದ್ಭುತ ಸಿದ್ಧತೆಯನ್ನು ಆ ರಾಷ್ಟ್ರವು ಇತಬೇಕ್ತಾದೀತು. ಈ ಎರಡೂ ರಾಷ್ಟ್ರಗಳ ನಡುವಿನ ಭೂಮಿಯು ಸಮುದ್ರದೇಶವಾದ್ದರಿಂದ ಮ್ಯಾಜಿನೋದಂಥ ರಕ್ಷಣಾ ವ್ಯೂಹವನ್ನು ರಚಿಸಬೇಕಾದೀತು ಸಂರಕ್ಷಣೆಯ ಈ ಭಾರದಿಂದ ಬಡ ಪಾಕಿಸ್ತಾನವು ಕುಸಿದು ಹೋಗಲಾರದೆ?

ಪಾಕಿಸ್ತಾನದ ಆರ್ಥಿಕಪರಿಸ್ಥಿತಿ ಈಗ ಸೂಕ್ಷ್ಮವಾಗಿದ್ದರೇನು, ಇನ್ನು ಮುಂದೆ ಉದ್ಯೋಗಾಭಿವೃದ್ಧಿ ನಡೆಸಿ ಅದನ್ನು ಸುಧಾರಿಸಿಕೊಳ್ಳಬಹುದಲ್ಲ ಎಂದು ವಾದಿಸುವದೂ ಸರಿಯಾಗಲಾರದು. ಹೆಚ್ಚಿಗೆ ಗಿರಣಿಗಳುಳ್ಳ ಬಂಗಾಲದ ಪ್ರದೇಶವೆಲ್ಲ ಈಗ ಹಿಂದುಸ್ತಾ

ನಕ್ಕೆ ಸೇರಿಹೋಗಿದೆ. ಇಡೀ ಬಂಗಾಲದ ಸಮೃದ್ಧಿಯನ್ನು ಕಂಡೇ ಲೀಗಿನವರು ಅದನ್ನು ಕಬಳಿಸಬೇಕೆಂದಿದ್ದರು. ಅದರೆ ಕೈಗೆಬಂದ ತುತ್ತು ಬಾಯಿಗೆ ಬರಲಿಲ್ಲ. ಇನ್ನು ಸ್ವತಂತ್ರವಾಗಿ ಹೊಸ ಉದ್ಯೋಗಗಳನ್ನು ಪ್ರಾರಂಭಿಸಲು ಮತ್ತು ತನ್ಮೂಲಕ ದೇಶದ ಉತ್ಕರ್ಷವನ್ನು ಸಾಧಿಸಬೇಕಾದರೆ ದೇಶದಲ್ಲಿ ಖನಿಜ ಸಂಪತ್ತಾದರೂ ವಿಪಲವಾಗಿರಬೇಕು. ವಿಧಿವಿಲಾಸವೆಂಬಂತೆ ಪಾಕಿಸ್ತಾನದ ನೆರಹೊರೆಯ ಪ್ರಾಂತಗಳಲ್ಲಿ ಖನಿಜ ಸಂಪತ್ತು ವಿಪುಲವಾಗಿದೆ ಹೊರತು ಪಾಕಿಸ್ತಾನದಲ್ಲಿ ಅದು ಕಾಣಬರುವದಿಲ್ಲ. ಅಲ್ಲಿಯೂ ಪಾಕಿಸ್ತಾನಕ್ಕೆ ನಿರಾಸೆಯೆ.

ಹಟದಿಂದ ಮುಸ್ಲಿಂರು ಸಾಧಿಸಿದ್ದೇನು?

ಅಂದಮೇಲೆ ಭಾರತದ ಭವ್ಯ ಸ್ವರೂಪವನ್ನು ವಿಕೃತಗೊಳಿಸಿ ದುರಾಗ್ರಹದಿಂದ ಪಾಕಿಸ್ತಾನವನ್ನು ಪಡೆದುಕೊಂಡ ನಮ್ಮ ಮುಸ್ಲಿಂ ಬಾಂಧವರು ಸಾಧಿಸಿದ್ದಾದರೂ ಏನು? ಎಂದು ಯಾರಾದರೂ ಕೇಳಬಹುದು. ಪಾಕಿಸ್ತಾನ ದೊರೆಯಿತು ಎಂಬ ಒಣ ಸಮಾಧಾನದ ಹೊರತು ಮುಸ್ಲಿಂರಿಗೆ ಬೇರೇನೂ ದೊರೆತಿಲ್ಲೆಂದು ಖೇದದಿಂದ ಹೇಳಬೇಕಾಗುವದು. ಅಲ್ಪಸಂಖ್ಯಾಕರ ನೆವವನ್ನು ಮುಂದೆ ಮಾಡಿ ಪಾಕಿಸ್ತಾನವನ್ನು ಪಡೆದುಕೊಂಡವರು ಅಲ್ಪಸಂಖ್ಯಾಕರ ಪ್ರಶ್ನೆಯನ್ನೂ ಬಗೆಹರಿಸಲಿಲ್ಲ. ತಮ್ಮ ಒಟ್ಟು ಜನಸಂಖ್ಯೆಯ ಮೂರರಲ್ಲೊಂದು ಪಾಲನ್ನು ಹಿಂದುಸ್ತಾನದಲ್ಲಿ ಬಿಟ್ಟುಕೊಟ್ಟಿದ್ದಾರೆ ಈಗ ಇವರನ್ನು ರಕ್ಷಿಸಲೆಂದು ಹಿಂದು-ಮುಸ್ಲಿಂರು ಪರಸ್ಪರ ಸೌಹಾರ್ದದಿಂದ ನಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಪಾಕಿಸ್ತಾನ ಘಟನಾಸಮಿತಿಯ ಅಧ್ಯಕ್ಷರಾದ ಬ್ಯಾ ಜಿನ್ನಾರು ತಮ್ಮ ರಾಜ್ಯದಲ್ಲಿಯ ಅಲ್ಪಸಂಖ್ಯಾಕರಿಗೆ ಎಲ್ಲ ಹಕ್ಕು ಬಾಧ್ಯತೆಗಳನ್ನು ಕೊಡುತ್ತೇವೆ ಯಾರೂ ಹೆದರಬೇಕಾಗಿಲ್ಲೆಂದು ಈಗ ಹೇಳಿದ್ದಾರೆ ಹಿಂದಕ್ಕೆ ಕಾಂಗ್ರೆಸಿನವರು ಇಷ್ಟೇ ಮಾತನ್ನು ಹೇಳಿದಾಗ ಒಪ್ಪದಿದ್ದ ಬ್ಯಾ. ಜಿನ್ನಾರ ಇಂದಿನ ಈ ನುಡಿಗಳನ್ನು ಅಲ್ಲಿಯ ಅಲ್ಪಸಂಖ್ಯಾಕರು ಹಿಂದು ಮುಂದು ಯೋಚಿಸದೆ ನಂಬುವದಾದರೂ ಎಂತು? ಪಾಕಿಸ್ತಾನದಲ್ಲಿಯೆ ನೂರಕ್ಕೆ ೩೦ ರಷ್ಟಿರುವದರಿಂದ ಇವರನ್ನು ಕಡೆಗಣಿಸಲಿಕ್ಕೆ ಬಾರದು. ಆರ್ಥಿಕ ದೃಷ್ಟಿಯಲ್ಲಿಯೂ ಪಾಕಿಸ್ತಾನಕ್ಕೆ ಹಾನಿಯಾಯಿತೆ ಹೊರತು ಲಾಭವಾಗಲಿಲ್ಲ. ತನ್ನ ದೇಶದ ಗಡಿಗಳನ್ನು ತಾಯ್ದುಕೊಳ್ಳಲು ಸಮರ್ಥವಿಲ್ಲದ ಈ ರಾಷ್ಟ್ರದ ಆಕ್ರಮಣಕ್ಕಾಗಿ ಪರರಾಷ್ಟ್ರಗಳು ಹೊಂಚು ಹಾಕತಕ್ಕವೆ. ಇದನ್ನು ಯುದ್ಧ ಹೂಡಿ ಆಕ್ರಮಿಸದಿದ್ದರೂ ಆರ್ಥಿಕ ಸಹಾಯ ನೀಡುವ ನೆವದಿಂದ ಪರರಾಷ್ಟ್ರಗಳು ತಮ್ಮ ವರ್ಚಸ್ಸನ್ನು ಪಾಕಿಸ್ತಾನದಲ್ಲಿ ಸ್ಥಿರವಾಗಿ ಸ್ಥಾಪಿಸಬಲ್ಲವು. ಪಾಕಿಸ್ತಾನದ ಆಡಳಿತೆಯ ಯಂತ್ರವನ್ನು ಸಾಗಿಸಿಕೊಂಡು ಹೋಗುವ ಸಮರ್ಥರು ಅಲ್ಲಿಯ ಮುಸ್ಲಿಂರಲ್ಲಿ ಇಲ್ಲದ ಮೂಲಕ ಅಂಥವರನ್ನು ಕೂಡ ಅವರು ಹೊರಗಿನಿಂದಲೇ ಪಡೆಯಬೇಕಾಗುವದು. ಹೀಗೆ ಹೆಜ್ಜೆಹೆಜ್ಜೆಗೆ ಹೆರವರ ಮುಖ ನೋಡುವ ಪ್ರಸಂಗವನ್ನಿಟ್ಟುಕೊಂಡ ಪಾಕಿಸ್ತಾನದ ಸ್ವಾತಂತ್ರ್ಯವೆಂದು ಬಾಳಬಲ್ಲದೊ? ಇರಲಿ, ಪರರಾಷ್ಟ್ರಗಳ ನೆರವು ಪಡೆಯಬೇಕಾದಲ್ಲಿ ಮುಸ್ಲಿಂ ರಾಷ್ಟ್ರಗಳ ನೆರವನ್ನೇ ಪಡೆದುಕೊಳ್ಳುವೆವು. ಎಂದು ಅವರು ಹಟತೊಡಲೂ ಬರುವಂತಿಲ್ಲ. ಆ ಮುಸ್ಲಿಂ ರಾಷ್ಟ್ರಗಳಿಲ್ಲ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಾಳಬೇಕಾದರೆ ಸಾಕುಬೇಕಾಗಿದೆ.

ಇಷ್ಟಾಗಿ ಪಾಕಿಸ್ತಾನವು ಒತ್ತಟ್ಟಿಗೇ ಅಖಂಡವಾಗಿರದೆ, ಪೂರ್ವ ಮತ್ತು ಪಶ್ಚಿಮ ಎಂದು ಎರಡು ಹೋಳಾಗಿದೆ ಈ ಎರಡೂ ಪ್ರದೇಶಗಳಲ್ಲಿಯು ಸಂಬಂಧವನ್ನು ಹಿಂದುಸ್ತಾನದ ಸಹಕಾರವಿಲ್ಲದೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಇದಂತೂ ಇರಲಿ, ಪಾಕಿಸ್ತಾನದಲ್ಲಿಯೆ ಇರುವ ಗಡಿನಾಡು ಪ್ರಾಂತವು ಪಾಕಿಸ್ತಾನವನ್ನು ಸೇರುವದಿಲ್ಲೆಂದು ಪ್ರತಿಭಟಿಸುತ್ತಿದೆ, ಇಷ್ಟೆಲ್ಲ ವಿಘ್ನಗಳನ್ನೆದುರಿಸಿ ಪಾಕಿಸ್ತಾನವೆಂತು ಬಾಳಬಲ್ಲದು

ಜಾತೀಯ ಜಗಳ

ಪಾಕಿಸ್ತಾನ, ಹಿಂದೂಸ್ತಾನದಲ್ಲಿ ತಿಕ್ಕಾಟ

ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಲಿಯಾಖತ್ ಅಲಿಖಾನರೂ, ಮತ್ತೊಬ್ಬ ಮಂತ್ರಿಗಳಾದ ಗಜ್ನಫರ ಅಲಿಖಾನರೂ ಅಸತ್ಯ ಪ್ರಚಾರಕ್ಕಾರಂಭಿಸಿರುವರು. ಭಾರತ ಪಾಕಿಸ್ತಾನಗಳೆಲ್ಲಾದ ಒಡಂಬಡಿಕೆಗಳನ್ನು ಭಾರತವು ಪಾಲಿಸುತ್ತಿಲ್ಲ ಪೂರ್ವ ಪಂಜಾಬಿನಲ್ಲಿ ಭಾಗಗಳಲ್ಲಿ ಮುಸಲ್ಮಾನರನ್ನು ನಾಪಾವಶೇಷ ಮಾಡಲಾಗುತ್ತಿದೆ. ಪಾಕಿಸ್ತಾನದ ಸುತ್ತಮುತ್ತಲೂ ಹಾಳುಮಾಡುವ ಶಕ್ತಿಗಳೇ ಅವರಿಸಿವೆ ಎಂಬುದೇ ಅವರ ವಾದ ಸರಣಿ. ಇದಕ್ಕೆ ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಹರಲಾಲರು ಜವಾಬು ಕೊಟ್ಟಿರುವರು. "ನಾವು ಪಾಕಿಸ್ತಾನದ ಶತ್ರುಗಳಲ್ಲ ನಾವು ಅದನ್ನು ಹಾಳುಮಾಡಲಿಚ್ಛಿಸುವುದಿಲ್ಲ. ಭಾರತ ಪಾಕಿಸ್ತಾನಗಳೆಲ್ಲಾದ ಒಡಂಬಡಿಕೆಗಳನ್ನು ಪಾಲಿಸುತ್ತಲೇ ಬಂದಿದ್ದೇವೆ. ಹಿಂದೂಸ್ತಾನಕ್ಕಿಂತ ಪಾಕಿಸ್ತಾನದಲ್ಲೇ ಹೆಚ್ಚು ಜನರು ಸತ್ತಿರುವರು. ಅಲ್ಲಿನ ಜುಲುಮೆಯೇ ಬಹಳ ಇಂಥಾ ಹೇಳಿಕೆಗಳಿಂದ ಶಾಂತಿಯು ಲಭಿಸಲಾರದು"

ಹಿಂಸಾಕೃತ್ಯಗಳನ್ನಾರಂಭಿಸಿದವರು ಲೀಗಿನವರು. ಆರಂಭಿಸಿ ಹಿಂಸಾ ಶಕ್ತಿಗಳನ್ನು ಒಂಚನದಲ್ಲಿಡಲು ಸಾಧ್ಯವಿಲ್ಲದೆ ಕಕ್ಕಾ ಬಿಕ್ಕಿಯಾಗಿದ್ದಾರೆ. ಪಾಕಿಸ್ತಾನದ ಸೈನಿಕರು ಪೋಲೀಸರು ಕೊಲೆ ಮತ್ತು ಸುಲಿಗೆಗಳನ್ನು ಮಾಡಿ ಅಪಾರ ಹಾನಿಗೀಡು ಮಾಡಿದ್ದಾರೆ. ಇಷ್ಟುಮಾಡಿಯೂ ದೇಶ ಪರದೇಶಗಳಲ್ಲಿ ಇಂಥಾ ಅಪಪ್ರಚಾರ ಮಾಡುವ ಕಾರಣವನ್ನು ಊಹಿಸುವುದನಾವಶ್ಯಕ ಪಾಕಿಸ್ತಾನದ ಬುನಾದಿಯೇ ಹಿಂಸೆ ಅತ್ಯಾಚಾರಗಳ ಮೇಲಿದ್ದು ಅದರ ಅಸ್ತಿತ್ವವನ್ನು ಅಪಪ್ರಚಾರದಿಂದ ಸ್ಥಾಯಿಯಾಗಿಡಲು ಪ್ರಯತ್ನಿಸುತ್ತಿರುವರು. ಜಿನ್ನಾ, ಲಿಯಾಕತ್‌ರವರು ಮುಸಲ್ಮಾನರ ಕೊಲೆ ಸುಲಿಗೆ ವಿಷಯ ಹೇಳಿಕೆ ಕೊಡುತ್ತಿರುವವರಾಗಲಿ ಲಕ್ಷಾಂತರ ಹಿಂದೂಗಳ ಮೇಲೆ ಘೋರ ಅತ್ಯಾಚಾರ ನಡೆಸಿದ ತಮ್ಮ ಸೈನಿಕರ ಪೋಲೀಸರ ಸ್ವದರ್ಮ ಮುಸಲ್ಮಾನರ ಅಪಕೃತ್ಯಗಳನ್ನು ಒಂದು ಶಬ್ದದಲ್ಲಿಯೂ ಖಂಡಿಸಿಲ್ಲ. ಮಹಾತ್ಮ ಗಾಂಧಿ, ನೆಹರೂ, ಪಟೇಲರವರು ಶಾಂತ ಮಾರ್ಗಗಳಿಂದ ಎಲ್ಲರನ್ನೂ ಸಂರಕ್ಷಿಸಲು ತೊಡಗಿದ್ದಾರೆ. ಪಾಕಿಸ್ತಾನವು ಮುಸಲ್ಮಾನರನ್ನು ಸಂರಕ್ಷಿಸಲು ಮಾತ್ರ ತೊಡಗಿದೆ. ಈ ಜಾತೀಯವಾದವು ಆರ್ಥಿಕ ರಚನೆ ಮಾಡುವಾಗ ನಾಶವಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಯಾವ ಜಾತಿಯವರಿಗಾಗಲಿ ಬೇಕಾದುದು ಅನ್ನ ಮತ್ತು ಬಟ್ಟೆ. ಇದನ್ನು ಪೂರೈಸದಿದ್ದಲ್ಲಿ ಎಲ್ಲರೂ ವಿರುದ್ಧವಾಗುವರು.

ಮದ್ರಾಸು ಶಾಸನಸಭೆ—

ಗಾಂಧೀಜಿ ಅಭಿನಂದನೆ:— ಮದ್ರಾಸು ಶಾಸನಸಭೆಯ ಮೇಲ್ಮನೆ, ಕೆಳಮನೆಗಳಲ್ಲಿ ಗಾಂಧೀಜಿಯವರೇ ಸ್ವರಾಜ್ಯವನ್ನು ದೊರಕಿಸಿದ ಮೂಲಪುರುಷರಾದ ಕಾರಣ ಅವರನ್ನಭಿನಂದಿಸುವ ತೀರ್ಮಾನವು ಸರ್ವಾನುಮತದಿಂದ ಅಂಗೀಕೃತವಾಯಿತು. ಲೀಗಿನ ಮುಸಲ್ಮಾನರೂ ಕೂಡ ಈ ಅಭಿನಂದನೆಯಲ್ಲಿ ಭಾಗವಹಿಸಿದರು.

— ಹರಿಜನರ ಮೇಲೆ ಅತ್ಯಾಚಾರ —

ಒಳ್ಳಾರಿ ತಾಲೂಕು ಕುರುಗೋಡು ಫಿರ್ಕಾ ಗುತ್ತಿಗನೂರಲ್ಲಿ ಹರಿಜನರಮೇಲೆ ಊರ ರೈತರು ಯೇರಿಹೋಗಿ ಅವರನ್ನು ಚನ್ನಾಗಿ ಥಳಿಸಿ ಗಾಯಗೊಳಿಸಿರುವರೆಂದೂ, ಈ ಘಟನೆಯು 17 ನೆಯ ತಾ. ಸಾಯಂಕಾಲ 18 ನೆಯ ತಾ. ಪ್ರಾತಃಕಾಲವಾಯ್ತೆಂದೂ ತಿಳಿದು ಬಂದಿದೆ.

ಹೊಸಪೇಟೆ ತಾಲೂಕು ಬೈಲುವದ್ದಗೇರಿಯಲ್ಲಿಯೂ ಕಳೆದೆರಡು ತಿಂಗಳುಗಳಲ್ಲಿ ಇಂಥಾ ಒಂದೆರಡು ಘಟನೆಗಳಾಗಿವೆ. ಸರ್ಕಾರದವರು ಹರಿಜನರಿಗೆ ರಕ್ಷಣೆ ಕೊಡಲು ಯಾವ ಚರ್ಯೆಗಳನ್ನು ತೆಗೆದುಕೊಂಡರೋ ಗೊತ್ತಾಗಿಲ್ಲ. ಹರಿಜನರು ಯಾವರೀತಿಯಿಂದಲೂ ಮುಂದೆ ಬರಬಾರದೆಂಬುದು ಕೆಲ ಹಿಂದೂಗಳ ಅಭೀಚ್ಛೆ.

— ಉಜ್ಜಿನಿ —

11 ನೆಯ ತಾ. ಮೈಸೂರು ಸತ್ಯಾಗ್ರಹದಲ್ಲಿ ಭಾಗವಹಿಸಲು ರಾಣಿಬೆನ್ನೂರಿನ 55 ಸತ್ಯಾಗ್ರಹಿಗಳನ್ನು ಭದ್ರಾಸಾಗರದಿಂದ ಪೋಲೀಸರು ಜಗಲೂರಿಗೆ ಕರೆತಂದು ಅವರಿಗೆ ಆಹಾರವನ್ನು ಕೂಡಕೊಡದೆ ಗಡಿ ಮಾಕುಂಟೆಗೆ ತಂದರು, ಪೋಲೀಸರು ಮುಖತಪ್ಪಿಸಿ ಓಡಿಹೋಗಿದ್ದಾರೆ. ಗುರುವಾರ ಸಾಯಂಕಾಲ ಆ ಸತ್ಯಾಗ್ರಹಿಗಳು ಇಲ್ಲಿಗೆ ಬಂದು ಸಾಯಂಕಾಲ ಧ್ವಜ ಮೆರವಣಿಗೆಯನ್ನು ನಿರವೇರಿಸಿದರು. ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಶ್ರೀ ಗುರುಬಸಪ್ಪನವರ ಮನೆಯಲ್ಲಿ ಅವರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಶುಕ್ರವಾರ ಪ್ರಾ. ಬಹಿರಂಗ ಸಭೆಯಲ್ಲಿ (ಶ್ರೀ ಗುರುಬಸಪ್ಪನವರು ಅಧ್ಯಕ್ಷರು) ಗರಿಗದ ಶ್ರೀ ಶಂಕರಪ್ಪನವರು, ವೀರಣ್ಣನವರು ಆಗಷ್ಟ ಆಂದೋಳನದ ಈ ಸೂರು ದುರಂತವನ್ನು ಕುರಿತು ಭಾಷಣಮಾಡಿ ರಾಷ್ಟ್ರೀಯ ಗೀತೆಗಳನ್ನು ಹಾಡಿದರು.

— ಅರಳಿಗನೂರು (ಸಿರುಗುಪ್ಪೆ) —

ಇಲ್ಲಿ ಸ್ವಾತಂತ್ರೋತ್ಸವವು ವೈಭವವಾಗಿ ನಿರವೇರಿತು. 14 ನೆಯ ತಾ. ರಾತ್ರಿ ಶಾಲೆ ಚಾವಡಿಗಳ ಮೇಲೆ ರಾಷ್ಟ್ರಧ್ವಜದ ಆರೋಹಣವಾಯಿತು. ನಂತರ ವಿಲೇಜು ಕಮಿಟಿ ಪ್ರೆಸಿಡೆಂಟು ಬಳೆ ಬಸಪ್ಪನವರು ಡಿಪೋಕೀಪರ್ ವಿರುಪಾಕ್ಷಪ್ಪನವರು, ರೆಡ್ಡಿ ಧರ್ಮನ ಗೌಡರು, ಕರಣಂ ಹಂಪಯ್ಯನವರು, ಮುಸಿನಿ ಬಸಪ್ಪನವರು, ರಾಮುಪ್ಪನವರು ಮತ್ತು ಇತರ ಮಹನೀಯರು ರೈತರಿಂದೊಡಗೂಡಿದ ಮೆರವಣಿಗೆಯು ಶಾಲಾಬಾಲಕರು ಮಹಾತ್ಮರ ಫೋಟೋ, ಬಾವುಟ ವೈಭವಗಳಿಂದ ಊರಬೀದಿಗಳಲ್ಲಿ ಸಾಗಿತು. ಶಾಲೆಯ ಮುಂದೆ ಬಹಿರಂಗಸಭೆಯಲ್ಲಿ ರೆಡ್ಡಿ, ಕರಣಂ, ಬಳೆಬಸಪ್ಪ ವಗೈರೆ ಮಹನೀಯರು ಸ್ವಾತಂತ್ರ್ಯ ಶಾಲಾಭಿವೃದ್ಧಿ ಸಂಬಂಧ ಭಾಷಣ ಕೊಟ್ಟರು. ಬಡಜನರಿಗೆ ಶ್ರೀ ವಿರುಪಾಕ್ಷಪ್ಪನವರು ಅನ್ನದಾನ ಮಾಡಿಸಿದರು.

— ಕೆಲಿಗಿ —

ಮೈಸೂರು ಅರಮನೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಇಲ್ಲಿಂದ ಸತ್ಯಾಗ್ರಹಿಗಳ ತಂಡವೊಂದು 11 ನೆಯ ತಾರೀಕು ಹೊರಟಿತು. ಶ್ರೀ ಎಸ್. ಬಿ. ಹಾಲಪ್ಪನವರ ಮುಖಂಡತ್ವದಲ್ಲಿ 11 ನೆಯ ತಾ. ಹರಿಹರದ ತಾಲೂಕು ಆಫೀಸಿನ ಮುಂದೆ ಧ್ವಜವಂದನೆ ಮಾಡಿ ಮುಂದುವರಿದು ಅಲ್ಲಿನ ಹೆಂಡದಂಗಡಿಯ ಮುಂದೆ ಪಿಕೆಟಿಂಗ್ ನಡೆಸಿದರು. 12 ನೆಯ ತಾ. ಡಾವಣಗೆರೆಯನ್ನು ತಲಸಿ ೧೧ ಗಂಟೆಗೆ ಮುನಿಸಿಪಲ್ ಮತ್ತು ಮ್ಯಾಜಿಸ್ಟ್ರೇಟ ಕೋರ್ಟುಗಳ ಮುಂದೆ ಪಿಕೆಟಿಂಗ್ ನಡೆಸಿದರು. ಗಾಂಧಿ ಮೈದಾನದಲ್ಲಿ ಧ್ವಜವಂದನೆ ಮಾಡಿ ಅರಣ್ಯ ಸತ್ಯಾಗ್ರಹಕ್ಕೆ ಹೊರಟರು.

ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಆಂಧ್ರ ಪ್ರಾಂತದಲ್ಲಿ ಸೇರಿಸಬೇಕೆಂಬ ತೀರ್ಮಾನವನ್ನು ಖಂಡಿಸಿ ಭಾರತ ಕರ್ನಾಟಕದ ಆಂಧ್ರ ದುರೀಣರಿಗೆ ತಿಳಿಸಲು ಜಿಲ್ಲೆಯ ಪ್ರತಿ ಹಳ್ಳಿ ನಗರಗಳಲ್ಲಿ ಸಭೆ ನಡಾಡಲು ಶ್ರೀ ರಂಗನಗೌಡರು ವಿನಂತಿಸುತ್ತಾರೆ.

— ಹುಕ್ಕೇರಿಕರ ಸತ್ಕಾರ ಸಮಿತಿ-ಧಾರವಾಡ —

ಅಕ್ಟೋಬರ್ 21 ಕ್ಕೆ ಶ್ರೀ ಹುಕ್ಕೇರಿಯವರಿಗೆ ೬೦ ವರ್ಷಗಳು ಪೂರ್ಣವಾಗುವವು ರಾ. ಶ್ರೀಯವರು ಕರ್ನಾಟಕದ ಹೊಸ ಯುಗದ ನಾಯಕರಲ್ಲಿ ಒಬ್ಬರು ಅವರು ರಾಷ್ಟ್ರಕ್ಕಾಗಿ ಮಾಡಿದ ತ್ಯಾಗ ಸಹಿಸಿದ ಕಷ್ಟ. ನಷ್ಟ ಮತ್ತು ಸಲ್ಲಿಸಿದ ಸೇವೆಗಳಿಗಾಗಿ ಪ್ರೀತ್ಯಾದರಗಳನ್ನು ವ್ಯಕ್ತಪಡಿಸುವದು ಜನತೆಯ ಕರ್ತವ್ಯ. ಈ ಉದ್ದೇಶಕ್ಕೆ ಕನಿಷ್ಟ 3000 ರೂ. ಗಳು ಬೇಕೆಂದು ಸಮಿತಿಯು ಅಂದಾಜು ಮಾಡಿದೆ. ರಾ. ಶ್ರೀಯವರ ರಾಜಕೀಯ ಮತ್ತು ಇತರ ಮಿತ್ರರು ಇದಕ್ಕೆ ಸಹಾಯ ಮಾಡಲು ಕೋರುತ್ತಾರೆ.

ಒಡಕು-ಮತಭೇದ

(2 ನೆಯ ಪುಟದಿಂದ ಮುಂದುವರಿದಿದೆ)

ಅಂದರೆ ನಮ್ಮ ನಮ್ಮಲ್ಲಿಯ ಅಂತಃಕಲಹ, ಒಡಕು ಮತಭೇದಗಳ ಪರಿಣಾಮವಾಗಿ ಅವರಿಗೆ ಭಾರತವನ್ನು ಗೆಲ್ಲಲು ಸಾಧ್ಯವಾದಂತೆ, ತಮ್ಮ ತಮ್ಮಲ್ಲಿಯ ಇಂದಿನ ಅಂತಃಕಲಹ, ಒಡಕು, ಮತಭೇದಗಳ ಪರಿಣಾಮವಾಗಿ, ಭಾರತವನ್ನು ತಮ್ಮ ಕಪಿ ಮುಷ್ಟಿಯಿಂದ ಬಿಟ್ಟುಕೊಡಬೇಕಾಯಿತು. ಅಂತೆಯೇ ಈ ಒಡಕು ಮತಭೇದಗಳು, ಯಾವ ರಾಷ್ಟ್ರಗಳಲ್ಲಿಯಾದರೂ ಇರತಕ್ಕವೇ; ಅನಿವಾರ್ಯವಾದುವೇ.

ಹಾಗಾದರೆ ಇವುಗಳಿಂದ ಪಾರಾಗಿ ರಾಷ್ಟ್ರವು ಮುನ್ನಡಿಯುವದೆಂತು? ಇಂದು ಜಗತ್ತನ್ನೇ ವ್ಯಾಪಿಸಿರುವ ಈ ರೈತ ಕೂಲಿಕಾರ ಪ್ರಶ್ನೆಯ ಬಗ್ಗೆ ಎಲ್ಲ ರಾಷ್ಟ್ರಗಳಲ್ಲಿಯೂ ಮತಭೇದವಿದೆ. ಮತ್ತು ಅದರಿಂದ ರಾಷ್ಟ್ರರಾಷ್ಟ್ರಗಳಲ್ಲಿ ಒಡಕುಂಟಾಗಿದೆ. ರೈತ ಕೂಲಿಕಾರ ಎಂದೊಡನೆ ಎಲ್ಲರ ದೃಷ್ಟಿ ಸಹಜವಾಗಿ ರಶಿಯದ ಕಡೆಗೆ ಹೊರಳುತ್ತದೆ. ಈ ರೈತ ಕೂಲಿಕಾರ ಆಂದೋಲನಕ್ಕೆ ಮೂಲ ಸ್ಥಾನ ಇದು ರಶಿಯಾ ಆಗಿದೆ. ಸೋಶಲಿಷ್ಟ, ಕಮ್ಯೂನಿಷ್ಟ ಎಂಬೆರಡು ರಶಿಯದ ತತ್ವ ಪ್ರತಿವಾದಕ ಪಕ್ಷಗಳು ಇಂದು ಪ್ರಪಂಚದ ತುಂಬೆಲ್ಲ ಹರಡಿ ಪ್ರಚಾರ ಕಾರ್ಯ ನಡೆಸುತ್ತಿವೆ. ಇಂಗ್ಲೆಂಡು ಅಮೆರಿಕಾಗಳಂತಹ ವಾಲಘನವಾದಿ ಸಾಮ್ರಾಜ್ಯವಾದಿ ರಾಷ್ಟ್ರಗಳಲ್ಲಿಯೂ ಇಂದು ಈ ಪಕ್ಷದ ಸದಸ್ಯರ ಸಂಖ್ಯೆ ಭರದಿಂದ ಬೆಳೆಯುತ್ತಿದೆ. ಹೀಗೆ ಪ್ರತಿ ದೇಶದಲ್ಲಿಯೂ ಭಿನ್ನ ಭಿನ್ನ ಪಕ್ಷಪಂಗಡಗಳು ಇದ್ದೇ ಇವೆ. ಎಂದ ಬಳಿಕ ಭಿನ್ನ ಭಿನ್ನ ಧ್ಯೇಯ ಗುರಿಗಳು ಇರಬೇಕಾದುದು ಸ್ವಾಭಾವಿಕ. ಹಾಗೆಯೇ ಭಿನ್ನ ಭಿನ್ನ ಅಭಿಪ್ರಾಯವೂ ಇರುವದೂ ಅಷ್ಟೇ ಸಹಜ.

ತಮ್ಮ ಧ್ಯೇಯ ತತ್ವ ಗುರಿ ಅಭಿಪ್ರಾಯ ಏನೇ ಇರಲಿ ತಮ್ಮ ದೇಶದಲ್ಲಿಯ ರಾಜ ಕಾರಣ, ಸಮಾಜ ಧರ್ಮ ನೊದಲಾದವುಗಳ ಯೋಗಕ್ಷೇಮದ ವಿಚಾರ ಬಂದಾಗ ತಮ್ಮ ತಮ್ಮ ಭಿನ್ನಾಭಿಪ್ರಾಯಗಳಿಗಾಗಿ ಎಷ್ಟೇತೀವ್ರವಾಗಿ ಹೋರಾಡಲಿ, ಆದರೆ ಪರದೇಶಗಳ ಸಂಗಡ ಸ್ವದೇಶದ ಸಂಬಂಧ ನೊದಲಾದ ಅಂತರ್ರಾಷ್ಟ್ರೀಯ ವಿಚಾರ ಬಂದಾಗ ಯಾವ ದೇಶದ ಜನಾಂಗವು ತಮ್ಮ ತಮ್ಮೊಳಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಅಷ್ಟರಮಟ್ಟಿಗೆ ಆ ಅಭಿಪ್ರಾಯಗಳನ್ನು ಬದಿಗಿಟ್ಟು, ದೇಶಕಲ್ಯಾಣ ದೃಷ್ಟಿಯಿಂದ ಸಕಲ ಪಕ್ಷಪಂಗಡಗಳ ಒಕ್ಕೂಟದಿಂದ ಆ ಅಂತರ್ರಾಷ್ಟ್ರೀಯ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಲು ಯತ್ನಿಸಬೇಕು ಅಂದರೇನೇ, ಸ್ವದೇಶದ ಕಲ್ಯಾಣವೂ ಪ್ರಪಂಚದಲ್ಲಿ ಶಾಂತಿಯೂ ಉಂಟಾಗುವುದು.

ಹೀಗೆ ಈ ಒಡಕು ಮತಭೇದಗಳಿಂದ ಸಾಕಷ್ಟು ಹಾನಿಯಿದ್ದರೂ ದೊಡ್ಡದಾದ ಒಂದು ಲಾಭವೂ ಉಂಟು ಆ ಲಾಭವೇ 'ಜ್ಞಾನ' ತಮ್ಮ ತಮ್ಮ ಮತ ಧ್ಯೇಯ, ಪಕ್ಷಗಳ ಮಂಡನೆಗಾಗಿ, ನಮ್ಮಲ್ಲಿಯ ಒಡಕು ಮುಚ್ಚಿಟ್ಟು ಅವುಗಳ ವಿಶಾಲತೆ, ಉಪಯೋಗ, ಪರಿಣಾಮಗಳ, ಬಗ್ಗೆ ಅಭ್ಯಾಸಯುಕ್ತ ಚರ್ಚೆ ದೇಶದಾದ್ಯಂತವೂ ನಡೆಯುವುದರಿಂದ ಕಲಿತವರಲ್ಲಿ ಈ ಮತ ಪ್ರಚಾರದಿಂದ ಸಾಕಷ್ಟು ಜಾಗೃತಿಯಿಂದ ಎಚ್ಚೆತ್ತ 'ಜನಶಕ್ತಿ' ತಪ್ಪುದಾರಿ ತುಳಿಯದಿದ್ದರೆ ದೇಶಕ್ಕೆ ಎಂತಹ ಕಲ್ಯಾಣವಾದೀತು? ಹಾಗೆಯೇ ತಪ್ಪುದಾರಿ ಹಿಡಿದರೆ ಎಂತಹ ಕಲ್ಯಾಣ?

ಜನರಲ್ಲಿ ತಿಳಿವಳಿಕೆ ಬೆಳೆದು ಬಂದಂತೆಲ್ಲ ಈ ಒಡಕು ಮತಭೇದಗಳಾದರೂ ಬೆಳೆಯ ತಕ್ಕವೇ. ಆದರೆ ಅವುಗಳ ಉಪಯೋಗ ದೇಶ ಕಲ್ಯಾಣ ದೃಷ್ಟಿಯಿಂದಲೂ, ಪ್ರಪಂಚ ಶಾಂತಿಯ ದೃಷ್ಟಿಯಿಂದಲೂ ಆಗತೊಡಗಿದರೆ ಪ್ರಪಂಚಕ್ಕೇ ಕಲ್ಯಾಣವಾದೀತು.

ಪೂರ್ವ ಪಂಜಾಬಕ್ಕೆ ಎಂಟು ಲಕ್ಷ ನಿರಾಶ್ರಿತರ ತಂಡ ಕಾಲ್ನಡಿಗೆಯಿಂದ ಸಾಗಿ ಬರುತ್ತಿದೆ. ಅಪಾಯಕ್ಕೊಳಗಾಗಿ ಗುಳೆ ಕಟ್ಟಿಕೊಂಡು ಹೊರಟ ನಿರಾಶ್ರಿತರ ಅತಿ ದೊಡ್ಡ ತಂಡವೆಂದರೆ ಜಗತ್ತಿನಲ್ಲಿ ಇದೇ ಎಂದು ಹೇಳಲಾಗುತ್ತಿದೆ. ಇದು 45 ಮೈಲುಗಳುದ್ದವಾಗಿದೆ.

ಮೈಸೂರು ಸತ್ಯಾಗ್ರಹವು ಸಂಸ್ಥಾನೇತರ ಭಾರತದಲ್ಲಿ ನಡೆದ ಸ್ವಾಂತ್ರೋದ್ಯಮಗಳ ಮಾದರಿಯನ್ನು ಅನುಕರಣ ಮಾಡುತ್ತಿದೆ ಜನರು ಕಛೇರಿಗಳನ್ನು ಮುತ್ತಿ ವಶಪಡಿಸಿಕೊಂಡು ತಮ್ಮ ಜನರನ್ನು ಕೆಲಸಗಳಿಗಿಡುತ್ತಿರುವರು. ಸ್ವೇಚ್ಛಾಚಾರೀ ರಾಜರ ರಾಜ್ಯವನ್ನು ಪ್ರಜಾರಾಜ್ಯಭಾರದಿಂದ ಬದಲಿಸುವದೇ ಸತ್ಯಾಗ್ರಹಿಗಳ ಉದ್ದೇಶ. ಅನೇಕ ಕಡೆಗಳಲ್ಲಿ ಗೋಳಿಬಾರು ಲಾಠಿಛಾರ್ಜು ನಡೆದು ಸರಕಾರದವರು ಅತ್ಯಂತನಿಷ್ಠಾರುಣ್ಯದಿಂದ ಪ್ರಜೆಗಳ ಆಂದೋಳನವನ್ನು ಹತ್ತಿಕ್ಕುರುವರು.

— ಪಾಕಿಸ್ತಾನದಲ್ಲಿ ಗಾಂಧೀ ತತ್ವ —

ಪಶ್ಚಿಮ ಪಂಜಾಬಿನಲ್ಲಿ ಬಟ್ಟೆಯ ಭೀಕರ ಕ್ಷಾಮ ವೊದಗಿದೆಯಾದ ಕಾರಣ ಅಲ್ಲಿ ಪ್ರತಿಯೊಬ್ಬರೂ ಚರಕದಮೇಲೆ ನೂಲಬೇಕೆಂದೂ, ಕೈಮಗ್ಗದ ಬಟ್ಟೆಯನ್ನು ತಯಾರಿಸಬೇಕೆಂದೂ ಔದ್ಯೋಗಿಕ ಶಾಖೆಯ ಮಂತ್ರಿಗಳು ಪ್ರಚಾರ ಪ್ರಾರಂಭಿಸಿದ್ದಾರೆ. ಚರಕಾಗಳನ್ನು ಔದ್ಯೋಗಿಕ ಶಾಖೆಯವರೇ ಒದಗಿಸುವಂತಿದೆ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್. ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂ ಬಳ್ಳಾರಿ, ಆದವಾನಿ, **ಅನಂತಪುರ:**— ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:- ಪತ್ತಿಕೊಂಡ. **ಕಡಪ:**— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, **ವಾಯಲ್ಪಾ**

ಫಿಕ್ಸೆಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ್ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ್ ಫಂಡ ಡಿಪಾಜಿಟ್:-3% ಬಿ. ವಿ ಶೇಷಗಿರಿರಾವ್, ಕಾರ್ಯದರ್ಶಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5—0—0
6 ತಿಂಗಳಿಗೆ 3-0-0	Six months 3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH NO. B 17 FOR (Q.H. NO. B-5.)
Edited & Published by T. B. KESHAVA RAO

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೩೭ ಬಳ್ಳಾರಿ ಸೆಪ್ಟಂಬರು ೨೯ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಮಾ॥ರಾ॥ಶ್ರೀ॥ ಹೊಸಪೇಟೆ ಡಿ॥ ಮುನ್ಸಿಫ್ ಕೋರ್ಟಿನಲ್ಲಿ

O. S. NO 196/47

ವಾದಿ:- ಕೆ. ಮಲ್ಲಿಕಾರ್ಜುನಪ್ಪ-

ಪ್ರತಿವಾದಿಗಳು 1 ಷರ್ಮನ್‌ಸಾಹೇಬು 2 ಕೆ. ಗುರಣ್ಣ

— 2 ನೆ ಪ್ರತಿವಾದಿಗೆ ನೋಟೀಸು —

ಮೇಲ್ಕಂಡ ನಂಬರಿನಲ್ಲಿ ವಾದಿಯು ಷೆಡ್ಯೂಲಿನಲ್ಲಿ ಕಾಣಿಸಿದ ಮನೆ ಕಟ್ಟುವ ಜಾಗದಿಂದ 1 ನೇ ಪ್ರತಿವಾದಿಯನ್ನು ಬಿಡಿಸಿ ತನ್ನ ಸ್ವಾಧೀನಕ್ಕೆ ತೆಗೆದು ಕೊಳ್ಳುವುದಕ್ಕೂ ಮತ್ತು 1 ನೇ ಪ್ರತಿವಾದಿ ಸದರಿ ಜಾಗದಲ್ಲಿದ್ದುದಕ್ಕೆ ಬಾಡಿಗೆ ಹಣದ ಬಾಕಿಗಾಗಿ ದಾವಾಮಾಡಿರುತ್ತಾನೆ. ಸದ್ರಿ ಜಾಗದ ಹಕ್ಕು ಪತ್ರವು 1ನೇ ಪ್ರತಿವಾದಿ ಹೆಸರೀಲಿ ಇದ್ದಕಾರಣ 2 ನೇ ಪ್ರತಿವಾದಿಯನ್ನು ಪ್ರೊಫಾರ್ಮ ಪಾರ್ಟಿಯನ್ನಾಗಿ ಮಾಡಿರುತ್ತದೆ. ಸದ್ರಿದಾವಾ 2ನೇ ಪ್ರತಿವಾದಿ ತಕರಾರಿಗಾಗಿ ತಾ. 15-10-47 ಕ್ಕೆ ವಾಯ್ದೆ ಇರುತ್ತದೆ. ಕಾರಣ 2ನೆ ಪ್ರತಿವಾದಿ ಏನಾದರೂ ತಕರಾರು ಇದ್ದರೆ ಆ ದಿನ ಹಾಜರಾಗಬೇಕು. ಇಲ್ಲವಾದಲ್ಲಿ ಅತನನ್ನು ಎಕ್ಸ ಪಾರ್ಟಿಯನ್ನಾಗಿ ಮಾಡುತ್ತದೆ.

ಕೂಡ್ಲಿಗೆ ತಾಲೂಕು ಹೊಸಹಳ್ಳಿಯಲ್ಲಿರುವ ಮನೆಕಟ್ಟುವ ಜಾಗ:- ಚಕ್ಕುಬಂದಿ ಪೂರ್ವ-ದಾರಿ, ಪಶ್ಚಿಮ-ಬಳೆಗಾರ ಈಶ್ವರಪ್ಪನ ಮನೆ ಉತ್ತರ-ದಾರಿ ದಕ್ಷಿಣ-ಬಯಲು ಜಾಗ; ಪೂರ್ವಪಶ್ಚಿಮ 22 ಮೊಳ ಉತ್ತರ ದಕ್ಷಿಣ 18 ಮೊಳ

ಹೊಸಪೇಟೆ ಎಂ. ಹೆಚ್. ಎಂ. ಗುರುಶಂಕರಯ್ಯ

26-9-47 ಕೆ. ಚನ್ನಬಸಪ್ಪ, ವಾದಿ ವಕೀಲರು.

ರಷ್ಯಾ—ಅಮೆರಿಕಾ ಎಣ್ಣೆ—ತಿಕ್ಕಾಟ.

ಪರ್ಶಿಯಾ ದೇಶದಲ್ಲಿ ಉತ್ಪನ್ನವಾಗುತ್ತಲಿರುವ ಎಣ್ಣೆಯ ಸಂಪತ್ತಿನ ಗಣಿಗಳನ್ನು ಅಮೆರಿಕೆಯು ಎಲ್ಲಾ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕೆಂದು ಹವಣಿಸಿದೆ. ಇದರಲ್ಲಿ ತನ್ನ ಭಾಗವೂ ಇರಬೇಕೆಂದು ರಷ್ಯಾ ಹಟ ಹಿಡಿದಿದೆ. ರಷ್ಯಾವು ಇದರಲ್ಲಿ ಪ್ರವೇಶಿಸುವುದಾದರೆ ಅಮೆರಿಕೆಯು ಪರ್ಶಿಯಾಕ್ಕೆ ಸಹಾಯಮಾಡಲಿರುವ ದೆಂದು ಸ್ಪಷ್ಟವಾಗಿ ಪ್ರಕಟಿಸಿದೆ. ರಷ್ಯಾವು ತನ್ನ 3 ದಳ ಸೈನ್ಯಗಳನ್ನು ಉತ್ತರ ಪರ್ಶಿಯಾದ ಗಡಿಗೆ ಕಳುಹಿಸಿದೆ. ಯುದ್ಧದ ಬೀಜಗಳು ಬಿತ್ತಲಾಗುತ್ತಿವೆ.

ಹಿಂದೂಸೀಖರಲ್ಲಿ ಒಡಕಿನ ಪ್ರಯತ್ನ

"ಸೀಖರು ಪ್ರತ್ಯೇಕ ಸ್ವಾಂತವನ್ನು ಸ್ಥಾಪಿಸಲಿಚ್ಛಿಸುವುದಿಲ್ಲ. ಈ ದಂಗೆಗಳಿಗೆ ಸೀಖರು ಕಾರಣರಲ್ಲ. ಹಿಂದೂ ಸೀಖರಲ್ಲಿ ಒಡಕನ್ನು ಹುಟ್ಟಿಸಲು ಮುಸಲ್ಮಾನರು ಹೀಗೆ ಪ್ರಚಾರಮಾಡುತ್ತಿರುವರು. ಹಿಂದೂ ಸೀಖರು ಒಂದಾಗಿಯೇ ಬಾಳುವರು, ಒಂದಾಗಿಯೇ ಸಾಯುವರು.,,ಎಂದು ತಾರಾಸಿಂಗರು ಹೇಳಿದರು.

148

ಹೊಸಪೇಟೆ ಜಿಲ್ಲಾ ಮುನ್ಸೀಫರವರ ಕೋರ್ಟಿನಲ್ಲಿ.

Sc 397 of 1946. Ep 178/47.

ವಾದಿ:–ಹುಳ್ಳಿನಿಂಗಪ್ಪ.

ಪ್ರತಿವಾದಿಗಳು:–ಅಗಸರ ಬಿಟ್ಟಪ್ಪ ಮತ್ತು ಅಗಸರ ಹನುಮಪ್ಪ (ಮೈನರ್) ಗಾರ್ಡಿಯನ್ ತಂದೆ ಸಂಗಪ್ಪ

ನೋ ಟೀ ಸು .

ಮೇಲಿನ ನಂಬರಿನಲ್ಲಿ ವಾದಿಯು ಜಸ್ತಿಯಾದ ಚರಾಸ್ತಿಗಳ ಯಾಲಂ ಕೋರಿರುತ್ತಾನೆ. ಅದಕ್ಕೆ ತಕರಾರು ಇದ್ದಲ್ಲಿ ಮೇಲ್ಕಂಡ ಕೋರ್ಟಿಗೆ 3-10-1947 ಹಾಜೂರಾಗಿ ತಕರಾರು ತಿಳಿಯಪಡಿಸತಕ್ಕದ್ದು. ತಪ್ಪಿದಲ್ಲಿ ಯಕ್ಪುಪಾರ್ಟಿ ಮಾಡಲಾಗುತ್ತದೆಂದು ಈ ನೋಟೀಸು ಮೂಲಕ ತಿಳಿಯಪಡಿಸಿರುತ್ತದೆ.

ಹೊಸಪೇಟೆ
23—9—47

ಎಂ. ರಂಗನಾಥಾಚಾರ್
ವಾದಿ ವಕೀಲರು

ಹೆ ಬ್ಬಾ ಳು

21-9-47 ಕ್ಕೆ ನಮ್ಮೂರಿನಿಂದ ಬು ಧ ಣ ಸಾಹೇಬ, ವೆಂಕಣ್ಣ, ಕೃಷ್ಣರೆಡ್ಡಿ ಈ ಮೂ ವ ರು ಮೈಸೂರು ಸತ್ಯಾಗ್ರಹಕ್ಕಾಗಿ ರಾಣೇಬೆನ್ನೂರು ಮೂಲಕ ತೆರಳಿದರು. (ಸ್ವ. ಸು)

ಬೈಲುವದ್ದಗೇರಿ:—ಹೊಸಪೇಟೆ ಡೆವುಟಿ ಕಲೆಕ್ಟರ್ ಕರಿಯಪ್ಪನವರು, ಜಿಲ್ಲಾ ಲೇಬರ್ ಆಫೀಸರ್ ಕೃಷ್ಣಮೂರ್ತಿ, ತಹಶೀಲ್ದಾರ್ ದೊರೆರಾಜರು ಜಿಲ್ಲಾ ಹರಿಜನ ಸೇವಕಸಂಘದ ಕಾರ್ಯದರ್ಶಿ ಶ್ರೀ ಕೇಶವ ರಾಯರೊಂದಿಗೆ ಕಳೆದ ಭಾನುವಾರ ಇಲ್ಲಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ಎಲ್ಲರೂ ಅನ್ಯೋನ್ಯವಾಗಿ ಅಣ್ಣತಮ್ಮಂದಿರಂತಿರಲು ಬೋಧಿಸಿದರು. ಒಂದು ಜಾತಿಯನ್ನು ಕೀಳೆಂದು ಕಂಡು ಹಿಂಸಿಸುವುದು ಸರಿಯಾದುದಲ್ಲವೆಂದರು. ಊರಿನವರು ತಕ್ಕ ಭ ರ ವ ಸೆ ಕೊಟ್ಟರು.

ಮು॥ರಾ॥ ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O.S. 160/47

ಕೆನ್ನಿಹಳ್ಳಿ ಪಾರ್ವತೆಮ್ಮ ಸಾ॥ ಹರಪನಹಳ್ಳಿ

Vs

ಯಲ್ಲಜ್ಜಿ ಹನುಮಪ್ಪ, ತಂದೆ ನಿಂಗಪ್ಪ ಸಾ॥ ಕೊಮಾರ್ನಹಳ್ಳಿ ತಾ॥ ಹರಪನಹಳ್ಳಿ

ಮೇಲಿನ ನಂಬರಿನಲ್ಲಿ ವಾದಿಯು ನಿನ್ನ ಮೇಲೆ ರೂ 48-7-9 (ಆಯ್ಕೆ ಪತ್ರದ ಮೇಲೆ) ದಾಖಲು ಮಾಡಿರುತ್ತಾಳೆ. ಸದರಿ ದಾವಾ ವಾಯ್ದೆ 15-10-1947 ಕ್ಕೆ ಇರುತ್ತದೆ. ಏನಾದರೂ ಅಕ್ಷೇಪಣೆ ಇದ್ದಲ್ಲಿ ಸದ್ರಿ ತೇದಿ 10 ಘಂಟೆಗೆ ಬಂದು ಹಾಜರಾಗಬೇಕು.

ಹೊಸಪೇಟೆ
25-9-1947

ಹೆಚ್. ಗೋವಿಂದಾಚಾರ್
ಅಡ್ವೊಕೇಟ್

ಮದ್ರಾಸ್ ಸರಕಾರದ ಪ್ರಕಟನೆ

ಹಳ್ಳಿಗಳ ರೇಷನಿಂಗ್ ಹೋಗುವುದಿಲ್ಲ

ಪ್ರಾಂತದಲ್ಲಿ ಆಹಾರ ಪರಿಸ್ಥಿತಿಯು ಸುಧಾರಿಸಿರುವಾದ ಕಾರಣ ಹಳ್ಳಿಗಳಲ್ಲಿನ ರೇಷನ್ನು ಪದ್ಧತಿಯನ್ನು ಕೊನೆಗೊಳಿಸುವದೆಂದು ಹಬ್ಬಲಾದ ಸುದ್ದಿಗೆ ಆಧಾರವಿಲ್ಲ. ರೈತರು ಇದಕ್ಕೆ ಕಿವಿಗೊಡದೆ ತನ್ಮಲ್ಲಿ ಹೆಚ್ಚಿಗಿರುವ ಆಹಾರ ಧಾನ್ಯಗಳನ್ನು ಸರಕಾರಕ್ಕೆ ಒಪ್ಪಿಸಬೇಕೆಂದು ಸರಕಾರದ ಪ್ರಕಟನೆ ಹೊರಟಿದೆ.

ಒಸ್ಸಾದಿಂದ ಮದ್ರಾಸ್ ಪ್ರಾಂತಕ್ಕೆ 30,000 ಮಣ ರಾಗಿಯು ಬರಲಿದೆ. 4000 ಟನ್ ಮೈಲೊ ಜೋಳವನ್ನು ಕೇಂದ್ರದಿಂದ ಕೊಟ್ಟಿದ್ದಾರೆ. ಶಿಲೋನಿಂದ 1674 ಟೀಲ ನವಣೆ ಬಂದಿದೆ. ಅಕ್ಕಿಯಲ್ಲದ ಇತರ ಧಾನ್ಯದ ಸಂಗ್ರಹ, ಪ್ರಾಂತದಲ್ಲಿ 20 ಸಾವಿರ ಟನ್ನುಗಳಷ್ಟಿದೆ. ತಿಂಗಳಿಗೆ ಬೇಕಾದ್ದು 18 ಸಾವಿರ ಟನ್ನು, ಸದ್ಯಕ್ಕೆ ಭಯವಿಲ್ಲ.

ಶಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ. ಪ್ರಾರಂಭೋತ್ಸವ

ವಿದ್ಯಾಪೀಠ-ಅಧ್ಯಾಪಕವರ್ಗ-ವಿದ್ಯಾರ್ಥಿಗಳು:-

ಶಾರಾನಾಥ ಆಯುರ್ವೇದ ವಿದ್ಯಾಪೀಠದ ಸಂಭ್ರಮದ, ವಿಧಿಪೂರ್ವಕವಾದ ಪ್ರಾರಂಭೋತ್ಸವವು ಬಳ್ಳಾರಿ ಜಿಲ್ಲಾ ಮುಖ್ಯಾಧಿಕಾರಿಗಳಾದ ಕಲೆಕ್ಟರ್ ಶ್ರೀ ಕೆ. ಯನ್. ಅನಂತ ರಾಮನ್‌ರವರಿಂದ 18-9-47 ಗುರುವಾರ ಭಾದ್ರಪದ ಶು|| 4 ಶುಭ ಮುಹೂರ್ತದಲ್ಲಿ ನೆರವೇರಿತು. ಬಳ್ಳಾರಿ ನಗರ ನಾಲ್ಕು ಮೈಲಿಗಳೊಳಗಿನ ಭವ್ಯವಾದ ಬಂಗಲೆ ಇದಕ್ಕೆ ಹೊಂದಿಕೊಂಡ ಆವರಣದಲ್ಲಿನ ಮನೆಗಳು (Out houses) ಹಿಂಬದಿಯಲ್ಲಿ ಮನೋಹರವಾ ತಾವರಣಕ್ಕಾಕರವಾದ ಉದ್ಯಾನವನ, ವಿದ್ಯಾರ್ಥಿಗಳ ಕುಟೀರಗಳು, ನಗುಮುಖದ, ಉತ್ಸಾಹ ಸ್ಫೂರ್ತಿಯುಕ್ತವಾದ, ವಿದ್ಯಾತೃಷ್ಣಾತುರ ತರುಣ ತರುಣಿಯರು, ಜ್ಞಾನವಯೋವೃದ್ಧರಾದ ಆದ್ಯ ಅನಂತಾಚಾರ್ಯರ ಮನವನ್ನೂ ಆಕರ್ಷಿಸಿ "ಇದೇ ಗುರುಕುಲ" ವೆಂಬ ಉದ್ಗಾರವನ್ನು ಅವರ ಮುಖದಿಂದ ಶಿಳಿಯುಲಾದುದು ಆಶ್ಚರ್ಯಕರವಲ್ಲ. ವಿದ್ಯಾರ್ಥಿಗಳಲ್ಲಿ ಸಂಗೀತ ನಟ, ನಾಟ್ಯ, ಪ್ರಹಸನ, ಕಲೆಗಳಿವೆ. ಭಾಷಾಭಿಮಾನವುಂಟು. ಉಜ್ವಲ ದೇಶಾಭಿಮಾನವುಂಟು. ವಿದ್ಯಾಪೀಠದ ಆಚಾರ್ಯರು ಶಾರಾನಾಥರ ಪಟ್ಟ ಶಿಷ್ಯರು 20 ವರ್ಷಗಳ ವೈಲಣ ಅನುಭವವುಂಟು ಅವರ ವೈಶಿಷ್ಟ್ಯವೆಂದರೆ ಸಂಘಟನೆಯ ಹಟ ಬಳ್ಳಾರಿಗೆ ಬಂದು ತಮ್ಮ ಉದ್ದೇಶ ಸಾಧನೆ ಮಾಡಿಯೇ ಬಿಟ್ಟರು ಏನಯು ಸೌಜನ್ಯ ಹಿಂದು ಮಕ್ಕಳಲ್ಲಿ ಮಕ್ಕಳಾಗಿ ತರುಣರಲ್ಲಿ ತರುಣರಾಗಿ ಹಿರಿಯರಲ್ಲಿ ಹಿರಿಯರಾಗಿ ಸಮರಸ ಭಾವದ ಆದರ್ಶ ಉದಾಹರಣೆಯಿಂದ ಕಾರ್ಯಸಾಧಿಸಿದರು. ಇಷ್ಟೇ ಅಲ್ಲ. ತಾರಾನಾಥಜೀಯವರ ಅಕ್ಷಯಾವ್ಯಯತವನ್ನು ಇಷ್ಟೇ ಕಳಕಳಿಯಿಂದ ವಿದ್ಯಾರ್ಥಿಗಳಿಗೆ ಹಂಚುತ್ತಿರುವರು. ಇತರ ಅಧ್ಯಾಪಕರೂ ಅಷ್ಟೇ ಪ್ರಶಂಸನೀಯರು ಎಂದು ಬೇರೆ ಹೇಳಬೇಕಾಗಿಲ್ಲ.

ಸ್ವಾಗತ:-

ಪ್ರಾರ್ಥನಾನಂತರ ಡಾ. ಬಿ. ಕೆ. ಮಾರ್ಲರವರು ಕಲೆಕ್ಟರ್ ಸಹ-ಪತಿ ಜಿಲ್ಲಾ ವೈದಾಧಿಕಾರಿ (D. m o.) ಆದ್ಯ ಅನಂತಾಚಾರ್ಯ ಮತ್ತು ನಗರದ ಸ್ತ್ರೀಪುರುಷ ಮಹನೀಯರಿಗೆ ಹೃತ್ಪೂರ್ವಕ ಸ್ವಾಗತವೆಸಗಿದರು.

ಅಧ್ಯಕ್ಷರ ಪ್ರಾರಂಭ ಭಾಷಣ:- ನೀವು ಇಂಥಾ ಒಳ್ಳೆಯ ಕಾರ್ಯದ ಪ್ರಾರಂಭಮಾಡಲು ನನ್ನನ್ನು ಕರೆದುದಕ್ಕೆ ಕೃತಜ್ಞನಿರುವೆ. ವೈದ್ಯವೃತ್ತಿಯು ಘನತೆಯು ಬೇರೊಂದು ವೃತ್ತಿಗಿಲ್ಲ. ಸಾರ್ವಜನಿಕ ಸೇವೆಗೆ ಈ ವೃತ್ತಿಯು ಅಪರಿಮಿತ ಅವಕಾಶವನ್ನು ಕೊಟ್ಟಿದೆ ಪಾಶ್ಚಿಮಾತ್ಯ ವೈದ್ಯಶಿಕ್ಷಣವು (Allopathy) ಸಂಪೂರ್ಣತೆಯನ್ನು ಹೊಂದಿದೆ. ಬಹಳ ಶ್ರೇಷ್ಠ ಚಿಕಿತ್ಸೆಗಳ ಆವಿಷ್ಕಾರವಾಗಿದೆ. ಆಧುನಿಕ ಪ್ರಪಂಚದಲ್ಲಿ ಪಾಶ್ಚಾತ್ಯವಿಧಾನದ ಶಸ್ತ್ರ ಚಿಕಿತ್ಸೆಯನ್ನು ಮೀರಿಸುವ ಬೇರೊಂದು ವಿಧಾನವಿಲ್ಲ. ಆದರೆ ನಾನು ಆಯುರ್ವೇದವದ್ದು ಅಲ್ಲಗಳೆಯುತ್ತೇನೆಂದಲ್ಲ. ವೈದ್ಯ ವೃತ್ತಿಯು ವ್ಯಗತಿಗೆ ಎಲ್ಲಾ ವಿಧಾನಗಳ ಅರಿವು ಅಗತ್ಯ. ಇಂಥಾ ಶಿಕ್ಷಣವು ಇಲ್ಲಿ ದೊರೆಯುವುದೆಂಬುದು ಆನಂದದಾಯಕವಾದ ಅಂಶ. ನಮ್ಮಲ್ಲಿ ಮರಣ ಸಂಖ್ಯೆ ಹೆಚ್ಚು. ರೋಗಾದಿಗಳು ಹೆಚ್ಚು. ಇದಕ್ಕೆ ದಾರಿದ್ರ್ಯ ಅಜ್ಞಾನಗಳು ಕಾರಣವಿರಬಹುದು. ನಾನು ಡಾಕ್ಟರನಲ್ಲ. ಅವರ ಕರ್ತವ್ಯಗಳಿಂಥವು, ಅವರು ಹೀಗೆಯೇ ಮಾಡಬೇಕೆಂದು ಹೇಳಲು ನನಗೆ ಯೋಗ್ಯತೆ ಸಾಲದು. ಅದನ್ನು ನೀವೇ ನಿರ್ಣಯಿಸಬೇಕು. ಈಗ ಕಾರ್ಯದರ್ಶಿಗಳು ವರದಿಯನ್ನೋದಬೇಕು. ಎಂದರು.

ವರದಿಯ ಮುಖ್ಯಾಂಶಗಳು:-

ಡಾಕ್ಟರ್ ವೆಂಕಟರಮಣರವರು ವರದಿಯನ್ನೋದಿದರು. ನಿಮ್ಮನ್ನೆಲ್ಲಾ ಸ್ವಾಗತಿಸುವ ಸುಯೋಗ

(10 ನೆಯ ಪುಟ ನೋಡಿರಿ)

150



10th year of Publication.
Monday, 29th Sept 1947

ಯುದ್ಧ ಇಲ್ಲವೇ ಒಪ್ಪಂದ ಗಾಂಧೀಜೀ ಉಪದೇಶ

"ಹಿಂದೂಸ್ತಾನ-ಪಾಕಿಸ್ತಾನಗಳೆರಡೂ ಅಲ್ಪ ಸಂಖ್ಯಾಕರನ್ನು ಕೆಟ್ಟರೀತಿಯಲ್ಲಿ ನಡೆಸಿಕೊಂಡದ್ದನ್ನು ಒಪ್ಪಿಕೊಂಡು ಅವರ ಆಸ್ತಿ ಮಾನ ಪ್ರಾಣಗಳನ್ನು ಕಾಪಾಡುವೆವೆಂದು ಭರವಸೆಕೊಟ್ಟು ನ್ಯಾಯವಾದ ಒಪ್ಪಂದವನ್ನು ಮಾಡಿಕೊಳ್ಳಬೇಕು. ಈ ಒಪ್ಪಂದವು ಸಾಧ್ಯವಿಲ್ಲವಾದರೆ ಪರಸ್ಪರ ಯುದ್ಧವನ್ನು ಹೂಡಬೇಕಾಗುವುದು"

ಮಹಾತ್ಮ ಗಾಂಧಿಜಿಯವರ ಈ ಹೇಳಿಕೆಯಲ್ಲಿ ಬಹಳ ಮುಖ್ಯವಾದ ಅಂಶವಿದೆ. ಇದು ಸ್ಪಷ್ಟವೂ, ಸತ್ಯವೂ, ನ್ಯಾಯವೂ, ಆಗಿದೆ. ಸ್ನೇಹದಿಂದ ಸಮಸ್ಯೆಯು ಬಗೆಹರಿಯುವುದಿಲ್ಲೆಂದರೆ ಬಲಪ್ರಯೋಗವೇ ಜಗತ್ತಿನಲ್ಲಿ ಪರಿಚಯವಿರುವ ಮತ್ತೊಂದು ಆಯುಧ್ಧವಾಗಿದೆ ಯಾರು ಹೆಚ್ಚು ಶಕ್ತಿವಂತರೋ ಅವರ ಕೈಯೇ ಮೇಲಾಗುವುದು. ಅಮೆರಿಕಾವು ತನ್ನ ಶಕ್ತಿಬಲದಿಂದ ಇಂದು ಪ್ರಪಂಚಕ್ಕೆಲ್ಲಾ ಮಾರ್ಗದರ್ಶಿಯಾಗಿದೆ. 'ಬಲಾಚ ಪೃಥ್ವೀ' ಎಂಬ ತತ್ವವೇ ಜಾರಿಯಲ್ಲಿ ಬರುವುದು.

ಪಾಕಿಸ್ತಾನದಲ್ಲಿ ಹಿಂದೂಗಳೂ, ಹಿಂದೂಸ್ತಾನದಲ್ಲಿ ಮುಸಲ್ಮಾನರೂ ಹಾನಿಗೊಳಗಾಗಿದ್ದಾರೆ. ಪಾಕಿಸ್ತಾನದಲ್ಲಿ ನಾಶವಾದ ಆಸ್ತಿ ಪ್ರಾಣಹಾನಿ ಅತ್ಯಧಿಕವಿರಬಹುದು. ಸೈನಿಕರಲ್ಲಿಯೂ ಸಹ ಜಾತೀಯವಾದದ ಪ್ರವೇಶವಾಗಿದೆ. ಪಾಕಿಸ್ತಾನದ ಮುಸಲ್ಮಾನ ಸೈನೀಕರು ಮುಸಲ್ಮಾನೇತರ ನಿರಾಶ್ರಿತರ ತಂಡಗಳ ಮೇಲೆ ಗುಂಡುಹಾರಿಸಿ ಅನೇಕರನ್ನು ಕೊಂದರೆಂದು ಸೈನಿಕ ವಕ್ತಾರನೊಬ್ಬನು ಪ್ರಕಟಿಸಿದ್ದಾನೆ. ಈಸೇಡು ತೀರಿಸಿಕೊಳ್ಳುವದಕ್ಕೆ ಕೊನೆ ಮೊದಲಿಲ್ಲದಾಗುತ್ತದೆ. ಕಲ್ಕತ್ತಾದಿಂದ ನವಾಖಾಲಿ, ಬೀಹಾರ, ಪಶ್ಚಿಮ ಪಂಜಾಬ ಸರಹದ್ದು ಪೂರ್ವಪಂಜಾಬ ಡೆಲ್ಲಿ ಸಕ್ರಮವಾಗಿ ಒಂದಾದನಂತರೊಂದು ಸೇಡಿನ ಬುದ್ಧಿಯಿಂದಲೇ ಪ್ರೇರೇಪಿತವಾಗಿ ದುರಂತಗಳು ನಡೆದವು.

ಪಾಕಿಸ್ತಾನದಲ್ಲಿ ಕೋಟಿಗಟ್ಟಲೆ ಹಿಂದೂಗಳೂ ಹಿಂದೂಸ್ತಾನದಲ್ಲಿ ಕೋಟ್ಯಂತರ ಮುಸಲ್ಮಾನರೂ ಇರುವರು. ಇವರನ್ನೆಲ್ಲಾ ನಾಮಾವಶೇಷ ಮಾಡಬೇಕೇ? ಇದು ಅಸಾಧ್ಯವಾದ ಮಾತು. ರಾಜಕಾರಣಿಗಳ ರಾಜಕೀಯಕ್ಕಾಗಿ ನಿರಪರಾಧೀ ಸ್ತ್ರೀ ಪುರುಷರು ಮಕ್ಕಳು ವೃದ್ಧರು ಕೊಲೆ ಸುಲಿಗೆಗಳಿಗೆ ಈಡಾಗಿದ್ದಾರೆ.

ಜಿನ್ನಾರವರೂ, ಅವರಲೀಗ್ ಅನುಯಾಯಿಗಳೂ ದ್ವೇಷ ಪೂರಿತ ಪ್ರಚಾರದಿಂದ ಮುಸಲ್ಮಾನರು ಹಿಂದೂಗಳು ಪ್ರತ್ಯೇಕ ಜನಾಂಗ, ಪ್ರತ್ಯೇಕ ಸಂಸ್ಕೃತಿಯವರೆಂದು ಸಾರುತ್ತಿರುವರು. ಇವರ ಪ್ರಚಾರಫಲವಾಗಿ ದೇಶವು ಇಬ್ಭಾಗವಾಗಿ ಇಂಥ ಹಾನಿಗೀಡಾಗಬೇಕಾಯಿತು.

ಆದದ್ದು ಆಯಿತು. ಇನ್ನು ಮೇಲಾದರೂ ಇವೆರಡು ರಾಷ್ಟ್ರಗಳಲ್ಲಿ ಗೌರವಾನ್ವಿತ ವಪ್ಪಂದವಾಗದಿದ್ದಲ್ಲಿ ಈ ಸಮಸ್ಯೆಯು ಯುದ್ಧದಿಂದಲಾದರೂ ಬಗೆಹರಿದು ಉಭಯ ರಾಷ್ಟ್ರಗಳಲ್ಲಿಯ ಅಲ್ಪಸಂಖ್ಯಾಕರ ಸಂರಕ್ಷಣೆಯಾಗಬೇಕು.

ಒಂದೇಸಲ 3 ಕೂಸುಗಳು

ಅಹಮ್ಮದಾಬಾದಿನ ಹೆರಿಗೆ ಆಸ್ಪತ್ರೆಯಲ್ಲಿ ಒರ್ವಳಿಗೆ 3 ಕೂಸುಗಳಾಗಿರುವ ಸುದ್ದಿಮುಟ್ಟಿದೆ. ಕೂಸ-ಗಳು ಬದುಕುವದು ಕಷ್ಟವೆಂದು ಡಾಕ್ಟರವರು ಅಭಿಪ್ರಾಯಪಟ್ಟಿರುತ್ತಾರೆ.

ಆಚಾರ್ಯ ಕೃಪಾಲಿನಿ
ನನ್ನ ಕುಟುಂಬದ 50 ಜನರು ಮುಸಲ್ಮಾನರಿರುತ್ತಾರೆ

ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಾಲಿನಿಯವರು ಪಾಕಿಸ್ತಾನದ ರಾಜಧಾನಿ ಕರಾಚಿಗೆ ಬಂದಿಳಿದು ಅಲ್ಲಿ ಜಾತೀಯ ಸೌಹಾರ್ದಕ್ಕಾಗಿ ಪ್ರಯತ್ನಿಸುತ್ತಿರುವರು. ಲೀಗ ಮುಖಪತ್ರವಾದ 'ಡಾನ್' ಪತ್ರಿಕೆಯು ಅವರನ್ನು ವ್ಯಂಗ್ಯಶಬ್ದಗಳಲ್ಲಿ ಸ್ವಾಗತಿಸಿ ಕೃಪಾಲಿನಿಯವರ ಉದ್ದೇಶವು ಹಿಂದೂಗಳ ಸಂರಕ್ಷಣೆ ಮಾತ್ರವಿದೆಯೆಂದು ಟೀಕಿಸಿದೆ. ಇದಕ್ಕೆ ಕಾಂಗ್ರೆಸ್ ಅಧ್ಯಕ್ಷರು ಈ ಉತ್ತರವಿತ್ತಿರುವರು.

" ಈ ವಾದ ವಿವಾದ ಬಿಳಿಸಲು ಸಂಪಾದಕನೊಡನೆ ನನಗೆ ಸಂಘರ್ಷಣೆ ಬೇಕಿಲ್ಲ. ನಾನು ಜಾತಿವಂತ ಹಿಂದೂವಾಗಿದ್ದರೆ ಹಿಂದೂ ಮಹಾಸಭೆಯನ್ನೊ ರಾಷ್ಟ್ರೀಯ ಸ್ವಯಂಸೇವಕದಳವನ್ನಿ ಸೇರುತ್ತಲಿದ್ದೆ. ನನ್ನ ಕುಟುಂಬದವರಲ್ಲಿ 50 ಜನರು ಇಸ್ಲಾಂಧರ್ಮವನ್ನು ಸ್ವೀಕರಿಸಿರುವರು. ಹಿಂದೂಮುಕ್ಕಳು ನನ್ನನ್ನು ಪ್ರೀತಿಸುತ್ತಿರುವಂತೆ ಮುಸಲ್ಮಾನ ಮೊಮ್ಮಕ್ಕಳೂ ನನ್ನನ್ನು ಪ್ರೀತಿಸುತ್ತಲಿರುವರು. ಜಾತಿ ಜಾತಿಗಳಲ್ಲಿ ಶಾಂತಿನೆಲೆಸಲು, ನೇಡಿನ ಬುದ್ಧಿಯನ್ನು ಬಿಡಲು ತ್ರಿಕರಣ ಪೂರ್ವಕವಾಗಿ ಪ್ರಯತ್ನಿಸುತ್ತಿರುವೆನು. ದಂಡನೆಯ ವಿಷಯವೇನಾದರೂ ಇದ್ದರೆ, ಅದನ್ನು ಉಭಯ ಸರಕಾರಗಳು ನೋಡಿಕೊಳ್ಳಬೇಕು.

ಅರಬ್ ಲೀಗ್ ಕಾರ್ಯದರ್ಶಿ
ಅಭಿಪ್ರಾಯ
"ಹಿಂದೂಸ್ತಾನ ಪಾಕಿಸ್ತಾನಗಳು ಒಂದಾಗಲಿ"

"ಹಿಂದೂಸ್ತಾನವು ಇಬ್ಭಾಗವಾಗಬಾರದೆಂಬುದೇ ನಾನು ಪಟ್ಟ ಅಭಿಪ್ರಾಯಕ್ಕೇ ಅಂಟಿಕೊಂಡಿದ್ದೇನೆ. ಇದು ಹಿಂದುಸ್ತಾನದ ಮುಸಲ್ಮಾನರಿಗೆ ರುಚಿಸದಿರಬಹುದು. ಅವು ಪ್ರತ್ಯೇಕ ರಾಷ್ಟ್ರಗಳೆಂದು ಸಾರಲ್ಪಟ್ಟಿದ್ದರೂ ಗಡಿಭೇದ ಸುಂಕವಿಲ್ಲ. ಅವಕ್ಕೆ ಪ್ರತ್ಯೇಕವಾದ ವಿದೇಶನೀತಿ ಇರುವುದೇ ಶಕ್ಯವಿಲ್ಲ" ಎಂದು ಹಿಂದು ಸಂದರ್ಶನದಲ್ಲಿ ಹೇಳಿದರು.

ರೈತರಿಗೆ ಮದ್ರಾಸ್ ಸರ್ಕಾರದ ಸೂಚನೆ.

[ಈ ಉತ್ತರವು ಅಕ್ಟೋಬರ್ 17 ರಿಂದ ಜಾರಿಯಲ್ಲಿ ಬರುವುದು]

1. ಯಾವವಿಧದ ಹತ್ತಿಯನ್ನಾಗಲಿ ಅಂದರೆ ಕಾಕನಾಡನ್, ನಾರ್ದರ್ನ್ಸ್ ಕೆಂಪು ಹತ್ತಿ, 14 ನೇ ನಂಬರ್ ಹತ್ತಿ, ಬಿಳೇಹತ್ತಿ, ಪೆಸ್ಪರ್ನ್ಸ್, ಹೆಚ್ 1 ಜವಾರಿ, ಮುಂಗಾರಿ, ಬೋಕಡ, ಕೆ 1 ಕಪ್ಪ ಮುಂಗಣ್ಣಿ, ಉಪ್ಪಮ್, ಟೆನ್ನೀಸ್ ಮತ್ತು ನಾಡಮ್ ಇವುಗಳನ್ನು ಪ್ರತಿವಂದುಸಾಲಿಗೂ ಒಂದುಸಾಲು ಹುರುಳಿ ಅಥವಾ, ಉದ್ದು ಈ ರೀತಿ ಮಿಶ್ರಪೈರನ್ನಾಗಿ ಬೆಳೆಯಬೇಕು.

ಆದರೆ ಇದು ಬಳ್ಳಾರಿಯಲ್ಲಿ ಬೆಳೆಯುವ ಮುಂಗಾರಿ ಹತ್ತಿಗೆ ಅನ್ವಯಿಸುವುದಿಲ್ಲ.

2 ತಂಬಾಕನ್ನು ಪ್ರತಿ ಹೊಲದ ಅಥವಾ ಹೊಲದ ಭಾಗದ ಸುತ್ತಲೂ ಕನಿಷ್ಟ ಒಂದುಸಾಲು ಅಕ್ಕಡಿ ಕಾಳನ್ನು ಇಟ್ಟು ಬೆಳೆಯಬೇಕು.

3 **ಅಕ್ಕಡಿಕಾಳು:**– ಹುರುಳಿ, ಉದ್ದು, ಹೆಸರು ತೊಗರಿ, ಕಡಲೆ, ಅವರೆ, ನೆಲಗಡಲೆಯನ್ನು ಪ್ರತಿ ಹನ್ನೊಂದು ಸಾಲಿಗೂ ಒಂದು ಸಾಲು ತೊಗರಿಯಂತೆ ಮಿಶ್ರಪೈರನ್ನಾಗಿ ಮಾಡಿ ಬೆಳೆಯಬೇಕು. ಆದರೆ, ನೀರುಹರಿಸಿದ ನೆಲಗಡಲೆಗೆ ಇದು ಅನ್ವಯಿಸುವುದಿಲ್ಲ.

ಕೆ. ಯನ್. ಅನಂತರಾಮನ್
ಕಲೆಕ್ಟರ್ ಬಳ್ಳಾರಿ.

ಹರಪನಹಳ್ಳಿ:– ಕರ್ನಾಟಕ ವಿದ್ಯಾರ್ಥಿನಿಲಯದಲ್ಲಿ ಶ್ರೀ ಮುದವೀಡು ಕೃಷ್ಣರಾಯರ ನಿಧನದ ನಿಮಿತ್ಯ ದುಃಖ ಸೂಚಕ ಸಭೆಯಾಗಿ ಅನೇಕರ ಭಾಷಣಗಳಾದವು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಇಲ್ಲಿಯ ವೀರಶೈವ ಹಾಸ್ಟೆಲ್ ದಿಂದ 10 ಹುಡುಗರು ಮೈಸೂರು ಸತ್ಯಾಗ್ರಹಕ್ಕಾಗಿ ದಾವಣಗೆರೆಗೆ ಹೊರಟರು.

ಸಾಮ್ರಾಜ್ಯ ಸಾರ್ವಭೌಮತ್ವಗಳ ಸಂಧ್ಯಾಸಮಯ.

ಸಾಮ್ರಾಜ್ಯಗಳ ಸಂಜೆ

ಇಂಗ್ಲಂಡು ಡಚ್ಚರ ಸಾಮ್ರಾಜ್ಯವಾದವನ್ನು ಎತ್ತಿ ಹಿಡಿಯಲು ಅಸಮರ್ಥವಾಗಿದೆ. ಅಮೇರಿಕವು ಡಚ್ಚ ಸಾಮ್ರಾಜ್ಯವಾದಕ್ಕೆ ಬೆಂಬಲ ನೀಡಲಾರದು. ಇಂಡೊನೇಶಿಯನ್ನರಲ್ಲಿ ಒಡಕು ಹುಟ್ಟಿಸಿ ತಮ್ಮ ಶಸ್ತ್ರಬಲದಿಂದ ತಮಗೆ ಪ್ರತಿಕೂಲವಿರುವ ಪಕ್ಷವನ್ನು ಹಕ್ಕಿಕ್ಕಲು ಸಾಧ್ಯವಿದೆ ಎಂದು ಡಚ್ಚರು ಲೆಕ್ಕಹಾಕುತ್ತಿರಬಹುದು. ಡಚ್ಚರಿಗೆ ಈ ಒಡಕು ಹುಟ್ಟಿಸಿ ಆಳುವ ಕಾರ್ಯದಲ್ಲಿ ತಾತ್ಪೂರ್ತಿಕವಾಗಿ ಯಶಸ್ಸು ದೊರೆತರೂ ದೊರೆಯಬಹುದು. ಆದರೆ ಅವರು ಕೊನೆಗೆ ಮಣ್ಣು ಮುಕ್ಕದೇ ಹೋಗರು. ಹಿಂದುಸ್ತಾನ ಬ್ರಹ್ಮದೇಶಗಳಿಂದ ಬ್ರಿಟಿಶ ಸಾಮ್ರಾಜ್ಯಶಾಹಿಯು ಕಾಲು ಕಿತ್ತದ್ದರಿಂದ ಏಶಿಯದಲ್ಲಿ ಪಾಶ್ಚಾತ್ಯರ ಸಾಮ್ರಾಜ್ಯದ ದಿನಗಳೇ ಮುಗಿದಂತಾದವು. ಡಚ್ಚರು, ಫ್ರೆಂಚರು, ಪೋರ್ತುಗೀಜರು ಏಶಿಯದಿಂದ ಗಂಟುಮೂಟೆ ಕಿತ್ತು ಬರಲು ಕೆಲ ದಿನಗಳ ಅವಧಿ ಹಿಡಿಯಬಹುದು ಇಷ್ಟೆ! ಏಶಿಯದಲ್ಲಿ ಇವರ ಸಾಮ್ರಾಜ್ಯದ ದಿನಗಳು ಮುಗಿದಂತಾಗಿದ್ದರೂ ಇವರು ಇನ್ನೂ ಮೀನಮೇಷ ಮಾಡುತ್ತ ಕಾಲ ವಿಲಂಬ ಮಾಡಿದಂತೆ ಇವರು ಹೆಚ್ಚು ಅವಮಾನಕ್ಕೆ ಗುರಿಯಾಗಿ ಅಲ್ಲಿಂದ ಹೊರಗೆ ಹಾಕಿಸಿಕೊಂಡು ಬರಬೇಕಾಗುವದು. ಈ ಸ್ಪಷ್ಟ ಚಿತ್ರವು ಫ್ರಾನ್ಸ ಅಥವಾ ಡಚ್ಚ ಸರಕಾರಗಳಿಗೆ ಕಾಣದಿದ್ದುದು ಅವರ ದುರ್ದೈವ.

ಸಾಮ್ರಾಜ್ಯವಾದಿಗಳು ವಸಾಹತುಗಳಲ್ಲಿ ತಾವು ಕಾಲೂರಿ ನಿಲ್ಲಲಾರದಷ್ಟು ಪ್ರಖರ ದ್ವೇಷವು ಬೆಳೆಯುವವರೆಗೆ ತಮ್ಮ ಧೋರಣ ಬದಲಿಸಲಿಚ್ಛಿಸದಿರುವದರಿಂದ ತಮ್ಮ ಕಾಲಮೇಲೆ ತಾವೇ ಕಲ್ಲು ಹಾಕಿಕೊಳ್ಳುತ್ತಿದ್ದಾರೆ. ಸಾಮ್ರಾಜ್ಯಾಂತರ ವಸಾಹತು ಹಾಗೂ ಸಾಮ್ರಾಜ್ಯವಾದಿ ರಾಷ್ಟ್ರ ಇವುಗಳ ಸಂಬಂಧವು ಗುಲಾಮು ಮತ್ತು ಒಡೆಯ ಈ ರೀತಿಯಲ್ಲಿರುವದರಿಂದ ಈ ಸಂಬಂಧವನ್ನು ಹರಿದೊಗೆಯಲು ವಸಾಹತುಗಳು ಚಡಪಡಿಸುತ್ತಲಿರುವವು. ಆದರೆ ಈ ಸ್ವಾಮಿ ಭೃತ್ಯ ಸಂಬಂಧವನ್ನು ತಪ್ಪಿಸಿ ಮಿತ್ರ ಭಾವ ಬೆಳೆಸಲು ಸ್ನೇಹ ಸೌಹಾರ್ದ್ಯ ಧೋರಣೆ ವಹಿಸಿದರೆ ಸಾಧ್ಯವಿರುವದು ಡಚ್ಚರು ಇಂಡೊನೇಶಿಯದಲ್ಲಿ ರಾಜಕೀಯ ಪ್ರಭುತ್ವ, ಆರ್ಥಿಕ ಗುತ್ತಿಗೆಯ ಪದ್ಧತಿಯಿಂದ ಸಡೆಸಿದ ಸುಲಿಗೆ, ಇವುಗಳನ್ನು ಬಿಟ್ಟರೆ ಇಂಡೊನೇಶಿಯದೊಡನೆ ಮಿತ್ರತ್ವ ಸಂಬಂಧ ಉಳಿಸಿಕೊಳ್ಳಲು ಇನ್ನೂ ಅವಕಾಶವಿದೆ. ಆದರೆ ಡಚ್ಚರು ಕೈಯಲ್ಲಿ ಟಾಮಿಗನ್ನು ಹಿಡಿದು ಇಂಡೊನೇಶಿಯದಲ್ಲಿ ಕಾಲೂರಿ ನಿಲ್ಲಬಯಸಿದರೆ ಅಲ್ಲಿಯ ಪ್ರಜೆಗಳು ಕೊನೆಗೆ ಇವರನ್ನು ಗಂಟುಮೂಟೆ ಕಟ್ಟಿ, ಅರ್ಧಚಂದ್ರ ಕೊಟ್ಟು ದಬ್ಬದೆ ಬಿಡಲಾರರು. ಹೀಗಾದರೆ ಡಚ್ಚರು ಇಂಡೊನೇಶಿಯನ್ನರೊಡನೆ ಮುಂದೆ ಆರ್ಥಿಕ, ಸಾಂಸ್ಕೃತಿಕ ಯಾವದೇ ಬಗೆಯ ಸಂಬಂಧವನ್ನಿಟ್ಟುಕೊಳ್ಳಲು ಮಾರ್ಗವೇ ಉಳಿಯಲಾರದು.

೧೭೭೬ ರಲ್ಲಿ ಅಮೇರಿಕದ ೧೩ ಸಂಸ್ಥಾನಗಳು ಬ್ರಿಟಿಶ ವಾಣಿಜ್ಯ ಸಾಮ್ರಾಜ್ಯ ನಿಯಂತ್ರಣವನ್ನು ಪ್ರತಿಭಟಿಸಿ, ಸ್ವಾತಂತ್ರ್ಯ ಘೋಷಣೆ ಮಾಡಿದಾಗ, ಬ್ರಿಟಿಶ ವ್ಯಾಪಾರಕ್ಕಿರುವ ಹೆಚ್ಚಿನ ಸವಲತ್ತು ಇವುಗಳನ್ನು ಕಿತ್ತುಹಾಕಲು ಬಂಡಾಯ ಹೂಡಿದವು. ೧೭೭೫ ವರ್ಷಗಳ ನಂತರ ಇಂಡೊನೇಶಿಯದ ಜನರು ಡಚ್ಚರ ವಿರುದ್ಧ ಅದೇ ರೀತಿಯ ಬಂಡಾಯ ಹೂಡಿದ್ದಾರೆ.

೧೮ ಮತ್ತು ೧೯ ನೆಯ ಶತಮಾನಗಳ ವ್ಯಾಪಾರ ಸಾಮ್ರಾಜ್ಯವಾದದ ಆ ಹಳೆಯ ದಿನಗಳು ಸತ್ತು ಹೋಗಿವೆ. ಈಗ ಸ್ವತಂತ್ರವಾದ ಏಶಿಯ, ಆಫ್ರಿಕಾ, ಅದೇಕೆ ಯುರೋಪು ಈ ಎಲ್ಲ ರಾಷ್ಟ್ರಗಳ ಜನರೂ ಒಕ್ಕಟ್ಟಿನಿಂದ, ಬಲಪಟ್ಟು ಜಾಣತನದಿಂದ ರಷಿಯ, ಅಮೇರಿಕಾ ಈ ಎರಡು ರಾಷ್ಟ್ರಗಳು ಸಾಮ್ರಾಜ್ಯಲೋಭದಿಂದ ನಡೆಸಿದ ಆಕ್ರಮಣ ತಡೆಯಲು ಪ್ರಯತ್ನಿಸಬೇಕು. ರಷಿಯ ದೇಶವು ಶಸ್ತ್ರಾಸ್ತ್ರ ಬಲ ಹಾಗೂ ಕಮ್ಯುನಿಜಂ ತತ್ವದ ಪ್ರಚಾರ, ಇವುಗಳಿಂದ ಸಾಮ್ರಾಜ್ಯ ಕಟ್ಟ ಬಯಸುತ್ತಿದ್ದರೆ, ಅಮೇರಿಕವು ಹಣ ಮತ್ತು ಸರಕುಗಳನ್ನು ಕೊಟ್ಟು ಸಾಮ್ರಾಜ್ಯ ಕಟ್ಟುವ ಗತ್ತುಗಾರಿಕೆಯಲ್ಲಿದೆ.

ಪ್ರತಿಭಟನೆಯ ಅಸ್ತ್ರ

ಹುಡುಗಾಟಿಕೆಯಿಂದ ಕೆಲವೊಂದು ಘೋಷಣೆ ಮಾಡುವದರಿಂದ ಈ ಸಾಮ್ರಾಜ್ಯವಾದಿಗಳನ್ನು ತಡೆಯುವದು ಅಸಾಧ್ಯ. ರಾಷ್ಟ್ರೀಯತ್ವದಿಂದ ಸಾಮ್ರಾಜ್ಯವಾದಕ್ಕೆ ಪುಷ್ಟಿ ದೊರೆಯುವದು. ಸಾಮ್ರಾಜ್ಯವಾದವನ್ನು ಪ್ರತಿಭಟಿಸುವ ದಿವ್ಯಾಸ್ತ್ರವೆಂದರೆ ಅಂತರರಾಷ್ಟ್ರೀಯ ಸಂಘಟನೆ. ಇಬ್ಬರು ಸಾಮ್ರಾಜ್ಯವಾದಿಗಳಲ್ಲಿ ಯಾವದಾದರೊಬ್ಬ ಸಾಮ್ರಾಜ್ಯವಾದಿಯ ಗುಂಪಿಗೆ ಸೇರಿಕೊಳ್ಳುವದರಿಂದ ಇಲ್ಲವೆ ಒಬ್ಬನ ವಿರುದ್ಧ ಇನ್ನೊಬ್ಬನನ್ನು ಎತ್ತಿಹಿಡಿದು ಇಬ್ಬರೂ ಸಾಮ್ರಾಜ್ಯವಾದಿಗಳ ಶಕ್ತಿಯನ್ನು ಸಮತೋಲವಾಗಿಡುವದರಿಂದ ಸಂರಕ್ಷಿತವಾಗಿರಬಹುದೆಂದು ಭಾವಿಸುವದು ಮೂರ್ಖತನ ಸುರಕ್ಷಿತತೆ, ಭದ್ರತೆ ಇವು ಯಾವದೇ ಕೇವಲ ಒಂದು ರಾಷ್ಟ್ರದ ಶಕ್ತಿಯನ್ನು ಬೆಳೆಸುವದರಿಂದ ಸುರಕ್ಷಿತತೆಯು ಪ್ರಾಪ್ತವಾಗುವದೆಂಬದು ಭ್ರಮೆ ಎಂಬ ಮಾತು ಮೊನ್ನಿನ ಜಾಗತಿಕ ಯುದ್ಧದಿಂದ ಸಿದ್ಧವಾಗಿದೆ. ರಷಿಯದಂಥ ಪ್ರಬಲರಾಷ್ಟ್ರವೂ ಕೂಡ ಎಷ್ಟೇ ಬಲಾಢ್ಯವಿದ್ದರೂ ಒಂಟಿಯಾಗಿ ವೈರಿಯನ್ನು ಎದುರಿಸುವದು ಅಸಾಧ್ಯವಾಗಿ ಪರಿಣಮಿಸಿತು. ಆದುದರಿಂದ ಬಲಾಢ್ಯವಾದ ಅಂತರ್‌ರಾಷ್ಟ್ರೀಯ ಸಂಸ್ಥೆಯನ್ನು ಕಟ್ಟುವದರಿಂದಲೇ ಎಲ್ಲ ರಾಷ್ಟ್ರಗಳಿಗೆ ಭದ್ರವಾದ ಸಂರಕ್ಷಣೆಯ ಭರವಸೆ ದೊರೆಯುಬಹುದು. ಇಂಥ ಸಂಸ್ಥೆಯಾದ ಯುಕ್ತರಾಷ್ಟ್ರ ಸಂಘವು ರಷಿಯದ ಪ್ರತಿಬಂಧಾಧಿಕಾರ ಇಲ್ಲವೆ ಅಮೇರಿಕೆಯ ಬಲ ಇವುಗಳಿಗೆ ತಲೆಬಾಗಿಸದಷ್ಟು ಪ್ರಬಲವಾಗಿರಬೇಕು.

ಏಶಿಯದ ಪ್ರಸಾದನ

ಏಶಿಯ ರಾಷ್ಟ್ರಗಳನ್ನು ತಮ್ಮೆಡೆಗೆ ಒಲಿಸಿಕೊಳ್ಳುವ ಪ್ರಯತ್ನವನ್ನು ರಷಿಯ ಅಮೇರಿಕ ಎರಡೂ ರಾಷ್ಟ್ರಗಳೂ ಒಳ್ಳೆಯ ಆಸ್ಥೆಯಿಂದ ನಡೆಸಿವೆ. ಈ ಮಾತಿನ ದೃಷ್ಟಾಂತವನ್ನು ನೋಡಬೇಕಾದರೆ ಯುಕ್ತ ರಾಷ್ಟ್ರ ಭದ್ರತಾಮಂಡಲದಿದುರು ಇಂಡೊನೇಶಿಯದ ಪಕ್ಷ ಪ್ರತಿಪಾದನೆಗೆ ಆ ರಾಷ್ಟ್ರದ ಹಿಂದಿನ ಮುಖ್ಯ ಮಂತ್ರಿಯಾದ ಸುಲ್ತಾನ ಶಹರೀರರಿಗೆ ಆಮಂತ್ರಣ ಕೊಡತಕ್ಕದ್ದೆಂಬ ಗೊತ್ತುವಳಿಗೆ ೮ ಅನುಕೂಲ ೩ ಪ್ರತಿಕೂಲ ಮತಬಿದ್ದು ಅದು ಸ್ವೀಕೃತವಾದುದನ್ನು ಎತ್ತಿ ತೋರಿಸಬಹುದು. ಬ್ರಿಟನ, ಫ್ರಾನ್ಸ, ಬೆಲ್ಜಿಯಂ ಈ ಮೂವರು ಸಾಮ್ರಾಜ್ಯವಾದಿಗಳು ವಿರುದ್ಧ ಮತ ಕೊಟ್ಟರೂ ರಷಿಯ, ಅಮೇರಿಕ ಈ ಎರಡೂ ರಾಷ್ಟ್ರಗಳೂ ಇಂಡೋನೇಶಿಯಕ್ಕೆ ತನ್ನ ಪಕ್ಷ ಪ್ರತಿಪಾದನೆಯ ಹಕ್ಕು ಇದೆ ಎಂದು ಪ್ರತಿಪಾದಿಸಿದ್ದು ವಿಚಾರಾರ್ಹವಾಗಿದೆ.

ಕೊರಿಯದ ಬಗ್ಗೆ ಅಮೇರಿಕ ರಷಿಯಗಳು ಪ್ರಕಟನೆ, ಪ್ರತಿ ಪ್ರಕಟನೆ ಹೊರಡಿಸಿ ಎಬ್ಬಿಸಿದ ವಾದವನ್ನು ನೋಡಿದರೆ ಜಗತ್ತು ಇಬ್ಭಾಗವಾಗುವದೆಂದೂ ಅದರಂತೆ ಕೊರಿಯವೂ ವಿಭಜನೆ ಹೊಂದಬಹುದೆಂದೂ ಅನಿಸದಿರದು. ಪ್ರತಿಯೊಂದು ಏಶಿಯರಾಷ್ಟ್ರಕ್ಕೂ ಈ ಪ್ರಶ್ನೆಯು ಒಂದು ಸಮಸ್ಯೆಯಾಗಿರುವದು. ಏಶಿಯಖಂಡದ ರಾಷ್ಟ್ರಗಳು ಯಾವದೆ ಒಂದು ಸಾಮ್ರಾಜ್ಯವಾದಿಯ ಪಕ್ಷದಲ್ಲಿ ಸೇರುವದರಿಂದ ಈ ಸಮಸ್ಯೆ ಸಮಾಧಾನಕರವಾಗಿ ಬಿಡಿಸಲ್ಪಡದೆ, ಎಲ್ಲ ಏಶಿಯ ಖಂಡದ ರಾಷ್ಟ್ರಗಳೂ ಸೇರಿ ಶುದ್ಧ ಪ್ರಜಾಪ್ರಭುತ್ವ ತಳಹದಿಯ ಮೇಲೆ ಅಂತರರಾಷ್ಟ್ರೀಯ ಭೋರಣ ವಹಿಸುವದರಿಂದ ಮಾತ್ರ ಸಾಧ್ಯವಿದೆ.

154

ಸ್ನೇಹವೋ ದಾಸ್ಯವೋ?

ಚೆಕೋಸ್ಲೊವಾಕಿಯ, ಪೋಲಂಡಗಳು ಮೊದಲು ಮಾರ್ಶಲ ಯೋಜನೆಯ ಪರಿಶೀಲನೆಗಾಗಿ ಕರೆದ ಪ್ಯಾರಿಸ ಪರಿಷತ್ತಿಗೆ ಒಪ್ಪಿ ಅದರಂತೆ ತಿಳಿಸಿದ್ದರೂ ಕೂಡ ಸ್ಟಾಲಿನ್ನರು ಈ ರಾಷ್ಟ್ರಗಳು ಪ್ಯಾರಿಸ ಪರಿಷತ್ತಿಗೆ ಹೋಗಕೂಡದೆಂದು ವರ್ಜಿಸು ಉಪಯೋಗಿಸಿದ್ದು, ಲೇಕಸಕ್ಸೆಸದಲ್ಲಿ ರಶಿಯದ ಪ್ರತಿನಿಧಿಗಳು ವಹಿಸಿದ ಧೋರಣ ಇವುಗಳಿಂದ ರಶಿಯವು 'ಮಿತ್ರ ರಾಷ್ಟ್ರಗಳ' ಬಗ್ಗೆ ಯಾವ ಧೋರಣವನಿಟ್ಟುಕೊಂಡಿದೆ ಎಂಬದು ವಿದಿತವಾಗುವದು. ರಶಿಯ ದೇಶವು ತನ್ನೊಡನೆ ಮಿತ್ರತ್ವ ವಹಿಸುವದೆಂದರೆ ತನಗೆ ವಿಧೇಯವಾಗಿರುವುದೆಂದು ಹೇಳುತ್ತಿರುವಂತೆ ತೋರುವದು. ಅಮೇರಿಕೆಯ ಆರ್ಥಿಕ ಸಾಮ್ರಾಜ್ಯ ಧೋರಣದಲ್ಲಿ ಬೇಕಾದ ರಾಷ್ಟ್ರವು ಅಮೇರಿಕೆಯ ಡಾಲರ ನಿರಾಕರಿಸಲು ಅವಕಾಶವಿದೆ.

ಭ್ರಮನಿರಸನವಾಗಲು ಬಹಳ ಕಾಲಾವಧಿ ಬೇಕು. ಒಳ್ಳೆ ಬುದ್ಧಿಜೀವಿಗಳೆನ್ನಿಸಿಕೊಂಡವರೂ ಕೂಡ ಸೋವಿಯಟ ಯೂನಿಯನ್ನು ಹಿಂದೊಮ್ಮೆ ಝಾರ ಸಾಮ್ರಾಜ್ಯಶಾಹಿಯನ್ನು ನಿರ್ನಾಮಮಾಡಿ ಜನ್ಮತಾಳಿದ ಸಂಗತಿಯನ್ನೇ ಇನ್ನೂ ನಂಬಿ ಸೋವಿಯಟ ಸರಕಾರವೆಂದರೆ ಸಾಮ್ರಾಜ್ಯಶಾಹಿಯ ವೈರಿ, ಅದಕ್ಕೆ ಸಾಮ್ರಾಜ್ಯವಾದದ ಆರೋಪ ಕೊಡುವದು ಸರಿಯಲ್ಲವೆಂಬ ಭಾವನೆ ಮಾಡಿಕೊಂಡಿದ್ದಾರೆ. ಆದರೆ ಆ ಸಾಮ್ರಾಜ್ಯ ವಿರೋಧಿ ವೃತ್ತಿಯ ಸೋವಿಯಟ ರಶಿಯ ರಾಷ್ಟ್ರವು ಪೋಲಂಡಿನ ಮೇಲೆ ಹಿಟ್ಲರನೊಡನೆ ಒಪ್ಪಂದ ಮಾಡಿಕೊಂಡು ನುಗ್ಗಿದಾಗಲೇ ಸತ್ತು ಹೋಗಿದೆ. ಹಂಗರೀ, ರುಮೇನಿಯ ಮೊದಲಾದ ನಿರ್ಬಲ ರಾಷ್ಟ್ರಗಳನ್ನು ತನ್ನ ವರ್ಚಸ್ಸಿಗೆ ತಲೆಬಾಗಲು ಹಚ್ಚಿ ಅವುಗಳನ್ನು ತನ್ನ ಅಂಕಿತದಲ್ಲಿರಮಾಡಿದ ರಶಿಯದ ಧೋರಣೆಯು ಸಾಮ್ರಾಜ್ಯವಾದಿ ಧೋರಣೆಯಲ್ಲದೆ ಮತ್ತೇನು? ಯಾರಿಗೆ ಈ ಮಾತಲ್ಲಿ ವಿಶ್ವಾಸವಿಲ್ಲವೋ ಅಂಥವರು ಪೂರ್ವ ಮತ್ತು ಮಧ್ಯ ಯುರೋಪಿಗೆ ಒಮ್ಮೆ ಹೋಗಿ ಅಲ್ಲಿ ರಶಿಯದ ಬಾಲಾಗಸಿಯಾದ ರಾಷ್ಟ್ರಗಳ ಪ್ರತಿನಿಧಿಗಳೊಡನೆ ಮಾತಾಡಿದರೆ ನಿಜಾಂಶ ತಿಳಿದು ಬರುವದು.

ಹೈದರಾಬಾದ್ ಕಾಂಗ್ರೆಸ್

ಸ್ಟೇಟ್ ಕಾಂಗ್ರೆಸ್ಸಿಗೆ ಸಹಾಯ ಮಾಡಿರಿ.

ಈಗ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪುಲ್ಲಾರೆಡ್ಡಿಯವರು ಹೀಗೆ ಬರೆಯುತ್ತಾರೆ. "ನಿಮ್ಮ ಅನಂತ ತ್ಯಾಗಗಳ ಫಲವಾಗಿ ನಿನುಗೆ ಸ್ವರಾಜ್ಯವು ಲಭಿಸಿದೆ. ಆದರೆ ಹೈದರಾಬಾದು ತನ್ನ ಸ್ವಾತಂತ್ರ್ಯವನ್ನು ಸಾರಿ ನಿರಂಕುಶ ಪರಿಪಾಲನೆಯನ್ನು ಸಾಗಿಸಿದೆ ಇದನ್ನು ಅಂತಗೊಳಿಸಲು ಸ್ಟೇಟ್ ಕಾಂಗ್ರೆಸ್ ಶಾಂತಿಯುತ ಹೋರಾಟವನ್ನು ಹೂಡಿದೆ. ಸರಕಾರವು ಇದಕ್ಕೆ ಜಾತೀಯ ಸ್ವರೂಪನನ್ನು ಕೊಟ್ಟು ಪ್ರಜೆಗಳ ಸ್ವಾತಂತ್ರ್ಯ, ಧನ, ಪ್ರಾಣ ಆಸ್ತಿಗಳ ಹಾನಿಗೆ ಅವಕಾಶಮಾಡಿಕೊಟ್ಟು ಪ್ರಚಂಡ ದಬ್ಬಾಳಿಕೆಯನ್ನು ಸಾಗಿಸಿದೆ. ರಾಜ್ಯದಲ್ಲೆಲ್ಲಾ ಅನಾಯಕತ್ವವು ಹಬ್ಬಿದೆ. ಸ್ಟೇಟ್ ಕಾಂಗ್ರೆಸ್ ತನ್ನ ಶಾಖೆಗಳನ್ನು ಭಾರತ ಪ್ರದೇಶದಲ್ಲಿ ತೆರೆದು ಕಾರ್ಯಾರಂಭ ಮಾಡಿದೆ ಪ್ರಭುತ್ವದ ಕ್ರೋಧಾಗ್ನಿ, ಮತ್ತು ಗೂಂಡಾಜನರ ಅತ್ಯಾಚಾರಕ್ಕೊಳಗಾದ ಪ್ರಜೆಗಳನ್ನು ಯಾವರೀತಿಯಲ್ಲಿ ಪಾರುಮಾಡಬೇಕೆಂಬ ಬಗ್ಗೆ ನಮ್ಮ ಸತ್ಯಾಗ್ರಹಿಗಳಿಗೆ ಶಿಕ್ಷಣಕೊಡಬೇಕಾಗಿದೆ. ಇದಕ್ಕೆಲ್ಲಾ ಹಣಸಹಾಯವು ಅತ್ಯಂತಾವಶ್ಯಕ. ಹಣವಿಲ್ಲದೆ ಯಾವ ಕೆಲಸವೂ ನಡೆಯಲಾರದು. ಈ ಕಾರಣ ಉದಾರ ರೀತಿಯಿಂದ ಸಹಾಯಮಾಡಿರಿ. ಬಳ್ಳಾರಿ ಸರ್ಕಲ ಕಾಂಗ್ರೆಸ್ ಕಮೀಟಿಯವರಲ್ಲಿ 1 ರೂ ನಿಂದ ಎಷ್ಟು ಹಣದವರಿಗಾದರೂ ಟಿಕೆಟ್‌ಗಳು ದೊರೆಯುತ್ತವೆ

ಕಲ್ಲುಗೋಡು (ಬಳ್ಳಾರಿ) ಈ ಊರಿನ ಕೆಲ ರೈತರು ಹರಿಜನರಿಗೆ ಸೇರಿದ 62 ಎಕರೆ ಭೂಮಿಯಲ್ಲಿ ದುಡುಕಿ ಪ್ರವೇಶಮಾಡಿದ್ದನ್ನು ಕಾಮ್ರೇಡ್ ನಿಪಾಣಿಯವರು ತಹಶೀಲ್ದಾರರ ಗಮನಕ್ಕೆ ತಂದು ದೂರ ಮಾಡಿದರು.

ಕರ್ನಾಟಕ ಸೇವಾಸಂಘ (ರಿಜಿಸ್ಟರ್ಡ್) ಮದರಾಸು.

ಈ ಸಂಘದ ಆಶ್ರಯದಲ್ಲಿ ಬರುವ 1948 ನೇ ಫೆಬ್ರವರಿ ತಿಂಗಳಲ್ಲಿ ನುದ್ಯಾಪಿನ "ಅಖಿಲ ಕನ್ನಡಿಗರ ಕೂಟ" ವೂ ಮಾರ್ಚಿ ತಿಂಗಳಲ್ಲಿ "ಕನ್ನಡ ಮಕ್ಕಳ ಕೂಟ" ವಿಶೇಷ ಸಾಹಿತ್ಯೋತ್ಸವಗಳೂ ಜರಗಲಿವೆ. ಸದ್ಯದಲ್ಲೆ ಮಹಿಳಾ ರಕ್ಷಣ ಕೇಂದ್ರವು ಆರಂಭವಾಗಲಿದೆ. ಅಲ್ಲದೆ ನಗರದಲ್ಲಿ ಕರ್ನಾಟಕ ಹಾಸ್ಟೆಲ್ ಒಂದನ್ನು ತೆಗೆಯುವ ಬಗ್ಗೆ ಕಾರ್ಯಕ್ರಮಕ್ಕೆ ಆರಂಭಿಸಿದೆ.

ನಾನಾ ಭಾಷೆಗಳನ್ನಾಡುವವರಿರುವ ಈ ಮಹಾನಗರದಲ್ಲಿ ಕನ್ನಡಿಗರ ಏಳಿಗೆಗಾಗಿ ಸುಮಾರು ಮೂರು ಸಾವಿರ ಉತ್ತಮ ಕನ್ನಡ ಪುಸ್ತಕಗಳಿಂದ ಕೂಡಿದ "ಸಂಚಾಲಕ ಪುಸ್ತಕ ಭಂಡಾರ"ವಿದೆ. ತಿಂಗಳಿಗೆ ಒಂದು ಅಥವಾ ಎರಡು ಸಲ ಭಾಷಣ, ವಾಚನ, ವ್ಯಹಸನ ಸಂಗೀತ ಇತ್ಯಾದಿ ಕಾರ್ಯಕ್ರಮಗಳು ಜರಗುತ್ತಿವೆ. ವರ್ಷಕ್ಕೊಮ್ಮೆ ಕನ್ನಡಿಗರ ಅಧಿವೇಶನ ಸ್ಪರ್ಧೆಗಳು ಜರಗುತ್ತಿವೆ. ಈ ಸಂಘದ ಪ್ರೌಢವಯಸ್ಕರ ಶಿಕ್ಷಣ ಕೇಂದ್ರದಲ್ಲಿ ಕನ್ನಡ, ಇಂಗ್ಲೀಷು, ಹಿಂದೀ, ಬಾಷೆಗಳನ್ನು ಕಲಿಸುವುದಲ್ಲದೆ ಪ್ರಪಂಚ ಪರಿಚಯ ವಿಜ್ಞಾನ, ರಾಜಕೀಯ, ನಾಟಕ, ಕಾವ್ಯ ವಾಚನ, ಪ್ರಥಮ ಚಿಕಿತ್ಸೆ ಇತ್ಯಾದಿಗಳಲ್ಲಿ ವಾರಕ್ಕೊಮ್ಮೆ ಶಿಕ್ಷಣ ಕೊಡಲಾಗುವುದು.

ಆಗಾಗ ಆಕಾಶವಾಣಿ, ಚಲಚಿತ್ರ ಸ್ಟುಡಿಯೊ ವ್ಯಸ್ತುಶಾಲೆ, ಕಲಾಕ್ಷೇತ್ರ, ನ್ಯಾಯವಿಧಾಯಕ ಸಭೆ, ವಸ್ತು ಪ್ರದರ್ಶನಾಲಯ ಇತ್ಯಾದಿ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಅವುಗಳ ಅಲ್ಲಿಯ ಕಾರ್ಯ ಕಲಾಪಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಕನ್ನಡಿಗರ ಅಕ್ಷರಾಭ್ಯಾಸದ ಸಲುವಾಗಿ ಕನ್ನಡಿಗರ ಮನೆ ಮನೆಗೆ ಬಾಲ ಶಿಕ್ಷೆ ಪುಸ್ತಕಗಳನ್ನು ಹಂಚಲಾಗಿದೆ. ಕನ್ನಡಿಗರ ಹಿತಕ್ಕಾಗಿರುವ ಅನೇಕ ಯೋಜನೆಗಳು ಪರ್ಯಾಲೋಚನೆಯಲ್ಲಿವೆ. ಹೀಗೆ ಕಾರ್ಯ ನಿರ್ವಹಿಸಲು ಇಲ್ಲಿಯ ಕನ್ನಡಿಗರ ಪ್ರೋತ್ಸಾಹವೇ ಕಾರಣ. ಇದಕ್ಕೆ ಎರಡೇ ವರ್ಷಗಳಲ್ಲಿ ಸದಸ್ಯರ ಸಂಖ್ಯೆಯು ಸಾವಿರಕ್ಕೆ ವಿೂರಿದುದೇ ಸಾಕ್ಷಿ.

ಸಂಘದ ಪುರೋಭಿವೃದ್ಧಿಗಾಗಿ ಕೊಡಲಾಗುವ ಕನ್ನಡಿಗರೆಲ್ಲರ ಸಲಹೆಗಳಿಗೂ ಗಮನ ಕೊಡಲಾಗುವುದು. ಇದರಿಂದ ಅಖಿಲ ಕರ್ನಾಟಕದ ಕನ್ನಡಿಗರೂ ತಮ್ಮ ಸಲಹೆ ಸಹಕಾರ ಸಹಾಯ ಸಹಾನು ಭೂತಿಗಳನ್ನಿತ್ತು ಪ್ರೋತ್ಸಾಹಿಸ ಬೇಕಾಗಿ ವಿನ್ನಹ.

ಸಿ. ಕೆ. ತಿರುಮಲೇಶ್
ಕಾರ್ಯದರ್ಶಿ.

ಪಾಶ್ಚಾತ್ಯರ ಬಗೆಗೆ ತಿರಸ್ಕಾರ

ಪಾಶ್ಚಾತ್ಯ ರಾಷ್ಟ್ರಗಳ ಜನರು ಏಶಿಯದಲ್ಲಿ ಈ ವರೆಗೆ ಅನುಸರಿಸುತ್ತ ಬಂದ ಸಾಮ್ರಾಜ್ಯವಾದೀ ಧೋರಣದಿಂದ ಏಶಿಯದ ಜನಾಂಗದವರಿಗೆ ಯುರೋಪಿಯನ್ನ ರಾಷ್ಟ್ರಗಳ ಬಗ್ಗೆ ಮನಸ್ಸಿನಲ್ಲಿ ವಿಷತುಂಬಿ ಹೋಗಿದೆ ಚರ್ಚಿಲ್-ಆಟ್ಲೆ-ಬ್ಲೂಮ್-ದಾಲಾದೀರ ಇವರಲ್ಲಿ ಪೌರಸ್ತ್ಯರು ಭೇದವನ್ನೇ ಕಾಣರು. ಅವರು 'ಲಂಕೆಯಲ್ಲಿ ಹುಟ್ಟಿದವರೆಲ್ಲ ರಾವಣರು' ಎಂಬ ಭಾವನೆಯನ್ನಿಟ್ಟುಕೊಂಡಿದ್ದಾರೆ. ಪಾಶ್ಚಾತ್ಯ ಸಾಮ್ರಾಜ್ಯ ಶಾಹಿಯ ವಿರೋಧವಾಗಿ ಪೌರಸ್ತ್ಯರಲ್ಲಿರುವ ದ್ವೇಷ ಭಾವನೆಯು ಮೂಲಕ ಎಲ್ಲ ಪೌರಸ್ತ್ಯ ರಾಷ್ಟ್ರಗಳೂ ಸ್ವಾಭಾವಿಕವಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ವಿರೋಧಿಯೆಂದು ಗಣಿಸಲಾದ ರಶಿಯದ ಬಗ್ಗೆ ಆದರ ವಹಿಸಿವೆ. ಆದರೆ ರಶಿಯ ರಾಷ್ಟ್ರವೂ ಆಕ್ರಮಣಶೀಲ ರಾಷ್ಟ್ರ. ಆದರೆ ಆಕ್ರಮಣದ ಧೋರಣವು ತೀರ ನಿರ್ದಯತನದ್ದು ಎಂಬ ಮಾತನ್ನು ಪೌರಸ್ತ್ಯರು ಚೆನ್ನಾಗಿ ಮನಗಂಡು ರಶಿಯದ ಸಾಮ್ರಾಜ್ಯವಾದೀ ಧೋರಣ ಇವನ್ನು ತೂಗಿ ನೋಡುವ ಮುಂಜಾಗ್ರತೆ ವಹಿಸುವದು ಕ್ಷೇಮಕರ.

ನವಭಾರತಕ್ಕೆ ಚಂದಾದಾರರಾಗಿರಿ

ತಾರಾನಾಥ ಆಯುರ್ವೇದ ವಿದ್ಯಾಪೀಠ

(3 ನೆಯ ಪುಟದಿಂದ ಮುಂದುವರಿದಿದೆ)

ಒದಗಿದೆ. ಜನಪ್ರಿಯರೂ, ನಮ್ಮಲ್ಲಿ ಸಹಾನುಭೂತಿಯುಳ್ಳವರೂ ಆದ ಕಲೆಕ್ಟರ್ ಸತಿಪತಿಯರೊಂದಿಗೆ ಬಂದು ಈ ಸಂಸ್ಥೆಯ ಪ್ರಾರಂಭೋತ್ಸವ ನೆರವೇರಿಸಲೊಪ್ಪಿದುದಕ್ಕೆ ಅವರನ್ನು ವಂದಿಸುವೆ. ದಕ್ಷಿಣದೇಶದಲ್ಲಿ ಮಹಾಪುರುಷರಂತಿದ್ದ ಪಂಡಿತ ತಾರಾನಾಥ ಜೀಯವರು ತುಂಗಭದ್ರಾತಟದಲ್ಲಿ ಪ್ರೇಮ ವಿದ್ಯಾಪೀಠವನ್ನು ಸ್ಥಾಪಿಸಿ 1922 ರಿಂದ 1942 ರ ವರೆಗೆ ತಮ್ಮ ಆಕರ್ಷಕ ವ್ಯಕ್ತಿತ್ವದಿಂದ ಸಾವಿರಾರು ಯುವಕವೃಂದಕ್ಕೆ ವೈದ್ಯಕೀಯ ಶಿಕ್ಷಣ ಕೊಟ್ಟು ಅವರ್ಣನೀಯವಾದ ಸೇವೆ ಸಲ್ಲಿಸಿದರು. ಇಂಥಾ ಸಂಸ್ಥೆಗಳ ಅವಶ್ಯಕತೆಯು ಬಹಳವಿದ್ದು ಬಳ್ಳಾರಿಯಲ್ಲಿನ ಪ್ರಯತ್ನಗಳು ಇಂದು ಫಲಿತವಾದವು. ಶ್ರೀ ಟೇಕೂರು ಸುಬ್ರಹ್ಮಣ್ಯಂರವರ ಕೃಷಿಯ ಫಲವಾಗಿ ಬಳ್ಳಾರಿ ಲೇಟ್ ಜೊನ್ನಗಡ್ಡ ಶೇತಾರಾಮ ಶೆಟ್ಟಿಯವರ ಬಂಗ್ಲೆಯು ಅವರ ಮಾವಂದಿರಾದ ಶ್ರೀ ಮೋತಿ ನಾರಾಯಣರಾವು M. L. C. ಇವರಿಂದ ಮಾಸಿಕ 25/- ಬಾಡಿಗೆಯಂದ ದೊರೆಯಿತು. ಅನೇಕ ಸ್ನೇಹಿತರು ನಮಗೆ ಉದಾರದ್ರವ್ಯ ಸಹಾಯಮಾಡಿ ನನ್ನ ಚಿರಕೃತಜ್ಞತೆಗೆ ಪಾತ್ರರಿರುವರು. ವಿದ್ಯಾಪೀಠಕ್ಕೆ ತಾರಾನಾಥರ ಪಟ್ಟಶಿಷ್ಯರೂ, ಸಹಕಾರ್ಯಕರ್ತರೂ ಆದ ಶ್ರೀ ಸ್ವಾಮಿರಾಯಾಚಾರ್ಯರ ಸೇವೆಯು ದೊರಕಿದ್ದು ನಮ್ಮ ಸುದೈವ.

ಆಯುರ್ವೇದ ಶಿಕ್ಷಣದಿಂದ ದಾರಿ ಹೋಕನಿಗೂ ಸುಲಭ ಚಿಕಿತ್ಸೆ ದೊರಕುವಂತಿರಬೇಕಾದುದೇ ನಮ್ಮ ಉದ್ದೇಶ. ಎಲ್ಲಾ ರೋಗಗಳಿಗೂ ಆಯುರ್ವೇದದಲ್ಲಿ ಚಿಕಿತ್ಸೆಯುಂಟು. ಪಾಶ್ಚಿಮಾತ್ಯ ಚಿಕಿತ್ಸೆಗಳಿಂದ ಗುಣವಾಗದ ಪಾಪಯ್ಯ ಶಾಸ್ತ್ರಿಗಳು ತುಂಗಭದ್ರಾ ಚಿಕಿತ್ಸೆಯಿಂದ ಗುಣಹೊಂದಿದ್ದು (Diabetes) ಅಸಂಖ್ಯಾತ ಉದಾಹರಣೆಗಳಲ್ಲೊಂದು, ಪ್ರೇಮ ವಿದ್ಯಾಪೀಠಕ್ಕೆ ಯುರೋಪು, ಅಮೆರಿಕಾ, ಜಪಾನು, ಶಿಲೋನ್‌ಗಳಿಂದ ಚಿಕಿತ್ಸೆಗಾಗಿ ಬರುತ್ತಿದ್ದರು. ನಮ್ಮ ವಿಧಾನಗಳಿಂದ ಶಿಕ್ಷಣಹೊಂದಿದವರು ಭಾರತದ ಭಾವೀ ಕಲ್ಯಾಣದ ಮೂಲಕ್ಷೇತ್ರಗಳಾದ ಹಳ್ಳಿಗಳಿಗೆ ಹೋಗಿ ಸೇವೆ ಸಲ್ಲಿಸುವರು.

ದಕ್ಷಿಣ ಕನ್ನಡ ಜಿಲ್ಲೆ 20, ಬಳ್ಳಾರಿ 12, ಧಾರ್ವಾಡದ 2, ಮೈಸೂರು 2, ಕಾರ್ವಾರ 1, ಸೋಲಾಪುರ 1, ರಾಯಚೂರ 1, ಒಟ್ಟು 39 ವಿದ್ಯಾರ್ಥಿಗಳಿದ್ದಾರೆ. 4 ಪ್ರೊಫೆಸರರಿದ್ದಾರೆ. ಶ್ರೀ ಸಾಮಿರಾಯಾಚಾರ್ಯರಲ್ಲದೆ ಆಯುರ್ವೇದ ವಿಶಾರದ, ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಪಂಡಿತರಾದ ಶ್ರೀ ಕೆ. ರಾಘವೇಂದ್ರಾಚಾರ್ಯರಿರುವರು. ಪೌರ್ವಾತ್ಯ ಪಾಶ್ಚಿಮಾತ್ಯ ವೈದ್ಯಶಿಕ್ಷಣ ಪಂಡಿತರಾದ ಶ್ರೀ ಮುಂತೆ ನಮೂರ್ತಿ L. I. M. ರಿರುವರು. ಪ್ರೊ. ವಿ ನಾರಾಯಣರಾಯರು ನಮಗೆ ಉಚಿತ ಸೇವೆ ಸಲ್ಲಿಸಿ ಕೃತಜ್ಞತಾಪೂರ್ವಕ ವಂದನೆಗೆ ಪಾತ್ರರಿರುವರು. ನಾವು ಒಂದು ಆಸ್ಪತ್ರೆಯನ್ನು ತೆರೆದಿದ್ದೇವೆ. ದಿನಾಲೂ ಉಚಿತ ಚಿಕಿತ್ಸೆಗೆ ಬರುವವರ ಸರಾಸರಿಸಂಖ್ಯೆ 30 ಇದೆ. ಔಷಧಾಲಯ ಬೇಕು ಆಸ್ಪತ್ರೆಯಲ್ಲೇರೋಗಿಗಳನ್ನಿಟ್ಟು, ಚಿಕಿತ್ಸೆ ನಡೆಸುವುದಾಗಬೇಕು, ನಮಗೆ ಸ್ಥಳಬೇಕು. ಕಟ್ಟಡಬೇಕು. ಇದಕ್ಕೆಲ್ಲಾ ನಿಮ್ಮ ಉದಾರ ಸಹಾಯಬೇಕು

ಶ್ರೀ ಆದ್ಯ ಅನಂತಾಚಾರ್ಯರ ಭಾಷಣ:—

ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಅಡ್ಡಾಡಿದ್ದೇನೆ. ಆದರೆ ನಮ್ಮ ಸುಸಂಸ್ಕೃತಿಗೆ ಅನುಗುಣವಾದ ಇಂಥಾ ವಿದ್ಯಾಲಯದ ಕ್ಷೇತ್ರ,ವಾತಾವರಣ ಸದ್ಯಕ್ಕೆ ಎಲ್ಲಿಯೂ ಇಲ್ಲ. ಇದರಿಂದ ನನಗೆ ಮಹದಾನಂದವಾಗಿದೆ. ದಾನಗಳಲ್ಲಿ ಎಷ್ಟೋ ವಿಧವಾದ ದಾನಗಳಿದ್ದು ಜೀವಿತ ದಾನಕ್ಕಿಂತ ಮಹತ್ತಾದದ್ದು ಬೇರೊಂದಿಲ್ಲವೆಂಬುದು ಸಿದ್ಧವಾಗಿದೆ. ಈ ಸಂಸ್ಥೆಯು ಮಹಾವೃಕ್ಷವಾಗಿ ಬೆಳೆಯಬೇಕು. ಆಧುನಿಕ ಯುವಕರು ಶಹರದ ವ್ಯಾಮೋಹಗಳೊಳಗಾಗಿ ಶೃಂಗಾರ ವಿನೋದಗಳಿಗಾಗಿ ಅಧಿಕ ದ್ರವ್ಯ ಅಧಿಕ ಸಮಯವನ್ನು

ವಿನಿಯೋಗಿಸುವ ವಾಡಿಕೆ ಎಲ್ಲಾ ಕಡೆಗೂ ಉಂಟು ಅಂಥಾ ಅವಕಾಶಗಳೇ ಶಹರಕ್ಕೆ ದೂರವಿರುವ ಈ ಮನೋಹರ ಸ್ಥಳದಲ್ಲಿ ಇಲ್ಲದುದು ನನಗೊಂದು ಸಮಾಧಾನ. ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರಾಗಿ ಎಲ್ಲಾ ವಿಷಯಗಳಲ್ಲೂ ಪಾಶ್ಚಿಮಾತ್ಯರನ್ನನುಕರಿಸದೆ ಅವರ ಅನುಕರಣೀಯ ವಿಜ್ಞಾನ ವಿಧಾನವನ್ನು ಅನುಕರಿಸಿ ತಮ್ಮ ವೈದ್ಯಕೀಯ ವೃತ್ತಿಯನ್ನು ಸರ್ವಾಂಗ ಪರಿಪೂರ್ಣವಾಗಿ ಮಾಡುವರೆಂದು ಹಾರೈಸುತ್ತೇನೆ.

ಪ್ರೊಫೆಸರ್ ನಾರಾಯಣರಾಯರ ದೀರ್ಘಭಾಷಣದ ಭಾಗ:-

ಪೌರ್ವಾತ್ಯ ಸಂಸ್ಕೃತಿಯ ಪ್ರಾಚೀನತೆಯ ಗರ್ಭದಿಂದ ಈಗ ನಾವು ಶ್ರೇಷ್ಠವೆಂದೆಣಿಸಿದ ಪಾಶ್ಚಿಮಾತ್ಯ ವಿಜ್ಞಾನ ಕಲೆಗಳ ಆವಿರ್ಭಾವವಾಯಿತು. ನಮ್ಮಲ್ಲಿ ಯಾವುದು ಇದ್ದಿಲ್ಲ? ಎಲ್ಲಾ ವಿಧಾನಗಳೂ ಸಂಪೂರ್ಣತೆಯ ನುಟ್ಟವನ್ನು ಏರಿದ್ದವು ದೈಹಿಕ ವಿಜ್ಞಾನಕ್ಕೂ, ವೇದಾಂತಕ್ಕೂ ನಿಕಟಸಂಬಂಧವಿದ್ದಿತು. ಅನ್ನಮಯ ಪ್ರಾಣಮಯ, ಕೋಶಗಳ ಮಹತ್ವವನ್ನು ರುಷಿಗಳಿಂದರಿತು ಪ್ರತಿಪಾದನೆ ಮಾಡುವವರಿದ್ದಾರೆ. ನಮ್ಮ ಅಲಕ್ಷ್ಯದಿಂದ ನಾವು ಹಿಂದುಳಿದಿರಬಹುದು ಈಗ ಸರ್ವಧರ್ಮಗಳ ಸಮ್ಮೇಳನ ಸಮ್ಮಿಲನಕ್ಕವಕಾಶ ಸಮುಪಾಯಗಳಿರುವಂತೆ ಸರ್ವ ವೈದ್ಯಕೀಯ ವಿಧಾನಗಳ ಮಧುರ ಸಮ್ಮಿಲನವಾಗುವುದವಶ್ಯಕ. ಪಾಶ್ಚಾತ್ಯ ವಿಧಾನದ ಶ್ರೇಷ್ಠ ಅಂಶಗಳನ್ನು ನಾವೇಕೆ ಸಮಾವೇಶಗೊಳಿಸಬಾರದು? ಆದರೆ ನಾವು ಕೀಳು ನಮ್ಮ ವಿಧಾನಗಳು ಕೀಳೆಂಬ ಮನೋವೃತ್ತಿಯಿಂದ ಅದಕ್ಕೆ ಪ್ರವೇಶಿಸದಿರೋಣ ವಿದ್ಯಾರ್ಥಿಗಳಲ್ಲೂ, ಅಧ್ಯಾಪಕರಲ್ಲೂ ಸರ್ವವಿಧಾನಗಳ ಸಾರಗಳನ್ನು ಸಮರಸಗೊಳಿಸಿ ಉಪದೇಶಾಮೃತವೆಂಬ ಮಧುರ ರಸಾಯನ ಸೇವನೆಗೆ ಆಕರಮಾಡುವ ಸ್ವಾಗತ ಬುದ್ಧಿ ಇರಬೇಕು. ನನಗೆ ತಿಳಿದುದನ್ನು ನಿಮಗೆ ಹೇಳಲು ಆಗಾಗ್ಗೆ ಬರುವೆನು.

ಡಾಕ್ಟರ್ ಯು. ಕೆ. ಎಲ್. ನಾರಾಯಣರಾವು:-

ಕಳೆದ 26 ವರ್ಷಗಳಿಂದ ನಾನು ಅಲ್ಲೋಪತಿಯ ಗುಲಾಮನಾಗಿ ದುಡಿದಿದ್ದೇನೆ. ನನಗೆ ಆಯುರ್ವೇದದ ಗಂಧವಿಲ್ಲದಿದ್ದರೂ ಆಯುರ್ವೇದದ ಮಹತ್ವವನ್ನು ಕೇಳಿರುತ್ತೇನೆ. ನಿಮ್ಮ ಪ್ರಯತ್ನಗಳು ಯಶಸ್ವಿಯಾಗಲಿ.

ಡಾಕ್ಟರ್ ಅಚ್ಚಯ್ಯ:—

ವೈದ್ಯ ವಿಧಾನಕ್ಕೆ ಪಾಂಚಭೌತಿಕ ತತ್ವವು ಆಧಾರವಾಗಿದೆ ಈ ತತ್ವಗಳ ಪ್ರತಿಪಾದನೆಯೂ, ಶಿಕ್ಷಣವೂ ಕ್ಷೀಣದೆಶೆಯಲ್ಲಿದೆ. ಈ ಸಂಸ್ಥೆಯ ಚಾಲಕರ್ತೃಗುರುತರವಾದ ಮತ್ತು ಯೋಗ್ಯವಾದ ಕಾರ್ಯದ ಹೊಣೆ ಹೊತ್ತಿರುವರು. ಎಲ್ಲರು ಸಹಾಯ ಸಹಕಾರ ಬುದ್ಧಿಗಳಿಂದ ಇದನ್ನು ನೋಡಬೇಕು.

ಜಿಲ್ಲಾ ವೈದ್ಯಾಧಿಕಾರಿಗಳು(D. m. o.)

ನನ್ನಂಥವರಿಗೆ ಇಲ್ಲಿ ಸ್ಥಾನವಿಲ್ಲ. ಆಯುರ್ವೇದದಬಗ್ಗೆ ನನಗೆ ಅಜ್ಞಾನವಿದ್ದಿತು. ಆದರೆ ಈಚೆಗೆ ಆಯುರ್ವೇದ ಶಾಸ್ತ್ರಗಳನ್ನೋದಿದ ಮೇಲೆ ಅದರ ಮೇಲೆ ನನ್ನ ಆದರವು ಹೆಚ್ಚಿ ಇಂಥಾ ಶಾಸ್ತ್ರ ಪಾಂಡಿತ್ಯವೂ ಅಗತ್ಯವೆಂಬುದು ನನ್ನ ಮನವರಿಕೆಯಾಯಿತು. ನಿಮ್ಮ ಪ್ರಯತ್ನಗಳೆಲ್ಲಾ ಯಶಸ್ವಿಯಾಗಲಿ.

ಅಧ್ಯಕ್ಷರ ಅಂತ್ಯ ಭಾಷಣದಲ್ಲಿ ಮನೆ ಹಿಕ್ಕಲಿಗಡವು ಮದ್ದಿಗೆ ಬರುವುದೆಂಬು ತಿಳಿದೂ ಕೂಡ ಮರ್ಯಾದ್ಧಿಸಿ ಬೇರೊಂದೆಡೆ ಹೋಗುತ್ತಿರುವುದು ಮಾನವಸ್ವಭಾವವಾಗಿದೆ. ನಾನು ಸರ್ಕಾರಿ ನವಕರ ಹಣದತಂಟಿ ನನಗಿಲ್ಲ. ಎಲ್ಲರೂ ಈ ಸಂಸ್ಥೆಗೆ ಕೊಡುಗೈಯಿಂದ ಸಹಾಯಮಾಡಲು ನಾನು ಬೇಡುತ್ತೇನೆ. ನನಗೆ ಇಷ್ಟು ಗೌರವ ಕೊಟ್ಟದ್ದಕ್ಕಾಗಿ ನಿಮಗೆಲ್ಲಾ ವಂದನೆ.

ಶ್ರೀ ವೇಣುಸಾಲಾಚಾರ್ಯರು 'ಸಂಸ್ಥೆಯಅಭಿವೃದ್ಧಿಗೆ ದ್ರವ್ಯಸಹಾಯಮಾಡಲು ಕೋರಿದರು

ಶ್ರೀಮನ್ ಸ್ವಾಮಿರಾಯಾಚಾರ್ಯರು ಅಭಾರ ಮನ್ನಿಸಿದರು. ಬಂದ ಅತಿಥಿಗಳಿಗೆ ಉದ್ಯಾನವನದಲ್ಲಿ ಚಹಾಪಾನದ ಸತ್ಕಾರವಾಯಿತು. ಇದಾದನಂತರ ಶಾಲಾಬಾಲಕರ ವಿನೋದಗಳ ಪ್ರದರ್ಶನ

ವಾಯಿತು. ನಗುವ ಯಂತ್ರ, ಆಧುನಿಕ ದಾಸರ ಶಿನೆಮಾ ಹಾಡುಗಳ ಹರಿಕಥೆ, ಕುಣಿಯೋನು ಬಾರೆಜೀನಾ ಭಾಷಣ ವಗೈರೆ ವಿನೋದಗಳುಪ್ರೇಕ್ಷಕ ವೃಂದವನ್ನು ಆನಂದ ಸಾಗರದಲ್ಲಿ ಮುಳುಗಿಸಿದವು.

"ವಂದೇಮಾತರಂ" ಗೀತೆಯ ನಂತರ ಸಭೆಯು ಮುಗಿಯಿತು.

ಪ್ರಾರಂಭೋತ್ಸವದ ಕಾಲಕ್ಕೆ ಸಂಸ್ಥೆಯ ಯಶವನ್ನು ಕೋರಿ, ಶುಭಸಂದೇಶಗಳನ್ನು ಕಳುಹಿಸಿದವರಲ್ಲಿ ಈ ಮಹನೀಯರಿರುವರು.

ಡಾಕ್ಟರ್ ಸುಮತೀ-ನಾರಾನಾಥ, ಡಾ॥ ಅಜಂಟ ಲಕ್ಷ್ಮೀಪತಿ ಮದ್ರಾಸು, ಕೇಲುನಂಬಿಯಾರ ಉಡುಪಿ, ಡಾ॥ ಬಸವರಾಜ ಅಕ್ಕಿ ಗದಗ, ಡಾ॥ ಚಂದಯ್ಯ ಹೆಗಡೆ, ಡಾ॥ ಎಂ ಆರ್. ಭಟ್. ಮಂಗಳೂರು, ಡಿ. ಕೆ. ಭಾರದ್ವಾಜ, ಡಾ॥ ಹಲಸೀಕರ, ಡಾ॥ ಯಂ ಗೋಪಾಲ ಕೃಷ್ಣರಾವು ಡಾ॥ ಅಮೃತರಾವು ತುಂಗಭದ್ರ, ಡಿ. ರಾಮಮೂರ್ತಿ, ಡಾ॥ ಜಿ. ಯಂ ವೀರಯ್ಯ ಕೂಡ್ಲಿಗಿ.

The Rayalaseema Bank Limited, Bellary.
ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್, ಬಳ್ಳಾರಿ.

ನಮ್ಮ ಮದ್ರಾಸ್ ಶಾಖೆ:— ೩೦೧, ಲಿಂಗಚೆಟ್ಟಿ ಸ್ಟ್ರೀಟ್, ಮದ್ರಾಸು.

ಇತರ ಶಾಖೆಗಳು:— ಬಳ್ಳಾರಿ ಜಿಲ್ಲಾ:— ರಾಯದುರ್ಗ, ಕೊಟ್ಟೂರು, ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ ಬಳ್ಳಾರಿ, ಆದವಾನಿ, **ಅನಂತಪುರ:**— ಅನಂತಪುರ, ಧರ್ಮಾವರಂ, ಕದಿರಿ, ಪಾಮಿಡಿ, ತಿಮ್ಮನಚೆರ್ಲ, ಉರವಕೊಂಡ, ಹಿಂದೂಪುರ, ಗುತ್ತಿ, **ಕರ್ನೂಲು:**— ಕರ್ನೂಲು:- ಪತ್ತಿಕೊಂಡ. **ಕಡಪ:**— ರಾಜಂಪೇಟೆ, ಕಡಪ, **ಚಿತ್ತೂರು,**— ಚಿತ್ತೂರ, ಮದನಪಲ್ಲಿ, ತಿರುಪತಿ, ನಗರಿ, ವಾಯಲ್ಪಾಡು

ಫಿಕ್ಸಡ್ ಡಿಪಾಜಿಟ್‌ನ ಬಡ್ಡೀದರ:— 6 ತಿಂಗಳಿಗೆ ಶೇಕಡ 2½% ವರ್ಷಕ್ಕೆ 3% 2 ವರ್ಷಗಳಿಗೆ 3½%.
ಕರೆಂಟು ಅಕೌಂಟು: 1%, **ಸೇವಿಂಗ್ಸ ಬ್ಯಾಂಕು:** 2% **ಕ್ಯಾಷ್ ಸರ್ಟಿಫಿಕೇಟುಗಳು:** 3½%.
ಮಾಸಿಕ ಪ್ರಾವಿಡೆಂಟ ಫಂಡ ಡಿಪಾಜಿಟ್:-3%

ಬಿ. ವಿ. ಶೇಷಗಿರಿರಾವ್, ಕಾರ್ಯದರ್ಶಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO

ಜೈಹಿಂದ್ Reg. No. M. 4746

ಸಮಾಚಾರ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ | ಸಂಚಿಕೆ ೩೮ | ಬಳ್ಳಾರಿ ಅಕ್ಟೋಬರು ೬ ಸೋಮವಾರ ೧೯೪೭ | ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

೨-೧೦-೧೯೪೭

ಮಹಾತ್ಮಗಾಂಧಿಯ ವರ್ಧಂತಿಯ ಜನ್ಮದಿನ.

ಭಾರತಕ್ಕೆ ಸ್ವರಾಜ್ಯವು ಲಭಿಸಿದುದು ಗಾಂಧೀಜೀಯ ನೇತೃತ್ವದಲ್ಲಿ ಪ್ರಾರಂಭವಾದ ಸತ್ಯಾಗ್ರಹೋದ್ಯಮಗಳಿಂದ- ಭಾರತದ ಸಾಮಾಜಿಕ, ಆರ್ಥಿಕ, ನೈತಿಕ ಉನ್ನತಿಯು ಆಗಬೇಕಾದರೆ ಅವರ ಯೋಜನೆಗಳನ್ನು ಸ್ವೀಕರಿಸಲೇಬೇಕು. ಭಗವಂತನು ಅವರಿಗೆ ದೀರ್ಘಾಯುವನ್ನು ಪ್ರದಾನ ಮಾಡಲಿ.

ಮಂತ್ರಿಗಳ ಮುಂದಿನ ಕಾರ್ಯ

(ಮೋ. ಕ. ಗಾಂಧಿ)

ಮಂತ್ರಿಗಳ ಸುಖಾಸಕ್ತ ಜೀವನವನ್ನು ಉಗ್ರವಾಗಿ ಟೀಕಿಸುವ ಅನೇಕ ಪತ್ರಗಳು ನನ್ನ ಮುಂದಿವೆ. ಅವರ ಮೇಲೆ ಪಕ್ಷಪಾತದ, ಸ್ವಜನ ಪಕ್ಷ ಪಾತದ ಆರೋಪವನ್ನು ಕೂಡ ಮಾಡಲಾಗುತ್ತದೆ. ಇಂತಹ ಟೀಕೆಯೆಲ್ಲ ಅಜ್ಞಾನದ ಮೂಲಕ ಆಗುತ್ತವೆಂಬುದನ್ನು ನಾನು ಬಲ್ಲೆ. ಮಂತ್ರಿಗಳು ಇದರ ಬಗ್ಗೆ ಬಹಳ ಮನಸ್ಸಿಗೆ ಹಚ್ಚಿಕೊಳ್ಳಬಾರದು. ದೋಷಾರೋಪಕ ಟೀಕೆಗಳನ್ನು ಕೂಡ ಅವರು ಒಳ್ಳೆಯ ಅರ್ಥದಲ್ಲಿಯೇ ತೆಗೆದುಕೊಳ್ಳಬೇಕು. ನನ್ನ ಕಡೆಗೆ ಬಂದ ಪತ್ರಗಳೆಲ್ಲ ಅವರಿಗೆ ಕಳಿಸಿದರೆ ಅವರು ಚಕಿತರಾಗಬಹುದು. ಕದಾಚಿತ್ ಅದಕ್ಕಿಂತ ಕೆಟ್ಟ ಪತ್ರಗಳು ಅವರಿಗೆ ಬರುತ್ತಿರಬಹುದು. ಅದೇನೇ ಇದ್ದರೂ ಸರಳತೆ, ಧೈರ್ಯ, ಪ್ರಾಮಾಣಿಕತೆ ಉದ್ಯೋಗ ಶೀಲತೆಗಳಲ್ಲಿ ಇತರರಿಗಿಂತ ಹೆಚ್ಚಾಗಿ ಜನಸೇವಕರಾದ ತಮ್ಮ ಮಂತ್ರಿಗಳಿಂದ ಟೀಕಾಕಾರರು ಹೆಚ್ಚಿನದನ್ನು ಅಪೇಕ್ಷಿಸುತ್ತಾರೆಂಬುದುದೇ ಇದರ ನೀತಿ-ಭೋಧವೆಂದು ನಾನು ಬಗೆಯುತ್ತೇನೆ. ಹಿಂದಿನ ಇಂಗ್ಲಂ ಅರಸರನ್ನು ನಾವು ಈ ವಿಷಯದಲ್ಲಿ ಅನುಕರಿಸಲಾರೆವು; ಅದರೆ ಅವರ ಉದ್ಯೋಗ ಪ್ರೀತಿ ಮತ್ತು ಧೀರಣಗಳನ್ನು ಮಾತ್ರ ಅನುಕರಿಸಬಹುದು ಒಂದೆಡೆ ಮಂತ್ರಿಗಳು ನಿಜವಾದ ಟೀಕೆಯಿಂದ ಲಾಭ ಪಡೆದುಕೊಂಡರೆ ಮತ್ತು ಇನ್ನೊಂದೆಡೆ ಟೀಕಾಕಾರರು ತಾಳ್ಮೆಯುಳ್ಳವರಾಗಿ ನಿಜ ಸಂಗತಿಗಳ ಬಗ್ಗೆ ದಕ್ಷರಾದರೆ ಈ ಟಿಪ್ಪಣಿಯ ಪೂರ್ಣ ಉದ್ದೇಶವು ಈಡೇರಿದಂತಾಗುವದು. ಅತಿಶಯೋಕ್ತಿ ಅಥವಾ ಅಯುಕ್ತಾರ್ಥತೆ ಒಳ್ಳೆಯ ತಿಲಸ ಹಾಳು ಮಾಡುವದು

ಡಾ|| ಅನಿಬೆಸೆಂಟರವರ ಶತವಾರ್ಷಿಕ ಜಯಂತಿಯು ಕಳೆದ ೩ ತಿಂಗಳಿಂದ ನಡೆದು ಕೊನೆಗೊಂಡಿತು ಶ್ರೀ ಬಿ. ಭೀಮರಾವ್ ಎಂ. ಎಲ್. ತಿಯವರು ಬ್ರಹ್ಮ ಶಾಸ್ತ್ರಿಗಳ ಭಾವಚಿತ್ರದ ಅನಾವರಣ ಮಾಡಿದರು.

ಬಳ್ಳಾರಿಯಲ್ಲಿ

ಗಾಂಧಿ ಜಯಂತಿ

೨ ನೆಯ ದಿನಾಂಕ ಸರಕಾರಿ ಕಟ್ಟಡಗಳ ಮೇಲೆ ವ್ಯಾಯಾಮಶಾಲೆ (ಮಲ್ಲಸಜ್ಜನ) ತಾರಾನಾಥ ಆಯುರ್ವೇದ ವಿದ್ಯಾಪೀಠ, ಸಾಂಬಮೂರ್ತಿ ಮೈದಾನಗಳಲ್ಲಿ ರಾಷ್ಟ್ರಧ್ವಜಾರೋಹಣವಾಯಿತು. ಮುನಿಸಿಪಲ್ ಹೈಸ್ಕೂಲಿನಲ್ಲಿ ಕಲೆಕ್ಟರ್ ಸತೀಮಣಿ ಧ್ವಜಾರೋಹಣ ಮಾಡಿದನಂತರ ಕಲೆಕ್ಟರ್ ಅನಂತ ರಾಮನ್‌ರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಸುಬ್ರಹ್ಮಣ್ಯಂ, ಕೇಶವರಾವ್ ವೀರಸ್ವಾಮಿಯವರು ಗಾಂಧೀಜೀವನ ಚರಿತ್ರೆಯನ್ನು ಕುರಿತು ಭಾಷಣಗಳನ್ನಿತ್ತರು. ಸಾಯಂಕಾಲದ ಬಹಿರಂಗ ಸಭೆಯಲ್ಲಿ ಶ್ರೀ ಗೌಡಪ್ಪ, ಸತ್ಯನಾರಾಯಣ ವೀರಸ್ವಾಮಿ ಸುಬ್ರಹ್ಮಣ್ಯಂರವರು ಮಾತಾಡಿದರು ಹರಿಜನ ಕೇರಿಗಳವರೆಲ್ಲಾ ಒಂದೆಡೆ ಕಲೆತು ಭಜನೆ ಉಪನ್ಯಾಸಗಳಿಂದ ಉತ್ಸವವನ್ನು ನೆರವೇರಿಸಿ ಬಂದವರಿಗೆ ಉಪಾಹಾರ ಹಂಚಿದರು.

ತಾರಾನಾಥ ಆಯುರ್ವೇದ ವಿದ್ಯಾಪೀಠದಲ್ಲಿ ಗಾಂಧಿಜಯಂತಿಯುವೈಭವದಿಂದ ಆಚರಿಸಲಾಯಿತು. ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಶ್ರೀ ದಿ. ವಿ ಚಾರಿ ಲಿಂಗಾರೆಡ್ಡಿ ಪ್ರೊ. ನಾರಾಯಣರಾವು ಚನ್ನಬಸಪ್ಪ ಇವರು ಮಾತಾಡಿ ಗಾಂಧಿ ಜೀವನ ತತ್ವಗಳನ್ನು ಹೇಳಿದರು. ಹರಿಜನ ಬಾಲಕರಿಗೂ ಮಾನ್ಯ ಅತಿಥಿಗಳಿಗೂ ಭೋಜನ ಸಮಾರಂಭವು ನಡೆಯಿತು. ಈ ವಾರದಲ್ಲಿ ವಿದ್ಯಾರ್ಥಿಗಳು ಗಾಂಧಿ ಜಯಂತಿಗಾಗಿ ಸುತ್ತಮುತ್ತಣ ಗ್ರಾಮಗಳಿಗೆ ಪ್ರಚಾರಕ್ಕೆ ಹೋಗುವವರಿದ್ದಾರೆ.

ಬಳ್ಳಾರಿ:— ತಾ|| 27-9-47 S. G. ಹೈಸ್ಕೂಲ ಸಾಹಿತ್ಯ ಸಂಘದಲ್ಲಿ ತಾರಾನಾಥ ಆಯುರ್ವೇದ ವಿದ್ಯಾಪೀಠದ ಸಂಚಾಲಕರಾದ ವೈದ್ಯಗುರು ಸ್ವಾಮಿರಾಯಾಚಾರ್ಯರು ವಿದ್ಯಾರ್ಥಿ ಜೀವನದ ಸಮಸ್ಯೆಯನ್ನು ಕುರಿತು ಭಾಷಣ ಕೊಟ್ಟರು.

ಮೈಸೂರು-ಚಲೋ ಪ್ರಚಾರ
(ಸ್ವಕೀಯ ಸುದ್ದಿಗಾರರಿಂದ)

ಶ್ರೀ ಬನ್ನಿಮಟ್ಟಿ ರಾವುಪ್ಪನವರ ನೇತೃತ್ವದಲ್ಲಿ ಅಗಪ್ಪು ವೀರನಾದ ಶ್ರೀ ಯನ್. ಇಮಾಂಸಾಹೇಬ್ ಬಾರಿಕರ ಭರ್ಮಪ್ಪ, ಕಳವಾರ ಹಳ್ಳೆಪ್ಪನವರ ಸಕ್ಕಪ್ಪ ೨೪ ನೆಯ ದಿನಾಂಕ ರಾಣೆಬೆನ್ನೂರು ಸತ್ಯಾಗ್ರಹ ಶಿಬಿರಕ್ಕೆ ತೆರಳಿದರು. ಇವರ ಖರ್ಚಿಗೆ ಈ ಕೆಳಿಗೆ ಕಾಣಿಸಿದ ಮಹನೀಯರು ಸಹಾಯನೀಡಿದರು.

ಹೊ.	ಬಸವಪ್ಪಗೌಡ್ರು	5-0-0
ಯ.	ರೇವಣಸಿದ್ದಪ್ಪ	5-0-0
ಬಾ.	ನಿಂಗಜ್ಜ	5-0-0
ಬಾ.	ಶಿವಪ್ಪ	5-0-0
ಕ.	ನಿಂಗಪ್ಪ	2-0-0
ಬ.	ಹನುಮಮ್ಮ	10-0-0

ಹರಪನಹಳ್ಳಿ

ಇಲ್ಲಿಯ ವಿದ್ಯಾರ್ಥಿ ಕಾಂಗ್ರೆಸ್ ನವರು 21-9-47 ಸಮಾವೇಶವಾಗಿ ಮೈಸೂರು ಹೈದರಾಬಾದ ಸತ್ಯಾಗ್ರಹದಲ್ಲಿ ಮಡಿದ ಹುತಾತ್ಮರ ಆತ್ಮಶಾಂತಿಗೆ ಪ್ರಾರ್ಥಿಸಿ ಅವರ ನಿರಂಕುಶಾಡಳಿತವನ್ನು ಖಂಡಿಸಿದರು. ಆಂಧ್ರರು ಕರ್ನಾಟಕದ ಅಂಗವಾಗಿರುವ ಆಲೂರು, ಆದವಾನಿ, ರಾಯದುರ್ಗಗಳನ್ನು ತಮ್ಮ ದೆಂದು ತೀರ್ಮಾನಿಸಿದುದನ್ನು ನಿಷೇಧಿಸಲಾಯಿತು. ಧೀರೇಂದ್ರ. ಶಾ. ನ. ಮೂರ್ತಿ, ರಘುಪತಿ, ಜಾಗಿರ್ದಾರ್ ನಾಧವಮೂರ್ತಿ ಇಲ್ಲಿಂದ ಮೈಸೂರು ಸತ್ಯಾಗ್ರಹಕ್ಕೆ ಹೊರಡಲಿದ್ದಾರೆ. ಚಿಕ್ಕಬಾಲಕರು ತಮಗಾಗಿ ಶ್ರೀ ರಾಮಸಂಘವನ್ನು ಸ್ಥಾಪಿಸಿಕೊಂಡರು.

ಗಾಂಧೀಜಿ ದರ್ಶನ
ಕಾಂಗ್ರೆಸ್—ಧ್ಯೇಯ

ದಾರಿದ್ರ್ಯನಿವಾರಣೆ ಮತ್ತು ಸಂರಕ್ಷಿತತೆಗಾಗಿ ಸ್ವಾತಂತ್ರ್ಯವನ್ನು ವಿನಿಮಯ ಮಾಡಬಹುದಾದ ಅಪಾಯಕರ ಪರಿಸ್ಥಿತಿ ಹಿಂದುಸ್ತಾನದಲ್ಲಿ ಕಾಣಬರುತ್ತಿದೆ. ಈ ಸರಕಾರೀ ಸಾಮ್ಯವಾದದಿಂದ ಅಪಹರಿಸಲ್ಪಡತಕ್ಕ ವ್ಯಕ್ತಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ ವಿಕೇಂದ್ರೀಕರಣ ತತ್ವದಂತೆ ಚಿಕ್ಕ ಚಿಕ್ಕ ಸ್ವಯಂಪೂರ್ಣವಾದ ಆರ್ಥಿಕ ಗುಂಪುಗಳುಳ್ಳ ಸಮಾಜವನ್ನು ರಚಿಸಬೇಕು. ಇದು ಗಾಂಧೀಜಿಯ ದರ್ಶನ. ಕಾಂಗ್ರೆಸ್ಸಿನ ಧ್ಯೇಯ ಹೀಗೆ ವಿಕೇಂದ್ರೀಕರಣ ತತ್ವವನ್ನಾದರಿಸಿದ ಸಾಮ್ಯಪದ್ಧತಿಯಿಂದ ಜಗತ್ತಿನ ಯುದ್ಧ ಪ್ರವೃತ್ತಿಯನ್ನು ತಡೆಗಟ್ಟಿ ಶಾಂತ, ಸಮೃದ್ಧ ವಿಶ್ವ ಮಂಡಲದ ನಿರ್ಮಾಣಕ್ಕಾಗಿ ಭಾರತವು ಅವಿಶ್ರಾಂತವಾಗಿ ಶ್ರಮಿಸುವುದು ಎಂದು ಅ. ಭಾ. ಕಾಂ. ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ಅಭಿಪ್ರಾಯಪಡುತ್ತಾರೆ.

ಕೊಟ್ಟೂರು

೨೨ ನೆಯ ದಿನಾಂಕ ಪ್ರಭಾತಫೇರಿ, ಧ್ವಜ ವಂದನೆಗಳ ನಂತರ ಸಾಯಂಕಾಲ ಸಾರ್ವಜನಿಕ ಸಭೆಯಲ್ಲಿ ಗಾಂಧಿ ಜೀವಿತ ಧ್ಯೇಯಗಳನ್ನು ಕುರಿತು ಮುಖಂಡರ ಭಾಷಣಗಳಾದವು. ಈಗ 15-20 ದಿನಗಳಿಂದ ಪ್ಲೇಗು ಆರಂಭವಾಗಿ ಸರಕಾರದವರು ಪ್ರತೀಕಾರೋಪಾಯಗಳನ್ನು ಕೈಗೊಂಡಿರುವರು.

ಸಮಾಜವಾದದಲ್ಲಿಯೇ ನಮ್ಮ ಭವ್ಯ ಭವಿತವ್ಯ!
ನಾಳಿನ ಭವ್ಯತೆಗಾಗಿ ಇಂದು ನಿಧಿ ಕೊಡಿರಿ)

೧೦ ರೂ, ೫ ರೂ, ಹಾಗೂ ೧ ರೂ. ಗಳ ಕೂಪನ್ನುಗಳನ್ನು ಕೊಂಡು ಕೊಂಡು ಧನ ನೀಡಿರಿ.

೧೦ ರೂಪಾಯಿಗಳಿಗಿಂತ ಹೆಚ್ಚಿದ್ದರೆ ಪಕ್ಷದ ಪ್ರಧಾನ ಕಾರ್ಯದರ್ಶೀ ಶ್ರೀ ಜಯಪ್ರಕಾಶ ನಾರಾಯಣರ ಸಹಿಯುಳ್ಳ ರಶೀದಿ ಪಡೆದು ನಿಧಿಗಾಗಿ ಹಣ ಕೊಡಿರಿ.

ಪ್ರಾಂತೀಯ ಕಾರ್ಯದರ್ಶಿಯಿಂದ ಸರಿಯಾಗಿ ಮುದ್ರೆ ಒತ್ತಲ್ಪಟ್ಟು ಭದ್ರವಾದ ನಿಧಿಯ ಡಬ್ಬಿಗಳಲ್ಲಿ ನಿಮ್ಮ ಕಾಣಿಕೆ ಹಾಕಿರಿ.

ಬ್ಯಾಡ್ಜ್, ಪಕ್ಷದ ಧ್ವಜದ ಗುಂಡಿಗಳು ಇವನ್ನು ಕೊಂಡು ಕೊಂಡು ನಿಮ್ಮ ಸಹಾಯ ಕೊಡಿರಿ.

ಸಮಾಜವಾದೀ ಪಕ್ಷದ ನಿಧಿ-ಸಮಿತಿ
ಫಾಯಿ ಜೀವಣ್‌ಜೀ ಲೇನ್., ಕಾಳೆರದ್ವಾರ
ಮುಂಬಯಿ-೩

ಮದ್ರಾಸ್ ಸರ್ಕಾರದ ಪ್ರಕಟನೆಗಳು.

ರಾಗಿ, ಜೋಳ, ನವಣೆಗಳಿಗೂ ಬೋನಸ್ಸು

1—9—47 ರಿಂದ 31-10-47 ರ ಒಳಗೆ ಸರಕಾರದ ಸಂಗ್ರಹಣಾಧಿಕಾರಿಗಳಿಗೆ ಒಪ್ಪಿಸಿದ ರಾಗಿ, ಜೋಳ, ನವಣೆ, ಇತ್ಯಾದಿ ಎಲ್ಲಾ ಜಾತಿಯ ಧಾನ್ಯಗಳಿಗೆ ಸರಕಾರಿ ಮಣಕ್ಕೆ ಎಂಟಾಣೆಯಂತೆ ಬೋನಸ್ಸು ಕೊಡಲಾಗುವುದು. 1—9—47 ಕ್ಕಿಂತ ಮುಂಚೆ ಅಥವಾ 31—10—47 ರ ನಂತರ ಒಪ್ಪಿಸುವ ಧಾನ್ಯಗಳಿಗೆ ಬೋನಸ್ಸಿಲ್ಲ. ಬೋನಸ್ಸಿನ ಮೊಬಲಗನ್ನು ಬೆಲೆ ಹೆಚ್ಚಿಸುವ ಮೂಲಕ ಗ್ರಾಹಕರಿಂದ ಪಡೆಯಲಾಗುತ್ತದೆ. ಬೋನಸ್ಸು ಪಡೆಯುವ ಕ್ರಮವನ್ನು ಹಿಂದಿನಿಂದ ಪ್ರಕಟಿಸಲಾಗುವುದು.

ಯೋಗ್ಯತೆ ಹೊಂದದ ಅಧ್ಯಾಪಕರು

17—6—46 ರಂದು ಕೆಲಸದಲ್ಲಿದ್ದ ಮತ್ತು ಆರು ವರ್ಷ ಕಾಲ ತೃಪ್ತಿಕರವಾಗಿ ಉಪಾಧ್ಯಾಯ ಕೆಲಸ ನಡೆಸಿರುವ ಲೋವರ್ ಎಲಿಮೆಂಟರಿ ಗ್ರೇಡಿನ ಯೋಗ್ಯತೆ ಹೊಂದದ ಉಪಾಧ್ಯಾಯರು ವಿಶೇಷ ಎಲಿಮೆಂಟರಿ ಶಾಲೆಗಳಲ್ಲಿ ಕೆಲಸ ಮಾಡುವಂತೆಯೂ, ನಿವೃತ್ತಿ ಪಡೆಯದಿದ್ದಲ್ಲಿ ಗ್ರ್ಯಾಂಟು ಪಡೆಯುವಂತೆಯೂ ಸರಕಾರವು ಒಪ್ಪಿಗೆ ಕೊಟ್ಟಿದೆ.

ಹೊಸ ಅಕ್ಕಿ ಗಿರಣಿಗಳು

ಈ ಪ್ರಾಂತದಲ್ಲಿ ತೀವ್ರಗ್ರಾಮ ಪುನರ್ನಿರ್ಮಾಣಕಾರ್ಯಕ್ರಮಗಳ ಅರಿಸಲ್ಪಟ್ಟ ಫಿರ್ಕಗಳ ಹೊರಗೆ ಹೊಸ ಅಕ್ಕಿ ಗಿರಣಿಗಳನ್ನು ತೆರೆಯುವವಕ್ಕೆ ಸ್ಥಳೀಯ ಸೆನ್ಸ್ ಕೊಡುವುದನ್ನು ನಿಬಂಧಿಸುತ್ತಾ 8-1-47 ರಲ್ಲಿ ಕೊಟ್ಟ ಅಪ್ಪಣೆಯನ್ನು ಸರಕಾರವು ರದ್ದುಪಡಿಸಿದೆ. ಅರಿಸಲ್ಪಟ್ಟ ಫಿರ್ಕಗಳಲ್ಲಿ ಈ ನಿರ್ಬಂಧವು ಹೇಗೂ ಈ ವರ್ಷಾಂತ್ಯದವರೆಗೆ ಜಾರಿಯಲ್ಲಿರುವುದು.

ಹೊಸ ಸ್ವಾಮಿನಿಷ್ಠಾ ಪ್ರಮಾಣ

ಮುನಿಸಿಪಲ್ ಕೌನ್ಸಿಲ್, ಲೋಕಲ್ ಬೋರ್ಡುಗಳು, ಮದ್ರಾಸ್ ಕಾರ್ಪರೇಷನ್‌ಗಳಿಗೆ ಹೊಸದಾಗಿ ಚುನಾಯಿಸಲ್ಪಡುವ ಸದಸ್ಯರು ಹೊಸ ನಮೂನೆಯ ಸ್ವಾಮಿನಿಷ್ಠಾ ಪ್ರಮಾಣ ತೆಗೆದು ಕೊಳ್ಳಬೇಕಾಗಿ ಈ ನಮೂನೆಯು ಬರೇತಾತ್ಕಾಲಿಕ ಮದ್ರಾಸ್ ಕಾರ್ಪರೇಷನಿನ ಹಾಗೂ ಪಂಚಾಯತಿಗಳ ಈಗ ಇರುವ ಸದಸ್ಯರು ತೆಗೆದುಕೊಳ್ಳ ಬೇಕಾಗಿಲ್ಲ. ಇಚ್ಛೆ ಇದ್ದವರು ಮಾತ್ರ ಈ ಪ್ರಮಾಣವನ್ನು ತೆಗೆಯಬೇಕು.

ವೈದ್ಯಕೀಯ ವಿದ್ಯಾರ್ಥಿಗಳೂ ನರ್ಸ್‌ಗಳೂ

ಅನೇಕ ವೈದ್ಯಕೀಯ ವಿದ್ಯಾರ್ಥಿಗಳೂ ನರ್ಸ್‌ಗಳೂ ಕಲಿಯುವ ಹಾಗೂ ತರಬೇತಿ ಹೊಂದುವ ಸಮಯ ಕ್ಷಯರೋಗಗಳಿಗೆ ತುತ್ತಾಗುತ್ತಾರೆಂದು ಸರಕಾರಕ್ಕೆ ತಿಳಿದು ಬಂದಿರುವುದರಿಂದ ಅದನ್ನು ತಪ್ಪಿಸುವ ಬಗ್ಗೆ ಸರಕಾರವೂ, ವರ್ಷಂಪ್ರತಿ ಸಂಪೂರ್ಣವಾಗಿ ಇವರ ವೈದ್ಯಕೀಯ ಪರೀಕ್ಷೆ ನಡೆಸುವ ಪದ್ಧತಿಯನ್ನು ಏರ್ಪಡಿಸಿದೆ.

ರಾಗಿ, ಜೋಳ, ನವಣೆ ಇತ್ಯಾದಿ ಧಾನ್ಯಗಳು

ಪ್ರಾಂತದಲ್ಲಿ ಹೆಚ್ಚು ಶಾರೀರಕ ಶ್ರಮದಿಂದ ಕೆಲಸ ಮಾಡುವ ಕೂಲಿಗರಿಗೆ, ದಿನಕ್ಕೆ ವಯಸ್ಸನುಸರಿಸಿ ಕೊಡುವ 4 ರೇಷನ್ಸುಗಳಲ್ಲಿ ಹೆಚ್ಚಿಗೆ ರೇಷನ್ "ರಾಗಿ, ನವಣೆ ಇತ್ಯಾದಿ ಧಾನ್ಯ" "ಮಿಲೊ", "ಜೋಳ" "ಜೋಳದ ಹಿಟ್ಟು" ಗಳಾಗಿರಬೇಕು. ಇತರ ನಾಕೆಯುಲ್ಲದ ಆಹಾರ ಧಾನ್ಯಗಳ ದಾಸ್ತಾನಿಲ್ಲದಿದ್ದ ಮಾತ್ರವೇ ರಾಗಿ, ನವಣೆ ಇತ್ಯಾದಿ ಧಾನ್ಯಗಳನ್ನು ಕೊಡಬೇಕು.

ಹಾಲಿವಿ.

ಶ್ರೀಮನ್ನಿರಂಜನ ನಿರಾಭಾರಿ ದೇಶಿಕೇಂದ್ರ ಸಂಸ್ಥಾನಮಠ ಗುರುಮಠ ಕಲ್ಲು ಚರವರ್ಯ ಶಾಂತ ವೀರಮಹಾಸ್ವಾಮಿಗಳವರ ಸರ್ವಜಿತ್ ನಾಮ ಸಂವತ್ಸರದ ನಿಜಶ್ರಾವಣ ಮಾಸದ ಮಹಾಪೂಜಾ ಮಹೋತ್ಸವವನ್ನು ಶ್ರೀ ಹಾಲಿವಿ ದೈವದವರು, ಶ್ರೀ ಚರಣಗಿರಿ ಶಿವಯೋಗಿ ಮಹಂತಸ್ವಾಮಿಗಳವರ ಮಠದಲ್ಲಿ ನಿಜ ಶ್ರಾವಣ ಸ್ಥಾಪಿಸಿದ ಮೊದಲುಗೊಂಡು ಭಾದ್ರಪದ ಶುದ್ಧ ಪ್ರತಿಪದವರೆಗೂ ವೈಭವದಿಂದ ನಿರವೇರಿಸಿದರು. ಅನೇಕ ಜನ ಭಕ್ತಾದಿಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ ಶ್ರೀಗಳವರ ದರ್ಶನಾಶೀರ್ವಾದವನ್ನು ಹೊಂದಿದರು. ತಾ. 15-9-47 ಸೋಮವಾರ ಶ್ರೀ ಸ್ವಾಮಿಗಳವರ ಮೆರವಣಿಗೆಯು ಮಹಾ ವೈಭವದಿಂದ ನಡೆಯಿತು. ಮರುದಿನ ಸ್ವಾಮಿಗಳವರು ಪರಿವಾರ ಸಮೇತರಾಗಿ ಕೋಸಿಗ್ಗೆ ಪ್ರಯಾಣಮಾಡಿದರು. [ನಾಯಕರ ರಾಮಲಿಂಗಪ್ಪ ಸ್ವಾಮಂ. ಅಧ್ಯಕ್ಷ]

ವಾಲ್ಮೀಕಿ ಸಂಘ

ಈ ಸಂಘದ ನಿಧಿಗಾಗಿ ಇಲ್ಲಿಯವರೆವಿಗೆ ಸುಮಾರು 400/ ರೂ. ಗಳ ಸಂಗ್ರಹವಾಗಿದೆಯೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕೋಸಿಗಿ ಪೋಲೀಸರ ಕೃತ್ಯ

24 ನೆಯ ತಾ ಕೋಸಿಗೆ ಸ್ಟೇಷನ್ನಿಗೆ ಸೇರಿದ ನಾಲ್ವರು ಪೋಲೀಸರು ಕೂಡಿದು ಹೋಗುತ್ತಿರಬೇಕಾದರೆ ಇದನ್ನು ಮದ್ಯಸಿಹೇದಾಧಿಕಾರಿಗಳಿಗೆ ತಿಳಿಸಿ ಅವರ ಸಹಾಯದಿಂದ ರಾಮಸ್ವಾಮಿ ಮತ್ತು ಉಮ್ಮರ ಸಾಹೇಬರನ್ನು ಬಂಧಿಸಿ ಅವರ ಹತ್ತರವಿದ್ದ ಹಿತ್ತಾಳಿತಂಬಿಗೆಯನ್ನು ಸ್ವಾಧೀನಪಡಿಸಿಕೊಂಡರು. ಅವರು ಕುಡಿದು ನಿಶಾ ಆದ ಸರ್ಟಿಫಿಕೇಟ ಡಾಕ್ಟರ್ ನಾರಾಯಣಾಚಾರ್ಯರಿಂದ ಪಡೆದು ಬಂಧನದಲ್ಲಿಡಲು ಕರೆದುಕೊಂಡು ಹೋಗುತ್ತಿದ್ದರು. ಇವರಿಬ್ಬರೂ ತಪ್ಪಿಸಿಕೊಂಡು ಸ್ಟೇಷನ್ನಿಗೆ ಓಡಿಹೋದರು. ಈ ಸಮಾಚಾರವನ್ನು ಪಂಚನಾಮೆ ಬರೆಸಲಾಯಿತು.

ಮಾರನೆಯದಿನ ಇದರ ಸೇಡು ತೀರಿಸುವ ಉದ್ದೇಶವೇನೋ ಎಂಬಂತೆ ಕಮ್ಯೂನಿಸ್ಟ ಲೀಡರ್ ಯು. ವೀರಣ್ಣನವರನ್ನು ನಿಷ್ಕಾರಣವಾಗಿ ಬಂಧನದಲ್ಲಿಟ್ಟು ಮೇಲಿನವರಿಗೆ ತಂತೀಕೊಟ್ಟರು. ಡೆಪ್ಯುಟೀ ಸೂಪರೆಂಟರೂ ಸರ್ಕಲರೂ ಬಂದು, ಶ್ರೀ ವೀರಣ್ಣನವರನ್ನು ಜಾಮೀನ ಮೇಲೆ ಬಿಟ್ಟು ಪೋಲೀಸರ ಮೇಲೆ ಯಾವ ಚರ್ಯೆಯನ್ನೂ ತೆಗೆದುಕೊಳ್ಳದೆ ಹೋಗಿರುವರು. ಇದರಿಂದ ಪ್ರಜೆಗಳಿಗೆ ಬಹಳ ಕ್ಷೋಭೆಯಾಗಿದೆ. ತಪ್ಪುಮಾಡಿದವರನ್ನು ಶಿಕ್ಷಿಸದಿದ್ದರೆ ಪ್ರಜಾಪ್ರಭುತ್ವವನ್ನೇನು ಮಾಡಬೇಕು? [President weavers' Assn Kosigi.]

ಉಜ್ಜಿನಿ ಸಮಾಚಾರ
(ನಮ್ಮ ಸುದ್ದಿಗಾರರಿಂದ)

ಮಂಗಾಪುರದ ಗೌಡರು ಪರ್ಮಿಟ್ ಇಲ್ಲದೆ ೨೫ ಚೀಲ ಗೋಧಿ, ೧೪ ಚೀಲ ಜೋಳ ಸಾಗಿಸುತ್ತಿರಬೇಕಾದರೆ ಹಿಡಿಯಲ್ಪಟ್ಟರು ಚೌಕಿದಾರರು. R. I ರವರು ಹಿಡಿದು ಕೇಸುಮಾಡಲಾಗಿದೆ. ಹಗಲು ಹೊತ್ತಿನಲ್ಲಿ ಇಷ್ಟುಮಾಲು ಸಾಗಿಸುವಂಥ ಸಾಹಸವು ಈತನನ್ನು ಕಾಳುಸಂಗ್ರಹದ ಏಜೆಂಟನಾಗಿ ಮಾಡಿದಕಾರಣ ಈತನಿಗೆ ಬಂದಿದೆ. ಇದು ರಾವಣನ ಆಳಿಕೆ ಇದ್ದಂತಿದೆ. ಸಂಬಂಧಿಸಿದ ಅಧಿಕಾರಿಗಳು ತಕ್ಕ ಚರ್ಯೆ ತೆಗೆದುಕೊಳ್ಳಬೇಕು. ಹಳ್ಳಿಗಳಿಂದ ಸ್ಟೋರಿಗೆ ಹೊಡೆಸುತ್ತೇನೆಂದು ನೂರಾರು ಚೀಲಗಳನ್ನು ಸಾಗಿಸುವುದಾದರೂ ಕೇಳುವವರಿಲ್ಲದಂತಾಗುತ್ತದೆ. ಕೊಟ್ಟೂರಿಂದ ಹೊರಟ 6 ಸತ್ಯಾಗ್ರಹಿಗಳನ್ನು ಶ್ರೀ ಗುರುಬಸಪ್ಪನವರ ಮನೆಯಲ್ಲಿ ಸತ್ಕರಿಸಲಾಯಿತು.

ಸ್ವಯಂಸೇವಕರು ಬೇಕು.

ಗಡಿನಾಡಿನಲ್ಲಿ ಏಕೀಕರಣ ಕಾರ್ಯಕ್ಕಾಗಿ ಶಾಂತಿಸೇವಾದಳಕ್ಕೆ ಸ್ವಯಂಸೇವಕರು ಬೇಕಾಗಿದೆ. ಸೇರಲಿಚ್ಛಿಸುವವರು, ತಮ್ಮ ಹೆಸರು, ವಯಸ್ಸು, ವಿಳಾಸ ನಮಗೆ ತಿಳಿಸಿರಿ. [ಬಿ. ರಂಗನಗೌಡ-ಬದನೆಹಾಳು ಬಳ್ಳಾರಿ ಜಿಲ್ಲಾ]

ನಮ್ಮ ದುರವಸ್ಥೆಯ ಕಾರಣಗಳು.

ಇಂದು ಭಾರತದಲ್ಲಿಯ ಜನ ಸಾಮಾನ್ಯರ ವಿಚಾರ ಸರಣಿಯ ಒಲವನ್ನು ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸಿದರೆ ಅದು ನಿರಾಶೆಯ ಕಡೆಗೆ ಒಲೆಯುತ್ತ ನಡೆದಿರುವುದೆಂಬ ಮಾತು ಕಂಡು ಬರದೆ ಇರಲಾರದು. ಭಾರತದಲ್ಲಿ ೧೯೪೭ನೆಯ ಆಗಷ್ಟ ಹನ್ನೆರಡು ಮತ್ತು ಆ ಬಳಿಕ ಒಂದೆರಡು ವಾರ, ಆನಂದ, ಹುರುಪು, ಹುಮ್ಮಸ್ಸುಗಳೇ ನಾಮುಂದೆ ನೀಮುಂದೆ ಎಂದು ಕುಣಿದಾಡುತ್ತಿದ್ದವು. ಆದರೆ ಈಗ ಎರಡು ವಾರಗಳಿಂದ ಈ ಹುರುಪು, ಆನಂದ ಹುಮ್ಮಸಗಳ ನಲ್ಬೆಳಕಿಗೆ ನಿರಾಶೆಯ ಕಾರ್ಮೋಡಗಳು ಸಾವಕಾಶವಾಗಿ ಮುತ್ತತೊಡಗಿವೆಯೆಂದು ಸೂಕ್ಷ್ಮನೀರೀಕ್ಷಕನಿಗೆ ಕಂಡು ಬರತೊಡಗಿದೆ. ಇದಕ್ಕೆ ಕಾರಣಗಳು ಯಾವವು? ಮತ್ತು ನಿವಾರಣೋಪಾಯಗಳು ಯಾವವು ಎಂಬುದನ್ನು ಇಂದು ನಾವು ಸುದೀರ್ಘವಾಗಿ ಆಲೋಚಿಸಿ ಕಂಡು ಹಿಡಿದು ಈ ಅನಾವಸ್ಥೆಯ ಕಾರಣಗಳ ನಿರ್ಮೂಲನೆಗೆ ನಿವಾರಣೋಪಾಯಗಳ ಯೋಜನೆಗಳನ್ನು ತೀವ್ರವಾಗಿ ಕಾರ್ಯರೂಪದಲ್ಲಿ ತರಲಿಕ್ಕೆ ತನುಮನ ಧನದಿಂದ ಪ್ರಯತ್ನವೂಡುವದು ಇಂದು ಪ್ರತಿಯೊಬ್ಬ ಭಾರತೀಯನ ಪವಿತ್ರ ಕರ್ತವ್ಯವಾಗಿದೆ.

ಇಂದು ಭಾರತದಲ್ಲಿ (ಹಿಂದುಸ್ಥಾನ-ಪಾಕಿಸ್ತಾನ) ಎಲ್ಲಿ ನೋಡಿದಲ್ಲಿ, ಅಹಾರ ಕೊರತೆಯು ಚಿಂತೆ, ಕೊಲೆ, ಸುಲಿಗೆ ಅತ್ಯಾಚಾರಗಳ ಅಕಾಂಡ ತಾಂಡವ, ಸಂಸ್ಥಾನೀ ಭೂಪತಿಗಳ ನಿರಂಕುಶ ಕುಣಿತ, ಕಳ್ಳಸೇಟಿಯ ಕಾಳ ನೃತ್ಯದಿಂದುಂಟಾದ ಕಳವಳ, ಭರದಿಂದ ಬೆಳೆಯುತ್ತಿರುವ-ಜನ ಸಂಖ್ಯೆ, ಜಮೀನದಾರಿ ಪದ್ಧತಿ ಕೊನೆಯದಾದರೂ ಪ್ರಮುಖವಾದ ಈ ಬ್ರಿಟಿಶ ಶೋಷಣನೀತಿಯ ಪ್ರಚಾರ ಪರಿಣಾಮದಿಂದಾಗಿರುವ ಈ ಪರಸ್ಪರ ಅಪನಂಬಿಕೆ, ಇನ್ನೇ ಮೊದಲಾದ ಮುಖ್ಯ ಕಾರಣಗಳಿಗಾಗಿ ಭಾರತವು ಇಂದು ಅನಾವಸ್ಥೆಗೆ ಗುರಿಯಾಗಿದೆ.

ಏಳು ಲಕ್ಷ ಹಳ್ಳಿಗಳಿದ್ದ, ಮತ್ತು ಸುಮಾರು ನೂರಕ್ಕೆ ಲಂ ರಷ್ಟು ಜನಸಂಖ್ಯೆ ಒಕ್ಕಲುತನದ ಉದ್ಯೋಗದಲ್ಲಿದ್ದ ಭಾರತಕ್ಕೆ ಈ ಆಹಾರ ಕೊರತೆ ಏಕೆ? ಭಾರತದಲ್ಲಿ ಫಲವತ್ತಾದ ಭೂಮಿ ಬೇಕಾದಷ್ಟಿದೆ. ನಮ್ಮ ಒಕ್ಕಲುತನದ ಪದ್ಧತಿಯಲ್ಲಿ ಏನಾದರೂ ಕುಂದು ಕೊರತೆಗಳುಂಟೇ? ಮಳೆಯ ಅಭಾವವೇ? ನೀರಾವರಿ ಯೋಜನೆಗಳ ಕೊರತೆಯೇ? ಇವೆಲ್ಲವೂ ಕಾರಣಗಳೇ ಹೌದು. ಇಂದಿನ ಈ ಆಹಾರ ಕೊರತೆಗೆ, ನೆಲ, ನೀರು, ಜನ ಸಾಕಷ್ಟಿದ್ದರೂ ಮಂದಗತಿಯ ಈ ಹಳೆಯ ಒಕ್ಕಲುತನದ ಪದ್ಧತಿಯಿಂದ ಭೂಮಿಯಿಂದ ಬೇಕಾದಷ್ಟು ಬೆಳೆ ತೆಗೆದುಕೊಳ್ಳಲು ನಮಗೆ ಬಾರದಾಗಿದೆ. ಈ ಪರ್ಸ್ಥಿತಿ ಸುಧಾರಿಸಬೇಕು ಅನ್ನುವುದಾಗಲಿ ಅತ್ಯಾಧುನಿಕ ರೀತಿಯಿಂದ ಮಾರ್ಪಾಡುಗಳು ಆಗಬೇಕು. ಸರಕಾರದಿಂದ ಪ್ರೋತ್ಸಾಹ ಸಿಗಬೇಕು. ಜನರಲ್ಲಿ, ಒಕ್ಕಲುತನ ಮಾಡುವದು ಒಂದು ಗೌರವಾಸ್ಪದ ಕೆಲಸ ಎಂಬ ಭಾವನೆ ಬೆಳೆದು ಬರುವಂತೆ ಪ್ರಚಾರವಾಗಬೇಕು. ಅಂದರೆ ಆ ಹಾರದ ಅಭಾವ ಅಳಿಯುವುದು.

ಸಾಕಷ್ಟು ಆಹಾರ ಸಂಗ್ರಹವಿದ್ದರೆ ಜನತೆಯ ಮನವು ಶಾಂತವಾಗಿರುತ್ತದೆ. ಕೂಡಲೆ ಉದ್ರಿಕ್ತವಾಗುವ ಸ್ಥಿತಿ ಸಾಮಾನ್ಯ ಜನತೆಯಲ್ಲಿ ಈ ಆಹಾರ ಸಮೃದ್ಧಿಯಿಂದ ಕಡಿವೆಯಾಗುವುದು. ಹೀಗಾಗಿ ಈ ಕೊಲೆ, ಸುಲಿಗೆ, ಅತ್ಯಾಚಾರಗಳ ಅಕಾಂಡ ತಾಂಡವಕ್ಕೆ ಅಸ್ಪದ ಸಿಗುವುದಿಲ್ಲ. ಅನ್ನ, ಬಟ್ಟೆ ಸಮೃದ್ಧಿಯಿಂದ ಶಾಂತ ಪ್ರವೃತ್ತಿ ಜನಗಳಲ್ಲಿ ಬೆಳೆದು ಬರತೊಡಗುವುದು. ಮನಸ್ಸು ದೊಡ್ಡದಾಗುವುದು.

ಸಣ್ಣ ಪುಟ್ಟ ಕಾರಣಗಳಿಗಾಗಿ, ಕೋಪೋದ್ರಿಕ್ತರಾಗಿ ಅತ್ಯಾಚಾರವಾಗುವುದು ಕೂಡಲೇ ಅಲ್ಲದಿದ್ದರೂ ಕ್ರಮೇಣವಾಗಿ ಕಡಿಮೆಯಾಗುವುದು. ಈಗ ನಡೆದ ಈ ಕೊಲೆ ಸುಲಿಗೆ ಅತ್ಯಾಚಾರಗಳಿಗೆ 'ಜಾತಿ ಭೂತ' ನೇ ಕಾರಣವೆಂದು ಮೇಲೆ ಕಂಡರೂ ಅದರ ಬೇರು ಈ ಅನ್ನ ಬಟ್ಟೆಗಳ ಅಭಾವದಲ್ಲಿದೆ ಈ ಅಭಾವ ಚಿಂತೆಯ ಬೇರನ್ನೇ ಕಡಿದ ಮೇಲೆ 'ಜಾತಿ ಭೂತ' ನ ಟೊಂಗೆ ತನ್ನಿಂದ ತಾನೇ ಒಣಗಿ ಹೋಗುವುದು ಸಹಜಾನಿಕ. ಎಷ್ಟಾವರೂ ಈ ಜಾತಿದ್ವೇಷ, ಮೊದಲಿನಿಂದಲೂ ಭಾರತದಲ್ಲಿ ಈ ಉಲ್ಬಣಾವಸ್ಥೆಯಲ್ಲಿ ಇದ್ದಿಲ್ಲ ವರಕೀಯ ಸರಕಾರದ ಕೈನಾಡಿನಿಂದ ನಡುವೇ ಹೋಗತಕ್ಕದ್ದೂ ಸ್ವಾಭಾವಿಕವೇ. 'ನಮಗಾಗಿ ನಮ್ಮದೇ ಸರಕಾರ' ಈ ಒಂದು ಭಾವನೆಯೇ ಈ ಜಾತೀಯ ಭೂತದ ಉಚ್ಚಾಟನೆಗೆ ಸಾಕಾಗಿದೆ.

ಭಾರತದಲ್ಲಿಯ ಸಂಸ್ಥಾನೀ ಭೂಪತಿಗಳ ನಿರಂಕುಶ ಕುಣಿತವೂ ನನ್ನು ಅನಾವಸ್ಥೆಯ ಕಾರಣಗಳಲ್ಲಿ ಒಂದಾಗಿದೆ. ಆದರೆ ಈಗ ಕಾಲ ಮಾರ್ಪಟ್ಟಿದೆ. ಪ್ರಪಂಚದ ತುಂಬೆಲ್ಲ ಸ್ವಾತಂತ್ರ್ಯದ ಗಾಳಿ ತಾನೇ ತಾನಾಗಿ ಬೀಸುತ್ತಿದೆ ಇಂತಹ ಕಾಲದಲ್ಲಿ ಈ ಪರಸತ್ತೆಯ ಕೈಗೊಂಬೆಗಳಂತಿದ್ದ ಈ ಚಿಕ್ಕಪುಟ್ಟ ಸಂಸ್ಥಾನೀ ಭೂಪತಿಗಳು ಭಾರತ ಪ್ರಜಾಪ್ರಭುತ್ವದೆದುರು ಏಸು ದಿನ ಈ ನಿರಂಕುಶ ಕುಣಿತ ನಡೆಸಿಯಾವು? ಕುಣಿತಕ್ಕೆ ಕೊನೆ ಕೂಡಲೆ ಬರಲಿದೆ. ಈ ವಿಷಯದಲ್ಲಿ ಹೈದರಾಬಾದ ಸಂಸ್ಥಾನವು ಹೆಚ್ಚು ಸೆಟೆದಾಡುತ್ತಿದೆ. ಆದರೆ ಅವು ಬಹುದಿವಸ ತಡೆಯಲಾರವೆಂಬುದನ್ನು ಹಿಂದುಸ್ಥಾನ ಸರಕಾರವು ಸಕಾಲದಲ್ಲಿ ಸಿದ್ಧಮಾಡಿ ತೋರಿಸಲಿದೆ. ಆದರೂ ಹೆಸರಿಗೆ ಮಾತ್ರ ಅರಸೊತ್ತಿಗೆ, ನಿಜವಾಗಿಯೂ ವರಕೀಯರ ದಾಸ್ಯದಲ್ಲಿರುವದು; ಈ ಸ್ಥಿತಿಯ ಸಂಸ್ಥಾನಗಳು ಇಂದು ಜಾತಿ ದ್ವೇಷಕ್ಕೂ, ಕಳ್ಳಪೇಟಿಗೂ, ಉಗಮ, ಆಶ್ರಯ ಸ್ಥಾನಗಳಾಗಿ ಅನಾವಸ್ಥೆಗೆ ಕಾರಣವಾಗಿವೆ. ಇಷ್ಟು ದಿನ ವರಕೀಯ ಬ್ರಿಟಿಶ ರೆಸಿಡೆಂಟರ ಚಾಟಿಯ ಏಟಿನಂತೆ ಮುಂದಡಿಯಿಡುತ್ತಿದ್ದ ಈ ಸಂಸ್ಥಾನಗಳು ಇಂದು ನಮ್ಮವರಲ್ಲಿ ಕೂಡಿಕೊಂಡು ಹೋಗಲು ನಿರಾಕರಿಸುತ್ತಿರುವದು ಶುದ್ಧ ಸ್ವಾಭಿಮಾನಹೀನ ಮಾತಾಗಿದೆ. ಸಂಸ್ಥಾನೀ ಪ್ರಜೆಗಳು ತಮ್ಮ ತಮ್ಮ ಅಧಿಪತಿಗಳನ್ನು ಭಾರತ ಒಕ್ಕೂಟದಲ್ಲಿ ಸೇರಿಸಲು ಈಗ ಪ್ರಚಂಡ ಆಂದೋಲನವನ್ನು ಹೂಡಿದ್ದಾರೆ. ಸಂಸ್ಥಾನಿಕರಾದರೂ, 'ಭಾರತದವರಾದ ನಾವೆಲ್ಲರೂ ಒಂದೇ, ನಮ್ಮದೇ ಈ ಸರಕಾರ' ಎಂದು ತಿಳಿದು ಒಕ್ಕೂಟದಲ್ಲಿ ಕೂಡಿಕೊಂಡು ನಾಡಿನಲ್ಲಿಯ ಕೃಷಿ, ಉದ್ಯೋಗ ಮೊದಲಾದವುಗಳ ಉತ್ಕರ್ಷದ ಕಡೆಗೆ ತಮ್ಮ ಸಂಪೂರ್ಣ ಲಕ್ಷ್ಯವನ್ನು ಪ್ರಯತ್ನಿಸುವದೇ ಯಥಾ ಯೋಗ್ಯವಾಗಿದೆ.

ಭಾರತದಲ್ಲಿಯ ಅಲ್ಲಲ್ಲಿಯ ತುಂಡು ತುಂಡುಗಳಂತಿದ್ದ ಈ ಸಂಸ್ಥಾನಗಳೇ 'ಕಳ್ಳಪೇಟೆ'ಗೆ ಕೋಟೆಗಳಂತಿವೆ. ಈ ಕಳ್ಳ ಪೇಟೆಯ ವಸ್ತುಗಳ ಸಂಗ್ರಹಕ್ಕೆ ಅಲ್ಲಿ ಸಾಕಷ್ಟು ಅವಕಾಶವಿದೆ. ಅ ಬಗ್ಗೆ ಯಾವ ಕ್ರಮವನ್ನೂ ಸಂಸ್ಥಾನಿಕರು ತೆಗೆದು ಕೊಂಡಂತೆ ಕಂಡುಬರುವದಿಲ್ಲ. ಪೇಟೆಯಲ್ಲಿ ವಸ್ತುಗಳನ್ನು ಬರಗೊಡದೆ ಬೇಡಿದ ಬೆಲೆ ಕೊಟ್ಟು ಸ್ವಾಧೀನಪಡಿಸಿಕೊಂಡು, ಅವುಗಳನ್ನು ಸಂಸ್ಥಾನದ ಹದ್ದಿಗೆ ಸಾಗಿಸಿ ಜನದಲ್ಲಿ 'ಹಪಾಪಿ' ಬೆಳೆ ಬೆಳೆದಂತೆ ಸ್ವಲ್ಪ ಸ್ವಲ್ಪವಾಗಿ ವಸ್ತುಗಳನ್ನು ತಂದು ಒಂದಕ್ಕೆ ಹತ್ತು ಪಟ್ಟು, ಕೆಲಕೆಲವು ವೇಳೆ ಇಪ್ಪತ್ತು ಪಟ್ಟು ಬೆಲೆ ಹೇಳಿ ಮಾರಾಟ ಮಾಡುತ್ತಿರುವ ಈ ಕಳ್ಳಪೇಟೆಯು ವ್ಯಾಪಾರಸ್ಥರಿಗೆ ಈ ಸಂಸ್ಥಾನೀ ಹನ್ನು ಸಂರಕ್ಷಕ ಕೋಟೆಯಂತಾಗಿ ಈ ಕಳ್ಳಪೇಟೆ ಅಳಿಯಲು ಅಸಾಧ್ಯವಾಗಿ ಹೋಗಿದೆ ಭಾರತದ ತುಂಬೆಲ್ಲ ಒಂದೇ ರೀತಿಯ ಕಾಯಿದೆ ವ್ಯವಸ್ಥೆಗಳಿದ್ದರೆ ಈ ಕಳ್ಳಪೇಟೆಗೆ ಅಸ್ಪದ ಸಿಕ್ಕದೆ ಹೋಗಬಹುದಿತ್ತು. ಇಷ್ಟು ಪ್ರಚಂಡ ರೀತಿಯಲ್ಲಿ ಅದು ನಡೆಯುವುದೂ ಅಸಾಧ್ಯವೆಂತಲೇ ಹೇಳಬಹುದಾಗಿತ್ತು. ಇರಲಿ, ಈ ಕಳ್ಳಪೇಟೆ ಅಳಿಯಬೇಕಾದರೆ ಈಗ ಜನಸಾವಾನ್ಯರೇ ಮುಂದೆ ಬಂದು

ಪ್ರಾಮಾಣಿಕತೆಯಿಂದ ಕೆಲಸ ಮಾಡದೆ ಗತ್ಯಂತರವಿಲ್ಲ ಹೀಗೆ ನಮ್ಮ ಅನಾವಸ್ಥೆಗೆ ಇದೂ ಒಂದು ಕಾರಣವೇ.

ಇನ್ನೂ ಕೆಲಕೆಲವು ಕಡೆ ಜವಿೂನದಾರಿ ಪದ್ಧತಿಯಿಂದಲೂ, ಕೃಷಿ ವ್ಯಾಪಾರಗಳಿಗೆ ಸಾಕಷ್ಟು ಉತ್ತೇಜನ ದೊರೆಯದೆ ಉತ್ಪತ್ತಿ ವ್ಯಾಪಾರಗಳಿಗೆ ಕ್ಷಯರೋಗ ಹತ್ತಿದಂತಾಗಿದೆ. ಈ ಜವಿೂನುದಾರಿಗಳೂ ಚಿಕ್ಕ ಚಿಕ್ಕ ಸಂಸ್ಥಾನಗಳಂತೆಯೇ ಇದ್ದುದರಿಂದ ಆ ಮಾತೇ ಅಲ್ಲಿಗೂ ಅನ್ವಯಿಸುವುದು. ಇವರೂ ಸ್ವಾಭಿಮಾನ ಪ್ರೇರಿತರಾಗಿ ತಾವು ತಮ್ಮವರು ಕೂಡಿಯೇ ಹೋಗಬೇಕೆಂಬ ಪ್ರವೃತ್ತಿಯಿಂದ, ತಮ್ಮ ತಮ್ಮ ಕ್ಷೇತ್ರದಲ್ಲಿ ಈ ವ್ಯಾಪಾರೊದ್ಯೋಗ ಕೃಷಿಗಳಿಗೆ ಉತ್ತೇಜನ ಕೊಡುವುದೇ ಈ ಅನಾವಸ್ಥೆಯಿಂದ ಪಾರಾಗುವದಕ್ಕೆ ಒಳ್ಳೇ ಉಪಾಯವಾಗಿದೆ.

ಭರದಿಂದ ಬೆಳೆಯುತ್ತಿರುವ ಜನ ಸಂಖ್ಯೆಗೆ ಅನುಗುಣವಾಗಿ ತಕ್ಕ ಪ್ರಮಾಣದಲ್ಲಿ, ಈ ಕೃಷಿ ವ್ಯಾಪಾರೊದ್ಯೋಗಗಳೂ ಉತ್ಕರ್ಷೆ ಹೊಂದಿದರೆ ನಮ್ಮ ದೇಶ ಈ ಅನಾವಸ್ಥೆಯಿಂದ ಪಾರಾಗುವದೇನೂ ದೊಡ್ಡ ಮಾತಲ್ಲ.

ಕೊನೆಯದಾಗಿ, ಈ ಬ್ರಿಟಿಶ ಶೋಷಣ ನೀತಿಯಿಂದ ಇದುವರೆಗೆ ಬಳಲಿ ಬೆಂಡಾಗಿ ಹೋಗಿರುವ ಭಾರತವು ಇನ್ನು ಮುಂದೆ ಆ ಹಿಡಿತದಲ್ಲಿ ಎಂದೂ ಸಿಕ್ಕಲಾರದು. ಏಕೆಂದರೆ ನಮ್ಮ ಮುಂದಾಳುಗಳು ಅಖಂಡ ಪ್ರಯತ್ನದಿಂದಲೂ, ಬಾಪೂಜಿಯವರ ಪುಣ್ಯ ಪ್ರಭಾವದಿಂದಲೂ, ಇಂದು ಬ್ರಿಟಿಶರನ್ನು ಭಾರತದಿಂದ ಹೊರಗಟ್ಟಿದ್ದಾರೆ. ಇನ್ನು ಅವರ ಯಾವದೇ ರೀತಿಯ ಶೋಷಣೆ ಪ್ರಯತ್ನಗಳು ಭಾರತದಲ್ಲಿ ನಡೆಯಲಾರವು. ಆದರೂ ಬೇನೆ ಸಂಪೂರ್ಣ ನಾಶವಾದರೂ ಕೂಡಲೆ ಅಶಕ್ತತೆ ಅಳಿದು ಹೋಗದಂತೆ ಇಂದು ಭಾರತದ ಸ್ಥಿತಿಯಿದ್ದರೂ, ತೀರ ಸನಿಯದಲ್ಲಿಯೇ, ಭಾರತವು ಈ ಅಶಕ್ತತೆಯಿಂದ ಪೂರಾಗಿ ಸಶಕ್ತವಾಗುವದರಲ್ಲಿ ಸಂದೇಹವಿಲ್ಲ ಏಕೆಂದರೆ ಬೇನೆ ಸಂಪೂರ್ಣವಾಗಿ ಇಂದು ನಾಶವಾಗಿ ಹೋಗಿದೆ. ಅದರೂ, ಈ ದೇಶ ವಿಚ್ಛೇದ, ಜಾತೀಯ ಸಮಸ್ಯೆ, ಸಂಸ್ಥಾನ ಸಮಸ್ಯೆ, ಕೃಷಿ ವ್ಯಾಪಾರೋದ್ಯಮಗಳ ಉತ್ಕರ್ಷದ ವ್ಯವಸ್ಥೆ, ಕಳ್ಳಸೇಟಿಯ ಕೊನೆ, ಮೂಲಧನವಾದಿಗಳ ಪ್ರಾಬಲ್ಯಗಳ ಹೀನತೆ ಇವೆಲ್ಲ ಆಗುವವರೆಗೆ ಭಾರತಕ್ಕೆ ಅನಾವಸ್ಥೆ ತಪ್ಪಿದ್ದಲ್ಲವಾದರೂ. ಈಗಿನ ಜನತೆ ಮತ್ತು ಜನತಾ ಸರಕಾರ ಇವುಗಳ ದೀರ್ಘ ಮತ್ತು ಪ್ರಾಮಾಣಿಕ ಪ್ರಯತ್ನದಿಂದ ಭಾರತಕ್ಕೆ ಭಾಗ್ಯಕಾಲ ಬೇಗನೇ ಬರಲಿದೆ ಎಂದು ಹೇಳಬಹುದು.

(ಜಯಹಿಂದ)

ಹರಿವಾಣದಲ್ಲಿ ಕನ್ನಡ ಚಟುವಟಿಕೆಗಳು

ಈ ಗ್ರಾಮದ ಕ ಏ. ಸಂಘದ ಪರವಾಗಿ ನೆರೆದ ರೈತ ಮತ್ತು ಸಾರ್ವಜನಿಕ ಸಭೆಯಲ್ಲಿ (21 ನೆಯ ದಿನಾಂಕ) ಆಮಂತ್ರಿತ ಶ್ರೀಗಳಾದ ರಂಗನಗೌಡ, ದೊಡ್ಡಯ್ಯ, ರಾಜಣ್ಣ, ರಾಜೋಟಯ್ಯ, ದೇಶಾಯಿಯವರು ಕರ್ನಾಟಕ ಏಕೀಕರಣ ಪ್ರಶ್ನೆಯ ಜಟಿಲ ಸಮಸ್ಯೆಗಳನ್ನು, ಗದಿನಾಡಿನ ಜನರ ಕರ್ತವ್ಯವನ್ನು ಹೃದಯಂಗಮವಾಗಿ ಹೇಳಿದರು. ಮದ್ರಾಸ್ ಆಂಧ್ರ ರಾಜಕೀಯ ಸಭೆಯಲ್ಲಿ ಈಚೆಗೆ ಬಳ್ಳಾರಿ ಜಿಲ್ಲೆಯ ಆಲೂರು, ಆದವಾನಿ, ರಾಯದುರ್ಗ ತಾಲೂಕುಗಳನ್ನು ಆಂಧ್ರ ರಾಷ್ಟ್ರಕ್ಕೆ ಹೊಂದಿಸುವ ತೀರ್ಮಾನವನ್ನು ನಿಷೇಧಿಸಿ, ಕೇಳ್ಕರ ಅವಾರ್ಡನ್ನು ಖಂಡಿಸಲಾಯಿತು. ಪೂರ್ಣ ಬಳ್ಳಾರಿ, ಅನಂತಪುರ, ಕರ್ನೂಲು ಜಿಲ್ಲೆಗಳ ಕೆಲಭಾಗ ಕನ್ನಡಿಗರದೆಂದು ಸಾರಲಾಯಿತು. ಕೇಳ್ಕರ ಅವಾರ್ಡಕಾಲಕ್ಕೆ ಸಿರುಗುಪ್ಪೆ, ತಾಲೂಕಿನಲ್ಲಿದ್ದ ಹರಿವಾಣ ಗ್ರಾಮವು ಈಗ ಆದವಾನಿಗೆ ಹೋಗಿ ಅವಾರ್ಡು ಇದಕ್ಕೆ ಅನ್ವಯಿಸುವುದಿಲ್ಲವೆಂದಾಯಿತು. ಅಷ್ಟಕನ್ನಡ ಉಪಾಧ್ಯಾಯರ ನಿಯಾಮಕಕ್ಕೆ ಕೇಳಲು ನಿಶ್ಚಿತವಾಯಿತು.

ನವಭಾರತಕ್ಕೆ ಚಂದಾದಾರರಾಗಿರಿ

ರಾಷ್ಟ್ರೀಯ ಸೇವಕ ಸಂಘದ ಸದಸ್ಯರಿಗೆ

ಮಹಾತ್ಮ ಗಾಂಧಿಯವರ ಉಪದೇಶ.

ತ್ಯಾಗವೊಂದೇ ಸಾಲದು

ಈ ಬೆಳಿಗ್ಗೆ ಭಂಗಿ ವಸತಿಯಲ್ಲಿ ಸುಮಾರು ಐನೂರು ಜನ ರಾಷ್ಟ್ರೀಯ ಸೇವಕ ಸಂಘದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ಸ್ಥಾಪಕರಾದ ಶ್ರೀ ಹೆಡ್ಗೇವರರು ಬದುಕಿದ್ದಾಗ ರಾ. ಸೇ. ಸಂಘದ ಶಿಬಿರಕ್ಕೆ ತಾವು ಬಹಳ ವರ್ಷಗಳ ಕೆಳಗೆ ಭೇಟ್ಟಿಯಿತ್ತುದಾಗಿ ಗಾಂಧೀಜಿ ಹೇಳಿದರು. ದಿವಂಗತರಾದ ಶ್ರೀ ಜಮುನಾಲಾಲ ಬಜಾಜರು ತಮ್ಮನ್ನು ಅಲ್ಲಿಗೆ ಕರೆದೊಯ್ದರೆಂದೂ ಆಗ ತಮಗೆ ಅಲ್ಲಿಯವರ ಶಿಸ್ತು, ಸಂಪೂರ್ಣ ಅನಸ್ಪೃಶ್ಯತೆ ಮತ್ತು ಉಗ್ರ ಸರಳತೆಗಳು ಮೆಚ್ಚಿಗೆಯಾದವೆಂದು ಅವರು ಅಭಿಪ್ರಾಯಪಟ್ಟರು. ಅಂದಿನಿಂದ ಸಂಘವು ಬಹಳ ಮುಟ್ಟಿಗೆ ಬೆಳೆದಿದೆ. ಗಾಂಧೀಜಿಯು ಮತದಂತೆ ಸೇವೆ ಸ್ವಾರ್ಥತ್ಯಾಗಗಳನ್ನು ಧ್ಯೇಯವನ್ನಾಗಿಟ್ಟುಕೊಂಡು ಯಾವ ಸಂಸ್ಥೆಯಾದರೂ ಬಲಿತು ಸಮರ್ಥವಾಗಿ ನಿಲ್ಲುವುದು. ಆದರೆ ನಿಜವಾಗಿಯೂ ಉಪಯುಕ್ತ ಸಂಸ್ಥೆಯಾಗಿರಬೇಕಾದರೆ ಸ್ವಾರ್ಥತ್ಯಾಗದ ಜೊತೆಗೆ ಉದ್ದೇಶ ಪಾವಿತ್ರ್ಯ ಮತ್ತು ಯುಧಾರ್ಥ ಜ್ಞಾನ ಇವು ಇರುವುದವಶ್ಯಕ. ಇನ್ನೆರಡಿಲ್ಲದ ಬರಿಯ ತ್ಯಾಗವು ಸಮಾಜಕ್ಕೆ ಹಾನಿಕರವಾಗಿ ಪರಿಣಮಿಸುವದು ಅನುಭವ ಸಿದ್ಧವಾದುದು

ಸನಾತನಿ ಹಿಂದು

ಮೊಟ್ಟಮೊದಲು ಹಾಡಲಾದ ಪ್ರಾರ್ಥನಾ ಪದ್ಯವು ಭಾರತ ಮಾತೆ, ಹಿಂದು ಸಂಸ್ಕೃತಿ ಮತ್ತು ಹಿಂದುಧರ್ಮಗಳ ಸುತ್ತಿಪರವಾದುದಾಗಿತ್ತು. ತಾವು ಸನಾತನಿ ಹಿಂದುವಿರುವದಾಗಿ ಗಾಂಧೀಜಿ ಹೇಳಿದರು. ಅವರು ಸನಾತನ ಶಬ್ದದ ಯೋಗಾರ್ಥವನ್ನು ಗ್ರಹಿಸಿದರು. ಹಿಂದು ಶಬ್ದದ ಮೂಲವನ್ನು ಸರಿಯಾಗಿ ಯಾರೂ ಅರಿಯರು. ಆ ಹೆಸರನ್ನು ನಮಗೆ ಕೊಡಲಾಯಿತು. ಮತ್ತು ನಾವು ಸ್ವಾಭಾವಿಕವಾಗಿ ಅದನ್ನು ಸ್ವೀಕರಿಸಿದೆವು. ಹಿಂದು ಧರ್ಮವು ಜಗತ್ತಿನ ಎಲ್ಲ ಧರ್ಮಗಳ ಅತ್ಯುತ್ತಮಾಂಶಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿದೆ ಮತ್ತು ಆ ಅರ್ಥದಲ್ಲಿ ಅದೊಂದು ವಿಶಿಷ್ಟ ಧರ್ಮವೇ ಅಲ್ಲವೆನ್ನಬಹುದು. ಆದುದರಿಂದ ಅದಕ್ಕೆ ಇಸ್ಲಾಂ ಅಥವಾ ಅದರ ಅನುಯಾಯಿಗಳಲ್ಲಿ ಜಗಳವಿಲ್ಲ-ಇಂದು ಹಾಗೆ ಕಲಹವುಂಟಾಗಿರುವದು ದುರ್ದೈವದ ಸಂಗತಿ. ಹಿಂದು ದರ್ಮದಲ್ಲಿ ಅಸ್ಪೃತೆಯ ಕಾಲಕೂಟವು ಹೊಕ್ಕೊಡನೆ ಅದರ ಇಳಿಗಾಲ ಆರಂಭವಾಯಿತು. ಒಂದು ಮಾತ್ರ ಖಂಡಿತ. ಅದನ್ನು ಗಾಂಧೀಜಿ ಕಳಕಳೆಯಿಂದ ಧ್ವನಿಗೊಟ್ಟಿದ್ದಾರೆ: "ಅಸ್ಪೃಶ್ಯತೆ ಬದುಕಿದರೆ ಹಿಂದುಧರ್ಮ ಸಾಯುತ್ತದೆ. ಹಾಗೇ ಹಿಂದುಸ್ತಾನದಲ್ಲಿ ಹಿಂದುಗಳಿಗಲ್ಲದೆ ಅನ್ಯರಿಗೆ ಅದರಲ್ಲೂ ಮುಸ್ಲಿಮೇತರಿಗೆ, ವಿಶೇಷತಃ ಮುಸ್ಲಿಮರಿಗೆ ಸ್ಥಳವಿಲ್ಲವೆಂದು ಹಿಂದು ತಿಳಿದರೆ ಇಲ್ಲಿ ಬದುಕಬೇಕೆನಿಸಿದರೆ, ಅವರು ಹಿಂದುಗಳ ಗುಲಾಮರಾಗಿ ಬದುಕಬೇಕಾಗುತ್ತದೆ-ಮತ್ತು ಅವರು ಹಿಂದುಧರ್ಮವನ್ನು ಕೊಲ್ಲುತ್ತಾರೆ. ಅದೇ ರೀತಿಯಿಂದ ಪಾಕಿಸ್ತಾನದಲ್ಲಿ ಮುಸ್ಲಿಮರಿಗೆ ಮಾತ್ರ ನ್ಯಾಯಬದ್ಧ ಸ್ಥಾನವಿದೆಯೆಂದು ಅದು ತಿಳಿದರೆ ಮುಸ್ಲಿಮೇತರರು ಪೀಡಿತರಾಗಿ ಬಾಳಬೇಕಾಗುತ್ತದೆ. ಅಮ್ ಭರತಖಂಡದಲ್ಲಿ ಇಸ್ಲಾಮಿಗೆ ಮೃತ್ಯುಸಾಧನವೇ ಸರಿ.

ಕೇಡಿಗೆ ಬದಲು ಒಳಿತು.

ಹಿಂದುಸ್ತಾನವು ವಿಭಕ್ತವಾಗಿರುವುದು ದುರ್ಭಾಗ್ಯ. ಒಂದು ವಿಭಾಗ ಉನ್ಮತ್ತವಾಗಿ ಕುತ್ಸಿತ ಕಾರ್ಯಗಳನ್ನು ಮಾಡಿದೊಡನೆ "ಇನ್ನೊಂದು ವಿಭಾಗವೂ ಹಾಗೆ ಮಾಡಬೇಕೆಂದು ಯಾವ ನಿಯಮವಿದೆ? ಕೇಡಿಗೆ ಕೇಡೆಂಬುದರಲ್ಲಿ ಅರ್ಥವಿಲ್ಲ. ಧರ್ಮವು ನಮಗೆ ಕೇಡಿಗೆ ಬದಲು ಒಳಿತು ಮಾಡಬೇಕೆಂದು ಬೋಧಿಸುತ್ತದೆ.

ಸಂಘದ ಸಮರ್ಥನೆ

ಗಾಂಧೀಜಿ ರಾ. ಸೇ. ಸಂಘದ ಗುರುಗಳನ್ನು ಕೆಲವಿಂಗಳ ಹಿಂದೆ ನೋಡಿದ್ದರು. ಕಲಕತ್ತ ಮತ್ತು ದಿಲ್ಲಿಯಲ್ಲಿ ತಮ್ಮೆಡೆಗೆ ಸಂಘದ ವಿರುದ್ಧ ಬಂದ ದೂರುಗಳನ್ನು ಅವರು ಆ ಗುರುಗಳಿಗೆ ಹೇಳಿದ್ದರು ತಮಗೆ ಸಂಘದ ಪ್ರತಿಯೊಬ್ಬ ಸದಸ್ಯನ ನಡತೆಯ ಬಗ್ಗೆ ಹೊಣೆ ಕೊಡಲಾಗದಿದ್ದರೂ ಇಡೀ ಸಂಘದ ಪ್ರಸಿದ್ಧ ಧೋರಣವು ಹಿಂದುಗಳ ಮತ್ತು ಹಿಂದುಧರ್ಮದ ಸೇವೆಯೇ. ಅದೂ ಯಾವನಾದರೊಬ್ಬನ ವಿತ್ತಜೀವಿತಾದಿಗಳನ್ನು ಬಲಿತೆಗೆದುಕೊಂಡಿಲ್ಲ ಎಂಬುದರ ಬಗ್ಗೆ ಅಶ್ವಾಸನ ಕೊಡುವುದಾಗಿ ಸಂಘದ ಗುರುಗಳು ಹೇಳಿದರು. ಪೀಡೆಯಲ್ಲಿ ಸಂಘದ ಶ್ರದ್ಧೆಯಿಲ್ಲ. ಅಹಿಂಸೆಯಲ್ಲಿ ಅದಕ್ಕೆ ನಂಬಿಗೆಯಿಲ್ಲ. ಆತ್ಮರಕ್ಷಣಾಕಲೆಯನ್ನು ಅದು ಭೋಧಿಸುತ್ತದೆ, ಅದು ಸೇಡನ್ನೆಂದೂ ಉಪದೇಶಿಸಿಲ್ಲ.

ಅಜಾತಶತ್ರು

ಭಾರತನೌಕೆಯಿಂದು ವಿಷಮ ಜಲರಾಶಿಯಲ್ಲಿ ತೇಲಿ ನಡೆದಿದೆ. ಸರಕಾರದಲ್ಲಿ ಅಧಿಕೃತರಾದ ಮುಖಂಡರು ಹಿಂದುಸ್ತಾನದಲ್ಲೇ ಅತ್ಯುತ್ತಮರು. ಕೆಲವರಿಗೆ ಅವರಲ್ಲಿ ತೃಪ್ತಿಯಿಲ್ಲ. ಅಂಧರು ಈಗಿನ ಮುಖಂಡರಿಗಿಂತ ಉತ್ತಮರಾದವರನ್ನು ತರಲಿ, ಹಾಗೆ ತಂದಮೇಲೆ ಅವರಿಗೆ ತಾವು ಅಧಿಕಾರವಹಿಸಿ ಕೊಡುವಂತೆ ಸದ್ಯದ ಮುಖಂಡರಿಗೆ ಸಲಹೆ ಕೊಡುವೆವೆಂದು ಗಾಂಧೀಜಿ ಹೇಳಿದರು. ಎಷ್ಟಾದರೂ ಸರದಾರ ಪಟೇಲರು ಮುದುಕರಾಗಿದ್ದಾರೆ. ವಯಸ್ಸಿನಲ್ಲಿ ಮುದುಕರಲ್ಲದಿದ್ದರೂ ತಮ್ಮ ಹೆಗಲು ಹೊತ್ತ ಭಾರದಿಂದ ಪಂಡಿತ ಜವಾಹರರು ಮುಪ್ಪಡಸಿದ ನಿಸ್ತೇಜ ಮನುಷ್ಯರಾಗಿ ಕಾಣುತ್ತಾರೆ. ಅವರು ಜನಸೇವೆಗಾಗಿ ಶಕ್ತಿಯಿಂದ ಪ್ರಯತ್ನಿಸುತ್ತಿದ್ದಾರೆ. ಆದರೆ ಅವರು ತಮ್ಮ ಅನುಭವ ಪ್ರಕಾರ ಮಾತ್ರ ನಡೆಯಬಲ್ಲರು. ಮಹಾಸಾಗರ ಪ್ರಮಾಣದ ಹಿಂದು ಜನಸಮುದಾಯವು ತಪ್ಪುದಾರಿಯಾದರೂ ಸರಿಯೆಂದು ಯಾವುದೋ ಒಂದು ದಾರಿ ಹಿಡಿದರೆ ಅದನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ. ಆದರೆ ಯಾವನೇ ಆಗಲಿ ಒಬ್ಬ ವ್ಯಕ್ತಿಗೆ ಅದರ ವಿರುದ್ಧ ಧನಿಯೆತ್ತಲು ಮತ್ತು ಅದಕ್ಕೆ ಎಚ್ಚರ ಕೊಡಲು ಹಕ್ಕಿದೆ. ಅದನ್ನೇ ತಾವು ಮಾಡುತ್ತಿರುವುದಾಗಿ ಗಾಂಧೀಜಿಯೆಂದರು. ಅವರು ಮುಸ್ಲಿಮರ ಮಿತ್ರರು ಹಾಗೂ ಹಿಂದು ಶೀಖ ವೈರಿಗಳೆಂದು ಹೇಳುವವರಿದ್ದಾರೆ. ಆದರೆ ಅದು ತಪ್ಪು ಅವರು ಮುಸ್ಲಿಮರಿಗೆ ಹೇಗೋ ಶೀಖ ಪಾರಸಿಗಳೂ ಹಾಗೇ ಗೆಳೆಯರು. ಈ ವಿಷಯದಲ್ಲಿ ಅವರು ೧೮ ವರ್ಷ ವಯಸ್ಸಿನಿಂದ ಇಂದಿನ ವರೆಗೂ ಅದೇ ರೀತಿಯ ನಡತೆಯುಳ್ಳವರಾಗಿದ್ದಾರೆ. ಆದರೆ ಅವರನ್ನು ಹಿಂದು ಶೀಖರ ಶತ್ರು ವೆಂದು ಕರೆದವರು ಗಾಂಧೀಜಿಯನ್ನು ಚೆನ್ನಾಗಿ ತಿಳಿದವರಲ್ಲಿ ಗಾಂಧೀಜಿ ಅಜಾತ ಶತ್ರು. ಹಿಂದು ಶೀಖರಿಗಂತೂ ಎಂದಿಗೂ ಹಗೆಯಲ್ಲ.

ದುಷ್ಕೃತ್ಯದ ಪರಿಣಾಮ

ಪಾಕಿಸ್ತಾನ ತಪ್ಪುದಾರಿಯಲ್ಲಿ ನಡೆಯುತ್ತಲೇ ಹೋದರೆ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಯುದ್ಧವಾಗಿಯೇ ತೀರುವುದು. ತಮ್ಮನ್ನು ಕೇಳುವುದಾದರೆ ಸೈನ್ಯ, ಪೋಲೀಸು ಬಲ ಯಾವುದೂ ಅಗತ್ಯವಿಲ್ಲವೆಂದು ಗಾಂಧಿಯವರೆಂದರು. ಆದರೆ ಇದೆಲ್ಲ ದೊಡ್ಡ ದೊಡ್ಡ ವಾತುಗಳೆಂದೂ ತಾವೇನೂ ಸರಕಾರವನ್ನೆಂದೂ ಅವರು ಹೇಳಿದರು. ಮುನೆಬಟ್ಟು ಹೋಗಬೇಡಿರೆಂದು ಹಿಂದೂ ಶೀಖರಿಗೆ ವಿನ್ನವಿಸಿಕೊಂಡು ಅವರ ಸಂಪೂರ್ಣ ಸುರಕ್ಷಿತತೆಯನ್ನು ಪಾಕಿಸ್ತಾನವೇಕೆ ನಡೆಸಿಕೊಡಲಿಲ್ಲ? ಹಿಂದೀ ಒಕ್ಕೂಟದಲ್ಲಿ ಅವರೇಕೆ ಪ್ರತಿಯೊಬ್ಬ ಮುಸ್ಲಿಮನ ಸುರಕ್ಷಿತತೆಗೆ ಹೊಣೆಯಾಗಲಿಲ್ಲ.?

ಇಂದು ಎರಡೂ ಪಕ್ಷಗಳು ಭ್ರಮಿಷ್ಟರಾದಂತೆ ತೋರುತ್ತದೆ. ಅದರ ಪರಿಣಾಮವು ವಿನಾಶ ಹಾಗೂ ದುಃಖವಲ್ಲದೆ ಬೇರೆಯಾಗಲಾರದು.

ಮಾತು ಮತ್ತು ಕೃತಿ

ಸಂಘವು ಸುಸಂಘಟಿತವೂ ಸುನಿಯತವೂ ಆದ ಒಂದು ಜನಮಂಡಲ ಅದರ ಶಕ್ತಿಯನ್ನು ಹಿಂದುಸ್ತಾನದ ಹಿತದ ಪರವಾಗಿ ಇಲ್ಲವೆ ವಿರುದ್ಧವಾಗಿ ಬಳಸಬಹುದು.

ಸಂಘದ ವಿರುದ್ಧ ಮಂಡಿಸಿದ ಅಪವಾದನೆಗಳಲ್ಲಿ ತಥ್ಯಾಂಶವಿದೆಯೋ ಇಲ್ಲವೋ ತನಗೆ ತಿಳಿಯದೆಂದು ಗಾಂಧೀಜಿ ಹೇಳಿದರು. ಅಪವಾದನೆಗಳಿಗೆ ಬುತವಿಲ್ಲ ವೆಂಬುದನ್ನು ತನ್ನ ಅನ್ಯಾಪತ ಹಾಗೂ ವಿಕರೂಪದ ನಡತೆಯಿಂದ ಸಂಘವು ತೋರಿಸಿಕೊಡಬೇಕು.

ಯಾರು ಶಿಕ್ಷಿಸಬಲ್ಲರು

ಉಪಸಂಹಾರ ಕಾಲದಲ್ಲಿ ಗಾಂಧೀಜಿ ಪ್ರಶ್ನೆಗಳಿದ್ದವೆ ಉತ್ತರಿಸುವುದಾಗಿ ಹೇಳಿದರು. ದುರ್ಜನನನ್ನು ಕೊಲ್ಲಲು ಹಿಂದು ಧರ್ಮದ ಅಪ್ಪಣೆಯಿದೆಯೇ? ಎಂದು ಒಬ್ಬ ಕೇಳಿದ. ಅಪ್ಪಣೆಯಿದೆ ಮತ್ತು ಇಲ್ಲ ಎಂದೂ ಹೇಳಿ ಹಿಂದು ಧರ್ಮವು ಒಬ್ಬ ದುರ್ಜನನಿಗೆ ಇನ್ನೊಬ್ಬನನ್ನು ಕೊಲ್ಲಲು ಅಪ್ಪಣೆ ಕೊಡದೆಂದು ಗಾಂಧೀಜಿ ಉತ್ತರಿಸಿದರು. ಶಿಕ್ಷಿಸುವುದು ಸರಕಾರದ ಕೆಲಸ ಜನತೆಯದಲ್ಲ ಎಂದು ಅವರು ಸಾರಿದರು.

ಮದ್ರಾಸ್ ಸರ್ಕಾರದ ಪ್ರಕಟನೆಗಳು

ಪ್ರಾಂತಿಕ ಫಿರ್ಕ ಅಭಿವೃದ್ಧಿಯ ಬೋರ್ಡು

ತೀವ್ರ ಜನಪದ ಪುನರ್ನಿರ್ಮಾಣ ಕೆಲಸವನ್ನು ತ್ವರೆಗೊಳಿಸುವುದು, ಗುಡಿ ಕೈಗಾರಿಕೆಗಳನ್ನು ಸುಧಾರಿಸುವುದು, ಆರಿಸಲ್ಪಟ್ಟ ಫಿರ್ಕ ಹಾಗೂ ಕೇಂದ್ರಗಳಲ್ಲಿ ಖಾದಿಯ ಅಭಿವೃದ್ಧಿ, ಇತ್ಯಾದಿ ವಿಷಯಗಳ ಬಗ್ಗೆ ತಕ್ಕ ಯೋಜನೆಗಳನ್ನು ರಚಿಸಲು ಸರಕಾರವು ಒಂದು ಪ್ರಾಂತಿಕ ಫಿರ್ಕಾ ಅಭಿವೃದ್ಧಿ ಬೋರ್ಡನ್ನು ರಚಿಸಿದೆ ಅವರ ಸದಸ್ಯರು:- (1) ಮಾನ್ಯ ಪ್ರಧಾನ ಮಂತ್ರಿಗಳು (ಅಧ್ಯಕ್ಷ), ಜನಪದ ಅಭಿವೃದ್ಧಿ ಖಾತೆಯ ಮಂತ್ರಿಗಳು, ಶ್ರೀಗಳಾದ ಗೊಲ್ಲಪೂಡಿ ಸೀತಾರಾಮಶಾಸ್ತ್ರಿ, ಎನ್. ಎಸ್. ವರದಚಾರಿ, ಎಂ. ಎಲ್. ಎ ಎಂ. ಬಾಪಿಸೀಡು, ಎಂ. ಎಲ್. ಎ., ಕೇಳಪ್ಪನ್, ಎನ್. ರಾಮಕೃಷ್ಣ ಅಯ್ಯರ್, ಆರ್. ಆರ್. ಕೀಥನ್ ಎಂ. ನಾರಾಯಣರಾವ್, ಎಂ. ಎಲ್. ಸಿ., ಟಿ. ಎಸ್. ಸೌಂದರಮ್ ರಾಮಚಂದ್ರನ್, ಎಂ. ಸತ್ಯ ನಾರಾಯಣ ಶಾಸ್ತ್ರಿ, ಎ. ವೇದರತ್ನಂ ಪಿಳ್ಳೈ, ಎಂ. ಎಲ್. ಎ. ಟಿ. ಸುಬ್ರಮಣ್ಯಂ, ಕೆ. ಕೆ. ಸುಬ್ಬಣ್ಣ ಗೌಂಡರ್, ಎಂ. ಎಲ್. ಎ. ಜಿ. ರಾಮಚಂದ್ರ ರಾವ್ ಎಸ್. ರಾಮಸ್ವಾಮಿನಾಯ್ಡು, ಪಂಗಾಲ್ ಲಕ್ಷ್ಮಿನಾರಾಯಣ ನ್ಯಾಕ್, ಅನ್ನಂಕನ್ನಯ್ಯ, ಡಾ. ಗುರುಪಾದಂ ಆರ್. ಗುರುಸ್ವಾಮಿ, ಚೀಫ್ ಇಂಜಿನಿಯರ್ (ಹ್ಯಾವೇಸ್), ಚೀಫ್ ಇಂಜಿನಿಯರ್ (ಇಲೆಕ್ಟ್ರಿಸಿಟಿ), ಡೈರೆಕ್ಟರ್ ಆಫ್ ಎಗ್ರಿಕಲ್ಚರ್, ಪ್ರೊವಿನ್ಸಿಯಲ್ ಟೆಕ್ಸ್‌ಟೈಲ್ ಕಮಿಷನರ್, ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ವೆನೆಸ್ಮ್ಯ ಬೋರ್ಡಿನ ಜಾಯಿಂಟ್ ಸೆಕ್ರಿಟರಿ, ಪಬ್ಲಿಕ್ ಡಿಪಾರ್ಟ್‌ಮೆಂಟಿನ ಅಸಿಸ್ಟಾಂಟ್ ಸೆಕ್ರಿಟರಿ ಪ್ರೊವಿನ್ಸಿಯಲ್ ಫಿರ್ಕಾ ಡೆವಲಪ್‌ಮೆಂಟ್ ಆಫಿಸರ್ (ಕಾರ್ಯದರ್ಶಿ).

ಬೋರ್ಡಿನ ಹೆಡ್ ಕ್ವಾರ್ಟರ್ಸ್, ಮದ್ರಾಸಾಗಿದ್ದು ಸಾಮಾನ್ಯವಾಗಿ ನೂರು ತಿಂಗಳಿಗೊಮ್ಮೆ ಸಭೆ ಸೇರುವುದು. ಅವಶ್ಯವಿದ್ದರೆ ಆಗಾಗ ಸಭೆ ಸೇರಲೂಬಹುದು.

ಬಳ್ಳಾರಿ ಮುನಿಸಿಪಾಲಿಟಿ
೨೯—೯—೪೭ ಚುನಾವಣೆಗಳ ಫಲಿತಾಂಶ

೨ ನೆಯ ವಾರ್ಡಿಗೆ ಎಸ್. ಅಲ್ಲುಲ್ ಖಾದರ ಸಾಹೇಬರು, ಹುಸೇನ್ ಖಾನ್ ಸಾಹೇಬರುಳ ನೆಯ ವಾರ್ಡಿಗೆ ಶ್ರೀ ಡಿ. ಯಲ್. ಶೆಟ್ಟರು ೬ ನೆಯ ವಾರ್ಡಿನಿಗೆ ಗಾಳಿ ದೊಡ್ಡಕರಣಪ್ಪನವರು, ೧೬ ನೆಯ ವಾರ್ಡಿಗೆ ಪೂರ್ಣ ಪ್ರಜ್ಞಾಚಾರ್ಯರು, ೨೦ ನೆಯ ವಾರ್ಡಿಗೆ ಸಾವಿಕ್ ಸಾಹೇಬರು, ೨೧ ನೆಯ ವಾರ್ಡಿಗೆ ಅಬ್ದುಲ್ ಮುಜೀದ್ ಸಾಹೇಬರು, ೨೫ ನೆಯ ವಾರ್ಡಿಗೆ ವಿ. ಜಗನ್ನಾಥರವರು ಆರಿಸಲ್ಪಟ್ಟರು. ಈ ಹಿಂದೆ ೫ ಜನರು ವಿರೋಧವಿಲ್ಲದೆ ಆರಿಸಲ್ಪಟ್ಟಿರುವರು.

ಇದು ಸರಿಯಲ್ಲ

ವೈದ್ಯಕೀಯ ಶಿಕ್ಷಣಕ್ಕಾಗಿ ಬಂದವರು ಸಂಸ್ಥೆಯ ರಾಜಕೀಯಗಳಿಂದ ಆಂದೋಲಿತರಾಗಬಾರದು. ಉದ್ದೇಶ ಸಾಧನೆಮಾಡಿದ ನಂತರ ಎಲ್ಲಾದರೂ ಧುಮುಕಲಿ ಪರವಾಇಲ್ಲ. ಈ ಕಾರಣ ಶಾರಾನಾಥ ಆಯುರ್ವೇದ ವಿದ್ಯಾಪೀಠದ ವಿದ್ಯಾರ್ಥಿಗಳು ಸತ್ಯಾಗ್ರಹಕ್ಕೆ ಹೊರಡಬಾರದೆಂದು ಸಂಬಂಧಿಸಿದವರು ಸಲಹೆಕೊಡುತ್ತಾರೆಂದು ಆಶಿಸುವ [ಒಬ್ಬ ಹಿತೈಷಿ]

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ.

ಸ್ಥಾಪಿತ : 19

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ನಮ್ಮ ಶಾಖೆಗಳು :—

೧. **ಬಳ್ಳಾರಿ** – ಹರಪನಹಳ್ಳಿ, ಕೊಟ್ಟೂರು, ಹೊಸಪೇಟೆ, ಕಂಪ್ಲಿ, ರಾಯದುರ್ಗ, ಆದವಾನಿ ಮತ್ತು ಬಳ್ಳಾ

೨. **ಅನಂತಪುರ** – ತಿಮ್ಮನಚೆರ್ಲ (ಗುಂತಕಲ್ಲು) ಗಾಮಿಡಿ, ಉರವಕೊಂಡ, ಧರ್ಮವರಂ, ಹಿಂದೂಪುರ, ಗು
ಕದಿರಿ ಮತ್ತು ಅನಂತಪುರ.

೩. **ಕರ್ನೂಲು** – ಪತ್ತಿಕೊಂಡ ಮತ್ತು ಕರ್ನೂಲು. ೪. **ಕಡಪ** – ರಾಜಂಪೇಟೆ ಮತ್ತು ಕಡಪ.

೫. **ಚಿತ್ತೂರು** – ಮದನಪಲ್ಲಿ, ವಾಯಲ್ಪಾಡು, ತಿರುಪತಿ, ನಗರಿ ಮತ್ತು ಚಿತ್ತೂರು.

ಬೆಂಗಳೂರು ಮತ್ತು ಮದ್ರಾಸ್ ನಗರಗಳಲ್ಲೂ ನಮ್ಮ ಶಾಖೆಗಳಿವೆ.

ಬ್ಯಾಂಕಿಂಗ್ ಮತ್ತು ವ್ಯಾಪಾರೀ ಸಂಬಂಧದ ಎಲ್ಲಾ ವ್ಯವಹಾರಗಳೂ ನಡೆಯುತ್ತವೆ.

— ನಮ್ಮ ಡೈರೆಕ್ಟರುಗಳು —

ಬಳ್ಳಾರಿ ಜಿಲ್ಲೆ – ಶ್ರೀ ಹೆಚ್. ಲಿಂಗಾರೆಡ್ಡಿ ಬಿ ಎ. ಬಿ. ಎಲ್. ಅಡ್ವೊಕೇಟ್, ಬಳ್ಳಾರಿ.
,, ,, ಡಿ. ವೇಣುಗೋಪಾಲಾಚಾರಿ ಬಿ. ಎ. ಬಿ. ಎಲ್. ಬಳ್ಳಾರಿ.
,, ,, ಮೂಲಂಗಿ ಗೂಳಪ್ಪನವರು, ಮರ್ಚಿಂಟ್, ಬಳ್ಳಾರಿ.
,, ,, ಜಿ. ಪದ್ಮನಾಭನ್, ಮರ್ಚಿಂಟ್, ಬಳ್ಳಾರಿ.
,, ,, ಮೊಲಗವೇಲಿ ಲಕ್ಷ್ಮೀರೆಡ್ಡಿ ಬ್ಯಾಂಕರ್, ಲ್ಯಾಂಡಲಾರ್ಡ್, ಮೊಲಗವೇಲಿ.
ಅನಂತಪುರ ಜಿಲ್ಲೆ – ಶ್ರೀ ಎ. ರಾಯಪ್ಪನವರು ಎಂ. ಎಲ್. ಎ.
,, ,, ಮೂಲಾ ಲಕ್ಷ್ಮೀನಾರಾಯಣಸ್ವಾಮಿ, ತಾಡಪತ್ರಿ.
ಚಿತ್ತೂರು ಜಿಲ್ಲೆ – ಶ್ರೀ ಯು. ಶಿ. ಚಂಗಲರಾಯನಾಯಿಡು ಲ್ಯಾಂಡ್‌ಲಾರ್ಡ್, ಚಿತ್ತೂರು.
,, ,, ಆರ್. ಕೃಷ್ಣಶಾಸ್ತ್ರಿ ಬಿ ಎ ಬಿ ಎಲ್. ಅಡ್ವೊಕೇಟ್, ಮದನಪಲ್ಲಿ.
ಕಡಪ ಜಿಲ್ಲೆ – ಶ್ರೀ ಜೆ. ರಾಮಚಂದ್ರರಾವು ಬಿ. ಎ. ಬಿ. ಎಲ್. ಅಡ್ವೊಕೇಟ್, ಕಡಪ.
ಕರ್ನೂಲು ಜಿಲ್ಲೆ – ಶ್ರೀ ರಾವುಬಹದ್ದೂರ್ ಶ್ರೀ ಬಿ ವಿ ಶೇಷಪತ್ತಿ ಲ್ಯಾಂಡ್‌ಲಾರ್ಡ್, ಬೇತಂಚರ್ಲ.
ಬಿ. ವಿ ಶೇಷಗಿರಿರಾವು ಬಿ. ಕಾಂ —ಕಾರ್ಯದರ್ಶಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5 0-0	One Year 5 0-0
೬ ತಿಂಗಳಿಗೆ 3-0-0	Six months 3 0-0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

SRI ....

... ...

....

Printed at Kris . Press Bellary QH No. B 1 7 1 R QH No. B-5
Edited & Published by T. B. KESHAVA RAO

ಜೈಹಿಂದ್ Reg. No. M. 4746

ಸತ್ಯಾಗ್ರಹ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಬಳ್ಳಾರಿ ಅಕ್ಟೋಬರು ೧೩ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ
ಸಂಚಿಕೆ ೩೯ ಟಿ. ಬಿ. ಕೇಶವರಾವ್.

ಸ್ವತಂತ್ರ ಭಾರತೀಯರ ಪರಮ ಕರ್ತವ್ಯ

ಭಾ. ಸ್ವ. ಖಂಡರಾಜವು ಭರತಖಂಡವ
ಖಂಡವಾಗಿರದಂತೆ, ಈ ದಿನ
ತುಂಡು ತುಂಡುಗಳಾಗಿ ವಿಭಜಿತವಾದ ಪರಿಯಂತು।
ಉಂಡು ಸುಮ್ಮನೆ ಕುಳಿತುಕೊಳ್ಳದೆ
ಖಂಡಗಳ ಸೇರಿಸುತ, ಪೂರ್ವದ
ಖಂಡತೆಯ ಸಾಧಿಸಲು ಯತ್ನಿಸಬೇಕು ಗೆಲಬೇಕು ॥

ಪರರಭಾಷೆಗೆ ದಾಸರಾಗುತ
ಮರೆತುಬಿಟ್ಟೆವು ನಮ್ಮ ನುಡಿಗಳ
ಸರಿದುದಾದಾಸ್ಯಾಂಧವೃತ್ತಿಯು ಏಳಿ ತಡವೇಕೆ।
ಪರಮ ಪೂಜ್ಯತೆಯಾಂತ ನಮ್ಮಯ
ಭರತಮಾತೆಯ ಮುದ್ದು ನುಡಿಗಳ
ಸರಸ ಸಾಹಿತ್ಯವನು ಬೆಳೆಸಲು ಬೇಕು ನುಡಿಬೇಕು ॥

ಜಾತಿಮತಭೇದಗಳು ದೇಶದ
ಖ್ಯಾತಿಯನು ಕೆಡಿಸಿಹವು, ಜನರನು
ನೀತಿದೂರರ ಮಾಡಿಹವು, ನೀಗಿಹವು ಐಕ್ಯವನು।

ಜಾತಿಮತಗಳ ಸಹಜತತ್ವವ
ಪ್ರೀತಿಯಿಂದಲಿ ಜನಕೆ ಬೋಧಿಸಿ
ಭ್ರಾತೃಭಾವವ ಬೆಳೆಸಿ "ಭಾಪುರೆ!"ಯೆನಿಸಿಕೊಳಬೇಕು ॥

ಜನಸಿಬೇರೂರಿರ್ದುದುರ್ಬರ
ಧನಿಕವಾದವ ಕಿತ್ತಿ ಬಿಸುಡುತ
ವಿನುತ ಸಮತಾವಾದ ಸ್ಥಾಪನೆಗಾಗಿ ಕೃಷಿಗೈದು।
ಘನಸುಖಾಂಬುಧಿಯೊಳಗೆ ದೇಶವ
ಮುಣುಗುವಂದದಿ ಮಾಳ್ಪಯತ್ನಕೆ
ತನುಮನಂಗಳವೀಡಿ ದುಡಿಯಲು ಬೇಕು ಗೆಲಬೇಕು ॥

ಅರಿವು ಹೆಚ್ಚಾಗಿರುವ ಆರವವು,
ಪರಿಮಳವ ಹೊರಸೂಸಿ ಜನರನು
ಪರಮ ಮುಗ್ಧರನಾಳ್ವ ಕರ್ತೃರಿಯಾದ ಕನ್ನಡವು।
ಸರಸ ಮಧುವನು ಪೋಲ್ವ ಅಂಧ್ರವು,
ಭರದಿ ಒಳಭೇದಗಳ ನೀಗುವ
ತೆರದಿಗೈಯ್ಯಲು ಬೇಕು. ನ್ಯಾಯವ ಸ್ಥಾಪಿಸಲು ಬೇಕು ॥

(ಸ. ರಾ.)

ಬಳ್ಳಾರಿಗೆ ಮಂತ್ರಿಗಳ ಆಗಮನ.

ಮದ್ರಾಸ್ ಮಂತ್ರಿಗಳಾದ ಶ್ರೀ ಮಾಧವಮೆನನ್, ಹಾ. ಶೇತಾರಾಮರೆಡ್ಡಿಯವರು ೧೨ ನೆಯ ದಿನಾಂಕ ಆಗಮಿಸಿದರು. ಬಳ್ಳಾರಿ, ಹೊಸಪೇಟೆ, ಸಿರುಗುಪ್ಪೆ ಹಗರಿಂಗಳಲ್ಲಿ ಕಾರ್ಯಕ್ರಮವಿದೆ. ಮುಖ್ಯವಾಗಿ ವೀರಶೈವ ಕಾಲೇಜಿಗೆ ಸ್ಥಳ ನಿರ್ದೇಶಿಸಿ ಸಹಾಯಮಾಡಲಿಕ್ಕಾಗಿಯೇ ಬಂದಿರುವರು. 14 ನೆಯ ತಾರೀಖು ಮದ್ರಾಸಿಗೆ ಹೊರಡುವರು.

ಜಗತ್ತಿನ ಸಂಸ್ಕೃತಿಗಳು

ಇಡೀ ಜಗತ್ತಿನಲ್ಲಿಯೇ ಇಂದು ಪ್ರಾಮುಖ್ಯವಾಗಿ ಮೂರು ಬಗೆಯ ಸಂಸ್ಕೃತಿಗಳು ಅಸ್ತಿತ್ವದಲ್ಲಿರುವುವು. ಮೊದಲನೆಯದು ಭಾರತೀಯ ಸಂಸ್ಕೃತಿ ಎರಡನೆಯದು ಮಹಮದೀಯ ಸಂಸ್ಕೃತಿ. ಮೂರನೆಯದು ಪಾಶ್ಚಾತ್ಯ ಸಂಸ್ಕೃತಿ, ಆದರೆ ಈ ಮೂರೂ ಸಂಸ್ಕೃತಿಗಳ ಸಾರ ಮಾತ್ರ ಒಂದೇ ಆಗಿದ. ಪರೋಪಕಾರ, ದಯೆ, ಸತ್ಯ ಮತ್ತು ಅಹಿಂಸೆ, ಭಾರತೀಯ ಸಂಸ್ಕೃತಿ (ಹಿಂದೂ–ಬೌದ್ಧ) "ವಿಷವೆರೆದವನಿಗೆ ಹಾಲೆರೆ" ಎಂದು ಹೇಳಿರುವುದು. ಮಹಮದೀಯ ಸಂಸ್ಕೃತಿ "ಪೀಡಿಸಿದವರಿಗೆ ನೋವಾಗದಂತೆ ದೇವರಲ್ಲಿ ಪ್ರಾರ್ಥಿಸು" ಎಂದು ಹೇಳುವುದು. ಕ್ರೈಸ್ತ ಸಂಸ್ಕೃತಿ "ಈ ಕೆನ್ನೆಗೆ ಹೊಡೆದರೆ ಆ ಕೆನ್ನೆಯನ್ನು ನೀಡು" ಎಂದು ಹೇಳುವುದು. ಈ ಮೂರೂ ಮಾತುಗಳಲ್ಲಿ ಅಡಗಿರುವ ಮುಖ್ಯ ತತ್ವವೇನು? ದಯೆ! ಎಂದೆಂದೂ ಅಡಗದಿರುವ ದಯೆಯಿಂದಲೇ, ಎಂತಹ ದಾನವನೂ ದೇವನಾಗಬಲ್ಲ ಎಂಬುದೇ ಈ ಸಂಸ್ಕೃತಿಗಳು ಬೇರೆ ಮಾತಿನಲ್ಲಿ, ರೀತಿಯಲ್ಲಿ ಉಸುರಿರುವ, ಉಸುರುತ್ತಿರುವ ತಿರುಳು!

ಹೀಗಿದ್ದರೂ, ಇಂದು ರಾಜಕೀಯ ತಂತ್ರದ ಸೌಲಭ್ಯಕ್ಕಾಗಿ, ಬೇರೆ ಬೇರೆ ಮಾಡಿಪ ಭೂಖಂಡಗಳು ಅದೇ ರಾಜಕೀಯ ತಂತ್ರದ ದುರುಪಯೋಗ ಮಾಡಿಕೊಂಡು, ಸಂಕುಚಿತದೃಷ್ಟಿಯಲ್ಲಿ, ತಮ್ಮ ನಾಡು ತಮ್ಮ ಜನಾಂಗಳೇ ಪ್ರಪಂಚದ ಪ್ರಭುತ್ವಪಟ್ಟದಲ್ಲಿರಬೇಕೆಂದು ನಾನಾ ಬಗೆಯ ಕುಟಿಲ ಯತ್ನ ಪ್ರಯತ್ನಗಳಿಂದ ಹೆಣಗಾಡುವದನ್ನು ನಾವಿಂದು ಕಾಣಬಹುದಾಗಿದೆ. ಈ ರೀತಿಯಲ್ಲಿಯೇ ಅತ್ಯಂತ ಉದಾತ್ತವಾದ ಈ ಮೂರು ಸಂಸ್ಕೃತಿಗಳು ಜನಾಂಗ ಖಂಡಗಳಿಂದ ಕ್ರಮೇಣವಾಗಿ ದೇಶ ಜಾತಿ ಪಂಥಗಳಿಗೆ ಇಳಿದು ದಿನೇ ದಿನೇ ಸಂಕುಚಿತವಾಗತೊಡಗಿದವು. ಅಲ್ಲದೆ ಪ್ರಭುತ್ವಕ್ಕಾಗಿ, ಪರಸ್ಪರ ಹೋರಾಟ ನಡೆಯಿಸ ತೊಡಗಿದವು. ಹೀಗಾಗಿ ಈ ಮೂರು ಸಂಸ್ಕೃತಿಗಳ ಮೂಲಬೇರು ಒಂದೇ ಆದರೂ, ಬೇರೆ ಬೇನೆ ಟಿಸಿಲುಗಳೊಡೆದು. ಸ್ವಾರ್ಥದ ಬಿರುಗಾಳಿಯಿಂದ ಪರಸ್ಪರ ಪ್ರಚಂಡ ಘರ್ಷಣಕ್ಕೆ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಇಂದು ಪ್ರಪಂಚದಲ್ಲಿಯೇ ದಾರುಣವಾದ ಭೀಕರವಾದ ಬೆಂಕಿ ಪ್ರಜ್ವಲಿಸಿದೆ.

ಈ ವರ್ಣದ್ವೇಷ, ಈ ರಾಜಕೀಯ ಪ್ರಭುತ್ವ, ಈ ವ್ಯಾಪಾರೀ ತಂತ್ರ, ಈ ಜಾತೀಯತೆಯ ಕೋಲಾಹಲ, ಅವೆಲ್ಲವು ಸ್ವಾರ್ಥದ ಬಿರುಗಾಳಿಯಿಂದ ನಡೆದ ಪ್ರಚಂಡವಾದ ಪರಸ್ಪರ ತಿಕ್ಕಾಟದಲ್ಲಿ ಮಾಡಿದ ಬೆಂಕಿಯ ಬೇರೆ ಬೇರೆ ಉರಿನಾಲಿಗೆಗಳಾಗಿವೆ. ಅಲ್ಲದೆ ಇಂದು ಇಡೀ ಪ್ರಪಂಚವನ್ನೇ ವಿನಾಶದತ್ತ ಸಾಗಿಸುವ ಜ್ವಾಲಾಮುಖಿಯಂತೆ ಪ್ರವಹಿಸುತ್ತಿವೆ ಅಮೇರಿಕ, ಯುರೋಪ, ಆಫ್ರಿಕಾ, ಏಶಿಯಾ, ಆಸ್ಟ್ರೇಲಿಯಾ, ಈ ಐದೂ ಖಂಡಗಳಲ್ಲಿಯ ದೇಶ ದೇಶಗಳಲ್ಲಿ ಇಂದು ಈ ಅಶಾಂತತೆಯೇ ತನ್ನ ನೃತ್ಯನಡೆಸಿದೆ ಈ ಮಹಮದೀ ಭಾರತೀ, ಕ್ರೈಸ್ತ ಸಂಸ್ಕೃತಿಯ ಈ ಮೇಲಾಟದ ಭರದಲ್ಲಿ ಸ್ವಾರ್ಥವು ಇಂದು ವಿಜೃಂಭಿಸಿ, ಬಿರುಗಾಳಿ ಬಲವಾಗಿ ಬೀಸಿ, ಈ ಸಂಸ್ಕೃತಿ ವೃಕ್ಷದ ಬೇರೇ ಎಲ್ಲಿ ಕೆತ್ತಿ ಹೋಗುವುದೋ ಎಂದು ಭಯವಾಗುವುದು

ಆದರೆ ಕೊಲ್ಲುವ ದೇವರಕಿಂತ ಕಾಯುವ ದೇವರು ಹೆಚ್ಚಿನವನು ಎಂದು ಗಾದೆಯ ಮಾತಿನಂತೆ, ಇಂದು ಈ ಪ್ರಪಂಚದ ಈ ಸಂಸ್ಕೃತಿಗಳ ಜನ ಪ್ರಮುಖರ ಈ ಪ್ರಚಂಡ ತಿಕ್ಕಾಟವು ಮಹಾತ್ಮಾಜಿಯವರಿಂದಲೇ ಶಾಂತವಾಗುವುದೆಂಬ ದೂರದ ನಂಬಿಗೆಯೊಂದು ಸುಸಂಸ್ಕೃತ ಜನಮನದಲ್ಲಿ ಇಂದು ಬಲವಾಗಿ ಬೇರೂರ ತೊಡಗಿದೆ. ಭಾರತೀಯ (ಹಿಂದೂ

ಬೌದ್ಧ) ಸಂಸ್ಕೃತಿಯವರು ಇಂದು ಬಾಪೂಜಿಯವರನ್ನು ಬುದ್ಧ, ರಾಮ, ಕೃಷ್ಣರ ಸಾಲಿನಲ್ಲಿ ನೋಡಿದರೆ, ಮುಸ್ಲಿಮರು ಹಜರತ್ ಮಹಮ್ಮದರ ಸಾಲಿನಲ್ಲೂ, ಕ್ರೈಸ್ತರು ಯೇಸು ಕ್ರಿಸ್ತನ ಸಾಲಿನಲ್ಲಿಯೂ ಅವರನ್ನು ನೋಡುತ್ತಾರೆ. ಈ ಬಗೆಯಿಂದ ದಯೆ, ಪರೋಪಕಾರ, ಸತ್ಯ ಅಹಿಂಸೆ ಈ ನಾಲ್ಕರ ಚೌಕಟ್ಟಿನಲ್ಲಿ ಇಂದು ಬಾಪೂಜಿಯವರ ಭವ್ಯಮುಕ್ತಿ ವಿರಾಜಿಸುತ್ತದೆ. ಅವರ ಮೈಗೂಡಿದ ನಾಲ್ಕು ತತ್ವಗಳೂ ಜಗತ್ತಿನಲ್ಲಿ ಯಾವ ಸಂಸ್ಕೃತಿಗೂ ವಿರೋಧವಾಗಿಲ್ಲ. ಆದ್ದರಿಂದ ಎಲ್ಲ ಸಂಸ್ಕೃತಿಯವರೂ ಈ ನಾಲ್ಕು ಮಾತುಗಳ ಮುಖ್ಯವಾದ ಮೂಲ ಮಾತುಗಳ ತಳಹದಿಯ ಮೇಲೆಯೇ ತಮ್ಮ ತಮ್ಮ ರಾಜಕೀಯ, ಧಾರ್ಮಿಕ, ಔದ್ಯೋಗಿಕ, ಸಾಮಾಜಿಕ, ಮೊದಲಾದ ಎಲ್ಲ ತರದಿಂದಲೂ ಜನಾಂಗದ ಯೋಗ ಕ್ಷೇಮಕ್ಕಾಗಿ ಯೋಚಿಸುತ್ತ ಬಂದರೆ ಪ್ರಪಂಚದಲ್ಲಿಯ ಸಂಸ್ಕೃತಿಗಳ ಮೂಲ ಧ್ಯೇಯವಾದ "ಶಾಂತಿ ಪುಷ್ಟಿ ಶ್ಚಾಸ್ತು" ಸಾಧ್ಯ.

(ಜಯಹಿಂದ)

ಮಹಿಳಾ ಸೇವಾದಳ

ಭಾರತೀಯ ಮಹಿಳಾ ಸೇವಾದಳ ಇಂಡಿಯನ್ ವಿಮೆನ್ಸ್ ಸಿವಿಲ್ ಕೋರ್‌ದ ಪ್ರಾಂತಿಕ ಕಾರ್ಯಕಾರಿ ಸಮಿತಿಯ ಅಧ್ಯಕ್ಷರನ್ನಾಗಿ ಡಾ|| ಶ್ರೀಮತಿ ಸೌಂದರಂ ರಾಮಚಂದ್ರನ್ ಅವರನ್ನು ಸರಕಾರವು 4-7-47 ರಿಂದ ನೇಮಿಸಿರುತ್ತದೆ.

ಪ್ರಾಂತಿಕ ಫಿರ್ಕ ಅಭಿವೃದ್ಧಿಯ ಬೋರ್ಡು ಆಹಾರ ಧಾನ್ಯ ಸಂಗ್ರಹಣೆಗಳು

ಹಳ್ಳಿಗಳಲ್ಲಿ ರೇಷನ್ ಕ್ರಮವನ್ನು ತೆಗೆದು ಹಾಕುವುದಿಲ್ಲ. ಪ್ರಸ್ತುತ ಪ್ರಾಂತದ ಆಹಾರ ಪರಿಸ್ಥಿತಿ ಪ್ರಕಾರ ಅಂಥ ವರ್ತನೆಗೆ ಅವಕಾಶವಿಲ್ಲ ರೇಷನ್ ಕ್ರಮವಿರದ್ದಾಗಿ, ದಾಸ್ತಾನುಗಳಿಗೆ ಬೆಲೆ ಏರಬಹುದೆಂಬ ಆಶೆಯಿಂದ ತಮ್ಮ ಧಾನ್ಯಗಳನ್ನು ಸರಕಾರಕ್ಕೆ ಒಪ್ಪಿಸದಿರಬೇಡಿರೆಂದೂ, ಸುಳ್ಳು ಪ್ರಚಾರಗಳಿಗೆ ಗಮನ ಕೊಡದಿರೆಂದೂ ಸರಕಾರವು ಸಾರ್ವಜನಿಕರಲ್ಲಿ ವಿನಂತಿಸುತ್ತದೆ.

ಮದ್ರಾಸ್ ಸರಕಾರದ ಆದಾಯ-ವೆಚ್ಚ.

ನಮ್ಮ ಸರಕಾರದ ಆದಾಯವು 1947 ನೇ ಮೇ ತಿಂಗಳ ಅಂತ್ಯದವರೆಗೆ ರೂ. 711.70 ಲಕ್ಷ. 1946 ನೇ ಮೇ ತಿಂಗಳವರೆಗೆ ಆದಾಯವು ರೂ. 723.56 ಲಕ್ಷ ದಷ್ಟಿತ್ತು ಅಂದರೆ ರೂ 11.86 ಲಕ್ಷ ಕಡಿಮೆ. ಪ್ರಾಂತಿಕ ಎಕ್ಸೈಸ್, ಅರಣ್ಯ, ನೀರಾನರಿ, ಸಿವಿಲಾ ವರ್ಕ್ಸ್ ಇತ್ಯಾದಿಗಳಿಂದ ಆದಾಯವು ಕಡಿಮೆಯಾಗಿಯೂ ಭೂಕಂದಾಯ, ಸ್ಟ್ಯಾಂಪು, ಮೋಟರ್ ವಾಹನ, ನ್ಯಾಯಸ್ಥಾನ ಇತ್ಯಾದಿಗಳಿಂದ ಆದಾಯವು ಹೆಚ್ಚಾ ದೊರೆತಿದೆ.

1947 ನೇ ಮೇ ತಿಂಗಳ ಅಂತ್ಯದವರೆಗೆ ವೆಚ್ಚವು ರೂ. 5-4.16 ಲಕ್ಷ, 1946 ನೇ ಮೇ ತಿಂಗಳವರೆಗೆ ವೆಚ್ಚವು ರೂ. 549.54 ಲಕ್ಷದಷ್ಟಿತ್ತು. ಅಂದರೆ ರೂ. 5.38 ಲಕ್ಷದಷ್ಟು ಕಡಿಮೆ. ಸಾಮಾನ್ಯ ಆಡಳಿತೆ, ನ್ಯಾಯಸ್ಥಾನ, ಸಿವಿಲ್ ರಕ್ಷಣೆ ಇತ್ಯಾದಿಗಳಲ್ಲಿ ವೆಚ್ಚವು ಕಡಿಮೆಯಾಗಿಯೂ ಪೋಲಿಸ್ ಮತ್ತು ಸಿವಿಲ್ ವರ್ಕ್ಸ್‌ಗಳಲ್ಲಿ ತುಂಬಾ ಹೆಚ್ಚು ಇದೆ. ಪೋಲಿಸಿನವರ ಸಂಬಳ ಹೆಚ್ಚಿಸಿದುದೂ, ಹೈವೇ ಇಲಾಖೆಯು ರಸ್ತೆ, ಸೇತುವೆಗಳಿಗಾಗಿ ಸಾಮಾಗ್ರಿ ಕೊಂಡು ಕೊಂಡಿರುವುದೂ ಇದಕ್ಕೆ ಕಾರಣ.

ಹೊಸಪೇಟೆ ಜಿಲ್ಲಾ ಮುನಿಸೀಫ್ ಕೋರ್ಟಿನಲ್ಲಿ.

S S. No. 241/47.

ವಾದಿ:- **ಕೋಣನ ವೀರಣ್ಣ.**

ಪ್ರತಿವಾದಿ:- **ಗೌಡರ ಬಸವನಗೌಡ.**

ಮೇಲಿನ ಕೋರ್ಟಿನಲ್ಲಿ ವಾದಿಯು ಪ್ರತಿವಾದಿಯ ಮೇಲೆ 80-0-0 ರೂ. ಗಳನ್ನು ಬರಮಾಡಿಕೊಳ್ಳಲು ದಾವಾದಾಖಲು ಮಾಡಿರುತ್ತಾನೆ. ಪ್ರತಿವಾದಿಯು ಏನಾದರೂ ತಕರಾರು ಹಾಕುವುದಿದ್ದರೆ ತಾರೀಖು 15-10-1947 ನೆಯ ದಿನ ಸದರಿ ಕೋರ್ಟಿನಲ್ಲಿ ಹಾಜರಾಗಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಹೊಸಪೇಟೆ.
10-10-47

K. ಚೆನ್ನಬಸಪ್ಪ,
M. H. M. ಗುರುಶಂಕರಯ್ಯ,
ಅಡ್ವೊಕೇಟ್ಸ್.

ಪ್ರಜಾಸತ್ತೆಯಲ್ಲಿಯೂ ಕೆಲವೇಜನರ ರಾಜ್ಯ.

ಅನೇಕ ತರಹದ ರಾಜ್ಯ ಪದ್ಧತಿಗಳು ಇಂದು ನಮ್ಮ ಕಣ್ಣು ಮುಂದಿವೆ. ಅದು ಕೆಡು ಕಾದದ್ದು ಇದು ಚಲೋದು ಎಂಬ ಭೇದಮಾಡುತ್ತ ನಾವು ಅವುಗಳ ಬಗ್ಗೆ ಅನೇಕ ವಿಧದ ಅಭಿಪ್ರಾಯಗಳನ್ನು ವ್ಯಕ್ತ ಮಾಡುತ್ತಿದ್ದೇವೆ. ಇವಾವೂ ಮೂಲತಃ ಚಲೋ ಅಥವಾ ಕೆಡಕು ಆಗಿರದೆ ಆಯಾ ಕಾಲಮಾನ ಪರಿಸ್ಥಿತಿಗಳಿಗೆ ಅನುಸರಿಸಿ ಅವುಗಳ ಇಷ್ಟಾನಿಷ್ಟ ಫಲಗಳು ಜನತೆಗೆ ದೊರೆಯುತ್ತವೆ. ಎಂಬ ಮಾತು ನಮ್ಮ ಲಕ್ಷಕ್ಕೆ, ಇದುವರೆಗೆ ಬಂದ ಅನುಭವ ಭವದಿಂದ, ತೋರಿದೆ.

ಮತ್ತೊಂದು ಮಾತನ್ನು ನಾವು ಹೇಳುತ್ತಿರುತ್ತೇವೆ. ಜನತೆಯು ಅಥವಾ ಮತದಾರರು ಜಾಣರೂ ಜ್ಞಾನವಂತರೂ ಆಗಬೇಕೆಂದು. ಈ ಮಾತು ಎಷ್ಟರ ಮಟ್ಟಿಗೆ ನಿಜವಾಗಿದೆಯೆಂಬುದನ್ನು ನಾವು ನೋಡ ಬೇಕಾಗಿದೆ

ಪ್ರಜಾಸತ್ತೆಯು, ರಾಜ್ಯದಾಡಳಿತದ ಸರ್ವಪ್ರಕಾರಗಳಲ್ಲಿ ಅತ್ಯುತ್ತಮವಾದುದೆಂಬ ಕಲ್ಪನೆಯಿದೆ. ಪ್ರತಿಯೊಬ್ಬ ವಯಸ್ಕನಿಗೆ ಮತದಾನದ ಅಧಿಕಾರವಿರಬೇಕೆಂದೂ ಆ ಮತಗಳಿಂದ ಆರಿಸಿ ಬರುವ ಪ್ರತಿನಿಧಿಗಳಿಂದ ಆಳಲ್ಪಡುವ ರಾಜ್ಯವು ಜನತಾಹಿತವನ್ನು ನಿಜವಾದ ರೂಪದಲ್ಲಿ ಸಾಧಿಸಲು ಸಮರ್ಥವಾಗುವುದೆಂದೂ ನಾವು ತಿಳಿಯುತ್ತೇವೆ.

ಆದರೆ ವಯಸ್ಸಿಗೆ ಬಂದ ಆ ಮತದಾರರೆಲ್ಲರೂ ಸರ್ವ ವಿಷಯಗಳಲ್ಲಿ ತಿಳಿದುಕೊಂಡು ಮತ ಕೊಡುತ್ತಾರೆಯೇ? ಎಂಬ ಪ್ರಶ್ನೆಯು ಹುಟ್ಟುತ್ತದೆ. ಇಲ್ಲವೇ ಇಲ್ಲ. ನಮ್ಮ ಹಿಂದುಸ್ಥಾನದ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ಮಹಾತ್ಮಾಗಾಂಧಿಯವರು ಇಂದು ಭಾರತೀಯರ ಆದರ ವಿಶ್ವಾಸಗಳನ್ನು ಅಪ್ರತಿಮವಾಗಿ ಗಳಿಸಿಕೊಂಡು ಏಕಮೇವಾದ್ವಿತೀಯ ಮುಂದಾಳುವಾಗಿದ್ದಾರೆ. ಅವರು ಹೇಳಿದ ಸರ್ವ ಕಾರ್ಯಕ್ರಮಗಳ ಮರ್ಮಗಳನ್ನು ಭಾರತೀಯರಲ್ಲಿ ಎಷ್ಟು ಜನ ತಿಳಿದುಕೊಂಡು, ಜನರನ್ನು ಹಿಂಬಾಲಿಸಿದರು? ಎಂಬ ಮಾತು ವಿಚಾರಣೀಯವಾಗಿದೆ "ಕಾಂಗ್ರೆಸ್ಸು ಏನು ಕೆಲಸ ಮಾಡಿತು? ಇಂದು ಸ್ವಾತಂತ್ರ್ಯವು ಸಿಕ್ಕಿದ್ದರೆ ಅದು ಕಾಂಗ್ರೆಸ್ಸಿನ ಕಾರ್ಯದಿಂದ ಸಿಕ್ಕಿತು ಎಂದು ತಿಳಿಯಬೇಡಿರಿ. ಅದನ್ನು ಕೊಡಿಸಿದ ಶ್ರೇಯಸ್ಸು ಆ ಹಿಟ್ಲರನಿಗೆ ಹೋಗಬೇಕು. ಕಾಂಗ್ರೆಸ್ಸಿನಲ್ಲಿ ಗಾಂಧೀ ಟೊಪ್ಪಿಗೆಯನ್ನು ಹಾಕಿಕೊಂಡ ಅಜ್ಞಾನ ಸನ್ಯಾಸಿಗಳೇ ಬಹಳ ಇದ್ದಾರೆ" ಎಂದು ಮೂದಲಿಸುವ ಎಷ್ಟೋ ಜನರು ಅಲ್ಲಲ್ಲಿ ದೊರೆಯುತ್ತಾರೆ. ಅವರಿಗೆ ಉತ್ತರ ಕೊಟ್ಟು ಸೋಲಿಸುವರು ಅಥವಾ ಅವರ ಮಾತಿನ ಪರಿಣಾಮವು ಅಜ್ಞಾನ ಜನತೆಯ ಮೇಲೆ ಆಗದಂತೆ ಮಾಡುವವರು ಸಾಮಾನ್ಯ ಮನುಷ್ಯರಿಂದ ಆಗುವದೇ ಇಲ್ಲ. ಅದಕ್ಕಾಗಿ ಅವರು ದೂರದಿಂದ ಯಾವನೊಬ್ಬ ಮುಖಂಡನನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಆಗ ಕೂಡ ಆ ಮುಖಂಡನು ಆಡಿದ ಮಾತುಗಳಿಂದ ಆ ಮೊದಲಿನ ಮನುಷ್ಯನ ಬಾಯಿ ಕಡಿಮೆಯಾದಾಗ ಮಾತ್ರ ಕೂಡಿದ ಜನರಿಗೆ ಆನಂದವಾಗಬೇಕೇ ಹೊರತು ಏಕೆ ಅವನ ಬಾಯಿಯು ಕೆಳಗಾಯಿತು ಎಂಬ ಮಾತು ತಿಳಿಯುವದು ಕಡಿಮೆಯೇ.

ಮಹಾತ್ಮಾ ಗಾಂಧಿಯವರು ಯೋಗ್ಯ ಮುಂದಾಳುಗಳು, ಅವರಿಂದಲೇ ನಮ್ಮ ನಿಜವಾದ ಕಲ್ಯಾಣವಾಗಬೇಕಾದುದು ಎಂಬ ಬಗ್ಗೆ ಭಾರತೀಯರಿಗೆ ಮನವರಿಕೆಯಾದಮೇಲೆ, ಅವರು ಹೇಳಿದ ಪ್ರತಿ

ಯೊಂದು ಮಾತು, ಅದು ಜನತೆಗೆ ತಿಳಿಯಲಿ ತಿಳಿಯದಿರಲಿ, ಅನುಸರಿಸಲ್ಪಟ್ಟಿತು. ದೊಡ್ಡ ದೊಡ್ಡ ಮುಖಂಡರಿಗೆ ಕೂಡ ಅವರ ಯೋಜನೆಗಳ ಬಗ್ಗೆ ಪ್ರಾರಂಭದಲ್ಲಿ ಅರ್ಥವಾಗದೆ ಹೋದದ್ದುಂಟು.

ಹಾಗೆಯೇ ಜಗತ್ತಿನಲ್ಲಿಯ ಇತರ ರಾಷ್ಟ್ರಗಳ ಇತಿಹಾಸ ಮತ್ತು ಕಾರ್ಯಕಲಾಪಗಳನ್ನು ನೋಡಿದರೆ ಕೂಡ ಇದೇ ಮಾತು ಕಂಡುಬರುತ್ತದೆ. ಇಂಗ್ಲಂಡಿನ ಕೂಲಿಕಾರ ಪಕ್ಷವು, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಒಂದು ಗೊತ್ತುವಳಿಯ ಮೂಲಕ ಕೊಟ್ಟು ಬಿಟ್ಟಿತು. ಈ ಮಾತು ಇತಿಹಾಸಗಾರರನ್ನು ಕೂಡ ಗಡಿಬಿಡಿಸಿ ಬಿಟ್ಟಿತು. ಪರಂಪರಾಪ್ರಿಯ ಪಕ್ಷದವರು ಸಾಮ್ರಾಜ್ಯವನ್ನು ಈ ರೀತಿ ಹಾಳು ಮಾಡಿದ ಕೂಲಿಕಾರ ಪಕ್ಷವನ್ನು ಮನಬಂದಂತೆ ಆರೋಪಿಸಿದರು. ಒಂದೊಂದು ಕಾಲಕ್ಕೆ ಈ ಒಂದೊಂದು ಪಕ್ಷಗಳು ಅಧಿಕಾರಕ್ಕೆ ಬಹು ಮತದಿಂದ ಬರುತ್ತವೆ. ಹಾಗಾದರೆ ಮತದಾರರ ಅಭಿಪ್ರಾಯವು ಮೇಲೆ ವ್ಯತ್ಯಾಸಗೊಳ್ಳುತ್ತದೆಂದಾಯಿತು. ಸ್ವರಾಜ್ಯ ಕೊಡಬೇಕು, ಕೊಡಬಾರದು ಎಂಬ ಬಗ್ಗೆ ಕೂಡ ಹೀಗೆ ಕಾಲಕಾಲಕ್ಕೆ ಬೇರೆ ಬೇರೆ ತರಹದ ಮತವನ್ನು ಕೊಡುತ್ತದೆಂದಾಯಿತು, ಈ ವಿಚಾರ ವ್ಯತ್ಯಾಸದಲ್ಲಿ ಅದಕ್ಕೆ, ಅಂದರೆ ಪ್ರತಿಯೊಬ್ಬ ಮತದಾರರಿಗೆ ಹೇಗೆ ತಿಳಿಯುತ್ತವೆ? ತಿಳಿಯುವದು ಅಸಾಧ್ಯ ಮತ್ತು ಸುಳ್ಳುಮಾತೇ ಸರಿ. ಆಯಾಭಾಗದ ಮುಖಂಡರಿಗೆ ಮಧ್ಯವರ್ತಿ ಮುಖಂಡರು ಈ ವಿಚಾರಗಳನ್ನು ತಿಳಿಸುತ್ತಾರೆ. ಅವರು ಜನತೆಗೆ ತಿಳಿಸುತ್ತಾರೆ. ಯಾವ ಮಾತುಗಳು ಹೆಚ್ಚಾಗಿ ಜನರ ಮನಸ್ಸಿನಲ್ಲಿ ನಡುವದೋ ಅಥವಾ ಯಾರ ಬಗ್ಗೆ ಆ ಮತದಾರರಿಗೆ ಹೆಚ್ಚು ವಿಶ್ವಾಸವು ಎನಿಸುವುದೋ ಆ ಜನರ ಪಕ್ಷಕ್ಕೆ ಅಥವಾ ಅವರ ಕಾರ್ಯಕ್ರಮಗಳಿಗೆ ಯಶಸ್ಸು ದೊರೆಯುತ್ತದೆ.

ಸಮತಾವಾದೀ ರಾಷ್ಟ್ರವಾದ ರಶಿಯದ ಉದಾಹರಣೆಯನ್ನು ತೆಗೆದುಕೊಳ್ಳೋಣ. ದೇಶದ ಪ್ರತಿಯೊಬ್ಬ ವ್ಯಕ್ತಿಯು ಲೆನಿನ್ನನ ಮಾತನ್ನು ತಿಳಿದುಕೊಂಡು ಅವನ ಪಾಪಕ್ಕೆ ಜಯತಂದುಕೊಟ್ಟನು ಎಂಬ ಪ್ರತಿಪಾದನೆಯು ನಿರಾಧಾರವಾದದ್ದು. ಲೆನಿನ್ನರ ವಿಚಾರಗಳು ಇನ್ನೂ ಜಗತ್ತಿಗೆ ತಿಳಿಯಲೊಲ್ಲವು. ಅವು ಹೊಸ ತತ್ವಗಳಾದ್ದರಿಂದ ಅಂದರೆ ಇನ್ನೂ ಸಾಕಷ್ಟು ಯಶಸ್ವಿಯಾಗಿ ಮತ್ತು ರಶಿಯಾವೊಂದನ್ನು ಬಿಟ್ಟರೆ ಉಳಿದ ಯಾವದೇ ಕಡೆಗಳಲ್ಲಿ ಪ್ರಯತಿಸಲ್ಪಟ್ಟಿಲ್ಲವಾದ್ದರಿಂದ ಅವು ತಿಳಿಯುವದು ಕಷ್ಟಕರವಾದದ್ದು. ಅಲ್ಲದೆ ಬಹುಕಠೋರವಾದ ರಾಜಶಾಸನವನ್ನು ಎಲ್ಲರೂ ತಮ್ಮ ಅಸ್ತಿಪಾಸ್ತಿಗಳನ್ನು ಸರಕಾರಕ್ಕೆ ಬಿಟ್ಟುಕೊಡಬೇಕಾದ ವಿಷಯ. ಅದರಿಭಾರನ ಆಡಳಿತಕ್ಕೆ ಬೇಸತ್ತ ಅಲ್ಲಿಯ ಜನತೆಯು ಲೆನಿನ್ನನ ವಿಶಾಲ ಹೃದಯದಲ್ಲಿ ವಿಶ್ವಾಸವನ್ನಿಟ್ಟು ಅವನಿಗೆ ಬೆಂಬಲಕೊಟ್ಟಿತು ಹೊರತು ಅತತ್ವವನ್ನು ಪ್ರತಿಯೊಬ್ಬನು ತಿಳಿದುಕೊಂಡಿದ್ದನು ಎಂದಲ್ಲ.

ಜರ್ಮನಿ, ಇಟಲಿ, ಜಪಾನ, ತುರ್ಕಸ್ತಾನ, ಮೊದಲಾದ ಸರ್ವಾಧಿಕಾರೀ ದೇಶಗಳ ಬಗ್ಗೆ ನಾವು ವಿಚಾರ ಮಾಡುವ ಕಾರಣವಿಲ್ಲ. ಅಲ್ಲಿ ಜನತೆಯ ಮತಕ್ಕೆ ಹೆಚ್ಚಿನ ಬೆಲೆಯಿಲ್ಲ. ಆ ಅಭಿಪ್ರಾಯವು ಬಲವಂತನ ಬಲದ ಮೇಲೆ ವ್ಯತ್ಯಾಸಗೊಳ್ಳುತ್ತ, ಹೋಗುತ್ತಿರುತ್ತದೆ

ಕೊನೆಯದಾಗಿ ಅಮೇರಿಕೆಯನ್ನು ತೆಗೆದುಕೊಳ್ಳೋಣ. ಅದು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯುಳ್ಳದ್ದೆಂದು ಹೇಳಿಸಿಕೊಳ್ಳುತ್ತಿದೆ. ಅಲ್ಲಿಯ ಜನರ ವಿಚಾರಗಳು ನಾನಾತರಹದವಾಗಿವೆ. ಈಗ ಅಮೇರಿಕೆಯ ಅಭಿಪ್ರಾಯವು ಜಾಗತಿಕ ವಾತಾವರಣದ ಮೇಲೆ ಹೆಚ್ಚಿನ ಪರಿಣಾಮವನ್ನು ಉಂಟುಮಾಡುವಂಥದಿರುವದರಿಂದ ಅದರ ಕಡೆಗೆ ಸರ್ವರೂ ನೋಡುವುದು ಅವಶ್ಯವಾಗಿದೆ.

ಪ್ರಪಂಚದಲ್ಲಿ ಇಂದು ಅಮೇರಿಕೆಯು ಸುಸಂಪನ್ನ ದೇಶವಾಗಿದೆ. ಜಗತ್ತಿನ ೧೭ ಜನರಲ್ಲಿ ಒಬ್ಬನು ಅಮೇರಿಕನ್ನನಿದ್ದಾನೆ. ಜಗತ್ತಿನ ಕ್ಷೇತ್ರದ ಮೇಲಿನ ಸ್ವಾಮಿತ್ವವು ಇದೇ ಪ್ರಮಾಣದಲ್ಲಿ ಅವನಿಗಿದೆ. ಬೇರೆ ದೇಶದ ಒಬ್ಬನು ಹುಟ್ಟಿಸುತ್ತಿರುವದರ ಏಳು ಪಟ್ಟು

176

ಕಾಳನ್ನು, ೧೪ ಪಟ್ಟು ಮಾಂಸ ಮತ್ತು ಬೆಣ್ಣೆಯನ್ನು, ೨೨ ಪಟ್ಟು ಕಲ್ಲಿದ್ದಲಿಯನ್ನು, ೨೦-೩೦ ಪಟ್ಟು ಸಿದ್ಧ ವಸ್ತುಗಳನ್ನು, ೫೦ ಪಟ್ಟು ಮೋಟಾರುಗಳನ್ನು, ಓರ್ವ ಅಮೇರಿಕನ್ನನು ಹುಟ್ಟಿಸುತ್ತಿದ್ದಾನೆ. ಆ್ಯಟಮ್ ಬಾಂಬಿನ ಸ್ವಾಮಿತ್ವದಿಂದ ಅದರ ಸಂಪತ್ತಿಗೆ ಅಧಿಕಾರದ ಅಥವಾ ಶಕ್ತಿಯ ಕಳಸವು ಇಡಲ್ಪಟ್ಟಿದೆ.

ಏನೇ ಇದ್ದರೂ ಅಮೇರಿಕೆಯ ಜನತೆಗೇನು ಗೊತ್ತಿದೆ? ಹಿಂದುಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಆಂದೋಲನದ ಬಗ್ಗೆ ಅವರಿಗೆ ತುಂಬ ಅಜ್ಞಾನವಿತ್ತು. ಇನ್ನೂ ಬಹಳಷ್ಟಿದೆ. ಯುರೋಪದಲ್ಲಿ ಏನು ಸ್ಥಿತಿಯಿದೆಯೆಂಬುದು ಅಲ್ಲಿಯ ಎಷ್ಟು ಜನರಿಗೆ ಎಷ್ಟು ಗೊತ್ತಿದೆ? ರಶಿಯಾಕ್ಕೆ ವಿರೋಧ ಮಾಡಬಾರದು ಎಂಬ ರೂಜವೆಲ್ಟರು ಹೇಳಿದ ಮಾತನ್ನೇ ಅದು ಎತ್ತಿಕೊಂಡು ಕುಣಿಯಿತು. ಇಂದು ರಶಿಯಾದ ವಿರೋಧವನ್ನು ಕಟ್ಟಿಕೊಳ್ಳುತ್ತಿರುವ ಟ್ರೂಮನ್ನರ. ಮಾತಿಗೇ ಅದು ತಲೆದೂಗುತ್ತಿದೆ.

ಎಂದ ಮೇಲೆ ಪ್ರಜಾಸತ್ತೆಯಲ್ಲಿ ಎಲ್ಲ ಪ್ರಜೆಗಳು ಪ್ರತ್ಯಕ್ಷ ಜಾಣರಾಗುವರೆಂದಲ್ಲ. ಅವರ ಬಲವು ದೇಶದ ಕಲ್ಯಾಣಾರ್ಥವಾಗಿ ಕಾಲ ಕಾಲಕ್ಕೆ ಉಪಯೋಗಿಸಲ್ಪಡಬಹುದು. ಆದರೆ ಈ ಶಕ್ತಿಯುಕೆಲವೇ ಜನ ದೇಶದ ಮುಖಂಡರ ಕೈಯಲ್ಲಿಯೇ ಸಿಗುವುದು. ಅವರೇ ಆ ಪರಿಸ್ಥಿತಿಯಲ್ಲಿ ದೇಶವನ್ನು ಆಳುವರು. ಅವರು ಎಂಥವರೋ ಅಂತಹ ದೇಶಸೇವೆಯು ಅವರಿಂದ ಆಗುವುದು.

ಬಿತ್ತಿದ್ದನ್ನು ಬೆಳೆದುಕೋ

ನಾವು ಕಬ್ಬನ್ನು ಬಿತ್ತಿದರೆ, ಬೆಳೆಯು ಕಬ್ಬಿನದೇ ನಮಗೆ ದೊರೆಯುತ್ತದೆ. ಮೆಣಸಿನ ಕಾಯಿಯ ಬೀಜಗಳನ್ನು ಭೂಮಿಯಲ್ಲಿ ಹಾಕಿದರೆ ಅದರ ಫಲವು ಕಾರವುಯವಾದ ಮೆಣಸಿನಕಾಯಿಯನ್ನೇ ಕೊಡುವುದು. ಇದು ಜಗತ್ತಿನ ನಿಯಮು ಮಾವಿನ ಹೋಟಿಯನ್ನು ಹೂತು ಬಾಳೇ ಹಣ್ಣನ್ನು ತಿನ್ನಲಿಚ್ಛಿಸುವವನು, ಹುಣಸೇಪಿಕ್ಕವನ್ನು ನೆಟ್ಟು ದ್ರಾಕ್ಷಿಯನ್ನು ಕೊಯ್ಯಹೋಗುವವನು ಮೂರ್ಖರಲ್ಲಿ ಗಣಿಸಲ್ಪಡುವರು.

ಈ ಮಾತುಗಳು ಯಾರಿಗೆ ಗೊತ್ತಿಲ್ಲ? ಮುಂದಿಗೆ ಉಪದೇಶಮಾಡುವಾಗ ಇಂತಹ ಅನೇಕ ತರಹದ ಗಾದೆಯ ಮಾತುಗಳನ್ನು ಅಥವಾ ಬೀಜನುಂತ್ರಗಳನ್ನು ಪ್ರತಿಯೊಬ್ಬನು ಒಳ್ಳೇ ಆಢ್ಯತೆಯಿಂದ ಹೇಳುತ್ತಿರುತ್ತಾನೆ. ಆದರೆ ತನಗೇ ಒಂದು ಪ್ರಸಂಗವು ಬಂದಾಗ, ತನ್ನ ಸ್ವಾರ್ಥ ಸಾಧಿಸುವ ವೇಳೆಯು ಒದಗಿದಾಗ ಅವರ ಈ ಅನುಭವವು ಅಗಲಾಡಹತ್ತುತ್ತದೆ. ಸ್ವಾರ್ಥಸಾಧಕನ ಆತುರತೆಯು ಇದರಲ್ಲೇನು ಹುರುಳಿದೆ? ಮನುಷ್ಯನು ಸಮರ್ಥನಿದ್ದಾಗ ನಿಯಮ ತಪ್ಪಿ ಕೂಡ ಫಲಗಳು ದೊರೆಯುವವು ಎಂಬ ಅಭಿಪ್ರಾಯವನ್ನು ಅವನಿಂದ ಹೊರಹೊರಡಿಸ ಹಚ್ಚುತ್ತದೆ. ಇಂತಹ ಲೋಕವಿರುದ್ಧವಾದ ಕಾರ್ಯಗಳಿಗೆ ತಾತ್ಕಾಲಿಕವಾಗಿ ಫಲಗಳು ಬಹು ದಿವಸ ಬಾಳುವಂಥವಿರುವುದಿಲ್ಲ ಅವುಗಳಿಗೆ ಕಾರಣವಾದ ಜನ ಶಕ್ತಿಯು ಕಡಿಮೆಯಾಗುತ್ತಲೇ ನಿಜ ಸ್ವರೂಪವು ಹೊರಗೆ ಬೀಳುವುದು. ಆಗ ಆ ಜನರು ಕಣ್ಣುತೆರೆದು "ನಾವು ಮಾಡಿದ್ದು ಸರ್ವ ಅಪರಾಧವಾಯಿತು" ಎಂಬ ಉದ್ಗಾರವನ್ನು ತೆಗೆಯಹತ್ತುವರು.

ಹೀಗೆ ದಾರಿತಪ್ಪಿದ, ಆಮೇಲೆ ಆ ಬಗ್ಗೆ ಹಳಹಳಿಸಿದ ಜನರ ಉದಾಹರಣೆಗಳು ಹೆಜ್ಜೆಹೆಜ್ಜೆಗೆ ದೊರೆಯುತ್ತಿವೆ. ಮತ್ತು ಅವುಗಳ ಪರಿಚಯವು ಅಥವಾ ಅವುಗಳ ಕಾರಣದಿಂದ ನಮ್ಮಲ್ಲಿ ಹುಟ್ಟಿದ ಅನುಭವ ದ್ಯೋತಕ ಉಪದೇಶಗಳು ನಮ್ಮ ಕಣ್ಣು ಮುಂದೆ

ಕಟ್ಟಿದ್ದರೂ ಪುನಃ ಅದೇ ತರಹದ ಅಪರಾಧಗಳು ನಮ್ಮಿಂದ ಮೇಲಿಂದ ಮೇಲೆ ಘಟಿಸುತ್ತವೆ. "ಮಾನವೀದೌರ್ಬಲ್ಯ" ಎಂದು ಇದಕ್ಕೇ ಹೇಳುತ್ತಾರೆ. ಕೇವಲ ಜ್ಞಾನವಿದ್ದರೆ ಸಾಲದು. ಅದನ್ನು ಉಪಯೋಗಿಸಿಕೊಂಡು ನಮ್ಮಲ್ಲಿಯ ಆಶೆ, ಸ್ವಾರ್ಥ, ಆಕಾಂಕ್ಷೆಗಳನ್ನು, ಜಯಿಸಬೇಕಾಗುತ್ತದೆ. ನಮ್ಮ ಮನಸ್ಸು ಬಹಳ ಚಂಚಲವಿದೆ. ಅದು ಅದು ಬೇಕು; ಇದು ಬೇಕು ಎಂದು ಯಾವಾಗಲೂ ಹಾತೊರೆಯುತ್ತಿರುತ್ತದೆ. ಜ್ಞಾನದ ಮೂಲಕ ಅದರ ಮೇಲೆ ಹಾಕಲ್ಪಟ್ಟ ಹುದಾದ ಕಟ್ಟನ್ನು ಹರಿದುಕೊಂಡು ಅದು ಓಡಿ ಹೋಗುತ್ತದೆ ಹಾಗೆ ಓಡಿ ಹೋದಾಗ ಮೇಲಿನಂತಹ ಪ್ರಮಾದಗಳು ಮನುಷ್ಯನಿಂದ ನಡೆಯುತ್ತವೆ.

ಭಾರತವು ಇಬ್ಭಾಗವಾದ ಸಂದರ್ಭದಲ್ಲಿ ನಡೆದ, ಹಿಂದೂ ಮುಸಲ್ಮಾನರಲ್ಲಿಯ ತಿಕ್ಕಾಟವನ್ನು ನೋಡಿದರೆ, ಮುಸ್ಲಿಂಲೀಗು ಮನಸ್ಸಿನಲ್ಲಿ ಮಾಡಿಕೊಂಡಿದ್ದ ಮಂಡಿಗೆಯ ಕಲ್ಪನೆಯು ಚನ್ನಾಗಿ ಆಗುವುದು ಕೊನೆಗೆ ಹಿಂದೂ ಮುಖಂಡರು ಈ ಅನಾಹುತವನ್ನು ತಪ್ಪಿಸಲು ದೇಶವನ್ನು ವಿಭಜಿಸಲು ಒಪ್ಪಿಕೊಂಡರು. ಇದರಿಂದ ಮುಸಲ್ಮಾನರಿಗೆ ವಿಜಯೋನ್ಮಾದವುಂಟಾಯಿತು. ವಿಜಯ ಸಂಪಾದಿಸಿದವನಿಗೆ ಇನ್ನೂ ಮುಂದೆ ಯೋಚೋಣ ಎಂದೆನಿಸುತ್ತದೆ. "ಪಾಕಿಸ್ತಾನವನ್ನು ಶಕ್ತಿಯಿಂದ ತೆಗೆದುಕೊಂಡೆವು. ಹಿಂದುಸ್ತಾನವನ್ನು ಶಕ್ತಿಯಿಂದ ತೆಗೆದುಕೊಳ್ಳುವೆವು" ಎಂಬ ಘೋಷಣೆಯನ್ನು ಅವರು ಪ್ರಾರಂಭಿಸಿದರು

"ಪಾಕಿಸ್ತಾನವು ಮುಸಲ್ಮಾನರಿಗೆ ಆಯಿತು, ಅಲ್ಲಿಯ ಹಿಂದೂ ಜನರನ್ನೆಲ್ಲ ಓಡಿಸಿ ಅಲ್ಲಿ ಕೇವಲ ಮುಸಲ್ಮಾನರು ಇರುವಂತೆ ಮಾಡಬೇಕು, ಹಿಂದುಸ್ಥಾನದಲ್ಲಿಯ ಹಿಂದೂಗಳು ಇಂತಹ ಕೆಲಸಗಳಿಗೆ ಕೈಹಾಕುವವರಲ್ಲ, ಅವರಿಗೆ ಅಹಿಂಸೆ ಬೋಧಿಸುವ ಮಹಾತ್ಮರು ಇದ್ದಾರೆ ಅಲ್ಲಿಯ ಮುಸಲ್ಮಾನರಿಗೆ ಭಯವಿಲ್ಲ ಅದರಿಂದ ಮುಂದೆ ಆ ಭಾಗದಲ್ಲಿಯೂ ಪಾಕಿಸ್ತಾನದ ಬೀಜವನ್ನು ಬಿತ್ತೋಣ' ಎಂಬ ಧೋರಣೆಯಿಂದ ಮುಸ್ಲಿಂಜನರು ಸಾಗಿದರು.

ಸಹನೆಗೆ ಮಿತಿಯಿದೆ ಹಿಂದೂ ಜನರು ಸ್ವಭಾವದಿಂದಲೇ ಹೆಚ್ಚು ಅಹಿಂಸಾವಾದಿಗಳು. ಅಲ್ಲದೆ ಮಹಾತ್ಮಾಗಾಂಧಿಯಂತಹ ಮುಖಂಡನು ಅವರಿಗೆ ಇದ್ದಾನೆ. ಇಷ್ಟಾದರೂ ಅವರ ಸಹನೆಗೆ ಮಿತಿಯು ಉಳಿಯಲಿಲ್ಲ. ವಿಚಾರದಿಂದ ಬಿಸಿಯಾದ ಅವರ ವೃತ್ತಿಯು ಪ್ರತೀಕಾರವನ್ನು ಹೂಡಿತು. ಮಹಾತ್ಮರ ಅಹಿಂಸಾವ್ರತದ ಅರಿವನ್ನು ಬದಿಗಿಟ್ಟು ಕೊಡಹಿಕೊಂಡು ಎದ್ದಿತು ಆದರೂ ಅವರು ಅಡ್ಡ ಬಂದಾಗ ಸುಮ್ಮನಿರಲೂ ತಪ್ಪಲಿಲ್ಲ

ಇವರ ಪರಿಣಾಮವಾಗಿ ಉತ್ತರ ಹಿಂದುಸ್ಥಾನದಲ್ಲಿ ಅಲ್ಲೋಲಕಲ್ಲೋಲವಾಗಿ ಹೋಗುವಂತಾಯಿತು ಆದರೆ ಅವರ ಜೊತೆಗೆ ಹಿಂದುಸ್ಥಾನದಲ್ಲಿಯ (ಪೂರ್ವಪಂಜಾಬ, ದಿಲ್ಲಿ ಮೊದಲಾದ ಭಾಗಗಳಲ್ಲಿಯ) ಮುಸಲ್ಮಾನರೂ ಪಾಕಿಸ್ತಾನಕ್ಕೆ ಹೋಗುವ ಪರಿಸ್ಥಿತಿಯೊದಗಿತು.

ಮುಸ್ಲಿಂ ಲೀಗಿನವರ ಕಣ್ಣುಗಳು ಈಗ ತೆರೆದಂತಿದೆ. ಅವರು ತಮ್ಮ ಧರ್ಮಬಾಂಧವರ ಬಗ್ಗೆ ಚಿಂತೆ ವ್ಯಕ್ತಮಾಡಹತ್ತಿದ್ದಾರೆ. ಈ ಬಗ್ಗೆ ಹಿಂದುಸ್ಥಾನದ ಮತ್ತು ಅದರ ಸರಕಾರದ ಮೇಲೆ ದೋಷಾರೋಪಣ ಮಾಡಲುಪಕ್ರಮಿಸಿದ್ದಾರೆ. ಸಂಯುಕ್ತ ರಾಷ್ಟ್ರಸಂಘದ ಸಭೆಗೆ ಪಾಕಿಸ್ತಾನದ ಪ್ರತಿನಿಧಿಗಳಾಗಿ ಹೋದ ಸರ್ ಎಮ್. ಜಾಫರುಲ್ಲಾಖಾನರು ಪೂರ್ವ ಪಂಜಾಬದಲ್ಲಿ ಮುಸ್ಲಿಮರ ಮೇಲೆನಡೆದ ಅತ್ಯಾಚಾರಗಳನ್ನು ಹಿಂದುಸ್ಥಾನ ಸರಕಾರವು ತಡೆಯದಿದ್ದರೆ, ಆ ಪ್ರಶ್ನೆಯನ್ನು ಅಂತರರಾಷ್ಟ್ರೀಯ ಸಭೆಯಮುಂದೆ ಇಡಬೇಕಾಗುವುದು ಎಂದು ಲಂಡನ್ನಿನಲ್ಲಿ ಹೇಳಿದ್ದಾರೆ.

ಪಂ. ಜವಾಹರಲಾಲ ನೆಹರೂರವರು, ಮೇಲಿನಂತಹ ಮಾತುಗಳನ್ನಾಡಿದ ಶ್ರೀ. ಲಿಯಾಕತ ಅಲ್ಲೀಖಾನರಿಗೆ ಉತ್ತರಕೊಡುತ್ತ ತಮ್ಮ ಸರಕಾರದ ಉದ್ದೇಶ ಪ್ರಾಮಾಣಿಕತೆಗಳ ಬಗ್ಗೆ ಸ್ಪಷ್ಟವಾದ ಹೇಳಿಕೊಟ್ಟಿದ್ದಾರೆ.

(ಮುಂದುವರಿಯುವುದು)

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ. ಸ್ಥಾಪಿತ : 193

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ನಮ್ಮ ಶಾಖೆಗಳು:—

೧. **ಬಳ್ಳಾರಿ** – ಹರಪನಹಳ್ಳಿ, ಕೊಟ್ಟೂರು, ಹೊಸಪೇಟೆ, ಕಂಪ್ಲಿ, ರಾಯದುರ್ಗ, ಆದವಾನಿ ಮತ್ತು ಬಳ್ಳಾರಿ.
೨. **ಅನಂತಪುರ** – ತಿಮ್ಮನಚೆರ್ಲ (ಗುಂತಕಲ್ಲು) ಪಾಮಿಡಿ, ಉರವಕೊಂಡ, ಧರ್ಮವರಂ, ಹಿಂದೂಪುರ, ಗು
ಕದಿರಿ ಮತ್ತು ಅನಂತಪುರ.
೩. **ಕರ್ನೂಲು** – ಪತ್ತಿಕೊಂಡ ಮತ್ತು ಕರ್ನೂಲು. ೪. **ಕಡಪ** – ರಾಜಂಪೇಟೆ ಮತ್ತು ಕಡಪ.
೫. **ಚಿತ್ತೂರು** – ಮದನಪಲ್ಲಿ, ವಾಯಲ್ಪಾಡು, ತಿರುಪತಿ, ನಗರಿ ಮತ್ತು ಚಿತ್ತೂರು.

ಬೆಂಗಳೂರು ಮತ್ತು ಮದ್ರಾಸ್ ನಗರಗಳಲ್ಲೂ ನಮ್ಮ ಶಾಖೆಗಳಿವೆ.

ಬ್ಯಾಂಕಿಂಗ್ ಮತ್ತು ವ್ಯಾಪಾರೀ ಸಂಬಂಧದ ಎಲ್ಲಾ ವ್ಯವಹಾರಗಳೂ ನಡೆಯುತ್ತವೆ.

— ನಮ್ಮ ಡೈರೆಕ್ಟರುಗಳು —

ಬಳ್ಳಾರಿ ಜಿಲ್ಲೆ – ಶ್ರೀ ಹೆಚ್. ಲಿಂಗಾರೆಡ್ಡಿ ಬಿ ಎ. ಬಿ. ಎಲ್. ಅಡ್ವೊಕೇಟ್, ಬಳ್ಳಾರಿ.
,, ,, ಡಿ. ವೇಣುಗೋಪಾಲಾಚಾರಿ ಬಿ. ಎ. ಬಿ. ಎಲ್. ಬಳ್ಳಾರಿ.
,, ,, ಮೂಲಂಗಿ ಗೂಳಪ್ಪನವರು, ಮರ್ಚೆಂಟ, ಬಳ್ಳಾರಿ.
,, ,, ಜಿ. ಪದ್ಮನಾಭನ್, ಮರ್ಚೆಂಟ, ಬಳ್ಳಾರಿ.
,, ,, ಮೊಲಗವೇಲಿ ಲಕ್ಷ್ಮೀರೆಡ್ಡಿ ಬ್ಯಾಂಕರ್, ಲ್ಯಾಂಡಲಾರ್ಡ್, ಮೊಲಗವೇಲಿ.
ಅನಂತಪುರ ಜಿಲ್ಲೆ – ಶ್ರೀ ಎ. ರಾಯಪ್ಪನವರು ಎಂ. ಎಲ್. ಎ.
,, ,, ಮೂಲಾ ಲಕ್ಷ್ಮೀನಾರಾಯಣಸ್ವಾಮಿ, ತಾಡಪತ್ರಿ.
ಚಿತ್ತೂರು ಜಿಲ್ಲೆ – ಶ್ರೀ ಯ್. ಶಿ. ಚಂಗಲರಾಯನಾಯಿಡು ಲ್ಯಾಂಡ್‌ಲಾರ್ಡ್, ಚಿತ್ತೂರು.
,, ,, ಆರ್. ಕೃಷ್ಣಶಾಸ್ತ್ರಿ ಬಿ ಎ. ಬಿ ಎಲ್. ಅಡ್ವೊಕೇಟ್, ಮದನಪಲ್ಲಿ.
ಕಡಪ ಜಿಲ್ಲೆ – ಶ್ರೀ ಜೆ. ರಾಮಚಂದ್ರರಾವು ಬಿ ಎ. ಬಿ. ಎಲ್. ಅಡ್ವೊಕೇಟ್, ಕಡಪ.
ಕರ್ನೂಲು ಜಿಲ್ಲೆ – ಶ್ರೀ ರಾವುಬಹದ್ದೂರ್ ಶ್ರೀ ಬಿ ಪಿ. ಶೇಷರೆಡ್ಡಿ ಲ್ಯಾಂಡ್‌ಲಾರ್ಡ್, ಬೇತಂಚರ್ಲ.

ಬಿ. ವಿ ಶೇಷಗಿರಿರಾವು ಬಿ. ಕಾಂ —ಕಾರ್ಯದರ್ಶಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5—0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI..... .. ..
....
....

Printed at Krishna Press Bellary QH NO. B 17 FOR (Q.H. NO. B-5.)
Edited & Published by T. B. KESHAVA RAO

179

ಜೈಹಿಂದ್ Reg. No. M. 4746

ನವಚೇತನ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೪೦ ಬಳ್ಳಾರಿ ಅಕ್ಟೋಬರು ೨೦ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಆರ್ತರಿಗೆ—ಶರಣರಿಗೆ ಕಂಬಳಿ ಸಹಾಯ ಮಾಡಿರಿ.

"ಬಳ್ಳಾರಿ ಜಿಲ್ಲೆಯಲ್ಲಿ ೧ ಲಕ್ಷ ರೂ. ಸಂಗ್ರಹಿಸಿ ಕನಿಷ್ಟಕ್ಕೆ ೨೦ ಸಹಸ್ರ ಕಂಬಳಿಗಳನ್ನಾದರೂ ಪಂಜಾಬಿನ ಆರ್ತರಿಗೆ ಚಳಿಗಾಲದಲ್ಲಿ ಸಹಾಯ ಒದಗಿಸುವುದು ನನ್ನ ಧಾರ್ಮಿಕ ಕರ್ತವ್ಯವೆಂದು ಜಿಲ್ಲಾ ಕಲೆಕ್ಟರ್ ಶ್ರೀ ಅನಂತರಾಮನ್‌ರವರು ೧೩ ನೆಯ ಸಾಯಂಕಾಲ ಬಿ. ಡಿ. ಎ. ಗ್ರೌಂಡದಲ್ಲಿ ಮಾನ್ಯ ಮಂತ್ರಿ ಶೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹೇಳಿದರು. ಮಂತ್ರಿಗಳು ಭೀಮರಾಯರು ಇಸ್ಮಾಯಿಲ್ ಸಾಹೇಬರು (ಶಾಸನಸಭ್ಯರು) ನರಸಿಂಹ ಶಾಸ್ತ್ರಿ, ಶ್ರೀಮತಿ ಮನೋರಮಾಬಾಯಿ ಇವರೆಲ್ಲಾ ಮಾತಾಡಿ ಪಂಜಾಬಿನ ಆರ್ತರಿಗೆ ಸಹಾಯಕೋರಿದರು. ಶ್ರೀ ಶಿದಂಶೆಟ್ಟಿ ವೆಂಕೋಬಣ್ಣನವರು ೧೦೦೨ ರೂ. ಗಳನ್ನು ಸಭೆಯಲ್ಲೇ ಕೊಟ್ಟರು. ಗೆಜೆಟೆಡ್ ಅಧಿಕಾರಿಗಳು ೫೦೦/- ನಾನ್ ಗೆಜೆಟೆಡ್ ೨೫೦/- ಲೇಡೀಸ್ ಕ್ಲಬ್ ೨೧೦/- ಶ್ರೀ ಭೀಮರಾವ್ ೧೫೦/- ಇಸ್ಮಾಯಿಲ್ ಸಾಹೆಬ್ ೧೫೦/- ಶ್ರೀ ನರಸಿಂಹ ಶಾಸ್ತ್ರಿ ೫೦/- ವಾಗ್ದಾನ ಮಾಡಿದರು. ಒಂದು ಸಮಿತಿಯು ನಿರ್ಮಿಸಲ್ಪಟ್ಟು ರಿಟೈರ್ಡ ಸಬ್‌ಜಡ್ಜ ಶ್ರೀ ಆರ್. ಯಂ. ವಿ. ರಾಯರು ಖಜಾಂಚಿಗಳಾದರು.

ಬಳ್ಳಾರಿ ಸಭೆಯಲ್ಲಿ ಮಂತ್ರಿಗಳಿಗೆ ಪ್ರಶ್ನೆಗಳು.

"ಬ್ಲಾಕ್ ಮಾರ್ಕೇಟ ಲಂಚಗುಳಿತನವನ್ನು ನಿಲ್ಲಿಸಲು ನೀವು ಕೈಗೊಂಡ ಉಪಾಯಗಳೇನು? ಹಳ್ಳಿಗಳಲ್ಲಿ ಕಾಳು ಸರಬರಾಯಿ ಮಾಡದೆ, ಸಂಗ್ರಹವನ್ನೇಕೆ ಮಾಡುವಿರಿ? ಭೂಮಿಗಳಿಲ್ಲದ ಕೂಲಿಕಾರರಿಗೆ ಧಾನ್ಯವನ್ನೇಕೆ ಒದಗಿಸುತ್ತಲಿಲ್ಲ? ಈ ಪ್ರಶ್ನೆಗಳೇ ಅಲ್ಲದೆ ಜಿಲ್ಲೆಯಲ್ಲಿ ನಡೆದ ಕೆಲವುಮುಖ್ಯ ಶಾಸನವಿರುದ್ಧಾಂಶಗಳ ಅಪರಾಧಗಳ ಉದಾಹರಣೆಗಳನ್ನು ಕೊಟ್ಟು ಸಭೆಯಲ್ಲೇ ಸಮಾಧಾನ ಕೇಳಿದರು. ಬಳ್ಳಾರಿ ನಗರಕ್ಕೆ ಮದ್ರಾಸ್ ಮಂತ್ರಿಗಳಾದ ಶ್ರೀ ಹಾ. ಸೀತಾರಾಮರೆಡ್ಡಿ, ಮಾಧವ ಮೆನನ್‌ರವರು ಬಂದು ೧೩ ನೆಯ ದಿನಾಂಕ ಸಾಯಂಕಾಲ ಕಾಂಗ್ರೆಸ್ ಸಮಿತಿಯಾಶ್ರಯದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಶೀತಾರಾಮರೆಡ್ಡಿಯವರು ಮಾತಾಡಿದನಂತರ ಈ ಪ್ರಶ್ನೆಗಳಾರಂಭವಾದವು"

"ಪ್ರಜಾಪ್ರತಿನಿಧಿಗಳಾಗಿ ಹೋದ ನಾವು ಪ್ರಜೆಗಳ ಅಹಿತವನ್ನು ಎಂದಿಗೂ ಕೋರುವುದಿಲ್ಲ. ಮದ್ಯನಿಷೇಧ ಶಾಸನಮಾಡಿ ನಾವು ೧೭ ಕೋಟಿ ರೂ. ಗಳನ್ನು ಕಳೆದುಕೊಂಡು ರೂ.ಪ್ರಜೆಗಳು ೬೦ ಕೋಟಿ ರೂ. ಉಳಿಸಿಕೊಂಡು ಅವರ ಆರ್ಥಿಕಾಭಿವೃದ್ಧಿಗೆ ಸಹಾಯ

ಮೂಡಿದ್ದೇವೆ, ಬ್ರಿಟಿಷ್ ರಾಜ್ಯಬಾರದ ಅಂತವಾದ ಮೇಲೆ ಒಂದೇಸಲ ಎಲ್ಲಾ ಕಷ್ಟಗಳೂ ನಮಗೆ ಬಂದಿವೆ. ಇಷ್ಟುದಿನ ಅವರಮೇಲೆ ಆಪಾದನೆಗಳನ್ನು ಹೊರಿಸಿ ಅಂದೋಳನದ ಅಭ್ಯಾಸ ಮಾಡುತ್ತಿದ್ದವರಿಗೆ ಈಗ ನಮ್ಮವರನ್ನೇ ದೂಷಿಸುವ ಪಾಳಿ ಬಂದಿರುವುದು ನಮ್ಮದುರ್ದೈವ ನಾವು ಬೇರೆ ನೀವು ಬೇರೆ ಎಂಬ ಸರ್ಕಾರ ಪ್ರಜೆಗಳಲ್ಲಿನ ಭೇದವು ದೂರವಾಗಬೇಕು. ಸಹಾಯ ಸಹಕಾರ ಸಾನುಭೂತಿಗಳಿಂದ ನಮ್ಮ ಅಭ್ಯುದಯವಾಗುತ್ತದೆ. ಇನ್ನು ಆಹಾರ ಬಟ್ಟೆಗಳ ಕಷ್ಟ ಸಾರ್ವತ್ರಿಕವಾಗಿದೆ. ರಾಜೇಂದ್ರಬಾಬುಗಳ ಅಧೀನದಲ್ಲಿ ಅವರ ಸಲಹೆಗಳಂತೆ ನಾವು ವರ್ತಿಸುತ್ತಿದ್ದೇವೆ. ಮದ್ರಾಸ್ ಭಾಗಕ್ಕೆ ಹೆಚ್ಚಿನಧಾನ್ಯ ಒದಗಿಸುತ್ತೇವೆಂದು ಭರವಸೆಕೊಟ್ಟಿದ್ದಾರೆ. ನೀವು ಮುಚ್ಚುಮರೆಯಿಲ್ಲದೆ ಸಲಹೆಕೊಟ್ಟು ನಮಗೆ ಮಾರ್ಗದರ್ಶಿಗಳಾಗಿರಿ ನಾಶಕಾರೀ ಟೀಕೆಯು ಬೇಡ ನಾವು ನಿಮ್ಮವರು ನಿಮ್ಮಿಂದಾರಿಸಲ್ಪಟ್ಟವರು ಎಂಬುದನ್ನು ಮರೆಯಬೇಡಿರಿ. ಎಂಬುದಾಗಿ ಇಬ್ಬರೂ ಮಂತ್ರಿಗಳು ಉತ್ತರವಿತ್ತರು. ಶ್ರೀ ಮಾಧವ ಮೆನನ್‌ರ ಭಾಷಣವನ್ನು ಶ್ರೀ ಟಿ ಸುಬ್ರಹ್ಮಣ್ಯಂರವರು ಕನ್ನಡಿಸಿದರು.

ಇಬ್ಬರೂ ಮಂತ್ರಿಗಳು ಮಧ್ಯಾನ್ಹಾತ್ಪರ ಜೈಲುಗಳನ್ನು ಸಂದರ್ಶಿಸಿ ಅಲ್ಲಿನ ಬೇಡಿಕೆಗಳನ್ನು ಕೇಳಿಕೊಂಡರು. ವೀರಶೈವ ಕಾಲೇಜಿನ ವಿದ್ಯಾರ್ಥಿಗಳಿಗೆ ಶ್ರೀ ಮೆನನ್‌ರವರು ಸದುಪದೇಶ ಕೊಟ್ಟರು. ಹಂಪಿ ಹೊಸಪೇಟೆಯ ಸಂದರ್ಶನದ ನಂತರ ಇಬ್ಬರೂ ಮಂತ್ರಿಗಳು ಸಿರುಗುಪ್ಪೆ ಹಗರಿ ವ್ಯವಸಾಯ ಪರಿಶೋಧನಾಕೇಂದ್ರಗಳನ್ನು ನೋಡಿ ಸಾಯಂಕಾಲದ ಗಾಡಿಯಿಂದ, ಮದ್ರಾಸಿಗೆ ತೆರಳಿದರು.

ಮದ್ರಾಸ್ ಪ್ರಾಂತದ ಮಚಲೀ ಪಟ್ಟಣದ ಫ್ರೆಂಚ ಪೇಟೆಯೆಂಬ ಭಾಗವನ್ನು ಫ್ರೆಂಚಸರ್ಕಾರವು ಭಾರತಕ್ಕೆ ವಹಿಸಿಕೊಟ್ಟಿತು. ಅದು ಈಗ ಮಚಲೀ ಪಟ್ಟಣದ ಒಂದು ಭಾಗವಾಯಿತು.

ಬಳ್ಳಾರಿ ಜಿಲ್ಲಾ ಹರಿಜನ ಕ್ಷೇಮ ಸಮಿತಿ

ಮದ್ರಾಸ್ ಸರ್ಕಾರದವರು ಜಿಲ್ಲೆ ಜಿಲ್ಲೆಗಳಲ್ಲಿ ಹೊಸದಾಗಿ ಸ್ಥಾಪಿಸಿರುವ ಹರಿಜನಕ್ಷೇಮ ಸಮಿತಿಯು ಕಲೆಕ್ಟರ್ ಶ್ರೀ ಅನಂತರಾಮನ್‌ರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಈ ನೆಯ ದಿನಾಂಕ ಶ್ರೀ ಟಿ. ಬಿ. ಕೇಶವರಾಯರು ಕೊಟ್ಟ ಮಹತ್ವ ಸೂಚನೆ ನಿರ್ಣಯಗಳನ್ನು ಚರ್ಚಿಸಿತು. ಲೇಬರ್ ಶಾಖೆಯವರು ತೆಗೆಸುತ್ತಿರುವ ಭಾವಿಗಳ ಹೋದವರ್ಷದ ಈ ವರ್ಷಕ್ಕೆ ಲೆಕ್ಕಾ ಕೊಟ್ಟು ಇನ್ನುಮುಂದೆ ಹರಿಜನರಿಗೂ ಸಹಕಂಟ್ರಾಕ್ಟು ಕೊಡಬೇಕೆಂಬ ಸಲಹೆ ಅಂಗೀಕೃತವಾಯಿತು. ಹರಿಜನರಿಗಾಗಿ ಪ್ರತ್ಯೇಕ ಶಾಲೆಗಳಿರಬಾರದೆಂಬ ಸೂಚನೆಯನ್ನು ಶಾಸನಸಭ್ಯರಾದ ಶ್ರೀ ಗೋವಿಂದದಾಸರು ವಿರೋಧಿಸಿದರು. ಶ್ರೀ ಟಿ. ಸುಬ್ರಹ್ಮಣ್ಯಂರವರು ಇನ್ನೂ ಕೆಲಕಾಲ, ಜಾರಿಯಲ್ಲಿರುವ ಪದ್ಧತಿಯು ಒಳ್ಳೆಯದೆಂದು ಅಭಿಪ್ರಾಯಪಟ್ಟನಂತರ ಆ ನಿರ್ಣಯಕ್ಕೆ ಬೆಂಬಲ ದೊರೆಯಲಿಲ್ಲ "ಸರಕಾರದ ಶಾಲೆಗಳಲ್ಲಿಯಾಗಲಿ ಹೊರಗಾಗಲಿ ಕ್ರಿಶ್ಚಿಯನ್ ಉಪಾಧ್ಯಾಯರು ಮತಸಂಬಂಧ ಪ್ರಚಾರ ಮಾಡಬಾರದು. ಮನೆಕಟ್ಟಲು ಉಚಿತ ನಿವೇಶನಗಳನ್ನು ಒದಗಿಸಬೇಕು. ಮನೆಕಟ್ಟಿಸಿಕೊಳ್ಳಲು ಶೇರ್ ಮೊತ್ತದಮೇಲೆ ಹತ್ತರಷ್ಟು ಸಾಲ ಸೊಸೈಟಿಯವರು ಕೊಡುವಂತೆ ಶಾಸನದಲ್ಲಿ ತಿದ್ದುಪಡೆಯಾಗಬೇಕು. ಕಲಸಕ್ಕೆ ಸೇರುವ ಹರಿಜನರಿಗೆ S.S L.C. ಪಾಸು ಆಗಬೇಕೆಂಬ ನಿರ್ಬಂಧವಿರಬಾರದು (ಈ ತೀರ್ಮಾನವನ್ನು ಕಲೆಕ್ಟರರು ಒಪ್ಪಲಿಲ್ಲ) ಜಿಲ್ಲೆಯಲ್ಲಿ ಗಿಡಗಳಿಲ್ಲದ ಫಾರೆಸ್ಟ ಭಾಗಗಳಿಂದ ಹರಿಜನರಿಗೆ ಭೂಮಿ ಒದಗಿಸಬೇಕು. ಭಾವಿತೆಗೆಸಲು 500/- ಸಾಲುವುದಿಲ್ಲ. 1000/- ಕೊಡಬೇಕು. ಎತ್ತುಗಳನ್ನು ಕೊಳ್ಳಲು ಕನಿಷ್ಟಕ್ಕೆ 500/- ಸಾಲಕೊಡಬೇಕು. ಎಂಬುವ ತೀರ್ಮಾನಗಳು ಸ್ವೀಕೃತವಾದವು.

ಭೂಧಾನ.

ರಾಜಕೀಯ ಚಳವಳಿದಲ್ಲಿ ಕಷ್ಟನಷ್ಟಗಳಿಗೆ ಒಳಗಾದವರು, ಹರಿಜನರು, ಹಿಂದುಳಿದ ಜಾತಿಯವರು ಭಾರತ ರಾಷ್ಟ್ರೀಯ ದಳದವರು, ಇತರ ನಿವೃತ್ತ ಸೈನಿಕರು ಮೊದಲಾದವರಿಗೆ ಅಲ್ಲಲ್ಲಿ ತುಂಡು ತುಂಡು ನೆಲಗಳನ್ನು ಉಚಿತವಾಗಿ ಕೊಡಲು ಸರಕಾರವು ನಿಶ್ಚಯಿಸಿರುತ್ತದೆ.

ರಾಜಕೀಯ ಸಂಕಷ್ಟಾನುಭವಿಗಳೆಂದರೆ ಭಾರತ ರಾಷ್ಟ್ರೀಯ ಕಾಂಗ್ರೆಸಿನಿಂದ ಅಥವಾ ಅದರ ಒಪ್ಪಿಗೆಯಿಂದ ಪ್ರಾರಂಭಿಸಲ್ಪಟ್ಟ ಚಳವಳಿಗಳಲ್ಲಿ ಭಾಗವಹಿಸಿದುದರ ಫಲವಾಗಿ ಭಾರತ ಸ್ವಾತಂತ್ರ್ಯೋದ್ವೇಶದಿಂದ ಜೈಲಿಗೆ ಹೋದವರೂ ಆಗಿದ್ದಾರೆ. ಹೇಗೂ ಒಬ್ಬನು ರಾಜಕೀಯ ಸಂಕಷ್ಟಾನುಭವಿಯೇ ಅಲ್ಲವೇ ಎಂಬುದನ್ನು ನಿಶ್ಚಯಿಸುವ ಅಧಿಕಾರವು ಸರಕಾರದ್ದಾಗಿದೆ. ಈ ವಿಷಯದಿನ ಮಟ್ಟಿಗೆ 1921 ನೇ ವರ್ಷವನ್ನು ಈ ರಾಜಕೀಯ ಚಳವಳಿಗಳ ಆರಂಭವಾದ ವರ್ಷವೆಂದು ತೆಗೆದುಕೊಳ್ಳಲಾಗುವುದು. 1921 ನೇ ವರ್ಷಕ್ಕಿಂತ ಮುಂಚೆಯೂ ರಾಜಕೀಯ ಚಳವಳಿಗಳಲ್ಲಿ ಯಾರಾದರೂ ಭಾಗವಹಿಸಿದ್ದಾದರೆ ಅವರ ವಿಷಯವನ್ನು ಪ್ರತ್ಯೇಕವಾಗಿ ಪರ್ಯಾಲೋಚಿಸಲಾಗುವುದು.

1-4-46 ರಲ್ಲಿ ನಿ ಎಕ್ರೆಗಳಷ್ಟು ತರಿ ಅಥವಾ 10 ಎಕ್ರೆಗಳಷ್ಟು ಖುಷ್ಕಿ ಭೂಮಿ ಇರುವ ಜನರು ಈ ಸಹಾಯಗಳಿಗೆ ಅರ್ಹರಲ್ಲ ಒಬ್ಬೊಬ್ಬರಿಗೆ 5 ಎಕ್ರೆ ಅಥವಾ ಅದರ ಹೆಚ್ಚಿಗೆ ತರಿ ಭೂಮಿ ಕೊಡಲಾಗದು. (ಎರಡು ಎಕ್ರೆಗಳಷ್ಟು ಖುಷ್ಕಿ ಭೂಮಿಯನ್ನು ಒಂದು ಎಕ್ರೆಯಷ್ಟು ತರಿ ಭೂಮಿ ಎಂದು ತಿಳಿಯಲಾಗುವುದು. ಆದರೆ ಕೆಲವು ಪ್ರದೇಶಗಳಲ್ಲಿ ಸರಕಾರವು ಅಲ್ಲಿಯ ತರಿ ಖುಷ್ಕಿ ಭೂಮಿಗಳ ಬೆಲೆಯನ್ನು ವಿಚಾರಿಸಿದ ನಂತರ ಮೇಲಿನ ಹೇಳಿಕೆಯನ್ನು ಸರಕಾರವು ಬದಲಾಯಿಸಲೂ ಬಹುದು.) ಮಾರಾಟದ ಬೆಲೆ ಇಲ್ಲದೆಯೇ ರಾಜಕೀಯ ಸಂಕಷ್ಟಾನುಭವಿಗಳಿಗೆ ನೆಲ ಕೊಡುವುದಾಗಿದೆ. ಈ ಚಳವಳಿಗಳಲ್ಲಿ ಮೃತರಾದವರ ಕುಟುಂಬದವರೂ ಈ ಸಹಾಯ ಪಡೆಯಲು ಅರ್ಹರಾಗಿದ್ದಾರೆ. ವಿವರಗಳನ್ನು ಕ್ರಮೇಣ ಪ್ರಕಟಿಸಲಾಗುವುದು.

ಹೂವಿನಹಡಗಲಿ

೨ನೆಯ ದಿನಾಂಕ ಗಾಂಧಿ ಜಯಂತಿಯು ಧ್ವಜವಂದನೆಗಳಿಂದಾರಂಭವಾಗಿ ಮಹಾತ್ಮರ ಭಾವಚಿತ್ರದ ರಥವನ್ನು ೭೯ ವಿದ್ಯಾರ್ಥಿಗಳು ಎಳೆದರು. ಪ್ರೌಢ ಶಾಲೋಪಾಧ್ಯಾಯರಾದ ಶ್ರೀ ವೆಂಕಟಸುಬ್ಬನ್ನರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ಅವರ ಜೀವನ ಚರಿತ್ರೆಯು ಶ್ರೀ ಓಬಣ್ಣ ಮತ್ತು ಅಧ್ಯಕ್ಷರಿಂದ ವಿವೇಚಿಸಲ್ಪಟ್ಟಿತು. ವಂದನಾರ್ಪಣೆಯಿಂದ ಸಭೆಯು ಮುಗಿಯಿತು

ದಿನಾಂಕ ೫ರಲ್ಲಿ ಭಾಷಾವಾರ ಪ್ರಾಂತರಚನೆಯ ದಿನಾಚರಣೆ ನಿಮಿತ್ತ ತಾಲೂಕು ವಿದ್ಯಾರ್ಥಿ ಕಾಂಗ್ರೆಸ್, ಸಭೆಯು ಪಾ. ಚಂದ್ರಶೇಖರಗೌಡನ ಅಧ್ಯಕ್ಷತೆಯಲ್ಲಿ ಕರೆಯಿತ್ತು. ಅಧ್ಯಕ್ಷರು ಅಖಂಡ ಕರ್ನಾಟಕವನ್ನು ಕಟ್ಟಲಿಕ್ಕೆ ಪ್ರತಿಯೊಬ್ಬ ಕನ್ನಡ ತರುಣನೂ ತನು, ಮನ, ಧನಗಳಿಂದ ಹೋರಾಡಬೇಕು. ಕನ್ನಡಿಗರ ಕೂಗು ಘಟನಾಸಮಿತಿಯಲ್ಲಿ ಪ್ರತಿಧ್ವನಿಸಬೇಕು. ಮುಂತಾಗಿ ಹೇಳಿದರು. ತರುಣಾಯ "ಸಂಯುಕ್ತ ಕರ್ನಾಟಕ ಪ್ರಾಂತವನ್ನು ಬೇಗನೆ ರಚಿಸಬೇಕು" ಈ ವಿಷಯವನ್ನು ನವಭಾರತದ ನಾಯಕ ನೆಹರೂ, ಪಟೇಲ್, ಪ್ರಸಾದರಿಗೆ ತಂತಿಯ ಮೂಲಕ ಕಳಿಸಲಾಯ್ತು. ಹೀಗೆ ಸಭೆಯು ಮುಕ್ತಾಯವಾಯಿತು.

ಮೈಸೂರು ರೈಲ್ವೆ ಸಂಪಿನ ಮುಕ್ತಾಯ

ಮೈಸೂರು ರೈಲ್ವೆಯ ಸುಮಾರು ೧೧ ಸಾವಿರ ಜನರು ಕಳೆದ ಒಂದು ತಿಂಗಳಿಂದ ಹೂಡಿದ್ದ ಸಂಪು ೭ನೆಯ ದಿನಾಂಕ ಮುಕ್ತಾಯವಾಯಿತು. ಈ ಅವಧಿಯಲ್ಲಿ ಕೂಲಿಕಾರರು ಡ್ಯೂಟಿ ಮೇಲಿದ್ದಂತೆಯೇ ಭಾವಿಸಲಾಗುವುದು. ಅಲ್ಲದೆ ಈಗ ಪ್ರಕಟಿಸುವದಕ್ಕಿಂತಲೂ ಶೇಕಡ ೨೦ ರಷ್ಟು ಹೆಚ್ಚಿನ ವೇತನ ಕೊಡಲಾಗುವುದು.



10th year of Publication.
Monday, 20th Octo. 1947

The only solution.

Mr. D. L. Gangadhar Chetty Advocate has contributed a lengthy article which we have abridged and published elsewhere in this issue. We do not want to enter the arena of controversial politics and the views of Mr. Chetty are not shared by us. We emphasise and we are definite that the only solution to the complicated problem and all existent drawbacks inclusive of economic backwardness, is the distribution of provinces on linguistic basis as agreed to by the Congress.

ಮಂತ್ರಿದ್ವಯರಿಗೆ ಸಿರುಗುಪ್ಪೆಯಲ್ಲಿ ಸ್ವಾಗತ

ವ್ಯವಸಾಯ ಶಾಖಾಮಂತ್ರಿಗಳಾದ ಶ್ರೀ ಮಾಧವ ಮೆನನ್, ಔದ್ಯೋಗಿಕ ಶಾಖಾಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿಯವರನ್ನು ಸಿರುಗುಪ್ಪೆ ನಾಗರೀಕರು ಸತ್ಕರಿಸಿದರು. ನಾಗರೀಕರ ಪರವಾಗಿ ಶ್ರೀ ಬಿ. ಕಲ್ಲುರಾಯರು ಮಾನಪತ್ರವನ್ನರ್ಪಿಸಿ ರಾ ರಾ ವಿ ಬ್ರಿಜ್‌ಕಟ್ಟಬೇಕು, ಮಲೇರಿಯಾ ನಿವಾರಣೆಯಾಗ ಬೇಕು. ಅಣೆಕಟ್ಟಿನ ರಿಪೇರಿಯಾಗಬೇಕು ಎಂಬ ಬೇಡಿಕೆಗಳನ್ನು ಮಂಡಿಸಿದರು. ಮಂತ್ರಿದ್ವಯರ ಜೊತೆಗೆ ಶ್ರೀಮತಿ ಮಾಧವ ಮೆನನ್ (ಕುಟ್ಟಿಮಾಳಮ್ಮ) ಎಂ. ಎಲ್. ಎ. ಶ್ರೀಮತಿ ನಿರ್ಮಲಾದೇವಿ, ಮತ್ತು ತೇವಾರ್ ಎಂ. ಎಲ್. ಎ. ಇವರು ಬಂದಿದ್ದರು. ವ್ಯವಸಾಯ ಪರಿಶೋಧನಾಲಯದ ನಿರೀಕ್ಷಣೆಯ ನಂತರ ಸಭೆಯೇರ್ಪಟ್ಟಿದ್ದಿತು. "ನಾವು ಪ್ರಜಾಸೇವಕರು ನಿಮ್ಮಿಂದಾರಿಸಲ್ಪಟ್ಟವರು. ಪ್ರಜೆಗಳ ಹಿತವೇ ನಮ್ಮ ಹಿತ ನಿಮ್ಮ ಬೇಡಿಕೆಗಳು ನಮಗೆ ಸಂಬಂಧವಿರದಿನ್ನರೂ, ಸಂಬಂಧಿಸಿದ ಮಂತ್ರಿಗಳಿಗೆ ತಿಳಿಸಿ ನಿಮಗೆ ಸಹಾಯಮಾಡಲು ಯತ್ನಿಸುತ್ತೇವೆ" ಎಂದರು. ಶ್ರೀ ಹಾ. ಸೀತಾರಾಮರೆಡ್ಡಿಯವರು ಅಚ್ಚಕನ್ನಡದಲ್ಲೂ ಶ್ರೀ ಮಾಧವ ಮೆನನ್‌ರವರು ಇಂಗ್ಲೀಷಿನಲ್ಲಿಯೂ ಮಾತಾಡಿದರು. ಮೇನನ್‌ರ ಭಾಷಣವನ್ನು ಶ್ರೀ ಟಿ ಬಿ. ಕೇಶವರಾಯರು ಕನ್ನಡಿಸಿದರು. ಊಟದನಂತರ ಹಗರೀಮಾರ್ಗವಾಗಿ ಮಂತ್ರಿಗಳು ಮದ್ರಾಸಿಗೆ ತೆರಳಿದರು

ಮಲಪನಗುಡಿ

5-10-47 ಸಾಯಂಕಾಲ 5 ಗಂಟೆಗೆ ಮಲಪನಗುಡಿ ಗ್ರಾಮದಲ್ಲಿ ಗಾಂಧಿ ಜಯಂತಿಯನ್ನು ಆಚರಿಸಿದರು. ಮತ್ತು ಅಲ್ಲಿಯ ಹೈಯರ್ ಎಲಿಮೆಂಟರಿ ಸ್ಕೂಲಿನ ರಜತ ಮಹೋತ್ಸವವೂ ಜರುಗಿತು. ಶ್ರೀ ಬಿ. ಅನಂತಾಚಾರ್ಯರು ಧ್ವಜಾರೋಹಣ ಮಾಡಿದ ನಂತರ ಅವರ ಅಧ್ಯಕ್ಷತೆಯಲ್ಲಿ ಸಭೆಯು ಕಾರ್ಯಕಲಾಪಗಳು ಜರುಗಿದವು ಶಾಲೆಯ ವರದಿ ಶಾಲೆಯ ವಿಷಯು ಮೊದಲಾದವುಗಳ ಬಗ್ಗೆ ಸ್ಥಳೀಕ ಮಹಸೀಯರು ಮಾತನಾಡಿದರು. ನಂತರ ಹೊಸಪೇಟೆಯ ಶ್ರೀ ವೈ.ಪೂರು ತಿರುಮಲಾಚಾರ್ಯ, ಹುಬ್ಬಳ್ಳಿ ಗೋವಿಂದಾಚಾರ್ಯ ಅಸುಂಡಿ ತಿರುಮಲರಾವು ಯಿವರುಗಳು ಗಾಂಧಿಜಿಯವರ ಬಗ್ಗೆ ಮಾತನಾಡಿದರು. ಶ್ರೀ ಜೋಳದರಾಶಿ ದೊಡ್ಡನಗೌಡರು ಕಾವ್ಯ ವಾಚನ ಮಾಡಿದರು ವಂದೇಮಾತರಂ ಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಬಿತ್ತಿದ್ದನ್ನು ಬೆಳಿದುಕೋ.

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಬಹು ದಿವಸಗಳಿಂದ ಇತರರ ನೋವು ಮತ್ತು ಅಕ್ಷೇಪಗಳ ಕಡೆಗೆ ಮೂಗು ಮುರಿಯುತ್ತ ತಮ್ಮ ಮನಸ್ಸಿಗೆ ಬಂದಿದ್ದೇ ಸರಿಯಾದದ್ದು ಎಂಬ ದೃಢನಿರ್ಧಾರದಿಂದ ನುನ್ನು ಗ್ಗುತ್ತ ಹೊರಟ ಮುಂಸ್ಲಿಂಲೀಗಿನ ಮುಂದಾಳುಗಳಿಗೆ, ಬುದ್ದಿಬಿಟ್ಟಿಯಾದದ್ದು ಆನಂದದ ಸಂಗತಿಯಾಗಿದೆ. ಆದರೆ ಆ ಮಾತನ್ನು ಅವರು ಒಪ್ಪಿಕೊಳ್ಳುವುದನ್ನು ಬಿಟ್ಟು ತಮ್ಮ ಕರ್ಮದಿಂದಾದ ಫಲದ ಹೊಣೆಯನ್ನು ಹಿಂದುಸ್ಥಾನ ಸರಕಾರದ ಮೇಲೆ ಹೊರಿಸಲು ಯತ್ನಿಸಿರುವುದು ನಿಜಕ್ಕೂ ದುರ್ದೈವದ ಸಂಗತಿಯಾಗಿದೆ. ಇದರಿಂದ, ಅವರು ಇನ್ನೂ, ರಾಜಮಾರ್ಗಕ್ಕೆ ಬರಲು ಸಿದ್ಧರಿಲ್ಲವೆಂಬದು ಸಿದ್ಧವಾಗುತ್ತದೆ.

ಜವಾಹರಲಾಲರು, ಮಹಾತ್ಮಾಜಿಯವರು, ಹಿಂದೂಗಳು ಇವರ ಬಗ್ಗೆ ಹೆದರಬೇಕಾಗಿಲ್ಲವೆಂಬುದನ್ನು ಅವರು ಚೆನ್ನಾಗಿ ತಿಳಿದುಕೊಳ್ಳಲಿ. ಈ ಮಾತನ್ನು ಇತರರು ಅವರಿಗೆ ಹೇಳಬೇಕಾಗಿಲ್ಲ. ಅವರಿಗೆ ಅದು ನಿಚ್ಚಳವಾಗಿ ಗೊತ್ತಿದೆ. ಅವರ ಬಲದಿಂದಲೇ ಅವರು ಹೀಗೆ ಹುಚ್ಚುಚ್ಚಾಗಿ ಮಾತಿದರು ಆದರೆ ಕೊನೆಗೆ ಈ ಹಿಂದೂ ಜನರು ಹೀಗೂ ನೂಡಬಹುದೆಂಬುದನ್ನು ಅವರು ತಿಳಿದಿರಲಿಲ್ಲ.

ಅವರ ಧರ್ಮ ಬಾಂಧವರಿಗೆ ಈಗ ಏನಾದರೂ ತೊಂದರೆಯಾಗಿದ್ದರೆ ಅದಕ್ಕೆ ಹೊಣೆಗಾರರು ಅವರೇ ಎಂಬುದನ್ನು ಅವರು ಒಪ್ಪಿಕೊಂಡರೆ ಆ ಕೂಡಲೆ ಈ ಪ್ರಶ್ನೆಯು ಸದ್ದಿಲ್ಲದೆ ಬಿಡುವುದಲ್ಲದೆ ಹಿಂದುಸ್ಥಾನದಲ್ಲಿ ತತ್ಪರಿಣಾಮವಾಗಿ ಶಾಂತಿಯುಂಟಾಗುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಇಲ್ಲದಿದ್ದರೆ ತಾವು ಆಕಾಶದಲ್ಲಿ ತೂರಿದ ಮಣ್ಣು ತಮ್ಮಮೇಲೆಯೆ ಬೀಳುವುದು ತಪ್ಪುವುದಿಲ್ಲ ಅಂತರಾಷ್ಟ್ರೀಯ ಸಂಘದ ಮುಂದೆ ಒಯ್ದರೆ ಏನಾಗಬೇಕಾಗಿದೆ? ಅಲ್ಲಿ ತಮ್ಮ ಪಕ್ಷದ ನೈರ್ಮಲ್ಯಯುಕ್ತವಾದ ವರ್ತನೆಯನ್ನು ಮಂಡಿಸಿ ಜಯ ಹೊಂದಲು ಹಿಂದುಸ್ಥಾನ ಸರಕಾರದವರಿಗಿರುವಷ್ಟು ನೈತಿಕ ಧೈರ್ಯವು ಮುಸ್ಲಿಂ ಲೀಗಿನವರಿಗೆ ಇದೆಯೇ? ಎಂಬ ಬಗ್ಗೆ ಅವರು ಸ್ವಲ್ಪ ಅಂತರ್ಮುಖರಾಗಿ ನೋಡಿಕೊಳ್ಳಲಿ.

ಮಿತ್ರಮಂಡಲಿ

ರಾಯಲಸೀಮೆ ಕಾಲೇಜುಗಳನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಬಾರದೆಂದು 9–10–47 ನೆಯ ದಿನಾಂಕ ಮಿತ್ರಮಂಡಲಿಯ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ತೀರ್ಮಾನವಾಗಿ ಸದರಿತೀರ್ಮಾನವನ್ನು ಎಲ್ಲಾ ವೃತ್ತಪತ್ರ ಸರ್ಕಾರ, ರಾಯಲಸೀಮೆ ಮಹಾಸಭೆಗೆ ತಿಳಿಸಲು ನಿಶ್ಚಿತವಾಯಿತು.

(D. L. G. Chetty-Secretary)

ಅಲ್ಪಸಂಖ್ಯಾಕರು ಗುಳೇಕಿತ್ತ ಬೇಡಿರಿ

ಸಿಂಧದ ಗವರ್ನರ ಗುಲಾಮ ಹುಸೇನ ಹಿದಾಯತುಲ್ಲಾರವರು ಅಲ್ಪಸಂಖ್ಯಾಕರು ಭಯಪಟ್ಟು ದೇಶವನ್ನು ಬಿಟ್ಟುಹೋಗಬಾರದೆಂದೂ ಇದು ಜಿನ್ನಾ ಗಾಂಧೀಜೀಯವರ ಉಪದೇಶವಾಗಿರುವದೆಂದು ಕಳೆದ ವಾರ ಒಂದು ಸಭೆಯಲ್ಲಿ ಹೇಳಿದರು.

ಹಿಂದೂಮನೆಗಳಲ್ಲಿ ಅನ್ಯಾಯವಾಗಿ ಅತಿಕ್ರಮ ಪ್ರವೇಶಮಾಡಿರುವವರನ್ನು ಹೊರಗಟ್ಟಲು ಸ್ಪೆಶಲ್ ಮ್ಯಾಜಿಸ್ಟ್ರೇಟರನ್ನು ನಿಯಮಿಸುವುದಾಗಿ ಪ್ರಕಟಿಸಿದರು. ಈ ಕಾರಣ ಈಗ ಹೋದವರೂ ಮತ್ತೆ ಹಿಂದಿರುಗಿ ಬರಲು ಕೋರಿದರು.

ಪಶ್ಚಿಮ ಪಂಜಾಬಿನಿಂದ ಪೂರ್ವಕ್ಕೆ ೪ ಲಕ್ಷ ಹಿಂದೂಗಳು

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಗುಳೇಕಿತ್ತ ಹೋಗುವ ಚಾರಿತ್ರಾತ್ಮಕ ದೊಡ್ಡಘಟನೆಗಳಲ್ಲೇ ದೊಡ್ಡದಾದ ನಾಲ್ಕು ಲಕ್ಷದ ಜನರ ತಂಡವು ಈಗಾಗಲೇ ಪೂರ್ವಪಂಜಾಬ ಭಾಗವನ್ನು ಸೇರಿದೆ. ಇದು ಬಹಳ ಉದ್ದವಾಗಿದ್ದು ಒಂದು ಭಾಗವನ್ನು ಕೊನೆಯವರು ದಾಟಲು ಎಂಟುದಿನಗಳು ಹಿಡಿಯುತ್ತವೆ.

ಗಾಳಿಪಯಣವೋ, ಸಾರಿಗೆಯೋ?

ದಿನಹೋದ ಹಾಗೆ–ಕೊನೆಯಪಕ್ಷ ಶ್ರೀಮಂತ ಜನರಲ್ಲಿ ವಿಮಾನ ಪ್ರಯಾಣವು ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿದೆ. ವಿಮಾನ ವಾಹನವನ್ನು ಜನಪ್ರಿಯವಾಗಿ ಮಾಡಲು ಮತ್ತು ವಿಸ್ತರಿಸಲು ಎಲ್ಲವಿಧದ ಸಾಧನಗಳನ್ನು ಉಪಯೋಗಿಸಲಾಗುತ್ತಿದೆ. ಆದುದರಿಂದ ಸಮಾಜದಲ್ಲಿ ಗಾಳಿಪಯಣಕ್ಕೆ ಯಾವ ಸ್ಥಾನವಿದೆಯೆಂಬುದನ್ನು ನಾವು ಅಭ್ಯಸಿಸೋಣ.

"ಬಹಳ ದೇಶ ತಿರುಗಿದವನಪ್ಪ ಇವನು" ಎಂಬ ನುಡಿಗಟ್ಟು ಸಾಮಾನ್ಯವಾಗಿ ಪ್ರವಾಸದ ಪ್ರಾಮುಖ್ಯವನ್ನು ವ್ಯಕ್ತಪಡಿಸುತ್ತದೆ. ಅಂತಹ ಮನುಷ್ಯನಿಗೆ ಅನೇಕ ವಿಧದ, ವಿವಿಧಸ್ಥಿತಿಯಲ್ಲಿಯ ಮನುಷ್ಯರ ಹಾಗೂ ವಸ್ತುಗಳ ಪರಿಚಯವಿರಬೇಕೆಂದು ನಾವು ನಿರೀಕ್ಷಿಸುತ್ತೇವೆ ಆದುದರಿಂದ ತನ್ನ ವಿವೇಕ ಬಲದಿಂದ, ಅವನು ಇತರರಲ್ಲಿ ವ್ಯವಹರಿಸುವಾಗ ವಿಶಾಲಮನಸ್ಕನೂ, ವಿಷಯಜ್ಞನೂ, ಸಂಸ್ಕೃತನೂ ಆಗಿರಬೇಕೆಂದು ನಾವು ಎಣಿಸುತ್ತೇವೆ. ಪ್ರವಾಸದಿಂದ ಬಹಳ ವಿಧದ ಲಾಭವಿದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಪೂರ್ವಕಾಲದಲ್ಲಿ ಧರ್ಮದಬಣ್ಣ ಬಳಿದಿದ್ದರೂ ಯಾತ್ರೆ ಹೋಗುವ ಪದ್ಧತಿಯು ಇಂತಹ ಸಾಂಸ್ಕೃತಿಕ ತಳಹದಿಯನ್ನೇ ಆಧರಿಸಿ ರೂಢಿಯಲ್ಲಿ ಬಂದಿತ್ತು.

ಬೇರೆ ಬೇರೆ ಅಂಕಗಳಲ್ಲಿ ಬೇರೆ ಬೇರೆ ಮನುಷ್ಯರನ್ನು ಪ್ರಯಾಣಿಕನು ಸಂಧಿಸುತ್ತಾನೆ, ಅವರೊಡನೆ ಮಾತುಕತೆ ಬೆಳೆಸುತ್ತಾನೆ, ಅವರ ಆಲೋಚನೆಯೇನೆಂದು ತಿಳಿದುಕೊಳ್ಳುತ್ತಾನೆ, ಅವರ ರೂಢಿ ಪರಂಪರೆಗಳಾವುವೆಂಬುದನ್ನು ಅರಿತುಕೊಳ್ಳುತ್ತಾನೆ. ಮತ್ತು ತನ್ನ ದೇಶದಲ್ಲಿಯವುಗಳೊಡನೆ ಅವನ್ನು ಹೋಲಿಸಿ ನೋಡುತ್ತಾನೆ. ಇದು ಕೊನೆಯಲ್ಲಿ ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಆದುದರಿಂದ ನಾವು ನಮ್ಮ ಮುಕ್ಕಳಿಗೆ ಪ್ರವಾಸ ಸಾಹಿತ್ಯವನ್ನೊದಲು ಪ್ರೋತ್ಸಾಹ ಕೊಡುತ್ತೇವೆ ಅದರಿಂದ ಅವರಿಗೆ ವಿದ್ಯಾರ್ಜನೆಯಾಗುತ್ತದೆ. ತನ್ನ ಸಂಗಡಿಗರ ಬಗ್ಗೆ ಜ್ಞಾನವನ್ನು ಪಡೆವಂತಾಗುತ್ತದೆ. ಈ ದೃಷ್ಟಿಕೋನದಿಂದ ನೋಡಿದರೆ "ವಿಮಾನ ಪ್ರವಾಸ" ವೆಂಬುದು ಅರ್ಥಹೀನವಾಗುತ್ತದೆ. ಇಂದು ಗಾಳಿಯಲ್ಲಿ ಪಯಣ ಮಾಡುವದೆಂದರೆ ಶುದ್ಧ ಬರೀ ಸಾರಿಗೆ. ಒಬ್ಬನು ಒಂದುಕ್ಷಣದಲ್ಲಿ ಒಂದೆಡೆಯಲ್ಲಿ ಗಾಳಿಗುದುರೆಯೇರಿದನೆಂದರೆ ಮರುಕ್ಷಣದಲ್ಲಿ ಅವನು ಮತ್ತೊಂದೆಡೆಯಲ್ಲಿರುತ್ತಾನೆ ಬೆಳಿಗ್ಗೆ ಕರಾಚಿಯಲ್ಲಿದ್ದ ಪ್ರಯಾಣಿಕನು ನಟ್ಟಿರುಳಲ್ಲಿ ಲಂಡನ್ನಿನಲ್ಲಿರಬಹುದು. ಆ ಪಯಣದಲ್ಲಿ ಅವನಿಗೆ ಯಾವ ಸುದ್ದಿಯೂ ಗೊತ್ತಾಗದು, ಯಾವ ಹೊಸ ಸಂಸ್ಕಾರದ ಪರಿಚಯವೂ ಆಗದು, ಯಾರೂ ಸಿಗರು. ಇದು ಒಂದು ಮೂಟೆ ಹತ್ತಿಯನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಹೇರಿಕೊಂಡು ಹೋದಷ್ಟೆ ಅಲ್ಲದೆ ಬೇರಲ್ಲ.

ಕಾಲದ ಉಳಿತಾಯವಾಯಿತೆಂದು ವಾದಿಸಬಹುದು. ಆದರೆ ಅದರಿಂದ ಮಾನವನ ಜೀವಿತದಲ್ಲಿ ಅವನೇನನ್ನಾದರೂ ಪಡೆದನೆಂದಾಗುವದೇ? ಇಲ್ಲವೇ ಇಲ್ಲ. ಅದರರ್ಥವೆಂದರೆ, ಮನುಷ್ಯನು ತನ್ನ ಜೀವನದ ಒಂದು ಸಂಧಿಯನ್ನು ಸಾಂಸ್ಕೃತಿಕ ಅಭ್ಯಾಸಕ್ಕಾಗಿ ಕಳೆಯದೆ ವ್ಯಾಪಾರಕ್ಕಾಗಿ ಕಳೆದನೆಂದಾಗುತ್ತದೆ. ಶಾಲೆಗೆ ಹೋಗುವ ಹುಡುಗನಿಗೆ ಅಡವಿಗೆ ಹೋಗಿ ದನಕಾಯೋ ಎಂದರೆ ನಾವು ಸಮಯ ಉಳಿಸಿದಂತಾಗುವದೇ? ಅದರಿಂದ ಆ ಹುಡುಗ ಸಂಪಾದಿಸಬಹುದಾಗಿದ್ದ ಸಂಸ್ಕಾರಾಂಶವನ್ನು ನಾವು ಅವನಿಗಿಲ್ಲದಂತೆ ಮಾಡಿದಂತಾಗುತ್ತದೆ ನಮ್ಮ ವ್ಯಾಪಾರದಲ್ಲಿಯೇ ನಮ್ಮ ಸಮಯವೆಲ್ಲವನ್ನು ಕಳೆಯುವದೇ ಜೀವನದ ಸರ್ವಸ್ವವಲ್ಲ ಸಾಮಾಜಿಕನಾಗಿರಬೇಕೆಂಬಲ್ಲಿಯವರೆಗೆ ಮಾನವನು ತನ್ನ ತನದ ವೃತ್ತವನ್ನು ವಿಸ್ತರಿಸಿ ನೆರೆಯವರೊಡನೆ ಬೆರೆಯಲೇಬೇಕಾಗುತ್ತದೆ. ಆದುದರಿಂದ

ಗಾಳಿ ಪಯಣವು ಸಾಮಾಜಿಕನನ್ನು ವ್ಯಕ್ತಿಯಾಗಿ ಪರಿವರ್ತಿಸುತ್ತದೆ. ಕಾಲದ ಉಳಿಕೆಯೆಂದರೆ, ಹೀಗೆ ಸಾಂಸ್ಕೃತಿಕ ಉದ್ದೇಶಕ್ಕಾಗಿ ಬಳಸುವವೇಳೆ ಸ್ವಾರ್ಥ ನಿಷ್ಠ ಉದ್ಯೋಗದಲ್ಲಿ ವ್ಯಯವಾದಂತಾಗುತ್ತದೆ. ಜೀವನವೆಂದರೆ ಸಾಂಸ್ಕೃತಿಕ ದೃಷ್ಟಿಯಿಂದಲ್ಲವೆಂದು ನಾವು ತಿಳಿದರೆ ಗಾಳಿ ಪಯಣದಲ್ಲಿಯ ಸಮಯದ ಉಳಿತಾಯವೊಂದು ಲಾಭವೆಂದು ಗಣಿಸಲಾಗುವದಿಲ್ಲ ಇನ್ನೊಂದು ಮಾತಿನಲ್ಲಿ ಹೇಳಬೇಕಾದರೆ ಅದು ನಮ್ಮ ಪ್ರಾಣಿ ಜೀವನವನ್ನು ಒಂದುಕಡೆ ಲಂಬಿಸಿದರೆ, ಮನುಷ್ಯ ಜೀವನವನ್ನು ಹ್ರಸ್ವಗೊಳಿಸುತ್ತದೆ. ಇದೇ ಏಕಾಂತವಾಸದ ಅಡಿಗಲ್ಲು. ಗಾಳಿಪಯಣ ಮಾಡುವಾಗ ವಾಹಕಗಳ ಕಿವಿ ಕಿವುಡು ಮಾಡುವಂಥ ಶಬ್ದದಿಂದಲೂ ಸ್ಥಳ ಸಂಕೋಚದಿಂದಲೂ ನಮ್ಮೊಡನೆ ಕುಳಿತ ಪಯಣಿಗರೊಡನೆ ಒಂದು ಮಾತನ್ನು ಕೂಡ ಆಡಲು ಶಕ್ಯವಿಲ್ಲ.

ಪ್ರಯಾಣಕ್ಕೆ ಬೇಕಾಗುವಷ್ಟುಕಾಲ ಒಬ್ಬ ಮನುಷ್ಯನನ್ನು ಒಂದು ಕೋಣೆಯಲ್ಲಿ ಕುರ್ಚಿಯ ಮೇಲೆ ಕೂರಿಸಿ ಎಲ್ಲ ಕಿಟಕಿಗಳನ್ನೂ ಮುಚ್ಚಿಬಿಡುವುದೂ ವಿಮಾನದಲ್ಲಿ ಕುಳಿತುಕೊಳ್ಳುವುದೂ ಎರಡೂ ಒಂದೇ; ಕುರ್ಚಿಯು ಎಷ್ಟೇ ಹಿತಕರವಿದ್ದರೂ ಹಾಗೆ ಕುಳಿತಿರುವುದರಿಂದಾಗುವ ಬೇಸರ ದುಸ್ಸಹವಾಗುತ್ತದೆ. ಕಿಟಕಿಯು ಚಿಕ್ಕದಿರುವುದರಿಂದಲೂ ಹಾಗೆ ಕಿಟಕಿಯೊಳಗಿಂದ ಕಂಡರೂ ಬರಿಯ ಕಣ್ಣಿಗೆ ಹೊರಗಿನದೇನೂ ಚೆನ್ನಾಗಿ ಕಾಣಿಸದುದರಿಂದಲೂ ವಿಮಾನಾರೂಢನು ಸುತ್ತಮುತ್ತ ಏನನ್ನೂ ನೋಡಲಾರನು. ದೂರ ಹೋಗುವ ವಿಮಾನಗಳು ನೆಲದಿಂದ ೧೫ರಿಂದ ೧೯ ಸಾವಿರ ಅಡಿಗಳ ಎತ್ತರದಲ್ಲಿ ಹಾರುತ್ತವೆ. ಎಂದರೆ ನೀವು ೩ ಮೈಲ್ಸು ದೂರದಿಂದ ವಸ್ತುಗಳನ್ನು ನೋಡಬೇಕೆಂದಾಗುತ್ತದೆ. ಆದುದರಿಂದ ಅನೇಕ ವೇಳೆ ವಿಮಾನವಾಹಿಗೆ ಕೆಳಗೆ ನುಬ್ಬು ನೀಲಿ, ಮೇಲೆ ದಟ್ಟ ನೀಲಿ ಕಾಣಿಸುವದಲ್ಲದೆ, ಇಳಿವ ಸ್ಥಳಗಳಲ್ಲಲ್ಲದೆ ನುತ್ತೆಲ್ಲೂ ಮರವಾಗಲೀ ಮನೆ ಪುಠಗಳಾಗಲಿ ಕಾಣಿಸುವುದಿಲ್ಲ. ಮುಚ್ಚಿದ ಮನ, ಮಂಜಾದ ಕಣ್ಣು, ಕಿವುಡಾದ ಕಿವಿ ಇವುಗಳೊಂದಿಗೆ ಪಯಣಿಗನು ರಾತ್ರಿಯಿರಲಿ ಹಗಲಿರಲಿ, ಗಂಟೆಗಟ್ಟಲೆ ಕುಳಿತು ಬೆನ್ನೆಲ್ಲ ನೋಯಹತ್ತಿ ಅಂತು ಊರುಬಂತಲ್ಲ ಗೆದ್ದೆ ಎಂಬ ನಿಟ್ಟುಸಿರ ಸಂತಸದಿಂದ ವಿಮಾನದಿಂದ ಕೆಳಗಿಳಿಯುವನು. ಇದು "ಆಧುನಿಕ ಪ್ರಯಾಣ."

ಇನ್ನು ಊಟ. ಊಟದಹೊತ್ತಿಗೆ ಆಹಾರದ ಪೊಟ್ಟಣಗಳನ್ನು ಕೊಡಲಾಗುತ್ತದೆ. ಆದರೆ ಈವರೆಗೆ ಊಟದ ವ್ಯವಸ್ಥೆಯಲ್ಲಿ ಭಾರತಕ್ಕೆ ಸ್ಥಾನ ಸಿಕ್ಕಿಲ್ಲ. ಆದುದರಿಂದ ಪಯಣಿಗನು ಮಾಂಸಹಾರಿ ಇರಲಿ, ಸಸ್ಯಾಹಾರಿ ಇರಲಿ, ಆ ಪೊಟ್ಟಣಗಳಲ್ಲಿ ತಣ್ಣನೆಯ ಸಸ್ಯೇತರಾಹಾರವನ್ನು ತುಂಬಿ ಕೊಡಲಾಗುತ್ತಿದೆ. ತನ್ನ ಹಸಿವನ್ನು ನೀಗಿಸಿಕೊಳ್ಳಲು ಒಂದು ಚೂರು ರೊಟ್ಟಿಯ ತುಣಕನ್ನಾಗಲಿ ಬೆಣ್ಣೆಯನ್ನಾಗಲಿ ಹೆಚ್ಚಿಗೆ ಪಡೆಯಲು ಪಯಣಿಗನು ಭಗೀರಥ ಪ್ರಯತ್ನ ಮಾಡಬೇಕಾಗುವುದು. (ಶುದ್ಧ ಸಸ್ಯಾಹಾರಿಗಳಿಗೂ ಬೇಕಾದ ಆಹಾರ ಒದಗಿಸುವಂತೆ ಭಾರತದ ನಿಲ್ದಾಣಗಳಲ್ಲಿ ಬಂದಿಳಿವ ವಿಮಾನ ವಾಹನದಲ್ಲಿ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಸೂಚಿಸಬಹುದು.

ವೇಗವಾಗಿ ಮಾಡುವ ಪ್ರಯಾಣದಲ್ಲಿ ಮನುಷ್ಯನನ್ನು ಸಂತೋಷಗೊಳಿಸುವ ಸಂಗತಿಯೆಂದರೆ ವೇಗ ಸಂವೇದನೆ. ಮೋಟಾರು ಇಲ್ಲವೆ ರೈಲಿನಲ್ಲಿ ಹೋಗುವಾಗ ಮನುಷ್ಯನು ಅದನ್ನು ಅಪೇಕ್ಷಿಸುತ್ತಾನೆ. ನರಹುಳುವೊಬ್ಬನು ಗಂಟೆಗೆ ೪೦, ೫೦, ೬೦, ಮೈಲು ಗಾಳಿಯಲ್ಲಿ ತೂರಿನುಗ್ಗಿ ಹೋಗುವುದು ತಾನು ಸ್ವಂತ ಕಾಲುಗಳಿಂದ ಮಾಡಲಾರದ ಕಾರ್ಯವೆನಿಸಿ ಅವನಿಗೊಂದು ವಿಧದ ಆನಂದ ಕೊಡುತ್ತದೆ. ಈ ಆನಂದ ಕೂಡ ಗಾಳಿ ಪಯಣದಲ್ಲಿಲ್ಲ. ವಿಮಾನವು ಬೇಕಾದರೆ ಗಂಟೆಗೆ ೪೦೦ ಮೈಲು ವೇಗದಿಂದ ಹೋಗುತ್ತಿರಲಿ, ಅಷ್ಟು ಎತ್ತರದಲ್ಲಿರುವುದರಿಂದ ಪಯಣಿಗನಿಗೆ ಕೆಳಗಿನ ನೆಲ, ಮಂದಗತಿಯ ಜಡಮೇಘಗಳು ಕೂರ್ಮವೇಗದಿಂದ ಸಾಗಿ ಹೋಗುವಂತೆ ಕಾಣಿಸುತ್ತದೆ. ಆದುದರಿಂದ ಮಾನವ ಬಯಸುವ ಕ್ಷಿಪ್ರಗತಿಯಲ್ಲಿ ಹೋಗುವ ಸಂತಸ ಕೂಡ ಅಲ್ಲಿ ಸಿಗದು.

ಈ ವಿಧದ ಪ್ರಯಾಣದ ತಾಂತ್ರಿಕ ಮುಖವನ್ನು ಅವಲೋಕಿಸಿದರೆ, ಅದು ಅಪಾರ ಪರಿಮಾಣದ ಪೆಟ್ರೋಲನ್ನು ಸ್ವಾಹಾಕರಿಸುತ್ತದೆಂದು ನಮಗೆ ತಿಳಿಯುತ್ತದೆ. ಜಗತ್ತಿನ ನಾನಾ ಭಾಗದ ಭೂಗರ್ಭದಿಂದ ಈ ಉರುವಲವನ್ನು ಪಡೆಯಬೇಕಾಗಿರುವುದರಿಂದ ಇದು ಸಿಕ್ಕುವ ಪರಿಮಾಣ ಅತ್ಯಲ್ಪ. ಇದರ ಸಂಗ್ರಹ ಕಡಿಮೆಯಾಗುತ್ತ ಹೋದಂತೆ ಬಳಕೆಗಾರನಿಗೆ ಉಳಿದ ಸಂಗ್ರಹಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿಕೊಳ್ಳಬೇಕೆಂಬ ಆಸೆ ಹೆಚ್ಚುತ್ತ ಹೋಗುತ್ತದೆ ಇದರಿಂದ ಲೋಭ, ಮತ್ಸರ, ದ್ವೇಷ, ಸಂಶಯಗಳಿಗೆ ಎಡೆಯುಂಟಾಗುವುದಲ್ಲದೆ ಇದರಿಂದ ಕಡೆಯಲ್ಲಿ ಭೌಗೋಲಿಕ ಸಂಗ್ರಾಮ ಸಂಭವಿಸಿದರೂ ಸಂಭವಿಸಬಹುದಾಗಿದೆ. ಆದುದರಿಂದ ಈ ಮಾರ್ಗದ ಪ್ರಯಾಣವನ್ನು ಮಿತಿಮೀರಿ ಹೆಚ್ಚಿಸಿದರೆ ನಮ್ಮ ನೆರೆಯ ರಾಷ್ಟ್ರಗಳೊಡನೆ ಅಹಿತಕರವಾದ ಸಂಬಂಧವಿಟ್ಟುಕೊಳ್ಳುವ ಸಂದರ್ಭವುಂಟಾಗುತ್ತದೆ.

ಇದರಿಂದ ಗಾಳಿಪಯಣವೇ ಬೇಡವೆಂದಂತಾಗಲಿಲ್ಲ. ಇದರಿಂದ ಕೇವಲ ಅದರ ನ್ಯೂನತೆಗಳು ಸ್ಪಷ್ಟವಾಗುತ್ತವೆ ಮತ್ತು ನಾವು ಬಹಳ ಎಚ್ಚರದಿಂದ ಅದನ್ನು ಬಳಸಬೇಕೆಂದು ಇದು ಎಚ್ಚರಿಸುತ್ತದೆ. ವಿಮಾನಯಾನದ ನ್ಯೂನತೆಗಳನ್ನು ತುಂಬಿಕೊಡಲು ಸಮಯದ ಉಳಿತಾಯ ಒಂದೇ ಸಾಲದು ನಮ್ಮ ಸೂಚನೆಯಂತೆ ಅದಕ್ಕೆ ಅನ್ವರ್ಥವಾದ ಹೆಸರೆಂದರೆ "ಗಾಳಿಸಾರಿಗೆ" ಅದು ಬಹುಶಃ ಅದರ ಸ್ಥಿತಿಯನ್ನು ಸರಿಯಾಗಿ ವರ್ಣಿಸುವುದೆಂದು ನಮ್ಮ ಮತ ಈ ದಿನಗಳಲ್ಲಿ ಮನುಷ್ಯನಿಗೆ ಬಹಳವಾಗಿ ಬೇಕಾದದ್ದು ಶ್ರಮ ಪರಿಹಾರ. ಗಾಳಿ ಪಯಣವು ಬಾಳಿನ ಹೊರೆಯನ್ನು ಹೆಚ್ಚಿಸುವುದು ಕಡಿಮೆ ಮಾಡುವುದಿಲ್ಲ (ಕರ್ಮವೀರ)

ತುಂಗಭದ್ರಾ ಅಣೆಕಟ್ಟು

ಬೆಂಗಳೂರಿನಲ್ಲಿ ಸರ್. ಯಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ ಮದ್ರಾಸ್ ಮತ್ತು ಹೈದರಾಬಾದ್ ಎಂಜನಿಯರ್ ಸಮಿತಿಯು ಅಣೆಕಟ್ಟನ್ನು ಸುಣ್ಣ ಇಟ್ಟಿಗೆಗಳಿಂದ (Lime surki-mortar) ಕಟ್ಟಲು ನಿಶ್ಚಯಿಸಿತು. ಹೈದರಾಬಾದಿನ ಈ ಅಭಿಪ್ರಾಯವನ್ನು ಮದ್ರಾಸ್ ಎಂಜನಿಯರರು ಸಮರ್ಥಿಸದೆ ಶಿಮೆಂಟು ಉಪಯೋಗಿಸಲು ಸೂಚಿಸಿದ್ದರು. ಈ ಇಬ್ಬರ ಜಗಳವನ್ನು ಸರ್. ಯಂ. ವಿಶ್ವೇಶ್ವರಯ್ಯನವರು ಬಗೆಹರಿಸಿ ತಾವುಕಟ್ಟಿದ ಮಾರೀಕಣಿವೆ, ಕೃಷ್ಣರಾಜಸಾಗರಗಳ ಉದಾಹರಣೆಗಳನ್ನು ಮುಂದಿಟ್ಟರು.

ಪಾಕಿಸ್ತಾನಕ್ಕೆ ಭಾರತದ ಮುಸಲ್ಮಾನರು ಬರುವುದು ಬೇಡ

ಪೂರ್ವಪಂಜಾಬದವರಲ್ಲದೆ ಭಾರತದ ಇನ್ನಾವ ಭಾಗದ ಮುಸಲ್ಮಾನರೂ ಬಂದು ನೆಲೆಸುವುದು ಬೇಡ ಎಂಬುದಾಗಿ ಅಲ್ಲಿನ ಪ್ರಧಾನರಾದ ಲಿಯಾಖತ ಅಲಿಖಾನರು ಭಾರತ ಸರ್ಕಾರಕ್ಕೆ ತಿಳಿಸಿರುವರೆಂಬುದಾಗಿ ಖಂಡಿತವಾಗಿ ಗೊತ್ತಾಗಿದೆ. ಪಾಕಿಸ್ತಾನದ ಸ್ಥಾಪನೆಗಾಗಿ ಭಾರತದ ಮುಸಲ್ಮಾನರು ಎಷ್ಟೋಗ ಲಾಟೆ ಎಬ್ಬಿಸಿದರು. ಈಗ ಅವರಿಗೇ ಬೀಗಮುದ್ರೆಯಾಯಿತು.

ಜುನಾಗಡ ಸಂಸ್ಥಾನ (ಜನಮತವನ್ನು ತೆಗೆದುಕೊಳ್ಳಬಹುದು)

ಕಾಠಿಯಾವಾಡದಲ್ಲಿರುವ ಜುನಾಗಡ ಸಂಸ್ಥಾನವು ತನಗೆ ೫೦೦ ಮೈಲಿದೂರದಲ್ಲಿರುವ ಪಾಕಿಸ್ತಾನವನ್ನು ಸೇರಿದನಂತರ ಕಾಠಿಯವಾಡದ ನೂರಾರು ಸಂಸ್ಥಾನಗಳವರಿಗೆ ವಿವಂಚನೆಯಾಗಿತ್ತು. ಅವರ ಭಯನಿವಾರಣೆಗೆ ಭಾರತ ಸರ್ಕಾರವು ಸೈನ್ಯವನ್ನು ಕಳುಹಿಸಿತು ಪಾಕಿಸ್ತಾನ ಸರಕಾರವು ಒಂದು ಹೇಳಿಕೆಕೊಟ್ಟು ಜನಮತವನ್ನು ತೆಗೆದುಕೊಳ್ಳುವ ಸಲಹೆಯ ಪರಿಶೀಲನೆಗೆ ತಾನು ಸಿದ್ಧವಿರುವದಾಗಿ ಸೂಚಿಸಿದೆ.

ಆಹಾರದ ಕ್ಷಾಮ ದೂರಾಯಿತು.

ಮದ್ರಾಸ್ ಪ್ರಾಂತದ ಧಾನ್ಯಸಂಗ್ರಹಕಾರ್ಯ ಮತ್ತು ಪರಪ್ರಾಂತಗಳಿಂದ ಧಾನ್ಯದ ಆಯಾತ ತೃಪ್ತಿಕರವಿದ್ದಕಾರಣ ಆಹಾರ ಕ್ಷಾಮವು ಹೋಗಿ ಶೀಘ್ರದಲ್ಲೇ ಹೆಚ್ಚು ದೊರೆಯಲಿದೆ.

ಮು॥ರಾ॥ ಹೊಸಪೇಟೆ—ಡಿ. ಮು. ಕೋರ್ಟಿನಲ್ಲಿ

O. S. 648/41 E. P. 139/47

ವಾದಿಗಳು Vs. **ಪ್ರತಿವಾದಿಗಳು**

(೧) ಸೊಪ್ಪಿ ಬಸಪ್ಪ (ಪೌತಿ)
(೨) ಸೊಪ್ಪಿ ಶೇಖರಪ್ಪ
(೩) ಸೊಪ್ಪಿ ಕೊಟ್ರಬಸಪ್ಪ
(೪) ಸೊನ್ನದ ಕೊಟ್ರಗೌಡ

(೧) ಹಿರೇನೀಲನಗೌಡ್ರ ಮುದಿಮಲ್ಲನಗೌಡ
(೨) ಹಿರೇನೀಲನಗೌಡ್ರ ಕೊಟ್ರಗೌಡ

ಸಾ. ಹೂವಿನಹಡಗಲಿ ಮತ್ತು ನಾಗತಿಬಸಾಪುರ ತಾ॥ ಹರಪನಹಳ್ಳಿ.

ಈ ನಂಬರಿನಲ್ಲಿ ಫೈನಲ್ ಡಿಕ್ರಿಯನ್ನು 2-3 ವಾದಿಗಳು 4 ನೆಯ ವಾದಿಗೆ ಟ್ರಾನ್ಸ್‌ಫರ್ ಮಾಡಿರುತ್ತಾರೆ. ಸದರಿ ಟ್ರಾನ್ಸ್‌ಫರ್ ಮುಂಜೂರು ಮಾಡುವುದಕ್ಕೂ, ಅಯ್ಕೆ ಅಸ್ತಿಗಳನ್ನು ಯಾಲಂ ಮಾಡಲಿಕ್ಕೂ 4 ನೆಯ ವಾದಿ E P. 139/47 ಯನ್ನು ದಾಖಲು ಮಾಡಿರುತ್ತಾರೆ. 7-11-47 ನೆಯ ತೇದಿ 11 ಘಂಟೆಗೆ ಕೋರ್ಟಿನಲ್ಲಿ ಹಾಜರಾಗಿ ತಕರಾರು ಇಡದಿದ್ದರೆ, 4 ನೆಯ ವಾದಿ ಕೇಳಿಕೊಂಡಂತೆ ಹುಕುಂ ಆಗಲಿರುವ ದೆಂದು ಪ್ರತಿವಾದಿಗಳಿಗೆ ಈ ಮೂಲಕ ತಿಳಿಸೋಣವಾಗಿದೆ.

ಹೊಸಪೇಟೆ
15—10—47

ಟಿ. ಯಸ್. ಕೃಷ್ಣರಾವು ಬಿ. ಎ.
ಪ್ಲೀಡರ್
ಟಿ. ರಂಗರಾವು ಎಲ್. ಎಲ್. ಬಿ.
ಅಡ್ವೊಕೇಟು
(4 ನೆಯ ವಾದಿ ವಕೀಲರು)

ಮೈಸೂರು ಕಾಂಗ್ರೆಸಿಗೆ ಅಪೂರ್ವ ವಿಜಯ

ಮೈಸೂರುದಿವಾನರಾದ ಸರ್ ಅ ಕಾ ಟು ರಾಮಸ್ವಾಮಿ ಮೊದಲಿಯಾರ್‌ರವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರನ್ನು ಬಿಡುಗಡೆಮಾಡಿ ಅಧ್ಯಕ್ಷರಾದ ಶ್ರೀ ಚಂಗಲರಾಯರೆಡ್ಡಿಯವರೊಡನೆ ಸಂಧಾನ ನಡೆಸಿ ಯಶಶ್ವಿಗಳಾದರು 9 ಜನ ಮಂತ್ರಿಗಳಲ್ಲಿ 6 ಜನರು ಕಾಂಗ್ರೆಸ್‌ನವರಿದ್ದು ಮುಖ್ಯಮಂತ್ರಿಯನ್ನು ಅವರೇ ಆರಿಸತಕ್ಕದ್ದು. ಶಾಸನಸಭೆಯ ಸದಸ್ಯರಿಂದಾರಿಸಲ್ಪಟ್ಟ ಸಮಿತಿಯು ಘಟನೆಯನ್ನು ರಚಿಸಿ ಅದು 1-7-48 ರಿಂದ ಜಾರಿಯಲ್ಲಿ ಬರಬೇಕು ಮೈಸೂರು ಮಹರಾಜರು ಇದಕ್ಕೆ ತಮ್ಮ ಒಪ್ಪಿಗೆ ಯಿತ್ತು, ರಾಜಕೀಯ ಕೈದಿಗಳನ್ನೆಲ್ಲಾ ಬಿಡಲು ಆಜ್ಞೆ ಇತ್ತಿರುವರು. ಇದೆಲ್ಲಾ ಕ್ಯಾಗಫಲ. ಇದಕ್ಕಾಗಿ ನಾವು ಮೈಸೂರು ಪ್ರಜೆಗಳನ್ನು ಅಭಿನಂದಿಸುತ್ತೇವೆ.

ನಡುಗಾಲ ಸರ್ಕಾರದಲ್ಲಿ ಶ್ರೀಗಳಾದ ಚಂಗಲ ರಾಯರೆಡ್ಡಿ, ಟಿ. ಸಿದ್ಧಲಿಂಗಯ್ಯ, ಎಚ್. ಸಿದ್ದಯ್ಯ, ಎಚ್. ಸಿ. ದಾಸಪ್ಪ ಚೆನ್ನಿಗರಾಮಯ್ಯ, ಕೆ. ಟಿ. ಭಾಷ್ಯಂ, ಮತ್ತು ಟಿ. ಸುಬ್ರಮಣ್ಯ ಇವರನ್ನು ಮಂತ್ರಿಗಳಾಗಿ ಕಾಂಗ್ರೆಸ್ ಚುನಾಯಿಸಿದೆ.

ತಾರಾನಾಥ ಆಯುರ್ವೇದ ಕಾಲೇಜು

ಗಾಂಧಿ ಜಯಂತಿಯ ವಾರವು ಇಲ್ಲಿನ ವಿದ್ಯಾರ್ಥಿ, ಉಪಾಧ್ಯಾಯ ವರ್ಗಗಗಳಿಂದ ಆಚರಿಸಲ್ಪಟ್ಟಿತಲ್ಲದೆ. ಸುತ್ತ ಮುತ್ತಲ ಗ್ರಾಮಾದಿಗಳಲ್ಲೂ ಅಂದರೆ ಸಂಗನಕಲ್ಲು ಕಪ್ಪಗಲ್ಲು ಸಿರಿವಾರಗಳಲ್ಲಿ-ಪ್ರಚಾರಕಾರ್ಯವಾಯಿತು.-ಈ ಎಲ್ಲಾ ಸ್ಥಳಗಳಲ್ಲಿ ಮಹಾತ್ಮಗಾಂಧಿಯವರ ತತ್ವಗಳ ಪ್ರತಿಪಾದನೆಯಾಗಿ ಸದ್ಯದ ಪರಿಸ್ಥಿತಿಯ ವಿವೇಚನೆಯಾಯಿತು.

ಹೊಸಪೇಟೆಯಲ್ಲಿ ಗಾಂಧಿಜಯಂತಿ.

ನಮ್ಮ ಸುದ್ದಿಗಾರರಿಂದ

೨ನೆಯ ದಿನಾಂಕ ಬೆಳಿಗ್ಗೆ ಪ್ರಭಾತಫೇರಿ. ೮ ಘಂಟೆ ಕಾಂಗ್ರೆಸ್ ಆಫೀಸ್ ಮೈದಾನದಲ್ಲಿ ಶ್ರೀ ಚಂದ್ರಮೌಳಿ (ಹರಿಜನ ವಿದ್ಯಾರ್ಥಿ)ಯಿಂದ ಧ್ವಜಾರೋಹಣವಾಯಿತು. ಸಾಯಂಕಾಲ ೫ ಘಂಟೆ ಕಾಂಗ್ರೆಸ್ ಆಫೀಸಿನಿಂದ ಗಾಂಧಿಜಿ ಭಾವಚಿತ್ರದ ಮೆರವಣಿಗೆ ಹೊರಟು ನಗರದಲ್ಲೆಲ್ಲಾ ಸುತ್ತಾಡಿ ರೇಡಿಯೋ ಮೈದಾನಕ್ಕೆ ಬಂದಿತು. ಅಲ್ಲಿ ಶ್ರೀ ಬೆಲ್ಲದ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಶ್ರೀ ಮೈದೂರು ತಿರುಮಲಾಚಾರ್ಯ, ಹುಬ್ಬಳ್ಳಿ ಗೋವಿಂದಾಚಾರ್ಯ ಮತ್ತಿಹಳ್ಳಿ ರಾಘವೇಂದ್ರರಾವು ವಿರುಪಾಕ್ಷಯ್ಯ ವೀರಭದ್ರಯ್ಯ ಚಂದ್ರಮೌಳಿಯವರ ಭಾಷಣಗಳಾದವು. ಅಧ್ಯಕ್ಷರ ಸಮಾರೋಪ ಭಾಷಣನಂತರ ಸಭೆ ಮುಕ್ತಾಯವಾಯಿತು. ಇದೇರೀತಿ Exmilitary association ನವರೂ, ಐ. ಯಸ್. ಆರ್. ಕಾಲೊನಿಯವರೂ ಗಾಂಧಿಜಯಂತಿಯನ್ನು ಆಚರಿಸಿದರು. ಕರ್ನಾಟಕ ಯುವಕ ಸಂಘದವರು ಸೂತ್ರಯಜ್ಞ ನಡೆಸಿದರು.

— ಮಾಗಳ —

೨-೧೦-೪೭ ನೇ ದಿವಸ ಮುಂಜಾನೆ ಪ್ರಭಾತ ಫೇರಿ, ಧ್ವಜವಂದನೆಯಾಯಿತು. ಗಾಂಧೀಜಿಯವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿಟ್ಟು ಊರ ಮುಖ್ಯಬೀದಿಗಳಲ್ಲಿ ಮೆರೆಯಿಸಲಾಯಿತು. ನಂತರ ಪೂಜಾರಿ ಕರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಲಂಕೆಪ್ಪನವರು ಗಾಂಧೀಜಿಯವರ ಜೀವನ ಚರಿತ್ರೆಯ ಬಗ್ಗೆ ಧರ್ಮಣ್ಣ, ರಾಮಪ್ಪ, ಗಾಂಧೀಜಿಯವರ ತತ್ವಗಳ ಬಗ್ಗೆ ಮಾತನಾಡಿದರು. ವಂದೇಮಾತರಂ ಗೀತೆಯೊಂದಿಗೆ ಸಭೆಯು ವಿಸರ್ಜನೆಯಾಯಿತು

೧-೧೦-೪೭ ನೇ ದಿನ ಚೆಲುವಾದಿ ಪಕ್ಕೀರಪ್ಪನವರ ಮುಖಂಡತ್ವದಲ್ಲಿ ಹರಿಜನರು ಊರ ಪ್ರಮುಖರ ಸಹಾಯದಿಂದ ಎಲ್ಲಾ ಹೋಟಲುಗಳಲ್ಲಿ ಪ್ರವೇಶಿಸಿದರು. ಯಾರೂ ಅಡ್ಡಿ, ಆತಂಕಗಳನ್ನು ಮಾಡಲಿಲ್ಲ.

— INJUSTICE —

D. L Gangadhara Chetty writes.

The just & legitimate demands of Rayalaseema are not met and much less thought of The proportion in the cabinet of Rayalaseemites as compared to Andhras, the selection to the keyposts i, e I. A. T. C. etc; are a few glaring wrongs out of many. The so called Sribag pact is only on the paper and circular's people being selfish are not prepared to honour their solemn agreement. Therefore a separate province for Rayalaseema is essential to preserve our entity. The present legislators were elected because they stood on congress ticket. The province question was not there. The legislators out of regard for the national organisation suppress their feelings and simply obey the mandate. Without a separate Provincial Congress Committee & a separate province, we cannot achive tanigible results and can never be enabled to stand on our own legs. We must strive towards that end and that is the only way.

ಹರಿಜನರ ಮತಾಂತರ

ಬೀದಾರಿನಲ್ಲಿರುವ ಹರಿಜನರನ್ನೆಲ್ಲಾ ಮತಾಂತರ ಗೊಳಿಸಲು ಹೈದರಾಬಾದು ನಿಜಾಮರು ಎರಡುಕೋಟಿ ರೂಪಾಯಿ ತೆಗೆದಿಟ್ಟಿರುವರೆಂದೂ ಈ ಕಾರಣ ಮಧ್ಯಪ್ರಾಂತದ ಸರ್ಕಾರವು ಗಡಿಯನ್ನು ಮುಚ್ಚಿರುವದೆಂದೂ ಗೊತ್ತಾಗಿದೆ.

ಗಾ ಧಿ ಜ ಯಂ ತಿ.

ಹ ರಿ ವಾ ಣ

ಇಲ್ಲಿ ೨ ನೆಯ ದಿನಾಂಕ ಗಾಂಧಿ ಜಯಂತಿಯು ವೈಭವದಿಂದಾಚರಿಸಲ್ಪಟ್ಟಿತು. ಭಾಷಾನ್ವಯ ಪ್ರಾಂತ ರಚನೆಯದಿನ ಶ್ರೀ ದೇವೇಂದ್ರ ಗೌಡರಧ್ಯಕ್ಷತೆಯಲ್ಲಿ ಸೇರಿ ಸ್ವೀಕೃತವಾಗಬೇಕಾದ ಮುಖ್ಯತೀರ್ಮಾನಗಳು ಅಂಗೀಕೃತವಾದವೆಂದು ಗೌರವ ಕಾರ್ಯದರ್ಶಿಗಳಾದ ಶ್ರೀ H. S ಈಶ್ವರಯ್ಯನವರು ತಿಳಿಸುತ್ತಾರೆ.

ಹ ಲು ವಾ ಗ ಲು

ಇಲ್ಲಿ ಗಾಂಧೀಜಯಂತಿ ಕಾರ್ಯಕ್ರಮಗಳು ಉತ್ಸಾಹಪೂರ್ವಕವಾಗಿ ನೆರವೇರಿದವು. ಪ್ರಭಾತ ಫೇರಿಯನಂತರ ಶ್ರೀ ಆಕಾರ್ಯಾಚಾರಿ ಶಿವರುದ್ರಪ್ಪನವರು ಧ್ವಜಾರೋಹಣಮಾಡಿದರು. ನೆರೆದ ಸಭಿಕರು ಘುಟೀಣರು ಪೋಲೀಸ್ ನವಕರರು ಧ್ವಜವಂದನೆಗೈದರು. ಶಾಲೆಯಲ್ಲಿ ಸೂತ್ರಯಜ್ಞವಾದನಂತರ ೧೦೧ ಎತ್ತುಗಳ ಅಲಂಕೃತ ರಥದಲ್ಲಿ ವಾದ್ಯವೈಭವದಿಂದ ಮಹಾತ್ಮರ ಭಾವಚಿತ್ರದ ಮೆರವಣಿಗೆಯು ಊರಬೀದಿಗಳಲ್ಲಿ ಸಾಗಿತು.

ಶ್ರೀ ಬಸವರೆಡ್ಡಿ (ಅರಕನಹಾಳು) ಶ್ರೀ ಎ. ಬಿ. ಆರ್. ಕೊಟ್ರಗೌಡ, ಶಿವಮುದ್ರಪ್ಪ, ಚಂದ್ರಪ್ಪ ಮಹಾತ್ಮರ ಧಾರ್ಮಿಕ ತತ್ವ ರಾಜನೀತಿ ಗ್ರಾಮೋದ್ಧಾರ ಪುನರ್ರಚನೆಯ ವೇಲೆ ಭಾಷಣಗಳಾದವು. ಸ್ಪರ್ಧೆಯಲ್ಲಿಗೆದ್ದ ಬಾಲಕರಿಗೆ ಬಹುಮಾನ ಬಡಮಕ್ಕಳಿಗೆ ಖಾದಿಟೋಪಿ ಹಂಚಲಾಯಿತು. ಆಭಾರಮನ್ನಣೆಯನಂತರ ಸಮಾವೇಶವು ಮುಗಿಯಿತು. ಅರಾತ್ರಿ ಸಂಗೀತ ವಿವಿಧ ವಿನೋದಗಳು ನಡೆದವು.

ಕು ಂ ಚೂ ರು

೨ ನೆಯ ದಿನಾಂಕ ಗಾಂಧೀಜಯಂತಿಯು ನಗರಸಂಕೀರ್ತನೆ, ಧ್ವಜವಂದನೆ, ಸಾರ್ವಜನಿಕ ಸಭೆಯಿಂದ ನೆರವೇರಿದ ಮೇಲೆ ಮಕ್ಕಳಿಗೆ ಫಲಾಹಾರ ಹಂಚಲಾಯಿತು.

ಹೊ ಳ ಲ ಗು ಂ ದ್ಡಿ

ಕರ್ನಾಟಕ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಜಡೆಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗಾಧಿವೇಶನದಿಂದ ಜರುಗಿತು. ಶ್ರೀ ವೀರೇಶ ಶಾಸ್ತ್ರಿಗಳು ಏಕೀಕರಣದ ವಿಷಯ ಭಾಷಣ ಮಾಡಿದನಂತರ ಸರ್ವತ್ರವಾಗಿ ಸ್ವೀಕೃತವಾಗಬೇಕಾದ 'ಏಕೀಕರಣವೇ ನಮ್ಮ ಗುರಿ' ನಮ್ಮ ಜನ್ಮಸಿದ್ಧ ಹಕ್ಕು ಆಂಧ್ರರ ಅಪಪ್ರಚಾರ ಖಂಡನೆಯ ತೀರ್ಮಾನಗಳು ಸ್ವೀಕೃತವಾದವು.

ನ ವ ಲಿ

ಪ್ರಭಾತಫೇರಿ ಧ್ವಜವಂದನೆಗಳನಂತರ 39 ಜೊತೆ ಎತ್ತುಗಳ ರಥದಲ್ಲಿ ಗಾಂಧೀಜಿ ಭಾವಚಿತ್ರದ ಮೆರವಣಿಗೆಯು ಊರಬೀದಿಗಳಲ್ಲಿ ಸಾಗಿತು. ಶ್ರೀ ಯನ್. ಪಿ. ಮರುಳಸಿದ್ದನಗೌಡರಧ್ಯಕ್ಷತೆಯಲ್ಲಿ ವೀರಯ್ಯ, ಪಂಚಾಕ್ಷರಿಗೌಡ ಮತ್ತು ಕೊಟ್ರಯ್ಯನವರ ಭಾಷಣಗಳಾಗಿ ಗಾಂಧೀಜಿ ಜೀವಿತ ಚರಿತ್ರೆಯ ಮಹಾತ್ಮ್ಯವು ವಿವೃತವಾಯಿತು. ಶ್ರೀ ಉಮಾಪತಿ ಗೌಡರಿಂದ ಮಂಗಳವಾಗಿ ಸಮಾವೇಶವು ಕೊನೆಯಾಯಿತು.

ಬಳ್ಳಾರಿ ಕಲೆಕ್ಟರವರ ಪ್ರಕಟನೆ

ಅಕ್ಕಿಯ ಹೊರತಾದ ಇತರ ಧಾನ್ಯಾದಿಗಳ ಸಂಗ್ರಹಕ್ಕೆ 1947 ನೆಯ ಸೆಪ್ಟಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಒಂದು ಇಂಪೀರಿಯಲ್ ಮಾಣಕ್ಕೆ 0-8-0 ಪ್ರಕಾರ ಕೊಡಲು ಮದ್ರಾಸ್ ಸರ್ಕಾರದವರು ನಿಶ್ಚಯಿಸಿರುತ್ತಾರೆ. ಈ ಹಣಕೇಳಲು ಅವಧಿಯಿಟ್ಟಿಲ್ಲ. 1 ರೂ ನಿಂದ 99 ರವರಿಗೆ ಫಿರ್ಕಾಸಪ್ಲೈ ಆಫೀಸರ್, 100 ರಿಂದ 999 ವರಿಗೆ ತಾಲೂಕಾ ತಹಶೀಲ್ದಾರು 1000/- ಗಿಂತ ಹೆಚ್ಚಿಗೆ ಕೊಡಲು ಜಿಲ್ಲಾ ಸಪ್ಲೈ ಆಫೀಸರವರು ಅಧಿಕಾರ ಹೊಂದಿರುವರು.

ಕೆ. ಯನ್. ಅನಂತರಾಮನ್
ಕಲೆಕ್ಟರ್.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ. ಸ್ಥಾಪಿತ : 1939

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ನಮ್ಮ ಶಾಖೆಗಳು :—

೧. **ಬಳ್ಳಾರಿ** – ಹರಪನಹಳ್ಳಿ, ಕೊಟ್ಟೂರು, ಹೊಸಪೇಟೆ, ಕಂಪ್ಲಿ, ರಾಯದುರ್ಗ, ಆದವಾನಿ ಮತ್ತು ಬಳ್ಳಾರಿ.

೨. **ಅನಂತಪುರ** – ತಿಮ್ಮನಚೆರ್ಲ (ಗುಂತಕಲ್ಲು) ಪಾಮಿಡಿ, ಉರವಕೊಂಡ, ಧರ್ಮವರಂ, ಹಿಂದೂಪುರ, ಗುತ್ತಿ ಕದಿರಿ ಮತ್ತು ಅನಂತಪುರ.

೩. **ಕರ್ನೂಲು** – ಪತ್ತಿಕೊಂಡ ಮತ್ತು ಕರ್ನೂಲು. ೪ **ಕಡಪ** – ರಾಜಂಪೇಟೆ ಮತ್ತು ಕಡಪ.

೫. **ಚಿತ್ತೂರು** – ಮದನಪಲ್ಲಿ, ವಾಯುಲ್ಪಾಡು, ತಿರುಪತಿ, ನಗರಿ ಮತ್ತು ಚಿತ್ತೂರು.

ಬೆಂಗಳೂರು ಮತ್ತು ಮದ್ರಾಸ್ ನಗರಗಳಲ್ಲೂ ನಮ್ಮ ಶಾಖೆಗಳಿವೆ.

ಬ್ಯಾಂಕಿಂಗ್ ಮತ್ತು ವ್ಯಾಪಾರೀ ಸಂಬಂಧದ ಎಲ್ಲಾ ವ್ಯವಹಾರಗಳೂ ನಡೆಯುತ್ತವೆ.

— ನಮ್ಮ ಡೈರೆಕ್ಟರುಗಳು —

ಬಳ್ಳಾರಿ ಜಿಲ್ಲೆ – ಶ್ರೀ ಹೆಚ್. ಲಿಂಗಾರೆಡ್ಡಿ ಬಿ ಎ. ಬಿ. ಎಲ್. ಅಡ್ವೊಕೇಟ್, ಬಳ್ಳಾರಿ.
,, ,, ಡಿ. ವೇಣುಗೋಪಾಲಾಚಾರಿ ಬಿ. ಎ. ಬಿ. ಎಲ್. ಬಳ್ಳಾರಿ.
,, ,, ಮೂಲಂಗಿ ಗೂಳಪ್ಪನವರು, ಮರ್ಚೆಂಟ್, ಬಳ್ಳಾರಿ.
,, ,, ಜಿ. ಪದ್ಮನಾಭನ್, ಮರ್ಚೆಂಟ್, ಬಳ್ಳಾರಿ.
,, ,, ಮೊಲಗವೇಲಿ ಲಕ್ಷ್ಮೀರೆಡ್ಡಿ ಬ್ಯಾಂಕರ್, ಲ್ಯಾಂಡ್‌ಲಾರ್ಡ್, ಮೊಲಗವೇಲಿ.
ಅನಂತಪುರ ಜಿಲ್ಲೆ – ಶ್ರೀ ಎ. ರಾಯಪ್ಪನವರು ಎಂ. ಎಲ್. ಎ.
,, ,, ಮೂಲಾ ಲಕ್ಷ್ಮೀನಾರಾಯಣಸ್ವಾಮಿ, ತಾಡಪತ್ರಿ.
ಚಿತ್ತೂರು ಜಿಲ್ಲೆ – ಶ್ರೀ ಡಬ್ಲ್ಯೂ. ಶಿ. ಚಂಗಲರಾಯನಾಯಿಡು ಲ್ಯಾಂಡ್‌ಲಾರ್ಡ್, ಚಿತ್ತೂರು.
,, ,, ಆರ್. ಕೃಷ್ಣಶಾಸ್ತ್ರಿ ಬಿ ಎ ಬಿ ಎಲ್. ಅಡ್ವೊಕೇಟ್, ಮದನಪಲ್ಲಿ
ಕಡಪ ಜಿಲ್ಲೆ – ಶ್ರೀ ಜೆ. ರಾಮಚಂದ್ರರಾವು ಬಿ. ಎ. ಬಿ. ಎಲ್. ಅಡ್ವೊಕೇಟ್, ಕಡಪ.
ಕರ್ನೂಲು ಜಿಲ್ಲೆ – ಶ್ರೀ ರಾವುಬಹದ್ದೂರ್ ಶ್ರೀ ಬಿ ಪಿ. ಶೇಷರೆಡ್ಡಿ ಲ್ಯಾಂಡ್‌ಲಾರ್ಡ್, ಬೇತಂಚರ್ಲ.

ಬಿ. ವಿ ಶೇಷಗಿರಿರಾವು ಬಿ ಕಾಂ — ಕಾರ್ಯದರ್ಶಿ.

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5-0-0	One Year	5 0—0
6 ತಿಂಗಳಿಗೆ	3-0-0	Six months	3—0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months.	

To
SRI.....
.....
.....

Printed at Krishna Press Bellary QH No. B 17 FOR (O.H. No. B-5.)
Edited & Published by T. B. KESHAVA RAO

ಜೈಹಿಂದ್ Reg. No. M. 4746

ಸಪ್ತಗಿರಿ

— ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ —

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ. 0—2—0

ವರ್ಷ ೧೦ ಸಂಚಿಕೆ ೪೧ ಬಳ್ಳಾರಿ ಅಕ್ಟೋಬರು ೨೭ ಸೋಮವಾರ ೧೯೪೭ ಸಂಪಾದಕ ಮತ್ತು ಪ್ರಕಾಶಕ ಟಿ. ಬಿ. ಕೇಶವರಾವ್.

ಕಾಳಿನ ಸಂಗ್ರಹ.

ಸರ್ಕಾರದ ಅಭಿಪ್ರಾಯ

ಕಳೆದವರ್ಷ 1,20,000 ಟೀಲ ಧಾನ್ಯಾದಿಗಳ ಸಂಗ್ರಹವಾಗಿ, ಅದರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಭಾಗವನ್ನು ರೇಷನ್ ಇಲ್ಲದ ಹಳ್ಳಿಗಳ ಪ್ರದೇಶಗಳಲ್ಲಿ ಹಂಚಲಾಯಿತು. ಈ ವರ್ಷ 3 ಲಕ್ಷ ಟೀಲ ಧಾನ್ಯ ಸಂಗ್ರಹವಾದಲ್ಲಿ ರೇಷ್ಣ ಪ್ರದೇಶಗಳನ್ನೂ, ಸೀದಾಪದ್ಧತಿ ಜಾರಿಯಿಲ್ಲದ ಪ್ರದೇಶಗಳನ್ನೂ ನಾವು ಪೂರ್ಣವಾಗಿ ತೃಪ್ತಿಗೊಳಿಸಬಹುದು. ಕಾಳಿನಸಂಗ್ರಹ ಕಾರ್ಯದಲ್ಲಿ ನಾವು ಪೂರ್ಣವಾಗಿ ಮಗ್ನರಾಗಿದ್ದಿಲ್ಲ ವೆಂದು ನನ್ನ ಅಭಿಪ್ರಾಯ. ಹಳ್ಳಿಗಳಲ್ಲಿನ ಸೀದಾ ಪದ್ಧತಿಯು ನಿಲ್ಲಿಸಲ್ಪಡುವುದಾದರೆ, ರೈತರು ಸಂಗ್ರಹ ಕ್ಕಾಗಿ ಕಾಳು ಕೊಡುವುದಿಲ್ಲವೆಂಬುದು ಸ್ವಾಭಾವಿಕವಾಗಿದೆ. ಹೀಗಾದರೆ ಸೀದಾ ಪದ್ಧತಿಯು ಜಾರಿಯಲ್ಲಿರುವ 3 ಪಟ್ಟಣಗಳಿಗೆ 5000 ಜನ ಸಂಖೆಗಿಂತಲೂ ಹೆಚ್ಚಿಗಿರುವ 10 ಪಂಚಾಯ್ತಿಗಳಿಗೆ, 1000 ಕ್ಕಿಂತಲೂ ಹೆಚ್ಚಿನ ಜನ ಸಂಖೆಯ ಹಳ್ಳಿಗಳಿಗೆ—ಆಹಾರ ಪದಾರ್ಥಗಳನ್ನು ಹೇಗೆ ಒದಗಿಸಬೇಕೆಂಬ ಪ್ರಶ್ನೆ ಯುದ್ಭವಿಸುತ್ತದೆ. ಭೂಮಿಗಳಿಲ್ಲದ ಕೂಲಿಕಾರರಿಗೆ ಗೃಹೋದ್ಯೋಗಗಳಲ್ಲಿ ನಿರತರಾಗಿರುವ ನೆಯ್ಕಾರರಂಥವರಿಗೆ ಧಾನ್ಯಾದಿಗಳನ್ನೆಲ್ಲಿಂದ ತರಬೇಕು? ಕಾಳಿನ ಸಂಗ್ರಹದ ಕಾರ್ಯವು ಕಷ್ಟತಮವಾದುದೆಂಬುದು ನಿಸ್ಸಂಶಯವಾದ ವಿಷಯ. ಯುದ್ಧ ಪೂರ್ವದಲ್ಲಿ ನೂರಾರು ವರ್ತಕರಿಂದಾಗುವ ಕಾರ್ಯವು 5 ಜನ ಗೆಜೆಟೆಡ್ ಅಧಿಕಾರಿಗಳು ಮತ್ತು ಕೆಲವು ಗುಮಾಸ್ತರಿಂದಾಗಬೇಕಾಗಿದೆ. ಕಾಳಿನ ಸಂಗ್ರಹದಲ್ಲಿ ತಮಗುಂಟಾಗುವ ನಷ್ಟವನ್ನು ಸರ್ಕಾರದವರು ಭರಿಸಬೇಕೆಂದು ಸೆಂಟ್ರಲ್ ಕೋ ಆಪರೇಟಿವ್ ಸ್ಟೋರ್ಸದವರು ಭರವಸೆಯನ್ನು ಕೇಳಿದ್ದರು. — ಹೋದ ವರ್ಷ ಸಬ್ ಡಿಪೋಗಳ ಸಂಖೆಯು 8 ರಿಂದ 40 ಕ್ಕೆ ಏರಿಸಲಾಯಿತು.

ಇದರ ಜೊತೆಗೆ ಈ ವರ್ಷ ಗ್ರಾಮಾಧಿಕಾರಿಗಳ ನೇಕರು ಕಾಳಿನ ಸಂಗ್ರಹದ ಉದ್ದೇಶ ಏಜಂಟರಾಗಿ ನಿಯಮಿಸಲ್ಪಟ್ಟಿರುವರು. ಹೋದ ವರ್ಷದ ಸುಗ್ಗಿಯಲ್ಲಿ ಸರ್ಕಾರದವರು ನಿಗದಿಮಾಡಿದ ಬೆಲೆಯು—ಬಾಜಾರು ಧಾರಣೆಗಿಂತ ಬಹಳ ಹೆಚ್ಚಿಗಿದ್ದಿತು.

ಹೋದ ವರ್ಷ ಹೆಚ್ಚಿನ ಏಜಂಟರನ್ನು, ಹೆಚ್ಚು ಹಣ ಸಾಕಷ್ಟು ಚೀಲ ಕಳುಹಿಸಿದ್ದರೆ ಹೋದ ವರ್ಷ ನಮ್ಮ ಪರಿಸ್ಥಿತಿಯು ಇನ್ನೂ ಚನ್ನಾಗಿ ಇರುತಿತ್ತು. ಈ ವರ್ಷ ಈ ಪದ್ಧತಿಯನ್ನು ಸಿಸ್ತಿನಿಂದ ಜೋರಾಗಿ ಅನುಸರಿಸುತ್ತೇವೆ.

19-10-47 ಕೆ. ಯನ್. ಅನಂತರಾಮನ್
ಬಳ್ಳಾರಿ ಕಲೆಕ್ಟರ್

ರೈತರ ಅಭಿಪ್ರಾಯ

ಮರಿಬಸವನಗೌಡರ ಹೇಳಿಕೆ

ಮದ್ರಾಸ್ ಸರ್ಕಾರದವರ ಕಾಳಿನ ಸಂಗ್ರಹ ವಿಧಾನವು ಅತ್ಯಂತ ದೋಷಯುಕ್ತವಾದ ಕಾರಣ ಅದು ಕುಸಿದುಬಿದ್ದಿತಲ್ಲದೆ ಅದರಿಂದ ಭೂ ಸ್ವಾಮಿಗಳಲ್ಲದ ರೈತರಿಗೆ ಕೂಲಿಕಾರರಿಗೆ ಬೇರೆ ಉದ್ಯೋಗಗಳಿಂದ ಜೀವಿಸುತ್ತಿರುವವರಿಗೆ ಆಹಾರ ಧಾನ್ಯಗಳು ದೊರೆಯದೆ ಬಹಳ ಕಷ್ಟವಾಯಿತು. ಅನೇಕರು ಉಪವಾಸದಿಂದ ಕಾಲ ಕಳೆಯಬೇಕಾಯಿತು. ಜಿಲ್ಲೆಯಲ್ಲಿ 1,20,000 ಧಾನ್ಯದ ಚೀಲಗಳ ಸಂಗ್ರಹವಾಯಿತೆಂತಲೂ, 60,000 ಕ್ವಿಂತಲೂ ಹೆಚ್ಚಿಗೆ ಹಳ್ಳಿಗಳಲ್ಲಿ ವಿನಿಯೋಗವಾಯ್ತೆಂತಲೂ ಕಲೆಕ್ಟರವರು ಹೇಳುತ್ತಾರೆ. ಇರಲಿ. ಇದನ್ನು ನಿಜವೆಂದು ನಂಬೋಣ 60-ಸಾವಿರ ಚೀಲಗಳ ಕಾಳನ್ನು ಹಳ್ಳಿಗಳಲ್ಲಿ ಡಿಪೋಗಳ ಮೂಲಕ ಹಂಚಿದ್ದಾರೆಯೇ? ಎಂದು ಸ್ಪಷ್ಟವಾಗಿ ಒಂದು ಪ್ರಶ್ನೆ ಹಾಕುತ್ತೇವೆ. ಅನೇಕ ಡಿಪೋಗಳಿಗೆ ತಿಂಗಳು ಗಟ್ಟಲೆ ಕಾಳು ಒದಗಿಸಲಿಕ್ಕಾಗಲಿಲ್ಲವೆಂದು ಸೆಂಟ್ರಲ್ ಸ್ಟೋರ್ಸದ ಅಧ್ಯಕ್ಷರೇ ಹೇಳಿದ್ದಾರೆ. ಅಲ್ಲದೆ ಹಂಚುವ ವಿಧಾನದ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಮತ್ತು ಡಿಪೋದವರು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರದಂತೆ ನಿರ್ಬಂಧಿಸಲು ಕಲೆಕ್ಟರವರು ಏನು ಮಾಡಿದರು? ಮತ್ತು ಏನು ಮಾಡುವರಿದ್ದಾರೆ? ಕಾಳಿಲ್ಲದ ಅನೇಕ ಪ್ರದೇಶಗಳಿಂದ ಆಹಾರ ಧಾನ್ಯಗಳನ್ನೂ ಸಾಗಿಸಿದೆಂದು ಟೆಲಿಗ್ರಾಂಗಳನ್ನು ಕೊಟ್ಟರೂ ಅಧಿಕಾರಿಗಳು "ರುಂ" ಎಂದಿಲ್ಲ ಜಿಲ್ಲೆಯ ಮೂರು ಮುನಿಸಿಪಲ್ ಟೌನ್‌ಗಳಲ್ಲಿ ಮಾತ್ರ ಸೀದಾ ಪದ್ಧತಿ ಜಾರಿ ಇದೆ. (Statutory Rationing) ಬಳ್ಳಾರಿ ಆದವಾನಿ, ಹೊಸಪೇಟೆಗಳಲ್ಲಿ ಮಾತ್ರ ಧಾನ್ಯ ಒದಗಿಸಲು ಅಧಿಕಾರಿಗಳು ಬದ್ಧರಿರುವರು. ಅವರೆ ಉಳಿದ ಪ್ರದೇಶಗಳಲ್ಲಿ ಶಾಸನ ಬದ್ಧವಾದ ಸೀದಾ ಪದ್ಧತಿ ಜಾರಿಯಲ್ಲಿಲ್ಲದ ಕಾರಣ (only informal rationing) ಅಲ್ಲಿಗೆ ಕಾಳನ್ನು ಕಳುಹಿಸದಿದ್ದರೂ ಒದಗಿಸದಿದ್ದರೂ ಅಧಿಕಾರಿಗಳು ದೋಷಾರ್ಹರಾಗುವುದಿಲ್ಲ ಹಳ್ಳಿಯ ರೈತರೇ ಬಡವರ ಉದರಂಭರಣೆಯ ಭಾರವನ್ನು ವಹಿಸಬೇಕಾದ ಹೊತ್ತು ಬಂದಿದೆ. **ಕಾಳನ್ನು ಒದಗಿಸಲು ಶಕ್ತಿಯಿಲ್ಲದಾಗ, ಭರವಸೆ ಕೊಡದಿರುವಾಗ ಕಾಳಿನ ಸಂಗ್ರಹಕ್ಕೇಕೆ ಬರಬೇಕು?**

ಮದ್ರಾಸ್ ಪ್ರಾಂತದ 16 ಜಿಲ್ಲಾ ಕಲೆಕ್ಟರುಗಳು ಹಳ್ಳಿಯ ರೇಷನಿಂಗು ಬೇಡವೆಂದು ಅಭಿಪ್ರಾಯ ಪಟ್ಟರೂ-ಸರ್ಕಾರದವರು ಈ ಪದ್ಧತಿಗೇಕೆ ಅಂಟಿಕೊಂಡಿರುವರೋ ನನಗೆ ತಿಳಿಯದಾಗಿದೆ. ಪ್ರಜೆಗಳ ಅಭಿಪ್ರಾಯ ವಿರೋಧವಾಗಿ ವರ್ತಿಸಿದಲ್ಲಿ ಅದನ್ನು ಪ್ರಜಾ ಸರ್ಕಾರವೆಂದು ಏಕೆ ಕರೆಯಬೇಕು?

ಈ ಕಾರಣ 9-11-47 ನಡೆಯುವ ಬಳ್ಳಾರಿ ಜಿಲ್ಲಾ ರೈತ ಮಹಾಸಭೆಗೆ ಕುರುಗೋಡಿಗೆ ರೈತ ಪ್ರತಿನಿಧಿಗಳು ಬಂದು ತಮ್ಮ ನಿಶ್ಚಿತಾಭಿಪ್ರಾಯಗಳನ್ನು ಸೂಚಿಸಿ ಸರ್ಕಾರಕ್ಕೆ ತೀರ್ಮಾನ ಕಳಿಸಲು ಸಹಾಯಮಾಡಬೇಕೆಂದು ಕೋರುತ್ತೇನೆ

ಪುರಸಭಾಧ್ಯಕ್ಷರು

ಬಳ್ಳಾರಿ:— ಬಳ್ಳಾರಿಯ ಪ್ರಸಿದ್ಧ ವರ್ತಕರಾದ ಶ್ರೀ ಗುಂಡ್ಲೂರು ಗಂಗಪ್ಪನವರು ಸರ್ವಾನುಮತದಿಂದ 20 ನೆಯ ದಿನಾಂಕ ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಆದವಾನಿ:— ಶ್ರೀ ರಾಯಚೂಟಿ ಸುಬ್ಬಯ್ಯನವರು ಪುರಸಭಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಗ್ರಾಮ ಉದ್ಯೋಗಗಳಾವವು?

ಗ್ರಾಮೋದ್ಯೋಗ ಇಲ್ಲವೆ ಗೃಹದ್ಯೋಗಗಳಲ್ಲಿ ಎಂಥ ಎಂಥ ಉದ್ಯೋಗಗಳು ಸಮಾವಿಷ್ಟವಾಗುವ ವೆಂದು ಸರ್ವಸಾಮಾನ್ಯವಾಗಿ ಜನರಿಗೆ ಗೊತ್ತಿದ್ದರೂ ಸರ್ಕಾರದವರು ತಮ್ಮ ಆದೇಶಗಳಲ್ಲಿ ಈ ಶಬ್ದಗಳನ್ನು ಬಳಸುತ್ತಿರುವುದರಿಂದ ಇಂಥ ಉದ್ಯೋಗಗಳ ವಿಶಿಷ್ಟ ಸ್ವರೂಪದ ಬಗ್ಗೆ ಸ್ಪಷ್ಟ ಕಲ್ಪನೆಯಿರುವದು ಒಳ್ಳೆದು. ಇದೇ ಉದ್ದೇಶವನ್ನಿಟ್ಟುಕೊಂಡು ಕೆಳಗಿನ ಟಿಪ್ಪಣಿಯನ್ನು ಬರೆಯಲಾಗಿದೆ.

ಕೆಳಗಿನ ಎಲ್ಲ ಇಲ್ಲವೆ ಬಹುತರ ಎಲ್ಲ ನಿಯಮಗಳಿಗೆ ಅನುಗುಣವಾಗಿರುವ ಉದ್ಯೋಗಗಳಿಗೆ ಗ್ರಾಮೋದ್ಯೋಗಗಳೆನ್ನಬಹುದು.

ಆ. ಗ್ರಾಮೊದ್ಯೋಗಗಳು

೧) ಹಳ್ಳಿಗಳಿಗೆ ಅತ್ಯವಶ್ಯವಾಗಿ ಬೇಕಾಗುವ ಸಾಮಾನುಗಳನ್ನು ಹಳ್ಳಿಗಳಲ್ಲಿಯೇ ತಯಾರಿಸುವ ಉದ್ಯೋಗಗಳು.

೨) ಹಳ್ಳಿಗರಿಗೆ ಸುಲಭ ಸಾಧ್ಯವಾದ ತಯಾರಿಕೆ ಪದ್ಧತಿಯನ್ನು ಉಪಯೋಗಿಸುವ ಉದ್ಯೋಗಗಳು.

೩) ಉದ್ಯೋಗದಲ್ಲಿ ತೊಡಗಿದ ಹಳ್ಳಿಗಳ ಆರ್ಥಿಕ ಶಕ್ತಿಯಿಂದ ದೊರೆಯಬಹುದಾದಂಥ ಧನ ಸಾಕರ್ಯಗಳನ್ನು ಬಳಸುವ ಉದ್ಯೋಗಗಳು.

೪) ಸ್ಥಾನಿಕ ಕಚ್ಚಾ ಪದಾರ್ಥಗಳನ್ನು ಉಪಯೋಗಿಸುವ ಉದ್ಯೋಗಗಳು

೫) ಮನುಷ್ಯ ಇಲ್ಲವೆ ಪ್ರಾಣಿಗಳ ಶಕ್ತಿಯ ಮೇಲೆ ನಡೆಯುತ್ತಿದ್ದವುಗಳು

೬) ಸವಿೂಪದ ಇಲ್ಲವೆ ಸ್ಥಾನಿಕ ಪೇಟೆಗಳ ಬೇಡಿಕೆಯನ್ನಷ್ಟೇ ಪೂರೈಸುವಂತಹವು.

೭) ಕೂಲಿಕಾರರ ಸ್ಥಿತ್ಯಂತರ ಇಲ್ಲವೆ ನಿರುದ್ಯೋಗಕ್ಕೆ ಕಾರಣವಾಗದಂಥವು

ಮೇಲಿನ ಕೆಲವು ಉದ್ಯೋಗಗಳಿಗೆ ಅನೇಕ ಕೂಲಿಕಾರರ ನೆರವು ಬೇಕಾಗಬಹುದು. ಕೂಲಿಕಾರರಿಗೆ ದಿನಗೂಲಿ ಕೊಡಬಹುದು ಅಥವಾ ಬಂದ ಲಾಭದಲ್ಲಿ ಪಾಲು ಕೊಡಬಹುದು. ಇಂಥ ಬೇರೆ ಬೇರೆ ಉದ್ಯೋಗಗಳಲ್ಲಿ ಕೂಲಿಕಾರರ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇರಬಹುದು

ಉದಾಹರಣೆ—ಎಣ್ಣೆ ತೆಗೆಯುವ ನೇಯುವ, ಚರ್ಮ ಹದಗೊಳಿಸುವ ಬಡಿಗೆತನದ, ಕಮ್ಮಾರಿಕೆಯ ಉದ್ಯೋಗಗಳು.

ಗೃಹೋದ್ಯೋಗಗಳು

ಎಷ್ಟೋ ಪೂರ್ಣಾವಧಿ ಉದ್ಯೋಗಗಳಿಗೆ ಕಾರ್ಖಾನೆಗಳಿಗೆ ಬೇಕಾಗುವಂಥ ಕಟ್ಟಡ ಅದರಲ್ಲೂ ಯಂತ್ರೋಪಕರಣಗಳನ್ನಿರಿಸಲು ವಿವಿಧ ಇಲ್ಲವೆ ವಿಶೇಷ ವ್ಯವಸ್ಥೆ ಬೇಕಾಗುವದಿಲ್ಲ. ಇಂಥವುಗಳನ್ನು ಉದ್ಯೋಗಸ್ಥರು ತಮ್ಮ ಗೃಹದಲ್ಲಿಯೇ ಇಲ್ಲವೆ ಗುಡಿಸಲಿನಲ್ಲಿಯೇ ಪ್ರಾರಂಭಿಸಬಹುದು. ಉದಾಹರಣೆ:- ಪತ್ತಾರ ಕೆಲಸ, ಹೊಲಿಗೆಯ ಕೆಲಸ, ಕೆಲವುಗಳನ್ನು ಮಾಡುವದು ಇತ್ಯಾದಿ.

ಕುಟುಂಬ ಉದ್ಯೋಗಗಳು

ಇವುಗಳಲ್ಲಿ ಮುಖ್ಯವಾಗಿ ಮನೆಯ ಕುಟುಂಬದವರೆ ತಮ್ಮ ಬಿಡುವಿನಲ್ಲಿ ಸಾಗಿಸುವಂಥ ಉದ್ಯೋಗಗಳು ಸೇರುವವು. ಉದಾ: ನೂಲುವದು; ಹಣ್ಣುಗಳನ್ನು ಕಾಯ್ದಿರಿಸುವದು ಜೇನು ಸಾಕುವದು, ಹೊಲಿಗೆಯ ಕೆಲಸ, ಜರದೆ ಕೆಲಸ.

ಮೇಲೆ ಹೇಳಲ್ಪಟ್ಟ ವರ್ಗಗಳಲ್ಲಿಯ ಯಾವದೆ ಉದ್ಯೋಗಕ್ಕೆ ಅಥವಾ ವರ್ಗಗಳಿಗೆ ಆಯಾ ವರ್ಗದವರು ಧನ ಸಹಾಯ ಸಲ್ಲಿಸಬಹುದು. ಇಲ್ಲವೆ ಆ ಉದ್ಯೋಗದಲ್ಲಿ ತೊಡಗಿದವರು ಸಹಕಾರದಿಂದ ಧನ ಕೂಡಿಸಿಕೊಳ್ಳಬಹುದು.

ಜೆ. ಸಿ. ಕುಮಾರಪ್ಪ

ನಮ್ಮ ಪೋಷಕರು

ಶ್ರೀ ಕೊಂ. ವೀರಭದ್ರಪ್ಪನವರು,

ಚಿಂತಕುಂಟಿ.

194

Some Suggestions to
The Bellary Cloth Merchants' Association.

1) Please notify in the board outside your office the working hours and when the secretary or any one authorised by the Ass'n, is available for securing cloth supply for the village dealers, who should not be made to wait in this costly place.

2) The Secretary or any one authorised, should not arbitrarily allot whatever cloth out of the stock and ask the clerk to give supply chits to the respective wholesalers & then ask the villagers to accept what is given. The better and more appreciable method will be to write supply chits in consultation with the purchasers and supply the saleable cloth in villages.

3) Quick supply should be the motto. Unnecessary harassment & needless expenditure to which the village dealer is put to very often leaves much bitterness which will be detrimental to the future interests of merchants

4) If the Secretary is absent from the station, some other member authorised by the Assn. should be available for service & supply.

5) Though this work is said to be honorary and since the Merchants' association has undertaken this responsible job, it should be their duty to treat villagers courteously and assure supply expeditiously.

6) The Assn. must notify and inform the dealers the controlled and decontrolled mill cloth and it should not get mixed up in the supply.

ಬಳ್ಳಾರಿ ಬಟ್ಟೆ ವ್ಯಾಪಾರಿ ಸಂಘಕ್ಕೆ ಸಲಹೆಗಳು

(1) ನಿಮ್ಮ ಕಾರ್ಯಾಲಯವು ಯಾವಾಗ ತೆರೆದಿರುತ್ತೆ ಕಾರ್ಯದರ್ಶಿಗಳಾಗಲಿ ಅಥವಾ ಕಮಿಟಿಯಿಂದ ಅಧಿಕಾರ ಹೊಂದಿದವರಾಗಲಿ ಯಾವ ಕಾಲಕ್ಕೆ ಬಟ್ಟೆ ಕೊಡಿಸಲು ಸಿಗುತ್ತಾರೆಂಬುದನ್ನು ಹೊರಗೆ ಬೋರ್ಡಿನಲ್ಲಿ ಹಾಕಬೇಕು. ಹಳ್ಳಿಗಳಿಂದ ಬಂದು ಕಾರ್ಯದರ್ಶಿಗಳಿಗಾಗಿ ದಿನಗಟ್ಲೆ ಖರ್ಚಿಟ್ಟುಕೊಂಡು ಕಾಯುವಂತಾಗಬಾರದು.

(2) ಟಿಕ್ಸ್‌ಟಾಯಿಲ್ ಆಫೀಸಿನಿಂದ ಇಂತಿಷ್ಟು ಗಜಗಳ ಪರ್ಮಿಟ್ ಪಡೆದು ಬಂದ ನಂತರ ಕಾರ್ಯದರ್ಶಿಗಳು ತಮ್ಮ ಮನಸ್ಸಿಗೆ ಬಂದ ಬಟ್ಟೆಯನ್ನು ಅಲಾಟ್‌ಮಾಡಿ ಗುಮಾಸ್ತರು ಸಂಬಂಧಿಸಿದಂಗಡಿಗಳಿಗೆ ಚೀಟಿ ಕೊಟ್ಟು, ಕೊಟ್ಟ ಬಟ್ಟೆಯನ್ನು ಸ್ವೀಕರಿಸಬೇಕೆಂದು ಹೇಳುವ ಪದ್ಧತಿಯು ಹೋಗಬೇಕು. ಹಳ್ಳಿಯ ಡೀಲರ್‌ಗಳಿಗೆ ಸ್ಟಾಕ್ ಇರುವ ಮಾಲು ತಿಳಿಸಿ ಆ ಸ್ಟಾಕಿನಲ್ಲಿ ಅವರ ಒಪ್ಪಿಗೆಯಿಂದ ಹಳ್ಳಿಯಲ್ಲಿ ಖರ್ಚಾಗುವ ಮಾಲು ಕೊಡಬೇಕು.

(3) ಈಗ ಬಾ, ನಾಳೆ ಬಾ ಎಂದು ಹೇಳದೆ ಸಾಧ್ಯವಾದಷ್ಟು ಮಟ್ಟಿಗೆ ಜಾಗ್ರತೆಯಾಗಿ ಹಳ್ಳಿಗರಿಗೆ ಮಾಲು ಕೊಟ್ಟು ಕಳುಹಿಸುವ ಸೌಕರ್ಯ ಕೊಡಬೇಕು.

(4) ಕಾರ್ಯದರ್ಶಿಗಳು ಊರಲಿಲ್ಲದಿದ್ದರೆ ಕಮಿಟಿಯ ಮತ್ತೋರ್ವ ಸದಸ್ಯರು ಹಳ್ಳಿಗರನ್ನು ಕಾಯಿಸದೆ ಕೆಲಸಮಾಡಿ ಕೊಡಬೇಕು

(5) ವ್ಯಾಪಾರೀ ಸಂಘದವರು, ಬಟ್ಟೆಗಳ ಹಂಚುವಿಕೆಯ ಗುರುತರವಾದ ಜವಾಬ್ದಾರಿಯನ್ನು ವಹಿಸಿರುವ ಕಾರಣ ನಗರದಲ್ಲೂ, ಹಳ್ಳಿಗಳಲ್ಲೂ ಯಾವ ವಿಧವಾದ ಕಂಪ್ಲೇಂಟ್ ಬರದಂತೆ ಬಂದವರಿಗೆ ವಳ್ಳೆಯ ಮಾತಾಡಿ ಕೆಲಸಮಾಡಿ ಕೊಡುವದು ಧರ್ಮವಾಗಿದೆ.

(6) ಮಿಲ್ ಬಟ್ಟೆಗಳಲ್ಲಿ ಕಂಟ್ರೋಲ್ ಇರುವದು ಇಲ್ಲದಿರುವುದನ್ನು ಹಳ್ಳಿ ಡೀಲರ್‌ಗಳಿಗೆ ತಿಳಿಸಬೇಕು

Supplement to Nava Bharat. Dated 20—10—47

ಕಿಡಿಗೇಡಿ ಜಗದಲ್ಲಿ ಒಳಿತು.

ಕಳೆದ ಕೆಲವು ದಿನಗಳಲ್ಲಿ ಕಳಿಗಿನ ಎರಡು ಸಂಗತಿಗಳು ನಡೆದವು. ಆ ಯೆರಡೂ ಮುಸಲ್ಮಾನರ ಹೃದಯದ ಮೂಲಕ ಸಜ್ಜನಿಕೆ ಪ್ರಕಾಶಿಸುವುದನ್ನು ತೋರಿಸಿಕೊಡುವಂಥವಿದ್ದವು. ಒಳ್ಳೆಯವರ ಹಿಂದು ಮತ್ತು ಶೀಖರಲ್ಲಿಯೂ ಅಂತಹ ಬಹಳ ಸತ್ಕಾರ್ಯಮಾಡಿದವರನ್ನು ನಿಃಸ್ಸಂದೇಹವಾಗಿ ಕಾಣಬಹುದು. ಅಂತಹ ಕೆಲಸಗಳು ಮಾನವ ಸ್ವಭಾವದ ಮೇಲ್ಮೈಯನ್ನು ಪುನಃ ಪಡೆಯಲು ಸಾಧನಗಳಾಗಿವೆ ಮತ್ತು ನಮ್ಮ ನೆರೆಯವರಿಗೆ ಹಿಡಿದ ಹುಚ್ಚು ಬೇಗ ಹೊರಟು ಹೋಗುತ್ತದೆಂಬ ನಂಬಿಗೆಗೆ ಆಧಾರಗಳಾಗಿವೆ.

ಆಸ್ತಿಯೆಲ್ಲವನ್ನು ಕಳೆದುಕೊಂಡ ದಿಲ್ಲಿಯ ಒಬ್ಬ ಮುಸಲ್ಮಾನ ಪ್ರೊಫೆಸರನು ನನಗೆ ಸಿಕ್ಕಿದ. ಅವನ ಅತ್ಯಂತ ಆಸೆಯ ದ್ರವ್ಯಗಳು, ಪುಸ್ತಕಗಳು, ಅಪೂರ್ಣವಾದ ಕೈಯ್ಯೋಲೆ ಬರಹ, ಅವನ ಇತೀ ಬಾಳಿನ ಕಾರ್ಯ ಎಲ್ಲವೂ ಹಾಳಾಗಿ ಹೋಗಿದ್ದವು. ನಾನು ಅವನಿಗೆ ಸಹಾನುಭೂತಿ ತೋರಿಸಹೋದೆ. ಆಗ ಅವನೆಂದ "ನಾನು ಯಾರನ್ನೂ ದೂರುವುದಿಲ್ಲ. ಅವರಿಗೆ ಹುಚ್ಚು ಹಿಡಿದಿದೆ. ಆದುದರಿಂದ ಅವರಿಗೆ ಕಾವೇನು ಮಾಡುವೆವೆಂಬುದರ ಅರಿವಿಲ್ಲ ನನ್ನ ಹೃದಯವನ್ನು ನಾನು ನೋಡಿಕೊಳ್ಳುವಲ್ಲಿ ಅಲ್ಲಿ ಕಹಿಯ ಕುರುಹೆಲ್ಲೂ ಕಂಡು ಬರಲಿಲ್ಲ." ಈ ಕಡೆಯ ಮಾತು ನನ್ನ ಮನಸ್ಸನ್ನು ಕರಗಿಸಿತು. ಅದು ಅವನು ತನ್ನ ಹೃದಯ ಕುಹರದಲ್ಲಿ ಹಣುಕಿ ನೋಡಿ ಸಂದಿಗೊಂದಿಯೊಂದನ್ನೂ ಬಿಡದೆ ಚೆನ್ನಾಗಿ ಪರೀಕ್ಷಿಸಿ ಎಲ್ಲೋ ಸ್ವಲ್ಪ ಕಹಿಯಿದೆ ಎಂದು ತನಗಿದ್ದ ಸಂಶಯವು ಇಲ್ಲವೆಂದು ಕಂಡು ಬಂದು ತನಗೇ ಆಶ್ಚರ್ಯವಾದುದನ್ನು ಹೇಳುವಂತಿತ್ತು. ಇದಕ್ಕಾಗಿ ಅವನು ತನ್ನ ಒಳ್ಳೆಯತನವನ್ನು ಸಾಧಿಸಲಿಲ್ಲ. ಹಳೆಯ ಜನಗಳು ಯಾವುದಕ್ಕೆ ದೇವಪ್ರಸಾದವೆನ್ನುವರೋ ಅದೇ ಅದು

ದಿಲ್ಲಿಯ ಕಾಫಿಗೃಹವೊಂದರಲ್ಲಿ ಅಪರಿಚಿತ ಶೀಖನೊಬ್ಬನನ್ನು ನನ್ನ ಗೆಳೆಯನೊಬ್ಬ ಭೆಟ್ಟಿಯಾಗಿ ಮಾತಾಡುವ ಪ್ರಸಂಗ ಉಂಟಾದಾಗ ಅವನಿಗೆ ಅವನು ಈ ಕಥೆಯನ್ನು ಹೇಳಿದ, "ಆಗಷ್ಟು ೧೪ ಇಲ್ಲವೆ ೧೫ ರಲ್ಲಿ ಅವನು ಲಾಹೋರಲ್ಲಿಯ ತನ್ನ ಮನೆಯಲ್ಲಿ ವಾಸಿಸುತ್ತಿದ್ದನು. ಇಸ್ಪೀಟಾಡಲೆಂದು ಅವನು ಎದುರುವ್ಯನೆಯ ಮುಸಲ್ಮಾನನಿದ್ದಲ್ಲಿಗೆ ಹೋದನು. ಆಡುತ್ತಿರುವಾಗ ರಸ್ತೆಯಲ್ಲಿ ಒಂದು ಜನಸಂದಣಿ ಕೂಡಿತು. ಆದರೆ ಅವರು ಕಾರ್ಯ ಪ್ರವೃತ್ತರಾಗುವ ಮೊದಲೆ ಶೀಖನು ಓಡಿಹೋಗಿ ತನ್ನ ಮನೆಯೊಳಗೆ ನಿಂತು ಬಾಗಿಲು ಹಾಕಿಕೊಂಡು ಕಿಟಿಕಿಯ ಮೂಲಕ ಮುಸಲ್ಮಾನ ತಂಡದತ್ತ ಗುಂಡುಹಾರಿಸತೊಡಗಿದ. ಕೆಲವೇ ಕಾಲದಲ್ಲಿ ಅವನಲ್ಲಿದ್ದ ಗುಂಡು ಮದ್ದು ತೀರಿಹೋಗಿ ಅವನ ಮನೆಯ ಬಾಗಿಲೊಡೆದು ಒಳನುಗ್ಗಲು ಕ್ರುದ್ಧ ಮುಸಲ್ಮಾನರು ಪ್ರಯತ್ನಿಸಿ ಜಯಶೀಲರಾದರು. ಆದರೆ ಅಷ್ಟು ಹೊತ್ತಿನೊಳಗೆ ಅವನು ಮುಸಲ್ಮಾನರತ್ತ ಗುಂಡುಹಾರಿಸುತ್ತಿದ್ದರೂ ಅವನ ಪಕ್ಕದ ಮನೆಯ ಮುಸಲ್ಮಾನರು ಅವನ ಮನೆಯ ಗೋಡೆಯಲ್ಲೊಂದು ತೂತನ್ನು ಅವಸರವಿಂದ ಕೊರೆದು, ತನ್ಮೂಲಕ ಆಶೀಖನ ತಂಗಿಯನ್ನು ಹೊರ ಸಾಗಿಸಿ ಅವಳಿಗೆ ಮುಸಲ್ಮಾನ ಉಡುಪನ್ನು ಉಡಿಸಿ, ಅವಳನ್ನು ತಪ್ಪಿಸಿಕೊಂಡು ಬಂದ ಅವಳಣ್ಣನೊಡನೆ ಗಾಡಿಯಲ್ಲಿ ಕೂರಿಸಿಕೊಂಡು ಲಾಹೋರಿಗೆ ಸ್ವಲ್ಪದೂರದಲ್ಲಿದ್ದ ರೇಲ್ವೆ ನಿಲ್ದಾಣಕ್ಕೊಯ್ದು ದಿಲ್ಲಿಗೆ ಹೋಗಲು ರೈಲುಹತ್ತಿಸಿಬಿಟ್ಟರು. ಉಳಿದೆಲ್ಲರಂತೆ ಆ ಶೀಖ ಅಣ್ಣ ತಂಗಿಯರಾದರೂ ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದರೂ ಅವರ ನೆರೆಯ ಮುಸಲ್ಮಾನರು ಜಾತೀಯಭಾವನೆಗಿಂತಲೂ ನೆರೆಹೊರೆಯುವರ ಪ್ರೀತಿಯೇ ಹೆಚ್ಚೆಂಬುದನ್ನು ನಂಬಿ ಮಾಡಿದ ಧೀರಕಾರ್ಯದಿಂದ ಅವರ ಪ್ರಾಣರಕ್ಷಿಸಲ್ಪಟ್ಟಿತು.

—ಹೊರೇಸ್ ಅಲೆಗ್ಸಾಂಡರ್,

ಹೊಸಪೇಟೆ ಡಿ॥ ಮುಂ॥ ಕೋರ್ಟಿನಲ್ಲಿ

O. P. 18/47.

ಅರ್ಜಿದಾರ:- M. ಪಳನಿಯಪ್ಪ,
ತಂದೆ—ಮರುದುಮುತ್ತುಪಿಳ್ಳೈ. ಹೊಸಪೇಟೆ.

ಅರ್ಜಿದಾರನ ಲೇಟು ತಂದೆ ಮರುದುಮುತ್ತು ಪಿಳ್ಳೆ ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿಯಲ್ಲಿ ಮಾಡಿದ (ಎಂಡೊವೆಮೆಂಟ್ ಲಾಭ ಸಹಿತ ಪಾಲಿಸಿ ನಂಬರು 172401, ಪಾಲಿಸಿವೊತ್ತ ರೂ. 2000/- ಎರಡು ಸಾವಿರ ರೂಪಾಯಿಕ್ಕೆ) ಇನ್‌ಶೂರೆನ್ಸ್ ಪಾಲಿಸಿಹಣ ರೂ. 2690/- ಪಡೆಯುವದಕ್ಕೆ ಸಕ್ಸೆಷನ್ ಸರ್ಟಿಫಿಕೇಟಿಗಾಗಿ ಅರ್ಜಿ ಇಟ್ಟಿರುತ್ತಾನೆ. ತಕರಾರು ಇದ್ದವರು ಖುದ್ದಾಗಿಯಾಗಲಿ, ವಕೀಲರ ದ್ವಾರವಾಗಲಿ 27-10-47 ನೆಯ ತೇದಿ ಹಗಲು 11 ಗಂಟೆಗೆ ಕೋರ್ಟಿನಲ್ಲಿ ಹಾಜರಾಗಬೇಕು.

ಹೊಸಪೇಟೆ
16-10-47.

ಎ. ಆರ್. ಕೃಷ್ಣರಾವು,
ಅರ್ಜಿದಾರರ ವಕೀಲರು.

ಉದ್ವೇಜಕ ನಿದರ್ಶನ

ಹೆಸರಿನಿಂದ ಹಿಂದಿ ಮಾತೃಭಾಷೆಯಾಗಿ ತೋರುವ ಪತ್ರಕರ್ತನೊಬ್ಬರು ಇಂಗ್ಲೀಷಿನಲ್ಲಿ ಹೀಗೆ ಬರೆದಿದ್ದಾನೆ.

" ಇಲ್ಲಿಂದ ಪಾಕಿಸ್ತಾನಕ್ಕೆ ತೆರಳದಂತೆ ಮಾಡಲು, ಮುಸಲ್ಮಾನರನ್ನು ಸೋದರಭಾವದಿಂದ ನಡೆಸಿಕೊಂಡು ಅವರ ಸುರಕ್ಷಿತತೆಯನ್ನು ಖಾತ್ರಿ ಮಾಡಿಕೊಡಬೇಕೆಂದು ಮೇಲಿಂದ ಮೇಲೆ ಮಾಡಲಾಗುತ್ತಿರುವ ನಿಮ್ಮ ಬಿನ್ನಹಕ್ಕೆ ಸಂಬಂಧಿಸಿದ ನಿದರ್ಶನವಿದು ಒಂದು ಚಳಿಯ ದಿನ ಒಬ್ಬ ನಡೆದು ಹೋಗುತ್ತಿದ್ದನು ಆಗ ದಾರಿಯಲ್ಲಿ ಧಂಡಿಯಿಂದ ಸೆಟೆದುಹೋದ ಒಂದು ಹಾವನ್ನು ಕಂಡನು. ಅದಕ್ಕೆ ಕನಿಕರ ಪಟ್ಟು ಅವನು ಅದನ್ನು ಬೆಚ್ಚಗಿಡುವುದರ ಸಲುವಾಗಿ ತನ್ನ ಕಿಸಿಯೊಳಗಿಟ್ಟುಕೊಂಡನು. ಆ ಶಾಖದಿಂದ ಹಾವೆಚ್ಚತ್ತಿತು. ಎಚ್ಚರಾದ ಮರುನಿಮಿಷದಲ್ಲಿ ಅದು ಮಾಡಿದ್ದೆಂದರೆ, ತನ್ನ ರಕ್ಷಕನ ಮೈಯಲ್ಲಿ ತನ್ನ ವಿಷದಂತವನ್ನು ಚುಚ್ಚಿ ಅವನನ್ನು ಕೊಲ್ಲುವ ಕಾರ್ಯವನ್ನು"

ಕೋಪವು ಈ ಪತ್ರಕರ್ತನನ್ನು ಇತಂಹ ಉದ್ವೇಜಕ ನಿದರ್ಶನವನ್ನು ಕೊಡುವಂತೆ ಪ್ರೇರಿಸಿದೆ ಎಷ್ಟೇ ಹೀನನಾಗಿರಲಿ, ಒಬ್ಬ ಮನುಷ್ಯನನ್ನು ಹಾವಿಗೆ ಹೋಲಿಸಿ ಆ ಬಗ್ಗೆ ಅವನಿಗೆ ಅಮಾನುಷ ಪ್ರತೀಕಾರ ಮಾಡುವದನ್ನು ಸಮರ್ಥಿಸಿಕೊಳ್ಳುವುದು ಖಂಡಿತವಾಗಿ ಹೀನ ಕೃತ್ಯವೇಸರಿ.ಯಾವುದೋ ಒಂದು ಧರ್ಮದವರಾದ ಕೆಲವು ಇಲ್ಲವೆ ಹಲವು ಜನರ ತಪ್ಪಿಗಾಗಿ ಕೋಟಿಗಟ್ಟಲೆ ಮಾನವ ಜಂತುಗಳನ್ನು ನಿಕೃಷ್ಟರೆಂದು ನಿಂದಿಸುವುದು ಹುಚ್ಚಿನ ಉತ್ತುಂಗ ಶಿಖರವೆಂದು ನನಗೆನಿಸುತ್ತದೆ. ನಾನು ಅನಾಗರಿಕ ಅಂಧ ಶ್ರದ್ಧೆಯ ಆಳುಗಳಾದ ಮುಸಲ್ಮಾನರು ಇದೇ ನಿದರ್ಶನವನ್ನು ಹಿಂದುಗಳಿಗೆ ಅನ್ವಯಿಸಿದ್ದನ್ನು ಬಲ್ಲೆನೆಂಬುದನ್ನು ಪತ್ರಕರ್ತನು ನೆನಪಿಟ್ಟುಕೊಳ್ಳತಕ್ಕದ್ದು. ಯಾವ ಹಿಂದುವೂ ಹಾವೆನಿಸಿಕೊಳ್ಳಲು ಅಪೇಕ್ಷಿಸನು.

ಒಬ್ಬನನ್ನು ಸೋದರನಂತೆ ನಡೆಸಿಕೊಳ್ಳಬೇಕೆಂದಾಕ್ಷಣ ಅವನು ಅಪ್ರಾಮಾಣಿಕನೆಂದು ಸಿದ್ಧವಾಗಿದ್ದರೂ ಅವನಲ್ಲಿ ನಂಬಿಗೆಯಿಡಬೇಕೆಂದಂತಾಗುವದಿಲ್ಲ ಅವನು ವಿಶ್ವಾಸ ಘಾತಕನಾದನೆಂಬ ಹೆದರಿಕೆಯಿಂದ ಅವನನ್ನು ಸಕುಟುಂಬ ಶಿರಚ್ಛೇದ ಮಾಡುವುದು ಹೇಡಿತನವಲ್ಲವೆ? ಒಂದು ಸಮಾಜವಿದೆಯೊನ್ನೋಣ. ಅಲ್ಲಿ ಪ್ರತಿಯೊಬ್ಬನೂ ತನ್ನ ನೆರೆಯವರ ಗುಣ ನಿರ್ಣಯಿಸುವ ಹಕ್ಕುಳ್ಳವನೆನ್ನೋಣ. ಆಗ ಎಂತಹ ಪರಿಣಾಮ ಉಂಟಾದೀತು? ಭಾರತದ ಕೆಲ ಭಾಗಗಳಲ್ಲಿ ನಾವಿಂದು ಅಂತಹ ಪರಿಸ್ಥಿತಿಗೇ ಬಂದಿಳಿದಿರುವೆವು.

ಕೊನೆಯದಾಗಿ ಉರಗಕುಲದ ಪರವಾಗಿ ನಿಂತು ಮನುಷ್ಯರಲ್ಲಿಯ ಒಂದು ಸಾಮಾನ್ಯ ತಪ್ಪನ್ನು ತಿದ್ದುತ್ತೇನೆ. ಅದೆಂದರೆ ಹಾವುಗಳಲ್ಲಿ ನೂರಕ್ಕೆ ಎಂಭತ್ತು ಸಂಪೂರ್ಣ ನಿರಪಾಯಕಾರಿಗಳೂ ಪ್ರಕೃತಿಯಲ್ಲಿ ಉಪಯೋಗಕ್ಕೆ ಬರುವ ಕೆಲಸ ಮಾಡುವಂಥವೂ ಆಗಿರುತ್ತವೆಯೆಂಬುದನ್ನು ಮನುಷ್ಯರು ತಿಳಿಯಬೇಕು.

ಹೊಸದಿಲ್ಲಿ, ಮೊ. ಕ. ಗಾಂಧಿ.

— ಕಾಶ್ಮೀರದ ಫಜೀತಿ —

ಕಾಶ್ಮೀರಕ್ಕೆ ಆಹಾರ ಪದಾರ್ಥಗಳು, ಪೆಟ್ರೋಲ್, ಬಟ್ಟೆ ಬರದಂತೆ ಪಾಕಿಸ್ತಾನ ಸರಕಾರವು ಪಂಜಾಬಿನ ರಾವಲ್ಪಿಂಡಿ ಮುಖಾಂತರ ಬಂಧನಗಳನ್ನೊಡ್ಡಿದೆಯೆಂದೂ ಮುಸ್ಲಿಂಲೀಗಿನ ಕೊಲೆ ಸುಲಿಗೆ ಅತ್ಯಾಚಾರಗಳು ಕಾಶ್ಮೀರದ ಸರಹದ್ದು ಪ್ರದೇಶದಲ್ಲಿ ಅವ್ಯಾಹತವಾಗಿ ಸಾಗಿದೆಯೆಂತಲೂ ಗೊತ್ತಾಗಿದೆ.

ಕಾಶ್ಮೀರದಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ರಾಮಚಂದ್ರಕಾಕರು ದೇಶದ ಹೊರಗೆ ಹೋಗಿ ದೇಶಕ್ಕೆ ವಿಘಾತಕವಾದ ಪ್ರಚಾರ ನಡೆಸುವರೆಂಬ ಭಯದ ಮೇಲೆ ಅವರನ್ನು ಹೊರಗೆ ಬಿಡದಂತೆ ಮನೆಯಲ್ಲಿಯೇ ನಿರ್ಬಂಧಿಸಲಾಗಿದೆ. ಕಾಕರು ಕಾಶ್ಮೀರದ ಮುಖಂಡರಾದ ಶೇಖ ಅಬ್ದುಲ್ಲಾರನ್ನು ಬಂಧಿಸಿ ದಬ್ಬಾಳಿಕೆಯ ಸತ್ರ ಹೂಡಿ ಪಂಡಿತ ಜವಹರಲಾಲರನ್ನು ಕೂಡ ಕಾಶ್ಮೀರದೊಳಗೆ ಬಾರದಂತೆ ನಿರ್ಬಂಧಿಸಿದ್ದರು.

ಜುನಾಘಡ ಸಂಸ್ಥಾನದ ಸರಹದ್ದಿನ ಹೊರಗೆ ಭಾರತ ಸರ್ಕಾರವು ಸೈನ್ಯವನ್ನು ಕಳುಹಿಸಿ ಅಲ್ಲಿ ಜನರಿಗೆ ರಕ್ಷಣೆಯನ್ನು ಕೊಟ್ಟಿದೆ.

ಗುಡೇಕೋಟೆ ಫಿರ್ಕಾ ರೈತರ ಪರಿಷತ್ತು 8-11-47 ರ ದಿನ ಕೂಡ್ಲಿಗಿ ತಾಲೂಕು ಶಿಡೇಗಲ್ಲಿನಲ್ಲಿ ಕೂಡಲಿದೆ.

— ಬಸವಿಯರನ್ನು ಬಿಡುವುದಿಲ್ಲ — ಮದುವೆ ಮಾಡಿಕೊಡುತ್ತೇವೆ.

ಬಳ್ಳಾರಿ ತಾಲೂಕು ಕಗ್ಗಲ್ಲಿನ ವಂಟೆದುರುಗಪ್ಪನೂ, ಬೈಲೂರಿನ ಬಾತಪ್ಪ ಮತ್ತು ಹನುಮಕ್ಕ ಇವರೂ ತಮ್ಮ ಮನೆಗಳಲ್ಲಿ ಚಿಕ್ಕಹುಡಿಗಿಯರನ್ನು ಬಸವಿಗಳಾಗಿ ಬಿಟ್ಟರೆಂದೂ ಇ. ಪಿ. ಕೋ 372-373 ಕಲಂ ಪ್ರಕಾರಕ್ಕೆ ಅವರಿಗೆ ಶಿಕ್ಷೆವಿಧಿಸಬೇಕೆಂದೂ ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳು ಪೋಲೀಸರಿಗೆ ವರದಿ ಮಾಡಿದ್ದರು. ಪೋಲೀಸರು ವಿಚಾರಣೆ ನಡೆಸಿದಮೇಲೆ ತಮ್ಮ ಮಕ್ಕಳನ್ನು ಮೂರು ತಿಂಗಳೊಳಗಾಗಿ ಮದುವೆ ಮಾಡಿಕೋಡುತ್ತೇವೆಂದು ಬರಹ ಮೂಲಕಕೊಟ್ಟು ಬಂಧನದಿಂದ ಪಾರಾದರು. 18 ವರ್ಷದೊಳಗಿರುವ ಹುಡುಗಿಯರನ್ನು ಬಸವಿಯರನ್ನಾಗಿ ಮುದ್ರೆವತ್ತಿಸಿದರೆ ಸದ್ಯದ ಉಪಯೋಗಕ್ಕಾಗಲಿ, ಭವಿಷ್ಯಕ್ಕಾಗಲಿ ಅವರನ್ನು ದುರ್ನೀತಿಯ ವರ್ತನೆಗೆ ಬಳಸುವ ಪುರಾವೆಯು ದೊರೆತಲ್ಲಿ, ಯಾವ ಕುಲದವರಾದರೂ ಶಿಕ್ಷಾರ್ಹರಾಗುವರು. ಮದ್ರಾಸ್ ಪ್ರಾಂತದಲ್ಲಿ ಇನ್ನುಮೇಲೆ ದೇವದಾಸಿ ಯಾ ಬಸವಿ ವೃತ್ತಿಯನ್ನೇ ಪ್ರತಿಬಂಧಿಸಲು ಕಾಯ್ದೆಯಾಗಲಿದೆ. ಸಂಬಂಧಿಸಿದ ಸರ್ವರೂ ಇದರಿಂದ ಎಚ್ಚರರಾಗಬೇಕು

ಬಳ್ಳಾರಿಜಿಲ್ಲಾ ರೈತರ ಮಹಾಸಭೆ.

ಬಳ್ಳಾರಿ ಜಿಲ್ಲಾ ರೈತರ ಮಹಾಸಭೆಯು ಬಳ್ಳಾರಿ ತಾಲೂಕು ಕುರುಗೋಡು ಗ್ರಾಮದಲ್ಲಿ 9-11-47 ನೆಯ ದಿನಾಂಕ ಮಧ್ಯಾಹ್ನ 12 ರಿಂದ 4 ರವರೆಗೆ ನಡೆಸಲು ನಿಶ್ಚಯಿಸಲಾಗಿದೆ. ಜಿಲ್ಲೆಯ ಸುಪ್ರಶಿದ್ಧ ಕಾಂಗ್ರೆಸ್ ಧುರೀಣರಾದ ಶ್ರೀ ಟೇಕೂರು ಸುಬ್ರಹ್ಮಣ್ಯಂರವರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿರುವರು. ಮದ್ರಾಸ್ ಸರ್ಕಾರದ ಕಾಳಿನ ಸಂಗ್ರಹದ ಧೋರಣದಿಂದ ರೈತರಿಗೂ ಬಡವರಿಗೂ ಸಂಭವಿಸುತ್ತಿರುವ ಕಷ್ಟಗಳನ್ನು ಚರ್ಚಿಸಿ ನಿಶ್ಚಿತ ತೀರ್ಮಾನಗಳನ್ನು ಸರ್ಕಾರಕ್ಕೆ ಕಳುಹಿಸಬೇಕಾಗಿದೆ. ಬಳ್ಳಾರಿ ಹೊಸಪೇಟೆಗಳಿಂದ ಬಸ್ ಸೌಕರ್ಯವುಂಟು. ಎಲ್ಲಾ ಭಾಗಗಳಿಂದ ರೈತ ಪ್ರತಿನಿಧಿಗಳು ಬರಲುಕೋರಿಕೆ.

ಎನ್. ಮರಿಬಸವನಗೌಡ – ಸ್ವಾಗತಸಮಿತಿ ಅಧ್ಯಕ್ಷ

ಕೆ. ರಾಮಚಂದ್ರಪ್ಪ, ಟಿ. ಹೆಬ್ಬಾಳಪ್ಪ } ಸ್ವಾಗತಸಮಿತಿ ಕಾರ್ಯದರ್ಶಿಗಳು.

ಶಾಂತಿಸ್ಥಾಪನೆಯ ಕಾರ್ಯದಲ್ಲಿ ಪೋಲೀಸರೂ-ಸಹಾಯಮಾಡುವರು.

ಬಳ್ಳಾರಿ ಜಿಲ್ಲಾ ಪೋಲೀಸ್ ಸೂಪರಿಂಟರಾದ ಶ್ರೀ ಹೋಮ್ಸ್‌ರವರು ಶ್ರೀ ಕೇಶವರಾಯರಿಗೆ ಹೀಗೆ ಬರೆದಿರುವರು "ನೀವು ಸೂಚಿಸಿದ ಕೆಲಘಟನೆಗಳಲ್ಲಿ ಹರಿಜನ ಹಿಂದುಗಳಲ್ಲಿ ಶಾಂತಿಯೇರ್ಪಡಿಸಿದುದನ್ನು ಕೇಳಿ ನನಗೆ ಸಂತೋಷವಾಗಿದೆ. ಈ ಶಾಂತಿಯ ಕಾರ್ಯದಲ್ಲಿ ಸಹಾಯಮಾಡಲು ನನ್ನ ಕೆಳ ಅಧಿಕಾರಿಗಳಿಗೆ ಸೂಚಿಸಿರುತ್ತೇನೆ."

ಸಂದರ್ಭ ಕಳೆದುಹೋಯಿತು.

ಬ್ರಿಟಿಶರ ಮುಖ್ಯ ಆಹಾರ ಮಾಂಸವು. ಯುದ್ಧವು ಪರಂಪರಾ ಪದ್ಧತಿಗಳನ್ನು ಬುಡಮೇಲು ಮಾಡಿತು. ಭೋಜನ ಪದ್ಧತಿಯು ಒಳ್ಳೆಯ ನಿಷ್ಪನ್ನವಾದದ್ದು. ಆದರೂ ಪರಿಸ್ಥಿತಿಯಲ್ಲುಂಟಾದ ಬದಲಾವಣೆಯು ಬ್ರಿಟಿಶರಿಗೆ ತಮ್ಮ ಆಹಾರ ಪದ್ಧತಿಯಲ್ಲಿ ಬಹಳ ಬದಲಾವಣೆಗಳನ್ನು ಮಾಡಹಚ್ಚಿದೆ ಸ್ವಾಭಾವಿಕವಾಗಿಯೇ ಮಾಂಸಾಹಾರದಲ್ಲಿ ಧಾನ್ಯಗಳಿಗೆ ದ್ವಿತೀಯ ಸ್ಥಾನವಿನಿ. ಆದರೂ ಅಲ್ಲಿಯ ಆಹಾರ ಮಂತ್ರಿಗಳು ರಾಷ್ಟ್ರದ ಅವಶ್ಯಕತೆಗಳಿಗೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಒಂದಾನೊಂದು ಕಾಲಕ್ಕೆ ಸಿಗುತಿದ್ದ ಬೆಡಗಿನ ಬಿಳಿರೊಟ್ಟಿಯು ಇಂದು ಸಿಗುತ್ತಿಲ್ಲ. ರಾಷ್ಟ್ರದಲ್ಲಿ ಆಹಾರದ ಕೊರತೆಯುಂಟಾದಾಗ ಖಾದ್ಯದಲ್ಲಿಯ ಜೈತನ್ಯಯುಕ್ತ ಭಾಗವನ್ನು ಎಸೆಯುವದರ ಮೂರ್ಖತನವನ್ನು ಅವರು ಕಂಡುಕೊಂಡಿದ್ದಾರೆ. ಕಂದು ಬಣ್ಣದ ರೊಟ್ಟಿಯೇ ಇಂದಿನ ದಿನದ ಆಹಾರ

ನಮ್ಮ ದೇಶವು ಇದಕ್ಕೆ ವಿಪರೀತ ಉದಾಹರಣೆಯಾಗಿದೆ. ನಮ್ಮದು ಶಾಕಾಹಾರವಿದ್ದು ಅದರಲ್ಲಿ ಧಾನ್ಯಗಳಿಗೆ ಪ್ರಥಮ ಸ್ಥಾನವಿದೆ. ನಮ್ಮ ದೇಶದ ಜನತೆಯು ಅಕ್ಕಿ ಗೋಧಿ ಮುಂತಾದ ಧಾನ್ಯಗಳ ಮೇಲೆಯೇ ಅವಲಂಬಿಸಿರುತ್ತದೆ. ನಮ್ಮಲ್ಲಿಯ ಎಲ್ಲ ಸೀದಾ ಅಂಗಡಿಗಳಲ್ಲಿ ಪಾಲಿಶ್ ಆದ ಅಕ್ಕಿಗಳನ್ನೇ ಕೊಡುವಷ್ಟು ನಮ್ಮ ಆಹಾರ ಮಂತ್ರಿಗಳು ಅಸ್ಥಿರರುದ್ದಾರೆ. ಅಕ್ಕಿಯ ಗಿರಣಿಗಳನ್ನು ನಿರ್ಬಂಧಿಸಿ ಜನತೆಯ ಆಹಾರದಲ್ಲಿಯ ಜೈತನ್ಯಯುಕ್ತ ಭಾಗವನ್ನು ಹೆಚ್ಚಿಸುವ ಸುವರ್ಣ ಸಂಧಿಯನ್ನು ನಾವು ಕಳೆದುಕೊಳ್ಳಲಿಲ್ಲವೇ? ಈಗಲಾದರೂ ಕೃತಿಗಿಳಿಸಲು ಅಷ್ಟೊಂದು ತಡವಾಗಿದೆಯೇ ?

ಜೆ. ಸಿ. ಕುಮಾರಪ್ಪ

ದಾರಿ ತಪ್ಪಿದ ಉತ್ಸಾಹ

ಮದ್ರಾಸಪ್ರಾಂತದಲ್ಲಿ ಕುದುರೆಜೂಜಾಟವನ್ನು ತಪ್ಪಿಸಲು ಪ್ರಯತ್ನಿಸಿದ ಶ್ರೇಯಸ್ಸಿನ ಬಹುಭಾಗವು ಜನಾಬ ಅಬ್ದುಲ್ ಲತೀಫ ಫರೂಕಿಯವರಿಗೆ ಸಲ್ಲತಕ್ಕದ್ದು. ಈ ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸುವದನ್ನು ವಿರೋಧಿಸಿ ಅವರ ಕಾರ್ಯದಲ್ಲಿ ಡಾ. ಸುಬ್ಬರಾಯನರು ವಿಘ್ನವನ್ನು ಉಂಟುಮಾಡಿದರು.

ಕುದುರೆಯ ಪೀಳಿಗೆಯ ಜೋಪಾನಕ್ಕೂ ಕುದುರೆಯ ಜೂಜಾಟಕ್ಕೂ ನಿಕಟ ಸಂಬಂಧವಿದೆಯೆಂದು ಭಾವಿಸಿ ಡಾ. ಸುಬ್ಬರಾಯನವರು ಕುದುರೆಯ ಶರ್ಯತ್ತುನಡೆಯುತ್ತಿದೆ, ಕಲಕತ್ತದ ರೇಸ ಕ್ಲಬ್ಬಿಗೆ ಒಂದು ಬೆಳ್ಳಿ ಬಟ್ಟಲು ಕೊಂಡುಕೊಳ್ಳಲು ರಾಜಾಜಿಯವರು ಧನಸಹಾಯ ನೀಡಿದ್ದಾರೆ ಎಂದು ಹೆಮ್ಮೆಯಿಂದ ಹೇಳಿದ್ದು ಲಾಂಛನಾಸ್ಪದ.

ಈ ಮಂತ್ರಿಗಳು ತಮ್ಮ ಆದಾಯದ ದೃಷ್ಟಿಯಿಂದ ಈ ಕುದುರೆ ಜೂಜಿಗೆ ಇಷ್ಟೊಂದು ಮಹತ್ವ ಕೊಟ್ಟಿದ್ದರೂ ಸದ್ಯಕ್ಕೆ ದನಗಳ ಪೀಳಿಗೆಯನ್ನು ಕಾಪಾಡಿಕೊಳ್ಳುವುದು ನಮ್ಮ ಆರ್ಥಿಕದೃಷ್ಟಿಯಿಂದ ಮಹತ್ವದ್ದಾಗಿದೆ. ನಮ್ಮ ಹಾಲಿನ ಕೊರತೆ, ದನಗಳ ಅಭಾವವನ್ನು ಹಿಂಗಿಸಲು ನಮ್ಮ ಸರಕಾರಗಳು ಯಾವ ಪ್ರಯತ್ನ ಮಾಡಿವೆ? ಜನರ ನಿಜವಾದ ಅವಶ್ಯಕತೆಗಳನ್ನು ಇವರು ಕಣ್ಣಿರಿದು ಕಂಡುಕೊಳ್ಳುವದಾದರೂ ಎಂದು? ಕುದುರೆ ಜೂಜಿನ ಬಯಲುಗಳನ್ನೆಲ್ಲ ರಿಂಟಿ ಹೊಡೆದು ಹೆಚ್ಚು ಧಾನ್ಯ ಬೆಳೆಯುವದಕ್ಕಾಗಿ ಉಪಯೋಗಿಸಿದ ದಿನವೇ ಸುದಿನವಾದೀತು

ರಾಷ್ಟ್ರಧ್ವಜ-ಸೊಂಡೂರು ಸರಕಾರ

ಸಂಸ್ಥಾನದ ಧ್ವಜದ ಹೊರತಾಗಿ ಬೇರೆ ಧ್ವಜವನ್ನು ಹಾರಿಸಕೂಡದು. ಇದು ನಮಗೆ ಅಪಮಾನಕರ, ಮಹಾರಾಜರು ಕೆಲ ಸಂದರ್ಭಗಳಲ್ಲಿ ಎರಡೂ ಧ್ವಜಗಳನ್ನು ಹಾರಿಸಲು ಅಪ್ಪಣೆ ಕೊಡಬಹುದು. ಎಂಬುದಾಗಿ ತಾವೆ ಮಹಜರುಗಳನ್ನು ಬರೆದು—ಸೊಂಡೂರಿನ ಸರ್ಕಾರೀ ನವಕರರು ಪ್ರಜೆಗಳ ಕಡೆಯಿಂದ ಸಹಿಗಳನ್ನು ಪಡೆಯುತ್ತಿರುವುದು ನಮಗೆ ತಿಳಿದುಬಂದಿದೆ. ಇದರ ನಿಜಾಂಶವನ್ನು ಪ್ರಜಾಪಕ್ಷದಿಂದ ಮಂತ್ರಿಗಳಾಗಿರುವ ಶ್ರೀ ಡಾ. ಸರಾಫರು ಸ್ಪಷ್ಟೀಕರಿಸಲು ಕೋರುತ್ತೇವೆ. [ಸಂಪಾದಕ

ಬಳ್ಳಾರಿಯಲ್ಲಿ ನಾಡ ಹಬ್ಬದ ಕಾರ್ಯಕ್ರಮ.

ಪ್ರತಿವರ್ಷದಂತೆಯೇ ಈ ವರ್ಷವೂ ಕೂಡ ಕನ್ನಡ ನಾಡ ಹಬ್ಬದ ಸಾಹಿತ್ಯೋತ್ಸವವು ನಾಡಿನ ಹಿರಿಯ ಸಾಹಿತಿಗಳು, ವಕ್ತೃಗಳು, ಕಲಾವಿದರಿಂದ ಪರಿಪೂರ್ಣವಾಗಿದೆ. ಭಾಷೆಯ ಮತ್ತು ಸಾಹಿತ್ಯ ಪ್ರೇಮಿಗಳು ಎಂದಿನಂತೆ ತಂಡತಂಡವಾಗಿ ಬಂದು ಭಾಷಣಗಳ ರಸಾಸ್ವಾದನೆ ಮಾಡುತ್ತಲಿರುವರು ಆಹ್ವಾನಿತರಲ್ಲಿ ಶ್ರೀ ಕಿಲ್ಲೆ, ಶ್ರೀ ಸಿಂಪಿಲಿಂಗಣ್ಣನವರು ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಬರಲಿಲ್ಲ. ಶ್ರೀ ಜೋ. ದೊಡ್ಡನಗೌಡರು, ರಾಘವಾಂಕ, ಶ್ರೀಮತಿ ಮುನೋರಮಾ ಬಾಯಿಯವರು ಸ್ತ್ರೀಯರ ಕರ್ತವ್ಯ, ಷಡಾಕ್ಷರ ಶಾಸ್ತ್ರಿಗಳು ಸಾಹಿತ್ಯ, ಚನ್ನಬಸಪ್ಪನವರು. ಹಿಂದೀಸ್ವರಾಜ್ಯ, ಕನಸುಗಳು ಏಕೆಬೀಳುತ್ತವೆ? ಎಂಬುದರಮೇಲೆ ಶ್ರೀ ವೀರಭದ್ರಪ್ಪನವರು, ಶ್ರೀ ಶೇಷಗಿರಿ ರಾಯರು ಜನಪದದಲ್ಲಿ ಸಾಹಿತ್ಯಜೀವನ, ರಾಘವಾಚಾರು ಸಾಕ್ರೆಟೀಸ್, ವಿದ್ವಾನ್ ಶಂಕರ ಭಟ್ಟರು ಕನ್ನಡಕಾಂತಿ-ಕಾವ್ಯವಾಚನ, ಸಾಹಿತ್ಯ ಮತ್ತು ಚಿಕಿತ್ಸಾಕಲೆ ಶ್ರೀ ಮೂರ್ಲ, ಶ್ರೀ ಕಾರಂತರವರು ದೇವರು ಮತ್ತು ಧರ್ಮದಮೇಲೆ ಸಕ್ರಮವಾಗಿ 15 ನೆಯ ದಿನಾಂಕದಿಂದ 23 ರ ವರಿಗೆ ಉಪನ್ಯಶಿಸಿದರು

ನವರಾತ್ರಿ ಮಹೋತ್ಸವ

ಬಳ್ಳಾರಿ ನಗರ:—ದಿವ್ಯಜ್ಞಾನ ಮಂದಿರದಲ್ಲಿ ಈ 9 ದಿನಗಳು ವೀರಶೈವ ಕಾಲೇಜಿನ ತೆಲುಗು ಪಂಡಿತರಾದ ಶ್ರೀ ಟಿ. ಅಪ್ಪಣ್ಣನವರು ದೇವೀಭಾಗವತದ ವಿವಿಧ ಭಾಗಗಳಮೇಲೆ ಭವ್ಯ ಪೂರ್ಣ ಉಪನ್ಯಾಸಗಳನ್ನು ಕೊಟ್ಟರು. ನಗರೇಶ್ವರ ದೇವಾಲಯದಲ್ಲಿ ಗುಂಟೂರಿನ ಪುನ್ನಯ್ಯ ಶಾಸ್ತ್ರಿಗಳ ಹರಿಕಥೆ ಕಾಲಕ್ಷೇಪವಾಯಿತು. ಅಲ್ಲಿ ಜನ ಸಂದಣಿ ಹೆಚ್ಚಿದ್ದಿತು.

ಹೊಸಪೇಟೆ:— ಶ್ರೀ ಪತ್ತಿಕೊಂಡ ಗುರುನಾಥಪ್ಪನವರು ಪುರಸಭಾಧ್ಯಕ್ಷರಾದರು.

ಕಲ್ಲುಕಂಭ

ಕಡ್ಡಾಯ ಶಿಕ್ಷಣದ ಸಮಾರಂಭೋತ್ಸವವು ಬಳ್ಳಾರಿ ತಾಲೂಕು ಅ. ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಹಳ್ಳಿಗರ ವಿದ್ಯಾಭ್ಯಾಸದಲ್ಲಿ ಶ್ರದ್ಧೆ ಉತ್ಸಾಹಗಳನ್ನು ವಹಿಸಿರುವ ಶ್ರೀ ಎಚ್ ಎಂ. ತಿಪ್ಪಯ್ಯನವರು ಈ ಸಮಾರಂಭವನ್ನೇರ್ಪಡಿಸಿದ್ದರು. ಕುರುಗೋಡಿನಿಂದ ಕಾಂಗ್ರೆಸ್ ರಾಮಚಂದ್ರ ಗುಪ್ತ-ಕಲ್ಲಪ್ಪಾಚಾರ್ಯರು ಮತ್ತು ಹೆ. ಮಾ. ನರಸಿಂಹಮೂರ್ತಿಯವರು ವಿದ್ಯಾಭ್ಯಾಸದ ಅವಶ್ಯಕತೆಯನ್ನು ಕುರಿತು ಮಾತಾಡಿದಮೇಲೆ ಅಧ್ಯಕ್ಷರು ಉಪಯುಕ್ತ ಸಲಹೆಗಳನ್ನು ಕೊಟ್ಟರು. ಬಾಲಕರಿಗೆ ಉಚಿತವಾಗಿ ಪುಸ್ತಕ, ಹಲಗೆಗಳ ವಿತರಣೆಯಾಗಿ ಶ್ರೀ ಮಲ್ಲನಗೌಡರ ಉಪಾಹಾರದಿಂದ ಸಮಾರಂಭವು ಮುಗಿಯಿತು. ಶ್ರೀ ರಾಘವೇಂದ್ರರಾವ್ ಕರಣಂ ಇವರೂ ಸಹಾಯಮಾಡಿದರು.

—: ಮೈಸೂರು ಮಂತ್ರಿಗಳು :—

ನಡುಗಾಲ ಸರಕಾರ

ಕಾಂಗ್ರೆಸ್ :—

೧) ಶ್ರೀ ಕೆ. ಸಿ. ರೆಡ್ಡಿ
೨) ,, ಕೆ. ಟಿ. ಭಾಷ್ಯಂ
೩) ,, ಹೆಚ್. ಸಿ ದಾಸಪ್ಪ
೪) ,, ಹೆಚ್. ಸಿದ್ದಯ್ಯ
೫) ,, ಟಿ ಮರಿಯಪ್ಪ
೬) ,, ಅಲ್. ಚನ್ನಿಗರಾಮಯ್ಯ

ಕಾಂಗ್ರೆಸೇತರರು

೧) ಮಹಮ್ಮದ್ ಶರೀಫ್ (ಲೀಗ್)
೨) ಡಿ. ಯಚ್. ಚಂದ್ರಶೇಖರಯ್ಯ (ಪ್ರಜಾಪಕ್ಷ)
೩) ಪಿ. ಸುಬ್ಬರಾಮಶೆಟ್ಟಿ (ಹಿಂದೂ ಸಭೆ)

ಮೈಸೂರು ಮಂತ್ರಿಗಳು ವಿಜಯದಶಮಿಯದಿನ ಅಧಿಕಾರ ಸ್ವೀಕಾರಮಾಡಿದರು.

ಬಳ್ಳಾರಿಯಲ್ಲಿ ಇನ್ನುಮೇಲೆ ವಾರದ ರೇಷನ್ ಜೊತೆಗೆ ೨ ಅವುನ್ಸು ಗೋಧಿ ಕೊಡುವರೆಂದು ಪ್ರಕಟವಾಗಿದೆ.

200

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್,

ಮುಖ್ಯ ಕಛೇರಿ — ಬಳ್ಳಾರಿ. ಸ್ಥಾಪಿತ : 193

ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಮತ್ತು ಚಿತ್ತೂರು ಜಿಲ್ಲೆಗಳ
ಆರ್ಥಿಕಾಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿದೆ.

ಛೇರ್ಮನ್ ಬ್ಯಾಂಕ್ ಆಫ್ ಡಾಯರೆಕ್ಟರ್ಸ :- ಶ್ರೀ ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಯಲ್.
ಬಳ್ಳಾರಿ.

ಸ್ಥಾಯಿಠೇವಣಿ [ಫಿಕ್ಸೆಡ್-ಡಿಪಾಜಿಟ್] ದರಗಳು

3, 4, 5 ತಿಂಗಳುಗಳಿಗೆ	ಶೇಕಡ ಬಡ್ಡಿದರ	ರೂ.	2-0-0
6 ,,	,,		2-8-0
1 ವರ್ಷಕ್ಕೆ	,,		3-0-0
2 ,,	,,		3-8-0

2 **ಕ್ಯಾಷ್ ಸರ್ಟಿಫಿಕೇಟುಗಳು** ಬಡ್ಡಿಯ ಸಹಿತ 100 ಕ್ಕೆ 1 ವರ್ಷಕ್ಕೆ 3-8-0
10-0-0 ಸರ್ಟಿಫಿಕೇಟ್—ಕೊಡುವ ಧರ ರೂ. 9-0-3

3 **ಚಾಲು ಖಾತೆ** (ಕರೆಂಟು ಅಕೌಂಟು) ಬಡ್ಡಿ ಶೇಕಡ ರೂ 1/-

4 **ಸೇವಿಂಗ್ಸ್ ಬ್ಯಾಂಕು ಅಕೌಂಟು** :- ವಾರದಲ್ಲಿ ಎರಡು ಸಲ ರೂ. 250/-ಗಳಿಗೆ ವಿಂಚಿದೆ ಹಣ ತೆಗೆದುಕೊಳ್ಳಬೇಕು. 1 ವರ್ಷಕ್ಕೆ ಶೇಕಡ ರೂ 2/-

ಬ್ಯಾಂಕಿನ 27 ಶಾಖೆಗಳಲ್ಲಿ ಲೆಕ್ಕಗಳನ್ನು ಪ್ರಾರಂಭಿಸಬಹುದು. ಇತರ ಎಲ್ಲಾ ವಿಧವಾದ ಬ್ಯಾಂಕು ಸೌ ರ್ಯಗಳು ಒದಗಿಸಲಾಗಿವೆ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.
ಕಾರ್ಯದರ್ಶಿ

NAVA BHARAT, BELLARY. Reg. No. M. 4746

ನವಭಾರತ ಬಳ್ಳಾರಿ.
(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5-0-0	One Year 5 0—0
6 ತಿಂಗಳಿಗೆ 3-0-0	Six months 3 0—0
ಆರುತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To
SRI.....
.....
.....

Printed at Krishna Press Bellary QH No. B 17 FOR (Q.H. No. B-5.)
Edited & Published by T. B. KESHAVA RAO